ವಿಶೇಷ ಸಂಚಿಕೆ

ಆಗಸ್ಟ

೧೯೫೪

ಬಿಡಿ ಪ್ರತಿ ೬ ಆಣೆ

ವಾ. ಚಂದಾ ೪ ರೂ.

ಈ ಭಾರತದ ರಾಷ್ಟ್ರಧ್ವಜವು
ಚಿರಕಾಲ ಬಾಳಲಿ

ಕನ್ನಡ

ಪ್ರಾಥಮಿಕ ಶಿಕ್ಷಣ

ನ ಸಂಪಾದಕರು : **ಶ್ರೀ. ಎಸ್. ಪಿ. ಪಾಟೀಲ**

ಎಸ್. ಎಸ್. ಭಂಡಾರ
ಮುಂಬಯಿ ರಾಜ್ಯದ ಶಿಕ್ಷಣಖಾ
ಡಾಯರೆಕ್ಟರರು

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಕೆ. ಬಿ. ತೇರಗಾಂವಕರ, ಬಿ. ಎಸ್‌ಸಿ., (ಆನರ್ಸ) ಬಿ. ಟಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ

ಪ್ರಧಾನ ಸಂಪಾದಕರು : ಶ್ರೀ. ಎಸ್. ಪಿ. ಪಾಟೀಲ ಬಿ. ಎ., ಬಿ ಟಿ., ಡಿ. ಪಿ. ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾ

ಸಹ ಸಂಪಾದಕರು:

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗು

ಸಂಪುಟ ೯೪	ಆಗಸ್ಟ ೧೯೩೪ ವಿಶೇಷ ಸಂಚಿಕೆ	ಸಂಚಿಕೆ

ಪರಿವಿಡಿ

೧. ಸಂಪಾದಕೀಯ ....
೨. ವಿಚಾರಮಾಡುವ ರೀತಿಯು ಶಿಕ್ಷಣ ಶೋಧಕ ಪದ್ಧತಿ ....ಶ್ರೀ. ತಟ್ಟಿ ಶ್ಯಾಮರಾಯರು ....
೩. ಶ್ರೀ. ಸಿಂಪೀ ಲಿಂಗಣ್ಣ ....ಶ್ರೀ. ಶಿಂತ್ರಿ ಬಸಪ್ಪನವರು ....
೪. ಮೂಲ ಶಿಕ್ಷಣ ಸಾಲೆಗಳಲ್ಲಿ ಸಾಂಘಿಕ ಜೀವನದ ಮಹತ್ವ....ಶ್ರೀ. ಈಶ್ವರಚಂದ್ರ ಚಿಂತಾಮಣಿ
೫. ರಶಿಯದ ಓಲ್ಗಾ-ಡಾನ್ ಕಾಲುವೆ ....ಶ್ರೀ. ಶಿಂತ್ರಿ ಬಸಪ್ಪನವರು ....
೬. ಒಳ್ಳೆಯ ಶಿಸ್ತಿನೆಡೆಗೆ ....ಶ್ರೀ. ಎಸ್ ವಾಯ್. ಶೀಲವಂತ
೭. ವಾರದ ಟಿಪ್ಪಣಿಗಳು ....ಶ್ರೀ. ರಾ. ಚ. ಪಶುಪತಿ ....
೮. ಶ್ರೀ. ಎಸ್. ಎಸ್. ಭಂಡಾರಕರ ....ಶ್ರೀ. ಶಿಂತ್ರಿ ಬಸಪ್ಪನವರು ....
೯. ಟ್ರೇನಿಂಗ ಸಂಸ್ಥೆಗಳಲ್ಲಿ ಶ್ರೀಮತಿ ಇಂದುಮತಿ ಶೇಠರು. (ವರದಿ) ....
....ಶ್ರೀ. ಗುರುನಾಥ ಜೋಶಿ
೧೦. ಪ್ರಾಥಮಿಕ ಶಿಕ್ಷಣ ಪ್ರಪಂಚ ....

ಶಿಕ್ಷಣ ಖಾತೆಯ ಉಪಮಂತ್ರಿ ಶ್ರೀ. ಇಂದುಮತಿ ಸೇಠ ಅವರು



...ಣು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರು ಪರಿಚಯ ಮಾಡಿಕೊಡುತ್ತಿರುವರು. ಡೆಪ್ಯುಟಿ ಡೈರೆಕ್ಟರ ಶ್ರೀ. ...ಾಂಸಿ ಅವರೂ ಜೊತೆಯಲ್ಲಿರುವರು.

ಶ್ರೀ. ಇಂದುಮತಿ ಸೇಠ ಅವರು ವೃಕ್ಷಾರೋಪಣ ಮಾಡುತ್ತಿರುವರು

...ಲೆ ವಿದ್ಯಾರ್ಥಿಗಳಿಗೆ ಶ್ರೀ. ಇಂದುಮತಿ ಸೇಠರು ಉಪದೇಶ ...ತ್ತಿರುವರು.

ಶ್ರೀ. ಬಿ. ಎಂ. ಮೀಮಾಂಸಿ ಮತ್ತು ಶ್ರೀ. ಇಂದುಮತಿ ಸೇಠ ಅ... ರನ್ನು ಪ್ರ್ಯಾಕ್ಟಿಸಿಂಗಸ್ಕೂಲಿನ ಮುಖ್ಯಮಂತ್ರಿ ಸ್ವಾಗತಿಸುತ್ತಿರುವರು

...ಪರರ ಜೀವನ ಶಿಕ್ಷಣ ಕೇಂದ್ರಕ್ಕೆ ಭೆಟ್ಟಿ ಶ್ರೀ. ಇಂದುಮತಿ ... ಶ್ರೀ. ಮೀಮಾಂಸಿ, ಶ್ರೀ. ಕೇರಗಾಂವಕರ ಅವರೊಂದಿಗೆ. ...ಶಾಲ ಹುಡುಗರು ಸ್ವಾಗತಿಸುತ್ತಿರುವರು.

ಹೆಣ್ಣು ಮಕ್ಕಳ ಸರಕಾರೀ ಟ್ರೇನಿಂಗ ಸಂಸ್ಥೆಗೆ ಭೆಟ್ಟಿ. (೨) ... ಕೇರಗಾಂವಕರ (೪) ಶ್ರೀ. ಮೀಮಾಂಸಿ. (೬) ಶ್ರೀ. ಇಂದುಮತಿ ಸೇ... (೭) ಶ್ರೀಮತಿ ಪಿ. ಎ. ಭಾಸ್ಕರ ಎಲ್. ಎಸ್. (೮) ಶ್ರೀ. ಎಂ. ... ಹುದ್ದಾರ

ಅಪೂರ್ವ ಯಶಸ್ಸು

ಕುಮಾರ ಸರ್ವೇಶ್ವರ ಹನುಮಂತಪ್ಪ ಪೂಜಾರ ಅಕ್ಕಿಆಲೂರ ಈತನು ೧೯೫೪ನೆಯ ಏಪ್ರಿಲದಲ್ಲಿ ಹಾವೇರಿ ಕೇಂದ್ರದಲ್ಲಾದ ಪ್ರಾ. ಶಾ. ಪ್ರ. ಪರೀಕ್ಷೆಯಲ್ಲಿ ನೂರಕ್ಕೆ ೭೨.೮ ದಷ್ಟು ಗುಣಗಳನ್ನು ಪಡೆದು ಕೇಂದ್ರಕ್ಕೆ ೧ನೆಯ ನಂಬರು ಪಡೆದುಕೊಂಡಿದ್ದಾನೆ. ಧಾರವಾಡ ಜಿಲ್ಲಾ ಲೋಕಲ್ ಬೋರ್ಡಿನ ಎಲ್ಲ ಮಕ್ಕಳಲ್ಲಿ ಎಲ್ಲಕ್ಕು ಹೆಚ್ಚು ಗುಣಗಳು ಇವನಿಗೇ. ಈತನ ಶಿಕ್ಷಣವು ಅಕ್ಕಿಆಲೂರಿನ ಕನ್ನಡ ಗಂ. ಮು. ಶಾಲೆಯಲ್ಲಿ ಆಗಿದೆ. ಹೋದ ವರುಷ ೬ನೆಯ ಇಯತ್ತೆಯ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚು ಗುಣಗಳನ್ನು ಪಡೆದು ಬೋರ್ಡಿನ ವಿದ್ಯಾರ್ಥಿವೇತನವನ್ನೂ ದೊರಕಿಸಿದ್ದನು.

ನೇಯ್ಗೆಯ ತರಬೇತಿ ವರ್ಗದ ಜುಲೈ ತಿಂಗಳ ವರದಿ—

ಧಾರವಾಡ — ಅಗಸ್ಟ ೬

ದಿನಾಂಕ	ವಿಷಯ	ಹೆಸರು
೧—೭—೫೪	ಸಮವಾಯ ಮಾದರೀ ಪಾಠ ಕೊಟ್ಟಿದ್ದು	ಶ್ರೀ. ಪಶುಪತಿ ಗುರುಗಳು
೨—೭—೫೪	ಶಿಕ್ಷಕರ ಹಾಗೂ ಭಾರತೀಯರ ಕರ್ತವ್ಯ	ಶ್ರೀ. ಪಾಟೀಲ ಪುಟ್ಟಪ್ಪನವರು
೮—೭—೫೪	ಇಂದಿನ ಶಿಕ್ಷಣ	ಶ್ರೀ. ಶಿಂತ್ರಿಯವರು
೨೬—೭—೫೪	ವನಮಹೋತ್ಸವ	ಶ್ರೀಮತಿ ಇಂದುಮತಿ ಶೇಟ (ಶಿಕ್ಷಣ ಖಾತೆಯ ಉಪ ಮಂತ್ರಿಗಳು)
೩೦—೭—೫೪	ಸರ್ವೋದಯ	ಶ್ರೀ. ನೀಲಕಂಠ ಗಣಾಚಾರ್ಯ

ಈ ತಿಂಗಳು ಭಾರತಮಿಲ್ ಹಾಗೂ ಕರ್ನಾಟಕ ಕಾಲೇಜದ ನಿರೀಕ್ಷಣೆಯನ್ನು ಮಾಡಲಾಯಿತು.

17/8/54

ಸಂಪಾದಕೀಯ

ವನಮಹೋತ್ಸವ :

ಪ್ರತಿ ವರ್ಷದಂತೆ ಈ ಸಲವಾದರೂ ನಮ್ಮ ರಾಜ್ಯದಲ್ಲಿ ವನಮಹೋತ್ಸವವು ನಡೆಯಿತು, ನಡೆಯುತ್ತ ೇರೆ ಬೇರೆ ಭಾಗಗಳಲ್ಲಿ ಆಯಾ ಪರಿಸ್ಥಿತಿಗನುಸರಿಸಿ ಮಳೆಗಾಲದ ನಾಲ್ಕು ತಿಂಗಳಿನ ಅವಧಿಯಲ್ಲಿ ೊಂದು ಸಪ್ತಾಹವನ್ನು ಈ ಉತ್ಸವಕ್ಕಾಗಿ ಮೀಸಲಾಗಿರಿಸಿಕೊಂಡಿರಲು ಸಾಕು. ಮಳೆ-ಬೆಳೆ, ದುಕು, ಉಳಿವು-ಗೆಲುವುಗಳ ತಾಯಿಬೇರಾದ ಅರಣ್ಯ ಸಂಪತ್ತನ್ನು ಹೆಚ್ಚಿಸುವದು ಭಾರತೀಯ- ಮ್ಮೆಲ್ಲರ ಆದ್ಯ ಹಾಗೂ ಪವಿತ್ರ ಕರ್ತವ್ಯವಾಗಿದೆ. ರಾಷ್ಟ್ರದ ಸ್ವಾತಂತ್ರ್ಯ ನಂತರ ಆರ್ಥಿಕ ಹಾಗೂ ಸ್ವಾವಲಂಬನೆಯನ್ನು ಪಡೆಯುವ ದಿಶೆಯಲ್ಲಿ ಅನುಸರಿಸುತ್ತಿರುವ ಕೆಲವು ಪ್ರಮುಖ ಯೋಜನೆಗಳಲ್ಲಿ ೋತ್ಸವವು ಅಗ್ರಸ್ಥಾನವನ್ನು ಪಡೆದಿದೆ. ಆರ್ಥಿಕ ಸ್ವಾಯತ್ತತೆಯನ್ನು ಸಾಧಿಸುವದರ ಜೊತೆಗೆ ಯ ಸಂಸ್ಕೃತಿಯ ಉತ್ಥಾನವೂ ಇದರಲ್ಲಿ ಅಡಕವಾಗಿದೆಯೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ದ ಅವಧಿಯಲ್ಲಿ ಗಿಡವನ್ನು ಬೆಳೆಸಿ ರಾಷ್ಟ್ರದ ಆರ್ಥಿಕ ಅಭಿವೃದ್ಧಿಯ ಮಾರ್ಗದಲ್ಲಿ ಕೈ ನೀಡಿದಂತಾ- ಮ ಬೇರೆ ಹೇಳಬೇಕಿಲ್ಲ. ಈ ಪವಿತ್ರ ಕಾರ್ಯದಲ್ಲಿ ಪ್ರಾಥಮಿಕ ಕ್ಷೇತ್ರದಲ್ಲಿ ದುಡಿಯುತ್ತಿರುವ ವಿದ್ಯಾರ್ಥಿಗಳೂ ಆಸ್ಥೆವಹಿಸಿ ತಮ್ಮ ಶಾಲೆಗಳ ಆವಾರ ಹಾಗೂ ಆಟದ ಬೈಲುಗಳಲ್ಲಿ ಗಿಡಗಳನ್ನು ಷ್ಟ್ರೋನ್ನತಿಯ ದೃಷ್ಟಿಯಿಂದ ತಮ್ಮದೇ ಆದ ಸೇವೆಯನ್ನು ಸಲ್ಲಿಸುವರೆಂದು ನೆರೆನಂಬಿದ್ದೇವೆ.

ಮಾನ್ಯರು :

ಭಾರತದ ಇತಿಹಾಸದಲ್ಲಿ ೩೪ ವರ್ಷಗಳ ಹಿಂದಿನ ಪುಟವನ್ನು ತೆಗೆದು ನೋಡಿದಾಗ ೧-೮-೧೯೨೦ರಂದು ಮಾತೆಯ ಕಣ್ಣೀರು ಸಾಗರದಂತೆ ಬೋರ್ಗರೆದವು ನಮ್ಮ ಸ್ವಾತಂತ್ರ್ಯಾಂದೋಲನದಲ್ಲಿ ಸ್ವಾರ್ಥ- ದ, ಧೈರ್ಯದಿಂದ ತ್ರಿಕರಣ ಶುದ್ಧಿಯಿಂದ ಹೋರಾಡಿ ತಮ್ಮ ಬಾಳು-ಬದುಕನ್ನೇ ಭಾರತಮಾತೆಯ ಯಲ್ಲಿ ಇರಿಸಿ ಅಮರರಾಗಿ ಲೋಕಮಾನ್ಯರೆಂದೆನಿಸಿಕೊಂಡ ದಿವಂಗತ ಟಿಳಕರವರು ಕೀರ್ತಿಶೇಷರಾದ . ಸ್ವಾತಂತ್ರ್ಯ ಮಂದಿರದ ಅಡಿಗಲ್ಲುಗಳಲ್ಲಿ ಲೋಕಮಾನ್ಯರ ಆತ್ಮವು ಒಂದು ಅಪರಂಜಿಯ ಘಟ್ಟಿ- ಹೇಳಬಹುದು. ಅವರು ನಡೆಸಿದ ಬಾಳು, ಮಾಡಿದ ಸೇವೆ, ಹೋರಾಡಿದ ರೀತಿ, ತೋರಿಸಿದ ಧೈರ್ಯ- ಗಳು, ಹಾಗೂ ಅವರ ಆಧ್ಯಾತ್ಮಿಕ ಜೀವನ ಇವೆಲ್ಲವೂ ಭಾರತೀಯರಿಗೆ ಮಾರ್ಗದರ್ಶಕವಾಗಿವೆಯಲ್ಲದೆ ಹೆದ್ದಾರಿಯಲ್ಲಿ ಅಕ್ಷಯ ಬುತ್ತಿಯ ಬುಗ್ಗೆಗಳಾಗಿವೆ. ಅವರ ಪುಣ್ಯತಿಥಿಯನ್ನು ಆಗಸ್ಟ ೧ರಂದು ಡದಲ್ಲೆಲ್ಲ ಆಚರಿಸಲಿಕ್ಕೆ ಸಾಕು. ಅವರು ಹಾಕಿ ಕೊಟ್ಟ ಮಾರ್ಗದಲ್ಲಿ ನಡೆದು, ನಿಷ್ಕಾಮ ಬುದ್ಧಿ

ಯಿಂದ ಸ್ವತಂತ್ರ ಭರತಖಂಡದ ಸೇವೆಯಲ್ಲಿ ನಿರತರಾಗುವದು ಅವರ ಪುಣ್ಯತಿಥಿ ಆಚರಣೆಯು ನೈಜ... ...ದು ಹೇಳಬಹುದು,

ಕವೀಂದ್ರ ರವೀಂದ್ರರು :

ಅಗಸ್ಟ ೭ರಂದು ಭಾರತದ, ಅಷ್ಟೇಕೆ ವಿಶ್ವದ ಅನಂತಗಗನದಲ್ಲಿ ನಿಶ್ಚಲವಾಗಿ ಹೊಳೆಯು... ನಕ್ಷತ್ರದಂತೆ ಪ್ರಪಂಚದ ಕವಿಶ್ರೇಷ್ಠರಲ್ಲಿ ಮೇಧಾವಿಗಳಾಗಿ ಬಾಳಿ ತಮ್ಮ ಕಾವ್ಯಾಮೃತದಿಂದ ಇಡಿಯ ... ಪಾವನಗೊಳಿಸಿ ಅಮರರೆನ್ನಿಸಿಕೊಂಡ ಕವೀಂದ್ರ ರವೀಂದ್ರರು ಕಣ್ಮರೆಯಾದ ದಿನ. ಬಂಗಾಲದ ಪ್ರಸಿದ್ಧ ...ವೊಂದರಲ್ಲಿ ಜನಿಸಿದ ಕ. ರವೀಂದ್ರನಾಥ ಟಾಗೋರರು ತಮ್ಮ ಕಾವ್ಯ ಪ್ರತಿಭೆಯಿಂದ, ಕಲಾಕೌಶ... ಶಿಕ್ಷಣದಲ್ಲಿಯ ಅಲೌಕಿಕ ಆಸ್ಥೆಯಿಂದ, ತಳೆದ ಸೌಂದರ್ಯದೃಷ್ಟಿಯಿಂದ, ಉಜ್ವಲವಾದ ರಾಷ್ಟ್ರೀಯ... ಯಿಂದ, ಬರೆದ ಕೃತಿ ರತ್ನಗಳಿಂದ ಭಾರತದ ಕೀರ್ತಿಯನ್ನು ದಿಗಂತಗಳಲ್ಲಿ ಬೆಳಗಿಸಿದ ಪ್ರತಿಭಾವಂತರು. ದಿನವನ್ನು ಆಚರಿಸುವದೂ ಅವರ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು, ಅವರ ಕೃತಿಗಳನ್ನು ಅಭ್ಯಸಿಸಿ, ಅವರ ... ಯನ್ನು ತಂದುಕೊಳ್ಳುವದು ಅವರ ಪುಣ್ಯ ದಿನಾಚರಣೆಯು ಸಾರ್ಥಕ್ಯವೆಂದು ಹೇಳದಿರೆವು.

ರಾಜ್ಯದ ಶಿಕ್ಷಣ ಖಾತೆಯು ಉಪಮಂತ್ರಿಗಳ ಕರ್ನಾಟಕ ಸಂಚಾರ:—

ಮುಂಬಯಿ ರಾಜ್ಯದ ಶಿಕ್ಷಣ ಶಾಖೆಯ ಮಾನ್ಯ ಉಪಮಂತ್ರಿಗಳಾದ ಶ್ರೀಮತಿ ಇ... ಚಿಮಣಲಾಲ ಸೇಠ ಅವರು ಮುಂಬಯಿ ಕರ್ನಾಟಕದ ವಿಜಾಪುರ ಹಾಗೂ ಧಾರವಾಡ ಜಿಲ್ಲೆಗ... ತಿಂಗಳ ೨೩ರಿಂದ ೨೬ರ ವರೆಗೆ ಸಂಚರಿಸಿ ಬಾಗಲಕೋಟೆಯ ಹಾಗೂ ಧಾರವಾಡದ ಜೀವನ ... ಹೊಂದಿಕೆಯ ಕ್ಷೇತ್ರಗಳಲ್ಲಿಯ ಜೀವನ ಶಿಕ್ಷಣ ಹಾಗೂ ಮೂಲೋದ್ಯೋಗದ ಸಾಲೆಗಳನ್ನು ಸಂದರ್ಶಿ... ಈ ಮೂರು ದಿನಗಳ ಸಂಚಾರದಲ್ಲಿ ರಾಜ್ಯದ ಶಿಕ್ಷಣ ಶಾಖೆಯ ಡೆಪ್ಯೂಟಿ ಡಾಯರೆಕ್ಟರರಾದ ಶ್ರೀ. ಬಿ... ಮೀಮಾಂಸಿ ಅವರೂ ಶ್ರೀಮತಿಜೀಯವರ ಸಂಗಡ ಇದ್ದರು. ಈ ಸಾಲೆಗಳನ್ನು ಸಂದರ್ಶಿಸಿದ್ದಲ್ಲದೆ, ... ಉಪಮಂತ್ರಿಗಳು ಬಾಗಲಕೋಟೆಯಲ್ಲಿ ಹೋದ ತಿಂಗಳ ದಿನಾಂಕ ೨೩ ಹಾಗೂ ೨೪ರಂದು ನೆರೆ... ಶಿಕ್ಷಣ ಮೂಲೋದ್ಯೋಗದ ಸಮ್ಮೇಲನದಲ್ಲಿ ಭಾಗವಹಿಸಿ ಮೂಲಶಿಕ್ಷಣ ಹಾಗೂ ಮೂಲೋದ್ಯೋಗ... ಗಳಲ್ಲಿ ಇಲ್ಲಿಯ ವರೆಗೆ ಸಾಧಿಸಿದ ಪ್ರಗತಿಯನ್ನು ಕೇಳಿಕೊಂಡು ಅವುಗಳ ಮುನ್ನಡೆಯ ಬಗ್ಗೆ ಮಾರ್ಗ... ಮಾಡಿದುದು ನಿಜವಾಗಿಯೂ ಅಭಿನಂದನಾರ್ಹವಾದುದು. ಸಮ್ಮೇಲನದ ಸರ್ವಸಿದ್ಧತೆಯನ್ನು ... ವಿಜಾಪುರ ಜಿಲ್ಲೆಯ ಶಿಕ್ಷಣಾಧಿಕಾರಿಗಳಿಗೂ, ಸಮ್ಮೇಲನದ ಎಲ್ಲ ಕಾರ್ಯಕ್ರಮಗಳಲ್ಲಿ ಸಹಕರಿಸಿ ... ತಂದ ಬಾಗಲಕೋಟೆಯ ಶಿಕ್ಷಣಾಭಿಮಾನಿಗಳಿಗೂ ನಮ್ಮ ಶುಭಚಿಂತನೆಗಳು. ಈ ಸಮ್ಮೇಲನವನ್ನು ... ಗೊಳಿಸಿ ಮಾನ್ಯ ಉಪಮಂತ್ರಿಗಳು ಹಾಗೂ ಡೆಪ್ಯೂಟಿ ಡಾಯರೆಕ್ಟರ ಅವರು ಧಾರವಾಡದಲ್ಲಿ ಕೂಡಿದ ಪದವೀಧರ ಜೀವನ ಶಿಕ್ಷಣ ಮಹಾವಿದ್ಯಾಲಯಗಳ ಪ್ರಿನ್ಸಿಪಾಲರ ಸಭೆಗೆ ಹಾಜರ ಆದರು.

ದಿನಾಂಕ ೨೬ರಂದು ಸ್ಥಳಿಕ ಟ್ರೇನಿಂಗ ಕಾಲೇಜುಗಳನ್ನು ಮತ್ತು ಹೆಣ್ಣು ಮಕ್ಕಳ ಮಾಧ್ಯಮಿಕ ಶಾಲೆಯನ್ನು ಹಾಗೂ ಅಲ್ಪಾವಧಿ ನೇಯ್ಗೆಯ ತರಬೇತಿ ವರ್ಗವನ್ನು ಸಂದರ್ಶಿಸಿದರು... ಜಿಲ್ಹಾ ಸ್ಕೂಲಬೋರ್ಡ ಕಚೇರಿ, ಪದವೀಧರ ಜೀವನ ಶಿಕ್ಷಣ ಕೇಂದ್ರ ಹಾಗೂ ಗಂಡು ಮಕ್ಕಳ ... ಟ್ರೇನಿಂಗ ಕಾಲೇಜುಗಳಲ್ಲಿ ವನಮಹೋತ್ಸವವನ್ನು ಉದ್ಘಾಟಿಸಿದರು. ಹೀಗೆ ತೆರಪಿಲ್ಲದ ಕಾರ್ಯಕ್ರಮ... ಕೂಡಿದ ತಮ್ಮ ಸಂಚಾರದಲ್ಲಿ ಶ್ರೀಮತಿಯವರು ವಿದ್ವತ್ಪೂರಿತ ಭಾಷಣ ಹಾಗು ಸಲಹೆ ಸೂಚ... ಜೀವನ ಶಿಕ್ಷಣದಲ್ಲಿ ದುಡಿಯುವವರೆಲ್ಲರಿಗೆ ಹೊಸ ಹುರುಪು ಹುಮ್ಮಸ್ಸುಗಳನ್ನು ತಂದುಕೊಟ್ಟರೆಂದು ನಮಗೆ ಆನಂದ.

...ಚಾರ ಮಾಡುವ ರೀತಿಯ ಶಿಕ್ಷಣ-ಶೋಧಕ ಪದ್ಧತಿ

ಲೇಖಕರು : ಶ್ರೀ. ತಟ್ಟಿ ಶ್ಯಾಮರಾಯರು, ಬಿ. ಎ. ಧಾರವಾಡ (ನಿವೃತ್ತ ಪ್ರಿನ್ಸಿಪಾಲರು)

[ಮುಂದುವರಿದುದು]

...ವು ಯಾವದಾದರೊಂದು ಸಂಗತಿಯನ್ನು ...ೊಳ್ಳಬೇಕಾದರೆ ಎರಡು ಹಾದಿಗಳಿವೆ. ಒಂದು ...ನ್ನಾದರೂ ತಿಳಿದವರನ್ನು ಕೇಳಿ, ಇಲ್ಲವೆ ಪುಸ್ತಕ... ...ದಿ; ಎರಡು, ನಾವೇ ಹುಡಿಕಿ ತೆಗೆಯಲಿಕ್ಕೆ ... ಮಾಡಬಹುದು; ನಮಗೆ ಬೇಕಾಗದ್ದು :

... ಒಂದು ಇದ್ದ ಸಂಗತಿ ಅಥವಾ ಪ್ರತ್ಯಕ್ಷ ಸಂಗತಿ; ... ಒಬ್ಬಾನೊಬ್ಬ ಮನುಷ್ಯನ ಹೆಸರು, ಕಾಯರೋ ... ಹೇಗಿದೆ, ಜನವರಿಯಲ್ಲಿ ಮುಂಬಯಿಯ ... ಉಷ್ಣಮಾನವು ಎಷ್ಟಿರುವದು, ಇತ್ಯಾದಿ ...ನಮಗೆ ಬೇಕಾದದ್ದು :

... ಯಾಕೆಂಬದರ ಕಾರಣ : ಉದಾ : ಬಂಡಿ... ...ಾಲಿಗಳೇಕಿರುವವು, ಯಂತ್ರದಲ್ಲಿ ಎಣ್ಣೆಯನ್ನು ... ಯೋಗಿಸುವರು. ಇತ್ಯಾದಿ. ಈ ಉದಾಹರಣೆ ...ುಗೆ ಏನಾದರೊಂದು ಸಾಮಾನ್ಯ ತತ್ವವು ...ತ್ತದೆ. ಆದರೆ ನಮಗೆ ಒಮ್ಮೊಮ್ಮೆ ...ದ್ದು.

...ನಾವು ಮೊದಲೇ ತಿಳಿದುಕೊಂಡಿರುವ, ಒಂದು ...ವಹಾರಿಕ ದೃಷ್ಟಾಂತಗಳು ಆಗಿರಬಹುದು. ...ಂದ ಎಲ್ಲ ಗ್ಯಾಸುಗಳು ಪ್ರಸರಣ ಹೊಂದು... ...ುದು ನಮಗೆ ಗೊತ್ತನೆ; ನಿತ್ಯದ ಜೀವನದಲ್ಲಿ ...ಾಹರಣೆಗಳನ್ನು ಹುಡುಕಬಹುದು.

ಕೆಲವು ಸಂದರ್ಭಗಳಲ್ಲಿ ನಾವಾಗಿಯೇ ...ಯುವದು ಅಸಾಧ್ಯವಾಗಬಹುದು; ಮತ್ತೆ ...ಂಗಗಳಲ್ಲಿ ಈ ಶೋಧನೆಯು ಕಷ್ಟಕರವಾಗ... ಮಕ್ಕಳು ಸ್ವಾಭಾವಿಕವಾಗಿ ಕುತೂಹಲಿ... ...ು; ಈ ಸಹಜವೃತ್ತಿಯು ಎಷ್ಟು ಬಲವತ್ತರವಾಗಿದ್ದರೂ ಆ ಕುತೂಹಲಕ್ಕೆ ತೃಪ್ತಿಯುಂಟಾಗುತ್ತಿದ್ದರೆ ಮಾತ್ರ ಅದು ಜಾಗ್ರತವಾಗಿ ಉಳಿಯುವದು. ಸ್ವತಂತ್ರವಾಗಿ ಶೋಧಿಸಿ ತಿಳಿದುಕೊಂಡರೆ ಒಂದು ಆತ್ಮವಿಶ್ವಾಸವು ನಮ್ಮಲ್ಲಿ ಬೆಳೆಯುವದು; ಎಷ್ಟೋ ಸಾರೆ ನಾವಾಗಿಯೇ ಒಂದು ಮಾತನ್ನು ನೋಡಿ ತಿಳಿದುಕೊಳ್ಳಬೇಕು. ಇಲ್ಲವೇ ಅಜ್ಞರಾಗಿಯೇ ಉಳಿಯಬೇಕಾದ ಪ್ರಸಂಗವಿರುವದು; ಎಷ್ಟೋ ಸಾರೆ ಅಜ್ಞ ಅಥವಾ ಅನಭಿಜ್ಞ ಜನರು ಹೇಳಿದ್ದನ್ನು ಕೇಳಿಕೊಂಡು ಸುಮ್ಮನಿರಬೇಕಾಗುವದು. ಮಕ್ಕಳು ತಾವೇ ತಮ್ಮ ಸ್ವಂತ ಪ್ರಯತ್ನದಿಂದ ಸಂಗತಿಗಳನ್ನು ತಿಳಿದುಕೊಳ್ಳಲಿಕ್ಕೆ ಹವಣಿಸುವದು ಅತ್ಯಂತ ಮಹತ್ವವಾದದ್ದಿರುವದು. ಸಾಲೆ ಕಲಿಯುವದು ಮುಗಿದ ಮೇಲೆ ಈ ತರದ ಸ್ವತಂತ್ರ ಸಂಶೋಧನೆಯ ಬುದ್ಧಿಯು ಹುಡುಗರಲ್ಲಿ ಜಾಗ್ರತವಾಗಿರುವದು ಅವಶ್ಯವಾಗಿದೆ. ಸಣ್ಣ ಸಣ್ಣ ಉದಾಹರಣೆಗಳಿಂದ ಈ ಪ್ರವೃತ್ತಿಯನ್ನು ಅವರಲ್ಲಿ ಬೆಳೆಸಲು ನೋಡುವೆವು. ಹುಡುಗರಿಗೆ ನಾವು ೨ + ೪ = ೩+೩ ಎಂಬ ಮಾತನ್ನಾಗಲೀ ೪×೩=೧೨ ಎಂಬ ಮಾತನ್ನಾಗಲಿ ನಾವೇ ಹೇಳಿಬಿಡುವದಿಲ್ಲ. ಅವರೇ ಕಂಡುಕೊಳ್ಳುವಂತೆ ಮಾಡುವೆವು. ಹೀಗೆ ಕಲಿಸುವ ಪದ್ಧತಿಗೆ ಪರಿಶೋಧನ ಪದ್ಧತಿ ಎಂದೆನ್ನಬಹುದು. ಮಕ್ಕಳು ತಾವೇ ಸಂಶೋಧನೆಯನ್ನು ಮಾಡಬಲ್ಲರೋ ? ಫ್ರೊಬೆಲ್ಲನಂತೂ ಹಾಗೆ ತಿಳಿದಿದ್ದನು: ಅದರ ಸಾಧ್ಯಾಸಾಧ್ಯತೆಯು.

(೧) ಮಕ್ಕಳ ದೃಷ್ಟಿಕೋನದಿಂದ ಅದರ ಶಕ್ಯತೆ

(೨) ಅದಕ್ಕಾಗಿ ಹಿಡಿಯುವ ವೇಳೆಯ ಪ್ರಮಾಣ

(೩) ಸಾಲೆಯಲ್ಲಿ ಉಪಲಬ್ಧವಿದ್ದ ಸಾಧನಗಳು

ಈ ಮೂರು ಸಂಗತಿಗಳನ್ನು ಅವಲಂಬಿಸಿರುವದು. ಉದಾಹರಣೆಗಾಗಿ ಭೂಗೋಲದ ಒಂದು ಪಾಠದಲ್ಲಿ

ಯಾವದೊಂದು ದೇಶದ ಉದ್ದ, ಅಗಲ, ಕ್ಷೇತ್ರ ಇವನ್ನು ಶಿಕ್ಷಕನು ತಾನೇ ಹೇಳಿ ಬಿಡಬೇಕೋ ಅಥವಾ ಹುಡುಕಿ ತೆಗೆಯಲೆಂದು ಮಕ್ಕಳಿಗೆ ಬಿಟ್ಟುಬಿಡಬೇಕೋ ? ಹುಡುಗರ ಮುಂದಿನ ಪ್ರಶ್ನೆಯಂತೂ ಸ್ಪಷ್ಟವಿದೆ. ಶಿಕ್ಷಕನ ಹತ್ತರ ಅದಕ್ಕಾಗಿ ಬೇಕಾಗುವ ಸಾಧನ ಸಾಮಗ್ರಿಯ ಮೇಲೆ ಎಲ್ಲವೂ ಇದೆ—ನಕ್ಷೆಯ ಪುಸ್ತಕಗಳು, ಫೂಟು ಪಟ್ಟಿ, ಚೌಕುಮನೆಯುಳ್ಳ ಟ್ರೇಸಿಂಗ್ ಕಾಗದ ಇತ್ಯಾದಿ. ಇಂಥ ಪ್ರಸಂಗದಲ್ಲಿ ಬಾಯಿಂದ ಹೇಳಿ ಬಿಡುವದಕ್ಕಿಂತ ಶೋಧಕ ಪದ್ಧತಿಯ ಲಾಭವು ಖಂಡಿತವಾಗಿ ಹೆಚ್ಚಿರುವದು. ಆದರೆ ಒಂದು ಮಾತನ್ನು ನಾವು ಎಂದೂ ಮರೆಯಬಾರದು—ಇದು ಮತ್ತು ಇಂತಹ ಉದಾಹರಣೆಗಳಿಂದ ಹುಡುಗನಿಗೆ ಶೋಧನೆಯ ವಿಧಾನವು ಒಮ್ಮೆ ಮನದಟ್ಟಾದ ಮೇಲೆ ಮತ್ತು ಅದನ್ನು ಉಪಯೋಗಿಸುವದರಲ್ಲಿ ತಕ್ಕ ಮಟ್ಟಿಗೆ ಸಾಮರ್ಥ್ಯವು ಬಂದ ಮೇಲೆ ಮುಂದೆ ಪ್ರತಿಯೊಂದು ಸಂದರ್ಭದಲ್ಲಿಯೂ ಶೋಧಕ ಪದ್ಧತಿಯಿಂದಲೇ ಅಭ್ಯಾಸವು ನಡೆಯಬೇಕೆಂದು ಆಗ್ರಹಪಡುವದು ಸರಿಯಾಗಲಾರದು.

ಸಾಲೆಯಲ್ಲಿಯ ಎಲ್ಲ ವಿಷಯಗಳ ಅಭ್ಯಾಸದಲ್ಲಿಯೂ ಈ ಪದ್ಧತಿಯನ್ನು ಉಪಯೋಗಿಸಬಹುದು. ಸಾಮಾನ್ಯವಾಗಿ ಜನರ ಅಭಿಪ್ರಾಯದಲ್ಲಿ ಗಣಿತ, ವಿಜ್ಞಾನ ಈ ವಿಷಯಗಳಿಗೆ ಮಾತ್ರ ಈ ಪದ್ಧತಿಯು ಯೋಗ್ಯವಾಗಿದೆ ಎಂದೆನಿಸಿದರೂ ಸಾಹಿತ್ಯಕ ಅಭ್ಯಾಸಕ್ಕೂ ಅದರ ಅಗತ್ಯವಿರುವದು—ಅದನ್ನು ಬಿಟ್ಟರೆ ವಿಷಯವನ್ನು ಸಮರ್ಪಕವಾಗಿ ಕಲಿಸಲಾಗುವದಿಲ್ಲ. ಭಾಷಾ ವಿಷಯದಲ್ಲಿಯೂ ಇತಿಹಾಸದಲ್ಲಿಯೂ ಮೇಲಿನ ಇಯತ್ತೆಯ ಹುಡುಗರಿಗೆ ಒಂದು ವೃತ್ತಾಂತದ ಬೇರೆ ಬೇರೆ ಎರಡು ಪಾಠಾಂತರಗಳನ್ನು ಹೋಲಿಸಿ ನೋಡಲಿಕ್ಕೆ ಅಥವಾ ಒಂದೇ ವಿಷಯದ ಮೇಲೆ ಬೇರೆ ಬೇರೆ ದೃಷ್ಟಿಯಿಂದ ಬರೆದ ಎರಡು ಪ್ರಬಂಧಗಳನ್ನು ಒಂದಕ್ಕೊಂದು ಹೋಲಿಸಿ ನೋಡಲಿಕ್ಕೂ ಹೇಳಬಹುದು.

ಈ ಬಗೆಯ ಕೆಲಸದಲ್ಲಿ ಹುಡುಗರು ಯಾವ ವಿಚಾರದ ಒಂದು ಬಿಕ್ಕಟ್ಟಿಂಟಾಗಿರುವದೋ ಆ ಪ್ರಶ್ನೆಯನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಕಲಿಯುತ್ತಿರುವಾಗ ಸ್ವಾಭಾವಿಕವಾಗಿ ಆ ಬಿಕ್ಕಟ್ಟುಗಳು ಮುಂದೆ ಬಂದಿರಬೇಕು. ಇಂಥದೊಂದು ನಿಯಮ, ಇ[illegible] ಮಾತು ನಮಗೆ ಬೇಕಾದರೂ ಯಾತಕ್ಕೆ ಎಂ[illegible]ತ್ಯವು ಹುಡುಗರಿಗೆ ಅನಿಸಲಿಕ್ಕೆ ಬೇಕು. ಆ[illegible] ಬಿಡಿಸುವ ಉಪಾಯಗಳನ್ನು ಶಿಕ್ಷಕನು ಹುಡ[illegible] ಚರ್ಚಿಸಬೇಕು. ಈ ಕೆಲಸದಲ್ಲಿ ಶಿಕ್ಷಕನ [illegible] ಯಾತರಲ್ಲಿರುವದೆಂದರೆ ತನ್ನ ಆದರಲ್ಲಿನ ಆದಷ್ಟು ಕಡಿಮೆ ಮಾಡುವದರಲ್ಲಿ ಜಾಗ[illegible] ಬೇಕೆಂದೂ ಸೂಕ್ಷ್ಮವಾಗಿ ನಿರೀಕ್ಷಿಸಬೇಕೆಂ[illegible] ಹೇಳುತ್ತಿರುವಾಗ ಹುಡುಗರು ಬೇಗನೆ ಬರಬೇಕೆಂದು ಆತುರರಾಗಬಹುದು. ಜಾ[illegible]ಕಾರನ ವೃತ್ತಿಯನ್ನು ವಹಿಸಿದಂತೆ ಮಕ್ಕಳನ[illegible]ಹಿಸುವ ಹುರಿದುಂಬಿಸುವ ವೃತ್ತಿಯನ್ನು ಶಿಕ್ಷ[illegible]ಸಬೇಕು.

ಅಭ್ಯಸನಗಳು

೧. ಹತ್ತು ವರ್ಷದ ಹುಡುಗರ ಒಂ[illegible] ದಕ್ಷಿಣೋತ್ತರ ದಿಕ್ಕನ್ನು ಸೂಚಿಸುವ ಕಂಪಾ[illegible]ವನ್ನು ತಾವಾಗಿ ಶೋಧಿಸಲಿಕ್ಕೆ ನೀವು ಹೇ[illegible]ವಿರಿ ? ನೀವೇ ಪ್ರಾತ್ಯಕ್ಷಿಕೆಯಿಂದ ಕಲಿಸು[illegible]ಯೊಡನೆ ಇದನ್ನು ಹೋಲಿಸಿರಿ—ಗಮನಿ[illegible] ಮುಖ್ಯಾಂಶಗಳು: (೧) ಹಿಡಿದ ವೇಳೆ [illegible]ಯೋಗಿಸಿದ ಉಪಕರಣಗಳ ಜಿಲೆ (೩) [illegible]ಶ್ರಮ (೪) ಮಕ್ಕಳ ಮೇಲಾದ ಪರಿಣಾಮ[illegible]

೨. ಕೆಳಗಿನ ಪಾಠದ ವಿಷಯಗಳನ್ನ[illegible] ಕಾಣಿಸಿದ ಮೂರು ದೃಷ್ಟಿಯಿಂದ ಆಲೋ[illegible] ಅಭಿಪ್ರಾಯವನ್ನು ಹೇಳಿರಿ.

(ಅ) ಸಾಲೆಯಲ್ಲಿ ಮಾಡಿಸಲಿಕ್ಕೆ ಅಪ್ರ[illegible]ವೆಯೋ ಹೇಗೆ ?

(ಬ) ಶೋಧಕ ಪದ್ಧತಿಯಿಂದ ಅಪ[illegible] ಕೊಂಡು ಹೋಗುವದು.

(ಕ) ಯಾವ ವಯಸ್ಸಿಗೆ ಅವು ತಕ್ಕವಾ[illegible]

(i) ಕಂದ ಪದ್ಯದ ಛಂದಸ್ಸು.

(ii) ವಿಶಿಷ್ಟ ಗುರುತ್ವ.

(iii) ಹವೆಯಲ್ಲಿ ಸ್ಥಿತ್ಯಂತರ ಮಾಡ[illegible] ವೇಶಗಳು.

(iv) ಕಣ್ಣಿನ ರಚನೆ.
(v) ತ್ರಿಕೋಣದ ಧರ್ಮಗಳು.
(vi) ನೊಣಗಳು ಮೇಲ್ಛಾವಣಿಯ ಮೇಲೆ ಹೇಗೆ ನಡೆಯಬಲ್ಲವು.
(vii) ಪೂರ್ಣ ವಿರಾಮದ ಉಪಯೋಗ

೩. ಹನ್ನೆರಡು ವರ್ಷದ ವಿದ್ಯಾರ್ಥಿಗಳ ವರ್ಗಕ್ಕೆ ಹೂವಿನ ರಚನೆಯ ವಿಷಯವಾಗಿ ಏನೂ ಕಲಿಯದೆ ದ್ದ) ಒಂದು ದಾಸಾಳ ಹೂವನ್ನು—ಪ್ರತಿಯೊಬ್ಬನಿಗೆ ಒಂದೊಂದರಂತೆ ಕೊಡಿರಿ. ಅದನ್ನು ಹರಿದು ಬೇರೆ ೀರೆ ಮಾಡಿ ಅದರ ರಚನೆಯನ್ನು ಬರೆದು ತಿಳಿಸಿರಿ. ವರಿಗೆ ಸಹಾಯ ನೀಡಬೇಡಿರಿ. ಅವರ ಉತ್ತರಗಳನ್ನು ರಶೀಲಿಸಿ ತಾವಾಗಿಯೇ, ಅನ್ಯರ ಸಹಾಯವಿಲ್ಲದೆ, ಷ್ಟು ಅರಿತುಕೊಳ್ಳಲು ಶಕ್ತರಾಗಿದ್ದಾರೆ ಎಂಬದರ ಂದಾಜು ಮಾಡಿರಿ.

೪. ಒಂದು ವರ್ಗದ ಹುಡುಗರಲ್ಲಿ ಕಾರ್ಡಬೋರ್ಡಿನ ಕೋನಗಳನ್ನು, ಪ್ರತಿಯೊಬ್ಬ ಹುಡುಗನ ಕೈಯಲ್ಲಿ ಾರು ಬೇರೆ ಬೇರೆ ಆಕಾರದ ತ್ರಿಕೋನಗಳು ಬರು ತೆ, ಹಂಚಿರಿ. ಆ ಹುಡುಗರಿಗೆ ಕಾಟಕೋನ, ೂಕೋನ, ವಿಶಾಲಕೋನಗಳು ಗೊತ್ತಿವೆ. ಅವರು ೀನರೂಪಕವನ್ನು ಉಪಯೋಗಿಸಬಲ್ಲರು ಎಂದು ದು ಅವರಿಗೆ ಕೊಟ್ಟ ತ್ರಿಕೋಣಗಳ ಕೋನಗಳ ಯವಾಗಿ ಏನೆಲ್ಲ ಸಂಗತಿಗಳು ತಿಳಿಯಬಹುದೆಂಬ- ನ್ನು ಪರೀಕ್ಷಿಸಲಿಕ್ಕೆ ಹೇಳಿರಿ. ಪ್ರತಿಯೊಂದು ತ್ರಿಕೋಣದ ಮೂರೂ ಕೋನಗಳು ಒಟ್ಟಾಗಿ ಎರಡು ಕಾಟಕೋನಗಳಿಗೆ ಸರಿಯಾಗುವವು ಎಂಬ ಸಂಗತಿಯನ್ನು ಎಷ್ಟು ಹುಡುಗರು ತಿಳಿದುಕೊಳ್ಳುವರೆಂಬದನ್ನು ನೋಡಿರಿ. ಆ ಸಂಗತಿಯನ್ನು ಅವರು ಶೋಧಿಸುವದಕ್ಕೆ ನೀವು ಹೇಗೆ ಮಾರ್ಗದರ್ಶನ ಮಾಡುವಿರಿ ? ಶೋಧನೆಯ ಮಹತ್ವವು ಎಷ್ಟರಮಟ್ಟಿನದು ? ನಾವಾಗಿ ಹೇಳಿ ಬಿಟ್ಟಿದ್ದರೆ ಇನ್ನೂ ಚೆನ್ನಾಗಿತ್ತೇನು ? ಇಲ್ಲವಾದರೆ ಏಕೆ?

೫. ಖರೆಯ ಮಾತನಾಡುವದು, ಹಲ್ಲು ತಿಕ್ಕಿಕೊಳುವದು, ಹೊತ್ತಿಗೆ ಸರಿಯಾಗಿ ಕೆಲಸ ಮಾಡುವದು, ಇನ್ನೊಬ್ಬರಿಗೆ ಹೇಗೆನಿಸೀತು ಎಂಬದನ್ನು ಗಮನಕ್ಕೆ ತೆಗೆದುಕೊಳ್ಳುವದು—ಈ ಸಂಗತಿಗಳ ಬೆಲೆಯನ್ನು ನಿರ್ಣಯಿಸಲಿಕ್ಕೆ ಹುಡುಗರಿಗೆ ಬಿಟ್ಟು ಬಿಡುವಿರೇನು ? ಇಲ್ಲದೆ ಹೋದರೆ ನೀವು ಯಾವ ಕ್ರಮವನ್ನು ಕೈಕೊಳ್ಳುವಿರಿ ? ಯಾಕೆ ?

೬. ಸಾಹಿತ್ಯದ ಶಿಕ್ಷಣಕ್ಕೆ ಶೋಧಕ ಪದ್ಧತಿಯ ತತ್ವಗಳನ್ನು ಎಷ್ಟರಮಟ್ಟಿಗೆ ಉಪಯೋಗ ಮಾಡಿಕೊಳ್ಳಬಹುದೆಂಬದನ್ನು ವಿಚಾರಿಸಿರಿ. ರಾಘವಾಂಕ ಕವಿಯ ಕವಿತಾಸೌಂದರ್ಯವನ್ನು ತಿಳಿದುಕೊಳ್ಳಲಿಕ್ಕೆ ವಯಸರಾದ ವಿದ್ಯಾರ್ಥಿಗಳಿಗೆ ಹೇಗೆ ಮಾರ್ಗದರ್ಶನ ಮಾಡುವಿರಿ ? ಅವರು ಇಂಥ ವಿಷಯವನ್ನು ತಾವೇ ತಿಳುಕೊಳ್ಳಲಾರದವರಾದರೆ ನೀವು ಅದನ್ನು ಕಲಿಸಬಲ್ಲಿರಾ? ಮೊದಲನೆಯ ಪ್ರಶ್ನೆಯಲ್ಲಿದ್ದ ಸನ್ನಿವೇಶಕ್ಕೂ ಈ ಸನ್ನಿವೇಶಕ್ಕೂ ಏನಂತರವಿದೆ ?

"ನೂತನ ಗಣಿತ" ಗಳ ತಿದ್ದಿದ ಆವೃತ್ತಿಗಳು

ಎಲ್ಲ ಕಡೆಗೂ ದೊರೆಯುವವು

ಹಲವು ತಜ್ಞರ ನೆರವಿನಿಂದ ತಿದ್ದುಪಡೆಯನ್ನು ಕೈಕೊಂಡು ಹೊಸ ಆವೃತ್ತಿಗಳನ್ನು ಹೊರಡಿಸಲಾಗಿದೆ. ಮನಶ್ಶಾಸ್ತ್ರ, ಗಣಿತಶಾಸ್ತ್ರ, ವ್ಯವಹಾರ ಇವುಗಳ ತ್ರಿವೇಣೀ ಸಂಗಮವನ್ನು ಇವುಗಳಲ್ಲಿ ಕಾಣಬಹುದು. ಅಲ್ಲದೆ ಗಣಿತದ ಎಲ್ಲ ವಿಭಾಗಗಳನ್ನೂ ಕೊಡಲಾಗಿದೆ.

ಎಲ್ಲ ಜಿಲ್ಹಾ ಸ್ಕೂ. ಬೋ. ಹಾಗು ಮುನಸಿಪಲ್ ಸ್ಕೂ. ಬೋರ್ಡುಗಳೂ ಮುನ್ನಣೆಯನ್ನಿತ್ತಿರುವವು ಎಂತಲೇ ತಿದ್ದಿದ ಆವೃತ್ತಿಗಳನ್ನು ಕೇಳಿರಿ. ಎಲ್ಲ ಕಡೆಗೂ ದೊರೆಯುವವು.

ಆಕಳವಾಡಿ ಬುಕ್ ಡಿಪೋ, ಧಾರವಾಡ

ಶ್ರೀ ಸಿಂಪೀ ಲಿಂಗಣ್ಣ

ಲೇ : ಶ್ರೀ. ಶಿಂತ್ರಿ ಬಸಪ್ಪನವರು, ಬಿ. ಎ. ಬಿ
ನಿವೃತ್ತ ಆಸಿಸ್ಟಂಟ ಎಜ್ಯುಕೇಶನಲ
ಇನ್ಸ್‌ಪೆಕ್ಟರ ದಕ್ಷಿಣ ಭಾಗ,
ಧಾರವಾಡ

ಪೀಠಿಕೆ

ಕನ್ನಡ ಸಾಹಿತ್ಯದ ಗಗನಾಂಗಣದಲ್ಲಿ ಪ್ರಕಾಶಿಸುತ್ತಿರುವ ತಾರೆಗಳ ಸಮೂಹದಲ್ಲಿ ಅಲ್ಲಲ್ಲಿ ಹಲವು ಪ್ರಾಥಮಿಕ ಶಿಕ್ಷಕರು ಮಿಣುಗುತ್ತಿರುವದು ' ಕನ್ನಡ ಪ್ರಾಥಮಿಕ ಶಿಕ್ಷಣ ' ಕ್ಕೊಂದು ಹೆಮ್ಮೆಯ ಮಾತು ! ಅಂತಹವರ ಜೀವನ ಚರಿತ್ರದ ಬಗೆಗೊಂದು ಲೇಖವನ್ನು ಈ ನಮ್ಮ ಪತ್ರಿಕೆಯ ಮುಖಾಂತರ ಪ್ರಕಟಿಸಬೇಕೆಂಬ ಸಂಕಲ್ಪವೊಂದನ್ನು ಸಂಪಾದಕ ಮಂಡಲವು ಗೊತ್ತು ಮಾಡಿಕೊಂಡಿದೆ. ಆ ಜೀವನ ಚರಿತ್ರವು ಉಳಿದ ಪ್ರಾಥಮಿಕ ಶಿಕ್ಷಕ-ಶಿಕ್ಷಿಕೆಯರಿಗೆ ಆದರ್ಶಪ್ರಾಯವಾಗಿ ಸಾಹಿತ್ಯಕ್ಷೇತ್ರದಲ್ಲಿ ಅವರು ಹುಮ್ಮಸದಿಂದ ಮುನ್ನುಗ್ಗಿ ಕೆಲಸ ಮಾಡಿ ಸಾಹಿತಿಗಳಾಗಲು ಹೆಣಗಾಡಬೇಕೆಂಬುದು ಸಂಪಾದಕ ಮಂಡಲವು ಮಾಡಿಕೊಂಡ ಸಂಕಲ್ಪದ ಮೂಲೋದ್ದೇಶವು. ಆ ಸದುದ್ದೇಶಕ್ಕನುಗುಣವಾಗಿ ಹೋದ ತಿಂಗಳು ಸಾಹಿತ್ಯದಲ್ಲಿ ಸೇವೆಗೈದ ಶಿಕ್ಷಕರೊಬ್ಬರ ಚರಿತ್ರವನ್ನು ಕೊಡಲಾಗಿದೆ. ಈ ತಿಂಗಳು ಉತ್ತಮ ಬರಹಗಾರರೂ, ಜನಪದ ಸಾಹಿತ್ಯದ ಪುರಸ್ಕರ್ತರೂ, ನುರಿತ ನಾಟಕಕಾರರೂ ಎಂಬ ಕೀರ್ತಿವೆತ್ತಗೆಳೆಯರ ಗುಂಪಿನ ' ಸಿಂಪಿ ಲಿಂಗಣ್ಣ ' ನವರ ಬಗೆಗೆ ಅಲ್ಪ ಪರಿಚಯವನ್ನು ಓದುಗರಿಗೆ ಮಾಡಿಕೊಡಲು ಪ್ರಯತ್ನಿಸಲಾಗಿದೆ.

ಬಾಲ್ಯ ಮತ್ತು ಶಿಕ್ಷಣ

ಸಾಹಿತ್ಯದಲ್ಲಿ ' ಸಿಂಪಿ ಲಿಂಗಣ್ಣ ' ನೆಂಬ ಹೆಸರಿನ್ನಿಟ್ಟುಕೊಂಡು ಹಿರಿದಾದ ಸೇವೆ ಸಲ್ಲಿಸುತ್ತಿರುವರಾದರೂ ಅವರ ನಿಜವಾದ ಹೆಸರು ನಾಗಪ್ಪ ಎಂದು ಇದೆ. ವಿಜಾಪುರ ಜಿಲ್ಹೆಯಲ್ಲಿ ಚಡಚಣ ಎಂಬದೊಂದು ದೊಡ್ಡ ಗ್ರಾಮವಿದೆ. ಆ ಗ್ರಾಮದಲ್ಲಿ ಸಿಂಪಿ ಎಂಬ ಹೆಸ[...]ದೊಂದು ಮನೆತನವಿದೆ. ನಾಗಪ್ಪನವರು ಆ ವ[...]ತನಕ್ಕೆ ಸೇರಿದವರು. ಅವರ ತಂದೆಯವರ ಹೆಸರು [...]ಯೋಗಪ್ಪ. ನಾಗಪ್ಪನವರು ದಿನಾಂಕ ೧೧-೨-೧೯[...]ರಂದು ಚಡಚಣ ಗ್ರಾಮದಲ್ಲಿಯೇ ಜನಿಸಿದರು. ಅ[...] ಪ್ರಾಥಮಿಕ ಶಿಕ್ಷಣವೆಲ್ಲ ಸ್ವಗ್ರಾ[...]ದಲ್ಲಿಯೇ ಜರುಗಿತು. ೧೯೨೫[...] ಚಡಚಣ ಕನ್ನಡ ಗಂಡು ಮ[...] ಶಾಲೆಯಿಂದ ಮುಲಕೀ ಪರಿ[...] ಕುಳಿತು ಆ ವರುಷ ವಿಜಾಪುರ ಜ[...]ಗೇ ಅಗ್ರಸ್ಥಾನವನ್ನು ಪಡೆದು ಶ್ರೇ[...] ಹೊಂದಿದರು. ೧೯೨೮ ರಲ್ಲಿ ಮೊ[...]ಲನೇ ವರುಷದ ಟ್ರೇನಿಂಗಿಗೆ ಆ [...]ಯಿಂದ ಅವರೊಬ್ಬರೇ ಆರಿಸಲ್ಪ[...] ಆ ಪರೀಕ್ಷೆಯಲ್ಲಿ ದಕ್ಷಿಣ ಭಾ[...] ನಾಲ್ಕೂ ಜಿಲ್ಹೆಗಳಲ್ಲಿ ದ್ವಿತೀಯ ಸ್[...]ವನ್ನು ಹೊಂದಿ ಪಾಸಾದರು. [...]ರೊಳಗೆ ಅವರಿಗೆ ಮರಾಠಿ ಮತ್ತು ಹಿಂದೀ ಭಾಷೆ[...] ಪರಿಚಯವು ಸಾಕಷ್ಟಾಗಿತ್ತು. ಬಂಗಾಲಿ ಭಾಷೆ[...] ಅಲ್ಪ ಪರಿಚಯವೂ ಅವರಿಗಿದೆ. ೧೯೪೨ರಲ್ಲಿ ಎರಡ[...] ವರುಷದ (ಕೊನೆಯ ವರ್ಷದ) ಟ್ರೇನಿಂಗ ಸರ್ಟಿಫಿ[...] ಪರೀಕ್ಷೆಯಲ್ಲಿ ನಾಲ್ಕು ಜಿಲ್ಹೆಗಳಿಗೆ ಪ್ರಥಮ ಸ್ಥಾನ[...] ಸಂಪಾದಿಸಿ ನಾಲ್ಕು ಪ್ರಥಮ ಬಹುಮಾನಗಳನ್ನು [...]ದರು. ಮೊದಲಿನಿಂದ ಕೊನೆಯ ವರೆಗೆ ಅವರ [...]ಕ್ಷೆಯ ಪರಿಣಾಮಗಳೆಲ್ಲ ಅತ್ಯಂತ ಉಜ್ವಲವಾಗಿವೆಯ[...] ಮಾತನ್ನು ಓದುಗರ ಗಮನಕ್ಕೆ ತರಬಯಸುತ್ತೇನೆ.

ಶಿಕ್ಷಕವೃತ್ತಿ ಹಾಗೂ ಸಾಹಿತ್ಯ ಸೇವೆ

ಲಿಂಗೈಕ್ಯ ' ಮಧರ ಚೆನ್ನ ' ರ ಹುಟ್ಟೂರಾದ [...] ಸಂಗಿಯ ಹೆಸರನ್ನು ಕೇಳದ ಕನ್ನಡಿಗರು ಸಿಗು[...]

ಡ. ಆ ಗ್ರಾಮದ ಪಕ್ಕದಲ್ಲಿರುವ ಭತಗುಣಕಿ
ಂದು ಹಳ್ಳಿಯಲ್ಲಿ ಅವರ ನವಕರಿಯು ಪ್ರಾರಂಭ
ು. ಅವರು ಏಳು ವರುಷದ ಬಾಲಕರಿರು-
ಹಲಸಂಗಿಯ ಉದ್ದಾಮ ಸಾಹಿತಿಯಾದ
ರ ಚೆನ್ನ ' ರ ಪರಿಚಯವಾಯಿತು. ಆ ಸಾಹಿ
ಭಾವವು ಸಿಂಪಿ ಲಿಂಗಣ್ಣನವರ ಮೇಲೆ ಬೀರಿ-
ಅಷ್ಟಿಷ್ಟಲ್ಲ. ೧೯೨೩ರಲ್ಲಿ ಸ್ವಂತ ಪ್ರಯತ್ನದಿಂದ
ಲಾಸ ಭವನ ' ವೆಂಬ ಹೆಸರಿನ ವಾಚನಾಲ-
ಸ್ಥಾಪಿಸಿ ' ಮುದ್ದು ' ಎಂಬ ಕೈಬರೆಹದ
ಕೆಯನ್ನು ಬಿಟ್ಟೂ ಬಿಡದೆ ಎರಡು ವರ್ಷಗಳ
ನಡೆಸಿದರು. ೧೯೨೭ ರಲ್ಲಿ ಅವರ ಪ್ರಥಮ
ಯಾದ ' ಜನಜೀವನ ' ಎಂಬ ನಾಟಕವು
ವನ್ನು ಪೊಂದಿತು. ಆ ನಾಟಕವನ್ನು ಶಾಲೆಯ
ಕಲಿಸಿ-ವಿಜಾಪುರದ ' ದುಷ್ಕಾಳ ನಿವಾರಣ
(Anti-Famine Institute) ಯ
ನಾ ಸಮಾರಂಭದ ಕಾಲಕ್ಕೆ ಅಭಿನಯಿಸಿ
ಲಾಯಿತು, ಅಲ್ಲಿ ನೆರೆದ ಪ್ರೇಕ್ಷಕವೃಂದದಿಂದ
ಮೆಚ್ಚುಗೆಯನ್ನು ಪಡೆಯಿತಲ್ಲದೆ, ಆಗ ಜಿಲ್ಲಾಧಿ
(Collector) ಗಳಾಗಿದ್ದ ದಿವಂಗತ
ಎಚ್. ನಾಯಕರವರು ಸಂತುಷ್ಟರಾಗಿ ಪ್ರಶಸ್ತಿ
ನ್ನಿತ್ತರು. ಅದೇ ನಾಟಕವನ್ನು ಲಚ್ಯಾಣ
ಲ್ಲ ಒಳ್ಳೆ ಪರಿಣಾಮಕಾರಿಯಾಗುವಂತೆ ಆಡಿ
ದ್ದರಿಂದ ಶ್ರೀ. ಮ. ನಿ. ಪ್ರ. ಬಂಥನಾಳದ
ಶಿವಯೋಗಿಗಳವರು ತುಂಬುಹೃದಯದಿಂದ
ಸಿದರು. ಶಿವಯೋಗಿಶ್ವರರ ಆಶೀರ್ವಾದದಿಂದ
ತರಾಗಿ ಸಾಹಿತ್ಯದಲ್ಲಿ ಒಂದರಮೇಲೊಂದು
ಳನ್ನು ಬರೆಯುತ್ತ ಸಾಗಿದರೆಂಬಂತೆ ತೋರು
ವನಗಳೂ, ಏಕಾಂತ ನಾಟಕಗಳೂ, ಕಥೆ-
ಗಳೂ, ಅನುವಾದಗಳೂ, ಅರವಿಂದ ಸಾಹಿ,
ಷಾಂತರಗಳೂ, ಜನಪದಗೀತಗಳೂ, ಲಾವಣಿ
ವರಿಂದ ಬರೆಯಲ್ಪಟ್ಟಿವೆ. ನಮಗೆ ಗೊತ್ತಿದ್ದ
ಅವರಿಂದ ಸುಮಾರು ನಾಲ್ವತ್ತು ಹೊತ್ತಿಗೆಗಳು
ಸಿದ್ದವೆ, . ಇನ್ನೂ ಹೊರಹೊಮ್ಮುತ್ತಲಿವೆ.

ಅವುಗಳಲ್ಲಿ ಪಠನೀಯ ಪುಸ್ತಕಗಳೆಂದು ಮನ್ನಣೆ ಪಡೆದ ಹಳ್ಳಿಯ ಮಹಾತ್ಮ, ದೇಶಭಕ್ತಿಯ ಕತೆಗಳು, ಭಾರತೀಯ ಮಹಾಪುರುಷರು, ಪವಿತ್ರ ಜೀವನ, ಬಾಳಿನಲ್ಲಿ ಬೆಳಕು, ಶ್ರೀ. ಅರವಿಂದರು, ಜೀವನ ವೃಷ್ಟಿ, ಕನ್ನಡ ಕುಲದೀಪ ಬಸವಣ್ಣ ಮುಂತಾದ ಗ್ರಂಥಗಳೂ, ಜನಜೀವನ, ಭಗವಾನ ಬುದ್ಧದೇವ, ಭಕ್ತಿ ರಹಸ್ಯ, ಪೃಥ್ವಿರಾಜ, ಚಂಡಾಲ ಚೌಕಡಿ, ಚಂದ್ರಗುಪ್ತ, ಸಪ್ತಪದಿ, ಮೊದಲನೆಯ ದೇಶ ದ್ರೋಹಿ ಮುಂತಾದ ನಾಟಕಗಳೂ, ಗರತಿಯ ಹಾಡು, ಜೀವನ ಸಂಗೀತ, ಗರತಿಯ ಬಾಳು ಮುಂತಾದ ಜಾನಪದ ಹೊತ್ತಿಗೆಗಳೂ ಮತ್ತು ಮುಗಿಲ ಜೇನು, ಮಾತೃವಾಣಿ, ಉಡಿದೆನೆ, ಮುಂತಾದ ಕವನ ಸಂಗ್ರಹಗಳೂ ಉಲ್ಲೇಖನೀಯವಾಗಿವೆ, ಇವು ಗಳಲ್ಲಿ ಕೆಲವಕ್ಕೆ ಅನೇಕ ಸಂಘ ಸಂಸ್ಥೆಗಳಿಂದ ಮೆಚ್ಚುಗೆ ಗಳೂ ದೊರೆತಿವೆ. ಶಿಕ್ಷಕ ವೃತ್ತಿಯಲ್ಲಿದ್ದು, ಶಿಕ್ಷಕನ ಕೆಲಸವನ್ನು ಚನ್ನಾಗಿ ನಾಗಿಸಿಕೊಂಡು, ಉಳಿದ ವೇಳೆ ಯಲ್ಲಿ ಕನ್ನಡಮ್ಮನ ಸೇವೆಗೈಯಲು ಕಾಯಾ ವಾಚಾ ಮನಸಾ ಹೆಣಗಾಡುವ ಅವರ ಈ ಸಾಹಸವು ನಿಜಕ್ಕೂ ಅಭಿನಂದನಾರ್ಹವಿದೆಯೆಂಬ ಮಾತನ್ನು ಸುಜ್ಞರಾದ ಓದುಗರಿಗೆ ಬಿಚ್ಚಿ ಹೇಳಬೇಕೆ?

ಇತರ ಚಟುವಟಿಕೆಗಳು :

ಧಾರವಾಡದಲ್ಲಿ ' ಗೆಳೆಯರ ಗುಂಪು ' ಎಂಬ ಹೆಸ ರನ್ನಿಟ್ಟುಕೊಂಡಿದ್ದ ಸಾಹಿತ್ಯಸೇವಕರ ಬಳಗದ ಸಂಪರ್ಕವು ಅವರ ನವಕರಿಯ ಪ್ರಾರಂಭದಲ್ಲಿಯೇ ಆಗಿ ಹಲಸಂಗಿ ಯಲ್ಲಿಯೂ ಗೆಳೆಯರ ಗುಂಪೊಂದು ' ಮಧುರ ಚೆನ್ನ'ರ ನೇತೃತ್ವದಲ್ಲಿ ವೈದೋರಿತು. ಆಗ ಅವರು ' ಮಧುರ ಚೆನ್ನ'ರ ನಿಕಟಾನುವರ್ತಿಗಳಾಗಿದ್ದುದರಿಂದ ಪಾಂಡಿಚೇರಿ ಯಲ್ಲಿಯ ದಿವಂಗತ ಶ್ರೀ. ಅರವಿಂದರ ಹಾಗೂ ಶ್ರೀ. ತಾಯಿಯವರ ಶಿಷ್ಯತ್ವವನ್ನು ಶಿರಸಾವಹಿಸಿಕೊಂಡರು. ಶ್ರೀ. ಅರವಿಂದರ ಹಾಗೂ ಶ್ರೀ. ತಾಯಿಯವರ ಉಪದೇಶಾಮೃತದ ಪ್ರಭಾವದಿಂದ ಅವರ ಸಾಹಿತ್ಯ ದೃಷ್ಟಿಯೂ ಜೀವನದೃಷ್ಟಿಯೂ ಮಾರ್ಪಾಡುಗೊಂಡು ತಮ್ಮ ಬಾಳಿನಲ್ಲಿ ಆನಂದ-ತೃಪ್ತಿ-ಶಾಂತಿ-ಸಮಾಧಾನ-

ಗಳ ಸುಳುಹನ್ನು ಕಾಣುತ್ತಲಿರುವರು. ಪಾಂಡಿಚೇರಿಯಲ್ಲಿಯ ಅರವಿಂದಾಶ್ರಮದ ಸಂಪರ್ಕವು ಅವರ ಸಾದಾ ಮತ್ತು ಸರಳ ಜೀವನಕ್ಕೊಂದು ಮಿರುಗನ್ನು ಕೊಟ್ಟಂತಾಗಿದೆ. ಜನಪದ ಸಾಹಿತ್ಯಕ್ಕೆ ಅವರು ಸಲ್ಲಿಸಿದ ಹಿರಿದಾದ ಸೇವೆಯನ್ನು ಮನದಂದು ರಬಕವಿಯ ಸಾಹಿತ್ಯ ಸಮ್ಮೇಲನದ ಕಾಲಕ್ಕೆ ಅಲ್ಲಿ ಕಲೆತ ಜನಪದಗೋಷ್ಠಿಯ ಅಧ್ಯಕ್ಷಪದಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯವರಿಂದ ಒಕ್ಕೊರಲಿನಿಂದ ಚುನಾಯಿಸಲ್ಪಟ್ಟಿದ್ದರು. ಜನಪದ ಸಾಹಿತ್ಯದ ವಿವಿಧಾಂಗಗಳನ್ನು ಕುರಿತು ಧಾರವಾಡದ ರೇಡಿಯೋದಲ್ಲಿ ಹಲವಾರು ಭಾಷಣಗಳಾದದ್ದು ನಮ್ಮ ನೆನಪಿನಲ್ಲಿದೆ. ಕರ್ನಾಟಕದ ಎಲ್ಲ ಭಾಗಗಳಲ್ಲಿಯ ಶೈಕ್ಷಣಿಕ ಸಂಸ್ಥೆಗಳು ಸಾಮಾಜಿಕ ಹಾಗೂ ಶೈಕ್ಷಣಿಕ ಉತ್ಸವಗಳ ಕಾಲಕ್ಕೆ ಅವರನ್ನು ಮುಖ್ಯ ಅತಿಥಿಗಳನ್ನಾಗಿ ತಮ್ಮಲ್ಲಿಗೆ ಪ್ರೇಮಾದರಗಳಿಂದ ಬರಮಾಡಿಕೊಂಡು ಅವರ ವಿದ್ವತ್ಪೂರ್ಣವಾದ ಉಪನ್ಯಾಸಗಳ ಲಾಭವನ್ನು ಹೊಂದುತ್ತಿರುವ ವರದಿಗಳು ದೈನಿಕ ಪತ್ರಿಕೆಗಳಲ್ಲಿ ಆಗಾಗ ಪ್ರಕಟವಾಗುತ್ತಲಿವೆ. ಇದು ಶಿಕ್ಷಣಪ್ರಪಂಚದಲ್ಲಿಯ ನಮ್ಮೆಲ್ಲರಿಗೆ ಹೆಮ್ಮೆಯ ಮಾತು !

ಉಪಸಂಹಾರ:

ಶ್ರೀಯುತರು ಈಗ ತಮ್ಮ ಹುಟ್ಟೂರಾದ ದಲ್ಲಿಯೇ ಶಿಕ್ಷಕರಾಗಿರುವರೆಂಬಂತೆ ತ್ರೈ ಶಿಕ್ಷಕವೃತ್ತಿಗೆ ಎಳ್ಳನಿಂತು ಚ್ಯುತಿಯಾಗದ ಬಿಡಿ ವೇಳೆಯನ್ನು ಕನ್ನಡಮ್ಮನ ಸೇವೆಗೆ ಪ್ರಾಥಮಿಕ ಶಿಕ್ಷಕ—ಶಿಕ್ಷಿಕೆಯರಿಗೊಂದು ಪ ಯನ್ನು ಹಾಕಿ ಕೊಟ್ಟಿದ್ದಾರೆ. ಅವರ ಈ ಆ ಕಣ್ಮುಂದೆ ಇಟ್ಟುಕೊಂಡು ಶಿಕ್ಷಕ–ಶಿಕ್ಷಿಕೆಯ ಅಮೌಲ್ಯವಾದ ಬಿಡಿ ವೇಳೆಯನ್ನು ಸಾಹಿತ್ಯ ವಿನಿಯೋಗಿಸಿ ಸಿಂಪಿ ಲಿಂಗಣ್ಣನವರಂತೆ ಅವ್ಯಾಹತವಾಗಿ ದುಡಿದು ಕನ್ನಡ ಸಾಹಿತ್ಯವನ ಸಲು ಹಾಗೂ ಉಜ್ವಲಗೊಳಿಸಲು ಹೆಣಗಾಡ ನಾವು ನೆರೆನಂಬಿದ್ದೇವೆ. ಮನವಿದ್ದಲ್ಲಿ ಯಲ್ಲವೇ ? ಶ್ರೀಯುತರಿಂದ ಇನ್ನೂ ಸೇವೆಯು ನಮ್ಮ ಸಾಹಿತ್ಯಕ್ಕೆ ಜರುಗಲೆಂದು ಈ ಪುಟ್ಟ ಲೇಖನವನ್ನು ಇಲ್ಲಿಗೆ ವಿಶ್ರಮಿಸುತ್ತೇ

—: ಸಿರಿಗನ್ನಡಂ ಗೆಲ್ಗೆ :—

ಪುಟ ೨೮೦) **ಮೂಲ ಶಿಕ್ಷಣ** (ಬೆಲೆ: ೩-೦

ಲೇಖಕರು : **ಶ್ರೀ. ಮ. ಗು. ಹಂದ್ರಾಳ**, ಬಿ. ಎ., (ಆನರ್ಸ) ಬಿ. ಟಿ.

(ಪ್ರಿನ್ಸಿಪಾಲ, ಪದವೀಧರರ ಜೀವನ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ)

ಮೂಲ ಶಿಕ್ಷಣದ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಗೆಯಾ ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ.

ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ

ಆಕಳವಾಡಿ ಬುಕ್ ಡಿಪೋ, ಧಾರವಾಡ

ಮೂಲ ಶಿಕ್ಷಣ

ಶಾಲೆಗಳಲ್ಲಿ ಸಾಂಘಿಕ ಜೀವನದ ಮಹತ್ವ

ಲೇಖಕರು :— ಶ್ರೀ. ಈಶ್ವರಚಂದ್ರ ಚಿಂತಾಮಣಿ, ಟ್ರೇನಿಂಗ ಕಾಲೇಜ, ಜಮಖಂಡಿ

'ಮೂಲ ಶಿಕ್ಷಣ ಶಾಲೆಗಳಲ್ಲಿ ಸಾಂಘಿಕ ಜೀವನದ ಮಹತ್ವ' ಈ ವಿಷಯ ಕುರಿತು ವಿಚಾರ ಮಾಡುವ ಮುನ್ನ, 'ಸಾಂಘಿಕ ಜೀವನ' ಅಂದರೇನು? ಸಾಂಘಿಕ ಜೀವನದಿಂದ ನಾವೆಲ್ಲರೂ—ಒಟ್ಟಾರೆ ಸಮಾಜ ಪ್ರಪಂಚ ಮುನ್ನಡೆಯುತ್ತ ಬಂದಿರುವ ಸಂಗತಿಯ ಕಡೆಗೆ ಹೊರಳಿ ಸೂಕ್ಷ್ಮವಾಗಿ ತಿಳಿದುಕೊಳ್ಳುವದು ಯೋಗ್ಯ. ಅಂದರೇನೇ ಮೇಲಿನ ಮಾತು ನಿಚ್ಚಳವಾಗಿ–ಸ್ಪಷ್ಟವಾಗಿ ನಮ್ಮೆಲ್ಲರಿಗೆ ವಿದಿತವಾಗುವದು.

ಸಾಂಘಿಕ ಜೀವನವೆಂದರೆ ಸಂಘರೂಪವಾಗಿ, ಗುಂಪಾಗಿ, ಹೊಂದಿಕೊಂಡು ಸಹಕಾರದಿಂದ, ಪರಸ್ಪರ ಪ್ರೇಮದಿಂದ, ತಾಳ್ಮೆಯಿಂದ, ಅನುವು ಆಪತ್ತುಗಳನ್ನು ಒಂದಾಗಿ ಎದುರಿಸುತ್ತ ಸುಖರೂಪದಿಂದ ಬಾಳುವದು ಎಂದರ್ಥವಾಗುವದೆಂದು ಸಾಮಾನ್ಯವಾಗಿ-ಸುಲಭವಾಗಿ ಹೇಳಬಹುದಾಗಿದೆ.

ಈ ಮಾತು ಒಂದು ಮನೆತನದಿಂದ ಒಂದು ನಾಡಿಗೂ, ರಾಷ್ಟ್ರಕ್ಕೂ, ಪ್ರಪಂಚಕ್ಕೂ ಅನ್ವಯಿಸುತ್ತದೆ. ಮನೆಯ ಹಿರಿಯನೊಬ್ಬನೆ ಮನೆತನದ ಹಿತ-ಚಿಂತಕನಾಗಿರದೆ ಮನೆಯ ಹಿರಿಕಿರಿಯರೆಲ್ಲರೂ ಅವನ ಹಿತಚಿಂತನೆಯಲ್ಲಿ ಸದಾಕಾಲವೂ ಪಾಲುಗಾರರೆಂಬುದು ನಿಜವಷ್ಟೇ? ಸರಿ. ಒಂದು ಕುಟುಂಬ ಸುಖರೂಪದಲ್ಲಿ ಬದುಕುತ್ತ, ಬಾಳುವೆ ಮಾಡಬೇಕಾದರೆ ಆ ಕುಟುಂಬದ ಎಲ್ಲ ಜನರಲ್ಲಿ 'ಒಂದುತನ' ವಿರಲೇಬೇಕಾಗುತ್ತದೆ. ಅವರ ಒಂದುತನದಲ್ಲಿ ಪ್ರೇಮ, ಮಮತೆ, ಸಹಕಾರ, ಆತ್ಮೀಯತೆ, ವಿಶ್ವಾಸಾದಿ ಒಂದುತನವನ್ನುಂಟು ಮಾಡಬಲ್ಲ ಎಲ್ಲ ಸದ್ಗುಣಗಳು ಅಡಕವಾಗಿರುತ್ತವೆ. ಈ ಆದರ್ಶ ಗುಣಗಳೇ ಆ ಮನೆಯ-ಆ ಕುಟುಂಬದ-ಸುಖ-ರೂಪತೆಯ-ಸಾಂಘಿಕ—ಜೀವನದ ಬೀಜ ಮಂತ್ರಗಳು. ಇಂತಹ ಗುಣಗಳ ತಳಹದಿಯ ಮೇಲೆ ನಿಂತ ಕುಟುಂಬವಾಗಲಿ, ನಾಡಾಗಲಿ, ರಾಷ್ಟ್ರವಾಗಲಿ ಎಂದೂ ದಾರಿ-ದಪ್ಪುವದಿಲ್ಲ; ಬಡವಾಗುವದಿಲ್ಲ; ಧೈರ್ಯಗೆಡುವದಿಲ್ಲ. ಒಬ್ಬರ ಆಶ್ರಯ, ಒಬ್ಬರ ಸಹಕಾರ ಇನ್ನೊಬ್ಬರ ಆಚ-ರಣೆಗೆ—ಒಳ್ಳೆಯತನಕ್ಕೆ ಕಾರಣವಾಗುವದು.

ಇಂದು ಪ್ರಪಂಚದಲ್ಲಿ ಅದೆಷ್ಟೋ ರಾಷ್ಟ್ರಗಳು ಸಹ-ಕಾರ ತತ್ವದ ತಳಹದಿಯ ಮೇಲೆ ಮುನ್ನಡೆದಿವೆ, ಸಾಂಘಿಕ ಜೀವನದಿಂದ-ಸಂಘ ಶಕ್ತಿಯಿಂದ ಆದರ್ಶ ರಾಷ್ಟ್ರಗಳಾಗಿವೆ. ಈ ಸಂಘ ಶಕ್ತಿ ಹಾಗೂ ಸಾಂಘಿಕ ಜೀವನಕ್ಕೆ ಹೊರತಾದ ರಾಷ್ಟ್ರಗಳು ಬಹಳವಾಗಿ ಹಿಂದುಳಿದು ಗೋಳಾಡುತ್ತಿರುವುದು ಸುಳ್ಳಲ್ಲ. ಆದರೆ ಪ್ರಪಂಚದಲ್ಲಿ ಮುನ್ನಡೆದ ರಾಷ್ಟ್ರಗಳು ಹಿಂದುಳಿದ ರಾಷ್ಟ್ರಗಳಿಗೆ ಸಹಾಯನೀಡುತ್ತ-ಮಾರ್ಗದರ್ಶನ ಮಾಡುತ್ತಿರುವುದು ಸಂಘಶಕ್ತಿ, ಸಹಕಾರದ ತಿರುಳಲ್ಲದೆ, ಸಾಂಘಿಕ ಜೀವ-ನದ ದ್ಯೋತಕವಲ್ಲದೆ ಮತ್ತೇನಿದೆ? ಯಾವುದೇ ಒಂದು ಕಾರ್ಯವಾಗಬೇಕಾದರೆ ಸಾಂಘಿಕ ಜೀವ-ನಿಂದಲೇ ಅದು ಸುಲಭ ಸಾಧ್ಯವೆಂದು ಧಾರಾಳವಾಗಿ ಹೇಳಬಹುದು.

ಇಂದು ನವಭಾರತದಲ್ಲಿ, ಮೂಲೋದ್ಯೋಗಗಳ ಮುಖಾಂತರ ಮಕ್ಕಳು ಶಿಕ್ಷಣ ಪಡೆದು, ಅವರ ಹೊಸ ಜೀವನ ಸರಿಯಾಗಿ ರೂಪಗೊಂಡು ಅವರೆಲ್ಲ ನಾಳಿನ ಆದರ್ಶ ನಾಗರಿಕರಾಗಬೇಕಾಗಿದೆ. ಮಾನವ ಜೀವನಕ್ಕೆ ಆತ್ಯಾವಶ್ಯಕವಾದ, ಮೂಲಭೂತ ಬೇಡಿಕೆಗಳಾದ ಆಹಾರ, ಆಶಯ, ಆಚ್ಛಾದನಗಳ ಮಹಾಸಮಸ್ಯೆ ಬಗೆಹರಿಯದಿದ್ದರೆ ಎಷ್ಟು ಕಲಿತರೇನು? ಎಂಥ ಪದವಿ

ಪಡೆದರೇನು ? ಯಾವ ಶಿಕ್ಷಣ, ಯಾವ ಪದವಿ ಈ ಮೂರು ಅವಶ್ಯಕತೆಗಳನ್ನು ಒದಗಿಸಬಲ್ಲುದೋ ಅದುವೇ ಆದರ್ಶಶಿಕ್ಷಣ. ಈ ಶಿಕ್ಷಣದ ಮೂಲವೆಲ್ಲಿದೆ ಎಂದು ಯಾರಾದರೂ ಕೇಳಿದರೆ ' ಪ್ರಾಥಮಿಕ ಸಾಲೆ ' ಯತ್ತ ಕೈಮಾಡಿ ತೋರಿಸುವ ಸುವರ್ಣಕಾಲ ಇಂದಿನದಾಗಿದೆ. ಮೂಲ ಶಿಕ್ಷಣ ಯಶಸ್ವಿಯಾಗಬೇಕಾದರೆ, ಮಕ್ಕಳು ಆದರ್ಶ ಜೀವಿಗಳಾಗಬೇಕಾದರೆ ಮೂಲ ಶಿಕ್ಷಣ ಸಾಲೆಗಳಲ್ಲಿ ಸಾಂಘಿಕ ಜೀವನ ಯಶಸ್ವಿಯಾಗಿ ಪ್ರಗತಿಪರವಾಗಿ ಸಾಗಲೇಬೇಕು.

ಹಿಂದಿನಿಂದ ಬಂದ ಶಿಕ್ಷಣ ಪದ್ಧತಿ ಇಂದಿನ ಹೀನ ಸ್ಥಿತಿಗೆ ಕಾರಣವಾಯಿತು. ಈ ಸ್ಥಿತಿ ಮುಂದೆ ಉಳಿಯಬಾರದೆಂದು ಮೂಲ ಶಿಕ್ಷಣ ಮಹಾತ್ಮರ ಹೃದಯದಿಂದ ಹೊರಟಿತು. ಸಹಕಾರ, ವಿಶ್ವಾಸ, ತಾಳ್ಮೆಗಳೇ ಮಹಾತ್ಮರು ಹುಡುಕಿ ತೆಗೆದ ಮೂಲ ಶಿಕ್ಷಣ (ಹೊಸ ಶಿಕ್ಷಣದ) ಮೂಲ ತತ್ವಗಳಾಗಿವೆ. ಕಾರಣ ಮೂಲ ಶಿಕ್ಷಣ ಸಾಲೆಗಳಲ್ಲಿ ಸಾಂಘಿಕ ಜೀವನದ ಮಹತ್ವವೆಷ್ಟಿದೆ ಎಂಬುದನ್ನು ಸ್ವಲ್ಪದರಲ್ಲಿ ನೋಡುವಾ.

ಮೂಲ ಶಿಕ್ಷಣ ಸಾಲೆಗಳೆಂದರೆ ಸಣ್ಣ ಸಮಾಜವಿದ್ದಂತೆ. ಈ ಸಾಲೆಗಳಲ್ಲಿ ಕಲಿಯುವ ಬಾಲಬಾಲಿಕೆಯರಲ್ಲಿಯಾಗಲೀ, ಕಲಿಸುವ ಗುರುಗಳಲ್ಲಿಯಾಗಲೀ, ಆಡಳಿತೆಯ ಸೂತ್ರಧಾರರಾದ ಅಧಿಕಾರಿಗಳಲ್ಲಿಯಾಗಲೀ ಮೇಲು-ಕೀಳು, ಸಣ್ಣ-ದೊಡ್ಡವರು, ಆಧರ್ಮ-ಈಧರ್ಮ, ಉಚ್ಚ-ನೀಚಗಳೆಂಬ ಕೀಳು ಕಲ್ಪನೆಗೆ ಭೇದಭಾವನೆಗೆ ಎಳ್ಳಷ್ಟೂ ಎಡೆ ಇಲ್ಲ. ಈ ಹಿಂದಿನಿಂದ ಬಂದಿದ್ದ ಕೀಳು ಕಲ್ಪನೆಯನ್ನು ಕಿತ್ತೊಗೆಯುವದೇ ಇಂದಿನ ಹೊಸ ಶಿಕ್ಷಣ ಪದ್ಧತಿಯ ಮೂಲ ಉದ್ದೇಶವಾಗಿರುವದನ್ನು ಯಾರೂ ಮರೆಯಕೂಡದು, ಎಲ್ಲಿಯವರೆಗೆ ಯಾರಲ್ಲಿ ಇಂತಹ ಅಲ್ಪತನದ ಕಲ್ಪನೆ ಇರುತ್ತದೆಯೋ ಅಲ್ಲಿಯ ವರೆಗೆ ಅವರು ಮನುಷ್ಯರಾಗಿ, ಮಾನವಂತರಾಗಿ ಬಾಳಲು ಯೋಗ್ಯರಾಗಲಾರರು; ಅವರ ಜೀವನ ಪ್ರಗತಿಪಥದಲ್ಲಿ ಸಾಗಲಾರದು. ' ಲೋಕವೆ ನನ್ನ ಮನೆ, ಮಾನವ ಕುಲವೇ ನನ್ನ ಕುಟುಂಬ ' ವೆಂದು ಇಂದಿನ ಬಾಲಕರು, ಗುರುಗಳು ಕಹಳೆ ಊದುತ್ತಿರುವಾಗ ಯಾವ ಹೀನ ಕಲ್ಪನೆಯೂ ಬದುಕಿ ಬಾಳಲಾರದು. ಇದುವೆ ಅಲ್ಲವೆ ಆದರ್ಶ ಜೀವನದ ಬುನಾದಿ ! ಇದಕೆನ್ನವರು ನವನಾಗರಿಕತೆ ಸೃಷ್ಟಿ ! ಮೂಲ ಶಿಕ್ಷಣದ ಮಾದರಿ !!

ಮೂಲ ಶಿಕ್ಷಣ ಸಾಲೆಗಳಲ್ಲಿಯ ದಿನದ ಪ್ರತಿಯೊಂ ಚಟುವಟಿಕೆ ಸಾಂಘಿಕವಾಗಿ ಸಾಗುವದಲ್ಲದೆ ವೈಯಕ್ತಿ ವಾಗಿಯಲ್ಲ. ಪ್ರತಿಯೊಬ್ಬನಿಗಾಗಿ ಪ್ರತಿಯೊಬ್ಬನು ದು ಯುವದು ಈ ಚಟುವಟಿಕೆಯ ವೈಶಿಷ್ಟ್ಯವೆಂದು ಹೇ ಬಹುದು.

ಬೆಳಗಿನ ಜಾವದಿಂದ ಪ್ರಾರಂಭವಾದ ಪ್ರಾರ್ಥ ಯಿಂದ, ಸಾಮೂಹಿಕ ಸಫಾಯಿ (ವೈಯಕ್ತಿಕ ಸ್ವಚ್ಛ ಸಹಿತವಾಗಿ) ಯಿಂದ ನಿತ್ಯದ ಪ್ರತಿಯೊಂದು ಚಟು ವಟಿಕೆಯಲ್ಲಿ ಸಕಲರೂ ಸರಿಯಾಗಿ ಭಾಗವಹಿಸು ವಿಷಯ ಜ್ಞಾನ ಮಾಡಿಕೊಳ್ಳುವಾಗ ಸಹಕಾರ, ಆತ್ಮೀ ಯತೆಗಳು ಜಿಜ್ಞೆಗೆ ಮೂಡಿ ಬರುತ್ತವೆ;ಎದ್ದು ಕಾ ತ್ತವೆ. ಈ ಸಹಕಾರ, ಆತ್ಮೀಯತೆಯಿಂದ ಮಕ್ಕ ಮಾಡುವ ಮತ್ತು ಕೆಲಸ ಕಲಿಯುವ ವಿಷಯ, ಪ ಯುವ ಜ್ಞಾನ ಭದ್ರವಾಗುತ್ತದೆ; ನಿಚ್ಚಳವಾಗುತ್ತದೆ. ರೀತಿ ಅವರು ಒಂದು ಕುಟುಂಬದವರಂತೆ, ಒಂ ಧ್ಯೇಯವಾದಿಗಳಾಗಿ ಹೊರಟಾಗ ಆತ್ಮೀಯತೆ, ಸ ಕಾರಗಳಿಲ್ಲದಿದ್ದರೆ ಅವರು ಏನನ್ನು ಸಾಧಿಸಲಾರದವ ಗುವರು.

ಪ್ರಾರ್ಥನೆಯಲ್ಲಿ ಒಬ್ಬನು ಪರಮಾತ್ಮನನ್ನು ನೆ ಯುತ್ತ ಮಧುರವಾಗಿ ಹಾಡುತ್ತಾನೆ. ಅವನು ತನ್ಮಂ ಸಾಗುತ್ತಾನೆ. ಅವನೊಂದಿಗೆ ಅವನ ಬಳಗವೂ ಧ್ಯಾನ ಸಕ್ತವಾಗುತ್ತದೆ. ಅವನ ಸರತಿ ಪ್ರತಿಯೊಬ್ಬರಿ ಕಾಯ್ದಿರುತ್ತದೆ. ಹಲವರು ಅಕ್ಕಪಕ್ಕದ, ನಾಡಿ ಪ್ರಪಂಚದ ಸುದ್ದಿ ಸಂಗ್ರಹಿಸಿ ತಂದು ಓದುತ್ತ ಕೌತುಕದ ಸುದ್ದಿ ತನ್ನ ಬಳಗಕ್ಕೆ ಹೇಳಲು ಆ ಬಾಲಕ ನಿಗೆಷ್ಟು ಆತುರ ! ಹಲವರ ಮಧ್ಯದಲ್ಲಿ ನಿಂತು ಸಹ ವಾಗಿ ಭಯವಿಲ್ಲದೆ ಸುದ್ದಿ ಬಿತ್ತರಿಸುವ ಬಾಲಕನಿಗೆ ಸಭೆ ಯೆಂದರೆ ನಡುಕವಿಲ್ಲ; ಸಂಕೋಚವಿಲ್ಲ. ಅದು ಅವನಿ ಗೊಂದು ಅಭ್ಯಾಸವಾಗುತ್ತದೆ, ರೂಢಿಯಾಗುತ್ತದೆ. ಅವ ನನ್ನೇ ಅನುಸರಿಸುತ್ತಾರೆ. ಅವನ್ನೆಲ್ಲ ಗೆಳೆಯರು ನೋಡಿ ಕಲಿಯುತ್ತಾರೆ; ಮಾಡಿ ಕಲಿಯುತ್ತಾರೆ; ಅನುಭವಿಸಿ ತೀರುತ್ತಾರೆ, ಇದೆಂತಹ ಆದರ್ಶ ಶಿಕ್ಷಣ !

ನಂತರ ಒಬ್ಬನು ಮಹಾನುಭಾವರ ಅನುಭವದಾಳ-ವ ಹೊರಬಂದ ಅವ್ಯ ತೋಕ್ತಿಗಳನ್ನು ಅಭ್ಯಶಿಸಿ, ಟ್ಟುಕೊಂಡು ಬಂದು ಹೇಳುತ್ತಾನೆ. ಜಾಣನಾದ ಲಕನು ಜಾಣ್ಣುಡಿ ಹೇಳಿ ವಿವರಿಸುವಾಗ ಅವನ ಯರು ಆತ್ಮೀಯತೆಯಿಂದ ಕೇಳುತ್ತಾರೆ; ಮರ್ಮ ಯುತ್ತಾರೆ. ಅವನ ಸಾಹಸ ನೂರಾರು ಬಾಲಕರ ಗೆ ಕಾರಣವಾಗಲಿಲ್ಲವೇ ? ಅವನ ಓದು ಸಾರ್ಥ ಾಗಲಿಲ್ಲವೇ ? ಅವನ ಜಿಜ್ಞಾಸೆ, ಅವನ ತಿಳುವಳಿಕೆ ವರಿಗೆ ಜ್ಞಾನ ದಾನ ಮಾಡಿದರೆ ಸಾಂಘಿಕ ಜೀವನ ಬಾಳಲು ಅವನು ಯೋಗ್ಯವೆನಿಸುತ್ತಾನೆ. ಅವ ೀ ಅನುಸರಿಸಲು ಇತರ ಬಾಲಕರು ಹಿಂದುಮುಂದು ಡುವದಿಲ್ಲ. ತುಂಬ ಉತ್ಸಾಹದಿಂದ ಅವ್ಯತೋ ಳನ್ನು ಹುಡುಕುತ್ತಾರೆ; ತಾವೇ ಸೃಜಿಸುತ್ತಾರೆ. ಈ ರ್ಶ ಚಟದಿಂದ ಅವರ ಓದು ತಾನಾಗಿಯೇ ಮುಂದೆ ಂದೆ ಸಾಗುತ್ತದೆ; ಹೊಸದನ್ನು ಹುಡುಕಲು ಹವಣಿ ದೆ. ಇದುವೆ ಸಾಂಘಿಕ ಜೀವನದ ಮೂಲಕ ವ ದೊಡ್ಡ ಲಾಭ.

ನ್ನು ಬಾಲಕರು ನೂಲುವದು, ನೇಯುವದು, ೋಟದಲ್ಲಿ ಕಸತೆಗೆಯುವದು, ಬಿತ್ತುವದು, ನೀರು ವದು, ರಟ್ಟಿನ ಸಾಮಾನುಗಳನ್ನು ತಯಾರಿಸು ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗಿದಾಗ ಪರ-ಸಹಕಾರದಿಂದ ಸಾಂಘಿಕವಾಗಿ ಮಾಡುವದು, ಸುತ್ತ ಕಲಿಯುವದು ನಡೆಯುತ್ತದೆ. ಅವರವರಲ್ಲಿ ಂದಿಕೆ ಇಲ್ಲದಿದ್ದರೆ, ಆತ್ಮೀಯತೆ ಇರದಿದ್ದರೆ, ಂದುತನ ' ಕಾಣದಿದ್ದರೆ ಅವರು ಮಾಡುವ ಯಾವ ಯೂ-ಕೆಲಸವೂ ಯಶಸ್ವಿಯಾಗುವದಿಲ್ಲ; ಎಲ್ಲವೂ ಂತ್ರಿಕವಾಗಿ ಸಾಗುತ್ತದೆ. ವಿಷಯ ಜ್ಞಾನವಂತೂ ದೂರ ಉಳಿಯುತ್ತದೆ. ಇಂತಹ ಸಂದರ್ಭ ಸನ್ನಿ-ಗಳು ಮೂಲೋದ್ಯೋಗ ಸಾಲೆಗಳಲ್ಲಿ ಬರ ದು. ಬಂದರೆ ಜಾಗರೂಕತೆ ವಹಿಸುವದು, ಒಂದು-ಕಾಯ್ದುಕೊಳ್ಳುವದು, ಆತ್ಮೀಯತೆಯನ್ನುಂಟು ಟವದು ಗುರುವಿನ ಮುಖ್ಯ ಕೆಲಸವಾಗಿದೆ. ದ ಮಕ್ಕಳೆಲ್ಲ ಪರಸ್ಪರ ಸಹಕಾರ, ಆತ್ಮೀಯತೆ-ದಿದ್ದರೆ ಗುರುವಿನ ಸ್ಥಿತಿ ಶೋಚನೀಯವಾಗುವದ-ರಲ್ಲಿ ಸಂದೇಹವಿಲ್ಲ. ಈ ಮಾತನ್ನು ಪ್ರತಿಯೊಬ್ಬ ಗುರುವು ಅರಿತುಕೊಂಡು ಸಾಂಘಿಕ ಜೀವನದ ಮಹತ್ವ, ಅದರಿಂದಾಗುವ ಲಾಭಗಳನ್ನು ಸುಲಭವಾಗಿ-ಮೃದುವಾಗಿ ಬಾಲಕರ ಮನಸ್ಸಿನಲ್ಲಿ ಮೂಡಿಸಬೇಕು.

ಹಳ್ಳಿಯ ಏಳ್ಗೆಯಾಗುವದು ಕೂಡ ಸಾಂಘಿಕ ಜೀವನದಿಂದಲೇ. ಸಾಲೆಯ ಬಾಲಕರು ಹಳ್ಳಿಯ ಪ್ರಗತಿಯ ಮೂಲಾಧಾರರಾಗಿದ್ದಾರೆ. ಅವರು ಸಾಂಘಿಕವಾಗಿ ಮಾಡುವ ಹಳ್ಳಿಯ ಸ್ವಚ್ಛತೆ, ಆರೋಗ್ಯರಕ್ಷಣೆ, ದೀನದಲಿತರ ಶುಶ್ರೂಷೆ, ಯೋಗ್ಯ ಕೆಲಸಕ್ಕಾಗಿ ಸಲ್ಲಿಸುವ ಶ್ರಮದಾನ ಇವೆಲ್ಲ ಹಳ್ಳಿಯ ಉದ್ಧಾರವಲ್ಲದೆ ಮತ್ತೇನು ? ಈ ಎಲ್ಲ ಕಾರ್ಯಗಳು ನಡೆಯಬೇಕಾದರೆ ಬಾಲಕನು ತಾನು ಸಮಾಜದ ಒಂದು ಶಕ್ತಿ, ಮೈಗಳ್ಳನಾಗಬಾರದು, ಇತರರಿಗಾಗಿ ತಾನೂ ದುಡಿಯಬೇಕು, ಹಳ್ಳಿ ತನ್ನದು, ಸಮಾಜ ತನ್ನದು, ತನ್ನವರಿಗಾಗಿ ತಾನು ಶ್ರಮವಹಿಸಬೇಕು ಎಂಬ ಉದಾತ್ತ ವಿಚಾರ ಅರಿತವನಾಗಬೇಕು. ಈ ಉದಾತ್ತ ತತ್ವವನ್ನು ವೈಯಕ್ತಿಕವಾಗಿ ಬಾಲಕನು ಅರಿಯದೆ ಗುರುಮುಖದಿಂದ ಸಾಮೂಹಿಕವಾಗಿ ಅರಿತು — ಅನುಭವಿಸಿ ಕಂಡುಕೊಳ್ಳಬೇಕು. ಇದಕ್ಕೆಲ್ಲ ಸಾಂಘಿಕತ್ವ ಅವಶ್ಯವಾಗಿದೆ.

ಮೂಲ ಶಿಕ್ಷಣ ಸಾಲೆ ಸಾಂಘಿಕ ಜೀವನದ ತವರುಮನೆಯಾಗಿದೆ. ಒಬ್ಬ ಬಾಲಕನು ಅನಾರೋಗ್ಯದಿಂದ ಬಳಲಿದರೆ ಅವನ ಪಾಡಿಗೆ ಅವನುಳಿಯಲೆಂದು ಇನ್ನುಳಿದ ಬಾಲಕರು ತಿಳಿಯಕೂಡದು. ಅವನಿಗೆ ಇರುವ ಕಾಹಿಲೆಯ ಪರಿಹಾರಕ್ಕಾಗಿ ಯೋಗ್ಯ ಉಪಚಾರ ಅವನ ಸ್ನೇಹಿತರಿಂದ ನಡೆದರೇನೇ ಎಲ್ಲರಿಗಾಗಿ ಸೇವೆಗೆ ಸಿದ್ಧರಾಗುವರು.

ಸಾಲೆಯು ಅಚ್ಚುಕಟ್ಟಾಗಿರುವಾಗ, ಸ್ವಚ್ಛವಾಗಿರುವಾಗ ಒಂದು ಮೂಲೆಯಲ್ಲಿ ಕಸಕಡ್ಡಿ ಇದ್ದರೆ ಬೇಗನೆ ಎದ್ದು ಕಾಣುವದು. ಆ ಕೊಳೆ ಸಾಲೆಯ ಸುಸ್ಥಿತಿಗೆ ಭಂಗ ತರುವದು. ಅದರಂತೆಯೆ ಅನಾರೋಗ್ಯದಿಂದ ಬಳಲುವ ಬಾಲಕನನ್ನು ಕಡೆಗಣಿಸಿದರೆ ಅವನ ಅನಾರೋಗ್ಯ ಎದ್ದು ಕಾಣುವದಲ್ಲದೆ ಕ್ರಮೇಣ ಹಬ್ಬುವದು. ಅವನಿಗೆ ಎಲ್ಲರ ಮಮತೆ, ಸಹಕಾರ, ಆತ್ಮೀಯತೆ ಬೇಕು. ಈ ಬಗೆಯ ಬೆಂಬಲದಿಂದ ರೋಗಿ ನಿರೋಗಿಯಾಗಬಲ್ಲ;

ಹೇಡಿ ಸಬಲನಾಗಬಲ್ಲ; ವೈರಿಗಳೆಲ್ಲ ಕರ್ಮಯೋಗಿಯಾಗಬಲ್ಲ. ಆದ್ದರಿಂದ ಸಾಂಘಿಕ ಜೀವನದಲ್ಲಿ ಮುಖ್ಯವಾಗಿ ಪ್ರೋತ್ಸಾಹ, ಸಹಕಾರ, ತಾಳ್ಮೆ, ವಿಶ್ವಾಸ ಮೊದಲಾದ ಆದರ್ಶ ಗುಣಗಳಿಗೆ ಬಹಳ ಮಹತ್ವವಿದೆ.

ಸಾಂಘಿಕ ಜೀವನದ ಚಟುವಟಿಕೆಗಳಲ್ಲಿ ತೊಡಗಿರುವ ಬಾಲಕರು ಸಮಾಜವನ್ನು ಬೇಗ ಅರಿತುಕೊಳ್ಳಬಲ್ಲರು; ಸಮಾಜದೊಂದಿಗೆ ಹೊಂದಿಕೊಂಡು ನಡೆಯಬಲ್ಲರು. ಸಾದಾ ಜೀವನ, ಉಚ್ಚ ವಿಚಾರ, ಆದರ್ಶ ನಡವಳಿಕೆಯ ದ್ಯೋತಕವಾಗಿ ಬಾಲಕರು ಬೆಳೆಯುವರು. ಇದರಿಂದ ಅವರ ವೈಯಕ್ತಿಕ, ನೈತಿಕ, ಸಾಮಾಜಿಕ, ಸುತ್ತು ಮುತ್ತಲಿನ ಪರಿಸ್ಥಿತಿಯ ಬೆಳವಣಿಗೆಯಾಗುವದಲ್ಲದೆ ತಮ್ಮ ಹೊಣೆಯನ್ನು ತಾವು ಅರಿತುಕೊಳ್ಳಲು ಅವರು ಸಮರ್ಥರಾಗುವರು.

ಇನ್ನು ಸಾಲೆಯಲ್ಲಿಯ ಗುರುಗಳು ತಮ್ಮ ತಮ್ಮಲ್ಲಿ ಅಂದರೆ ಪರಸ್ಪರರಲ್ಲಿ ದ್ವೇಷಾಸೂಯೆಗೆ ಎಡೆಕೊಟ್ಟರೆ ಸ್ಪರ್ಧೆ ನಡೆಸಿದರೆ, ವೈರಿಗಳತನ ಮಾಡಿದರೆ ಬಾಲಕರ ಸಾಂಘಿಕ ಜೀವನದ ಮೇಲೆ ಸಾಭಾವಿಕವಾಗಿ ಬಲವಾದ ಮಾಯಲಾರದ ಪೆಟ್ಟು ಬಿದ್ದಂತಾಗುವದು. ಈ ಮಾತನ್ನು ಬಹು ಜನರು ಅರಿತುಕೊಳ್ಳಬೇಕಾಗಿದೆ.

ನೋಡಿ ಕಲಿಯುವ ಬಾಲಕರು ಗುರುಗಳ
ಕತೆ, ಆಚಾರ ವಿಚಾರ, ನಡತೆ ನಡಾವಳಿಗಳನ
ಬೇಗ ಅನುಸರಿಸುತ್ತಾರೆ. ಸಾಲೆಯಲ್ಲಿಯ ಗು
'ಒಂದುತನ' ಇರದಿದ್ದರೆ ವರ್ಗವರ್ಗಗಳ ಬ
ದ್ವೇಷಾಸೂಯೆಗಳು ಉಂಟಾಗುವದನ್ನು ಕಾಣ
ಕೂಡಲೆ ತಿರಸ್ಕಾರ, ಅಸೂಯೆ, ಚಾಡಿ ಹೇ
ಹೀನ ವಿಚಾರಗಳಲ್ಲೇ ಕಾಲಕಳೆಯುವದು,
ತಪ್ಪಿಸುವದು, ಮನಬಂದಂತೆ ಮಾಡುವದು
ಹೀನಗುಣಗಳು ಪ್ರಬಲವಾಗಿ ಬೆಳೆಯತೊಡ
ಇಂತಹ ವಾತಾವರಣದ ಹೊಡೆತಕ್ಕೆ ಸಿಕ್ಕ
ಬಾಲಕರು, ಗುರುಗಳು ಏನು ತಾನೇ ಸಾಧಿಸ
ಹಳ್ಳಿಗೆ ಬೇಸರವಾಗುತ್ತಾರೆ. ಸಾಲೆ ಹದಗೆ
ಧ್ಯೇಯ ಮಣ್ಣು ಪಾಲಾಗುತ್ತದೆ. ಇದಕ್ಕೆಲ್ಲ ಗ
ಆಚರಣೆಯೇ ಕಾರಣವಾಗುತ್ತದೆ. ಕಾರಣ ಗು
ಪ್ರಥಮವಾಗಿ ಐಕ್ಯಮತ್ಯ, ಸಹಕಾರ, ಪರಸ್ಪರ
ದಯಾಗುಣ, ಹೊಂದಿಕೊಂಡು ಹೋಗುವ
ಮನೋಭಾವನೆ ಅವಶ್ಯಬೇಕು. ಸಾಂಘಿಕ ಜ
ಮಹತ್ವ ಆದರ್ಶ ಗುಣಗಳಿಂದಲೆ ಗೊತ್ತಾಗ
ಆದ್ದರಿಂದ ಮೂಲೋದ್ಯೋಗ ಸಾಲೆಯು
ಸಾಂಘಿಕ ಜೀವನದ ಮೇಲೆ ಅವಲಂಬಿಸಿದೆ
ಧಾರಾಳವಾಗಿ ಹೇಳಬಹುದು.

ತ್ವರೆ ಮಾಡಿರಿ! ಹೊಸ ಪುಸ್ತಕ. ತ್ವರೆ ಮಾಡಿರಿ!!

ಹೊಸ ಶಿಕ್ಷಣ

ಮೂಲ ಲೇಖಕರು :
ಆಚಾರ್ಯ ವಿನೋಬಾಜಿಯವರು
ಅನುವಾದಕರು :
ಶ್ರೀ. ಕಲಹಾಳ ಮಡಿವಾಳಪ್ಪ

ಈ ಪುಸ್ತಕದಲ್ಲಿ ಹೊಸ ಶಿಕ್ಷಣದ ಬಗೆಗೆ ವಿನೋಬಾಜಿಯವರ ಅಮೌಲ್ಯ ವಿಚಾರ ತರಂಗಗಳನ್ನು ಅನುವಾದಿಸಿ ಕೊಡಲಾಗಿದೆ. ಅನುಭವದ ಆಳದಿಂದ ಹೊರಬಿದ್ದ ಪೂಜ್ಯ ವಿನೋಬಾರ ಹೊಸ ಶಿಕ್ಷಣ ವಿಚಾರಗಳು ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರೆಲ್ಲರಿಗೆ ಉಪಯುಕ್ತವಾಗುವದರಲ್ಲಿ ಸಂದೇಹವಿಲ್ಲ. ಇಂದೇ ಕೆಳಗಿನವರಿಗೆ ಬರೆದು ತರಿಸಿ ವಿಚಾರದ ಮಾಧುರ್ಯವನ್ನು ಸವಿಯಿರಿ.

ರಾಮಾಶ್ರಯ ಬುಕ್ ಡಿಪೋ, ಧಾರವಾಡ

ತ್ವರೆ ಮಾಡಿರಿ ! ತ್ವರೆ ಮಾಡಿರ

ವಯಸ್ಕರ ಸುರಸ ಕತೆಗಳು.

ಬರೆದವರು :
ಶ್ರೀ. ಪಾವಟೆ ಚೆನ್ನಪ್ಪನವರು
ಅ. ಡೆ. ಎ. ಇ., ವಿಜಾಪ

ಲೇಖಕರು ತಮ್ಮ ಅನುಭವದಿಂದ ವಯಸ್ಕ
ತಿಳಿಯುವ ರೀತಿಯಲ್ಲಿ ಅವರಿಗೆ ಉಪಯ
ವಿರುವ ಕತೆಗಳನ್ನು ಬರೆದಿದ್ದಾರೆ. ಸಮ
ಶಿಕ್ಷಣ ಕಾರ್ಯಕರ್ತರಿಗೆ ಬಹಳ ಉಪಯ
ವಿದೆ. ಪ್ರಕಾಶಕರಿಗೆ ಬರೆದು ಇಂದೇ ತ
ಕೊಳ್ಳಿರಿ.

ಪುಸ್ತಕದ ಬೆಲೆ: ಕೇವಲ ಹತ್ತು ಆಣೆಗ

ಪ್ರಕಾಶಕರು :
ಶ್ರೀ. ಮ. ವಿ. ಐಹೊಳ್ಳಿ,
ಕನ್ನಡ ಶಾಲಾ ಮಾಸ್ತರರು, ವಿಜಾಪುರ

ರಶಿಯದ ಓಲ್ಗಾ-ಡಾನ್ ಕಾಲುವೆ
(ಮಾನವನ ಅಪೂರ್ವ ಸಾಹಸ)

ಲೇ : ಶ್ರೀ. ಶಿಂತ್ರಿ ಬಸಪ್ಪನವರು, ಬಿ. ಎ. ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ದಕ್ಷಿಣ ಭಾಗ, ಧಾರವಾಡ

ಸುಮಾರು ೧೯೪೬ರಲ್ಲಿ ರಶಿಯವು ಪಂಚವಾರ್ಷಿಕ ೋಜನೆಯೊಂದನ್ನು ಹೂಡಿತಷ್ಟೆ. ಆದರ ಫಲವಾಗಿ ಮಹಾಯೋಜನೆಯು ಗೊತ್ತುಪಡಿಸಿದ ಅವಧಿಯೊ- ಾಗಿ ಅಂದರೆ ೩೦-೫-೧೯೫೨ರಂದು ಪೂರ್ತಿಗೊಂಡಿದೆ. ುರೋಪದಲ್ಲಿಯ ರಶಿಯದ ದೊಡ್ಡ ನದಿಗಳಾದ ಲ್ಗಾ ಹಾಗೂ ಡಾನ್‌ಗಳನ್ನು ೧೦೧ ಕಿಲೋಮಿಟರ ುಮಾರು ೬೩ ಮೈಲು) ಉದ್ದಳತೆಯ ಕಾಲುವೆಯಿಂದ ೋಡಿಸಿದ್ದಾರೆ. ಒಂದು ಮಿಟರ ಅಂದರೆ ೩೯.೩೭ ಂಚುಗಳು ಒಂದು ಕಿಲೋಮಿಟರ ಅಂದರೆ ೩೨೮೧ ಟುಗಳು ಇಲ್ಲವೆ ೫ ಫರ್ಲಾಂಗುಗಳು. ಈ ಪಂಚ ರ್ಷಿಕ ಯೋಜನೆಯಿಂದ ತನ್ನ ಆರ್ಥಿಕ ಸಂಪತ್ತನ್ನು ಚ್ಚಿಸಿಕೊಳ್ಳಬೇಕೆಂಬ ರಶಿಯದ ಕನಸು ಈಗ ನನ- ಾಗಿದೆ. ಮರುಭೂಮಿಯನ್ನು ನೀರಾವರಿಯಿಂದ ಫಲ ತ್ತಾದ ಭೂಮಿಯನ್ನಾಗಿ ಮಾಡಿದೆ; ವಿದ್ಯುತ್ತನ್ನು ಸಾಯಕ್ಕೂ ಬೇರೆ ಉದ್ಯಮಗಳಿಗೂ ಬಳಸಿಕೊಳ್ಳ ್ತಿದೆ; ಸಮುದ್ರದಿಂದ ದೂರವಿದ್ದ ಒಳನಾಡಿನಲ್ಲಿ ಜಲ ರಿಗೆಯು ಒಳ್ಳೇ ಜೋರಿನಿಂದ ನಡೆದಿಡೆ; ಯುರೋಪ ್ಲಿಯ ರಶಿಯದ ಉತ್ತರ ಪಶ್ಚಿಮ-ದಕ್ಷಿಣಗಳಲ್ಲಿ ಹಬ್ಬಿ ಂಡಿರುವ ಪಂಚ ಸಮುದ್ರಗಳಲ್ಲಿ ಜಲಸಾರಿಗೆಯ ಪರ್ಕವನ್ನುಂಟು ಮಾಡಿದೆ. ಬಾಲ್ಟಿಕ್ ಸಮುದ್ರ- ವ ಹೊರಟಂತಹದೊಂದು ಹಡಗವು ನೇವ್ಹಾ, ಓಲ್ಗಾ ಗೂ ಡಾನ್ ನದಿಗಳ ಮುಖಾಂತರವೂ ಈ ಹೊಸ ಲುವೆಯ ಮುಖಾಂತರವೂ ಹಾಗೂ ಮೊದಲೇ ಯಾರಾದ ಬೇರೆ ಹಲವು ಕಾಲುವೆಗಳ ಮುಖಾಂತ- ೂ ಶ್ವೇತ ಸಮುದ್ರಕ್ಕೆ ಸಾಗಿ ಅಲ್ಲಿಂದ ಕಾಸ್ಪಿಯನ್ ುದ್ರಕ್ಕೆ ಹೋಗಿ ಅಲ್ಲಿಂದ ಹೊರಟು ಕಪ್ಪು ಸಮು- ದ್ರಕ್ಕೂ ಅಝೋವ್ಹ ಸಮುದ್ರಕ್ಕೂ ತಲುಪುತ್ತಿದೆ. ಇಲ್ಲಿಯ ವರೆಗೆ ಅಶಕ್ಯವೆಂದು ಕಂಡ ಸಂಗತಿಯು ಈಗ ಶಕ್ಯವಾಗಿದೆ. ಮಾನವನ ಸಾಹಸಕ್ಕೆ ಎಲ್ಲೆಯೆಂದಾದರೂ ಇಧೆಯೇ ?

ರಚನೆ

ಈ ಕಾಲುವೆಯ ರಚನೆಯು ಸರಳವಾದುದಲ್ಲ. ಕೆಳಗಿನ ಪಾತಳಿಯಿಂದ ಮೇಲಿನ ಪಾತಳಿಗೆ ಹಡಗವನ್ನು ಒಯ್ಯಲಿಕ್ಕೂ ಮೇಲಿನ ಪಾತಳಿಯಿಂದ ಕೆಳಗಿನ ಪಾತ- ಳಿಗೆ ಇಳಿಸಲಿಕ್ಕೂ ಪನಾಮಾ ಕಾಲುವೆಯಲ್ಲಿದ್ದಂತಹ ನೀರನ್ನು ನಿಯಂತ್ರಿಸುವ ಬೀಗಗಳ ವ್ಯವಸ್ಥೆ(System of Locks) ಯಿದೆ. ಇಂತಹ ಬೀಗಗಳು ಒಟ್ಟು ಹದಿಮೂರು ಇವೆ. ಮೂರು ದೊಡ್ಡ ಜಲಾಶಯಗಳಿವೆ. ನೀರನ್ನೆತ್ತುವ ಮೂರು ದೊಡ್ಡ ಕೇಂದ್ರಗಳಿವೆ. ಈ ಕಾಲುವೆಯ ವ್ಯವಸ್ಥೆಗಾಗಿ ಸಾಕಷ್ಟು ಸಿಬ್ಬಂದಿಯನ್ನು ಕಾಲುವೆಯಗುಂಟ ಎಲ್ಲ ಕೇಂದ್ರಗಳಲ್ಲಿಡಲಾಗಿದೆ. ಇಂತಹ ಸಿಬ್ಬಂದಿಗಳ ವಸಾಹತುಗಳು ಒಟ್ಟು ಹದಿ- ನಾಲ್ಕು ಇವೆ. ಪ್ರತಿಯೊಂದು ವಸಾಹತಿನಲ್ಲಿ ಸುಂದರ- ವಾದ ಮನೆಗಳು, ನೀರು, ವಿದ್ಯುತ್ತು, ಬಾನುಲಿ, ಶಾಲೆ, ವಿಶ್ರಾಂತಿಗೃಹ, ಆಸ್ಪತ್ರೆ, ವಾಚನಾಲಯ, ಅಂಚೇಕಟ್ಟೆ, ತಾರಾಯಂತ್ರ, ಟೆಲಿಫೋನ, ಸಿನೇಮಾ, ಅಂಗಡಿ, ಕ್ಲಬ್ಬು, ಮುಂತಾದ ಎಲ್ಲ ಆಧುನಿಕ ಸೌಕರ್ಯಗಳ ವ್ಯವ- ಸ್ಥೆಯಿದೆ. ತ್ಸಿಮ್‌ಲಿಮ್‌ಸ್ಕೊಯೆ ಎಂಬ ಜಲಾಶಯ ಹಾಗೂ ೧೬೦೦೦೦ ಕಿಲೋವ್ಯಾಟ್ (ವ್ಯಾಟ್ ಅಂದರೆ ವಿದ್ಯುತ್ತನ್ನು ಅಳೆಯುವದೊಂದು ಅಳತೆ) ವಿದ್ಯುತ್ತನ್ನು ಹುಟ್ಟಿಸುವ ತ್ಸಿಮ್‌ಲ್ಯಾಮ್‌ಸ್ಕಾಯಾ ಎಂಬ ಜಲ

ವಿದ್ಯುತ್ ಕೇಂದ್ರವೂ ಈ ಕಾಲುವೆಯಲ್ಲಿ ಅತಿ ಮಹತ್ವಪೂರ್ಣಗಳಾಗಿವೆ. ಇವುಗಳಲ್ಲಿ ಡಾನ್ ನದಿಯ ನೀರನ್ನು ಸಂಗ್ರಹಿಸಲಾಗಿದೆ. ಯುರೋಪದೊಳಗಿನ ರಶಿಯದ ಆಗ್ನೇಯದಲ್ಲಿರುವ ಮರುಭೂಮಿಯಲ್ಲಿ ಈ ಕಾಲುವೆಯು ಹರಿದಿದೆ. ಈ ಕಾಲುವೆಯನ್ನು ಅಗೆಯುವ ಮೊದಲು ೧೫೦೦ ಕಿಲೋಮಿಟರ (ಸುಮಾರು ೯೩೮ ಮೈಲು) ಉದ್ದವಾದ ರೇಲು ಮಾರ್ಗವನ್ನೂ ಹಾಗೂ ರಹದಾರಿಯನ್ನೂ ಮಾಡಲಾಯಿತು. ಇವಲ್ಲದೆ, ಎರಡೂ ಮಗ್ಗಲಿಗೆ ನೂರಾರು ಕಿಲೋಮಿಟರ ಉದ್ದವಾದ ಸಂಪರ್ಕ ರಸ್ತೆಗಳನ್ನು ರಚಿಸಲಾಯಿತು. ಸುಯೇಜ ಕಾಲುವೆಯ ಇಮ್ಮಡಿಯಷ್ಟು ಅಂದರೆ ೨೦ ದಶಲಕ್ಷ ಘನಮಿಟರ ಮಣ್ಣನ್ನು ಅಗೆದು ತೆಗೆಯಲಾಯಿತು. ೩೦ ಲಕ್ಷ ಘನ ಮಿಟರ ಗಚ್ಚು-ಸಿಮೆಂಟನ್ನೂ ೪೦೦೦೦ ಟನ್ ಉಕ್ಕನ್ನೂ ಈ ಕಾಲುವೆಯ ರಚನೆಗಾಗಿ ಉಪಯೋಗಿಸಲಾಯಿತು. ಭೂಮಿಯನ್ನು ಅಗೆಯುವ ಹಾಗೂ ಗಚ್ಚು-ಸಿಮೆಂಟನ್ನು ಹಾಕುವ ಬಹುತರ ಎಲ್ಲ ಕೆಲಸವು ಯಂತ್ರಗಳಿಂದಲೇ ಸಾಗಿತು. ಈ ಯೋಜನೆಯ ನೂರಕ್ಕೆ ೯೦ರಷ್ಟು ಕೆಲಸವು ಯಂತ್ರಗಳಿಂದಲೇ ಸಾಗಿತು. ~~ಈ ಯೋಜನೆಯ ನೂರಕ್ಕೆ ೯೦ರಷ್ಟು ಕೆಲಸವು ಯಂತ್ರಗಳಿಂದಲೇ ನಡೆಯಿತು.~~ ರಶಿಯದಲ್ಲಿ ತಯಾರಾದ ದೊಡ್ಡ ದೊಡ್ಡ ಯಂತ್ರಗಳನ್ನು ಈ ಕಾಲುವೆಯ ರಚನೆಯಲ್ಲಿ ಮೊದಲನೆಯ ಸಲ ಉಪಯೋಗಿಸಲಾಯಿತು. ಈ ಯಂತ್ರಗಳ ಸಹಾಯದಿಂದ ೧೩ ಕಿಲೋಮಿಟರ (ಸುಮಾರು ೮ ಮೈಲು) ಉದ್ದಳತೆಯ, ೩೦೦ ಮಿಟರ (ಸುಮಾರು ೯೮೫ ಫೂಟು) ಅಗಲವುಳ್ಳ ಹಾಗೂ ೩೫ ಮಿಟರ (ಸುಮಾರು ೧೧೫ ಫೂಟು) ಆಳವುಳ್ಳ ತ್ಸಿಮ್‌ಲಿಮ್ಸ್ಕೊಯೆ ಜಲಾಶಯವನ್ನು ಅತ್ಯಲ್ಪ ಅವಧಿಯಲ್ಲಿ ಕಟ್ಟಲಾಯಿತು. ೨೮ ದಶಲಕ್ಷ ಘನ ಮಿಟರ ಮಣ್ಣನ್ನು ಹೊರದೆಗೆದು ಈ ಜಲಾಶಯವನ್ನು ರಚಿಸಲಾಗಿದೆ. ಯಂತ್ರಗಳ ಸಹಾಯವಿಲ್ಲದಿದ್ದರೆ ಈ ಜಲಾಶಯವನ್ನು ಕಟ್ಟಲು ಸುಮಾರು ಹತ್ತು ವರ್ಷಗಳು ಹಿಡಿಯುತ್ತಿದ್ದವು.

ಒಳನಾಡಿನಲ್ಲಿ ಜಲಮಾರ್ಗ

ಇದು ವಿವಿಧೋದ್ದೇಶದ ಕಾಲುವೆಯು. ಇದರಿಂದ ಯುರೋಪಲ್ಲಿಯ ರಶಿಯದ ಒಳನಾಡಿನ ಭೂಭಾಗದಲ್ಲಿ
೩೦ ಸಾವಿರ ಕಿಲೋಮಿಟರ (ಸುಮಾರು
ಮೈಲು) ಜಲಸಾರಿಗೆಯು ಸಾಧ್ಯವಾಯಿತು. ೭
ಸಮುದ್ರ, ಶ್ವೇತ ಸಮುದ್ರ, ಕಪ್ಪು ಸಮುದ್ರ
ವ್ಹ ಸಮುದ್ರ ಮತ್ತು ಕಾಸ್ಪಿಯನ್
ಇವುಗಳ ಜೋಡಣೆಯಾಯಿತು. ನೆಲಸಾ
ಜಲಸಾರಿಗೆಗೆ ವೆಚ್ಚವು ಬಹಳಷ್ಟು ಕಡಿಮೆ
ದೆಂಬುದು ಎಲ್ಲರಿಗೆ ಗೊತ್ತಿದ್ದ ಮಾತು. ಇದ
ರಾಷ್ಟ್ರದ ನಾನಾ ತರಹದ ಉದ್ದಿಮೆಗಳಿಗೂ
ರಕ್ಕೂ ಎಂತಹ ಆರ್ಥಿಕ ಬೆಂಬಲವು ಸಿಕ್ಕಿದೆ
ದನ್ನು ಹೇಳುವದಕ್ಕಿಂತ ಓದುಗರೇ ಊಹಿಸುವದೆ
ಈ ಜಲಮಾರ್ಗದ ಪರಿಣಾಮದಿಂದ ಪ್ರತಿವರ್ಷ
ಗಟ್ಟಲೆ ಟನ್ ಸರಕುಗಳ ಸಾಗಾಟವು ನಡೆದಿದೆ.

ಮರುಭೂಮಿಯ ರೂಪಾಂತರ

ಇದುವರೆಗೆ ಅನಾವೃಷ್ಟಿಗೀಡಾಗಿದ್ದ ಯು
ದಲ್ಲಿಯ ರಶಿಯದ ಆಗ್ನೆಯ ಪ್ರದೇಶಕ್ಕೆ
ಸ್ಟಾಲಿನ್‌ಗ್ರಾಡ ಪ್ರದೇಶಕ್ಕೆ ಈ ಕಾಲುವೆಯಿಂದ
ಪೂರೈಕೆಯಾಗಿದೆ. ಇದುವರೆಗೆ ಮಧ್ಯ ಏಶಿ
ಬೀಸುತ್ತಿದ್ದ ಒಣ ಗಾಳಿಗಳು ಸ್ಟಾಲಿನ್‌ಗ್ರಾಡ
ದಲ್ಲಿಯ ಭೂಮಿಯ ಹಸಿಯನ್ನು ಹೀರಿಕೊಂಡ
ಗಳನ್ನು ಒಣಗಿಸುತ್ತಿದ್ದವು. ತ್ಸಿಮ್‌ಲಿಮ್‌ಸ್ಕೊಯೆ
ಶಯದ ಹಾಗೂ ಈ ಕಾಲುವೆಯ ನೀರು ಆ ಗಾ
ವನ್ನು ಈಗ ಎಳ್ಳಷ್ಟು ಇಲ್ಲದಂತೆ ಮಾಡಿದೆ. ಈ
ಯಿಂದ ಈ ೨೦ ಲಕ್ಷ ಹೆಕ್ಟೇರ ಜಮೀನು ನೀ
ವದು. ಒಂದು ಹೆಕ್ಟೇರ ಅಂದರೆ ೨.೫ ಎಕರೆಗ
ನೀರಾವರಿಯಿಂದ ಹತ್ತಿ, ಬತ್ತ, ಹಂಣುಹಂಪ
ಪಲ್ಲೆ, ಮೊದಲಾದ ಬೆಳೆಗಳು ಹೇರಳವಾಗಿ ಬೆಳೆಯ
೧೯೫೦ರಲ್ಲಿ ಬಂದ ಬೆಳೆಯ ಪ್ರಮಾಣಕ್ಕಿಂ
ನೀರಾವರಿಯಿಂದ ಸುಮಾರು ನಾಲ್ಕು ಪಟ್ಟು
ಹುಟ್ಟುವಳಿಯಾಗಿದೆ. ಇನ್ನು ಮುಂದೆ ಇದಕ್ಕಿ
ಹೆಚ್ಚು ಹುಟ್ಟುವಳಿಯಾಗುವದೆಂದು ತಜ್ಞರ ಮ
ನೀರಾವರಿಯಿಂದ ಹುಲ್ಲುಗಾವಲು ಬೆಳೆದು ದನ
ಸಂಪತ್ತು ಹೆಚ್ಚಾಗತೊಡಗಿದೆ. ಹೊಲಗಳಿಗೆ
ಪೂರಯಿಸುವದಕ್ಕಾಗಿ ನೂರಾರು ಉಪಕಾಲುವೆ
ಕಟ್ಟಲಾಗಿದೆ. ೭೫೩ ಕಿಲೋಮಿಟರ (ಸುಮಾರ

) ಉದ್ದಳತೆಯ ೩೩ ಉಪಕಾಲುವೆಗಳನ್ನು ಗ್ರಾಡ ಪ್ರದೇಶವೊಂದರಲ್ಲಿಯೇ ತೋಡಬೇ- ಯೋಜನೆಯನ್ನಿಟ್ಟುಕೊಂಡಿರುವರು. ಅದು ತೀವ್ರ ಕೈಗೂಡುವದರಲ್ಲಿದೆ. ದಿನಾಂಕ ೬-೬-೧೯೫೩ ಪ್ರಾರಂಭವಾದ ತ್ಸಿಮ್‌ಲ್ಯಾಮ್‌ಸ್ಕಾಯಾ ಜಲವಿದ್ಯುತ್ ಕೇಂದ್ರವು ಕಾಲುವೆಯ ಬೀಗ) ಗಳ ನಿಯಂತ್ರಣಕ್ಕೂ ಹಾಗೂ ಒಕ್ಕಲತನ- ಗಳಿಗೂ ವಿದ್ಯುತ್ತನ್ನು ಪೂರೈಸುತ್ತಿದೆ. ಇದರ ನುದಿಂದ ಅನೇಕ ವಿದ್ಯುನ್ನಿಯಂತ್ರಿತ ಟ್ರ್ಯಾಕ್ಟರು ಡೆಯುವಂತಾಗಿದೆ.

ಂಹಾರ

ನಲ್ಲಿ, ಆ [illegible]ಗದ [illegible]ಗೋಲಿಕ ಪರಿಸ್ಥಿತಿಯನ್ನೇ ಲುವೆಯು ಬದಲಾಯಿಸಿದೆ. ಬೀಳು ಬಿದ್ದ ಾದ ಪ್ರದೇಶವು ಫಲವತ್ತಾಗಿದೆ. ರಶಿಯದವರ ಹಸವು ನಿಜಕ್ಕೂ ಹೊಗಳತಕ್ಕಂತಹದಿದೆ. ಮನ ಮಾರ್ಗವುಂಟು. ಭಾರತೀಯರಲ್ಲಿಯೂ ಇಂತಹ ಸಾಹಸಪ್ರವೃತ್ತಿಯು ಬೇಗನೆ ತಲೆದೋರಿ ರಶಿಯವನ್ನು ಭಾರತವು ಮಿಕ್ಕಲಿ ಎಂದು ಹಾರೈಸುತ್ತೇವೆ. ನಮ್ಮಲ್ಲಿಯೂ ಅನಾವೃಷ್ಟಿಗೀಡಾದ ಪ್ರದೇಶಗಳು ಬಹಳಷ್ಟಿವೆ. ಅವುಗಳಿಗೆಲ್ಲ ನೀರನ್ನು ಪೂರೈಸುವ ಶಾಶ್ವತವಾದ ವ್ಯವಸ್ಥೆಯಾಗುವದು ಅತ್ಯಗತ್ಯವಿದೆ. ನಮ್ಮ ರಾಷ್ಟ್ರದ ಪಂಚವಾರ್ಷಿಕ ಯೋಜನೆಯ ಮೂಲೋದ್ದೇಶವು ಇದುವೇ ಆಗಿದೆ. ಅಲ್ಲಲ್ಲಿ ನಮಗೆ ದೊರೆತ ವಿವರಗಳನ್ನು ~~[illegible]~~ ಕಲೆ ಹಾಕಿ, ಸುಸಂಬದ್ಧವಾಗಿ ಹೊಂದಿಸಿ, ಅವಶ್ಯ ಕಂಡಲ್ಲಿ ತಿದ್ದುಪಡೆ ಮಾಡಿ, ನಮ್ಮ ಓದುಗರ ಅವಗಾಹನೆಗಾಗಿ ಈ ಪುಟ್ಟಲೇಖವೊಂದನ್ನು ಬರೆಯಲಾಗಿದೆ. ಭೂಗೋಲದಲ್ಲಾದ ಹೆಚ್ಚುಕಡಿಮೆಗಳು ಶಿಕ್ಷಕ-ಶಿಕ್ಷಕಿಯರಿಗೆ ಗೊತ್ತಿರಬೇಕಲ್ಲವೇ? ಈ ಲೇಖನವನ್ನೋದಿಕೊಂಡು ತಮ್ಮ ತಮ್ಮ ಕೈಯಲ್ಲಿ ಕಲಿಯುವ ಮಕ್ಕಳಿಗೆಲ್ಲ ಇದರ ಪೂರ್ಣ ಲಾಭವನ್ನು ಮಾಡಿಕೊಡುವರೆಂದು ನಂಬಲಾಗಿದೆ.

—: ಸಿರಿಗನ್ನಡಂ ಗೆಲ್ಗೆ :—

ಹೊರಬಿದ್ದಿದೆ ! **ಬೆಳಕು ಕಂಡಿದೆ !!**

ನೆಯ ವೃತ್ತಿ | **ಶೈಕ್ಷಣಿಕ ಮನೋವಿಜ್ಞಾನ** | ಪುಟ ೩೦೦

ಬರೆದವರು : **ಡಾ। ವಿ. ಕೊ. ಜವಳಿ,** M. Ed. Ph. D. M. A. (ಕೋಲಂಬಿಯಾ)

ಬೆಲೆ **ಎರಡು ರೂಪಾಯಿ ಮಾತ್ರ**

ಶಿಕ್ಷಣದಲ್ಲಿ ಮತ್ತು ಮನೋವಿಜ್ಞಾನದಲ್ಲಿ ಹೊಸ ಹೊಸ ಸಂಶೋಧನೆಗಳಿಂದ ಕೂಡಿದೆ. ನ್ನಡಿಗರಿಗೆ ಮತ್ತು ವಿಶೇಷವಾಗಿ ಕನ್ನಡ ಪ್ರಾಥಮಿಕ ಶಿಕ್ಷಕರಿಗೆ ಅತ್ಯುಪಯುಕ್ತ ! ಟ್ರೇನಿಂಗ ಕಾಲೇಜದ ದ್ಯಾರ್ಥಿಗಳಿಗೆ ಶೈಕ್ಷಣಿಕ ಅಭ್ಯಾಸಪತ್ರಿಕೆಯ್ಯ ಎಲ್ಲ ವಿಷಯಗಳೂ ಇದರಲ್ಲಿ ಬಂದಿವೆ. ತಿಳಿಯಾದ ುಂದರ ಶೈಲಿ ! ಈ ಶೈಕ್ಷಣಿಕ ಮನೋವಿಜ್ಞಾನದ ಬಗೆಗೆ ಸ್ವತಂತ್ರವಾಗಿ ಬರೆಯಲ್ಪಟ್ಟ ೩೦೦ ಪುಟ- ಳು ಮತ್ತು ೧೧ ಅಧ್ಯಾಯಗಳನ್ನೊಳಗೊಂಡ ಪುಸ್ತಕ ಕನ್ನಡದಲ್ಲಿ ಇದೊಂದೇ.

ಪುಸ್ತಕವು ಪ್ರಕಟವಾಗಿದೆ.

ಪ್ರಕಾಶಕರು :

ಆಕಳವಾಡಿ ಬುಕ್ ಡಿಪೋ, ಧಾರವಾಡ

ಅವರಿಗೆ ಬರೆದು ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ

ಒಳ್ಳೆಯ ಶಿಸ್ತಿನೆಡೆಗೆ

[ಉತ್ತರ ಪ್ರದೇಶದ ಶಿಕ್ಷಣ ವಿಭಾಗದ ಮುಖಪತ್ರವಾದ ಶಿಕ್ಷಾ ಎಂಬ ತ್ರೈಮಾಸಿಕದ ಎಪ್ರಿಲ ೧೯೫೮ ರ ಸಂ
ಪ್ರಕಟವಾದ ಶ್ರೀ. ದೇವ ಇಂದರಲಾಲ ಎಂಬವರ "Towards Better Discipline" ಎಂಬ ಉದ್ಬೋಧಕವಾದ
ಮುಖ್ಯಾಂಶಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.]

ಸಂಗ್ರಾಹಕರು :– ಶ್ರೀ. ಎಸ್. ವಾಯ್. ಶೀಲವಂತ, ಬಿ. ಎ., ಬಿ. ಟಿ., ಡಿ. ಪಿ. ಇಡಿ., ಡಿ. ಬಿ
ಪ್ರಾಧ್ಯಾಪಕರು, ಕನ್ನಡ ಗಂಡುಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜ, ಧಾರವಾಡ.

ಇತ್ತೀಚೆಗೆ ನಮ್ಮ ದೇಶದ ಶಿಕ್ಷಣ ಸಂಸ್ಥೆಗಳಲ್ಲಿ ಶಿಸ್ತು ಭಯಕ್ಕೆ ಎಡೆಗೊಡುವಷ್ಟು ಕೆಳಮಟ್ಟಕ್ಕೆ ಇಳಿದದ್ದು ಕಂಡು ಬರಹತ್ತಿದೆ. ವಿಕರಾಳ ಸ್ವರೂಪವನ್ನು ತಾಳು ತ್ತಿರುವ ಈ ಶಿಸ್ತಿನ ಅಭಾವವನ್ನು ತೆಗೆದುಹಾಕಿ ಪರಿಸ್ಥಿತಿಯನ್ನು ಕೂಡಲೆ ಹತೋಟಿಯಲ್ಲಿ ತರದಿದ್ದರೆ ನಮ್ಮ ಸಮಾಜದ ರಚನೆಯೇ ಬುಡಮೇಲಾಗುವ ಸಂಭವವಿದೆ "ವಿದ್ಯಾರ್ಥಿಗಳಲ್ಲಿ ತಲೆದೋರಹತ್ತಿರುವ ಶಿಸ್ತಿನ ಅಭಾವವು ಸಹಜವಾದದ್ದೆಂದು ನಾವು ಭಾವಿಸುವ ಬಗೆ ಹೇಗೆ?" ಎಂದು ಪಂಡಿತ ಜವಾಹರಲಾಲರು ಒಂದೆಡೆಗೆ ಕೇಳಿದ್ದಾರೆ ಮತ್ತು ಮುಂದುವರಿಯುತ್ತ, "ಇಂದಿನ ವಿದ್ಯಾರ್ಥಿಗಳ ಮಧ್ಯದಲ್ಲಿಯೇ ಭಾರತದ ನಾಳಿನ ಮುಖಂಡರು ಉದಯವಾಗುವರು. ಅಂದಮೇಲೆ ವಿದ್ಯಾರ್ಥಿಗಳ ಇಂದಿನ ತರಬೇತಿಯು ಹದಗೆಟ್ಟು ಹೋದರೆ ನಮಗೆ ನಾಳೆ ಸಿಗಬಹುದಾದ ನಾಯಕತ್ವವು ಎಂತಹದೆಂಬುದನ್ನು ಸಹಜವಾಗಿ ಊಹಿಸಬಹುದು," ಎಂದು ಅವರು ಆಡಿದುದು ಒಂದು ಸಕಾಲಿಕ ಎಚ್ಚರಿಕೆಯಾಗಿದೆ.

ಶಿಸ್ತಿನ ವಿಷಯದಲ್ಲಿಯ ಈ ಸಮಸ್ಯೆಯು ಕೇವಲ ನಮ್ಮ ದೇಶಕ್ಕೆ ಮರ್ಯಾದಿತವಾಗಿರದೆ ಅದು ಜಾಗತಿಕ ಸ್ವರೂಪದ್ದು ಆಗಿದೆ. ಪ್ರತಿಯೊಂದು ದೇಶದಲ್ಲಿಯ ಸಂಸ್ಥೆಗಳು ಅದನ್ನು ಒಂದಿಲ್ಲೊಂದು ರೀತಿಯಲ್ಲಿ ಮತ್ತು ಹೆಚ್ಚು ಕಡಿಮೆ ಪ್ರಮಾಣದಲ್ಲಿ ಎದುರಿಸಬೇಕಾಗಿದೆ. ಆದರೆ ವಿಷಾದದ ಸಂಗತಿಯೆಂದರೆ ಅದು ನಮ್ಮ ದೇಶದಲ್ಲಿ ಇತ್ತೀಚೆಗೆ ಉಗ್ರ ಸ್ವರೂಪವನ್ನು ತಾಳಿದ್ದರಿಂದ ಇಡೀ ಪರಿಸ್ಥಿತಿಯು ಕಂಗೆಡಿಸುವಂತಹದಾಗಿದೆ.

ಈ ಸಮಸ್ಯೆಯು ಎಷ್ಟೇ ಗಡುಚಾಗಿದ್ದರ
ಒದಗಿದ ವಿಷಾದಕರ ಪರಿಸ್ಥಿತಿಗೆ ನಾವೆಲ್ಲರ
ಗಾರರಾಗಿದ್ದೇವೆಂಬುದನ್ನೂ ದೋಷಾರ್ಹ
ವೆಂಬುದನ್ನೂ ಒಪ್ಪಲೇಬೇಕು. ಅಂತೆಯೇ
ಕರು, ಅದರಲ್ಲಿಯೂ ಶಿಕ್ಷಣತಜ್ಞರು, ಇದನ್ನು
ಮಕಾರವಾಗಿ ಎದುರಿಸಬೇಕಾಗಿದೆ. ನಮ್ಮ ಶಿ
ತಲೆಯೆತ್ತಿದ ಈ ಅನೈತಿಕತೆ ಮತ್ತು ಅಧೋಗ
ಔದಾಸೀನ್ಯದಿಂದ ತಾತ್ಸಾರಭಾವದಿಂದ
ಕುಳಿತು ನೋಡಲಾಗದು.

ಇಂಥ ಪರಿಸ್ಥಿತಿಯುಂಟಾಗಲು ಅತ್ಯಂತ
ಕಾರಣವೆಂದರೆ ನಮ್ಮ ದೇಶವು ದೀರ್ಘಕಾ
ಪರದಾಸ್ಯಕ್ಕೆ ಒಳಗಾಗಿದ್ದುದು. ಪರಕೀಯ ಸ
ತನ್ನ ಅಸ್ತಿತ್ವವನ್ನು ಮತ್ತು ದೇಶದಲ್ಲಿ ಸುವ್ಯವ
ಕಾಯ್ದುಕೊಳ್ಳಲು ಮಾಡಿದ ಜುಲುಮೆಯ
ಗಳನ್ನು ನಾವು ಶಿಕ್ಷೆಯ ಭೀತಿಯಿಂದ ಪ
ಬಂದದ್ದರಿಂದ ನಾವು ಪರಸ್ಪರರಲ್ಲಿ ಇರಬೇಕಾ
ಭಾವ, ಸಹಕಾರಭಾವ ಮತ್ತು ಕಾಯಿದೆಯ
ರಿಕೆಯಿಂದಲ್ಲದೆ ಅದರಿಂದಾಗುವ ಸಾಮಾಜಿ
ಮುಂತಾದ ಲಾಭಗಳಿಗಾಗಿ ಪಾಲಿಸುವ ಪ್ರವೃ
ಕಳೆದುಕೊಂಡಿದ್ದೇವೆ.

ನಮ್ಮ ದೇಶದ ಸ್ವಾತಂತ್ರ್ಯದ ಹೋರಾ
ಅದೊಂದು ಕಾಯಿದೆ ಮತ್ತು ಅಧಿಕಾರದ
ನೆಯ ಸಜೀವ ಇತಿಹಾಸವಾಗಿದೆ. ಅದರ
ವಹಿಸಲು ವಿದ್ಯಾರ್ಥಿಗಳನ್ನೂ ಹುರಿದುಂಬಿಸಲ
ಅದರ ಪರಿಣಾಮವಾಗಿ ಅನೇಕರು ಅ

ಗಿಂತಲೂ ಬಹಳ ಕಾಲ ಮುಂಚಿತವಾಗಿಯೇ ನಮಗೆ ಸ್ವಾತಂತ್ರ್ಯವು ಲಭಿಸಿತು. ಜನರಲ್ಲಿ ಸ್ವೇಚ್ಛಾಚಾರವು ಬೆಳೆಯಿತು. ಕಾಯದೆಭಂಗ ಮಾಡಲು ಪ್ರೋತ್ಸಾಹಿಸಿದವರೇ ಅಧಿಕಾರದ ಸೂತ್ರಗಳನ್ನು ವಹಿಸಿದರು. ನಮ್ಮಲ್ಲಿ ಕೆಲವರು ಸ್ವರಾಜ್ಯವೆಂದರೆ ಪರಿಣಾಮಗಳನ್ನು ಲೆಕ್ಕಿಸದೆ ಮನಬಂದಂತೆ ನಡೆಯುವದು ಎಂದು ಅರ್ಥ ಮಾಡುತ್ತಿದರು. ಇಂಥವರು ಸ್ವರಾಜ್ಯವೆಂದರೆ ಕೇವಲ ಮುಕ್ತತೆಯಲ್ಲ ಹೊಣೆಗಾರಿಕೆ ಎಂಬುದನ್ನೂ, ಹಿಂದೆ ಎಂದೂ ಇರದಷ್ಟು ಆತ್ಮಸಂಯಮನದ ಆವಶ್ಯಕತೆ ಈಗ ಇಡೆಯೆಂಬುದನ್ನೂ ಮರೆತರು.

ಈ ತಪ್ಪು ತಿಳುವಳಿಕೆಯನ್ನು ಕೂಡಲೆ ಅಥವಾ ಅಲ್ಪ ಕಾಲದಲ್ಲಿ ತೆಗೆದುಹಾಕಲು ಸಾಧ್ಯವಿಲ್ಲ, ನಮ್ಮ ನಿಜವಾದ ಪಾತ್ರವನ್ನು ಅರಿತುಕೊಳ್ಳಲಿಕ್ಕೆ ಮತ್ತು ಹಿಂದೆ ಮಾಡಿದುದನ್ನೇ ಈಗ ಮಾಡುವದು ತಪ್ಪು ಅಷ್ಟೇ ಅಲ್ಲದೆ ಹಾನಿಕರವೂ ಆಗುವದೆಂಬುದನ್ನು ಮನವರಿಕೆಮಾಡಿಕೊಳ್ಳಲಿಕ್ಕೆ ತುಸು ಅವಕಾಶವು ಬೇಕಾಗುವದು. ಹಳೆಯ ಪಾಠಗಳನ್ನು ಮರೆತು ಹೊಸ ಪಾಠಗಳನ್ನು ಕಲಿಯಬೇಕಾಗುವದು. ಈ ಮಾತು ಕೇವಲ ವಿದ್ಯಾರ್ಥಿಗಳಿಗಷ್ಟೇ ಅನ್ವಯಿಸುವದಿಲ್ಲ. ಇಡೀ ಶಿಕ್ಷಕ ವರ್ಗಕ್ಕೂ, ಅದರಲ್ಲಿಯೂ ಸ್ವಾತಂತ್ರ್ಯವನ್ನು ನಿಯಂತ್ರಿಸಲು ತಾಳಮೇಳವಿಲ್ಲದ ನಿರ್ಬಂಧಗಳನ್ನು ಹಾಕುವ ಹಳೆಯ ಪದ್ಧತಿಗೆ ಮಾರುಹೋದ ಶಿಕ್ಷಕರಿಗೂ ಅನ್ವಯಿಸುತ್ತದೆ.

ಈ ಸಮಸ್ಯೆಯನ್ನು ಬಿಡಿಸುವಲ್ಲಿ ಮೊದಲು ಶಿಕ್ಷಣದ ಉದ್ದೇಶವನ್ನು ಗಮನಕ್ಕೆ ತಂದುಕೊಳ್ಳಬೇಕು. ಶಿಕ್ಷಣದ ಉದ್ದೇಶ "ಜೀವನಕ್ಕಾಗಿ ಸಿದ್ಧತೆ" ಎಂದು ಹಲವರ ಅಭಿಪ್ರಾಯವಿದ್ದರೆ ಹರ್ಬರ್ಟ ಸ್ಪೆನ್ಸರನು ಅದು "ಸಂಪೂರ್ಣ ಜೀವನ" ವೆಂದು ಒಂದೆಡೆ ಹೇಳಿದ್ದಾನೆ. ಈ ಉದ್ದೇಶಗಳು ಸದೋಷವೆಂದು ಅನೇಕರು ಟೀಕಿಸಿದ್ದರೂ ಅವು ಶಿಕ್ಷಣದ ಯಾವುದೆ ಗುರಿಯಲ್ಲಿ ಅಡಕವಾಗಿರಬೇಕಾದ ಒಂದು ಮಹತ್ವದ ಅಂಶವನ್ನು ಸೂಚಿಸುತ್ತವೆಂಬುದು ನಿರ್ವಿವಾದವಾದದ್ದು. ಅವರವರ ಜೀವನಕ್ಕಾಗಿ ಅಣಿಗೊಳಿಸಲು ವ್ಯಕ್ತಿಗಳಿಗೆ ಯೋಗ್ಯ ತರಬೇತಿಯನ್ನು ಕೊಡದೆ ಇದ್ದರೆ ಯಾವ ಸಮಾಜವೂ ಪ್ರಗತಿಯನ್ನು ಹೊಂದಲಾರದು. ಇಂಥ ತರಬೇತಿಯು ಪ್ರಗತಿಪರ ಸಮಾಜದ ಜೀವಾಳವೆಂದರೂ ಸಲ್ಲುವದು ಮತ್ತು ಯಾವ ಶಿಕ್ಷಕನು ತನ್ನ ವಿದ್ಯಾರ್ಥಿಗಳನ್ನು ಶಿಸ್ತಿನಿಂದೊಡಗೂಡಿದ ಜೀವನವನ್ನು ಸಾಗಿಸಲು ತರಬೇತುಗೊಳಿಸುವನೊ ಅವನು ತನ್ನ ಸಮಾಜದ ಹಾಗು ರಾಷ್ಟ್ರದ ಹಿತಕ್ಕೆ ಬಹುಮೂಲ್ಯವಾದ ಕಾಣಿಕೆಯನ್ನು ಸಲ್ಲಿಸಿದಂತಾಗುವದು. ಏಕೆಂದರೆ ಒಂದು ಸಮಾಜದೊಳಗಿನ ವ್ಯಕ್ತಿಗಳು ಆ ಸಮಾಜದಲ್ಲಿ ತಮಗಿದ್ದ ಸ್ಥಾನವನ್ನು ಸರಿಯಾಗಿ ಅರಿತುಕೊಂಡು ಅದಕ್ಕೆ ಹೊಂದಿಕೆಯಾಗುವಂತೆ ತಮ್ಮ ನಡತೆಯನ್ನು ಮಾರ್ಪಡಿಸದಿದ್ದರೆ ಆ ಸಮಾಜವೇ ಬದುಕಲಾರದು. ಒಂದು ಯಂತ್ರದ ಬೇರೆ ಬೇರೆ ಭಾಗಗಳು ತಮ್ಮ ತಮ್ಮ ಸ್ಥಳಗಳಲ್ಲಿ ಇದ್ದುಕೊಂಡು ಕಾರ್ಯ ಮಾಡಿದರೇನೇ ಆ ಯಂತ್ರವು ಸುಸೂತ್ರವಾಗಿ ನಡೆಯುವದು. ಇದರ ಅರಿವನ್ನು ಎಲ್ಲರಲ್ಲಿ ಉಂಟು ಮಾಡುವದೇ ಮಹತ್ವದ ಸಂಗತಿಯಾಗಿದೆ. ಆದರೆ ಈ ಅರಿವು ಆಂತರಿಕ ಪರಿವರ್ತನ ಕ್ರಮದಿಂದ ಉಂಟಾಗಬೇಕಲ್ಲದೆ ಹೊರಗಿನ ಒತ್ತಾಯದಿಂದ ಉಂಟಾದರೆ ಪ್ರಯೋಜನವಿಲ್ಲ.

ಶಿಸ್ತು ಎಲ್ಲ ಮಾನವ ಸಂಘ–ಸಂಸ್ಥೆಗಳ ಮಹತ್ವದ ಘಟಕವಾಗಿದೆ. ಇಂಥ ಶಿಸ್ತಿಗೆ "ಸಾಮಾಜಿಕ ಶಿಸ್ತು" ಎಂದು ಕರೆಯುವದು ಹೆಚ್ಚು ವಿಹಿತವು. ಆದರೆ ನಮ್ಮ ಶಾಲೆ ಕಾಲೇಜುಗಳಲ್ಲಿಯ ಬಹುಮಂದಿ ಶಿಕ್ಷಕರಿಗೆ ಹಾಗು ಪ್ರಾಧ್ಯಾಪಕರಿಗೆ ಶಿಸ್ತಿನ ಈ ಮಹತ್ವದ ಅಂಗವು ಗೊತ್ತಿರುವದಿಲ್ಲ. ಅವರು ಅದರ ರಚನಾತ್ಮಕ ಮತ್ತು ಶೈಕ್ಷಣಿಕ ಅಂಶಗಳನ್ನು ಅರಿತಿರುವದಿಲ್ಲ. ಹಾಗೆಯೇ ಅವರು ಶಿಸ್ತಿನ ಈ ಸಮಸ್ಯೆಯು ವ್ಯಕ್ತಿಯ ಭಾವನೆಗಳಿಗೆ ಸಂಬಂಧ ಪಟ್ಟದೆಯೆಂಬುದನ್ನು ಮರೆಯುತ್ತಾರೆ. ಆದರಿಂದ ವರ್ಗದ ಶಿಸ್ತನ್ನು ಮಕ್ಕಳ ತಪ್ಪು ನಡತೆ ಅಥವಾ ದುರ್ನಡತೆಯನ್ನು ತಿದ್ದುವಷ್ಟರ ಮಟ್ಟಿಗೆ ಮರ್ಯಾದಿತಗೊಳಿಸುವದು ಖಂಡಿತವಾಗಿಯೂ ಅಪಾಯಕರವಾದದ್ದು. ವರ್ಗ ಇಲ್ಲವೆ ಶಾಲೆಯು ಯಾವ ಜೀವನದ ಸಂಕ್ಷೇಪಾಕೃತಿಯಾಗಿರುವದೋ ಅಂಥ ಇಡೀ ಜೀವನದಲ್ಲಿ ಶಿಸ್ತು ಹಾಸುಹೊಕ್ಕಾಗಿ ನೆಲೆಸಬೇಕು.

ಮೇಲೆ ವಿವರಿಸಲಾದ ಸಂಗತಿಗಳಿಂದ ಸ್ಪಷ್ಟವಾಗುವ ಮಾತೆಂದರೆ ಶಿಸ್ತು ಪರಿಣಾಮಕಾರಿಯಾಗಬೇಕಾದರೆ ಅದು ವಿಧೇಯಕ, ವಿಧಾಯಕ, ಸೂಚಕ ಮತ್ತು ಅಪ್ರತ್ಯಕ್ಷವಿರಬೇಕಲ್ಲದೆ ದೂರದೃಷ್ಟಿಯನ್ನು ಇಟ್ಟು

ಕೊಂಡಿರಬೇಕು. ಇಂಥ ಶಿಸ್ತು ವಿದ್ಯಾರ್ಥಿಗಳಲ್ಲಿ ಹಿತಕರವಾದ ವಿಚಾರಗಳನ್ನು, ಆದರ್ಶಗಳನ್ನು, ಉತ್ತಮವಾದ ಮನೋಭೂಮಿಕೆಯನ್ನು ಮತ್ತು ಚಟಗಳನ್ನು ಉಂಟು ಮಾಡುವದು ಹಾಗು ಅದು ಈ ಸಂಗತಿಗಳನ್ನು ವರ್ಗ, ಅಭ್ಯಾಸದ ಅವಧಿಗಳು, ವಿರಾಮಕಾಲದ ಚಟುವಟಿಕೆ, ಪಠ್ಯಕ್ರಮಕ್ಕೆ ಒಳಗೊಂಡ ಮತ್ತು ಪಠ್ಯೇತರ ಚಟುವಟಿಕೆಗಳ ಮುಖಾಂತರ ಸಾಧಿಸುವದು. ಹೀಗೆ ಅದು ವಿಚಾರ ಮತ್ತು ನಡತೆಯ ಆಂತರಿಕ ಪ್ರೇರಕ ಶಕ್ತಿಗಳನ್ನು ತಟ್ಟುವದರಿಂದ ವ್ಯಕ್ತಿಯು ತನ್ನ ಕೀಳು ಅಭಿಲಾಷೆ-ಮನೋವಿಕಾರಗಳಿಂದ ಮುಕ್ತನಾಗಿ ಉಚ್ಚನೈತಿಕ ಮಟ್ಟದ ವರ್ತನದೆಡೆಗೆ ಅವನು ಒಲಿಯುವನು.

ನಿಷೇಧಾತ್ಮಕ, ವಿಘಾತಕ ಮತ್ತು ತಾತ್ಕಾಲಿಕ ಶಿಸ್ತು ದಬ್ಬಾಳಿಕೆಯ ಉಪಾಯಗಳಿಂದ ತನ್ನ ಅಧಿಕಾರವನ್ನು ನಡೆಯಿಸುತ್ತದೆ. ಇಂಥ ಶಿಸ್ತು ವಿದ್ಯಾರ್ಥಿಗಳಿಂದ ತುಟಿ ಪಿಟ್ಟೆನ್ನದೆ ಶಿಕ್ಷಕನ ಆಜ್ಞೆಗಳನ್ನು ಪಾಲಿಸುವ ವಿಧೇಯಕತೆಯನ್ನು ಅಪೇಕ್ಷಿಸುತ್ತದೆ. ಅದು ತನ್ನ ಉದ್ದೇಶ ಸಾಧನೆಗಾಗಿ ಭಯದ-ಶಿಕ್ಷೆಯ ಭಯದ-ಆಶ್ರಯವನ್ನು ಪಡೆಯುತ್ತದೆ. ಒಮ್ಮೊಮ್ಮೆ ಇಂಥ ಶಿಸ್ತಿನ ಆವಶ್ಯಕತೆಯೂ ಉಂಟಾಗಬಹುದು. ಆದರೆ ಅದನ್ನೇ ಗುರಿಯಾಗಿಟ್ಟುಕೊಂಡರೆ ಶಿಸ್ತಿನ ಮೂಲೋದ್ದೇಶವೇ ನಿಷ್ಫಲವಾಗುವದು. ಇಂಥ ಶಿಸ್ತು ಅವಶ್ಯವೆನಿಸಿದಾಗ ಸಹ ಅದನ್ನು ಕಾಯಲು ಉಪಯೋಗಿಸಬಹುದಾದ ಬಂಧನ, ಗದರಿಸುವದು, ಶಿಕ್ಷೆ, ಸವಲತ್ತುಗಳನ್ನು ಹಿಂತೆಗೆದುಕೊಳ್ಳುವದು ಇವೇ ಮುಂತಾದ ಸಾಧನಗಳು ವಿಧಾಯಕ ಶಿಸ್ತಿಗೆ ಪೋಷಕವಾಗುವಂತೆ ಉಪಯೋಗಿಸಲ್ಪಡಬೇಕು. ನಿಜವಾದ ಶಿಸ್ತು ರಚನಾತ್ಮಕವಾಗಿರುತ್ತದೆ. ಶಿಸ್ತು ಪರಸ್ಪರರಲ್ಲಿ ಆದರಭಾವ ಮತ್ತು ಆತ್ಮಸಂಯಮದ ವಾತಾವರಣವನ್ನು ನಿರ್ಮಿಸದಿದ್ದರೆ ಯಾವ ಯಾವ ಪ್ರಗತಿಯೂ ಸಾಧ್ಯವಾಗದು.

ವಿಧಾಯಕ ಶಿಸ್ತಿನ ವೈಶಿಷ್ಟ್ಯಗಳನ್ನು ಮೇಲೆ ವಿವರಿಸಲಾಗಿದೆಯಷ್ಟೆ? ಇಂಥ ಶಿಸ್ತಿಗೆ ಒಳಗಾದ ವ್ಯಕ್ತಿಯು ದುರ್ನಡತೆಗೆ ಬೀಳದಿರಲು ಕಾರಣವೆಂದರೆ ಹೆದರಿಕೆಯಲ್ಲ; ಆದರೆ ಅವನ ಸದಸದ್ವಿವೇಕ ಬುದ್ಧಿಯೇ ಅದಕ್ಕೆ ಒಪ್ಪುವದಿಲ್ಲ. ಆದ್ದರಿಂದ ನಾವು ಒಂದು ಮಹತ್ವದ ಸಂಗತಿಯನ್ನು ಮನದಟ್ಟಾಗಿ ಮಾಡಿಕೊಳ್ಳಲೇಬೇಕು. ಅದು ಏನಂದರೆ ನಮ್ಮ ಶಿಕ್ಷಣವು ನಮ್ಮ ನಾಡಿನ ಯ
ಯುವತಿಯರಲ್ಲಿ ಒಳ್ಳೆಯ ಚಾರಿತ್ರ್ಯವನ್ನು
ಮಾಡಲು ಸಹಾಯಕ ವಾರದೇನೇ ಈ ಶಿಸ್ತಿನ
ಯನ್ನು ಯಶಸ್ವಿಯಾಗಿ ಬಿಡಿಸಲು ಸಾಧ್ಯವಾಗು
ಇಷ್ಟೇ ಅಲ್ಲ. ಒಳ್ಳೆಯ ಶೀಲವನ್ನು ರೂಪ್ರಗ
ವದೇ ಎಲ್ಲ ಶೈಕ್ಷಣಿಕ ಪ್ರಯತ್ನಗಳ ಗುರಿಯು
ಅವುಗಳ ಯಶಾಪಶಗಳ ಒರೆಗಲ್ಲು ಎಂಬುದನ್ನು
ಮರೆಯಲಾಗದು ಮತ್ತು ಎಲ್ಲ ಶಿಕ್ಷಣ ಸಂ
ಅಸ್ತಿತ್ವವಾದರೂ ಅದಕ್ಕಾಗಿಯೇ ಅಲ್ಲದೆ ಕೇವಲ
ಪುಸ್ತಕಗಳನ್ನು ಮುಖೋದ್ಗತ ಮಾಡಿಸಿ ಪರೀ
ಪರಿಣಾಮಗಳನ್ನು ಹೆಚ್ಚಿಸುವದಕ್ಕಾಗಿ ಅಲ್ಲ.

ಮೇಲಿನ ವಿವೇಚನೆಯಿಂದ ಶಿಕ್ಷಣ ಕ್ಷೇ
ದುಡಿಯುವವರಿಗೆ ಅವರಿಗೆ ಉಪಯೋಗವಾಗ
ನಿರ್ದಿಷ್ಟವಾದ ಮಾರ್ಗದರ್ಶನವನ್ನೇನೂ ಮಾಡಿದ
ಲಿಲ್ಲ. ಮೇಲಾಗಿ ಶೀಲದ ವ್ಯಾಖ್ಯೆಯನ್ನು ಬೇ
ಜನರು ಬೇರೆ ಕಾಲಗಳಲ್ಲಿ ಬೇರೆ ಬೇರೆ ರೀತಿ
ಮಾಡುತ್ತ ಬಂದಿದ್ದಾರೆ: ಸರ್ ಎಸ್. ರಾಧಾಕೃ
ಮಾತಿನಲ್ಲಿ ಹೇಳುವದಾದರೆ, "ಶೀಲದ ಚರ್ಚೆ
ತತ್ವಜ್ಞಾನಿಗೆ ಆನಂದದ ವಿಷಯವಾಗಿದ್ದರೆ
ಆಲೋಚಕನಿಗೆ ಹತಾಶಗೊಳಿಸುವ ವಿಷಯವಾ

ನಮಗೂ ಈ ತೊಂದರೆಯ ಅರಿವು ಇದೆ.
ಎಲ್ಲೆಲ್ಲಿಯೂ ಯಾವ ಕಾಲದಲ್ಲಿಯೂ ಮನ್ನಣೆ ಪ
ವಂಥ ಹಲವು ಗುಣಗಳು ಇವೆ ಎಂಬುದರ
ಸಾಕಷ್ಟು ಒಮ್ಮತವಿದೆ. ಆದ್ದರಿಂದ ಸಾಮಾನ್ಯ
ಹೇಳುವದಾದರೆ ಒಳ್ಳೆಯ ನಾಗರಿಕನ ಹೆಗ್ಗುರು
ಉತ್ತಮ ಶೀಲದಲ್ಲಿ ಕೆಳಗೆ ಕಾಣಿಸಿದ ಗುಣಗಳು
ವೇಶವಾಗುತ್ತವೆನ್ನಬಹುದು :—

(೧) ಸಂಯಮ ಮತ್ತು ವಿಧೇಯತೆ
(೨) ಪ್ರಾಮಾಣಿಕತನ
(೩) ಸೌಜನ್ಯ ಹಾಗು ದಾಕ್ಷಿಣ್ಯ
(೪) ಸಹಕಾರ ಭಾವ
(೫) ಸತತ ಪ್ರಯತ್ನ
(೬) ತತ್ಪರತೆ
(೭) ಅಚ್ಚುಕಟ್ಟುತನ
(೮) ಸ್ವಾರ್ಥವನ್ನು ಬದಿಗೊತ್ತಿ ಪರಹಿತ ಬಯಸುವದು.

ಲಸಂವರ್ಧನೆಯೆಂದರೆ ಈ ಗುಣಗಳನ್ನು ಪೋಷಿ ಕು. ಇದುವೆ ಎಲ್ಲ ಶಿಕ್ಷಣ ಸಂಸ್ಥೆಗಳ ಕಾರ್ಯ. ಈ ಗುಣಗಳನ್ನು ಪ್ರತ್ಯೇಕವಾಗಿ ಪೋಷಿಸುವದ ಏನೂ ಲಾಭವಾಗದು. ಕಳ್ಳರ ತಂಡದಲ್ಲಿಯೂ ಶೌರ್ಯ, ಪ್ರಾಮಾಣಿಕತನ ಮತ್ತು ನಿಷ್ಠೆ ಇವು ಬರಬಹುದು. ಈ ತಾರತಮ್ಯವನ್ನು ನಾವು ಾಗಲೂ ಲಕ್ಷದಲ್ಲಿಡಬೇಕು. ಶಿಕ್ಷೆಯ ಹೆದರಿಕೆ ಹಾಕಿ ಕೇವಲ ಈ ಗುಣಗಳ ಮಂತ್ರವನ್ನು ನರೂ ಉದ್ದೇಶವು ಈಡೇರದು. " ಬೇರೆಯವರ ವ್ಯವಹರಿಸುವಾಗ ಕಾರ್ಯರೂಪದಲ್ಲಿ ಹೊರ-ುವಂಥ ಸುಸಂಘಟಿತವಾದ ವಿಚಾರಗಳು, ಭೂಮಿಕೆಗಳು, ಗುಣಗಳು ಮತ್ತು ಚಟಗಳು " ಳಿಂದ ಒಡಗೂಡಿದ ಸುಸಂಬದ್ಧವಾದ ವ್ಯಕ್ತಿತ್ವ ವಿದ್ಯಾರ್ಥಿಗಳಲ್ಲಿ ರೂಪುಗೊಳಿಸುವದೇ 'ಎಲ್ಲ ಕಾಲೇಜುಗಳ ಆದ್ಯ ಕರ್ತವ್ಯವಾಗಿದೆ. ಆ ದೃಷ್ಟಿ ನ ಎಲ್ಲ ಸಂಸ್ಥೆಗಳ ಸಂಘಟನೆ, ಸಂವಿಧಾನ ಮತ್ತು ತೆ ಇವುಗಳಲ್ಲಿ ತಕ್ಕ ಸುಧಾರಣೆಯಾಗಬೇಕು. ಮು ಮತ್ತು ಹೊರಗಿನ ಜೀವನದಲ್ಲಿ ಭಾಗವಹಿಸುವ ವಲೇ ಇಂಥ ವ್ಯಕ್ತಿತ್ವವು ರೂಪುಗೊಳ್ಳುವದು. ಮೇಲಿಂದ ಶಾಲೆಕಾಲೇಜುಗಳಲ್ಲಿ ಕಲಿಸಲಾಗುವ ಕೇವಲ ವರ್ಗಕ್ಕೆ ಮರ್ಯಾದಿತವಾಗಿರದೆ ಅದು ವಿನ ಇಡೀ ಜೀವನವನ್ನೇ ವ್ಯಾಪಿಸುವಂಥದಿರ ಎಂಬ ಮಾತು ಸ್ಪಷ್ಟವಾಗುತ್ತದೆ.

ೇಲಿನ ವಿವೇಚನೆಯಿಂದ ನಿಷ್ಪನ್ನವಾಗುವ ವ್ಯವ-ಕ ಪರಿಣಾಮಗಳನ್ನು ನಿರೂಪಿಸುವ ಮೊದಲು, ್ನ ಕಲಿಸಲು ಉಪಯೋಗಿಸಲಾಗುವ ವಿಧಾನಗಳು ಪದ್ಧತಿಗಳು ಪೋಲೀಸ ಆಡಳಿತೆಗೆ ಒಪ್ಪುವಂಥ-ರದೆಂಬ ಮಾತನ್ನು ಸೂಚಿಸುವದು ಅಗತ್ಯವು. ತ್ತಮ ಶಿಸ್ತು ಸ್ವತಂತ್ರ ವಾತಾವರಣದಲ್ಲಿ ಮಾತ್ರ ಗೊಳ್ಳಲು ಸಾಧ್ಯ. ಇಲ್ಲಿ ಸ್ವಾತಂತ್ರ್ಯವೆಂದರೆ ವ್ಯಕ್ತಿಯ ಅಥವಾ ಒಂದು ಗುಂಪಿನ ಸ್ವಾತಂತ್ರ್ಯ ಎಲ್ಲರ ಸ್ವಾತಂತ್ರ್ಯ. ಒಬ್ಬ ವ್ಯಕ್ತಿಯು ಉಪಭೋಗಿ ಸ್ವಾತಂತ್ರ್ಯದಿಂದ ಬೇರೊಬ್ಬರ ಸ್ವಾತಂತ್ರ್ಯವು ವಾಗುವಂತಿದ್ದರೆ ಅದು ನಿಜವಾದ ಸ್ವಾತಂತ್ರ್ಯ-ಆದುದರಿಂದ ಸಂಪೂರ್ಣ ಸ್ವಾತಂತ್ರ್ಯವೆಂಬುದು ಇಲ್ಲವೇ ಇಲ್ಲ. ಅದು ಪರ್ಯಾಯದಿಂದ ಕೆಲವು ನಿರ್ಬಂಧಗಳನ್ನು ಸೂಚಿಸುತ್ತದೆ. ಆದ್ದರಿಂದ ಸ್ವಾತಂತ್ರ್ಯ ಹಾಗೂ ಶಿಸ್ತು ಇವು ಪರಸ್ಪರ ವಿರೋಧಿಗಳು ಎಂದು ಭಾವಿಸುವದು ತಪ್ಪು. ಅವು ಒಂದೇ ನಾಣ್ಯದ ಇಕ್ಕೆಲ-ಗಳು. ಯಾಕಂದರೆ ಸ್ವಯಂಪ್ರೇರಿತವಾದ ಶಿಸ್ತು ಸ್ವಾತಂತ್ರ್ಯವೇ ಸರಿ. ಮತ್ತು ಅಂತರಿಕ ಪ್ರೇರಣೆಯಿಂದ ಸ್ವೇಚ್ಛೆಯಿಂದ ನಿಬಂಧಕ್ಕೊಳಗಾದ ಸ್ವಾತಂತ್ರ್ಯವು ಶಿಸ್ತೇ. ಅಂತೆಯೇ ಸ್ವಾತಂತ್ರ್ಯವೆಂದರೆ ಶಿಸ್ತಿನಿಂದ ಒಡಗೂಡಿದ ಸ್ವಾತಂತ್ರ್ಯ; ಮತ್ತು ಮೇಲ್ತರಗತಿಯ ಶಿಸ್ತು ಎಂದರೆ ಸ್ವ-ಶಿಸ್ತು; ಸ್ವಯಂಪ್ರೇರಿತವಾದ, ಸ್ವನಿರ್ಬಂಧಿತವಾದ ಮತ್ತು ಸ್ವಸಂಯಮಕ್ಕೆ ಒಳಗಾದ ಶಿಸ್ತು. ಯಾವನು ಆಜ್ಞೆಗಳನ್ನು ಮತ್ತು ಕಾಯದೆಗಳನ್ನು ಅವುಗಳ ಉಲ್ಲಂಘನದಿಂದ ಆಗುವ ಪರಿಣಾಮಗಳಿಗೆ ಹೆದರಿ ಅಲ್ಲ, ಆದರೆ ಅವುಗಳ ಪಾಲನದಿಂದ ಆಗುವ ಹಿತಕ್ಕಾಗಿ ಪಾಲಿಸುವನೋ ಅವನೇ ಉತ್ತಮ ನಾಗರಿಕ ನೆನ್ನಬಹುದು.

ಇನ್ನು ಮುಂದಿನ ಪ್ರಶ್ನೆಯೆಂದರೆ ''ಇದನ್ನು ಸಾಧಿ-ಸುವ ಬಗೆ ಹೇಗೆ ?'' ಅಲ್ಪ ವೇಳೆಯಲ್ಲಿ ಅತ್ಯುತ್ತಮ ಫಲಗಳನ್ನು ಪಡೆಯಲು ನಾವು ಅನುಸರಿಸಬೇಕಾದ ವಿಧಾನಗಳು ಯಾವವು ? ನಡೆಯಿಸಬೇಕಾದ ಚಟು-ವಟಿಕೆಗಳು ಯಾವವು ? ಮಾಡಬೇಕಾದ ಸಂಘಟನೆ ಎಂಥದು ? ಇದಕ್ಕಾಗಿ ಎಲ್ಲಕ್ಕೂ ಮೊದಲು ಎರಡು ಮಹತ್ವದ ತತ್ವಗಳನ್ನು ನೆನಪಿನಲ್ಲಿಡುವದು ಆವಶ್ಯಕವು. ಮೊದಲನೆಯದೆಂದರೆ ಶಾಲೆಯ ಸಂವಿಧಾನವು ಕೇವಲ ಮುಖ್ಯಾಧ್ಯಾಪಕನ ಮತ್ತು ಅವನ ಸಹಾಧ್ಯಾಪಕರ ಹೊಣೆಯಾಗಿರದೆ ವಿದ್ಯಾರ್ಥಿಗಳು ಅದರ ಬೇರೆ ಬೇರೆ ಅಂಗಗಳಲ್ಲಿ ಭಾಗವಹಿಸುವಂತಾಗಬೇಕು. ಎರಡನೆಯ ದೆಂದರೆ ಸಾಕಷ್ಟು ಸ್ವ-ಆಡಳಿತೆಯ ಅನುಭವವನ್ನು ಒದಗಿಸುವಂಥ ಮತ್ತು ಬೇರೆಬೇರೆ ಅಭಿರುಚಿ ಹಾಗು ಸ್ವಭಾವಗಳುಳ್ಳ ವಿದ್ಯಾರ್ಥಿಗಳಿಗೆ ಆಕರ್ಷಕವಾಗುವಂಥ ವ್ಯಾಸಂಗಗಳನ್ನು (hobbies), ವಿರಾಮಕಾಲದ ಉದ್ಯೋಗಗಳನ್ನು ಮತ್ತು ಪಠ್ಯೇತರ ಚಟುವಟಿಕೆ-ಗಳನ್ನು ಹೇರಳವಾಗಿ ಸಂಘಟಿಸಬೇಕು.

(ಮುಂದುವರಿಯುವದು)

ಶಿಕ್ಷಕನ ಹೆಸರು:—ಶ್ರೀ ಶಾ. ಜ. ಪಶುಪತಿ
ಕಲಿಸುವ ಇಯತ್ತೆ:—೨ನೆಯ ಇಯತ್ತೆ

ಚಟುವಟಿಕೆ:—ಪುಸ್ತಕದ ಹೊದಿಕೆಗಾಗಿ ಅಮೃತ ಶಿಲೆಯ (ಬಣ್ಣದ) ಕಾಗದ ತಯಾರಿಸುವದು. ದಿನಾಂಕ:—

ಸಮನ್ವಯಿತ ವಿಷಯ:—ಮೂಲ ಬಣ್ಣಗಳು ಹಾಗೂ ಉಪಬಣ್ಣಗಳು ವೇಳೆ:—೯೦ ನಿಮಿಷ

ಮೆಟ್ಟುಗಳು	ಕೆಲಸದ ವಿವರಗಳು	ಆವಶ್ಯಕ ಜ್ಞಾನ	ಕಲಿಸುವ ಕ್ರಮ
೧) ಯೋಜನೆ:—	ಅ) ಯೋಜನೆಯ ಅವಶ್ಯಕತೆ:—	ಮುಖಪುಟವು ಹರಿಯದಂತೆ ಮತ್ತು ಹೊಲಸಾಗದಂತೆ ನೋಡಿಕೊಳ್ಳಲು ಪುಸ್ತಕಗಳಿಗೆ ಹೊದಿಕೆ ಹಾಕಬೇಕು.	ಶಿಕ್ಷಕನು ಬಾಲಕರಿಗೆ ಒಂದು ಪುಟ ಹರಿದ ಪುಸ್ತಕವನ್ನು ಮತ್ತು ಒಂದು ಹೊಸ ಪುಸ್ತಕವನ್ನು ತೋರಿಸುತ್ತ :— ಈ ಪುಸ್ತಕಗಳಲ್ಲಿ ಯಾವದು ಚೆನ್ನಾಗಿದೆ ? ಇದಕ್ಕೆ ಏನಾಗಿದೆ ? (ಮುಖಪುಟ ಹರಿದ ಪುಸ್ತಕವನ್ನು ಕುರಿತು) ಬಳಿಕ ಹೊಸ ಪುಸ್ತಕದ ಜೊತೆಗೆ ಒಂದು ಮುಖಪುಟ ಹೊಲಸಾದ ಪುಸ್ತಕವನ್ನು ಹಿಡಿದು— ಇವುಗಳಲ್ಲಿ ಯಾವದು ಸರಿಯಾಗಿದೆ ? ಇದಕ್ಕೆ ಏನಾಗಿದೆ? (ಮುಖಪುಟ ಹೊಲಸಾದ ಪುಸ್ತಕವನ್ನು ಕುರಿತು,) ಈ ಪುಸ್ತಕದಂತೆ ಮುಖಪುಟವು ಹರಿಯದಂತೆ ಮತ್ತು ಅದು ಹೊಲಸಾಗದಂತೆ ನೋಡಿಕೊಳ್ಳದರೆ ನಾವು ಏನು ಮಾಡಬೇಕು ? ಶಿಕ್ಷಕನು ಒಂದು ಅಮೃತ ಶಿಲೆಯ ಕಾಗದದಿಂದ ಹೊದಿಕೆ ಹಾಕಿದ ಪುಸ್ತಕವನ್ನು ಮತ್ತು ಒಂದು ಸಾದಾ ಕಾಗದಿಂದ ಹೊದಿಕೆ ಹಾಕಿದ ಪುಸ್ತಕವನ್ನು ತೋರಿಸುತ್ತ :—

ಉದ್ದೇಶ ಕಥನಃ—ಇಂದು ಪುಸ್ತಕಗಳಿಗೆ ಹೊದಿಕೆ ಹಾಕಲು ಇಂಥ ಬಣ್ಣದ ಕಾಗದಗಳನ್ನು ತಯಾರಿಸೋಣ.

ಬ) ಕಲಸದ ವಿವರ

(ಕೃತಿಯಲ್ಲಿ ಅಡಗಿದ ಉಪಕೃತಿಗಳು)

(೧) ಪ್ಲೇಟುಗಳಲ್ಲಿ ಸರಿ ತಕ್ಕೊಳ್ಳುವದು.

(೨) ಅವುಗಳಲ್ಲಿ ಬೇರೆ ಬೇರೆ ಬಣ್ಣಗಳನ್ನು ಕಲಿಸುವದು.

(೩) ಸರಿಯಾದ ಅಳತೆಯ ಕಾಗದವನ್ನು ತಕ್ಕೊಳ್ಳುವದು.

(೪) ಬಣ್ಣ ಕಲಿಸಿದ ಸರಿಯನ್ನು ಕಾಗದಕ್ಕೆ ಸರಿಯಾಗಿ ಬೇರೆ ಬೇರೆ ಪಟ್ಟಿಗಳಲ್ಲಿ ಹಚ್ಚುವದು.

(೫) ಬಣ್ಣದ ಪಟ್ಟಿಗಳ ಮೇಲೆ ಹಣಿಗೆಯಿಂದ ನಕ್ಷೆ ತೆಗೆಯುವದು.

(೬) ಹಾಳೆಗಳನ್ನು ಒತ್ತಟ್ಟಿಗೆ ಇಟ್ಟು ಒಣಗಿಸುವದು.

(೭) ಕೈ ತೊಳೆದುಕೊಳ್ಳುವದು.

ಶಿಕ್ಷಕನು ಮೊದಲು ಇಂಥ ಬಣ್ಣದ ಕಾಗದವನ್ನು ಮಾಡುವ ರೀತಿಯನ್ನು ಸ್ಥೂಲವಾಗಿ ವಿವರಿಸಿ—

ಈ ಕೆಲಸ ಮಾಡಬೇಕಾದರೆ ನಾವು ಏನೇನು ಮಾಡಬೇಕಾಗುವದು ?

(ಒಬ್ಬೊಬ್ಬರಿಂದ ಒಂದೊಂದು ಉಪಕೃತಿಯನ್ನು ಕೇಳಿಕೊಳ್ಳುತ್ತ ಕ. ಹ. ದ ಮೇಲೆ ಬರೆಯುತ್ತ ಸಾಗುವದು)

೨) ಸಾಧನ ಸಂಗ್ರಹ

ಬೇಕಾಗುವ ಸಾಹಿತ್ಯಗಳ ಸಾಕಷ್ಟು ಸಂಗ್ರಹ ಹಾಗೂ ಅವುಗಳ ಉಪಯೋಗ.

ಸಾಹಿತ್ಯ	ಪ್ಲೇಟು	[illegible]	ಬ್ರಶ್ (ಪೇಂಟಿಂಗ)	ಬಣ್ಣದ ಚೀಟಿ	ಕಾಗದ	ರದ್ದಿ ಕಾಗದ	ಅರಿವೆ ಚಿಂದಿ	[illegible]	ನೀರು	ಬಕೆಟ್ ಡಬ್ಬಿ	ಟೇಬಲ್
ಸಂಖ್ಯೆ	೨೪	೨	೨೪	೮ × ೩ = ೨೪	೨೪	೨೪	೮	೨೪		ಒಂದೆರಡು	೧

ಕಾರ್ಯಗಳು	ನಿರ್ವಹಿಸುವವರು
೧) ಪ್ಲೇಟುಗಳಲ್ಲಿ ಸರಿ ಹಾಕುವವರು.	ಇಬ್ಬರು
೨) ಬ್ರುಶ್, ಸರಿಹಾಕಿ ಪ್ಲೇಟು, ಬಣ್ಣದ ಚೀಟು ಕೊಡುವವರು.	ಇಬ್ಬರು
೩) ಕಾಗದ, ರದ್ದಿಹಾಳಿ ಅರಿವೆಯ ಚಿಂದಿ ಕೊಡುವವರು.	ಒಬ್ಬನು

ಶಿಕ್ಷಕನು ಉಪಕೃತಿಗಳಿಗನುಸಾರವಾಗಿ ಬೇಕಾಗುವ ಸಾಹಿತ್ಯಗಳನ್ನು ಕೇಳಿಕೊಂಡು ಕರಿ. ಹ. ದ ಮೇಲೆ ಬರೆಯುವದು ಮತ್ತು ಅವು ಎಷ್ಟೆಷ್ಟು ಬೇಕಾಗುವವು ಎಂಬುದನ್ನು ನಿರ್ಧರಿಸುವದು.

ಕೆಂಪು, ನೀಲಿ, ಹಳದಿ, ಈ ಬಣ್ಣಗಳಲ್ಲಿ ಪ್ರತಿಯೊಂದರ ಎಂಟು ಚೀಟುಗಳನ್ನು, ಅಂದರೆ ಒಟ್ಟು ೨೪ ಚೀಟುಗಳನ್ನು ಮೊದಲೆ ಕಟ್ಟಿಟ್ಟಿರುವದು. ವರ್ಗದಲ್ಲಿ ಮೂರು ಮೂರು ಬಾಲಕರ ಒಂದೊಂದು ಗುಂಪು ಮಾಡಿ ಪ್ರತಿಯೊಂದು ಗುಂಪಿನವರಿಗೆ ಮೂರು ಪ್ರಕಾರದ ಬಣ್ಣದ ಚೀಟುಗಳು ಬರುವಂತೆ ಒಂದೊಂದು ಪ್ಲೇಟಿನಲ್ಲಿ ಒಂದೊಂದು ಪ್ರಕಾರದ ಬಣ್ಣದ ಚೀಟು ಇಡುವ ಯೋಜನೆ ಮಾಡಿಕೊಳ್ಳುವದು.

೧	೨	೩	೪
೩) ಕಾರ್ಯಾರಂಭ.	ಶಿಕ್ಷಕರ ಮಾದರಿ ಕೃತಿ	**ಕಾರ್ಯದ ರೀತಿ :—** (೧) ಬೇಕಾಗುವ ಎಲ್ಲ ಸಾಹಿತ್ಯಗಳನ್ನು ವ್ಯವಸ್ಥಿತವಾಗಿ ಇಟ್ಟು-ಕೊಳ್ಳುವದು. (೨) ಸರಿಯಲ್ಲಿ ಬಣ್ಣವನ್ನು ಸರಿಯಾಗಿ ಕಲಿಸುವದು. (೩) ಪದ್ಧತಿಗನುಸಾರವಾಗಿ ಬಣ್ಣದ ಸರಿಯನ್ನು ಹಾಳಿಯ ಮೇಲೆ ಹಚ್ಚುವದು. (೪) ರಟ್ಟಿನ ಹಣಿಗೆಯಿಂದ ನಕ್ಷೆ ತೆಗೆಯುವದು. (೫) ಕೈತೊಳೆದುಕೊಳ್ಳುವದು.	ಒಂದೊಂದು ಗುಂಪಿನ ಬಾಲಕರು ಬೇರೆ ಬೇರೆ ಬಣ್ಣದ ಪಟ್ಟಿಗಳನ್ನು ತಮ್ಮಲ್ಲಿಯೆ ಬದಲಾಯಿಸಿಕೊಂಡು ಸರತಿಯ ಮೇಲೆ ಬಣ್ಣ ಹಚ್ಚುವ ಯೋಜನೆ ಇಟ್ಟುಕೊಳ್ಳುವದು. ಶಿಕ್ಷಕರು ಎಲ್ಲ ಸಾಹಿತ್ಯಗಳನ್ನು ವ್ಯವಸ್ಥಿತವಾಗಿ ಇಟ್ಟುಕೊಂಡು ವಿಷಯ ಪಟ್ಟಿಯಲ್ಲಿ ಹೇಳಿದ ಕ್ರಮ-ದಂತೆ ಕಾರ್ಯ ಮಾಡಿ ತೋರಿಸುವದು. ಕಾರ್ಯ ತಕ್ಕೊಳ್ಳುವ ಪ್ರಮಾಣ, ಸರಿಯಲ್ಲಿ ಬಣ್ಣ ಕಲಿಸುವ ರೀತಿ, ಪ್ರಮಾಣ ಇವುಗಳ ಬಗೆಗೆ ತಿಳಿಸಿಕೊಡುವದು. ಈ ರೀತಿಯಾಗಿ ಕೆಂಪು, ನೀಲಿ, ಹಳದಿ ಬಣ್ಣದ ಸರಿಯನ್ನು ತಯಾರಿಸಿ ಅವುಗಳ ಹೆಸರನ್ನು ಕೇಳಿಕೊಳ್ಳುವದು. ಮುಂದೆ ಶಿಕ್ಷಕನು ಒಂದು ಹೊಸ ಸನ್ನಿವೇಶವನ್ನು ಹುಟ್ಟಿಸುವದು. ಮಕ್ಕಳ ಕುತೂಹಲವನ್ನು ಕೆರಳಿಸ-ಲಿಕ್ಕೆ ಮತ್ತು ಅವರ ವಿಚಾರಕ್ಕೆ ಹಾದಿ ಮಾಡಿಕೊಡುವದಕ್ಕಾಗಿ ಶಿಕ್ಷಕರು ತಮಗೆ ಕೆಂಪು, ಹಸಿರು, ಹಳದಿ ಬಣ್ಣಗಳ ಪಟ್ಟಿಯ ಹಾಳಿಯನ್ನು ತಯಾರು ಮಾಡ-ಬೇಕಾಗಿದೆ. ಇದನ್ನು ಹೇಗೆ ಪೂರೈಸುವದು ? ಎಂಬ ಸಮಸ್ಯೆಯನ್ನು ಎತ್ತಿ ಕೊಡುವದು. ಆ ಸಮಸ್ಯೆಯನ್ನು ಬಿಡಿಸಿ ತೋರಿಸಿ ಅವರ ಕುತೂಹಲವನ್ನು ಕೆರಳಿಸು-ವದು. ಆ ಮೇಲೆ ಬಣ್ಣ ತಕ್ಕೊಳ್ಳುವ ಪ್ರಮಾಣ, ಹಚ್ಚುವ ವಿಧಾನ ನಕ್ಷೆ, ತೆಗೆಯುವ ರೀತಿ ಇವುಗಳ ಸಂಬಂಧ-ವಾಗಿ ವಿವೇಚಿಸುತ್ತ ಮಾಡಿ ತೋರಿಸುವದು. ಶಿಕ್ಷಕನು ಬಿದರಿನ ಕುಂಚ, ರಟ್ಟಿನ ಹಣಿಗೆಯನ್ನು ಉಪಯೋಗಿಸುವದರ ಬಗೆಗೆ ಚರ್ಚೆ ಮಾಡುವದು. ಕಾರ್ಯ ಮಾಡುವಾಗ ನೆನಸಿನಲ್ಲಿಡತಕ್ಕ ಸಂಗತಿಗಳ

			(ಶಿಕ್ಷಕರು ನೀರಿನಲ್ಲಿ ತಯಾರಿಸಿದ ಬಣ್ಣದಿಂದ ಕಾಗದದ ಮೇಲೆ ಪಟ್ಟೆ ಎಳೆದು ನಕ್ಷೆ ತೆಗೆಯಲು ಪ್ರಯುಕ್ತಿಸುವದು. ಆ ಮೇಲೆ ಬಾಲಕರಿಂದ ಉತ್ತರ ತಕ್ಕೊಳ್ಳುವದು.)
			ಬೇರೆ ಬೇರೆ ಗುಂಪಿನವರಿಗೆ ಯಾವ ಯಾವ ಬಣ್ಣದ ಪಟ್ಟೆಗಳ ಕಾಗದವನ್ನು ತಯಾರ ಮಾಡಬೇಕಾಗಿದೆ ಎಂಬುದನ್ನು ಕೇಳಿಕೊಂಡು ಅವುಗಳಂತೆ ಬಣ್ಣಗಳನ್ನು ಮಾಡಿ ತೋರಿಸುವದು.
	ನೆನಪಿನಲ್ಲಿಡತಕ್ಕ ಸಂಗತಿಗಳು	(೧) ಸರಿಯನ್ನು ಅತಿಯಾಗಿ ತಕ್ಕೊಳ್ಳಬಾರದು. (೨) ಒಂದು ಪ್ಲೇಟಿನಲ್ಲಿಯ ಬ್ರಶ್‌ನ್ನು ಮತ್ತೊಂದರಲ್ಲಿ ಉಪಯೋಗಿಸಬಾರದು. (೩) ಬಣ್ಣ ಕೆಳಗೆ ಬಿದ್ದು ಹೊಲಸಾಗದಂತೆ ನೋಡಿಕೊಳ್ಳುವದು	ಶಿಕ್ಷಕನು ಬಾಲಕರಿಂದ ಕಾರ್ಯ ಮಾಡುವಾಗ ನೆನಪಿನಲ್ಲಿಡತಕ್ಕ ಸಂಗತಿಗಳ ಬಗ್ಗೆ ಕೇಳಿಕೊಳ್ಳುವದು.
	ಬಾಲಕರ ಕೃತಿ		ಶಿಕ್ಷಕರು ನಿಯಮಿಸಿದ ವಿದ್ಯಾರ್ಥಿಗಳಿಂದ ಸಾಮಾನುಗಳನ್ನು ವ್ಯವಸ್ಥಿತವಾಗಿ ಹಂಚಿಸುವದು. ಬೇರೆಬೇರೆ ಗುಂಪಿನವರು ಹೇಳಿದ ಬಣ್ಣಗಳನ್ನು ತಯಾರಿಸಲು ಹೇಳುವದು. ಕಾಗದಕ್ಕೆ ಬಣ್ಣ ಹಚ್ಚಲು ಹೇಳುವದು. ಶಿಕ್ಷಕರು ವರ್ಗದ ಕಾರ್ಯವನ್ನು ನಿರೀಕ್ಷಿಸುವದು; ತಪ್ಪಿದ್ದಲ್ಲಿ ತಿದ್ದುವದು; ಮಾರ್ಗದರ್ಶನ ಮಾಡುವದು.
೪) ಪರಿಶೀಲನೆ	i) ಯೋಜನೆಗೂ ಆದ ಕೃತಿಗೂ ತುಲನೆ ಮಾಡುವದು.		ಶಿಕ್ಷಕರು, ಇಟ್ಟುಕೊಂಡ ಯೋಜನೆಗೂ ಆದ ಕೃತಿಗೂ ತುಲನೆ ಮಾಡಿ ತಪ್ಪಿದಲ್ಲಿ ಕಾರಣದ ಬಗ್ಗೆ ಚರ್ಚೆ ಮಾಡುವದು.
	ii) ಕಾರ್ಮಿಕ ತಪ್ಪುಗಳು		ಬಾಲಕರ ಕೃತಿಗಳನ್ನು ನಿರೀಕ್ಷಿಸಿ ಆದ ತಪ್ಪುಗಳನ್ನು ಅವರ ಗಮನಕ್ಕೆ ತಂದು ಕೊಡುವದು. (ತಪ್ಪು) ಮಾಡಿದ ಬಾಲಕನ ಹೆಸರನ್ನು ಹೇಳತಕ್ಕದ್ದಲ್ಲ. ಉತ್ತಮ ಕಾರ್ಯ ಮಾಡಿದವರನ್ನು ಪ್ರೋತ್ಸಾಹಿಸವದು.
	iii) ಆಕಸ್ಮಿಕ ಘಟನೆಗಳು		ಆಕಸ್ಮಿಕ ಘಟನೆಗಳು ಸಂಭವಿಸಿದಲ್ಲಿ ಅವುಗಳ ಕಾರಣ, ನಿವಾರಣೋಪಾಯಗಳ ಬಗ್ಗೆ ಚರ್ಚೆ ಮಾಡುವದು.

೧	೨	೩	೪
	iv) ತಗಲಿದ ವೆಚ್ಚ	ಸರಿ ಬಣ್ಣಗಳು ಹಾಳೆ ಆ ಪೈ. ೨ ೦ ೩ ೦ ೩ ೦ ೮ ಆಣೆ	ಒಟ್ಟುವೆಚ್ಚವನ್ನು ಕಂಡು ಹಿಡಿದು ಒಂದೊಂದಕ್ಕೆ ತಗಲಿದ ಖರ್ಚನ್ನು ತೆಗೆದು ಪೇಟೆಯಲ್ಲಿ ದೊರೆಯುವ ಧಾರಣೆಗೂ ಇದಕ್ಕೆ ಬಿದ್ದ ಬೆಲೆಗೂ ತುಲನೆ ಮಾಡಿ ಸ್ವತಃ ಮಾಡಿಕೊಳ್ಳುವದರಿಂದ ಲಾಭ ಉಂಟೆಂಬ ಭಾವನೆಯನ್ನು ತಂದು ಕೊಡುವದು.
೫) ರೂಢಿ		 ನಕ್ಷೆ ತೆಗೆಯಲು ಬರಲೆಂದು ಕೊಡಿಸವರು. ಅವ್ಯಕ್ತ ಶಿಲೆಯ ಹಾಳೆ ಎಂದು ಕರೆಯುವರು. ಕೆಂಪು, ನೀಲಿ, ಹಳದಿ. ನೀಲಿ + ಹಳದಿ = ಹಸಿರು. ಕೆಂಪು + ಹಳದಿ = ಕೇಶರಿ. ಕೆಂಪು + ನೀಲಿ = ಜಾಂಬಳಿ. ಅವುಗಳನ್ನು ತಯಾರು ಮಾಡಲು ಬರುವದಿಲ್ಲ. ಮೂಲ ಬಣ್ಣಗಳು ಅಥವಾ ಮುಖ್ಯ ಬಣ್ಣಗಳು. ದ್ವಿಜನಿತ ಬಣ್ಣಗಳು (ಉಪಬಣ್ಣಗಳು) ಅನ್ನುವರು.	ಇಲ್ಲಿಯ ವರೆಗೆ ನೀವು ಏನು ಮಾಡಿದಿರಿ ? ಬಣ್ಣದ ಹಾಳೆಯನ್ನು ಮಾಡುವ ರೀತಿಯನ್ನು ಹೇಳಿರಿ. (ಬೇರೆ ಬೇರೆ ಬಾಲಕರಿಂದ ಅಷ್ಟಷ್ಟೆ ವಿವರವನ್ನು ಕೇಳಿಕೊಳ್ಳುವದು.) ಬಣ್ಣದಲ್ಲಿ ಸರಿಕೂಡಿಸುವ ಕಾರಣವೇನು ? ಈ ಬಣ್ಣದ ಹಾಳೆಗೆ ಏನೆಂದು ಕರೆಯುವರು ? ನಾನು ಮೊದಲು ತಂದ ಬಣ್ಣಗಳು ಯಾವವು ? ಅವುಗಳಿಂದ ನಾವು ಮಾಡಿಕೊಂಡ ಬಣ್ಣಗಳು ಯಾವವು ? ಅವುಗಳನ್ನು ಹೇಗೆ ತಯಾರಿಸಿದೆವು ? (ಶಿಕ್ಷಕನು ಬಾಲಕರಿಂದ ಉತ್ತರ ತಕ್ಕೊಂಡು ಪುನಃ ಕೃತಿ ಮಾಡಿ ತೋರಿಸಿ ಕ. ಹ. ದ ಮೇಲೆ ಬರೆಯುತ್ತ ಸಾಗುವದು.) ಮತ್ತಾವ ಬಣ್ಣಗಳನ್ನು ಮಾಡಿಕೊಳ್ಳಲು ಬರುವದು? (ಶಿಕ್ಷಕನು ಉಳಿದ ಬಣ್ಣಗಳನ್ನು ಮಾಡಿ ತೋರಿಸಿ ಕ. ಹ. ಮೇಲೆ ಬರೆಯುವದು.) ನಾವು ಮೊದಲು ತಂದ ಬಣ್ಣಗಳನ್ನು ಹೇಗೆ ಮಾಡುವರು ? ಅವು ಎಲ್ಲ ಸಿಗುವವು ? ಅವುಗಳಿಗೆ ಎಂಥ ಬಣ್ಣಗಳು ಎಂದು ಕರೆಯುವರು? ಅವುಗಳಿಂದ ನಾವು ಮಾಡಿಕೊಂಡ ಬಣ್ಣಗಳು ಯಾವವು ? ಅವುಗಳಿಗೆ ಎಂಥ ಬಣ್ಣಗಳು ಅನ್ನುವರು ?
೧	೨	೩	೪

		೩	೪
ಪುನರವ ಲೋಕನ		(i) ಚಿತ್ರ ಕಲೆಯಲ್ಲಿ. (ii) ಮನೆಗಳಿಗೆ, ಸಾಲೆ ಕಚೇರಿಗಳ ಗೋಡೆಗೆ ಹಚ್ಚಲಿಕ್ಕೆ (iii) ಬಣ್ಣದ ಹಾಳೆಗಳನ್ನು ತಯಾರಿಸಲಿಕ್ಕೆ **ಮುಖ್ಯ ಬಣ್ಣಗಳು :—** ಕೆಂಪು, ನೀಲಿ, ಹಳದಿ. **ಉಪ ಬಣ್ಣಗಳು :—** ಹಸಿರು, ಕೇಸರಿ, ಜಾಂಬಳಿ. **ಮಾಡುವ ರೀತಿ :—** ನೀಲಿ + ಹಳದಿ = ಹಸಿರು. ಕೆಂಪು + ಹಳದಿ = ಕೇಸರಿ. ಕೆಂಪು + ನೀಲಿ = ಜಾಂಬಳಿ.	ಇಂಥ ಬಣ್ಣಗಳನ್ನು ಎಲ್ಲೆಲ್ಲಿ ಉಪಯೋಗಿಸುವರು ? ಮುಖ್ಯ ಬಣ್ಣಗಳು ಯಾವವು ? ಉಪಬಣ್ಣಗಳು ಯಾವವು ? ಅವುಗಳನ್ನು ಮಾಡುವ ರೀತಿ ಹೇಗೆ ? ಒಂದೊಂದನ್ನಾಗಿ ಕೇಳಿಕೊಳ್ಳುವದು.) ಶಿಕ್ಷಕನು ಬಾಲಕರ ಉತ್ತರಗಳನ್ನು ಕ. ಹ. ಮೇಲೆ ನೀಟಾಗಿ ಬರೆಯುವದು. ಅವುಗಳನ್ನು ಬಾಲಕರಿಗೆ ಬರೆದುಕೊಳ್ಳಲು ಹೇಳುವದು.)
೫) ಗೃಹ ಪಾಠ	**ಉಪಬಣ್ಣಗಳನ್ನು ಮಾಡುವ ರೀತಿಯನ್ನು ಚೆನ್ನಾಗಿ ಮನನ ಮಾಡಿಕೊಂಡು ಬನ್ನಿರಿ.**		

ಶ್ರೀ. ಎಸ್. ಎಸ್. ಭಂಡಾರಕರವರು

(ಮುಂಬಯಿ ರಾಜ್ಯದ ನೂತನ ಮುಖ್ಯ ಶಿಕ್ಷಣಾಧಿಕಾರಿ)

ಲೇ : ಶ್ರೀ. ಶಿಂತ್ರಿ ಬಸಪ್ಪನವರು, ಬಿ. ಎ. ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ದಕ್ಷಿಣ ಭಾಗ, ಧಾರವಾಡ

ಮನೆತನ ಹಾಗೂ ಶಿಕ್ಷಣ

ಭಂಡಾರಕರ ಮನೆತನವು ಮಹಾರಾಷ್ಟ್ರದಲ್ಲಿಯ ಸುಪ್ರಸಿದ್ಧ ಮನೆತನಗಳಲ್ಲೊಂದು. ಅದು ಸುಪ್ರ ವಿದ್ವಿಷ್ಟೇ ಸುಸಂಸ್ಕೃತವಿದೆ. ಆ ಮನೆತನದಲ್ಲಿ ಹೆಣ್ಣು-ಗಂಡು ಎಲ್ಲರೂ ಉಚ್ಚ ಶಿಕ್ಷಣವನ್ನು ಹೊಂದಿ ಹೇ ಪದವಿಯನ್ನು ಪಡೆದವರೇ ಇದ್ದಾರೆ. ಸಂಸ್ಕೃತ ಭಾಷೆಯಲ್ಲಿ ಆ ಕಾಲದ ಏಕಮೇವಾ ದ್ವಿತೀಯ ಪಂಡಿತರ ಕೀರ್ತಿವೆತ್ತ ದಿವಂಗತ ಡಾ. ರಾಮಕೃಷ್ಣ ಭಂಡಾರಕರವರ ಹೆಸರನ್ನು ಕೇಳದ ಭಾರತೀಯನು ಸಿಗುವ ಅಪರೂಪ. ಅವರು ನಮ್ಮ ಚರಿತ್ರನಾಯಕರ ಅಜ್ಜಂದಿರು. ನೊನ್ನೆ ಮೊನ್ನೆಯ ವರೆಗೆ ಡೆಪ್ಯುಟಿ ಡಾಯ ರರಾಗಿದ್ದ ಹಾಗೂ ಈಗ ಮುಂಬಯಿಯಲ್ಲಿಯ ಸೆಕಂಡರಿ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದ ಶ್ರೀ ಸುಲಭಾ ಪಾಣಂದೀಕರವರು ಡಾ. ರಾಮಕೃಷ್ಣರವರ ಮೊಮ್ಮಗಳು. ಇಂತಹ ಉಜ್ವಲ ಪರಂಪರೆಯ ಮನೆತನದಲ್ಲಿ ಶ್ರೀಯುತರು ದಿನಾಂಕ ೧೭-೧೨-೧೯೦೩ ರಂದು ಜನಿಸಿದರು. ಅವರು ತಮ್ಮ ಮಾಧ್ಯ ಶಿಕ್ಷಣವನ್ನು ಮುಂಬಯಿಯಲ್ಲಿಯ ವಿಲ್ಸನ್ ಹಾಯಸ್ಕೂಲದಲ್ಲಿಯೂ ಉಚ್ಚ ಶಿಕ್ಷಣವನ್ನು ಎಲ್‌ಫಿನ್‌ಸ್ಟ ಕಾಲೇಜದಲ್ಲಿಯೂ ಹೊಂದಿದರು. ಇಂಗ್ಲೀಷವನ್ನು ತಮ್ಮ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಮುಂಬ ವಿಶ್ವವಿದ್ಯಾಲಯದ ಬಿ. ಎ. ಪರೀಕ್ಷೆಯನ್ನು ೧೯೨೪ರಲ್ಲಿ ಉಚ್ಚ ತರಗತಿ (Honours) ಯಲ್ಲಿ ಪಾಸಾದ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಇಂಗ್ಲಂಡಕ್ಕೆ ಪ್ರಯಾಣ ಬೆಳೆಯಿಸಿ ಅಲ್ಲಿ ಎರಡು ವರ್ಷಗಳ ವರೆಗೆ ಅಭ್ಯಾಸ ಮಾ ಇಂಗ್ಲೀಷವನ್ನೇ ತಮ್ಮ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಲಂಡನ್ ವಿಶ್ವವಿದ್ಯಾಲಯದ ಬಿ. ಪರೀಕ್ಷೆಯಲ್ಲಿ ಉಚ್ಚಶ್ರೇಣಿ (Honours) ಯಲ್ಲಿ ತೇರ್ಗಡೆ ಹೊಂದಿದರು.

ಶಿಕ್ಷಣ ಕ್ಷೇತ್ರದಲ್ಲಿಯ ಸೇವೆ

ಸ್ವದೇಶಕ್ಕೆ ಮರಳಿದ ಕೂಡಲೆ ಬಡೋದೆಯ ಕಾಲೇಜದಲ್ಲಿ ಇಂಗ್ಲೀಷ ಭಾಷೆಯ ಪ್ರಾಧ್ಯಾ (Professor of English) ರೆಂದು ನಿಯಮಿಸಲ್ಪಟ್ಟರು. ಅಲ್ಲಿ ಎರಡು ವರ್ಷಗಳ ವರೆಗೆ ಚನ್ನಾಗಿ ಕೆ ಮಾಡಿ ಉತ್ತಮ ಪ್ರಾಧ್ಯಾಪಕರೆಂಬ ಹೆಸರನ್ನು ಗಳಿಸಿಕೊಂಡರು. ಮುಂಬಯಿ ಸರಕಾರದವರು ಅವರ ವಿದ್ವ ಯನ್ನೂ ಇಂಗ್ಲೀಷ ಸಾಹಿತ್ಯದ ಮೇಲೆ ಪಡೆದ ಸ್ವಾಮಿತ್ವದ ಕೀರ್ತಿಯನ್ನೂ ಮನಗಂಡು ಪ್ರಥಮ ಶ್ರೇ (Class I) ಯ ಆಫೀಸರರೆಂದು ಅವರನ್ನು ೧೯೩೦ರಲ್ಲಿ ಆಯ್ದುಕೊಂಡು ಅಹಮ್ಮದಾಬಾದದಲ್ಲಿಯ ಗುಜ ರಾತ ಕಾಲೇಜದಲ್ಲಿ ಇಂಗ್ಲೀಷ ಭಾಷೆಯ ಪ್ರಾಧ್ಯಾಪಕರೆಂದು ನಿಯಮಿಸಿದರು. ಅಲ್ಲಿ ಇಂಗ್ಲೀಷ ಭಾಷಾ ಪ್ರಾಧ್ಯಾಪಕರಾಗಿಯೂ ಹೋಸ್ಟೆಲ್‌ದ ಮೇಲ್ವಿಚಾರಕ (Hostel Rectur) ರಾಗಿಯೂ ೧೯೪೦ರ ವ ಉತ್ತಮ ರೀತಿಯಿಂದ ಸೇವೆ ಸಲ್ಲಿಸಿದರು. ೧೯೪೦ ರಿಂದ ೧೯೪೭ರ ಮೇ ತಿಂಗಳ ವರೆಗೆ ಮುಂಬಯಿಯಲ್ಲಿ ಎಲ್‌ಫಿನ್‌ಟನ್ ಕಾಲೇಜದಲ್ಲಿ ಇಂಗ್ಲಿಷ ಭಾಷೆಯ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ೧೯೪೭ರ ಜ ದಿಂದ ೧೯೫೧ರ ಮೇ ತಿಂಗಳ ವರೆಗೆ ಅಹಮ್ಮದಾಬಾದದಲ್ಲಿಯ ಗುಜರಾತ ಕಾಲೇಜದ ಪ್ರಿನ್ಸಿಪಾಲರಾದ

ಶ್ರೀ. ಎಸ್. ಎಸ್. ಭಂಡಾರಕರವರು

೧೯೪೯ರ ಜೂನದಿಂದ ೧೯೪೯ ನವಂಬರದ ವರೆಗೆ ಎಲ್‌ಫಿನ್‌ಸ್ಟನ್ ಕಾಲೇಜದ ಪ್ರಿನ್ಸಿಪಾಲರೆಂದು ಸೇವೆ ಸಲ್ಲಿಸಿದರು. ೧೯೪೯ ನವಂಬರದಲ್ಲಿ ಡೆಪ್ಯುಟಿ ಡಾಯರೆಕ್ಟರರೆಂದು ನೇಮಕವನ್ನು ಹೊಂದಿ ಆ ಹುದ್ದೆಯಲ್ಲಿಯೇ ೧೯೫೪ನೆಯ ಜೂನ ತಿಂಗಳ ದಿನಾಂಕ ೨೧ರ ವರೆಗೆ ಕೆಲಸ ಮಾಡಿದರು. ದಿನಾಂಕ ೨೦-೬-೧೯೫೪ ರಂದು ರ್‍ಯಾಂಗಲರ ಪಾವಟೆಯವರು ನಿವೃತ್ತಿಯನ್ನು ಪಡೆದರಷ್ಟೆ. ದಿನಾಂಕ ೨೧-೬-೧೯೫೪ರಿಂದ ಅವರು ಮುಂಬಯಿ ರಾಜ್ಯದ ಮುಖ್ಯ ಶಿಕ್ಷಣಾಧಿಕಾರಿ (Director of Education) ಗಳಾಗಿ ನೇಮಿಸಲ್ಪಟ್ಟಿದ್ದಾರೆ. ಈ ಒಳಗಾಗಿ ೧೯೫೨ರ ಅಗಸ್ಟ ತಿಂಗಳಲ್ಲಿ 'ವಿಶ್ವ-ನಾಗರಿಕತ್ವದ ಬಗೆಗೆ ಶಿಕ್ಷಣ' (Educatien for world Citizenship) ವೆಂಬ ವಿಷಯಕ್ಕೋಸ್ಕರ ಹಾಲಂಡದಲ್ಲಿ ಕಲೆತ ಯುನೆಸ್ಕೋ (ಯುಕ್ತ ರಾಷ್ಟ್ರಗಳ ಶೈಕ್ಷಣಿಕ ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಂಘ) ದ ಅಧಿವೇಶನ (Seminar) ಕ್ಕೆ ಕಳುಹಲ್ಪಟ್ಟ ಭಾರತೀಯ ನಿಯೋಗ (Indian Delegation) ದ ಮುಖಂಡರೆಂದು ನೇಮಕವನ್ನು ಹೊಂದಿದ್ದರು. ಇದರ ಮೇಲಿಂದ ಅವರ ಯೋಗ್ಯತೆಯು ಎಂತಹದಿರಬೇಕೆಂಬುದನ್ನು ನಾವು ಹೇಳುವದಕ್ಕಿಂತ ಓದುಗರೇ ಊಹಿಸುವದೊಳಿತು. ಕೊನೆಯ ಮಾತು.

ಅವರು ಕೋಮಲ ಸ್ವಭಾವದವರು. ಶ್ರೀ. ಪಾವಟೆಯವರಂತೆ ಅವರಾದರೂ ಅಂತಃಕರುಣಿಗಳೂ ಕರ್ತವ್ಯದಕ್ಷರೂ ಕಾರ್ಯಕುಶಲರೂ ಇರುವರೆಂದು ನಮ್ಮ ಕೇಳಿಕೆಯಲ್ಲಿದೆ. ಶಿಕ್ಷಣ ಕ್ಷೇತ್ರದಲ್ಲಿ ಇದು ವರೆಗೆ ಮಿಂಚಿನ ವೇಗದಿಂದಾದ ಮಾರ್ಪಾಟುಗಳನ್ನೂ ಸುಧಾರಣೆಗಳನ್ನೂ ಮುಂದುವರಿಸಿ ಅವರು ತಮ್ಮ ಕಾಲಕೀರ್ದಿಯಲ್ಲಿ ಸರಕಾರಕ್ಕೆ ಕಾಲಕಾಲಕ್ಕೆ ಯೋಗ್ಯ ಸಲಹೆ-ಸೂಚನೆಗಳನ್ನು ಕೊಟ್ಟು ಇನ್ನೂ ಹೆಚ್ಚಿನ ಹಿತಾವಹವಾದ ಬದಲಾವಣೆಗಳನ್ನೂ ಸುಧಾರಣೆಗಳನ್ನೂ ಜರುಗಿಸುವರೆಂದು ಜನತೆಯು ಅವರ ಬಗೆಗೆ ಆಶೆ-ಆಕಾಂಕ್ಷೆಗಳನ್ನು ತಳೆದಿರುವದರಲ್ಲೇನಾಶ್ಚರ್ಯ? ಅವರ ಆಡಳಿತೆಯಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಇನ್ನೂ ಹೆಚ್ಚಿನ ಸುಧಾರಣೆಗಳು ಕಾರ್ಯರೂಪಕ್ಕೆ ಬರಲೆಂದೂ ಸಕ್ತಿಶಿಕ್ಷಣ, ಜೀವನಶಿಕ್ಷಣ, ಸಮಾಜಶಿಕ್ಷಣಗಳ ವಿಸ್ತರಣೆಯಾಗಲೆಂದೂ ರಾಜ್ಯದಲ್ಲಿಯ ನಿರಕ್ಷರತೆಯ ಪ್ರಮಾಣವು ಭರದಿಂದ ಕುಗ್ಗಲೆಂದೂ ನಾವು ಹಾರೈಸುತ್ತೇವೆ.

ಈ ಸಂದರ್ಭದಲ್ಲಿ ಒಂದು ಆನಂದದ ಸಂಗತಿಯೆಂದರೆ ಅವರ ಧರ್ಮಪತ್ನಿಯವರು ಸಹ ತಮ್ಮ ಪತಿಗೆ ಅನುಗುಣವಾಗುವಂತೆ ಉಚ್ಚ ಶಿಕ್ಷಣವನ್ನು ಹೊಂದಿದ್ದಾರೆ. ಅವರೂ ಇಂಗ್ಲೀಷ ಭಾಷೆಯನ್ನೇ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಲಂಡನ್ ವಿಶ್ವವಿದ್ಯಾನಿಲಯದ ಉಚ್ಚ ಪದವಿಯನ್ನು ಪಡೆದಿದ್ದಾರೆ. ಶ್ರೀಯುತರು ಅಹಮ್ಮದಾಬಾದದಲ್ಲಿದ್ದಾಗ ಶ್ರೀಮತಿ ಭಂಡಾರಕರವರು ಅಲ್ಲಿಯ ಎಸ್. ಎಲ್. ಡಿ. ಕಾಲೇಜದಲ್ಲಿ ಇಂಗ್ಲೀಷ ಭಾಷೆಯ ಪ್ರಾಧ್ಯಾಪಿಕೆಯರಾಗಿ ಕೆಲ ಕಾಲ ಕೆಲಸ ಮಾಡಿದರೆಂದು ವದಂತಿಯಿದೆ. ಮೇಲಾಗಿ, ಇಂಗ್ಲೀಷ ಸಾಹಿತ್ಯದ ಹೊತ್ತಿಗೆಗಳನ್ನು ಕುರಿತು ಅವರ ವಿಚಾರಪರಿಪ್ಲುತವಾದ ವಿಮರ್ಶಾತ್ಮಕ ಭಾಷಣಗಳು ಮುಂಬಯಿ ರೇಡಿಯೋದಲ್ಲಿ ಆಗಾಗ್ಗೆ ಜರುಗುತ್ತಲಿವೆ. ಇಂಗ್ಲೀಷ ಭಾಷೆಯ ಮೇಲೆ ಅವರ ಪತಿಯವರಂತೆ ಅವರದಾದರೂ ಪ್ರಭುತ್ವವು ಚನ್ನಾಗಿದೆಯೆಂಬ ಮಾತು ಇದರಿಂದ ಸ್ಪಷ್ಟವಾಯಿತಲ್ಲವೇ? ದಂಪತಿಗಳೀರ್ವರು ಇಷ್ಟೊಂದು ಅತ್ಯುಚ್ಚ ಶಿಕ್ಷಣವನ್ನು ಪಡೆದ ಉದಾಹರಣೆಗಳು ನಮ್ಮ ಜನರಲ್ಲಿ ಸಿಗುವದು ಅತಿ ವಿರಳವೆಂದೇ ನಮ್ಮ ಪ್ರಾಂಜಲ ಮತ. ಈ ಸಂತೋಷದಾಯಕ ಸಂಗತಿಯು ಶ್ರೀ. ಭಂಡಾರಕರವರ ಕೌಟುಂಬಿಕ ಜೀವನಕ್ಕೊಂದು ಹೆಚ್ಚಿನ ಶೋಭೆಯನ್ನು ತಂದು ಕೊಟ್ಟಿದೆ. ಶ್ರೀಮತಿ ಭಂಡಾರಕರವರು ಸ್ತ್ರೀಶಿಕ್ಷಣದಲ್ಲಿ ಆಸ್ಥೆವಹಿಸಿ ಅದರಲ್ಲಿ ಹೆಂಗಳೆಯರಿಗೆ ಹಿತಕಾರಿಯಾಗುವ ಸುಧಾರಣೆಗಳನ್ನುಂಟು ಮಾಡಲು ತಮ್ಮ ಪತಿಯವರಿಗೆ ಸಹಾಯಕರಾಗಿ ನಿಲ್ಲುವರೆಂದು ನಾವು ನೆರೆನಂಬಿದ್ದೇವೆ. ನಮ್ಮ ಬಯಕೆಗಳನ್ನೆಲ್ಲ ಈಡೇರಿಸಲು ಆ ದಯಾಸಾಗರನಾದ ಪರಮಾತ್ಮನು ಈ ಆದರ್ಶ ದಂಪತಿಗಳಿಗೆ ಆಯುರಾರೋಗ್ಯವನ್ನೂ ಹುರುಪು-ಹುಮ್ಮಸಗಳನ್ನೂ ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

— ಸಿರಿಗನ್ನಡಂ ಗೆಲ್ಗೆ —

ಟ್ರೇನಿಂಗ ಸಂಸ್ಥೆಗಳಲ್ಲಿ
ಶ್ರೀಮತಿ ಇಂದುಮತಿ ಸೇಠರು

ವರದಿಗಾರ : **ಶ್ರೀ. ಗುರುನಾಥ ಜೋಶಿ**

ಧಾರವಾಡ ೨೬. ಮುಂಬಯಿ ರಾಜ್ಯದ ಶಿಕ್ಷಣ ಶಾಖೆಯ ಉಪಮಂತ್ರಿಗಳಾದ ಶ್ರೀಮತಿ ಇಂ ಮತಿ ಸೇಠ ಅವರು ಪದವೀಧರರ ಜೀವನ ಶಿಕ್ಷಣ ಕೇಂದ್ರದ ಹಳೆಯ ಬಳಗದ ಪರವಾಗಿ ಗಂಡು ಮ ಸರಕಾರಿ ಟ್ರೇನಿಂಗ ಕಾಲೇಜದ ಪ್ರಾರ್ಥನಾ-ಮಂದಿರದಲ್ಲಿ ೨೫ನೆಯ ದಿನಾಂಕದಂದು ರಾತ್ರಿ ೯ ಗಂಟೆಗೆ ಸ ಮನರಂಜನೆಯ ಕಾರ್ಯಕ್ರಮದ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಈ ಕಾರ್ಯಕ್ರಮದಲ್ಲಿ ಗಂ ಮಕ್ಕಳ ಮತ್ತು ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜುಗಳೂ, ವನಿತಾ ಸೇವಾ ಸಮಾಜದ ಮ ಬಾಸೆಲ್ ಮಿಶನ್ನಿನ ಟ್ರೇನಿಂಗ ಕಾಲೇಜುಗಳೂ, ಪದವೀಧರರ ಬೆಸಿಕ್ ಟ್ರೇನಿಂಗ ಕಾಲೇಜೂ ಇವು ಪ್ರಾಕ್ಟೀಸಿಂಗ ಸ್ಕೂಲು ಮತ್ತು ಹೈಸ್ಕೂಲುಗಳೂ ಭಾಗವಹಿಸಿದ್ದವು. ಈ ಸಂಸ್ಥೆಗಳ ಶಿಕ್ಷಕ-ಶಿಕ್ಷಿಕೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರೂ ಮುಖ್ಯಾಧ್ಯಾಪಕರೂ ಮುಖ್ಯಾಧ್ಯಾಪಿಕೆಯರೂ ಅಲ್ಲದೆ ಅನೇಕ ಶಿಕ್ಷಣ ಭಿಮಾನಿಗಳೂ ಮುಂಬಯಿ ರಾಜ್ಯದ ವಿದ್ಯಾಶಾಖೆಯ ಡೆಪ್ಯುಟಿ ಡೈರೆಕ್ಟರ ಶ್ರೀ. ಬಿ. ಎಂ. ಮೀಮಾಂಸಿ ಅವ ಧಾರವಾಡ ಜಿಲ್ಹೆಯ ಎಜ್ಯುಕೇಶನಲ್ ಇನಸ್ಪೆಕ್ಟರ ಶ್ರೀ. ಕೆ. ಬಿ. ತೇರಗಾಂವಕರ ಅವರೂ ಸಭೆಗೆ ಆಗಮಿ ಸಿದ್ದರು. ವಿವಿಧ ವಾದ್ಯಗಳ ವಾದನ, ಕೋಲಾಟ, ನಾಟಕ, ನೃತ್ಯ, ಕಾವ್ಯಗಾಯನ ಮುಂತಾದ ಕಾರ್ಯಕ್ರ ಗಳು ಜರುಗಿದ ನಂತರ ಶ್ರೀಮತಿ ಇಂದುಮತಿ ಸೇಠ ಅವರು 'ಜೀವನ ಶಿಕ್ಷಣದಲ್ಲಿ ಮನರಂಜನೆಯ ಕಾ ಕ್ರಮಗಳಿಗೆ ಯಾವ ಸ್ಥಾನವಿದೆ ಎಂಬುದನ್ನು ನೀವು ಬಹುತರವಾಗಿ ಎಲ್ಲರೂ ಅರಿತಿದ್ದೀರಿ. ಇಂತಹ ಕಾ ಕ್ರಮಗಳಿಂದ ವ್ಯಕ್ತಿಯ ಭಾವನೆಗಳು ಉದಾತ್ತಗೊಳುತ್ತವೆ, ಮನಸ್ಸು ಪ್ರಫುಲ್ಲಿತವಾಗುತ್ತದೆ. ಸಹಕಾ ಭಾವನೆಯೂ ಬೆಳೆಯುತ್ತದೆ. ಸ್ಥಳಿಕ ಎಲ್ಲ ಟ್ರೇನಿಂಗ ಸಂಸ್ಥೆಗಳು ಒಂದುಗೂಡಿ ಕಾರ್ಯಕ್ರಮ ನಡೆಸಿದು ಅಭಿನಂದನೀಯವಾಗಿದೆ. ನಾವು ತಡಮಾಡಿ ಬಂದುದಕ್ಕೆ ಕ್ಷಮಿಸಿರಿ' ಎಂದು ಹೇಳಿದ ಬಳಿಕ ಧನ್ಯವಾ ಸಮರ್ಪಣೆಯಾದ ನಂತರ ವಂದೇಮಾತರಂ ಗೀತೆಯೊಡನೆ ಕಾರ್ಯಕ್ರಮವು ಕೊನೆಗಂಡಿತು.

ತಾರೀಖು ೨೬ ರಂದು ಶ್ರೀಮತಿ ಇಂದುಮತಿ ಸೇಠ ಅವರು ಸುಮಾರು ಹನ್ನೆರಡೂವರೆ ಗಂ ಸರಕಾರೀ ಟ್ರೇನಿಂಗ ಕಾಲೇಜದ ಒಕ್ಕಲತನದ ಫಾರ್ಮನ್ನು ನೋಡಿಕೊಂಡು ಹೆಣ್ಣುಮಕ್ಕಳ ಸರಕಾ ಹೈಸ್ಕೂಲನ್ನು ಸಂದರ್ಶಿಸಿ ಗಂಡುಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜಕ್ಕೆ ಆಗಮಿಸಿದರು. ಶಿಕ್ಷಕ ವಿದ್ಯಾ ರ್ಥಿಗಳ ಮುಖ್ಯ ಮಂತ್ರಿಯೂ ಕಾಲೇಜಿನ ಪ್ರಿನ್ಸಿಪಾಲರೂ ಅವರನ್ನು ಸ್ವಾಗತಿಸಿದರು. ಕಾಲೇಜದ ಶಿಕ್ಷ ಹಾಗು ವಿದ್ಯಾರ್ಥಿಗಳ ಮಂತ್ರಿಮಂಡಳದ ಪರಿಚಯವನ್ನು ಮಾಡಿಕೊಟ್ಟ ನಂತರ ಶ್ರೀಮತಿ ಇಂದುಮತಿ ಸೆ ಅವರು ವೃಕ್ಷಾರೋಪಣವನ್ನು ಮಾಡಿ ತುಂತುರು ಮಳೆಯ ಮಧ್ಯದಲ್ಲಿ ಇಂತೆಂದು ಭಾಷಣ ಮಾಡಿದರು-"ಇದೀ ವೃಕ್ಷಾರೋಪಣವನ್ನು ಮಾಡಲಾಯಿತು. ನೀವೆಲ್ಲರೂ ಮೂಲ ಶಿಕ್ಷಣದಲ್ಲಿ ತರಬೇತಿಯನ್ನು ಹೊಂದುತ್ತಿದ್ದೀ ನಿಮ್ಮಮೇಲೇ ಮೂಲ ಶಿಕ್ಷಣದ ಪ್ರಗತಿಯು ಅವಲಂಬಿಸಿದೆ. ನೀವು ಮೂಲ ಶಿಕ್ಷಣದ ತೋಟಿಗರಿದ್ದಂತೆ, ಇದೀ ನೆಟ್ಟ ಸಸಿಯು ಮೂಲ ಶಿಕ್ಷಣವಿದ್ದಂತೆ. ತೋಟಿಗನು ಸಸಿಯನ್ನು ಬೆಳಸಿ ವಿಕಸಿತಗೊಳಿಸುವಂತೆ ನೀ ಮೂಲ ಶಿಕ್ಷಣವನ್ನು ವಿಕಸಿತಗೊಳಿಸಿರಿ. ಮಹಾತ್ಮಾ ಗಾಂಧಿಯವರು ಮೂಲ ಶಿಕ್ಷಣವನ್ನು ಪ್ರಪಂ

ಮುಂದಿಟ್ಟರು. ಈ ಶಿಕ್ಷಣದಿಂದ ಭಾರತದ ಪ್ರಗತಿಯನ್ನು ಸಾಧಿಸಬೇಕೆಂದು ಅವರ ಅಪೇಕ್ಷೆ ಇತ್ತು. ಅದನ್ನು ಈಡೇರಿಸುವದು ನಿಮ್ಮೆಲ್ಲರ ಕರ್ತವ್ಯವಾಗಿದೆ.'' ಹೀಗೆ ಭಾಷಣವನ್ನು ಮಾಡಿದ ನಂತರ ಉಪಮಂತ್ರಿಗಳು ಪ್ರಾಕ್ಟೀಸಿಂಗ ಸ್ಕೂಲಿಗೆ ಹೋದರು. ಅಲ್ಲಿಯ ಮುಖ್ಯ ಮಂತ್ರಿಯು ಅವರಿಗೆ ಎಲ್ಲ ವರ್ಗಗಳನ್ನು ತೋರಿಸಿದನು. ಆ ಮೇಲೆ ಟ್ರೇನಿಂಗ ಕಾಲೇಜದ ಪ್ರದರ್ಶನ, ನೆಯ್ಗೆಯ ವರ್ಗ, ಅಲ್ಪಾವಧಿ ನೆಯ್ಗೆಯ ವರ್ಗ ಹಾಗು ಜಿ. ಬಿ. ಟಿ. ಸಿಯ ನೆಯ್ಗೆಯ ಕೆಲಸವನ್ನು ನೋಡಿ ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿದರು.

ಉಪಮಂತ್ರಿಗಳು ಪದವೀಧರರ ಜೀವನ ಶಿಕ್ಷಣ ಕೇಂದ್ರದಲ್ಲಿ ಭೋಜನವನ್ನು ಮುಗಿಸಿಕೊಂಡು ಹೆಣ್ಣುಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜಿಗೆ ಸುಮಾರು ಮೂರು ಗಂಟೆಗೆ ಸಂದರ್ಶನವಿತ್ತರು. ಕಾಲೇಜದ ಮತ್ತು ಪ್ರಾಕ್ಟೀಸಿಂಗ ಸ್ಕೂಲಿನ ಪ್ರತಿಯೊಂದು ವರ್ಗವನ್ನು ಸಂದರ್ಶಿಸಿ ಹೊಲಿಗೆಯ ಹಾಗು ನೆಯ್ಗೆಯ ವರ್ಗವನ್ನು ನೋಡಿ ಸಂತೋಷವ್ಯಕ್ತ ಮಾಡಿದರು. ಕಾಲೇಜದ ಹಾಗೂ ಪ್ರಾಕ್ಟೀಸಿಂಗ ಸ್ಕೂಲಿನ ಮುಖ್ಯ ಮಂತ್ರಿಗಳು ಮಂತ್ರಿಗಳಿಗೂ ಡೆಪ್ಯುಟಿ ಡೈರೆಕ್ಟರರಿಗೂ ನೂಲಿನ ಮಾಲೆಯನ್ನು ಅರ್ಪಿಸಿ ಹೂವಿನ ತುರಾಯಿಯನ್ನು ಕೊಟ್ಟರು. ನಂತರ ಶಿಕ್ಷಣ ಶಾಖೆಯ ಉಪಮಂತ್ರಿಗಳೂ ಡೆಪ್ಯುಟಿ ಡೈರೆಕ್ಟರರೂ ಪ್ರಯಾಣ ಬೆಳೆಸಿದರು. ಈ ಮಹನೀಯರೊಂದಿಗೆ ಜಿಲ್ಹಾ ಶಿಕ್ಷಣಾಧಿಕಾರಿಗಳೂ ಪದವೀಧರರ ಜೀವನ ಶಿಕ್ಷಣಕೇಂದ್ರದ ಪ್ರಿನ್ಸಿಪಾಲರೂ ಆಗಮಿಸಿದ್ದರು. ಈ ಶಿಕ್ಷಣಾಧಿಕಾರಿಗಳೆಲ್ಲರೂ ಜೀವನ ಶಿಕ್ಷಣದ ಪ್ರಗತಿಯನ್ನು ನೋಡಿ ಮೆಚ್ಚುಗೆಯನ್ನು ವ್ಯಕ್ತಮಾಡಿದರು ಎಂಬುದು ಕನ್ನಡ ಜನತೆಗೆ ಅಭಿಮಾನದ ಸಂಗತಿಯಾಗಿದೆ.

ಪ್ರಾಥಮಿಕ ಶಿಕ್ಷಣ ಪ್ರಪಂಚ

(ಸುದ್ದಿ-ಸಾರ-ಸಂಗ್ರಹ)

(೧೯೫೪ ಜೂನದಿಂದ ೧೯೫೪ ಜುಲೈ ೮ರ ವರೆಗೆ)

ಕಲ್ಲೇದೇವರ—೧೫ ಊರಪ್ರಮುಖ ಹಾಗೂ ಶಾಲಾ ಸದಸ್ಯರ ಸಭೆಯಲ್ಲಿ ಬೀಟ ಆಫೀಸರ ಶ್ರೀ. ಎಚ್. ಜಿ. ಜೋಶಿ ಅವರು ವಾಚನಾಲಯದ ಮಹತ್ವವನ್ನು ಹೇಳಿ ಶಾಲೆಯಲ್ಲಿ ವಾಚನಾಲಯವಿರಬೇಕೆಂದು ತಿಳಿಸಿದರು. ಈ ಬಗ್ಗೆ ಒಂದು ನೂರು ರೂಪಾಯಿ ವರ್ಗಣಿಯೂ ಕೂಡಿಸಲ್ಪಟ್ಟಿತು.

ಖಜ್ಜಿಡೋಣಿ—೧೫. ಸಮಾಜ ಶಿಕ್ಷಣಾಧಿಕಾರಿಗಳಾದ ಶ್ರೀ. ಜೋಶಿಯವರು ಸಮಾಜ ಶಿಕ್ಷಣ ವರ್ಗವನ್ನು ತಪಾಸಿಸಿದರು. ಸಭೆಯಲ್ಲಿ ಅ। ಮಾ। ಶ್ರೀ. ವಾಸನದ ಅವರಿಗೆ ಮುಂಬಯಿ ಸರಕಾರದ ಪ್ರೌಢ ಶಿಕ್ಷಣದ ಪ್ರಶಸ್ತಿ ಪತ್ರವನ್ನು ಅರ್ಪಿಸಿದರು.

ಶೇರಗಾಂವ—೧೪. ಎ. ಬಿ. ಸ್ಕೂಲಿಗೆ ಗ್ರಾಮಪಂಚಾಯತಿ ಸಂಸ್ಥೆಯವರು ದೊಡ್ಡದೊಂದು ಕನ್ನಡಿಯನ್ನು ಕೊಟ್ಟರು ಮತ್ತು ಡೆ। ಎ। ಇ। ಶ್ರೀ. ಗುರಾಣಿಯವರು ಅದರ ಅನಾವರಣ ಸಮಾರಂಭವನ್ನು ಮಾಡಿದರು.

ಗದಗ—೧೪. ಶಾಲಾಸಮಿತಿಯ ಚೇರಮನ್ನರಾದ ಶ್ರೀ. ಚ. ಪ. ಮಾಶೆಟ್ಟರ ಅವರ ಹಿರಿಯತನ ಈ ವರ್ಷ ಪ್ರಾ. ಶಾ. ಪ್ರ. ಪತ್ರ ಪರೀಕ್ಷೆಯಲ್ಲಿ ೧ ಮತ್ತು ೨ ನೆಯ ಸ್ಥಾನಪಡೆದು ಉತ್ತೀರ್ಣರಾದ ವಿದ್ಯಾ ಗಳಿಗೂ, ಡ್ರಾಯಿಂಗ ಹಾಗೂ ಸ್ಕಾಲರಶಿಪ್ ಪಡೆದ ವಿದ್ಯಾರ್ಥಿಗಳಿಗೂ ಧಾರವಾಡ ಆಕಾಶವಾಣಿ ಕೇಂದ್ರ ಮಾದರಿಯ ಚಟುವಟಿಕೆಗಳನ್ನು ತೋರಿಸಿದವರಿಗೂ ನೈತಿಕ ಶಿಕ್ಷಣದಲ್ಲಿ ಪ್ರಥಮಸ್ಥಾನ ಪಡೆದವ ಇನಾಮುಗಳನ್ನು ಹಂಚುವ ಸಮಾರಂಭವು ನೆರವೇರಿತು. ಈ ಸಭೆಗೆ ಎ. ಓ. ಆವರಾದ ಶ್ರೀ. ಸಿ. ಹಿರೇಮಠ ಅವರೂ ಸಭೆಗೆ ಆಗಮಿಸಿ ಉದ್ಭೋಧಕ ಭಾಷಣ ಮಾಡಿದರು. ಧಾರವಾಡ ಜಿಲ್ಲಾ ಲೋ ಬೋರ್ಡಿನ ಎಲ್ಲ ಶಾಲೆಗಳಿಗೆ ೧ನೆಯ ನಂಬರು ಬಂದ ಶ್ರೀ. ಬಸವರಾಜ ಗೂಳಯ್ಯ ಪೂಜಾರ ಈತ ಶ್ರೀ. ಶಿಗ್ಲಿಮಠದ ಮಲ್ಲಿಕಾರ್ಜುನ ಸ್ವಾಮಿಗಳು ೨೫ ರೊ. ಗಳನ್ನು ಶ್ರೀ. ಆಯ್. ಎಸ್. ಸಂಕದ ಅ ಒಂದು ಬೆಳ್ಳಿಯ ಕಪ್ಪನ್ನೂ ಕೊಟ್ಟರು.

ಸೂಳೇಭಾವಿ—೧೨. ಸಮಾಜ ಶಿಕ್ಷಣಾಧಿಕಾರಿಗಳಾದ ಶ್ರೀ. ಆರ್. ಕೆ. ಮೆಣಸಿಯವರ ಅಧ್ಯ ಯಲ್ಲಿ ಸ್ಥಳೀಯ ಎಂಟೂ ವರ್ಗಗಳ ಸಮ್ಮೇಳನವು ಜರುಗಿತು. ಅನೇಕ ಮನರಂಜನೆಯ ಕಾರ್ಯಕ್ರಮ ಜರುಗಿತು.

ಹರಿಪುರ—೯. ಶ್ರೀ. ಶಂಕರ ಲಿಂಗೇಶ್ವರ ಶಾಲಾ ವಾಚನಾಲಯವು ೧೪-೬-೧೯೫೪ ರಂದು ಪ್ರಾ ವಾಯಿತು. ಶಿರಹಟ್ಟಿಯ ವಕೀಲರಾದ ಶ್ರೀ. ದೇಶಪಾಂಡೆಯವರು ಉದ್ಘಾಟಿಸಿದರು.

ಗೋಕರ್ಣ—೧೩. ಶ್ರೀ. ವಿನಾಯಕರಾವ ಚಿಕ್ಕರಮನೆಯವರಿಂದ ಚರ್ಚಾಕೂಟದ ಉದ್ಘಾಟನೆ ೧೦-೭-೫೪ ರಂದು ಮಾಡಲ್ಪಟ್ಟಿತು. ಸುಮಾರು ೨೦೦ ವಿದ್ಯಾರ್ಥಿಗಳು ಹಾಜರರಿದ್ದರು.

ಸಿರೂರ—೧೭. ಹೆಣ್ಣುಮಕ್ಕಳ ಶಾಲೆಯಿಂದ ಈ ವರ್ಷ ಮುಲ್ಕೀ ಪರೀಕ್ಷೆಗೆ ಕುಳಿತ ೮ ವಿದ್ಯಾ ಯರಲ್ಲಿ ೬ ವಿದ್ಯಾರ್ಥಿನಿಯರು ಪಾಸಾದರು.

ತಳಕವಾಡ—೯. ಮಕ್ಕಳ ಬಳಗದ ಪರವಾಗಿ ವಿದ್ಯಾರಣ್ಯರ ಪುಣ್ಯತಿಥಿಯನ್ನು ಆಚರಿಸಲಾಯಿ ಇದಲ್ಲದೆ ೨೬-೬-೫೪ ರಂದು ಕ್ರಿಡಾಭುವನವನ್ನು ಸ್ಥಾಪಿಸಲಾಯಿತು.

ಹಿರೇಹರಕುಣಿ—೩. ಹೊಸ ವರುಷದ ಶಾಲಾ ಮಂತ್ರಿಮಂಡಲದ ಆಯ್ಕೆ ಮತ್ತು ರಚನೆ ಆ

ಹಿರೇಕೇರೂರ— ಶ್ರೀ. ಎಸ್. ಬಿ. ಹಳಕಟ್ಟಿ ಅ| ಡಿ| ಇ| ಅವರ ಅಧ್ಯಕ್ಷತೆಯಲ್ಲಿ ೨೬-೬-೫೪ ರ ಗ್ರುಪ್ ಶಿಕ್ಷಕ ಶಿಕ್ಷಿಕೆಯರ ಸಮ್ಮೇಲನವು ಜರುಗಿತು:

ಹೂವಿನಹಿಪ್ಪರಿಗಿ—೨೭. ಈ ವರುಷದ ಮುಲ್ಕೀ ಪರೀಕ್ಷೆಯಲ್ಲಿ ಒಕ್ಕಲತನ ಮಾಲೋಜ್ ತೆಗೆದುಕೊಂಡು ೭ ವಿದ್ಯಾರ್ಥಿಗಳು ಹೆಚ್ಚು ಗುಣಗಳನ್ನು ಪಡೆದು ಉತ್ತೀರ್ಣರಾದರು.

ವಿಜಾಪುರ—೧೭. ಜಿಲ್ಲಾ ಸ್ಕೌಟ ಕಮಿಶ್ನರ, ವಿಜಾಪುರದ ಭಾರತ ಸ್ಕೌಟ ಮತ್ತು ಗೈಡರು ಮ ಸ್ಥಾನಿಕ ಸಮಿತಿಯ ಕಾರ್ಯದರ್ಶಿ, ವಿಜಾಪುರದ ಎಲ್ಲ ಮಾಧ್ಯಮಿಕ ಶಾಲೆಗಳ ಮುಖ್ಯಾಧ್ಯಾಪಕರ ಅನೌ ಚಾರಿಕ ಸಭೆಯು ವಿಜಾಪುರ ಜಿಲ್ಲೆಯ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಜರುಗಿತು. ೧೯೫೪ ಅಗಸ್ಟ ರ ರುಕ್ಮಾಂಗದ ಪಂಡಿತ ಸಮಾಧಿಯಲ್ಲಿ ಸ್ಕೌಟ ಮಾಸ್ತರರಿ ೨ ದಿನಗಳ ಶಿಬಿರವನ್ನು ಸಂಘಟಿಸಬೇಕೆಂ ನಿರ್ಣಯವಾಯಿತು.

ಇಂಡಿ—೨೫. ಕ್ರಿಡಾಭುವನದ ವತಿಯಿಂದ ಗ್ರುಪ್ ಶಿಕ್ಷಕರ ಸಮ್ಮೇಲನವು ಜರುಗಿತು. ಸಮಾ ಶಿಕ್ಷಣ ಆಫೀಸರ ಶ್ರೀ. ಪಾವಟೆಯವರು ಉಪದೇಶಪರ ಭಾಷಣ ಮಾಡಿದರು.

ಹಿರೇರೂನಿ—೨೭. ಗ್ರಾಮದ ಪಾಟೀಲರಿಂದ ವನಮಹೋತ್ಸವವು ಜರುಗಿತು. ಊರಿನ ಪ್ರಮುಖ ಆಗಮಿಸಿದ್ದರು. ಮಕ್ಕಳ ಆಟಗಳೂ ನೆರವೇರಿದವು. ಸಾಯಂಕಾಲ ಗಿರಿಜಾಮಾತೆಯವರ ಆಶ್ರಮದ ವನಭೋಜನವೂ ಜರುಗಿತು.

ವನಮಹೋತ್ಸವ

ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ ಧಾರವಾಡ

ದಿನಾಂಕ ೩೦-೭-೫೪ನೆಯ ದಿನ ವನಮಹೋತ್ಸವವು ಸಮಾಜ ವಿಸ್ತೀರ್ಣ ಕೇಂದ್ರದಲ್ಲಿ ಮೂಲ ಶಿಕ್ಷಣದ ಪ್ರಾಧ್ಯಾಪಕರಾದ ಶ್ರೀಮಾನ್ ಎಸ್. ಬಿ. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಜರುಗಿಸಲ್ಪಟ್ಟಿತು. ಅಧ್ಯಕ್ಷರ ಹಸ್ತದಿಂದ ಗಿಡ ನೆಡಲಾಯಿತು. ಮತ್ತು ಇಲ್ಲಿಯ ಶಿಕ್ಷಕಿ-ವಿದ್ಯಾರ್ಥಿನಿಯರೂ ಪ್ರಾ. ಸ್ಕೂಲಿನ ವಿದ್ಯಾರ್ಥಿನಿಯರೂ ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಅಧ್ಯಕ್ಷರು ವನಮಹೋತ್ಸವ ಅಂದರೇನು ? ಅದರಿಂದಾಗುವ ಆರ್ಥಿಕ ಹಾಗೂ ಭೌಗೋಲಿಕ ಲಾಭಗಳೇನು ? ಎಂಬುದರ ಬಗ್ಗೆ ಸವಿಸ್ತಾರವಾಗಿ ಭಾಷಣ ಮಾಡಿದರು. ನಂತರ ಗುಚ್ಛಾರ್ಪಣ, ಅಭಾರಮನ್ನಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಲೋಕಮಾನ್ಯ ಟಿಳಕರ ಪುಣ್ಯತಿಥಿ

ದಿನಾಂಕ ೩೧-೭ ೫೪. ಈ ದಿನ ಲೋ. ಟಿಳಕರ ಪುಣ್ಯತಿಥಿಯನ್ನು ಆಚರಿಸಲಾಯಿತು. ಗಂಡು ಮಕ್ಕಳ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದ ಶ್ರೀಮಾನ್ ಎಸ್. ಪಿ. ಪಾಟೀಲ ರವರ ನೇತೃತ್ವದಲ್ಲಿ ಕಾರ್ಯಕ್ರಮಗಳು ಜರುಗಿದವು. ಕಾಲೇಜದ ಶಿಕ್ಷಕ-ವಿದ್ಯಾರ್ಥಿನಿಯರೂ ಪ್ರಾ. ಸ್ಕೂಲಿನ ವಿದ್ಯಾರ್ಥಿನಿಯರೂ ಟಿಳಕರ ಬಾಲ್ಯ, ಶಿಕ್ಷಣ, ಅವರು ಕೈಕೊಂಡ ಕಾರ್ಯ ಇತ್ಯಾದಿಗಳ ವಿಷಯಕ್ಕೆ ಮಾತಾಡಿದರು. ನಂತರ ಅಧ್ಯಕ್ಷರು ತಮ್ಮ ಸಮಾರೋಪ ಭಾಷಣದಲ್ಲಿ ಲೋ. ಟಿಳಕರ ಪುಣ್ಯತಿಥಿಯನ್ನು ಶಾಲೆ ಕಾಲೇಜುಗಳಲ್ಲಿ ಏಕೆ ಆಚರಿಸಬೇಕು ಎಂಬುದನ್ನೂ ಮತ್ತು ಟಿಳಕರು ಪ್ರಾಥಮಿಕ ಶಿಕ್ಷಕರ ಮಗ್ಗಳಾದರೂ ಸಹ ಹೆಚ್ಚಿನ ಅಭ್ಯಾಸಮಾಡಿ ಹೆಚ್ಚಿನ ಹುದ್ದೆಗೆ ಸೇರದೆ ಕೇವಲ ಶಿಕ್ಷಕರಾಗಿ ಕೆಲಸ ಮಾಡಿದವರಾದ್ದರಿಂದ ಅವರ ಪುಣ್ಯತಿಥಿಯನ್ನು ಶಾಲೆ ಕಾಲೇಜುಗಳಲ್ಲಿ ಆಚರಿಸುವದೇ ಹೆಚ್ಚು ಯೋಗ್ಯವಾದದ್ದು ಮತ್ತು ಅವರಲ್ಲಿದ್ದ ಗುಣಗಳನ್ನು ಕುರಿತು ಮಾತಾಡಿದರು. ಆಮೇಲೆ ಗುಚ್ಛಾರ್ಪಣೆಯಾಗಿ ಅಭಾರಮನ್ನಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಮೂಲೋದ್ಯೋಗ ಶಿಕ್ಷಣ ಸಮ್ಮೇಲನ

ಬಾಗಲಕೋಟ:—ದಿನಾಂಕ ೨೩-೭-೫೪ರಂದು ಧಾರವಾಡ ವಿಭಾಗದ ಮೂಲೋದ್ಯೋಗ ಶಿಕ್ಷಣ ಸಮ್ಮೇಲನವು ಇಲ್ಲಿಯ ನಗರಸಭೆಯಲ್ಲಿ ಅತಿ ವಿಜೃಂಭಣೆಯಿಂದ ಜರುಗಿತು. ರಾಜ್ಯದ ಉಪಮಂತ್ರಿಗಳಾದ ಶ್ರೀ. ಇಂದುಬೆನ್ ಸೇಠರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಈ ಸಮ್ಮೇಲನಕ್ಕೆ ನಾಲ್ಕೂ ಜಿಲ್ಹೆಗಳ ಡಿ. ಇ. ಆಯ್. ಎ. ಓ; ಮತ್ತು ವಿಜಾಪುರ ಜಿಲ್ಹೆಯ ಇನಸ್ಪೆಕ್ಟರ; ಅಲ್ಲದೆ ಡೆಪ್ಯುಟಿ ಡಾಯರೆಕ್ಟರ ಶ್ರೀ. ಕಾಮಾಂಶೆಯವರೂ ಆಗಮಿಸಿದ್ದರು. ಧಾರವಾಡ ಜಿ. ಬಿ. ಟಿ ಸಿ ಪ್ರಿನ್ಸಿಪಾಲ ಶ್ರೀ. ಹಂಪ್ರಾಳರವರೂ, ಮೂಲಶಿಕ್ಷಣ ಮತ್ತು ಮೂಲೋದ್ಯೋಗ ಶಿಕ್ಷಣಗಳ ಪರೀಕ್ಷಣಾಧಿಕರಿಗಳೂ, ಧಾರವಾಡ ವಿಭಾಗದ ಕ್ರಾಫ್ಟ್ ಆರ್ಗನಾಯಿಝರ ಶ್ರೀ. ಶಿಗ್ಗಾವರವರೂ ಸಭೆಯಲ್ಲಿ ಭಾಗವಹಿಸಿದ್ದರು.

ಸಭೆಯ ಅಂಗವಾಗಿ ಶೈಕ್ಷಣಿಕ ಉಪಕರಣಗಳ ಮತ್ತು ಚಿತ್ರಪಟಗಳ ಸುಂದರ ಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು. ಪ್ರದರ್ಶನದಲ್ಲಿಯ ಕೃತಿಗಳನ್ನು ಕಂಡು ಮಾನ್ಯ ಉಪಮಂತ್ರಿಗಳು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಸಮ್ಮೇಲನದಲ್ಲಿ ಅಧ್ಯಕ್ಷರು ಮೂಲಶಿಕ್ಷಣ ಮತ್ತು ಮೂಲೋದ್ಯೋಗ ಶಿಕ್ಷಣಗಳ ಬೆಳವಣಿಗೆಯನ್ನು ಕುರಿತು ಮಾರ್ಮಿಕವಾದ ಭಾಷಣವನ್ನಿತ್ತರು.

ಸಮ್ಮೇಲನದ ಕಾರ್ಯಕಲಾಪಗಳನ್ನು ಮುಗಿಸಿ ಮಾನ್ಯ ಉಪಮಂತ್ರಿಗಳು ಬಾಗಲಕೋಟ ಮೂಲಶಿಕ್ಷಣ ಕ್ಷೇತ್ರದಲ್ಲಿರುವ ಕಮತಗಿ, ಶಿರೂರ, ತುಳಸೀಗೇರಿ ಮತ್ತು ಕಲಾದಗಿ ಗ್ರಾಮಗಳ ಶಾಲೆಗಳನ್ನು ಸಂದರ್ಶಿಸಿದರು.

(ಸಮ್ಮೇಲನದ ವಿವರವಾದ ಕಾರ್ಯಕ್ರಮಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವದು.)

ಹೊಸ ಪುಸ್ತಕಗಳು ! ※ **ಹೊಸ ಅಭ್ಯಾಸ ಪತ್ರಿಕೆಯ**

ಸರಕಾರದವರು ೧೯೫೨-೧೯೫೩ನೆಯ ಸಾಲಿನಿಂದ ಪಠ್ಯ(TEXT) ಪುಸ್ತಕಗಳ
ಮಂಜೂರು ಮಾಡಿದ್ದಾರೆ.

ಗಣಿತ ಬೋಧೆ

(೪ ರಿಂದ ೭ನೆಯ ಇಯತ್ತೆಯ ವರೆಗೆ ಬೇರೆ ಬೇರೆಯಾಗಿ)

ತಜ್ಞ ಹಾಗು ಅನುಭವಿಕ ಪಂಡಿತರಿಂದ ಈಗಿನ ಹೊಸ ಅಭ್ಯಾಸ ಪತ್ರಿಕೆಗನುಸರಿಸಿ ಈ ಎಲ್ಲ ಪುಸ್ತ ಆಯಾ ತರಗತಿಗಳಿಗೆ ಬರೆಯಲ್ಪಟ್ಟಿವೆ ಹಾಗು ಗಣಿತದ ಎಲ್ಲ ವಿಷಯಗಳ ವಿವೇಚನೆಯು ಸ ಮಾಡಲ್ಪಟ್ಟಿವೆ.

ಈ ವರೆಗೂ ಯಾವ ಗಣಿತಗಳಲ್ಲಿಯೂ ಸ್ಪಷ್ಟವಾಗಿ ವಿವೇಚಿಸಲ್ಪಡದ ಹಾಗು ಬಾಲಕರಿಗೆ ಕಠಿಣವ **ಅಪೂರ್ಣಾಂಕ ಸಮ-ವ್ಯಸ್ತ ತ್ರೈರಾಶಿಕ, ಪ್ರಮಾಣ ಭಾಗ, ದಶಾಂಶ ಅಪೂರ್ಣಾಂಕ, ಶತಮಾನ,** ವ **ಕೊಳ್ಳುವ ಬಡ್ಡಿ, ರೋಖ-ಉದ್ರೀ ವ್ಯವಹಾರ, ರೋಖಕಾಳಿ, ಕ್ಷೇತ್ರಫಲ, ಘನಫಲದ** ನಿ **ಗಳು, ವೇಳೆ-ಕೆಲಸ-ವೇಗ, ಭೂಮಿತಿ, ರೇಖಾರೂಪ (ಗ್ರಾಫ), ಪ್ರವಾಸದ ನಕ್ಷೆ, ಭೂಮಾಪನದ** ವಿ **ಬೀಜಗಣಿತ ಇವೇ ಮೊದಲಾದ** ವಿಷಯಗಳ ವಿವರಣೆಯು ಆಯಾ **ಗಣಿತ ಬೋಧೆಗಳಲ್ಲಿ ಚಿತ್ರ,** ಉದ ಗಳೊಂದಿಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಸುಲಭವಾಗಿ ಮನನವಾಗುವಂತೆ ವಿವರಿಸಲಾಗಿದೆ. ಇದರ ಉದಾಹರಣೆಗಳು ವ್ಯವಹಾರಕ್ಕೆ ಸಂಬಂಧಿಸಿದವುಗಳೂ ಗಣಿತ ವಿಷಯದಲ್ಲಿ ಅಭಿರುಚಿಯನ್ನು ಹ ವಂಥವೂ ಇದ್ದು ಸುಲಭವಾದ ಶೈಲಿಯಲ್ಲಿ ಕೊಡಲ್ಪಟ್ಟಿವೆ.

ಕರ್ನಾಟಕ ಕಾಲೇಜದ ನಿವೃತ್ತ ಗಣಿತ ಪ್ರಾಧ್ಯಾಪಕರಾದ ಶ್ರೀಮಾನ್ **ಬಿ. ಬಿ. ಬಾಗಿ**ಲ ಶಿಕ್ಷಣದಲ್ಲಿ ನುರಿತ ಹಾಗೂ ಮುಂಬೈ ಮೇಲ್ಮನೆಯ ಸದಸ್ಯರಾದ ಶ್ರೀಮಾನ್ **ಎಚ್. ಎಫ್.** ಕ ಯವರೂ ಇವುಗಳನ್ನು ಓದಿ ಇವುಗಳಲ್ಲಿ ಪ್ರತಿಯೊಂದು ಪ್ರಮೇಯದ ವಿವರಣೆಯನ್ನು ಶಿಕ್ಷ ವಿದ್ಯಾರ್ಥಿಗಳಿಗೂ ಮನದಟ್ಟಾಗುವ ರೀತಿಯಲ್ಲಿ ಕ್ರಮಬದ್ಧವಾಗಿಯೂ ತರ್ಕಶುದ್ಧವಾಗಿಯೂ ಮಾಡ

माता का उपदेश— ೧, ೨ (ನನ್ನ ತಾಯಿಯ ಹಿಂದೀ ಸಂಸ್ಕರಣ) ಸಿದ್ಧನಾಗಿವೆ.

नीति कथा— ೧, ೨, ೩ (ನಾಡದ ನೆಲೆಗಾರ ಹಿಂದೀ ಸಂಸ್ಕರಣ) ಅಚ್ಚಿನಲ್ಲಿ !

ಹಿಂದಿ ವ್ಯಾಕರಣ— (ಅಚ್ಚಿನಲ್ಲಿ)

ಕನ್ನಡ ಸಾಹಿತ್ಯ ಪ್ರಕಾ
ಧಾರವಾಡ

Printed by M. A. Kamat, B. Sc. at Jai Hind Art Press Dharwar. Edited and Publi
S. P. Patil B. M. Shintri, S. R Tatti, & Smti. P. A. Bhaskar. at the Ka
Prathamik Shikshan Office, Govt. Training College for Men, Dharwar.

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ. ಎಸ್. ಪಿ. ಪಾಟೀಲ

★

ಸಪ್ಟೆಂಬರ ೧೯೫೪.

೪



★

೧೯೫೪ ಅಗಸ್ಟ ೧೫ರಂದು ಧಾರವಾಡದ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಜರುಗಿದ ಸ್ವಾತಂತ್ರ್ಯೋತ್ಸವದ ದೃಶ್ಯಗಳು. ೧ನೆಯ ಚಿತ್ರದಲ್ಲಿ ಧ್ವಜಸ್ತಂಭದ ಎಡಕ್ಕೆ ಶ್ರೀ. ಎಚ್. ಎಫ್. ಕಟ್ಟಿಮನಿ ಎಮ್. ಎಲ್. ಸಿ. ಹುಬ್ಬಳ್ಳಿ ಅವರು ಭಾಷಣ ಮಾಡುತ್ತಿರುವರು.

ವಾ. ಚಂದಾ ೪ ರೂ. ★ ಬಿಡಿ ಪ್ರತಿ ೬ ಆಣೆ

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಕೆ. ಬಿ. ತೇರಗಾಂವಕರ, ಬಿ. ಎಸ್‌ಸಿ., (ಆನರ್ಸ) ಬಿ. ಟಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ

ಪ್ರಧಾನ ಸಂಪಾದಕರು : ಶ್ರೀ. ಎಸ್. ಪಿ. ಪಾಟೀಲ ಬಿ. ಎ., ಬಿ. ಟಿ., ಡಿ. ಪಿ. ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಸಹ ಸಂಪಾದಕರು:

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೪	ಸಪ್ಟಂಬರ ೧೯೫೪	ಸಂಚಿಕೆ ೪

ಪರಿವಿಡಿ

೧. ಸಂಪಾದಕೀಯ ೩
೨. ಕಲಿಯುದ ಟರ್ಕ್ಮೇಮೆನ್ ಕಾಲುವೆ ....ಶ್ರೀ. ಶಿಂತ್ರಿ ಬಸಪ್ಪನವರು ೫
೩. ಬಳ್ಳಿಯ ಶಿಸ್ತಿನೆಡೆಗೆ ....ಶ್ರೀ. ಎಸ್. ವಾಯ್. ಶೀಲವಂತ.... ೭
೪. ಪ್ರಶ್ನೆ ಮಾಡುವ ಕಲೆ ....ಶ್ರೀ. ತಟ್ಟಿ ಶ್ಯಾಮರಾಯರು ೧೨
೫. ಶಿಕ್ಷಣದ ಧ್ಯೇಯ ....ಶ್ರೀ. ಶಿವಕುಮಾರ ೧೫
೬. ಕರ್ನಾಟಕ ಮೂಲ ಶಿಕ್ಷಣ ಪರಿಷತ್ತು (ವರದಿ) ೧೯
೭. ಪ್ರಾಥಮಿಕ ಶಿಕ್ಷಣ ಪ್ರಪಂಚ ೨೩
೮. ಪುಸ್ತಕ ವಿಮರ್ಶೆ ....ಪ್ರ. ಸಂ. ೨೮

ನಿಜವಾದ ಧರ್ಮ

ಸತ್ಯದ ನೀರೆಡಿಕೆಯು ಈ ದಿನ ಒಳ್ಳೆಯ ಕೆಲಸಗಳ ಭೂಮಿಯಿಂದ ಉ
ವಾಗಿದೆಯೋ ಇಲ್ಲವೊ? ಮಾನವ ಕುಲವು ಯಾವ ಯಾವ ಉದ್ಯೋಗಗ
ಪ್ರಾರಂಭಿಸಿದೆಯೋ, ಯಾವ ಯಾವ ವಿಚಾರಕ್ಷೇತ್ರಗಳನ್ನು ನಿರ್ಮಿಸಿದೆಯೋ
ಆ ಎಲ್ಲ ಸ್ಥಾನಗಳಲ್ಲಿ ಹಾಯ್ದು ಹೋಗಬೇಕು. ಭಾರತೀಯ ಸಂಸ್ಕೃತಿಯ ಉ
ಸಕರಲ್ಲಿ ಯಂತ್ರಶಾಸ್ತ್ರ, ವಾಸ್ತುಸಾಸ್ತ್ರ, ಶಿಲ್ಪಶಾಸ್ತ್ರ, ಶಿಕ್ಷಣಶಾಸ್ತ್ರ, ಸಾಹಿತ್ಯ-ಕ
ರಸಾಯನ, ವ್ಯಾಯಾಮ, ಆಟದ ಬಯಲು, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಮ
ಶಾಸ್ತ್ರ ಮುಂತಾದ ಸತ್ಯದ ಸಾಕ್ಷಾತ್ಕಾರದ ಸರ್ವ ಕ್ಷೇತ್ರಗಳಲ್ಲಿ ದಣಿಯದೆ, ವಿಶ್ರ
ಪಡೆಯದೆ ಮುಂದೆ ಸಾಗುವ ಜನರನ್ನು ನಾವು ನಿರ್ಮಿಸಬೇಕಾಗುವದು. ಸಹಕ
ಆಂದೋಲನವೇ ಇರಲಿ, ಕೂಲಿಕಾರರ ಸಂಘಟನವೇ ಆಗಿರಲಿ, ಒಕ್ಕಲತನದಲ್ಲಿ ಸ
ರಣೆ ಮಾಡುವುದೇ ಆಗಿರಲಿ, ಹೊಸ ಉದ್ಯೋಗ-ವ್ಯವಸಾಯ ಪ್ರಾರಂಭಿಸು
ಆಗಿರಲಿ, ಈ ಎಲ್ಲ ಕ್ಷೇತ್ರಗಳಲ್ಲಿ ನಾವು ಪ್ರವೇಶಿಸಬೇಕು. ಅವುಗಳ ಅಧ್ಯಯನ ವ
ಬೇಕು, ಪ್ರಯೋಗ ಮಾಡಬೇಕು. ಸರಿ, ಇದೇ ಪರಮೇಶ್ವರನ ಪೂಜೆ. ಪರಮೇಶ್ವ
ಕೊಟ್ಟ ವಸ್ತುವನ್ನು ಬೆಳೆಯಿಸುವದೇ ಅವನ ನಿಜವಾದ ಪೂಜೆ. ದೇವರು ಕ
ಬುದ್ಧಿಯ ವಿಕಾಸವನ್ನು ಮಾಡುವುದೇ ನಿಜವಾದ ಧರ್ಮ.

—ಸಾನೆ ಗುರೂಜಿ

ನಮ್ರತನವೆಂದರೇನು ?

ಜಗತ್ತಿನ ವಿರುದ್ಧ ನಿಲ್ಲಲು ಶಕ್ತಿಯನ್ನು ದೊರಕಿಸಿಕೊಳ್ಳುವದಕ್ಕಾಗಿ ಸೊ
ನವರು ಹಾಗು ತುಚ್ಛರು ಆಗಬೇಕಾಗಿಲ್ಲ. ಏಸೂಕ್ರಿಸ್ತನು ಜಗತ್ತಿನ ವಿರುದ್ಧ ನಿಂತ
ಬುದ್ಧನೂ ತನ್ನ ಕಾಲದ ವಿರುದ್ಧ ನಿಂತನು. ಪ್ರಹ್ಲಾದನೂ ಅದನ್ನೇ ಮಾಡಿದ
ಅವರೆಲ್ಲರೂ ನಮ್ರತೆಯ ಪುತ್ಥಳಿಯಾಗಿದ್ದರು. ಒಂಟಿಗರಾಗಿ ನಿಲ್ಲುವ ಶಕ್ತಿ
ನಮ್ರತೆಯ ಹೊರತು ಅಸಾಧ್ಯ, ಅಸಂಭವ.

ನಮ್ರತನವೆಂದರೆ ಅಹಂಭಾವದ ಆತ್ಯಂತಿಕ ಅಭಾವ.

—ಗಾಂಧೀಜಿ

(ಸಂಗ್ರಾಹಕರು:—ಶ್ರೀ. ಜೋಗು.)

ಸಂಪಾದಕೀಯ

ಸ್ವಾತಂತ್ರ್ಯ ದಿನ:

ಆಗಸ್ಟ ೧೫. 'ಪ್ರಾಥಮಿಕ ಶಿಕ್ಷಣ' ಪತ್ರಿಕೆಯು ಪ್ರಕಟವಾಗುವ ದಿನ; ಭಾರತದ ಸ್ವಾತಂತ್ರ್ಯಶುಭದಿನ. ಭರತಖಂಡವು ವಿದೇಶೀಯರ ಸಂಕೋಲೆಗಳನ್ನು ಕಡಿದೊಗೆದು ಬಂಧನದಿಂದ ವಿಮುಕ್ತವಾದ ದಿನ ೧೯೪೭ನೆಯ ಆಗಸ್ಟ ೧೫. ಇಂದಿಗೆ ಏಳು ವರ್ಷಗಳು ಸಂದವು. ಈ ಎಂಟನೆಯ ಸ್ವಾತಂತ್ರ್ಯೋತ್ಸವವನ್ನು ಸಂತಸದಿಂದ, ಸಡಗರದಿಂದ, ವಿವಿಧ ಕಾರ್ಯಕ್ರಮಗಳಿಂದ ರಾಷ್ಟ್ರದ ಮೂಲೆ-ಮೂಲೆಗಳಲ್ಲಿ ಸಹ ಎಲ್ಲರೂ ಆಚರಿಸಿರಲಿಕ್ಕೆ ಸಾಕು. ಕಳೆದ ಈ ಏಳು ವರ್ಷಗಳಲ್ಲಿ ಭಾರತವು ಎಲ್ಲ ದಿಶೆಗಳಲ್ಲಿ ಅದ್ಭುತ ಪ್ರಗತಿಯನ್ನು ಸಾಧಿಸಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯನ್ನು ನಿರ್ಮಿಸಿಕೊಂಡು ಅದಕ್ಕನುಸರಿಸಿ ರಾಷ್ಟ್ರವು ಮುನ್ನಡೆಯುತ್ತಿದೆ. ಈ ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿಯು ಮುಗಿಯುವಷ್ಟರಲ್ಲಿಯೇ ದ್ವಿತೀಯ ಪಂಚವಾರ್ಷಿಕ ಯೋಜನೆಯ ನಿರ್ಮಾಪಣದ ರೂಪರೇಷೆಗಳು ಪ್ರತಿಯೊಂದು ಜಿಲ್ಹೆಯಲ್ಲಿ ಭರದಿಂದ ನಡೆದದ್ದು ಒಳ್ಳೆಯ ಅಭಿಮಾನದ ಸಂಗತಿಯಾಗಿದೆ. ಹೀಗೆ ಜನರಿಂದ, ಜನರ ಸಲುವಾಗಿ, ಸ್ಥಳೀಯ ಪರಿಸ್ಥಿತಿಗನುಸರಿಸಿ ಸಿದ್ಧಗೊಳಿಸಲ್ಪಟ್ಟ ಈ ಯೋಜನೆಯು ಕಾರ್ಯಗತವಾಗಿ ಭಾರತವನ್ನು ಅತ್ಯಂತ ಉಜ್ವಲವಾದ, ಹಾಗು ಪ್ರಗತಿಪರವಾದ ರಾಷ್ಟ್ರವನ್ನಾಗಿ ಮಾಡುವದರಲ್ಲಿ ಸಂದೇಹವಿಲ್ಲ. ದೊಡ್ಡ ದೊಡ್ಡ ಯೋಜನೆಗಳು ಪ್ರಥಮ ಪಂಚವಾರ್ಷಿಕ ಯೋಜನೆಯ ವೈಶಿಷ್ಟ್ಯವಾಗಿದ್ದರೆ, ದ್ವಿತೀಯ ಪಂಚವಾರ್ಷಿಕ ಯೋಜನೆಯು ಹಳ್ಳಿ ಹಳ್ಳಿಗಳಿಗೆ ಮುಟ್ಟಿ ಅದರಲ್ಲಿ ಔದ್ಯೋಗಿಕ ಅಭಿವೃದ್ಧಿ ಹಾಗು ನಿರುದ್ಯೋಗದ ಸಮಸ್ಯೆಗಳಿಗೆ ಹೆಚ್ಚು ಲಕ್ಷಕೊಡಲಾಗುವದೆಂದು ತಿಳಿಯುತ್ತದೆ. ಇವೆಲ್ಲವೂ ಯಶಸ್ವಿಯಾಗಿ ಕಾರ್ಯರಂಗಕ್ಕಿಳಿಯಬೇಕಾದರೆ ಸಾರ್ವಜನಿಕ ಸಹಕಾರವು ಅತ್ಯವಶ್ಯ.

ಗಣೇಶೋತ್ಸವ :

ರಾಷ್ಟ್ರದಲ್ಲಿ ನಡೆದು ಬಂದ ಅನೇಕ ಹಬ್ಬಗಳಲ್ಲಿ ಗಣೇಶೋತ್ಸವವು ಅತ್ಯಂತ ಮಹತ್ವದ್ದೂ ಹೆಚ್ಚು ಸಾರ್ವತ್ರಿಕವಾದದ್ದೂ ಆಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ವಿಶೇಷವಾಗಿ ಮಹಾರಾಷ್ಟ್ರದಲ್ಲಿ ಈ ಹಬ್ಬವು ವೈಭವಪೂರ್ಣವಾಗಿ, ವೈವಿಧ್ಯಮಯವಾಗಿ, ಕಲಾಪೂರ್ಣವಾಗಿ, ರಾಷ್ಟ್ರೀಯ ಜೀವನಕ್ಕೆ ಪೋಷಕವಾಗಿ ಆಚರಿಸಲ್ಪಡುತ್ತಿದೆಯೆಂದು ತಿಳಿದು ಬರುತ್ತದೆ. ಲೋಕಮಾನ್ಯ ಟಿಳಕರು ಮಹಾರಾಷ್ಟ್ರದಲ್ಲೆಲ್ಲ ಈ ಗಣೇಶೋತ್ಸವವನ್ನು ಒಂದು ರಾಷ್ಟ್ರೀಯ ಹಬ್ಬವನ್ನಾಗಿ ಮಾರ್ಪಡಿಸಿ ಜನರಲ್ಲಿ ನವಜಾಗ್ರುತಿಯನ್ನೂ, ರಾಷ್ಟ್ರಾಭಿಮಾನವನ್ನೂ ತುಂಬಲಿಕ್ಕೆ ಕಾರಣರಾದರು. ಗಣಪತಿಯ ಹಬ್ಬವು ರಾಷ್ಟ್ರಜಾಗ್ರುತಿಯ ಒಂದು ದೊಡ್ಡ ಸಾಧನವಾಗಿ ಪರಿಣಮಿಸಿತು. ಮಹಾರಾಷ್ಟ್ರದಲ್ಲಾದ ಈ ಜಾಗ್ರುತಿಯು ರಾಷ್ಟ್ರದ ಇತರ ಪ್ರಾಂತಗಳಲ್ಲಿ ಸಹ ಪ್ರಭಾವವನ್ನು ಬೀರದೆ ಬಿಡಲಿಲ್ಲ.

ಗಣಪತಿಗೆ ವಿನಾಯಕ, ವಿಘ್ನೇಶ, ಲಂಬೋದರ, ಏಕದಂತ, ಗಜಾನನ....ಹೀಗೆ ಹಲದಾರು ಹೆಸ
ಗಳುಂಟು. ಶಿವನ ಗಣಗಳಿಗೆ ಒಡೆಯನಾದ್ದರಿಂದ ಗಣಪತಿಯೆಂದೂ, ನಾಯಕರಲ್ಲಿ ಅಗ್ರಗಣ್ಯನಾದವನಾ
ರಿಂದ ವಿನಾಯಕನೆಂದೂ, ವಿಘ್ನಗಳನ್ನು ಹರಣಮಾಡುವವನೆಂಬ ಕಲ್ಪನೆಯಿಂದ ವಿಘ್ನೇಶನೆಂದೂ, ದೊ
ಹೊಟ್ಟೆಯವನಾದ್ದರಿಂಡ ಲಂಬೋದರನೆಂದೂ, ಒಂದೇ ಹಲ್ಲುಳ್ಳವನಾದ್ದರಿಂದ ಏಕದಂತನೆಂದೂ, ಆನೆ
ಮುಖವುಳ್ಳವನಾದ್ದರಿಂದ ಗಜಾನನನೆಂದೂ ಕರೆಯುವ ವಾಡಿಕೆಯುಂಟು. ಈ ಪ್ರತಿ ಹೆಸರಿಗೆ ಒಂದೊ
ಕಥೆಯನ್ನು ಪುರಾಣಗಳಲ್ಲಿ ನಾವು ಕಾಣುತ್ತೇವೆ. ಏನೇ ಇರಲಿ; ಗಣಪತಿಯು ಸರ್ವಮಾನ್ಯನಾಗಿದ್ದಾನೆ
ಹೇಳಬಹುದು. ಎಲ್ಲ ದೇವತೆಗಳಲ್ಲಿ ಗಣಪತಿ ಮತ್ತು ಹಣಮಂತ ಈ ದೇವರುಗಳನ್ನು ಸಾಮಾನ್ಯ
ಹಳ್ಳಿಯ ಹೊರಬದಿಯಲ್ಲಿ ಕಾಣಬಹುದು. ಮನೆಯ ಬಾಗಿಲಗಳ ಮೇಲೆಯೂ ಗಣಪತಿಯನ್ನು ಕಾಣುತ್ತೇ
ಇದೆಲ್ಲವೂ ಗಣೇಶನ ಬಗ್ಗೆ ಜನರಲ್ಲಿ ಇರುವ ಪೂಜ್ಯಭಾವನೆಯನ್ನು ವ್ಯಕ್ತಗೊಳಿಸುತ್ತದೆ.

ಇಂದು ಶಿಕ್ಷಣ ಸಂಸ್ಥೆಗಳಲ್ಲಿ ಗಣಪತಿಯ ಹಬ್ಬದ ಆಚರಣೆಯು ರೂಢಿಯಲ್ಲಿ ಬರತೊಡ
.ಗಣಪತಿಯು ವಿದ್ಯಾದೇವತೆಯಾಗಿ ಕಲಾಪೋಷಕನಾಗಿ ಪರಿಗಣಿಸಲ್ಪಟ್ಟು ಸಾಲೆಗಳಲ್ಲಿ ಪೂಜಿಸಲ್ಪಡುತ್ತಿದ್ದಾ
ಗಣೇಶೋತ್ಸವದ ಅಂಗವಾಗಿ, ಆತನ ಸನ್ನಿಧಿಯಲ್ಲಿ ತಜ್ಞರ ಭಾಷಣಗಳು ಏರ್ಪಡುತ್ತಲಿವೆ. ಈ ಉತ್ಸ
ಏರ್ಪಾಡುಗಳೆಲ್ಲ ಮಕ್ಕಳಿಂದಲೇ ಆಗುತ್ತಲಿವೆ. ಮೂಲ ಶಿಕ್ಷಣ ಸಾಲೆ-ಕಾಲೇಜುಗಳಲ್ಲಿ ಗಣೇಶೋತ್ಸ
ಚಟುವಟಿಕೆ, ಉಪಚಟುವಟಿಕೆಗಳು ವಿಷಯ ನಿರೂಪಣೆಯ ಕೇಂದ್ರಗಳಾಗಿ ಪರಿಣಮಿಸುತ್ತಲಿವೆ. ಓ
ಗಣೇಶೋತ್ಸವವು ಶಿಕ್ಷಣ ರಂಗದಲ್ಲಿ ಒಂದು ಮಹತ್ವದ ಶೈಕ್ಷಣಿಕ ಚಟುವಟಿಕೆಯಾಗಿ ಮೂಡಿಬಂದಿದೆ. ೞ
ಕರ ಕೈ, ಮನಗಳಿಗೆ ಮಾತ್ರ ಈ ಉತ್ಸವವು ಆಹಾರವಾಗಿರದೆ ಹೃದಯ ವಿಕಾಸಕ್ಕೆ ಒಂದು ಮಹತ್ವದ ಜೀ
ವಾಗಿದೆ. ಮಕ್ಕಳಲ್ಲಿ ಭಕ್ತಿರಸವು ಅಪರೋಕ್ಷವಾಗಿ ಉದಯಿಸುವದರಲ್ಲಿ ಸಂದೇಹವೇನಿದೆ!

ಮೊಹರಮ್ : ಜೀವನ ಶಿಕ್ಷಣ ಸಾಲೆಗಳಲ್ಲಿ ವಿಶ್ವಬಾಂಧವ್ಯದ ತತ್ವವನ್ನೊಳಗೊಂಡ ಧರ್ಮ
ಹಾಗು ಧರ್ಮಸ್ಥಾಪಕರ ಜಯಂತಿ ಹಾಗು ಪುಣ್ಯತಿಥಿಗಳನ್ನು ಆಚರಿಸುವದು ಪ್ರಚಾರದಲ್ಲಿದೆ. ಇಲ್ಲಿ ಜ
ಮತ, ಪಂಥಗಳಿಗೆ ಆಸ್ಪದವಿಲ್ಲ. ವಿಶ್ವಬಾಂಧವ್ಯದ ತಳಹದಿಯ ಮೇಲೆ ನಿಂತು, ಮಾನವ ಕುಲವೆಲ್ಲ
ದಯಾರ್ದ್ರ ಹೃದಯದಿಂದ ಕಾಣಬೇಕೆನ್ನುವ ಇಸ್ಲಾಮು ಮತ ಸ್ಥಾಪಕರಾದ ಹಜರತ್ ಮಹಮ್ಮದ ಪೈಗಂ
ವಂಶಸ್ಥರಾದ ಹಸನ-ಹುಸೇನರು ಯಾವ ಉದಾತ್ತ, ಉಜ್ವಲ ತತ್ವಗಳಿಗಾಗಿ ಹೋರಾಡಿ ಅಂತಿಮದಲ್ಲಿ
ಪ್ರಾಣವನ್ನೇ ಆ ತತ್ವಗಳ ರಕ್ಷಣೆಯ ಧ್ಯೇಯ ಸಾಧನೆಯಲ್ಲಿ ಕಳೆದುಕೊಂಡರೆಂಬುದನ್ನು ಎಲ್ಲರೂ ನೆನೆ
ತಕ್ಕ ಮಾತಾಗಿದೆ. ಹೊಸ ಸಮಾಜವನ್ನು ನಿರ್ಮಿಸ ಹೊರಟ ಮೂಲ ಶಿಕ್ಷಣವು ಹೇಳುವುದಾದರೂ ಏ
ವರ್ಗರಹಿತ, ಶೋಷಣ ರಹಿತ, ಭ್ರಾಂಥವ್ಯಯುತವಾದ ಸಮಾಜವನ್ನು ಸೌಹಾರ್ದ್ರತೆ, ಸಹಕಾರ, ಸ್ನೇಹ
ಈ ತತ್ವಗಳ ಮೇಲೆ ಕಟ್ಟುವುದು ಅಲ್ಲವೇ? ಇಸ್ಲಾಮು ಧರ್ಮದಲ್ಲಿ ಈ ತತ್ವಗಳು ಚಾಚೂ ತಪ್ಪದೇ
ವಾಗಿರುವುವೆಂಬುದನ್ನು ಮರೆಯಲಾಗದು. ಮೊಹರಮ್ ಹಬ್ಬದ ಈ ನೈಜ ತಿರುಳನ್ನು ಅರಿತುಕೊಂಡು
ಕಾಲೇಜುಗಳಲ್ಲಿ ಆಚರಿಸುವದು ಯಥಾಯೋಗ್ಯವಾಗಿದೆ ಎಂದು ಹೇಳದಿರೆವು.

ಈಶಾನ್ಯ ಭಾರತೀಯರ ದುರ್ಭಾಗ್ಯ

ಈಶಾನ್ಯ ಭಾರತದ ರಾಜ್ಯಗಳಾದ ಬಿಹಾರ, ಬಂಗಾಲ ಹಾಗು ಆಸಾಮುಗಳಲ್ಲಿ ಮಹಾಪೂರಕ್ಕೆ ಕೆ
ಗಟ್ಟಲೆ ಬೆಲೆ ಬಾಳುವ ಆಸ್ತಿ ಲಕ್ಷಾವಧಿ ಎಕರೆಗಳ ಭೂಮಿ, ಸಾವಿರಾರು ಮನೆಗಳು ಹಾಗು ನೂರಾರು
ಗಳು ಆಹುತಿಯಾದ ಭಯಾನಕರ ಪರಿಸ್ಥಿತಿಯನ್ನು ಓದುವಾಗಲೇ ಸಮೀಪದ ಮತ್ತೊಂದು ರಾಜ್ಯ
ಓಡಿಸಾದಲ್ಲಿ ಅನಾವೃಷ್ಟಿಯ ಭೀಕರ ಸ್ವರೂಪವನ್ನೂ ಕೇಳಿದಾಗ ನಮ್ಮ ಸರಕಾರವು ಎದುರಿಸಬೇಕಾದ
ಸಮಸ್ಯೆಗಳ ಅರಿವು ನಮಗಾಗದಿರದು. ಒಂದು ಕಡೆ ಮಹಾಪೂರ, ಮತ್ತೊಂದು ಕಡೆ ಅನಾವೃಷ್ಟಿ
ದುರ್ದಶೆಗೆ ಈಡಾದವರಿಗೆಲ್ಲರಿಗೂ ನಮ್ಮ ಸಹಾನುಭೂತಿ.

ರಶಿಯದ ಟರ್ಕ್ಮೇನ್ ಕಾಲುವೆ

(ವಿಶ್ವದ ಮಹಾ ಯೋಜನೆ)

ಲೇಖಕರು : **ಶ್ರೀ. ಶಿಂತ್ರಿ ಬಸಪ್ಪನವರು,** ಬಿ. ಎ. ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ.

ಯದ ದ್ವಿತೀಯ ಪಂಚವಾರ್ಷಿಕ ಯೋಜನೆ

ಈಗಾಗಲೇ ಪೂರ್ತಿಗೊಂಡ ರಶಿಯದ ಓಲ್ಗಾ-ಡಾನ್ **ಲುವೆಯ** ಬಗೆಗೆ ಇದೇ ವರುಷದ ಅಗಸ್ಟ ತಿಂಗಳದ **ಚಿಕೆಯಲ್ಲಿ** ಸವಿಸ್ತರವಾಗಿ ಬರೆದಿದೆಯಷ್ಟೆ. ಆ ಕಾಲು ಯು **ಹೋದ** ಮಹಾ ಯುದ್ಧದ ನಂತರ ರಶಿಯವು ಕೈ-ಂಡ ಪ್ರಥಮ ಪಂಚವಾರ್ಷಿಕ ಯೋಜನೆಯ ಪರಿಣಾ-ವು. ಅದು ಈಗ ಯುರೋಪದಲ್ಲಿಯ ರಶಿಯದ ಆಗ್ನೇ- **ಪ್ರದೇಶದಲ್ಲಿ** ಅಂದರೆ ಸ್ಟಾಲಿನ್‌ಗ್ರಾಡ ಪ್ರದೇಶದಲ್ಲಿ **ಭರಾಟೆಯಿಂದ** ಕೆಲಸ ಮಾಡುತ್ತಿದೆಯೆಂಬುದನ್ನು ಓಗರ **ಗಮನಕ್ಕೆ** ತರಬಯಸುತ್ತೇವೆ. ಟರ್ಕ್ಮೇ-**ನ್ ಕಾಲು**ವೆಯು ಎರಡನೆಯ ಪಂಚವಾರ್ಷಿಕ **ೀಜನೆಯ**ಲ್ಲಿ ರಶಿಯವು ಕೈಕೊಂಡ ಮಹತ್ಕಾರ್ಯವು. **ಕಾಲುವೆ**ಯು ಟರ್ಕ್ಮೇನಿಯಾ ಪ್ರಾಂತದಲ್ಲಿ **ಯುವದರಿಂ**ದ ಇದಕ್ಕೆ ಈ ಹೆಸರು ಪ್ರಾಪ್ತವಾಗಿರಲು **ಕು.** **ಏಶಿಯ**ದೊಳಗಿನ ರಶಿಯದಲ್ಲಿ ಕಾರಾಕುಮ್ **ಬದೊಂದು** ಕಪ್ಪು ಉಸುಕಿನ ವಿಶಾಲವಾದ ಪ್ರದೇಶ . **ಟರ್ಕ್ಮೇ**ಮೇನಿಯಾ ಪ್ರಾಂತವು ಆ ಮರುಭೂಮಿ ಲ್ಲಿದೆ. **ಅಲ್ಲಿ** ಎಷ್ಟೋ ವರುಷಗಳ ವರೆಗೆ ಮಳೆಯೇ ುವದಿಲ್ಲ. ಬೇಸಿಗೆಯಲ್ಲಿ ಹವೆಯು ಒಣಬಿದ್ದು ್ಯಷ್ಣ**ವಿರು**ತ್ತದೆ ಮತ್ತು ಚಳಿಗಾಲದಲ್ಲಿ ಅತಿ **ಚಳಿ** **ರುತ್ತದೆ.** ನೀರಿನ ಅರಬು ಹೇಳತೀರದಷ್ಟಿದೆ. **ತಹ** ನಿರ್ಜಲವಾದ ಮರುಭೂಮಿಯಲ್ಲಿ ಕಾಲುವೆ **ಂದನ್ನು** ಕಡಿದು ಅದರ ಮೂಲಕ ಮರುಭೂಮಿ**ನ್ನು ಫಲ**ವತ್ತಾದ ಭೂಮಿಯನ್ನಾಗಿ ಮಾರ್ಪಡಿಸಲು **ಯವು ದಿನಾಂಕ** ೧೨—೯—೧೯೫೦ ರಂದು ತನ್ನ ದ್ವಿತೀಯ ಪಂಚವಾರ್ಷಿಕ ಯೋಜನೆಯನ್ವಯ ನಿರ್ಣಯಿಸಿದೆ. ೧೯೫೨ರಲ್ಲಿ ಅದರ ರಚನೆಯು ಪ್ರಾರಂಭವಾಗಿದೆ; ೧೯೫೭ರಲ್ಲಿ ಅದು ಪೂರ್ತಿಗೊಳ್ಳುವದು.

ಅದರ ಉದ್ದಳತೆ ಮತ್ತು ರಚನೆ

ಆಮೂದರ್‍ಯಾ (ಇದಕ್ಕ ಆಕ್ಸಸ್ ಎಂದೂ ಹೆಸರಿದೆ) ಎಂಬದೊಂದು ದೊಡ್ಡ ಹೊಳೆಯು ಮಧ್ಯ ಏಶಿಯದಲ್ಲಿಯ ಕಾರಾಕುಮ್ ಮರುಭೂಮಿಯ ಪೂರ್ವದ ಮೇರೆಗುಂಟ ದಕ್ಷಿಣೋತ್ತರವಾಗಿ ಹರಿದು ಅರಲ್ ಸಮುದ್ರಕ್ಕೆ ಕೂಡುತ್ತಿದೆ. ಈ ನದಿಯಿಂದ **ಹೊರಡುವ** ಆ ಕಾಲುವೆಯು ಕಾರಾಕುಮ್ **ಮರುಭೂಮಿಯ** ಮಧ್ಯದಲ್ಲಿ ಹಾಯ್ದು ಕಾಸ್ಪಿಯನ್ ಸಮುದ್ರವನ್ನು ಸೇರುವದು. ಇದರ ಉದ್ದಳತೆಯು ೧೨೧೦ ಕಿಲೋಮಿಟರ (ಸುಮಾರು ೭೫೨ ಮೈಲು) ದಷ್ಟಾಗುವದು. ಒಂದು ಮಿಟರ ಅಂದರೆ ೩೯.೩೭ ಇಂಚುಗಳು, ಮತ್ತು ಒಂದು ಕಿಲೋಮಿಟರ ಅಂದರೆ ೩೨೮೧ ಫೂಟುಗಳು ಇಲ್ಲವೆ ೫ ಫರ್ಲಾಂಗುಗಳು. ಇದು ವಿಶ್ವದ ಮಹಾ ಯೋಜನೆಯು ! ರಶಿಯವು ಕೈಕೊಂಡ ಇದೊಂದು ಅತ್ಯಂತ ಸಾಹಸದ ಕಾರ್ಯವು !! ೫೦೦ ದಶಲಕ್ಷ ಘನ ಮಿಟರ ಮಣ್ಣನ್ನು ಅಗೆದು ತೆಗೆಯಲಾಗುವದು. ಕಾಲುವೆಯ ರಚನೆಗೆ ಹಾಗೂ ನೀರಿನ ಸಂಗ್ರಹಕ್ಕೆ ಅಗೆದು ತೆಗೆಯುವ ಮಣ್ಣನ್ನು ಒಂದು ಸ್ಥಳದಲ್ಲಿ ಸಂಗ್ರಹಿಸಿದರೆ, ಅದರ ಎತ್ತರವು ೧.೫ ಕಿಲೋಮಿಟರ (ಸಮಾರು ಒಂದು ಮೈಲು) ದಷ್ಟಾಗುವದು. ಇದರ ರಚನೆಗೆ ೩೦ ಲಕ್ಷ ಘನಮಿಟರ ಗಚ್ಚು-ಸಿಮೆಂಟು ಬೇಕಾಗುವದು.

ನೀರಾವರಿ ಭೂಮಿಯು ಪ್ರಮಾಣ

ಅಮೂದರ್ಯಾ ನದಿಗೂ ಹಾಗೂ ಟರ್ಕ್ಮೇಮೆನ್ ಕಾಲುವೆಗೂ ಹಲವಾರು ಅಣೆಕಟ್ಟುಗಳನ್ನು ಕಟ್ಟಿ ಜಲ-ವಿದ್ಯುತ್ತನ್ನು ನಿಯಂತ್ರಿಸುವ ಕೇಂದ್ರಗಳನ್ನು ರಚಿಸಲಾಗುವದು. ಸುಮಾರು ೧೨೧೦ ಕಿಲೋಮಿಟರ ಉದ್ದವಾದ ಕಾಲುವೆಯು ಹರಿಯುವದರಿಂದ ಅದರ ಎರಡೂ ಪಕ್ಕಗಳ ಹೊಲಗಳಿಗೆ ನೀರಿನ ಪೂರೈಕೆಯಾಗುವದು. ಎರಡೂ ಮಗ್ಗಲುಗಳಲ್ಲಿ ನೂರಾರು ಕಿಲೋಮಿಟರುಗಳ ವರೆಗೆ ಕುಡಿಯುವ ನೀರಿನ ಪಾಯಿಪುಗಳನ್ನು ಹಾಕಲಾಗುವದು. ಅಲ್ಲಲ್ಲಿ ನೀರೆನ್ನೆತ್ತುವ ಯಂತ್ರಗಳನ್ನಿಡಲಾಗುವದು. ಆ ಕಾಲುವೆಯು ರಾಷ್ಟ್ರದ ಆರ್ಥಿಕ ದೃಷ್ಟಿಯಿಂದ ಎಷ್ಟು ಮಹತ್ವದ್ದಾಗುವದೆಂಬುದರ ಅಂದಾಜು ಮಾಡಿ ಹೇಳುವದು ಸಹ ಈಗ ಶಕ್ಯವಿಲ್ಲದಾಗಿದೆ. ಅದರಿಂದ ಕಾರಾಕುಮ್ ಮರುಭೂಮಿಯಲ್ಲಿಯ ೧೩೦೦೦೦೦ ಹೆಕ್ಟೇರ ಸಾಗುವಳಿ ಮಾಡಲ್ಪಡುವ ಭೂಮಿಯು ನೀರುಂಡುವುದಲ್ಲದೆ, ೭೦ ಲಕ್ಷ ಹೆಕ್ಟೇರ ಹುಲ್ಲುಗಾವಲು ಪ್ರದೇಶಕ್ಕೆ ನೀರಿನ ಪೂರೈಕೆಯಾಗುವದು. ಒಂದು ಹೆಕ್ಟೇರಿಗೆ ೨.೫ ಎಕರೆಗಳಾಗುವವು. ಪಶ್ಚಿಮ ಟರ್ಕ್ಮೇನಿಯದಲ್ಲಿಯ ನಗರಗಳು ಹಾಗೂ ಕಾರಖಾನೆಗಳು ಈ ಕಾಲುವೆಯಿಂದ ನೀರನ್ನೂ ವಿದ್ಯುತ್ತನ್ನೂ ಪಡೆಯುವವು. ಆ ದೇಶದಲ್ಲಿಯ ಹತ್ತಿಯು ಬೆಳೆಯು ೮ ಪಟ್ಟು ಹೆಚ್ಚಾಗುವದು.

ಯಂತ್ರಗಳ ಸಹಾಯ

ಅಂತಹ ದೊಡ್ಡ ಯೋಜನೆಗೆ ಯಂತ್ರಗಳ ಸಹಾಯವು ಅವಶ್ಯವಾಗಿ ಬೇಕಲ್ಲವೇ ? ತಾಸಿಗೆ ೧೫೦ ಘನ ಮಿಟರ ಮಣ್ಣನ್ನು ಅಗೆದು ತೆಗೆದು ಹಾಕುವಂತಹ ಯಂತ್ರಗಳನ್ನು ಈ ಕಾಲುವೆಯ ರಚನೆಗೆ ಬಳಸಲಾಗುತ್ತಿದೆ. ವೋಲ್ಗಾ-ಡಾನ್ ಕಾಲುವೆಯ ರಚನೆಯಲ್ಲಿ ಉಪಯೋಗಿಸಲಾದ ಯಂತ್ರಗಳನ್ನೆಲ್ಲ ಇಲ್ಲಿ ಉಪಯೋಗಿಸಲಾಗುತ್ತಿದೆ. ಆ ಯಂತ್ರಗಳೆಲ್ಲ ರಶಿಯದಲ್ಲಿಯೇ ತಯಾರಾಗಿವೆ. ರಚನೆಯ ಕಾರ್ಯವು ಮಿಂಚಿನ ವೇಗದಿಂದ ಸಾಗಿದೆ. ತಾಹಿಯಾತಾಶ್ ಎಂಬ ಊರೊಂದು ರಚಿತವಾಗಿದೆ. ಅಲ್ಲಿ ಈಗ ಸಾಕಷ್ಟು ಮನೆಗಳು, ನೀರು, ವಿದ್ಯುತ್ತು, ಬಾನುಲಿ, ಶಾಲೆ, ವಿಶ್ರಾಂತಿ ಗೃಹ, ಆಸ್ಪತ್ರೆ, ವಾಚನಾಲಯ, ಅಂಚೆಕಟ್ಟೆ, ತಾರಾಯಂತ್ರ, ಟೆಲಿಫೋನ, ಸಿನೇಮಾ, ಅಂಗಡಿ, ಕ್ಲಬ್ಬು, ನೋ... ಆಧುನಿಕ ಸೌಕರ್ಯಗಳು ಒದಗಿಸಲ್ಪಟ್ಟಿವೆ. ... ಮಾರ್ಗವನ್ನು ಹಾಕಲಾಗಿದೆ. ತಾಹಿಯಾತಾಶ್ ವಿ... ಕೇಂದ್ರದ ರಚನೆಯ ಸ್ಥಳದ ವರೆಗೆ ಮಾಲು... ಓಡಾಡುತ್ತಲಿವೆ. ಈ ಕಾಲುವೆಯಗುಂಟ ... ಗಳು ನಿರ್ಮಾಣವಾಗಲಿವೆ. ಈ ಕಾಲುವೆಯ ... ಕೊನೆಯಂಚಿನಲ್ಲಿರುವ ಕರ್ಝಾನಝುಕ್ ಎಂಬ ಊರಿನ ಬಳಿಯಲ್ಲಿ ವರ್ಕಶಾಫ (Work... ವನ್ನೂ ವಿದ್ಯುತ್ ಕೇಂದ್ರವನ್ನೂ ಕಟ್ಟಲಾಗಿದೆ ... ಊರಿನ ವರೆಗೆ ರಾಜಮಾರ್ಗ-ರೇಲ್ವೆಮಾರ್ಗ... ಹಾಕಲಾಗಿದೆ. ಮರುಭೂಮಿಯಲ್ಲಿ ದೊಡ್ಡ... ರಹದಾರಿಯನ್ನು ಕ್ಷಿಪ್ರದಲ್ಲಿಯೇ ಕಟ್ಟಲಾ... ಟರ್ಕ್ಮೇನಿಯದಲ್ಲಿಯ ಈ ಮಹಾಯೋ... ನಿರ್ದಿಷ್ಟಪಡಿಸಿದ ಅವಧಿಯಲ್ಲಿ ಮುಗಿಸಲ್ಪ... ತೀವ್ರದಲ್ಲಿಯೇ ಟರ್ಕ್ಮೇನಿಯದವರ ಕನಸು ಸಾಗುವದು.

ಕೊನೆಯ ಮಾತು

ಅಲ್ಲಲ್ಲಿ ನಮಗೆ ದೊರೆತ ವಿವರಗಳನ್ನು ... ಅಚ್ಚುಕಟ್ಟಾಗಿ ಹೊಂದಿಸಿ, ಅವಶ್ಯ ಕಂಡಲ್ಲಿ ... ಮಾಡಿ ಈ ಪುಟ್ಟ ಲೇಖವೊಂದನ್ನು ನಮ್ಮ ಮಾಹಿತಿಗಾಗಿ ಬರೆಯಲಾಗಿದೆ. ಭೂಗೋಲದ ... ಸ್ಥಿತ್ಯಂತರಗಳು ಶಿಕ್ಷಕ-ಶಿಕ್ಷಿಕೆಯರಿಗೆ ಗೊ... ಲ್ಲವೇ ? ಮಾನವನು ಸಾಹಸಪ್ರಿಯನು. ತನಗೆ ಅನುಕೂಲವಿಲ್ಲದಿದ್ದರೆ, ತನ್ನ ಕುಶಾ... ಯಿಂದಲೂ ನಾನಾ ತರಹದ ಹಂಚಿಕೆಗ... ಅದನ್ನು ತನಗೆ ಅನುಕೂಲವಾಗುವ ಹಾಗೆ ... ಬಲ್ಲನು, ಮಾರ್ಪಡಿಸಬಲ್ಲನು. ಜಗತ್ತಿನಲ್ಲಿ ಇಂತಹ ಸ್ಥಿತ್ಯಂತರಗಳು ಆಗುತ್ತಲೇ ಇವೆ. ... ರಿಂದ ಶಿಕ್ಷಕ-ಶಿಕ್ಷಿಕೆಯರು ಈ ಲೇಖವನ್ನೋ... ತಮ್ಮ ತಮ್ಮ ಕ್ಲಾಸಿನಲ್ಲಿ ಕಲಿಯುವ ಮಕ್ಕಳಿಗೆ ... ಪೂರ್ಣ ಲಾಭವನ್ನು ಮಾಡಿಕೊಡುವರೆಂದು ... ದ್ದೇವೆ. ಟ್ರೇನಿಂಗ ಕಾಲೇಜುಗಳಲ್ಲಿ ಕಲಿಯುವ ... ವಿದ್ಯಾರ್ಥಿನಿಯರೂ ಇದರ ಸಂಪೂರ್ಣ ಲಾ... ಹೊಂದಬೇಕೆಂಬುದು ನಮ್ಮ ಹೆಬ್ಬಯಕೆ.

—: ಸಿರಿಗನ್ನಡಂಗೆಲ್ಗೆ :—

ಒಳ್ಳೆಯ ಶಿಸ್ತಿನೆಡೆಗೆ

[**ಉತ್ತರ** ಪ್ರದೇಶದ ಶಿಕ್ಷಣ ವಿಭಾಗದ ಮುಖಪತ್ರವಾದ ಶಿಕ್ಷಾ ಎಂಬ ತ್ರೈಮಾಸಿಕದ ಎಪ್ರಿಲ ೧೯೫೪ರ ಸಂಚಿಕೆಯಲ್ಲಿ ಟವಾದ **ಶ್ರೀ**. ದೇವ ಇಂದರಲಾಲ ಎಂಬವರ "Towards Better Discipline" ಎಂಬ ಉದ್ಬೋಧಕವಾದ ಬರೆಹದ ಖ್ಯಾಂಶಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.]

ಸಂಗ್ರಾಹಕರು:—ಶ್ರೀ. ಎಸ್. ವಾಯ್. ಶೀಲವಂತ, ಬಿ. ಎ., ಬಿ. ಟಿ., ಡಿ. ಪಿ. ಇಡಿ., **ಡಿ. ಬಿ. ಇ.**
ಪ್ರಾಧ್ಯಾಪಕರು, ಕನ್ನಡ ಗಂಡುಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜ, ಧಾರವಾಡ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

'ಮಗುವು ಎಷ್ಟೇ ವಯಸ್ಸಿನದಿದ್ದರೂ ಅದು ಅಲ್ಪ ಷ್ಟಿಗಾದರೂ ತನ್ನ ನಡತೆಗೆ ಹೊಣೆಗಾರರಾಗಿದೆ" ಎಂಬ ನಸಶಾಸ್ತ್ರದ ತತ್ವವೇ ವಿದ್ಯಾರ್ಥಿಗಳು ಶಾಲೆಯ ಳತೆಯಲ್ಲಿ ಭಾಗವಹಿಸಲು ಅವಕಾಶವಿರಬೇಕು ಎ ಸೂಚನೆಗೆ ತಳಹದಿಯಾಗಿದೆ. ತನ್ನ ಸ್ವಂತ ಕ್ಕೆ ಸಂಬಂಧಪಟ್ಟ ಯಾವುದೇ ಕೃತಿಯ ಹೊಣೆ ಕೆಯನ್ನು ಒಂದು ಮಗುವಿನ ಮೇಲೆ—ಅದು ಸಣ್ಣ ರೂ—ಹೊರಿಸಿದರೆ ತಪ್ಪಾಗದು. ಮೇಲಾಗಿ ಇದು ಾಸ್ವಾತಂತ್ರ್ಯದ ಯುಗ. ಅಂದಮೇಲೆ ವಿದ್ಯಾರ್ಥಿ ಬೇರೆಬೇರೆ ಚಟುವಟಿಕೆಗಳಲ್ಲಿ ಪರಸ್ಪರರ ಕೂಡ ಕರಿಸಿ ತಮ್ಮಲ್ಲಿ ಸಮಾಜನೀತಿಯನ್ನು ಬೆಳೆಯಿಸಿ ೃಲು ಅವರಿಗೆ ಯೋಗ್ಯ ಸಂದರ್ಭಗಳನ್ನು ಒದಗಿಸು ಸಹಜವೂ ಯುಕ್ತವೂ ಅಲ್ಲದೆ ಆವಶ್ಯಕವೂ ದು. ಇದರಿಂದ ಅವರು ಪ್ರಜಾಸತ್ತಾತ್ಮಕ ಷ್ಟದ ಉತ್ತಮ ನಾಗರಿಕರಾಗುವರು ಮತ್ತು ವು ಶಾಲೆಯ ಆಡಳಿತೆ ಹಾಗು ಚಟುವಟಿಕೆಗಳಲ್ಲಿ ವಹಿಸುವದರಿಂದ ತಾನು ಹೊರಗಿನ ಸಮಾಜದ ರೂಪದಂತಿದ್ದ ಶಾಲೆಯೆಂಬ ಯಂತ್ರದ ಮಹತ್ವದ ವಾಗಿದ್ದೇನೆ ಎಂಬ ಭಾವನೆಯು ಆ ಮಗುವಿನಲ್ಲಿ ಟ್ಟುವದು.

ದ್ಯಾರ್ಥಿಗಳು ಭಾಗವಹಿಸುವದರಿಂದ ಅವರಲ್ಲಿ ಕ್ತಿಕ ಹಾಗು ಸಾಂಘಿಕ ನೈತಿಕ ಹೊಣೆಗಾರಿಕೆಯ ಸವು ಆಗುತ್ತದೆ. ಅವರಲ್ಲಿ ಸ್ವಯಂಪ್ರೇರಣೆ, ಸ್ವನಿರ್ಣಯ ಮತ್ತು ನಾಯಕತ್ವ ಈ ಗುಣಗಳು ಬೆಳೆಯುತ್ತವೆ. ಕೊನೆಯದಾದರೂ ಅತಿ ಮಹತ್ವದ ಮಾತೆಂದರೆ ಅದರಿಂದ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇವರಲ್ಲಿ ಒಂದು ಮಧುರವಾದ ಸಂಬಂಧವುಂಟಾಗಿ ಅದು ಇಡೀ ಶಾಲೆಯ ಚೇತನ ಶಕ್ತಿಯಾಗಿ ಪರಿಣಮಿಸುತ್ತದೆ ಮತ್ತು ಆದರಿಂದಲೇ ಶಾಲೆಯಲ್ಲಿ ಉತ್ತಮ ಶಿಸ್ತು ತಾನಾಗಿಯೇ ನೆಲೆಗೊಳ್ಳುತ್ತದೆ.

ವಿದ್ಯಾರ್ಥಿಗಳು ಭಾಗವಹಿಸುವದರ ವಿವರಗಳು ಎಲ್ಲ ಸಂಸ್ಥೆಗಳಲ್ಲಿ ಒಂದೇ ಇರಲಾರವು. ಅವು ಆ ಕಾಲದ ಪರಿಸ್ಥಿತಿ ಮತ್ತು ಸುತ್ತಲಿನ ಸಮಾಜದ ಅವಶ್ಯಕತೆಗಳಗನುಸರಿಸಿ ಹಾಗು ವಿದ್ಯಾರ್ಥಿಗಳ ಮಾನಸಿಕ ಬಲ, ಪೂರ್ವಾನುಭವ ಮತ್ತು ಅಭಿರುಚಿಗಳಿಗೆ ತಕ್ಕಂತೆ ಅವು ಬೇರೆಬೇರೆಯಾಗುವದು ಸ್ವಾಭಾವಿಕವು. ಆದರೆ ಒಂದು ಮಾತೆಂದರೆ ಈ ದೃಷ್ಟಿಯಿಂದ ಗೊತ್ತು ಮಾಡಿದ ಕಾರ್ಯಕ್ರಮವು ವೈಯಕ್ತಿಕ ಹಾಗು ಸಾಂಘಿಕ ಹೊಣೆಗಾರಿಕೆಯುಳ್ಳದ್ದೂ ಇರಬೇಕು. ಇದಕ್ಕಾಗಿ ಅನೇಕ ಚಟುವಟಿಕೆಗಳನ್ನು ಸೂಚಿಸಬಹುದು. ಉದಾಹರಣಾರ್ಥವಾಗಿ ವರ್ಗದ ಮತ್ತು ಶಾಲೆಯ ಆವಾರದ ಸ್ವಚ್ಛತೆ, ನಡವಳಿಕೆಗೆ ಸಂಬಂಧಪಟ್ಟ ನಿಯಮಗಳನ್ನು ರಚಿಸುವದು, ವಿದ್ಯಾರ್ಥಿಗಳ ನ್ಯಾಯಮಂಡಲ ಹಾಗು ಪಂಚಕಮಿಟಿ ಇವುಗಳ ಸಂಘಟನೆ ಇತ್ಯಾದಿ. ಬೇರೆ ಶಬ್ದಗಳಲ್ಲಿ ಹೇಳುವದಾದರೆ ಅದು ವಿದ್ಯಾರ್ಥಿಗಳಿಂದಲೇ ನಡೆಯಿಸಲಾದ ವಿದ್ಯಾರ್ಥಿಗಳ ಮೇಲಿನ ಆಡಳಿತೆ. ಇದ-

ರಿಂದ ಎಲ್ಲವನ್ನೂ ವಿದ್ಯಾರ್ಥಿಗಳಿಗೇನೇ ಬಿಟ್ಟುಕೊಡಬೇಕೆಂದು ಅರ್ಥವಲ್ಲ. ಆದರೆ ಇಷ್ಟೇ, ಸ್ವ-ಆಡಳಿತೆಯು ಯಾವ ಪ್ರಮಾಣದಲ್ಲಿಯೇ ನಡೆದರೂ ಅದು ಹುಡುಗಾಟಿಕೆಯ ರೂಪವನ್ನು ತಾಳಕೂಡದು. ವಿದ್ಯಾರ್ಥಿಗಳಿಗೆ ಕೊಟ್ಟ ಅಧಿಕಾರವು ನಿಜವಾಗಿಯೂ ಅಧಿಕಾರವಾಗಿರಬೇಕು. ಅಲ್ಲದೆ ಅದನ್ನು ಸರಿಕಂಡ ಪ್ರಮಾಣದಲ್ಲಿ ಕ್ರಮೇಣ ವರ್ಗಾಯಿಸಬೇಕು. ಅದನ್ನು ಒತ್ತಾಯದಿಂದ ವಿದ್ಯಾರ್ಥಿಗಳ ಮೇಲೆ ಹೇರಲೂ ಬಾರದು. ಅದು ಪರಸ್ಪರರ–ಅಂದರೆ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಸ್ವ–ಸಂತೋಷದಿಂದ ಮಾಡಿದ ಯೋಜನೆಯಾಗಬೇಕು. ಹೀಗೆ ಆಗದೆ ಅಧಿಕಾರವು ನಿಮಿತ್ತಕ್ಕೆ ತಾತ್ಪೂರ್ತಿಕವಾಗಿ ವರ್ಗಾಯಿಸಲ್ಪಟ್ಟಿದೆ ಎಂಬ ಭಾವನೆ ಶಿಕ್ಷಕರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ತಲೆದೋರಿದರೆ ವಿದ್ಯಾರ್ಥಿಗಳು ಶಾಲೆಯ ಸಂವಿಧಾನದಲ್ಲಿ ಭಾಗವಹಿಸುವದು ಕೇವಲ ಮಳಲಿನ ಮನೆಯನ್ನು ಕಟ್ಟಿದಂತಾಗಬಹುದು. ಅದ್ದರಿಂದ ಈ ವಿಷಯದಲ್ಲಿ ಹಳೆಯ ಕಾಲದ ಶಿಕ್ಷಕರು ತಮ್ಮ ಮನೋಭೂಮಿಕೆ ಹಾಗು ದೃಷ್ಟಿಕೋನವನ್ನು ಬದಲಿಸಬೇಕು. ಇಲ್ಲದಿದ್ದರೆ ಮೇಲೆ ಮಾಡಿದ ಪ್ರಸ್ತಾಪವು ಫಲಕಾರಿಯಾಗುವ ಸಂಭವವೇ ಇಲ್ಲ.

ಇನ್ನು ಎರಡನೆಯ ತತ್ವವೆಂದರೆ ಆತ್ಮಸಂತೋಷಕ್ಕಾಗಿ ಮಾಡುವ ವ್ಯಾಸಂಗ (hobby), ವಿರಾಮಕಾಲದ ಉದ್ಯೋಗ ಮತ್ತು ಪಠ್ಯೇತರ ಚಟುವಟಿಕೆ ಇವನ್ನು ಒದಗಿಸುವದು. ಇವುಗಳನ್ನು ಸಂಸ್ಥೆಗಳ ನಿತ್ಯ ಕಾರ್ಯಕ್ರಮದಲ್ಲಿ ಸಮಾವೇಶಗೊಳಿಸುವದರಿಂದ ಶಿಸ್ತಿನಲ್ಲಿ ತರಬೇತುಗೊಳಿಸುವ ಕಾರ್ಯವು ಸುಗಮವಾಗುವದು. ಶಿಕ್ಷಣವು ಉದರನಿರ್ವಾಹ ಮತ್ತು ವಿರಾಮಕಾಲ ಎರಡಕ್ಕೂ ತಕ್ಕ ಸಾಮಗ್ರಿಯನ್ನು ಒದಗಿಸಬೇಕು. ಇದಕ್ಕೆ ತಪ್ಪಿದರೆ ಅಂಥ ಶಿಕ್ಷಣದಿಂದ ಮನಸ್ಸು, ದೇಹ ಮತ್ತು ಚಾರಿತ್ರ್ಯ ಇವುಗಳಿಗೆ ಬಲವಾದ ಹಾನಿ ತಟ್ಟದೆ ಇರದು. ಪಠ್ಯೇತರ ಚಟುವಟಿಕೆಗಳಲ್ಲಿ ಜ್ಞಾನಕ್ಕಿಂತಲೂ ನಡತೆಗೆ ಪ್ರಾಧಾನ್ಯವಿರುತ್ತದೆ. ಅಂತೆಯೇ ಅವು ನಡತೆಗೆ ಸಂಬಂಧಪಟ್ಟ ಆಂತರಿಕ ಪ್ರೇರಕ ಶಕ್ತಿಗಳನ್ನು ನಿಯಂತ್ರಿಸುವದರಲ್ಲಿ ಮತ್ತು ಒಬ್ಬ ವ್ಯಕ್ತಿಯ ಕಾರ್ಯಕಲಾಪಗಳ ದಿಗ್ದರ್ಶನ ಮಾಡುವುದರಲ್ಲಿ ಅವು ಮಹತ್ತರವಾದ ಪಾತ್ರವನ್ನು ವಹಿಸುತ್ತವೆ. ಆದರೆ ಅವುಗಳಿಂದ

ಆದಷ್ಟು ಹೆಚ್ಚಿಗೆ ಲಾಭ ಪಡೆಯಲು ಕೆಳಗಿನ
ಗಳನ್ನು ನೆನಪಿನಲ್ಲಿಡುವದು ಅವಶ್ಯವು.

ಮೊದಲನೆಯದೆಂದರೆ ಒದಗಿಸಲಾದ ಚಟು
ಸಂಖ್ಯೆ ಸಾಕಷ್ಟು ದೊಡ್ಡದಿದ್ದು ಅವುಗಳಲ್ಲಿ ವೈ
ಬೇಕು. ಅಂದರೇನೆ ಎಲ್ಲ ತರದ ಅಭಿರುಚಿ,
ಸಾಮರ್ಥ್ಯಗಳುಳ್ಳ ವಿದ್ಯಾರ್ಥಿಗಳಿಗೆ ಅನುವು
ಕೊಟ್ಟಂತಾಗಿ ಮೇಲೆ ಉಲ್ಲೇಖಿಸಿದ ಗುರಿಯ
ಸಲು ಸುಲಭವಾಗುವದು. ಅಭಿರುಚಿಯನ್ನು
ವಂಥ ಚಟುವಟಿಕೆಗಳಿಂದಲೇ ವ್ಯಕ್ತಿತ್ವವು
ಸಾಧ್ಯ.

ಎರಡನೆಯದಾಗಿ ಶೀಲ ಪೋಷಣೆಗೆ ಸ
ವಾಗುವಂತೆ ಈ ಚಟುವಟಿಕೆಗಳನ್ನು ಸಾಗಿ
ಅದಕ್ಕಾಗಿ ಪ್ರತಿಯೊಂದು ಚಟುವಟಿಕೆಯ ಗು
ಅಥವಾ ಗುರಿಗಳನ್ನು ಸ್ಪಷ್ಟವಾದ, ನಿರ್ದಿ
ನಿಃಸಂದಿಗ್ಧವಾದ ಮಾತುಗಳಲ್ಲಿ ಮಂಡಿಸಬೇಕು
ಸಂಘಟಿಸುವ ಮತ್ತು ಸಾಗಿಸುವ ಹೊಣೆಗಾ
ವಿದ್ಯಾರ್ಥಿಗಳಿಗೆ ಒಪ್ಪಿಸಬೇಕು ಮತ್ತು ಇಂಥ
ವಟಿಕೆಗಳಿಗೆ ಶಾಲೆಯ ಅವಧಿಗಳಲ್ಲಿಯೇ
ಸ್ಥಾನವನ್ನು ಕೊಡಬೇಕು. ಅವು ಕೇವಲ
ದೈನಂದಿನ ಕಾರ್ಯದ ಬಾಲವಾಗಿ ಜೋ
ಬಾರದು.

ಮೇಲಿನ ಸೂಚನೆಗಳಿಂದ ಹೊರಡುವ
ಸಿದ್ಧಾಂತವೆಂದರೆ ಈ ಚಟುವಟಿಕೆಗಳು
ಹೊತ್ತಿನಲ್ಲಿ ಆಡುವಾಗ — ಅದರಲ್ಲಿಯೂ
ವಿಶೇಷ ಪ್ರಾವಿಣ್ಯತೆಯನ್ನು ಪಡೆದವರಿಂದ
ಕ್ರಿಕೆಟ್, ಫುಟಬಾಲ್, ಮುಂತಾದ ಆ
ಮರ್ಯಾದಿತವಿರಕೂಡದು. ಅವುಗಳ ಜೊತೆ
ಕೂಟ ಹಳೆಯವಿದ್ಯಾರ್ಥಿಗಳ ಸಂಘ, ಸಂಗೀ
ನಾಟ್ಯಸಂಘ, ಬಾಲವೀರಸಂಘ, ಪ್ರವಾಸ
ಪ್ರಕೃತಿನಿರೀಕ್ಷಣ ಸಂಘ, ಅಭ್ಯಾಸ ಮಂಡಲ
ಸಿ., ಉತ್ಸವಕಮಿಟಿ, ಪುಸ್ತಕಸಂಘ, ಸು
ಸಮಾಜ ಸೇವಾ ಸಂಘ, ಕಲಾ ಸಂಘ, ಫೊ
ಗ್ರಾಫಿ ಸಂಘ, ಕೈ ತೋಟಸಂಘ, ಸಹಕಾ
ಕಿರಿಯರ ರೆಡಕ್ರಾಸ ಸಂಸ್ಥೆ, ಕೈ ಬರಹಪತ್ರಿಕೆ
ಇವೂ ಇರಬೇಕು. ಪ್ರತಿಯೊಂದು ಶಾಲೆಯಲ್ಲಿ

ಕೆಂತಲ್ಲ, ಇದರ ಅರ್ಥವಿಷ್ಟೇ—ಶಿಕ್ಷಕರ ಅಭಿ-
ಉತ್ಸಾಹ, ಮತ್ತು ಸ್ವಯಂಪ್ರೇರಣೆ ಹಾಗೂ
ರ್ಯ ಆವಶ್ಯಕತೆ, ಬೇಡಿಕೆ ಮತ್ತು ಬೆಳವಣಿಗೆಯ
ಇವಕ್ಕೆ ತಕ್ಕಂತೆ ಸಾಕಷ್ಟು ದೊಡ್ಡ ಪ್ರಮಾಣ-
ಇಂಥ **ಚಟು**ವಟಿಕೆಗಳನ್ನು ಏರ್ಪಡಿಸಬೇಕು
ವಿದ್ಯಾರ್ಥಿಗಳು ಸಾಂಘಿಕ, ಸಾಮಾಜಿಕ ಕರ್ತ-
ತ್ವ **ಸ್ವ**ಯಂಸ್ಫೂರ್ತಿಯಿಂದ ಕೈಕೊಂಡು
ಿಕ **ಮಾನವ** ಹಿತ ನಿಷ್ಠೆಯುಳ್ಳವರೂ ಸುಸಂಸ್ಕೃ-
ಗುವಂ**ತಹ** ರೀತಿಯಲ್ಲಿ ಅವನ್ನು ಸಾಗಿಸಬೇಕು.
ಶ್ನ **ಸುವ್ಯ**ವಸ್ಥೆ**ಯ**ನ್ನು **ಕಾ**ಯುವದು ಎಂಬ
ಲ್ಲಿ **ಶಿಸ್ತಿನ** ಬಗ್ಗೆ ಹಲವು ಮಾತುಗಳನ್ನು ಹೇಳು
ವಶ್ಯ**ವೆಂ**ದು ತೋರುತ್ತದೆ. ಹಿಂದಿನ **ಕಾ**ಲದಲ್ಲಿ
ಎಂದರೆ ವರ್ಗದಲ್ಲಿ, ಕ್ರೀಡಾಂಗದಲ್ಲಿ ಮತ್ತು
ಗಳಲ್ಲಿ **ಹು**ಡುಗರ ದುರ್ನಡತೆಯನ್ನು ತಡೆಗಟ್ಟು
ಎಂದು ತಿಳಿಯಕೊಳ್ಳಲಾಗುತ್ತಿತ್ತು. ಇಂದಿಗೂ
ಈ **ವಿಷಯ**ದಲ್ಲಿ ನಮ್ಮ ದೇಶದ ಶಾಲೆಗಳಲ್ಲಿಯ
ಯು **ಹೇಳಿ**ಕೊಳ್ಳುವಷ್ಟು ಸುಧಾರಿಸಿಲ್ಲವೆಂಬುದು
ದ **ಸಂಗ**ತಿಯು. ಎಷ್ಟೋ ಶಾಲೆಗಳಲ್ಲಿ ಶಿಸ್ತು
ಮಕ್ಕಳ ದುರ್ನಡತೆಯನ್ನು ಕಂಡು ಹಿಡಿಯುವ
ಮತ್ತು ಅದಕ್ಕಾಗಿ ಅವರನ್ನು ಶಿಕ್ಷಿಸುವದೇ
ಣೆಯ ಉಪಾಯನೆಂದೂ ಭಾವಿಸಲಾಗುತ್ತಿದೆ.
ದ **ಕೆಲ**ಸವು ಸುಸೂತ್ರವಾಗಿ ಸಾಗಲು ಸುವ್ಯವ
ಬೇಕು. ಆದರೆ ವರ್ಗದ ಕೆಲಸದ ದೃಷ್ಟಿಯಿಂದ
ಣ**ಸ್ಥಾನ**ದಲ್ಲಿ ಇರಬೇಕೇ ಹೊರತು ಶಿಸ್ತಿನ
ಗು**ರಿಯಾ**ಗಬಾರದು. ವಿದ್ಯಾರ್ಥಿಗಳು ತಪ್ಪು
ತೆ **ಅದರ** ದೋಷವು ಯಾವಾಗಲೂ ಅವರ
ೀ **ಇರು**ತ್ತದೆಂದು ಹೇಳಲಾಗುವದು. ಅದು
ಜ್ಞಾನದ ಕೊರತೆ ಅಥವಾ ತಪ್ಪು ತಿಳುವಳಿಕೆಯ
ತುವಾಗಿರಬಹುದು. ಕೆಲವು ಪ್ರಸಂಗಗಳಲ್ಲಿ
ದೋಷಕ್ಕೆ ಪಾತ್ರನೆಂದು ಕಂಡು ಬರಬಹುದು.

ಕಲಿಸುವಿಕೆಯು ದೋಷಪೂರ್ಣವಾಗಿದ್ದರೆ
ಕೃಷ್ಟವಾದ ಮತ್ತು ನಿಷ್ಫಲವಾದ ಶಿಸ್ತಿಗೆ ಕಾರ
ಬ**ಹುದು.** ನಿಷ್ಕ್ರಿಯತೆ, ದಣಿವು, ಬೇಸರ, ಇವು
ಗಳು**ನ್ನು**ಂಟುಮಾಡಬಹುದು. ಶಕ್ತಿಯ ಅಪ-
ಅತ್ಮ ವಿಭಾಗವಕ್ಕೆ ಅವಕಾಶ ಸಿಕ್ಕದೆ ಇರುವದು, ನಿರ್ಬಂಧಗಳ ಬಗ್ಗೆ ಅಸಮಾಧಾನ, ವರ್ಗದೊಳಗಿನ ವಾತಾವರಣ, ಆತ್ಮ ದುರಭಿಮಾನ, ಕೀಳ ಮನೋ-ವೃತ್ತಿ, ಭಾವೋದ್ರೇಕ ಪ್ರವೃತ್ತಿ, ದುಃಸಾಹಸ ಮತ್ತು ಮಾತ್ಸರ್ಯ ಮತ್ತು ಇಂಥವೇ ಇನ್ನಿತರ ಸಂಗತಿಗಳು ಶಿಸ್ತಿನ ವಿಷಯದಲ್ಲಿ ತೊಡಕನ್ನುಂಟುಮಾಡಬಹುದು ಮತ್ತು ಅವುಗಳ ಹೊಣೆಗಾರಿಕೆಯನ್ನು ಪೂರ್ಣತಃ ವಿದ್ಯಾರ್ಥಿಗಳ ಮೇಲೆ ಹಾಕುವದು ತಪ್ಪಾದೀತು.

ಇನ್ನೊಂದು ಗಂಭೀರವಾಗಿ ಆಲೋಚಿಸತಕ್ಕ ವಿಷಯ ವೆಂದರೆ ಶಿಕ್ಷಕನ ಪಾತ್ರ. ತಪ್ಪು ನಡತೆ ಇಲ್ಲವೆ ದುರ್ನಡೆ-ತೆಯ ಬಗ್ಗೆ ವಿಚಾರಿಸುವಾಗ ಶಿಕ್ಷಕನು ಆ ಸಮಸ್ಯೆಯ ಬಾಹ್ಯ ಸ್ವರೂಪವನ್ನಷ್ಟೇ ಗಮನಿಸದೆ ಅದನ್ನು ಆಳವಾಗಿ ಅಭ್ಯಸಿಸಿ ಕೂಲಂಕಷವಾಗಿ ಪರಿಶೀಲಿಸಿ ಅದರ ಕಾರಣ ವನ್ನು ಗೊತ್ತು ಹಚ್ಚಬೇಕು ಮತ್ತು ಆ ಕಾರಣವನ್ನು ತೆಗೆದು ಹಾಕಲು ಉಪಾಯ ಕೈ ಕೊಳ್ಳಬೇಕು. ಆಂತ-ರಿಕ ಪ್ರೇರಕ ಶಕ್ತಿಗಳ ಮೇಲೆ ಏನೂ ಪರಿಣಾಮವಾಗ ದಂತೆ ಕೇವಲ ಬಾಹ್ಯ ಚಿಹ್ನಗಳನ್ನಷ್ಟೇ ಉಪಚರಿಸಿ ಹೊರ ನಡತೆಯನ್ನು ತಿದ್ದಿದರೆ ಎಂದಿಗೂ ಪರಿಣಾಮ-ಕಾರಕವಾದ ಶಾಶ್ವತವಾದ ಫಲವು ಲಭಿಸುವದು. ದುರ್ನಡತೆಯ ಒಂದು ವಿಶಿಷ್ಟ ಸನ್ನಿವೇಶವನ್ನು ಸರಿಪಡಿ-ಸಿದರೆ ಆಗದು, ಅದೊಂದು ಸಮಸ್ಯೆಯೆಂದು ತಿಳಿದು ಸರಿಯಾಗಿ ಮತ್ತು ಸಹಾನುಭೂತಿಪೂರ್ವಕವಾಗಿ ಅಭ್ಯ-ಸಿಸಬೇಕು. ಬೇರೆ ಬೇರೆ ವಿದ್ಯಾರ್ಥಿಗಳು ಮಾಡಿದ ಒಂದೇ ತರದ ತಪ್ಪಿಗೆ ಒಂದೇ ತರದ ಶಿಕ್ಷೆಯನ್ನು ಕೊಡುವದು ಅನುಚಿತವು. ಮೇಲೆ ಹೇಳಿದಂತೆ ಕೆಲವು ಸಮಸ್ಯೆಗಳು ಶಿಕ್ಷಕನ ವ್ಯಕ್ತಿತ್ವ, ಕಲಿಸುವಿಕೆ ಇವುಗಳಲ್ಲಿ ಯ ದೋಷಗಳಿಂದ ನಿಷ್ಪನ್ನವಾಗುವವು. ಅಂಥವು-ಗಳನ್ನು ಶಿಕ್ಷಕನು ತಾನೇ ಆತ್ಮನಿರೀಕ್ಷಣೆ ಮತ್ತು ಆತ್ಮ ಸುಧಾರಣೆ ಇವುಗಳ ಮೂಲಕ ಬಿಡಿಸಬೇಕು. ಶಿಕ್ಷಕನು ತನ್ನ ಕೆಲಸ ಹಾಗು ವಿದ್ಯಾರ್ಥಿಗಳ ವಿಷಯದಲ್ಲಿ ಹಿತ ಕರವಾದ ಮನೋಭೂಮಿಕೆಯನ್ನ ತಾಳಿದರೇನೇ ಇದು ಸಾಧ್ಯ. ಅವನು ಯಾವ ಕೆಲಸವನ್ನೂ ಅದೇ ಮನಸ್ಸಿ ನಿಂದ ಉದಾಸೀನತೆಯಿಂದ ಮಾಡಕೂಡದು. ವರ್ಗಕ್ಕೆ ಪೂರ್ಣ ಸಿದ್ಧತೆಯಿಂದ ಹೋಗಬೇಕು ಮತ್ತು ತನಗೆ ಒಪ್ಪಿಸಿದ ಕೆಲಸದಲ್ಲಿ ನಿಜವಾದ ಅಭಿರುಚಿಯನ್ನು ಬೆಳಸಿಕೊಳ್ಳಬೇಕು. ಪ್ರಶ್ನೆಗಳನ್ನು, ವರ್ಣನೆಗಳನ್ನು,

ಚಿತ್ರಗಳನ್ನು ಮತ್ತು ಇನ್ನಿತರ ಶೈಕ್ಷಣಿಕ ಉಪಕರಣಗಳನ್ನು ಸಾಕಷ್ಟು ಉಪಯೋಗಿಸಿ ಮಕ್ಕಳ ಮನಸ್ಸಿನಲ್ಲಿ ಅಭಿರುಚಿಯನ್ನು ಕೈಕೊಂಡ ಕೆಲಸದಲ್ಲಿ ಆಸಕ್ತಿಯನ್ನು ಹುಟ್ಟಿಸಬೇಕು. ಸ್ವಲ್ಪದರಲ್ಲಿ ಹೇಳುವದೆಂದರೆ ಅವನು ತನ್ನ ವಿದ್ಯಾರ್ಥಿಗಳನ್ನು ಕಾರ್ಯಕ್ಕಾಗಿ ಪ್ರೇರಿಸಲು ಶಕ್ತಿಮೀರಿ ಪ್ರಯತ್ನಿಸಬೇಕು. ಹೀಗೆ ಮಾಡಿದರೆ ಶಿಸ್ತಿಗೆ ಸಂಬಂಧಪಟ್ಟ ಎಷ್ಟೋ ಸಮಸ್ಯೆಗಳು ತಾವಾಗಿಯೇ ಮಾಯವಾಗುವವು. ಏಕೆಂದರೆ ಸಾಕಷ್ಟು ಅಭಿರುಚಿ ಮತ್ತು ಆಸಕ್ತಿಗಳಿಂದ ತನ್ನ ಕೆಲಸದಲ್ಲಿ ಮಗ್ನನಾದ ವಿದ್ಯಾರ್ಥಿಗೆ ತನ್ನ ಕೆಲಸ ಬಿಟ್ಟು ದುರ್ನಡತೆಯ ಬಗ್ಗೆ ವಿಚಾರಮಾಡಲು ಅವಕಾಶವು ಸಿಕ್ಕಲಾರದು, ಆದರಲ್ಲಿ ತೊಡಗುವದಂತೂ ದೂರೇ ಉಳಿಯಿತು.

ವರ್ಗದಲ್ಲಿಯ ಶಿಸ್ತು ಲಷ್ಕರೀ ಪದ್ಧತಿಯದು ಆಗಿರಬಾರದು. ಆದು ತಾತ್ಪೂರ್ತಿಕವಾಗಿರುವದಲ್ಲದೆ ಶಾಶ್ವತವಿರುವದಿಲ್ಲ. ಇದಕ್ಕೆ ಕಾರಣವೆಂದರೆ ಅದು ಅಷ್ಟೊಂದು ಉದಾತ್ತ ಉದ್ದೇಶಗಳಿಂದ ಪ್ರೇರಿತವಾಗಿರುವದಿಲ್ಲ. ಶಿಸ್ತನ್ನು ಕಾಯುವಲ್ಲಿ ಅಪ್ರತ್ಯಕ್ಷ ಪದ್ಧತಿಗಳು ಪ್ರತ್ಯಕ್ಷ ಪದ್ಧತಿಗಳಿಗಿಂತ ಶಾಶ್ವತವಾದ ಫಲವನ್ನು ಕೊಡುತ್ತವೆ. ಇದಕ್ಕೆ ವೇಳೆ ಹತ್ತಿದರೂ ಅಡ್ಡಿ ಇಲ್ಲ. ಶಿಕ್ಷಕನು ಪ್ರತ್ಯಕ್ಷ ಪದ್ಧತಿಗಳನ್ನು ಮೇಲಿಂದ ಮೇಲೆ ಉಪಯೋಗಿಸುತ್ತಿದ್ದರೆ ಅವನಲ್ಲಿ ಅಥವಾ ಅವನ ವಿದ್ಯಾರ್ಥಿಗಳಲ್ಲಿ ಅಥವಾ ಶಾಲೆಯ ಆಡಳಿತೆಯಲ್ಲಿ ಯಾವುದೋ ಒಂದು ದೊಡ್ಡ ದೋಷವಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು.

ಮೇಲೆ ಹೇಳಿದ ಎಲ್ಲ ಉಪಾಯಗಳು ಯಶಸ್ವಿಯಾಗಬೇಕಾದರೆ ಶಿಕ್ಷಕನು ತನ್ನ ವಿದ್ಯಾರ್ಥಿಗಳನ್ನು, ಅಂದರೆ ಅವರ ಮನೋಭೂಮಿಕೆ, ಒಲವು, ಅಭಿರುಚಿ ಮತ್ತು ಆಶೆ ಆಕಾಂಕ್ಷೆಗಳನ್ನು ಅರಿತುಕೊಳ್ಳಬೇಕು. ಅವನ ಕೆಲಸ ಮತ್ತು ಪದ್ಧತಿಗಳು ಹುಡುಗರ ವೈಯಕ್ತಿಕ ಸಾಮರ್ಥ್ಯಗಳಿಗೆ ಸರಿಹೋಗುವಂಥವಿರಬೇಕು. ಮಂದ ಬುದ್ಧಿಯವರಿಗೆ ಭರದಿಂದ ಮುಂದೆ ಸಾಗುವಂತೆ ಒತ್ತಾಯಪಡಿಸುವದು ಚುರುಕು ಬುದ್ಧಿಯವರನ್ನು ಹಿಂದಕ್ಕೆ ಜಗ್ಗುವದು ಅನಿಷ್ಟ ಹಾಗೂ ಹಾನಿಕರ. ವಿದ್ಯಾರ್ಥಿಗಳ ಕೂಡ ವೈಯಕ್ತಿಕವಾಗಿ ಸೌಹಾರ್ದಮಯವಾದ ಸಂಬಂಧವನ್ನು ಬೆಳಸುವದೇ ಅವರನ್ನು ಪ್ರಯತ್ನಶೀಲರನ್ನಾಗಿ ಮಾಡಲು, ಅವರ ಸಹಕಾರವನ್ನು ಪಡೆಯಲು
ಮತ್ತು ಶಾಲೆಯ ಎಲ್ಲ ಕಾರ್ಯಗಳನ್ನು ನಿರ್ವಿ
ಸಾಗಿಸಲು ಅತ್ಯಂತ ಬಲವಾದ ಸಾಧನವು.

ಕೊನೆಯದಾಗಿ ಶಿಕ್ಷಣಕಾರ್ಯದಲ್ಲಿ ಬ
ಮತ್ತು ಶಿಕ್ಷೆ ಇವುಗಳ ಸ್ಥಾನವನ್ನು ಕುರಿತು
ವದಗತ್ಯ. ಸೂತ್ರರೂಪದಲ್ಲಿ ಹೇಳುವದಾದರೆ
ಪರಿಸ್ಥಿತಿಯಲ್ಲಿ ಎರಡಕ್ಕೂ ಸ್ಥಾನವಿಲ್ಲ. ಆ
ಸ್ಥಿತಿಯಲ್ಲಿ ಎರಡೂ ಇಲ್ಲದೆ ನಡೆಯುವಂತಿ
ಇಷ್ಟೇ, ಶಿಕ್ಷಕನು ಕಲಿಸುವಿಕೆ ಮತ್ತು ಕ
ಪರಿಣಾಮಕಾರಕ ಮತ್ತು ಲಾಭದಾಯಕವಾ
ಮೇಲೆ ವಿವರಿಸಿದ ರೀತಿಯಲ್ಲಿ ಶಿಸ್ತು ಸ
ಸಾಧ್ಯವಾಗುವಂತೆ ಅವನ್ನು ಉಪಯೋಗಿ
ಯನ್ನು ಸಾಧಿಸಬೇಕು. ಮೇಲಿಂದ ಮೇಲೆ
ಕೊಡುವದರಿಂದ ಅವನ್ನು ಪಡೆದವರ ತ
ಬಹುದು; ಮೇಲಿಂದ ಮೇಲೆ ಶಿಕ್ಷಿಸುವದರಿಂ
ಲ್ಪಟ್ಟವರು ರೊಚ್ಚಿಗೆದ್ದು ದಂಗೆ ಹೂಡಬ
ಎರಡೂ ಅನಿಷ್ಟ ಸಂಗತಿಗಳು ಒದಗದಂ
ಎಚ್ಚರಿಕೆಯನ್ನು ವಹಿಸಬೇಕು. ಇದಕ್ಕಾಗಿ
ಗಳು ಆದಷ್ಟು ಕಡಿಮೆ ಇರಬೇಕು. ಅ
ಅವಿಶ್ರಾಂತ ಶ್ರಮದಿಂದ ದೊರಕುವಂಥ
ಹಾಗೆಯೇ ಶಿಕ್ಷೆಯೆಂಬುದು ಕೆಟ್ಟದ್ದೇ; ಮತ್ತು
ಅದು ತ್ಯಾಜ್ಯವೇ ಸರಿ. ಆದರೆ ಶಸ್ತ್ರಚಿಕಿತ್ಸೆ
ಯಂತೆ ಅದರ ಉಪಯೋಗವು ಒಮ್ಮೊ
ವಾರ್ಯವಾಗಬಹುದು. ಆದರೆ ಇಂಥ
ಆದಷ್ಟು ಉದ್ಭವಿಸದಂತೆ ನೋಡಿಕೊಳ್ಳಬೇ
ಶಿಕ್ಷೆಯಂತೂ ಸರ್ವಥಾ ತ್ಯಾಜ್ಯವಾದದ್ದು
ಕೊಡುವವನಿಗೂ ಮತ್ತು ಹೊಂದುವವನಿಗೂ
ಅವಮಾನಕರವಾದ ಸಂಗತಿಯು ಬೇರೊಂದಿ

ಕೊನೆಯದಾಗಿ ಹೇಳುವದೆಂದರೆ ಶಿಸ್ತಿಗೆ
ಪಟ್ಟ ಸಮಸ್ಯೆಯು ಎಲ್ಲ ಸಮಸ್ಯೆಗಳಲ್ಲಿ ಗಹ
ಮತ್ತು ಅನೇಕ ತೊಂದರೆಗಳಿಂದ ಒ
ಮೇಲೆ ಮೇಲೆ ನೋಡುವವರಿಗೆ ಅದು ದ
ವಂತಿದ್ದರೂ ಅದನ್ನು ಕೂಡಲೆ ಬಿಡಿಸಬೇಕ
ಕತೆಯನ್ನು ಯಾರೂ ಅಲ್ಲಗಳೆಯಲಾರರು.
ಒಬ್ಬ ವ್ಯಕ್ತಿಯ ಅಥವಾ ಒಂದು ಸಂಸ್ಥೆಯ
ವಾದ ಪ್ರಯತ್ನದಿಂದ ಆಗದ ಮಾತು. ಈ

ವಿದ್ಯಾಲಯ ಶಿಕ್ಷಣ ಸಮಿತಿಯವರು ತಮ್ಮ ಆರ ವರದಿಯಲ್ಲಿ ಹೀಗೆ ಅಭಿಪ್ರಾಯವನ್ನು ವ್ಯಕ್ತ ಡಿದ್ದಾರೆ. "ಉದಾತ್ತ ಜೀವನ ಮತ್ತು ಉಚ್ಚವಾದ ಕ ಮಾನದಂಡಗಳಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಳಿತಗಾರರಾಗಲಿ, ಶಿಕ್ಷಕರಾಗಲಿ ಕ್ರೀಡಾಂಗಣದ ಲೆ ಸಮಾಧಾನಕರವಾಗಿ ಬಿಡಿಸಲಾರರು. ಅದಕ್ಕೆ ಕರ, ರಾಜಕೀಯ ಮುಖಂಡರ, ಜನತೆಯ ಮತ್ತು ತ್ರಪತ್ರಿಕೆಗಳ ಸಹಕಾರವು ಅವಶ್ಯವಾದದ್ದು. ಇದು ಕಾರೀ ತತ್ವದ ಮೇಲೆ ನಡೆಯುವ ಕಾರ್ಯವಿದ್ದು ಳ್ಳೆಯ ನಾಗರಿಕರ ಬೆಂಬಲ ಪಡೆಯಲು ಅರ್ಹ ಗಿದೆ. ಅದರ ಪರಿಣಾಮವು ಕೇವಲ ಉಚ್ಚ ಶಿಕ್ಷಣದ ದೃಷ್ಟಿಯಿಂದಷ್ಟೇ ಅಲ್ಲದೆ ನಮ್ಮ ದೇಶದ ಅಭಿವೃದ್ಧಿಯ ದೃಷ್ಟಿಯಿಂದಲೂ ಮಹತ್ವದ್ದಾಗಿದೆ." ಈ ವಿಶಾಲವಾದ ದೇಶದ ನಿವಾಸಿಗಳೆಲ್ಲರೂ, ಮುಖ್ಯವಾಗಿ ಶಿಕ್ಷಕರು ಹಾಗು ವಿದ್ಯಾರ್ಥಿಗಳು, ಈ ಸಮಸ್ಯೆಯ ಸಹಕಾರೀ ಸಮಸ್ಯೆಯನ್ನು ಅರಿತುಕೊಂಡು, ಆ ಸಮಸ್ಯೆಯ ಬೃಹದಾಕಾರ ಮತ್ತು ಅದನ್ನು ಕೂಡಲೆ ಬಿಡಿಸುವ ಅವಶ್ಯಕತೆ ಇವುಗಳಿಗೆ ತಕ್ಕಂತೆ ಪ್ರಯತ್ನ ಮಾಡಿ ನಮ್ಮ ಶಿಕ್ಷಣದ ಅಧೋಗತಿಗೆ ಕಾರಣವಾದ, ನಮ್ಮ ದೇಶದ ಪ್ರಗತಿ ಹಾಗು ಅಭಿವೃದ್ಧಿಯ ಮಾರ್ಗದಲ್ಲಿ ದುಸ್ತರವಾದ ಅಡ್ಡಿಯಂತಿದ್ದ, ಈ ಅಶಿಸ್ತೆಂಬ ಪೆಡಂಭೂತವನ್ನು ಹೊಡೆದೋಡಿಸುವರೆಂದು ಆಶಿಸಬಹುದೇ ?

ಹೊರಬಿದ್ದಿದೆ ! **ಬೆಳಕು ಕಂಡಿದೆ !!**

ಎರಡನೆಯ ಆವೃತ್ತಿ | **ಶೈಕ್ಷಣಿಕ ಮನೋವಿಜ್ಞಾನ** | **ಪುಟ ೩೦೦**

ಬರೆದವರು : **ಡಾ| ವಿ. ಕೊ. ಜವಳಿ,** M. Ed. Ph. D. M. A. (ಕೋಲಂಬಿಯಾ)

ಬೆಲೆ **ಎರಡು ರೂಪಾಯಿ ಮಾತ್ರ**

ಶಿಕ್ಷಣದಲ್ಲಿ ಮತ್ತು ಮನೋವಿಜ್ಞಾನದಲ್ಲಿ ಹೊಸ ಹೊಸ ಸಂಶೋಧನೆಗಳಿಂದ ಕೂಡಿದೆ. ಕನ್ನಡಿಗರಿಗೆ ಮತ್ತು ವಿಶೇಷವಾಗಿ ಕನ್ನಡ ಪ್ರಾಥಮಿಕ ಶಿಕ್ಷಕರಿಗೆ ಅತ್ಯುಪಯುಕ್ತ ! ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅಭ್ಯಾಸಪತ್ರಿಕೆಯ ಎಲ್ಲ ವಿಷಯಗಳೂ ಇದರಲ್ಲಿ ಬಂದಿವೆ. ತಿಳಿಯಾದ ಸುಂದರ ಶೈಲಿ ! ಈ ಶೈಕ್ಷಣಿಕ ಮನೋವಿಜ್ಞಾನದ ಬಗೆಗೆ ಸ್ವತಂತ್ರವಾಗಿ ಬರೆಯಲ್ಪಟ್ಟ ೩೦೦ ಪುಟಗಳು ಮತ್ತು ೧೧ ಅಧ್ಯಾಯಗಳನ್ನೊಳಗೊಂಡ ಪುಸ್ತಕ ಕನ್ನಡದಲ್ಲಿ ಇದೊಂದೇ.

ಪುಸ್ತಕವು ಪ್ರಕಟವಾಗಿದೆ.

ಪ್ರಕಾಶಕರು :

ಆಕಳವಾಡಿ ಬುಕ್ ಡಿಪೋ, ಧಾರವಾಡ

ಅವರಿಗೆ ಬರೆದು ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ.

ಪ್ರಶ್ನೆ ಮಾಡುವ ಕಲೆ

ಲೇಖಕರು:—ಶ್ರೀ. ತಟ್ಟಿ ರಾಮರಾಯರು, ಧಾರವಾಡ

ವ್ಯವಹಾರದಲ್ಲಿ ಸಾಮಾನ್ಯವಾಗಿ ನಾವು ಪ್ರಶ್ನೆ ಮಾಡುವುದೇತಕ್ಕೆ? ಯಾವಾಗ? ಯಾವುದಾದರೊಂದು ವಿಚಾರದ ತೊಡಕನ್ನು ಬಿಡಿಸಲು ಪ್ರಯತ್ನಿಸುತ್ತಿದ್ದಾಗ; ಮತ್ತು ಏನಾದರೊಂದು ವಿಷಯದ ವಿವರ ಬೇಕಾದಾಗ; ಮತ್ತು ಯಾರಿಂದ ನಮಗೆ ಸಮರ್ಪಕವಾದ ಉತ್ತರವು ದೊರೆಯಬಹುದೆಂದು ಎನಿಸುವದೋ ಅಂಥವರಿಗೆ ಆ ಪ್ರಶ್ನೆ ಮಾಡುವೆವು. ಮನೆಯಲ್ಲಿ ಮಕ್ಕಳು ತಮ್ಮ ಹಿರಿಯರಿಗೆ ಯಾವಾಗಲೂ ಇಂತಹ ಪ್ರಶ್ನೆಗಳನ್ನು ಕೇಳುತ್ತಿರುವರು; ವಿವೇಕಿಗಳಾದ ತಂದೆ ತಾಯಂದಿರೂ ಈ ತರದ ರೂಢಿಯನ್ನು ಪ್ರೋತ್ಸಾಹಿಸುವರು. ಅನೇಕ ಸಾರೆ ಅದು ಹುಡುಗರ ಮನಸ್ಸಿನ ತೀವ್ರತೆಯನ್ನೂ ಅವಧಾನವನ್ನೂ ಸೂಚಿಸುವದು—ಶಿಕ್ಷಣಕ್ಕೆ ಅದು ಬಹು ಅನುಕೂಲವಾದ ಮನಸ್ಸಿನ ಸ್ಥಿತಿಯನ್ನು ಸೂಚಿಸುವದು. ಆದ್ದರಿಂದ ಸಾಲೆಯಲ್ಲಿ ಮಕ್ಕಳು ತಮ್ಮ ಶಿಕ್ಷಕರನ್ನು ಪ್ರಶ್ನೆ ಮಾಡುವ ಸ್ವಭಾವದವರಿರುವರೆಂಬದನ್ನು ನಾವು ಎದುರು ನೋಡುತ್ತಿರಬೇಕು. ದುರ್ದೈವದಿಂದ ಸಾಲೆಯಲ್ಲಿಯ ವಾತಾವರಣವು ಒಮ್ಮೊಮ್ಮೆ ಇದಕ್ಕೆ ಪ್ರಸನ್ನವಾಗಿರುವದಿಲ್ಲ. ಹೀಗಿದ್ದಾಗ ಪ್ರಶ್ನೆಗಳು ವರ್ಗದಲ್ಲಿ ನಡೆದಿರುವ ಕ್ರಮದ ಒಂದು ಮುಖ್ಯ ಲಕ್ಷಣವಾಗುವಂತೆ ತನಗೂ ತನ್ನ ವರ್ಗಕ್ಕೂ ಸಂಬಂಧವನ್ನು ಸ್ಥಾಪಿಸುವದೇ ತನ್ನ ಮೊದಲನೆಯ ಪ್ರಯತ್ನವೆಂದು ಶಿಕ್ಷಕನು ಇಟ್ಟುಕೊಳ್ಳಬೇಕು—ಇಷ್ಟೇ, ಮಕ್ಕಳಿಗೆ ದೊರೆತ ಈ ಸ್ವಾತಂತ್ರ್ಯವು ಸ್ವಚ್ಛಂದವೃತ್ತಿಯಲ್ಲಿ ಪರ್ಯವಸಾನವಾಗದಂತೆ ನೋಡಿಕೊಳ್ಳಬೇಕಾಗುವದು. ಆ ಸ್ವಾತಂತ್ರ್ಯದ ದುರುಪಯೋಗವನ್ನು ತಡೆಯಲು ಶಿಕ್ಷಕನು ಸಾಕಷ್ಟು ಗಟ್ಟಿಗನಾಗಿರದಿದ್ದರೆ ಪ್ರಶ್ನೆ ಕೇಳುವದನ್ನೇ ಪ್ರತಿಬಂಧಿಸುವದು ನೆಟ್ಟಗೆ. ಅನುಶಾಸನದ ಬಿಗುವೇ ಸಮರ್ಥ ಶಿಕ್ಷಕನದೊಂದು ಲಕ್ಷಣವಲ್ಲದಿದ್ದರೂ ಹೊಸದಾಗಿ ಬಂದ ಶಿಕ್ಷಕನು ಹೆಚ್ಚು ಅನುಭವಿಕವಾದ ತನ್ನ ಸಹಾಧ್ಯಾಪಕನು ಕೊಡುವಷ್ಟು ಸ್ವಾತಂತ್ರ್ಯವನ್ನು
ಹುಡುಗರಿಗೆ ಕೊಡಲಾರನು; ಆದಾಗ್ಯೂ ಆ ಬಿಗ
ಸಹಾನುಭೂತಿರಹಿತವಾದ ಕಠೋರತೆಯಲ್ಲಿ ಪ
ಮಿಸದಂತೆ ಎಚ್ಚರದಿಂದ ನೋಡಿಕೊಳ್ಳಬೇಕು.

ಎಷ್ಟೋ ಶಿಕ್ಷಕರು ತಮ್ಮ ವರ್ಗದಲ್ಲಿ ಪ್ರಶ್ನೆ ಕೇ
ಚಟಕ್ಕೆ ಪ್ರೋತ್ಸಾಹವಿತ್ತರೆ ಶಿಸ್ತಿಗೆ ಭಂಗಬರುವದೆ
ಹೆದರುತ್ತಾರೆ. ಇದೊಂದು ಭಯವಲ್ಲದೆ ಇನ್ನೂ ಎ
ರಡು ಸಂಗತಿಗಳ ಕಡೆಗೆ ಶಿಕ್ಷಕನು ಗಮನವೀಯಬೇ
ಗುವದು. ಮಕ್ಕಳು ಎಷ್ಟೋ ಸಾರೆ ಹುಡುಗಾಟಿ
ಹುಚ್ಚು, ಹುಚ್ಚು, ಪ್ರಶ್ನೆಗಳನ್ನು ಕೇಳುವರು.—ಬೇಕೆ
ಶಿಕ್ಷಕನಿಗೆ ತೊಂದರೆ ಕೊಡಬೇಕೆಂಬ ಬುದ್ಧಿಯಿ
ಇರಲಿಕ್ಕಿಲ್ಲ. ಒಂದು ಕ್ಷಣ ತಿಳಿದು ನೋಡಿದರೆ
ಪ್ರಶ್ನೆಗಳ ನಿರರ್ಥಕತೆಯು ಹುಡುಗರಿಗೇ ಹೊಳೆ
ವದು. ಮೊದಲು ಆಲೋಚಿಸಿ ನೋಡಿ ಆ ಮೇ
ಪ್ರಶ್ನೆ ಕೇಳುವಂತೆ ಮಕ್ಕಳನ್ನು ಸಜ್ಜುಗೊಳಿಸಬೇ
ಹಲವು ಸಾರೆ, ಮನೆಯಲ್ಲಿ, ಸೌಮ್ಯವಾದರೂ ದೃಢ
ನಿಯಂತ್ರಣವು ಬೇಕು; ಸಾಲೆಯಲ್ಲಂತೂ ಅ
ಇನ್ನೂ ಪ್ರಾಮುಖ್ಯತೆ ಇರುವದು. ವಾಚಾಲ
ಆಲೋಚನಾಪರತೆಗೂ ಇರುವ ಭೇದವನ್ನು
ತಿಳಿದುಕೊಳ್ಳಬೇಕು. ಇದೂ ಅಲ್ಲದೆ ಪ್ರಶ್ನೆಯನ
ಹೇಳುವುದಾದರೆ ಅದು ಒಳ್ಳೆಯದೇ ಇರಬಹುದು;
ಅದಕ್ಕೆ ಆ ಸಮಯದಲ್ಲಿ ಉತ್ತರಕೊಡಲು ಅನು
ಸಂದರ್ಭವಿಲ್ಲದೇ ಇರುವುದರಿಂದ ಆ ಪ್ರಶ್ನೆಯಿ
ಪಾಠಕ್ಕೆ ಒಂದು ತೊಂದರೆಯೇ ಉದ್ಭವಿಸಬಹು
ಯೋಚಿಸಿದ ಪಾಠದ ರೂಪರೇಷೆಯನ್ನು ಸ್ಪಷ್ಟ
ಮನಸ್ಸಿನಲ್ಲಿಟ್ಟುಕೊಳ್ಳದಿದ್ದರೆ ಮುಖ್ಯ ವಿಷಯ
ಬಿಟ್ಟು ಶಿಕ್ಷಕನು ಅಪ್ರಸ್ತುತ ಅಂಶಗಳಿಗೆ ಧಾವಿಸ
ಕಾಗಬಹುದು. ಕೆಲವು ಪ್ರಶ್ನೆಗಳಿಗೆ ಉತ್ತರಕೊಡ
ದನ್ನು ಮುಂದಕ್ಕೆ ಹಾಕುವದೇ ಒಳ್ಳೆಯದು. ಆ ಪ್ರ
ಗಳಿಂದ ಉದ್ಭೂತವಾದ ಸಮಸ್ಯೆಗೆ ಉತ್ತರನ
ಮುಂದಿನಸಾರೆ ನಿಧಾನವಾಗಿ ಆಲೋಚಿಸಿಕೊಂಡು

ಕ್ಕೆ ವರ್ಗದ ಹುಡುಗರಿಗೆ ಹೇಳಬಹುದು. ಕೊನೆಯ-
ಾಗಿ ಲಕ್ಷಿಸಬೇಕಾದ ಸಂಗತಿ ಯಾವುದೆಂದರೆ ತನಗೆ
ಂದ ಅಸಂಖ್ಯಾತವಾದ ಪ್ರಶ್ನೆಗಳಲ್ಲಿ ತನಗೆ ಬಿಡಿಸಲಿಕ್ಕೆ
ಾರದ ಎಷ್ಟೋ ಗಡುಚಾದ ಸಮಸ್ಯೆಗಳಿರಬಹುದು.
ಂಥ ಪ್ರಸಂಗಗಳಲ್ಲಿ ತನ್ನ ಅಜ್ಞಾನವನ್ನು ಶಿಕ್ಷಕನು
ಪ್ರಾಂಜಲತೆಯಿಂದ ಒಪ್ಪಿಕೊಳ್ಳುವದು ವಿಹಿತ ಸಾಧ್ಯವೂ
ಮಂಜಸವೂ ಆಗಿದ್ದ ಪಕ್ಷದಲ್ಲಿ ಮುಂದಿನ ಸಾರೆ ಅದನ್ನು
ೋಡಿಕೊಂಡು ಬರುವೆನೆಂದು ಬೇಕಾದರೆ ಅದರ
ಾಕೆಗೆ ಹೇಳಬಹುದು. ತನಗೆ ಗೊತ್ತಿಲ್ಲದುದನ್ನು
ೊತ್ತಿಲ್ಲವೆಂದು ಸ್ಪಷ್ಟವಾಗಿ ತಿಳಿದುಕೊಂಡ ಶಿಕ್ಷಕನಲ್ಲಿ
ುಡುಗರ ವಿಶ್ವಾಸವು ಕುಗ್ಗುವದಿಲ್ಲ.

ಸಾಲೆಗಳ ಪರಂಪರೆ ಹೇಗಿದೆ ಎಂದರೆ, ಪ್ರಶ್ನೆ ಮಾಡು
ದು ಮುಖ್ಯವಾಗಿ ಶಿಕ್ಷಕನಿಗೆ ಸೇರಿದ್ದು; ಅದು ಕಲಿ-
ುವ ಸಾಧನಗಳಲ್ಲಿ ಅತಿ ಮುಖ್ಯವಾದದ್ದೆಂದು ಆತನು
ಣಿಸುತ್ತಾನೆ. ಆತನ ಪ್ರಶ್ನೆಗಳಿಂದ ಆಗುವ ಪ್ರಯೋ-
ನ ಅನೇಕ ವಿಧವಾದದ್ದು. ತಾನು ವಿವೇಚಿಸಿದ್ದನ್ನು
ುಡುಗರು ಎಷ್ಟರಮಟ್ಟಿಗೆ ತಿಳಿದುಕೊಂಡಿದ್ದಾರೆ ಎಂಬ
ನ್ನು ಮತ್ತು ಅವರು ಅದನ್ನು ತಿರಿಗಿ ಹೇಳಬಲ್ಲರೋ
ೇಗೆ ಎಂಬದನ್ನು ಶಿಕ್ಷಕನು ನೋಡಲಪೇಕ್ಷಿಸಬಹುದು;
ಥವಾ ಅವರ ಕೆಲಸದಲ್ಲಿ ಮೇಲಿಂದ ಮೇಲೆ ಬೇಕಾ-
ುವ ಕೆಲವು ನಿಶ್ಚಿತ ಸಂಗತಿಗಳ ಮೇಲೆ ಅವರು ಎಷ್ಟರ
ಮಟ್ಟಿಗೆ ಪ್ರಭುತ್ವವನ್ನು ಪಡೆದಿರುವರು. ಆ ಪ್ರಭುತ್ವವು
ಕಷ್ಟಿಲ್ಲದಿದ್ದರೆ ಅದನ್ನು ಬಲಪಡಿಸುವದು-ಈ ಉದ್ದೇಶ
ರಬಹುದು. ಏಕೆಂದರೆ ಇವುಗಳಿಂದ ಅವರು ಸುಸಜ್ಜಿತ
ಾಗಿದ್ದರೆಯೇ ಅವರ ಅಭ್ಯಾಸದ ಪ್ರಗತಿಯು ಚೆನ್ನಾಗಿ
ಗುವದು (ಅಂಕಗಣಿತದಲ್ಲಿ ಮಗ್ಗಿಗಳು, ಗಣಿತದಲ್ಲಿನ
ನೇಕ ಸೂತ್ರಗಳು ಇತ್ಯಾದಿ). ಈ ಅವಶ್ಯಕತೆಯು ಕೆಲ
ಮಟ್ಟಿಗೆ ಇನ್ನಿತರ ಸಾಲೆಯ ವಿಷಯಗಳಿಗೂ ಹತ್ತು-
ದು—ಇತಿಹಾಸದಲ್ಲಿನ ಇಸವಿಗಳು, ಭೂಗೋಲದಲ್ಲಿನ
ುಖ್ಯ ಸಂಗತಿಗಳು, ವಿಜ್ಞಾನದಲ್ಲಿಯೂ ಭಾಷೆಯ-
ಯೂ ಸಾಮಾನ್ಯ ನಿಯಮಗಳು (ಮಾದರಿಯ
ುದಾಹರಣೆಗಳ ಸಹಿತ), ಬರಹದಲ್ಲಿರಬೇಕಾದ ಶಬ್ದದ
ಶಿಷ್ಟ, ಶಬ್ದಭಾಂಡಾರ ಇತ್ಯಾದಿ. ಈ ಎಲ್ಲ ಸಂದರ್ಭ-
ಗಳಲ್ಲಿ ಪ್ರಶ್ನೆಯ ರೂಪವು ಸರಳವಾದದ್ದೂ ನೇರವಾದದ್ದೂ
ರುವದು. ಇದರಲ್ಲಿ ಗೊತ್ತಿದ್ದದ್ದನ್ನೇ ಪುನರುಚ್ಚರಿಸು-
ವದು ಮುಖ್ಯವಾಗಿರುವದು. ಈ ವಿಧದ ಪುನರುಕ್ತಿ-
ಯಿಂದಲೇ ವಿದ್ಯಾರ್ಥಿಗಳ ಮುಂದಿನ ಕೆಲಸದ ಅವಶ್ಯ-
ವಾದ ಸಲಕರಣೆಗಳನ್ನು ಸನ್ನದ್ಧಪಡಿಸಿಕೊಳ್ಳಲಾಗುವದು.
ಅವು ವಿದ್ಯಾರ್ಥಿಗಳ ತುದಿಬೆರಳಿನ ಮೇಲಿರಬೇಕು.

ಪುನರುಕ್ತಿಯು ಈ ತರದ ತರಬೇತಿಗೆ ಒಂದು ದೊಡ್ಡ
ಮಂತ್ರ. ಈ ಕೆಲಸವೇನೋ ಹೆಚ್ಚುಕಡಿಮೆ ಯಾಂತ್ರಿಕ-
ವಾದದ್ದೇ; ಆದರೂ ಅದು ಮಹತ್ವದ್ದು. ಹೆಚ್ಚಿನ
ಕಾರ್ಯಕ್ಕೆ ಸರಿಯಾದ ಅಸ್ತಿವಾರವನ್ನು ಹಾಕಬೇಕಾ-
ಗಿದ್ದರೆ ಒಂದು ಅಳತೆಯ ಮೇಲೆ ತಾಲಿಮು ಅಗತ್ಯ-
ವಾದದ್ದು—ಈಗಿನ ದಿನಗಳಲ್ಲಿ ಅದು ಒಂದಿಷ್ಟು ಅಪ-
ರೂಪವಾಗಿದೆ. ಆದರೂ ಈ ತಾಲಿಮು ತಲೆ ಬೇಸರ-
ವನ್ನುಂಟುಮಾಡುವ ಹಾಗಿರಬೇಕಾದ ಕಾರಣವಿಲ್ಲ.
ಅದು ಚುರುಕಾಗಿ, ಬೇಗನೇ ಸಾಗಬೇಕು; ಮತ್ತು
ವಿಷಯದಲ್ಲಿ ಸಾಧ್ಯವಿದ್ದಷ್ಟು ಆ ವ್ಯಾಯಾಮದಲ್ಲಿ
ವೈವಿಧ್ಯವಿರಬೇಕು. ಮಕ್ಕಳಿಗೆ ಕೆಲಸದಲ್ಲಿ ಚಟುವಟಿಕೆ,
ಚುರುಕುತನ ಸೇರುವವು. ಆದರೆ ಈ ಗಡಿಬಿಡಿಯು
ಪ್ರಮಾದ, ಸೂಕ್ಷ್ಮಪರಾಮರ್ಶೆಯ ಅಭಾವ. ಇವು-
ಗಳಿಗೆ ದಾರಿಯಾಗಬಾರದು.

ಪುನರಾವರ್ತನೆಯ ಬೇರೆ ಪ್ರಕಾರಗಳೂ ಅವಶ್ಯ-
ವಾಗಿವೆ—ವಿಶೇಷತಃ ದೊಡ್ಡ ಹುಡುಗರ ಶಿಕ್ಷಣದಲ್ಲಿ
ಹುಡುಗರಿಗೆ (ಅ) ತನಗೆ ಗೊತ್ತಿದ್ದದ್ದನ್ನು ಹೊಸ
ಸಂದರ್ಭಗಳಲ್ಲಿ ಉಪಯೋಗಿಸಿಕೊಳ್ಳುವದು. (ಬ)
ಒಂದು ಪಾಠದಲ್ಲಿ ಕಲಿತದ್ದನ್ನು ಇನ್ನೊಂದು ಪಾಠದಲ್ಲಿ
ಕಲಿತದ್ದರೊಡನೆ ಹೊಂದಿಸಿಕೊಳ್ಳುವದು. (ಕ) ಶಿಕ್ಷಕನು
ಹೇಳಿದ್ದನ್ನಾಗಲಿ, ತಾನು ಓದಿದ್ದನ್ನಾಗಲಿ ಬೇರೊಂದು
ದೃಷ್ಟಿಯಿಂದ ನೋಡಿದಂತೆ ಹೇಳುವದು—ಈ ಕೆಲಸ-
ಗಳು ಬರಬೇಕು. ಸಾಲೆಯ ಅಭ್ಯಾಸಕ್ರಮದಲ್ಲಿನ ಬೇರೆ
ಬೇರೆ ವಿಷಯಗಳಲ್ಲಿ ಹುಡುಗರಿಗೆ ಕೊಡಬಹುದಾದ
ಅಭ್ಯಸನಗಳ ನಮೂನೆಗಳಾಗಿವೆ. ಅದಕ್ಕೆ ಹುಡುಗರಲ್ಲಿ
ಒಳ್ಳೇ ಬುದ್ಧಿಶಕ್ತಿಯು ಬೇಕು. ಶಿಕ್ಷಕನೂ ವಿದ್ಯಾರ್ಥಿ-
ಗಳೂ ಕೂಡಿ ಅಂತಹ ಹಲವಾರು ಪ್ರಶ್ನೆಗಳನ್ನು ವರ್ಗ-
ದಲ್ಲಿ ಬಿಡಿಸಿರಬೇಕು. ನಾಲ್ಕನೇ ಅಥವಾ ಐದನೇ
ಇಯತ್ತೆಯ ಹುಡುಗರ ವರ್ಗದಲ್ಲಿ ಕರ್ನಾಟಕದ
ಭೂಗೋಲದ ಆವರ್ತನವು ನಡೆದಿದೆ ಎಂದು ಭಾವಿ-
ಸೋಣ. ಒಮ್ಮೆ ಅಭ್ಯಸಿಸಿದ್ದನ್ನು ಪುನಃ ಅದೇ ಕ್ರಮ-

ದಿಂದ ಆವರ್ತನ ಮಾಡಿಸುವದಕ್ಕಿಂತ ಅದನ್ನು ಹಲವಾರು ಅಭ್ಯಸನಗಳ ರೂಪದಿಂದ ವರ್ಗದಲ್ಲಿ ಚರ್ಚೆಗೆ ಕೊಡಬಹುದು ಕಾರವಾರ, ಮಲ್ಪೆ, ಭಟಕಳ ಇವುಗಳಲ್ಲಿ ಯಾವದು ಉತ್ತಮವಾದ ಬಂದರವಾಗಬಹುದೆಂಬದನ್ನು ಹೇಗೆ ನಿರ್ಣಯಿಸೋಣ? ಅಮೇರಿಕನ್ ಪ್ರವಾಸಿಯೊಬ್ಬನು ಈ ದೇಶವನ್ನು ನೋಡಲಿಕ್ಕೆ ಬಂದಿದ್ದಾನೆ; ಆತನಿಗೆ ಕರ್ನಾಟಕದ ಇತಿಹಾಸದಲ್ಲಿ ಅಭಿರುಚಿಯಿದೆ. ಅವನು ಸುತ್ತಾಡಿಬರಬಹುದಾದ ಕರ್ನಾಟಕದ ಭಾಗಗಳ ಒಂದು ಹಾದಿಯನ್ನು ಗೊತ್ತುಮಾಡೋಣ. ಮೈಸೂರಿನ ಜನಸಂಖ್ಯೆಯ ನಕ್ಷೆಯೊಂದನ್ನು ತೆಗೆದುಕೊಂಡು ಅದರ ಸಹಾಯದಿಂದ ಅಲ್ಲಿಯ ಉದ್ಯಮಗಳ ಬೆಳವಣಿಗೆಯನ್ನು ಅಭ್ಯಾಸ ಮಾಡಬಹುದು. ಇತ್ಯಾದಿ.

ಶಾಲೆಯ ಹುಡುಗರು ಈ ಅಭ್ಯಸನಗಳನ್ನು ಯಾರ ಸಹಾಯವಿಲ್ಲದೇ ತಾವೇ ಬಿಡಿಸಬಲ್ಲರೆಂದು ತಿಳಿಯಕೂಡದು ಶಿಕ್ಷಕನ ನೇತೃತ್ವದಲ್ಲಿ ವಿಚಾರವನ್ನು ಮುಂದುವರಿಸಲಿಕ್ಕೂ ಅದಕ್ಕೆ ಬೇಕಾಗುವ ಮುಖ್ಯ ಸಂಗತಿಗಳ ಸಂಕಲನಕ್ಕೂ ಅವು ಪ್ರಯೋಜನಕಾರಿಯಾಗಬಲ್ಲವು. ಭೂಗೋಲದ ಸಂಗತಿಗಳ ಪ್ರಶ್ನೆಗಳ ಮೇಲೆ ಅವುಗಳಿಂದ ಹೊಸ ಬೆಳಕು ಬೀಳುವದು. ಸಮಾಜದ ಪ್ರಗತಿಗೆ ಈ ಪ್ರಶ್ನೆಗಳು ಸಂಬಂಧಿಸಿದವಾದ್ದರಿಂದ ಅವು ವಿದ್ಯಾರ್ಥಿಗಳಿಗೆ ಮಂದಟ್ಟಾಗುವವು. ಅವನ್ನು ಬಿಡಿಸಲಿಕ್ಕೆ ಪ್ರವಾಸ ಮತ್ತು ಅನುಭವಗಳಿಂದ ಆ ವಿಷಯದಲ್ಲಿ ಆಸಕ್ತಿ ಉಂಟಾಗಿರುವದು ಮಾತ್ರ ಆವಶ್ಯವದೆ. ಕೆಳಗಿನ ಇಯತ್ತೆಯಲ್ಲಿ ತದ್ವಿಷಯಕ ವರ್ಣನಾತ್ಮಕವಾದ ಹಲವಾರು ಪಾಠಗಳನ್ನು ಅವರು ಓದಿರಬೇಕು.

ಹಳೆಯ ಜ್ಞಾನವನ್ನು ಹೀಗೆ ವಿಧಾಯಕ ರೀತಿಯಿಂದ ಉಪಯೋಗಿಸಿಕೊಳ್ಳುವ ಶಕ್ತಿಯು ಕೆಳಗಿನ ಇಯತ್ತೆಗಳಲ್ಲಿ ಅರ್ಥಾತ್ ಕಡಿಮೆಯಿರುವದು. ಮೇಲೆ ಸೂಚಿಸಿದ ಆವರ್ತನದ ಪ್ರಶ್ನೆಗಳಲ್ಲದೆ ಹುಡುಗರನ್ನು ಒಮ್ಮೊಮ್ಮೆ ಮಾರ್ಮಿಕ ಪ್ರಶ್ನೆಗಳಿಂದ ಪರೀಕ್ಷಿಸಬೇಕಾಗುವದು.

(೧) ಒಂದು ವಿಷಯದ ಮೇಲಿನ ತನ್ನ ಪಾಠವನ್ನು ಕೊಡುವದಕ್ಕಿಂತ ಪೂರ್ವದಲ್ಲಿ ಹುಡುಗರಿಗೆ ಅದರ ಬಗೆಗೆ ಏನು ಮತ್ತು ಎಷ್ಟು ಗೊತ್ತಿದೆ ಎಂಬುದನ್ನು ಶಿಕ್ಷಕನು ತಿಳಿದುಕೊಳ್ಳಲಿಚ್ಛಿಸುವನು. (೨) ಅಥವಾ ತಮಗೆ ಗೊತ್ತಿದೆ ಎಂದು ಹುಡುಗರು ತಿಳಕೊಂಡದ್ದು ಮೇಲ್ಮೇಲಿನ ಸ್ಥೂಲದೃಷ್ಟಿಯ ನಿರೀಕ್ಷಣೆಯಿಂದಲೂ ಆತವಿನ ತಪ್ಪು ತಿಳಿವಳಿಕೆಯಿಂದಲೂ ಕೂಡಿದೆ ... ಅವರ ಅವಗಾಹನೆಗೆ ತಂದುಕೊಡುವದಕ್ಕಾಗಿ ಮಾಡಿ ಅವರು ಒಂದು ವಿರೋಧಾಭಾಸದಲ್ಲಿ ... ವಂತೆ ಮಾಡುವದು.

ಈ ಎಲ್ಲ ಸಂದರ್ಭಗಳಲ್ಲಿ ಪ್ರಶ್ನಿಸುವದೇ ತನ್ನ ... ಯನ್ನು ಸಾಧಿಸುವ ಮಾರ್ಗವೆಂದು ಶಿಕ್ಷಕನು ... ಮಾಡುವನು. ಇದರಿಂದ ಹುಡುಗರು ತಮ್ಮ ... ಜ್ಞಾನಗಳನ್ನು ಚೆನ್ನಾಗಿ ವಿಮರ್ಶಿಸಿ ಅದನ್ನು ವಿಶಿಷ್ಟ ದೃಷ್ಟಿಯಿಂದ ವ್ಯವಸ್ಥೆಗೊಳಿಸಬೇಕಾ... ಇದಕ್ಕೆ ಬೇಕಾಗುವ ಪ್ರಶ್ನೆಪದ್ಧತಿಯು ವಿಶ್ಲೇಷ... ವಾದದ್ದು ಎನ್ನಬಹುದು. ಹುಡುಗರು ತಮ್ಮ ... ಗಳನ್ನು ಘರ್ಷಣಕ್ಕೆ ಒಳಪಡಿಸಿ ಪ್ರಕೃತ ಸ... ಮೇಲೆ ಒಂದು ನಿರ್ಣಯಕ್ಕೆ ಬರುವವರೆಗೆ ಶಿ... ತಾನು ಏನನ್ನೂ ಹೇಳುವದಿಲ್ಲ. (೧) ರಲ್ಲಿ ... ಪದ್ಧತಿಯಿಂದ ತನ್ನ ಪಾಠವನ್ನು ಯಾವ ಪೂರ್ವ... ಕೆಯ ಮೇಲೆ ರಚಿಸಿಕೊಳ್ಳಬೇಕೆಂಬುದು ಗೊ... ವದು. ಹುಡುಗರೂ ಶಿಕ್ಷಕನಿಂದ ಮುಂದೆ ಬ... ದಾನ ವಿಷಯವನ್ನು ಒಳ್ಳೇ ಆತುರತೆಯಿಂದ ... ನೋಡುವರು. (೨) ರಲ್ಲಿಯ ಪ್ರಶ್ನೆಗಳಿಂದ ಹು... ಸ್ಪಷ್ಟವಾಗಿ ತಿಳಿದುಕೊಂಡ ಬೇರೆ ಬೇರೆ ಸಂಗ... ಪರಸ್ಪರ ಸಂಬದ್ಧತೆಯನ್ನು ಕಾಣುವಂತಾಗ... ಅವರಿಗೆ ಗೊತ್ತಿದ್ದ ತತ್ವಗಳನ್ನು ವ್ಯವಹಾರದ ... ಗಳಿಗೆ ಹಚ್ಚಲಿಕ್ಕೆ ಕಲಿಯಬಹುದು. ಉದಾ: ... ಗಳಿಗೆ ಗಾಲಿಗಳೇಕಿರುವವೆಂದು ಯೋಚಿ... ಅಥವಾ ನನ್ನ ಪ್ರಶ್ನೆಗಳು ಅವರನ್ನು ಒಂದು ಸ... ಸಿದ್ಧಾಂತಕ್ಕೆ ಒಯ್ಯಬಹುದು, ಉದಾ: ಕಾ... ಭಿನ್ನಭಿನ್ನ ಪದಾರ್ಥಗಳಲ್ಲಿ ಅರುವದರಲ್ಲಿ ಒಂದ... ಪ್ರಮಾಣವಿರುವದು. ಇದು ಆ ಪದಾರ್ಥ... ಧರ್ಮ ಎಂಬುದಾಗಿ. ಇಂತಹ ಉದಾಹ... ಪ್ರಶ್ನೆಗಳು ಅತ್ಯವಶ್ಯಕ. "ಹೇಳುವದೆಂದರೆ ... ದಲ್ಲ" ಎಂಬ ಮಾತು ಇಂಥಲ್ಲಿ ಚೆನ್ನಾಗಿ ... ಸುವದು. ಪ್ರಶ್ನೆಗಳಿಂದ ಒಬ್ಬ ಹುಡುಗನು ... ಕ್ಕೊಂಡು ತೀರ ವಿರುದ್ಧವಾದ ಎರಡು ಅಭಿ... ಗಳನ್ನು ಹೇಳುವಂತಾದರೆ ಆಗ ಅವನಿಗೆ ತನ... ತಿಳಿವಳಿಕೆಯಾಗಿ ಸರಿಯಾದ ಸಂಗತಿಯನ್ನು ... ಕೊಳ್ಳಲಿಕ್ಕೆ ಉತ್ಸುಕನಾಗುವನು.

(ಮುಂದುವರಿದುದು)

ಶಿಕ್ಷಣದ ಧ್ಯೇಯ

ಲೇಖಕರು:—ಶ್ರೀ. ಶಿವಕುಮಾರ (ಜಮಖಂಡಿ ಟ್ರೈ. ಕಾ.)

ಜೀವನದ ಸಿದ್ಧಾಂತವು ಜೀವನದ ಧ್ಯೇಯವನ್ನು ನಿರ್ಣಯಿಸುವದು.
ಜೀವನದ ಧ್ಯೇಯವು ಶಿಕ್ಷಣದ ಧ್ಯೇಯವನ್ನು ನಿರ್ಣಯಿಸುವದು

—ಜೈಚಪಾಳ

ಇಂದಿನ ಯಾಂತ್ರಿಕ ಯುಗದ ಮಾನವರನ್ನು ನಾವು ಡಾಗ **ಅವರ** ಪ್ರಗತಿಯ ಬಗ್ಗೆ ನಾವು ಹೆಮ್ಮೆ ಪಟ್ಟು-**ಳ್ಳುತ್ತೇವೆ.** ಸ್ವಲ್ಪ ಹೊತ್ತು ಅವರ ಹಿಂದಿನ ಸ್ಥಿತಿ-**ನ್ನು ಸಿಂಹಾ**ವಲೋಕಿಸಿದರೆ ಮಾರ್ಪಾಡ ಹೊಂದಿದ **ಿಯನ್ನು** ಕಾಣಬಹುದು. ಕಾಡುಸ್ಥಿತಿಯಲ್ಲಿದ್ದ ಮಾನ **ು ಪ್ರಗತಿ**ಪಥದಲ್ಲಿ ಸಾಗುವಾಗ ತನ್ನ **ವಿಚಾರ**ಕ್ಕನು-**ಣವಾದ** ಧ್ಯೇಯ ಧೋರಣೆಗಳಲ್ಲಿ ಬದಲಾವಣೆ ಮಾಡಿ **ಳ್ಳುತ್ತ ಬಂದಿ**ದ್ದಾನೆ. ಇಂದೊಂದು ಸ್ಥಿತಿಗೆ ಮುಟ್ಟಿದ **್ಯೇಯ ಮುಂದಾ**ದರೂ ಅಳತೆಗೋಲೆಂದು ತಿಳಿ **ುವದು ತಪ್ಪು.** ಕಾಲ ಮಾನ ಪರಿಸ್ಥಿತಿಗನುಸರಿಸಿ **ರ್ಣದರಲ್ಲಿಯೂ** ಬದಲಾಗುವದು ಸಹಜ.

ಇದೇ ಮಾತು ಶಿಕ್ಷಣಕ್ಕಾದರೂ ಅನ್ವಯಿಸುತ್ತಿದೆ. **ಕ್ಷಣಿಕ** ದೃಷ್ಟಿಯಿಂದ ಭಾರತವು ಯಾವ ರಾಷ್ಟ್ರದ **ುಂದೆಯೂ** ತಲೆ ತಗ್ಗಿಸಬೇಕಾಗಿಲ್ಲ. ಇಲ್ಲಿಯ **ಾಹಿತ್ಯ,** ತತ್ವಶಾಸ್ತ್ರ, ಸಂಸ್ಕೃತಿ, ಯಾವ ರಾಷ್ಟ್ರಕ್ಕೂ ಕಡಿ-**ಯಿಲ್ಲ.** ಆದರೆ ಪ್ರತಿಯೊಂದು ರಾಷ್ಟ್ರದ ಧ್ಯೇಯ **ಂದೆ ಎಂದು** ಹೇಳಲಿಕ್ಕಾಗುವದಿಲ್ಲ. ಅದರಂತೆಯೇ **ಕ್ಷಣದ ಧ್ಯೇ**ಯವೂ ಒಂದೇ ಆಗುವದಿಲ್ಲ. ತನ್ನದೇ **ಂದು ಮಾ**ರ್ಗದಿಂದ ಸಾಗಿ ಬರುತ್ತಿದ್ದ ಭಾರತೀಯ **ಕ್ಷಣ** ಪದ್ಧತಿ ೧೯ನೆಯ ಶತಮಾನದ ಅಂತ್ಯದ ವರೆಗೂ ಾಗಿ ಬಂದಿತು. ೨೦ನೆಯ ಶತಮಾನದ ಆರಂಭಕ್ಕೆ **ಲ್ಲಿಯ** ಕೆಲ ಶಿಕ್ಷಣ ತಜ್ಞರಲ್ಲಿ ಸುಳಿಗಾಳಿ ಸುಳಿಯ **ಾಡಗಿತು.** "ಮಕ್ಕಳಿಗೆ ಶಿಕ್ಷಣವನ್ನು ಯಾವ ಉದ್ದೇ **ಶದಿಂದ ಕೊ**ಡಬೇಕು. ಯಾವ ವಿಷಯಗಳ ಜ್ಞಾನವು **ವರಿಗೆ ಉ**ಪಯೋಗವುಳ್ಳದ್ದಾಗ ಬಹುದು." ಎಂಬ **ೋಚನೆಯು** ಅವರನ್ನು ಮುತ್ತಿತು. ವಿದ್ಯಾರ್ಥಿಗಳಲ್ಲಿ ಶೀಲವನ್ನೂ, ವ್ಯಕ್ತಿತ್ವವನ್ನು ಸಿದ್ಧಗೊಳಿಸಬೇಕು. ಶಿಕ್ಷಣವೆಂದರೆ ಬೌದ್ಧಿಕ ಸಂಪತ್ತನ್ನೂ, ಸಂಸ್ಕೃತಿಯನ್ನೂ ಜನರಲ್ಲಿ ಬೆಳೆಸುವದು ಎಂಬ ಮೆಟ್ಟಿಲಿಗೆ ಬಂದು ಅವರು ಅದನ್ನೂ ಮುಟ್ಟಿದರು. "ಶಿಕ್ಷಣಕ್ಕಾಗಿ ಜೀವನ ವಾಗಬಾರದು. ಜೀವನಕ್ಕಾಗಿ ಶಿಕ್ಷಣವಿರಬೇಕು. ಅಂತೇ ಜೀವನದ ಗೊತ್ತುಗುರಿಗಳೇ ಶಿಕ್ಷಣದ ಗೊತ್ತುಗುರಿ ಗಳಾಗಬೇಕು" ಎಂಬ ನಿರ್ಣಯವು ಎಲ್ಲರಿಗೂ ಸಮ್ಮತವಾಯ್ತು.

೨೦ನೆಯ ಶತಮಾನದ ಪ್ರಾರಂಭವೇ **ಶಿಕ್ಷಣದ ಹೊಸ ದೃಷ್ಟಿ ಕೋನದ** ಕಾಲವೆನ್ನಬಹುದು. ಅಂದು ಶಿಕ್ಷಣದ ಕೇಂದ್ರ ಬದಲಾಯ್ತು; ಧ್ಯೇಯ ಬದಲಾಯ್ತು; ಪದ್ಧತಿ ಬದಲಾಯ್ತು; ಸಾಧನ ಸಾಮುಗ್ರಿಗಳು ಬದಲಾದವು. ಇಲ್ಲಿ ಕೇಂದ್ರ ಬದಲಾಯ್ತು ಅಂದರೇನು? ಮೊದಲು ಪುರಾಣಕಾಲದಲ್ಲಿ, ವಿಷಯವೇ ಶಿಕ್ಷಣದ ಕೇಂದ್ರವಾಗಿತ್ತು. ಮೂಲವಾಗಿ ಒಂದು ವಿಷಯವನ್ನಿಟ್ಟುಕೊಂಡು ಅದನ್ನೇ ವಿದ್ಯಾರ್ಥಿ ಅಭ್ಯಸಿಸಬೇಕಾಗಿತ್ತು. ಮುಂದೆ ಶಿಕ್ಷಕರು ಶಿಕ್ಷಣದ ಕೇಂದ್ರರಾದರು. ಶಿಕ್ಷಕರು ಕಲಿಸಿದ್ದನ್ನೆ ಬಾಲಕರು ಕಲಿಯಬೇಕು. ಅದು ಬಾಲಕರಿಗೆ ರುಚಿಸಲಿ, ರುಚಿಸದಿರಲಿ ಒತ್ತೊತ್ತಿ ತುಂಬಿಕೊಳ್ಳುವದೊಂದೆ ಅವರ ಕಾರ್ಯವಾಗಿಬಿಡುತಿತ್ತು. ಈ ಶಿಕ್ಷಣ ಪದ್ಧತಿಯು ಸದೋಷ ಶಿಕ್ಷಣವಾಗಿತ್ತು; ಗುಲಾಮರನ್ನೂ ಕಾರಕೂನರನ್ನೂ ತಯಾರಿಸುವ ಶಿಕ್ಷಣವಾಗಿತ್ತು. ಮೆಲ್ಲನೆ ತಜ್ಞರ ದೃಷ್ಟಿ ಬಾಲಕರ ವಿಕಾಸದ ಕಡೆಗೆ ಹರಿಯಿತು. ಶಿಕ್ಷಣವು ಯಾರ ಸಲುವಾಗಿ? ಈ ಪ್ರಶ್ನೆಗೆ ಉತ್ತರವಾಗಿ ಬಾಲಕನೇ ಶಿಕ್ಷಣದ ಕೇಂದ್ರನಾದ, **ಮಾನಸಶಾಸ್ತ್ರ**ದಲ್ಲಿ **ಕ್ರಾಂತಿಯಾಯ್ತು.** ಬಾಲಕನು ಬಾಲ-

ಕತ್ವವನ್ನು ಬಿಟ್ಟು ಮುಂದೆ ನಾಡಿನ ನಾಕರಿಕನಾಗುವವನಿದ್ದಾನೆ. ಆದರಿಂದ ಬಾಲಕರ ಅಪೂರ್ಣ ವ್ಯಕ್ತಿತ್ವವನ್ನು ಪೂರ್ಣಮಾಡುವದೇ ಶಿಕ್ಷಣದ ಧ್ಯೇಯವೆಂದು ನಿಶ್ಚಯಿಸಲಾಯ್ತು.

ಈ ರೀತಿ ಶಿಕ್ಷಣದ ನವೀನ ದಷ್ಟಿಕೋನದಿಂದ ಶಿಕ್ಷಕರ ಶಿಕ್ಷಕತ್ವ ಹೋಗಿ ಮಾರ್ಗದರ್ಶಕತ್ವ ಬಂದಿತು. ಶಿಕ್ಷಕನು ಬಾಲಕರ ಮೆಟ್ಟಿಲಲ್ಲಿ ಬಂದು ಅವರೊಡನೆ ಬೆರೆತು ಅವರ ಹಸಿವೆಯನ್ನರಿತು ಅವರಿಗೆ ರುಚಿಸುವ, ಪಚನವಾಗುವ ಆಹಾರವನ್ನೀಯಬೇಕೆಂಬ ನಿರ್ಣಯವಾಯ್ತು. ಇರಲಿ.

ಬಾಲಕನೇನೋ ಶಿಕ್ಷಣದ ಕೇಂದ್ರವೆಂದು ಸಾರಲ್ಪಟ್ಟಿತು. ಆದರೆ ಬಾಲಕನು ಶಿಕ್ಷಣವನ್ನು ಪಡೆಯುವದೇತಕ್ಕಾಗಿ ?

ಪ್ರಪಂಚದಲ್ಲಿ ಪ್ರತಿಯೊಂದು ಸಜೀವಿಗಳು ಹಸಿವು ತೃಷೆಗಳನ್ನಿಂಗಿಸಿಕೊಳ್ಳಲೇ ಬೇಕು. ಅದಕ್ಕಾಗಿ ಬೇಕಾಗುವ ಆಹಾರ ಸಾಮುಗ್ರಿಗಳನ್ನು ದೊರಕಿಸಿಕೊಳ್ಳಲೇಬೇಕು. ಹಸಿದ ಹೊಟ್ಟೆಯಿಂದ ಜ್ಞಾನಾರ್ಜನೆ ಮಾಡಿಕೊಳ್ಳುವದು ಅಸಾಧ್ಯ. ಹಸಿದವನಿಗೆ ವ್ಯಾಕರಣವನ್ನು ತಿಂದರೆ ಹೊಟ್ಟೆ ತುಂಬುವದಿಲ್ಲ. ಕವಿಗಳಿಗೆ ಕಾವ್ಯರಸವನ್ನೀಂಟಿದರೂ ತೃಷೆ ಕಡಿಮೆಯಾಗುವದಿಲ್ಲ. ಆದಕಾರಣ ಹೊಟ್ಟೆತುಂಬಿಕೊಳ್ಳುವ ಶಕ್ತಿಯನ್ನು ಶಿಕ್ಷಣದ ಮುಖಾಂತರ ಪ್ರಥಮದಲ್ಲಿ ಪಡೆಯಲೇ ಬೇಕು. ಅಂತೇ **'ಉದರಂ ಭರಣ'**ವು ಶಿಕ್ಷಣದ ಮೊದಲನೆಯ ಧ್ಯೇಯವಾಯ್ತು. ಆದರೆ ಜಗತ್ತೆಂದರೆ ತ್ಯಾಗಿ, ಭೋಗಿಗಳ ಮನೆ. ಕೇವಲ ಹೊಟ್ಟೆಗಾಗಿ ಹೊಡದಾಡುವವರನೇಕರಿದ್ದಾರೆ. ಈಮಾತು ಒತ್ತಟ್ಟಿಗಿರಲಿ, ಮಾನವೀ ಮನಸ್ಸಿನ ಹಸಿವು ಕೇವಲ ಅನ್ನದಿಂದ ತುಂಬಲಾರದು. ಅವನಿಗೆ ಜ್ಞಾನದ ಅವಶ್ಯಕತೆಯಿದೆ. ಆದ್ದರಿಂದ ಉದರಂ ಭರಣವು ಶಿಕ್ಷಣದ ಪೂರ್ಣ ಧ್ಯೇಯವಲ್ಲ. ಅದಕ್ಕಾಗಿ **ಜ್ಞಾನವಿಕಾಸ** ಆಗಲೇಬೇಕು. ಜ್ಞಾನದಿಂದಲೇ ಜೀವನ. ಜೀವನವು ಸುಗಮವಾಗಬೇಕು; ಸಮಾಜವು ಸುವ್ಯವಸ್ಥಿತವಾಗಬೇಕು. ಅಂಥ ಜ್ಞಾನವು ಆವಶ್ಯ. ಕೇವಲ ಜ್ಞಾನಕ್ಕಾಗಿ ಜೀವನವನ್ನೆ ಹಾಳು ಮಾಡಿಕೊಂಡರೆ ಈ ಉದ್ದೇಶವು ಸಫಲವಾಗಲಾರದು. ಇಂಥಹ ಜ್ಞಾನ ಸಂಚಯವು ಕೃಪಣನ ಕೈಯಲ್ಲಿಯ ಚಿ[illegible]
ಹೀಗಾಗದೆ ಸಂಸಾರದ ಮಾರ್ಗವು ಸುಗಮವಾ[illegible]
ವದಕ್ಕೋಸುಗ ಅನುಭವಗಳ ಉಪಯೋಗ[illegible]
ಕೊಂಡರೆ ಮಾತ್ರ ಈ ಉದ್ದೇಶದಿಂದ ಉತ್ತ[illegible]
ದೊರಕಿಸಿದಂತಾಗುವದು. ಜ್ಞಾನದ ವ್ಯಾ[illegible]
ಉಪಯೋಗಕ್ಕೆ ಜಾಣತನವೆನ್ನುವರು. ಈ ಜ[illegible]
ವನ್ನು ಸ್ವಾರ್ಥದೃಷ್ಟಿಯಿಂದ ವ್ಯವಹಾರದಲ್ಲಿ ಉ[illegible]
ಗಕ್ಕೆ ತರುವ ಮನುಷ್ಯನು ನಿಷ್ಠುರನಾಗುತ್ತಾನೆ.
ವೇಳೆಯಲ್ಲಿ ತನ್ನ ಮನುಷ್ಯತ್ವವನ್ನೆ ತೊರೆಯ[illegible]
ಆದ್ದರಿಂದ ಸಂಸ್ಕೃತಿ ಸಂವರ್ಧನವು ಶಿಕ್ಷಣದ [illegible]
ಯಿತು.

ಸಂಸ್ಕೃತಿ ಸಂವರ್ಧನವು ಶಿಕ್ಷಣದ [illegible]
ಧ್ಯೇಯವೆಂದು ಹೇಳಬಹುದು. ಶಿಕ್ಷಣವು
ಸಂಗತಿಗಳೊಡನೆ ಈ ಸಂಸ್ಕೃತಿಯನ್ನೂ [illegible]
ಕೊಡಬೇಕು. ಸಂಸ್ಕೃತ ಮನುಷ್ಯನನ್ನು ನಿ[illegible]
ಮಾಡುವದೂ ಶಿಕ್ಷಣದ ಒಂದು ಧ್ಯೇಯ[illegible]
ಬೇಕು. ಮಾನವನ ಮನಸ್ಸು ಒಂದು ವೇಳೆ[illegible]
ಸಂಸ್ಕಾರ ಹೊಂದಿದ್ದಾದರೆ, ಜ್ಞಾನದ ಉಪ[illegible]
ಲೋಕಹಿತದ ದೃಷ್ಟಿಯಿಂದ ಸಾಗುವದು. ಸ[illegible]
ಜನಾಂಗದಿಂದ ನಾಡಿನ ಸುಂದರ ಮಂದಿರ[illegible]
ಕಟ್ಟಲು ಸಾಧ್ಯ. ಧರ್ಮದ ಸಂಸ್ಕಾರವು ಮ[illegible]
ಭಾವನೆಯನ್ನು ವಿಶಾಲಗೊಳಿಸುತ್ತದೆ;
ಮಾಡುತ್ತದೆ. ಆದರೆ ಕೋಮಲ ಭಾವವು ಗಂ[illegible]
ಕಾಲದಲ್ಲಿ ನಿರುಪಯೋಗವಾದದ್ದು; ವೀರ ರ[illegible]
ಹವೆ ಅಲ್ಲಿ ತಕ್ಕದು. ಅಲ್ಲಿ ಎಷ್ಟೋ ವೇಳೆಯಲ್ಲಿ
ವನ ಹೃದಯು ಕಂಪಿಸುತ್ತಿದೆ; ಅವನು ಕೈಕಾಲ
ಕೊಳ್ಳುತ್ತಾನೆ. ವಿಚಾರ ಶೂನ್ಯವಾಗಿ ಅವ[illegible]
ಮಾಡಬೇಕೆಂಬುವದೆ ತೋಚುವದಿಲ್ಲ. ಮ[illegible]
ಯುದ್ಧದಲ್ಲಿಯ ಅರ್ಜುನನ ಸ್ಥಿತಿಯನ್ನು
ಕೊಂಡರೆ ನಾಕು. ಆದುದರಿಂದ ಸಂಸ್ಕೃತಿ ಸ[illegible]
ಇದು ಶಿಕ್ಷಣದ ಪೂರ್ಣ ಧ್ಯೇಯವಾಗಲಾರದ[illegible]
ಎನಿಸತೊಡಗುವುದು.

ಸರ್ವಾಂಗೀಣ ವಿಕಾಸವು ಶಿಕ್ಷಣದ
ಸಮರ್ಪಕ ಧ್ಯೇಯವೆಂದು ತೋರುವದು.

ಸಂಗೀತ ವಿಕಾಸವೆಂದರೆ ಅವನ ಶಾರೀರಿಕ, ಮಾನಸಿಕ, ನೈತಿಕ ವಿಕಾಸ. ಈ ವಿಕಾಸ ಎಷ್ಟು ಮಟ್ಟಿಗೆ ಸಾಧ್ಯವಿದ್ದಷ್ಟು ಸಮತೋಲವಾಗಿರಬೇಕು. ಶಾರೀರಿಕ ಶಕ್ತಿಯನ್ನು ಬೆಳೆಯಿಸಿ ಮಾನಸಿಕ ದುರ್ಬಲ ಒಳಪಟ್ಟ ಮಾನವರು ನಮಗಿಂದು ಅವಶ್ಯವಿಲ್ಲ. ನೈತಿಕ ಅವನತಿಯಾದರೂ ನಡೆಯುವದಿಲ್ಲ. ಸರ್ವವು ಸಮವಾಗಿರಬೇಕು. ಇಂದು ಜೀವನದಲ್ಲಿ ಸಮತೋಲನೆಯು ಇಲ್ಲವಾಗಿ ಗಡಿಬಡಿ ನಡೆದಿದೆ. ಬೇರೆ ಬೇರೆ ಅಂಗಗಳನ್ನು ವ್ಯಕ್ತಿಯಿಂದ ಬೇರ್ಪಡಿ ಬೆಳೆಸಲು ಸಾಧ್ಯ. ಆದರಿಂದ ಈ ಭಾಷೆಯು ಸದೋಷವಾಗಿ ಕಂಡುಬರುತ್ತಿದೆ. ಇದಕ್ಕಿಂತಲೂ ವ್ಯಕ್ತಿಯ ವಿಕಾಸವೇ ಶಿಕ್ಷಣದ ಧ್ಯೇಯ ಅಂದರೆ ಸರಿಯಾಗಿ ಕಾಣುವದು. ವ್ಯಕ್ತಿಯ ವಿಕಾಸವಲ್ಲಿ ಸರ್ವವಿಷಯದ ಬೆಳವಣಿಗೆ ಆಗಬಹುದು. ಇಲ್ಲಿ ವ್ಯಕ್ತಿಯ ವ್ಯಕ್ತಿತ್ವ ಅಳೆಯುವ ಸಾಧನವು ಅವನ ನಡತೆಯೆ ಆಗುವದು. ವ್ಯಕ್ತಿ ಅಂದರೆ ಸಮಾಜದ ಒಂದು ಘಟಕ. ವ್ಯಕ್ತಿಯ ವ್ಯಕ್ತಿತ್ವ ಎಷ್ಟೇ ವಿಕಾಸ ಹೊಂದಿದರೂ ಅದು ಸಮಾಜದ ಉಪಯೋಗಕ್ಕೆ ಬಾರಗಲೇಬೇಕು. ಆದರೆ ಹಾಗೆ ಆಗುವದು ಬಹಳ ಕಷ್ಟ, ಆದುದರಿಂದ ವ್ಯಕ್ತಿಯ ವಿಕಾಸವಾದರೂ ಶಿಕ್ಷಣದ ಅಪೂರ್ಣ ಧ್ಯೇಯ. ಆದುದರಿಂದ—

ಶೀಲಸಂವರ್ಧನವು ಶಿಕ್ಷಣದ ಅಧಿಕ ಯೋಗ್ಯ ಧ್ಯೇಯವೆಂದು ತಿಳಿಯಲಾಯಿತು. ಶೀಲ ಇದರ ಅರ್ಥ ಚನ್ನಬಸವಣ್ಣನವರು ಈ ರೀತಿಯಾಗಿ ವಿವರಿಸಿದ್ದಾರೆ:—

“ಶೀಲ ಶೀಲವೆಂದು ಗರ್ವಿಸಿ ನುಡಿಯುತಿಪ್ಪಿರಿ. ಶೀಲವಾವದು ಎಂದರಿಯಿರಿ ಕೇಳಿರಣ್ಣಾ! ಇದ್ದುದನೆ ಮಾಡದಿರ್ಪುದೆ ಶೀಲ. ಇಲ್ಲುದಕ್ಕೆ ಕದನಮಾಡದೇ ಶೀಲ. ಪರದೈವ, ಪರಸಮಯಕ್ಕೆ ಅಳುಕದೆ ಶೀಲ. ಪರಧನ ಪರಸ್ತ್ರೀಯರ ಮುಟ್ಟದಿರ್ಪುದೆ ಗುರುನಿಂದೆ, ಹರನಿಂದೆ, ಚರನಿಂದೆ ಕೇಳದಿರ್ಪುದೆ ನಮ್ಮ ಕೂಡಲ ಸಂಗನ ಶರಣರ ಬರುವಿಂದ ಬಂತುದೆ ಅಚ್ಚಶೀಲ.”

ಶೀಲದ ನಿಜ ಸ್ವರೂಪವನ್ನು ನಾವಿಲ್ಲಿ ಕಾಣುವ ಹಿಂದೆ ಬಂದ ಶಿಕ್ಷಣದ ಎಲ್ಲ ಧ್ಯೇಯಗಳು ಇದರಲ್ಲಿ ಅಡಕವಾಗಿರುತ್ತವೆ. ಹೊಟ್ಟೆಗಾಗಿ ಆಹಾರವನ್ನು ದುಡುಕುವಾಗ ಸಹ ಶೀಲವನ್ನು ಉತ್ತಮವಾಗಿಟ್ಟುಕೊಳ್ಳುವ ಉದ್ದೇಶದಿಂದ ಸ್ವತಃ ದುಡಿಯಬೇಕು. ದುಡಿಮೆಯಲ್ಲಿ ಮಾಟ ಮೋಸಗಳಿಗೆ ಎಡೆಯಿಲ್ಲ. ಹಾಗೆ ಮಾಡಿದರೆ ಶೀಲಕ್ಕೆ ಹಾನಿತಟ್ಟುತ್ತದೆ. ಎರಡನೆಯದಾಗಿ ವ್ಯವಹಾರದಲ್ಲಿ ಅವಶ್ಯವಿರುವ ಜಾಣತನವನ್ನು ಕಲಿಯಬೇಕಾಗುವದು. ಆದರೂ ವ್ಯವಹಾರದ ಅರ್ಥವನ್ನರಿತು ವಂಚನೆಯಿಂದ ದೂರುಳಿಯಬೇಕಾಗುವದು. ಏಕೆಂದರೆ ಪರಧನ ಮುಟ್ಟದಿರ್ಪುದೇ ಶೀಲ. ಇಷ್ಟೆಲ್ಲ ವಿಚಾರಮಾಡುವ ಭಾವನೆ ಜಾಗ್ರತಗೊಂಡಾಗ ಕಲ್ಪನೆ ಒಡಮೂಡಿದಾಗ ಅವನ ಮನಸ್ಸಿನಲ್ಲಿ ಒಳ್ಳೆಯ ಸಂಸ್ಕಾರವಾದರೂ ಆಗಲೇಬೇಕು. “ಸತ್ ವಿಚಾರದ ಹೊರತಾಗಿ ಸದಾಚಾರವಿಲ್ಲ. ಸದಾಚಾರದ ಹೊರತಾಗಿ ಒಳ್ಳೆಯ ಶೀಲವಿಲ್ಲ.” ಇದರ ಅರ್ಥವನ್ನು ಅರಿತು ಸಮಾಜವನ್ನು ತುಲನಾತ್ಮಕ ದೃಷ್ಟಿಯಿಂದ ನೋಡುವ ಕಣ್ಣು ಬಂದಾಗ ವ್ಯಕ್ತಿಯ ವಿಕಾಸ. ವ್ಯಕ್ತಿಯ ಶೀಲ ಉತ್ತಮವಿದ್ದರೆ ವ್ಯಕ್ತಿಯ ಹಿತ ಹಾಗು ಸಮಾಜದ ಹಿತ ಒಂದೇ ಕಾಲಕ್ಕೆ ಸಾಗುವದು. ಇರಲಿ, ಕೊನೆಯ ಧ್ಯೇಯವೆಂದು ತಿಳಿಯುವ ಶೀಲದ ಬಗ್ಗೆ ಇನ್ನಷ್ಟು ವಿವೇಚಿಸುವಾ.

ಈ ಶೀಲವಲ್ಲಿ ನಾಲ್ಕು ಮೆಟ್ಟಿಲುಗಳೆಂದು ಹೇಳಬಹುದು. (೧) ಯಾರಿಗೂ ತ್ರಾಸಕೊಡದೆ ವರ್ತಿಸುವದು. (೨) ತನ್ನ ಮತ್ತು ಎರಡನೆಯವರ ಹಿತವನ್ನು ಸಾಧಿಸುವದು (೩) ತನ್ನ ಹಿತ ಸ್ವಲ್ಪ ಕಡಿಮೆಯಾದರೂ ಚಿಂತೆಯಿಲ್ಲ ಎರಡನೆಯವರ ಹಿತವನ್ನು ಹೆಚ್ಚಾಗಿ ಸಾಧಿಸುವದು, (೪) ಸ್ವಹಿತದ ಮೇಲೆ ನೀರೆರೆದು ಎರಡನೆಯವರಿಗಾಗಿ ದುಡಿಯುವದು. ಇದರಲ್ಲಿ ನಾಲ್ಕನೆಯ ಪ್ರಕಾರದ ಶೀಲವನ್ನು ಯಾರು ಪಡೆಯುವರೆ ? ಅಂದರೆ ಆ ಮೆಟ್ಟಿಲವನ್ನು ಯಾರು ಹತ್ತುವರೋ ಅವರು ಮಾನವ ಜೀವನದ ಉಚ್ಚ ಪಾವಟಿಗೆಯನ್ನು ಏರಿದರೆಂದು ಹೇಳಬಹುದು ; ತನ್ನ ಐಹಿಕ ಸ್ವಾರ್ಥದ ಮೇಲೆ ನೀರುಬಿಟ್ಟು ಪಾರಮಾರ್ಥಿಕ ಸ್ವಾರ್ಥ ಸಾಧಿಸಿರೆಂದು ಹೇಳಬಹುದು. (ಪರಮ + ಅರ್ಥ + ಸಾಧಿಸುವದು) ಅಂದರೆ ಆತ್ಮಪ್ರಾಪ್ತಿ ಹೊಂದಿದರೆಂದು ಹೇಳಬಹುದು. ಆತ್ಮ ಪ್ರಾಪ್ತಿಯು ಮಾನವನ ಅಂತಿಮ ಗುರಿಯು.

ಆತ್ಮಪ್ರಾಪ್ತಿಯು ಶಿಕ್ಷಣದ ಅಂತಿಮ ಧ್ಯೇಯ. ಇಲ್ಲಿಯ ವರೆಗೆ ಹೇಳಿದ ಶಿಕ್ಷಣದ ಈ ಧ್ಯೇಯಗಳು ಪೌರ್ವಾತ್ಯ ರಾಷ್ಟ್ರಗಳಿಗೆ, ಅದರಲ್ಲೂ ಭಾರತಕ್ಕೆ ಸಂಬಂಧಿಸಿದವು. ಆದರೆ ಪಾಶ್ಚಿಮಾತ್ಯರ ದೃಷ್ಟಿಕೋನವೆ ಬೇರೆ. ಆಧ್ಯಾತ್ಮಿಕದ ಒಗಟ ಅವರಿಗೆ ಸೇರದು. ಆಗಸದ ಹಣ್ಣಿಗಾಗಿ ಕೈಯಲ್ಲಿಯ ಕೋಲನ್ನೇಕೆ ಕಳೆದುಕೊಳ್ಳಬೇಕೆಂಬ ಮತವಾದಿಗಳವರು. ಅವರಿಗೆ ಸಾಮಾಜಿಕ ಸುಖ ಜೀವನವೆ ಮುಖ್ಯ. ಆದರ ಮುಖಾಂತರವೇ ಅವರು ರಾಷ್ಟ್ರಶುದ್ಧ (ರಾಷ್ಟ್ರೀಯ) ಶಿಕ್ಷಣವನ್ನು ಹುಡುಕಲು ತವಕಿಸುತ್ತಾರೆ. "ಸರ್ವಶಿಕ್ಷಣ ಶಾಸ್ತ್ರಶುದ್ಧವಾದರೂ ರಾಷ್ಟ್ರಶುದ್ಧವಾಗಿರಬೇಕೆಂಬ" ಧ್ಯೇಯವಾದಿಗಳವರು. ಈ ಮಾತನ್ನು ನಾವು ಒಪ್ಪಲೇ ಬೇಕು.

ಅಂತೆ ಪಾಶ್ಚಿಮಾತ್ಯರ ಧ್ಯೇಯವಾದ ಸ
ಸುಖಜೀವನ, ಹಾಗು ಪೌರ್ವಾತ್ಯ ದೇಶ
ಯಾದ ಆತ್ಮಪ್ರಾಪ್ತಿಯ ಮಾರ್ಗ ಹಾಗು
ಎರಡನ್ನೂ ಸಾಧಿಸುವ ಧ್ಯೇಯವೇ
ಧ್ಯೇಯ. ಆದರಿಂದ ಜಗತ್ತಿನಲ್ಲಿ ಸುಖ
ಲಭಿಸಬೇಕಾದಲ್ಲಿ, ಮಾನವ ಕುಟುಂಬದ
ಮಂದಿರವು ಶೋಭಿಸಬೇಕಾದಲ್ಲಿ "ಜೀವನ
ವೇ ಶಿಕ್ಷಣದ ಧ್ಯೇಯ" ಎಂಬ ತಿರು
ಬೇಕಾದಲ್ಲಿ ಸರ್ವ ರಾಷ್ಟ್ರದ ಶಿಕ್ಷಣದ ತಿ
ಗಾಂಧೀಜಿಯ ಜೀವನ ಶಿಕ್ಷಣದ ಧ
ಭಾರತೀಯ ಶಿಕ್ಷಣದ ಧ್ಯೇಯಗಳಾಗಬೇಕು,
ಲೆಂದು ದೇವ ಚಿನ್ಮಯನಲ್ಲಿ ಪ್ರಾರ್ಥಿಸಿ ಮು

ಶಿಕ್ಷಣದ ಸುವರ್ಣ ಮಾರ್ಗ

ಕಾರ್ಯಶೀಲ ಶಿಕ್ಷಕರಾದ ನಿಮಗೆ ನಾನು ಬಿನ್ನವಿಸಿಕೊಳ್ಳುವೆನು. ಒಳ್ಳೆಯ ಶಿಸ್ತು ನೆಲೆಗೊಂಡಿದ್ದರೆ, ಯಾವುದೊಂದು ವರ್ಗದಲ್ಲಿಯ ಮಕ್ಕಳ ಮನಸ್ಸಿನಲ್ಲಿ ನಿಷ್ಕ್ರಿಯಾತ್ಮಕ ಜ್ಞಾನವನ್ನು ಕೆಲವೊಂದು ಪ್ರಮಾಣದಲ್ಲಿ ತುಂಬಲಿಕ್ಕೆ ಸಾಧ್ಯವಾಗುತ್ತದೆ. ನೀವು ಒಂದು ಪಠ್ಯಪುಸ್ತಕವನ್ನು ತೆಗೆದುಕೊಳ್ಳುತ್ತಿರಿ, ಮತ್ತು ಮಕ್ಕಳು ಅದನ್ನು ಕಲಿಯುವಂತೆ ಮಾಡುತ್ತಿರಿ. ಇಷ್ಟರಮಟ್ಟಿಗೆ ಒಳ್ಳೇದು. ಇದರಿಂದ ವರ್ಗಪದ ಶ್ರೇಣೀ ಸಮೀಕರಣ ಲೆಕ್ಕವನ್ನು ಬಿಡಿಸಲಿಕ್ಕೆ ಮಗವು ಸಮರ್ಥವಾಗುವದು. ಆದರೆ, ಮಗುವಿಗೆ ಇಂಥ ಸಮೀಕರಣ ಲೆಖ್ಖವನ್ನು ಬಿಡಿಸಲಿಕ್ಕೆ ಕಲಿಸುವದರಲ್ಲಿರುವ ಉದ್ದಿಶ್ಯವೇನು ? ಈ ಪ್ರಶ್ನೆಗೆ ಪರಂಪರಾಗತವಾದ ಒಂದು ಉತ್ತರವಿದೆ. ಅದು ಹೀಗಿದೆ : ಮನಸ್ಸು ಉಪಕರಣದಂತಿರುವ ಒಂದು ಸಾಧನವಿರುವದರಿಂದ ನೀವು ಮೊದಲು ಅದನ್ನು ಹದನಗೊಳಿಸುವಿರಿ. ಬಳಿಕ ಉಪಯೋಗಿಸುವಿರಿ. ಸಮೀಕರಣ ಲೆಕ್ಕವನ್ನು ಬಿಡಿಸುವ ಸಾಮರ್ಥ್ಯವನ್ನು ತಂದುಕೊಳ್ಳುವದು ಮನಸ್ಸನ್ನು ಹದನಗೊಳಿಸುವ ಕ್ರಮದ ಒಂದು ಅಂಶವಿದ್ದಂತೆ. ಶತಮಾನಗಳಿಂದ ಈ ಉತ್ತರದಲ್ಲಿ ಅರ್ಧ ಮರ್ಧ ಸತ್ಯವಿದ್ದಾ
ಆಧುನಿಕ ಜಗತ್ತಿನ ಬುದ್ಧಿ ಪ್ರತಿಭೆಯನ್ನು
ಮೂಲದೋಷವೊಂದು ಅಡಕವಾಗಿದೆ.

ಮನಸ್ಸು ಎಂದೂ ಸ್ತಬ್ಧವಿರಲಾರದು. ಜ
ಲವಾದ ಆಕರ್ಷಣಶಕ್ತಿಯುಳ್ಳ ಬಾಹ್ಯ
ಉತ್ತರಿಸಬಲ್ಲ ನಿರಂತರವಾದ ಒಂದು
ನೀವು ಅದನ್ನು ಹದನ ಮಾಡುವ ವರೆಗೆ
ವನ್ನು ಮುಂದೂಡಲಾರಿರಿ. ನೀವು ಕ
ವಿಷಯಗಳಿಗೆ ಹೊಂದಿಕೊಂಡಿರುವ ಆಸ
ಳಲ್ಲಿ ಜಾಗ್ರತವಾಗಬೇಕು. ಇಲ್ಲಿಯ
ಈಗಿಂದೀಗಲೇ ಅದು ಬಳಸಲ್ಪಡಬೇ
ಶಿಕ್ಷಣದ ಸುವರ್ಣಮಾರ್ಗ; ಮತ್ತು
ಒಳ್ಳೇ ದುರ್ಗಮವಾದ ಮಾರ್ಗ.

ಎ. ಆರ್. ವ್ಹಾ

[ಶಿಕ್ಷಣದ ಗು

ಕರ್ನಾಟಕ ಮೂಲ ಶಿಕ್ಷಣ ಪರಿಷತ್ತು

ಬಾಗಿಲಕೋಟೆ

(೧೯೫೪)

(ಕಳೆದ ಸಂಚಿಕೆಯಲ್ಲಿ ಬಾಗಿಲಕೋಟೆಯಲ್ಲಿ ಜುಲೈ ೨೩, ೨೪ ೧೯೫೪ರಂದು ಜರುಗಿದ ಮೂಲ ಶಿಕ್ಷಣ ಪರಿಷತ್ತಿನ ಸಂಬಂಧವಾಗಿ ಸಂಕ್ಷಿಪ್ತ ಸಮಾಚಾರವನ್ನು ಕೊಡಲಾಗಿದೆ. ಶಿಕ್ಷಕರ ಮಾರ್ಗದರ್ಶನಕ್ಕಾಗಿ ಅಲ್ಲಿ ನಡೆದ ಕಾರ್ಯಕಲಾಪಗಳನ್ನು ಇಲ್ಲಿ ಸ್ವಲ್ಪ ವಿಶದವಾಗಿ ಕೊಡಲಾಗಿದೆ. —ಪ್ರ. ಸಂ.)

ಕರ್ನಾಟಕದ ಎಲ್ಲ ಏ. ಓ., ಡಿ. ಇ. ಆಯ್., ಎ. ಡಿ. **ಆಯ್**, ಜಿ. ಬಿ. ಟಿ. ಸಿ. ಪ್ರಿನ್ಸಿಪಾಲ, ಕ್ರಾಫ್ಟ ಆರ್ಗನಾಯಿಜರ ಅವರುಗಳ ಮೂಲಶಿಕ್ಷಣ ಪರಿಷತ್ತು **ಬಾಗಿಲಕೋ**ಟೆಯಲ್ಲಿ ಮುಂಬಯಿ ಸರಕಾರದ ಶಿಕ್ಷಣ **ಖಾತೆಯ ಡೆ**ಪ್ಯುಟಿ ಮಿನಿಸ್ಟರರ ಅಧ್ಯಕ್ಷತೆಯಲ್ಲಿ ಜರುಗಿತು. **ಸಾ**ಮೂಹಿಕ ಪ್ರಾರ್ಥನೆ ಆತ್ಮ ಪರಿಚಯ**ದೊಂದಿಗೆ** ಪರಿಷತ್ತು ಪ್ರಾರಂಭವಾಯಿತು. ವಿಜಾಪುರ **ಜಿಲ್ಹೆಯ** ಎಜ್ಯುಕೇಶನಲ್ ಇನಸ್ಪೆಕ್ಟರ ಅವರು ತಮ್ಮ **ಸ್ವಾಗತ ಭಾಷಣ**ದಲ್ಲಿ ಪರಿಷತ್ತಿನ ಉದ್ದೇಶವು ಕರ್ನಾಟಕದಲ್ಲಿ **ಮೂಲ**ಶಿಕ್ಷಣದ ಯೋಜನೆಯನ್ನು ಕುರಿತು ವಿಚಾರ-ವಿನಿಮಯ, ಮೂಲ ಶಿಕ್ಷಣದ ಸಂದೇಶವನ್ನು **ಕರ್ನಾಟಕದ** ಮೂಲೆ ಮೂಲೆಗೂ ಮುಟ್ಟಿಸುವದು, **ಮೂಲಶಿಕ್ಷ**ಣದ ಸಂಬಂಧವಾಗಿ ದಿನದಿನಕ್ಕೂ ಏಳುವ **ಸಮಸ್ಯೆ**ಗಳನ್ನು ನಿವಾರಿಸುವ ಬಗೆಗಳನ್ನು ಶೋಧಿಸುವದಾಗಿದೆಯೆಂದು ಹೇಳಿದರು ಮತ್ತು ಮುಂಬಯಿರಾಜ್ಯದ **ಉಪಶಿಕ್ಷಣ** ಮಂತ್ರಿಗಳ ಅಧ್ಯಕ್ಷತೆಯಲ್ಲಿ **ಜ**ರುಗಿದುದು **ಹೆಮ್ಮೆಯ** ವಿಷಯವಾಗಿದೆ ಎಂದೂ ಯಶಸ್ವಿಯಾಗುವುದೆಂದೂ **ಹೇ**ಳಿದರು.

ಬಳಿಕ ಮೂಲಶಿಕ್ಷಣದ ಡೆಪ್ಯುಟಿ ಡೈರೆಕ್ಟರರು ತಮ್ಮ **ಪ್ರಾ**ರಂಭಿಕ ಭಾಷಣದಲ್ಲಿ ಈ ರಾಜ್ಯದಲ್ಲಿ ಈ ಪ್ರಕಾರ **ಜ**ರುಗಿದ ಪರಿಷತ್ತು ನಾಲ್ಕನೆಯದೆಂದು ಹೇಳಿದರು. ಹಿಂದಿನ **ಪ**ರಿಷತ್ತುಗಳಿಂದ ಈ ಪರಿಷತ್ತಿಗೆ ಅನೇಕ ಅನು**ಭವಗಳು** ದೊರಕಿವೆ. ಹೊಣೆಗಾರಿಕೆಯೂ ಹೆಚ್ಚಿದೆಯೆಂಬುದನ್ನು ಅರಿಯಬೇಕು. ಮೂಲಶಿಕ್ಷಣ ಶಾಖೆಯ ಒಬ್ಬ **ಪ್ರ**ಮುಖನಾಗಿರುವದರಿಂದ **ಮೂಲಶಿಕ್ಷ**ಣಕ್ಕಾಗಿ ಸಾರ್ವಜನಿಕ ಹಣವನ್ನು ಹೇರಳವಾಗಿ ವ್ಯರ್ಥ ಖರ್ಚು ಮಾಡುತ್ತಿರುವದಾಗಿ ಒಂದನೆಯ ನಂಬರಿನ ಅಪರಾಧಿ ಎಂದು ನನ್ನನ್ನು ಟೀಕಿಸಲಾಗುತ್ತಿದೆ. ಟೀಕಾಕಾರರ ಮನಸ್ಸನ್ನು ನೋಯಿಸದೆ ಉತ್ತರಕೊಡುವದು ವಿಹಿತವಾದುದು ಎಂದು ಹೇಳಿದರು. ಆಂಧ್ರ, ಮಧ್ಯಪ್ರದೇಶ ಬಿಹಾರ, ಸೇವಾಗ್ರಾಮ ಮುಂತಾದ ಕಡೆಗಳಲ್ಲಿ ಅಲೆದಾಡಿ ಮೂಲಶಿಕ್ಷಣದ ಕಾರ್ಯ ಕ್ಷೇತ್ರಗಳನ್ನು ಸಂದರ್ಶಿಸಿದ ಡೆಪ್ಯುಟಿ ಡೈರೆಕ್ಟರರು ಮುಂಬಯಿರಾಜ್ಯದಲ್ಲಿ ಮೂಲಶಿಕ್ಷಣದ ಪ್ರಗತಿಗೆ ಅವಶ್ಯವಾದ ಸೂಚನೆಗಳನ್ನು ಮಾಡಿದರು. ಅವುಗಳಲ್ಲಿ ಮುಖ್ಯವಾದುವು ಕೆಳಗಿನಂತಿವೆ:—

(೧) ಪ್ರತಿಯೊಬ್ಬ ವಿದ್ಯಾರ್ಥಿಗೆ ೧೦ರಿಂದ ೧೫ ಚೌ. ಫೂಟು ಸ್ಥಳವು ದೊರೆಯಬೇಕು (೨) ಒಕ್ಕಲತನದ ಶಾಲೆಗೆ ೨ ರಿಂದ ೫ ಎಕರೆಗಳಷ್ಟು ಭೂಮಿಯಿರಬೇಕು. (೩) ಪ್ರತಿಯೊಂದು ಶಾಲೆಗೆ ಉದ್ಯೋಗದ ಸಲುವಾಗಿ ಒಂದು ಶೆಡ್ ಮತ್ತು ಕನಿಷ್ಠ ಇಬ್ಬರು ಶಿಕ್ಷಕರು ಹಾಗು ಪುಸ್ತಕಾಲಯವಿರಬೇಕು. (೪) ಪ್ರತಿಯೊಬ್ಬ ಎ. ಡಿ. ಇ. ಆಯ್. ಅವರ ನಿರೀಕ್ಷಣೆಯಲ್ಲಿ ೨೦-೩೦ ಸಾಲೆಗಳು ಇರಬೇಕು. (೫) ಶಿಕ್ಷಕರ ಅಲ್ಪಾವಧಿ ತರಬೇತಿ ವರ್ಗಗಳು ನಡೆಯಬೇಕು. (೬) ಔದ್ಯೋಗಿಕ ಶಾಲೆಗಳಲ್ಲಿ ಉತ್ಪನ್ನವಾದ ಸರಕನ್ನು ಸರಕಾರವು ಕೊಳ್ಳಬೇಕು. ಈ ಸೂಚನೆಗಳಲ್ಲಿ ಬಹು ಅಂಶವನ್ನು ಸರಕಾರವು ಒಪ್ಪಿರುವದು ಸಮಾಧಾನಕಾರಕವೆಂದು ಹೇಳಿ ಪರಿಷತ್ತಿನ ಸದಸ್ಯರ ಮಾರ್ಗದರ್ಶನಕ್ಕಾಗಿ ಕೆಳಗಿನ ಸಂಗತಿಗಳನ್ನು ತಿಳಿಸಿದರು:—

(೧) ಶಾಲೆಯ ಕಟ್ಟಡದ ವಿಷಯದಲ್ಲಿ ಔದ್ಯೋಗಿಕ (ಕ್ರಾಫ್ಟ್) ಶಾಲೆಗೆ ಪ್ರಾಶಸ್ತ್ಯವಿರಬೇಕು. 'ಶಿಫ್ಟ್' ಪದ್ಧತಿಗೂ ಅವಕಾಶವಿದೆ. (೨) ವ್ಯವಸ್ಥೆಗಾಗಿ ಉಪಕರಣಗಳ ಬಗೆಗೆ ಸ್ವಲ್ಪ ಹಣ ಮೀಸಲಾಗಿರಿಸಲಾಗಿದೆ. ಅದನ್ನು ಮಂಜೂರಿ ಮಾಡಿಸಿಕೊಂಡು ಪಡೆಯಬಹುದು. (೩) ಕ್ರಾಫ್ಟ್ ಶಾಲೆಯ ಹೆಡ್ ಮಾಸ್ತರರು 'ಕ್ರಾಫ್ಟ್‌ಟ್ರೇಂಡ' ಇರಬೇಕೆಂಬುದು ಅಷ್ಟೊಂದು ಅಗತ್ಯವಿಲ್ಲ. ಆದರೆ ಅವರು ಎ. ಓ., ಡಿ. ಇ. ಆಯ್., ಇ. ಆಯ್. ಅವರ ದೃಷ್ಟಿಯಲ್ಲಿ ಅರ್ಹರಾದವರು ಇರಬೇಕು. (೪) ಸಾಮಾನ್ಯ ಎ. ಡಿ. ಇ. ಅಯ್. ಅವರಿಗೆ ಮೇಲ್ವಿಚಾರಣೆಗೆ ಹೆಚ್ಚು ಶಾಲೆಗಳನ್ನು ಕೊಡಬೇಕು. ಕ್ರಾಫ್ಟ್‌ಸ್ಕೂಲುಗಳ ಮೇಲ್ವಿಚಾರಣೆಗಾಗಿ ಒಬ್ಬಿಬ್ಬರು ಎ. ಡಿ. ಆಯ್ ಅವರನ್ನು ನಿಯಮಿಸಬಹುದು. (೫) ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಮೂಲ ಶಿಕ್ಷಣಕ್ಕಾಗಿ ಹೆಚ್ಚು ಹಣವನ್ನು ಮೀಸಲಾಗಿರಿಸಿದೆ.

ಕೆಳಗಿನ ಸಂಗತಿಗಳನ್ನು ಗಮನಕ್ಕೆ ತಂದುಕೊಳ್ಳಬೇಕು:

(೧) ಭಾರತದ ಘಟನೆಯಲ್ಲಿ ೬ ರಿಂದ ೧೪ವರುಷದ ವರೆಗಿನ ಪ್ರತಿಯೊಬ್ಬ ಬಾಲಕನಿಗೆ ಪುಕ್ಕಟೆ ಮತ್ತು ಕಡ್ಡಾಯದ ಶಿಕ್ಷಣವು ದೊರೆಯಬೇಕೆಂದು ಹೇಳಲಾಗಿದೆ. ಈ ವಿಚಾರವನ್ನು ಪೂರೈಸಲು ಮೂಲಶಿಕ್ಷಣವೇ ಯೋಗ್ಯವಾಗಿದೆ. ಕ್ರಾಫ್ಟ್‌ಶಾಲೆಗಳಿಂದ ಬಂದ ಉತ್ಪನ್ನವನ್ನು ಹೊಸ ಮೂಲ ಶಿಕ್ಷಣ ಶಾಲೆಗಳನ್ನು ತೆರೆಯುವಲ್ಲಿ ವಿನಿಯೋಗಿಸಬೇಕು. ಅಧಿಕಾರಿಗಳು ಮೂಲಶಿಕ್ಷಣಕ್ಕೆ ವಿಧೇಯರಾಗಿರಬೇಕು. ಕೇಂದ್ರ ಸರಕಾರವು ೫೦೦ ಕ್ರಾಫ್ಟ್ ಶಾಲೆಗಳನ್ನು ಮೂಲಶಿಕ್ಷಣದ ಶಾಲೆಗಳನ್ನಾಗಿ ಮಾರ್ಪಡಿಸಬಯಸುತ್ತಿದೆ. (೨) ಮೂಲೋದ್ಯೋಗದ ಲೆಕ್ಕವನ್ನು ಹೊಸ ಶಾಲಾ ಲೆಕ್ಕಪತ್ರ ನಿಯಮಾನುಸಾರ ಇಡಬೇಕು. (೩) ಶಾಲೆಗಳಲ್ಲಿ ಉತ್ಪನ್ನವಾದ ಸರಕುಗಳನ್ನು ಸ್ಥಾನಿಕ, ಹಿಂದುಳಿದ ವರ್ಗದ, ಚರಕಾಸಂಘ ಮುಂತಾದ ಸಂಸ್ಥೆಗಳಿಗೆ ಕೊಳ್ಳಬೇಕೆಂದು ಕೇಳಿಕೊಳ್ಳಲಾಗಿದೆ. (೪) ಹಳ್ಳಿಗರು ೫ ಎಕರೆ ಭೂಮಿಯನ್ನು ಕೊಟ್ಟಲ್ಲಿ ಶಾಲೆಗಳು ಒಕ್ಕಲತನವನ್ನು ಪ್ರಾರಂಭಿಸಬಹುದು. (೫) ಬಡಿಗತನದ ಶಾಲೆಗಳು ಜನತೆಗೆ ಬೇಕಾಗುವ ವಸ್ತುಗಳನ್ನು ನಿರ್ಮಿಸಬೇಕು. ಹೀಗೆ ಹೇಳಿ ಡೆಪ್ಯುಟಿ ಡೈರೆಕ್ಟರರು ಮೂಲಶಿಕ್ಷಣದ ಪ್ರಗತಿ... ಗಬೇಕೆಂದು ಬಿನ್ನವಿಸಿದರು.

ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆ... ಮೂಲಶಿಕ್ಷಣದ ಪ್ರಗತಿಯ ವರದಿಯನ್ನು ಅ... ಗಳ ಏ. ಓ., ಡಿ. ಇ. ಆಯ್. ಅವರು ಸಾ... ದರು. ವರದಿಗಳಲ್ಲಿ ಬಂದ ಕೆಳಗಿನ ವಿ... ಕುರಿತು. ಚರ್ಚಿಸಲಾಯಿತು.—

(೧) ಕ್ರಾಫ್ಟ್‌ಟ್ರೇಂಡ ಇಲ್ಲದ ಶಿಕ್ಷಕರ ... ಯನ್ನು ನಿರ್ಧರಿಸಿ ಕ್ರಾಫ್ಟ್ ಶಾಲೆಗಳಲ್ಲಿಡಬೇ... ಬಡಿಗತನಕ್ಕಿರುವ ಶಿಕ್ಷಕರ ಕೊರತೆಯನ್ನು... ಲಾಡಿಸಬೇಕು. (೩) ಕಾರವಾರದಲ್ಲಿ ಮಾತ್ರ... ಹೆಚ್ಚು ಲಾಭದಾಯಕ, ಉಳಿದ ಕಡೆಗಳಲ್ಲಿ ... ಸಾಕು. (೪) ಸ್ಥಾಯೀ ಬೇಲೆಯ ವ್ಯವಸ್ಥೆ... ಉತ್ತಮ. ಸಮೀಪದ ಬಾವಿಯ ನೀರನ್ನು ... ಪಡೆಯುವುದು ಉಚಿತ. (೫) ಮಕ್ಕಳಿಗೆ ... ಉಪಕರಣಗಳ ನಿರೀಕ್ಷಣೆ ಮತ್ತು ಸರಿಯ... ಯೋಗ ಮಾಡುವದನ್ನು ಕಲಿಸಬೇಕು. (೬) (ರಟ್ಟಿನ ಕೆಲಸದ) ಪಾಠ್ಯಕ್ರಮವನ್ನು ಬಿಡಬ... (೭) ಪಿ. ಇ. ನಿಯಮಗಳ ಪ್ರಕಾರ ಏ. ಓ. ... ವಗೈರೆ ಖರೀದಿಗೆ ಹಣವನ್ನು ಹೆಡ್‌ಮಾಸ್ತರ... ಡವಾಗಿ ಕೊಡಬಹುದು. (೮) ಕಚ್ಚಾ ಮಾ... ಯಾದರೂ ಹೊರಡುವಂತೆ ಮಾಡಿಕೊಂಡು... ವಾದ ಸಾಮಾನುಗಳನ್ನು ಮಾರಬಹುದು. (... ಶಾಲೆಗಳನ್ನು ಬೇಸಿಕ್ ಶಾಲೆಗಳನ್ನಾಗಿ ಮಾ... ದಕ್ಕೆ ಗ್ರಾಂಟನ್ನು ಪಡೆಯಬಹುದು. ಚಿಕ್ಕ ವ... ಉಪಯೋಗಿಸಬಹುದು. (೧೦) ಎಲ್ಲ ಹತ್ತಿಯ... ಕೊಂಡು ಹಂಜಿಗಳನ್ನು ಮಾಡಿಸಿ ಮಣ್ಣಿನ ಪ... ಸಂಗ್ರಹಿಸಿಡಬಹುದು. (೧೧) ಕ್ಷೇತ್ರವು ಕಡಿ... ವಿದ್ಯಾರ್ಥಿಗಳು ಹಳ್ಳಿಯ ಕೃಷಿಯ ಚಟುವ... ಭಾಗವಹಿಸಬಹುದು. (೧೨) ಕ್ರಾಫ್ಟ್ ... ಯೋಗ್ಯ ಅಧಿಕಾರಿಗಳ ಅಪ್ಪಣೆ ಪಡೆದು ... ನೆಯ್ಯುವಿಕೆಯ ಬದಲು, ಒಕ್ಕಲತನ ಉದ್ಯೋ... ಪಡೆಯಬಹುದು. (೧೩) ಹೆಚ್ಚು ಕ್ಷೇತ್ರವಿದ್ದ... ವರಿಗೆ ಪಂಪುಗಳನ್ನುಪಯೋಗಿಸಬಹುದು.

ು ಬಗೆಗೆ ವೆಚ್ಚವಾದ ಹಣವನ್ನು ಶಾಲೆಯ ದಕ ವಸ್ತುಗಳಿಂದ ಪೂರೈಸಿಕೊಳ್ಳಬಹುದು. ಕ್ಕಿ ಸಮಯ ಕ್ರಾಫ್ಟಿಗಾಗಿ, ಕೈ ಸಮಯ ಇತರ ಗಳಿಗಾಗಿ ಇರಬೇಕು. ಕ್ರಾಫ್ಟಿನ ಬಗ್ಗೆ ಹೊಸ ಕ್ರಮವು ತಯಾರಾಗಲಿದೆ. ಕ್ರಾಫ್ಟ್ ಶಾಲೆಗಳು ಶಾ. ಪ್ರ. ಪ. ಪರೀಕ್ಷೆಯಲ್ಲಿ ಒಳ್ಳೆಯ ಪರಿಣಾಮ ತೋರಿಸಿವೆ. (೧೬) ಜೇನ್ನೊಣ ಸಾಕುವಿಕೆಯೂ ಉದ್ಯೋಗವಾಗಿದೆ. ಇದನ್ನು ಕುರಿತು ಸರ- ವಿಚಾರಿಸುತ್ತಿದೆ. (೧೭) ಕಾರವಾರಕ್ಕೆ ಹುಬ್ಬಳ್ಳಿ ಹತ್ತಿಯನ್ನು ಪೂರೈಸಬಹುದು. (೧೮) ವಸ್ತ್ರ ಲಂಬನ ಕೇಂದ್ರದ ಸ್ಥಾಪನೆ ಮಾಡಬೇಕು ಮತ್ತು ಂಗಳ ೫ ಗುಂಡಿ ನೂಲು ಸದಸ್ಯತ್ವದ ವಂತಿಕೆ- ರಬೇಕು. (೧೯) ಸರಾಸರಿ ಹಾಜರಿ ಸಂಖ್ಯೆಯ ಂದ ಶಾಲೆಗಳ ಅಧ್ಯಾಪಕರ ಸಂಖ್ಯೆಯು ನಿರ್ಧರಿಸ- ಬೇಕು, (೨೦) ರಟ್ಟಿನ ವಸ್ತುಗಳನ್ನು ಮೂಲ ಮಾರಬಹುದು. (೨೧) ಮೇದಾರ ಉದ್ಯೋಗದ ಕ್ರಮವು ತಯಾರಾಗುತ್ತಿದೆ. ನಂತರ ಈ ಶಿಕ್ಷಣ ಧವಾದ ದೈನಿಕ ರೆಕಾರ್ಡನ್ನು ಇಡಬೇಕೆಂದು ಯಿತು.

ಕ ಕೆಳಗಿನ ಗೊತ್ತುವಳಿಗಳು ಆದವು:—

) ಕಟ್ಟಡಗಳನ್ನು ಶಿಕ್ಷಕರ, ವಿದ್ಯಾರ್ಥಿಗಳ ಹಾಗು ಯ ನೆರವಿನಿಂದ ಸಿದ್ಧಪಡಿಸಿಕೊಳ್ಳಬೇಕು. ಇದು ರ ಜಿಲ್ಲೆಯಲ್ಲಿ ಸಾಧ್ಯವಿದೆ. ಬಾಡಿಗೆಗಾಗಿ ಗುವ ಹಣವನ್ನು ಇದಕ್ಕಾಗಿ ವಿನಿಯೋಗಿಸಿಕೊಳ್ಳ ಹು. ಶಾಂತಿನಿಕೇತನದಂತೆ ಕಟ್ಟಡದ ಹೊರಗೆ ಳನ್ನು ಹಾಕಬಹುದು. ಮಳೆಗಾಲದಲ್ಲಿ ರಜೆಯ ನ್ನು ಸರಿಪಡಿಸಿಕೊಂಡು ಸೂಟಿ ಕೊಡಬಹುದು. ಮೂಲ ಶಿಕ್ಷಣದ ಸಂಬಂಧವಾಗಿ ಅಚ್ಚಾಗಲು ಕ್ತವಾದ ಸಾಹಿತ್ಯ ದೊರೆಯುತ್ತಿಲ್ಲ. ನಾಗರಿಕತೆ ತರಬೇತಿಯನ್ನು ಕೊಡುವುದರ ಕಡೆಗೆ ಹೆಚ್ಚು ನೀಯತಕ್ಕದ್ದು. ಜಿ. ಬಿ. ಟಿ. ಸಿ. ಯ ಹಳೆಯ ರ್ಥಿಗಳ ಬಳಗವು ಒಳ್ಳೆಯ ಸಾಹಿತ್ಯವನ್ನು ಣ ಮಾಡಬಹುದು. ಈ ದಿಶೆಯಲ್ಲಿ ಸರಕಾರವು ಧನ ಸಂಬಂಧದಲ್ಲಿ ವಿಚಾರಮಾಡುತ್ತಿದೆ. (೨) ನೆಯ ಇಯತ್ತೆಗಳಿಗೆ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವಲ್ಲಿ ಯಾವ ಅಡಚಣೆಯೂ ಇರಕೂಡದು. ೭ನೆಯ ಇಯತ್ತೆಗೂ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬಹುದು. ಆದರೆ ಪಾಲಕರು ಮಕ್ಕಳ ವಿದ್ಯಾಭ್ಯಾಸವನ್ನು ಪಾಠ್ಯಕ್ರಮಕ್ಕೆ ತಕ್ಕಂತೆ ಮನೆಯಲ್ಲಿ ಅಭ್ಯಾಸ ಮಾಡಿಸುವ ಹೊಣೆಯನ್ನು ಹೊರುವ ಭರವಸೆಯನ್ನು ಕೊಡುವದು ಅವಶ್ಯವಿದೆ. ಒಂದು ವೇಳೆ ಸಾಮಾನ್ಯ ಶಾಲೆಗಳಿಗೆ ವಿದ್ಯಾರ್ಥಿಗಳು ಬರುವುದು ಬಹಳ ಹೆಚ್ಚಾದರೆ ಅವನ್ನು ಕ್ರಾಫ್ಟ ಶಾಲೆಗಳನ್ನಾಗಿ ಮಾರ್ಪಡಿಸಬಹುದು. ಸರಕಾರಕ್ಕೆ ಹೆಚ್ಚು ವೆಚ್ಚವು ತಗಲದಂತೆ ನೋಡಿಕೊಳ್ಳುವುದು ಅವಶ್ಯವಾದದ್ದು. (೪) ಪ್ರಾಥಮಿಕ ಶಾಲೆಗಳು ಮಂಜೂರಿ ಪಡೆದ (ಅಧಿಕೃತ) ಉತ್ಪಾದಕ ಕೇಂದ್ರಗಳಲ್ಲ ಮತ್ತು ಅವು ಅಧಿಕೃತ ಅಂಗಡಿಗಳೆಂದು ಸ್ವೀಕೃತ- ವಾಗಿವೆ. ಬೆಲೆಯು ಹೆಚ್ಚು ಎನಿಸಿದಲ್ಲಿ ಅದು ಏ. ಓ. ಮತ್ತು ಕ್ರಾಫ್ಟ ಆರ್ಗನಾಯಿಝರ ಅವರಿಂದ ಪುನಃ ನಿರ್ಧರಿಸ- ಲ್ಪಡಬೇಕು. ಸಾಧಾರಣ ನೂಲಿನ ಹುರಿ, ಆಸನ, ಗುಡಾರ ಪಟ್ಟಿ, ಕುರ್ಚಿಯ ಪಟ್ಟಿ ಮುಂತಾದವುಗಳನು ಕೊಳ್ಳಬೇಕು. ಶಿಕ್ಷಕರು ಒಳ್ಳೆಯ ನೂಲನ್ನು ತೆಗೆಯು- ವಂತೆ ನೋಡಿಕೊಳ್ಳಬೇಕು. ಹತ್ತಿಯ ಹಿಂಜುವಿಕೆ- ಯಿಂದ ಹಂಜಿಯ ವರೆಗಿನ ಕ್ರಿಯೆಗಳ ಕಡೆಗೆ ಹೆಚ್ಚು ಲಕ್ಷ್ಯಗೊಡತಕ್ಕದ್ದು. ದರ ಮತ್ತು ನೂಲಿನ ವಿಭಜನೆ ಮಾಡುವಾಗ ಹೆಚ್ಚು ಕಠೋರತೆಯನ್ನು ತಾಳಬೇಕು. ೧ ಮತ್ತು ೨ನೆಯ ತರಗತಿಗಳಿಗೆ ಮಾತ್ರ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಹಿಂಜುವ ಯಂತ್ರವನ್ನು ಕೊಳ್ಳ- ಬಹುದು. (೫) ಹೊಸ ಕ್ರಾಫ್ಟ ಪಾಠ್ಯಕ್ರಮವು ತಯಾ ರಾಗುತ್ತಿದೆ. ಅದನ್ನು ಎಲ್ಲ ಕ್ರಾಫ್ಟ ಆರ್ಗನಾಯಿಜರ ಕಡೆಗೆ ಕಳಿಸಲಾಗುವುದು. (೬) ಸದ್ಯದ ರೆಕಾರ್ಡು- ಗಳನ್ನು ಸುಲಭ ಮಾಡಲಾಗುವುದು. ಹೊಸ ಲೆಕ್ಕದ ಕೋಡ ಫಾರ್ಮುಗಳನ್ನು ಏ. ಓ. ಅವರು ತರಿಸಿಕೊಂಡು ಮುದ್ರಿಸಿ ಶಾಲೆಗಳಿಗೆ ಹಂಚಬಹುದು. (೭) ಏಕ ಶಿಕ್ಷಕ ಶಾಲೆಗಳಲ್ಲಿ ಸಮವಾಯ ಪದ್ಧತಿಯು ವಾತಾ- ವರಣ ಮತ್ತು ಬಾಲಕರ ವಯೋಮಿತಿಯ ಗುಂಪುಗಳಿಗೆ ಅನುಸಾರವಾಗಿರಬೇಕು. ಬಹುವರ್ಗ ಪಾಠ ಕೊಡು- ವಾಗ ಒಂದು ವರ್ಗಕ್ಕೆ ದೈನಂದಿನದ ಚಟುವಟಿಕೆ ಕೊಡ- ಬೇಕು ಮತ್ತು ಇನ್ನೊಂದಕ್ಕೆ ನೇರವಾದ ಸಮವಾಯ ಪಾಠವನ್ನು ಕೊಡಬೇಕು. ಸಮವಾಯ ಪಾಠಗಳ

ದೈನಿಕ ಕಾರ್ಡುಗಳು ಸಮವಾಯ ಪಾಠಗಳ ವಿವರವಾದ ಮೆಟ್ಟಿಗಳನ್ನು ತೋರಿಸುವಂತಹವಿರಬೇಕು.

ಶಿಕ್ಷಣ ಶಾಖೆಯ ಉಪಮಂತ್ರಿಗಳು ಸಮಾರೋಪ ಭಾಷಣದಲ್ಲಿ ಎಲ್ಲ ಶಿಕ್ಷಣಾಧಿಕಾರಿಗಳು ಮೂಲಶಿಕ್ಷಣವನ್ನು ಸರ್ವಬಗೆಯಿಂದ ಕಾರ್ಯಗತ ಮಾಡಬೇಕೆಂದು ಹೇಳುತ್ತ " ಮಗುವನ್ನು ಯೋಗ್ಯ ನಾಗರಿಕನನ್ನಾಗಿ ಮಾಡುವದೇ ಮೂಲಶಿಕ್ಷಣದ ಉದ್ದೇಶವಾಗಿದೆ. ವಿದ್ಯಾಖಾತೆಯ ಕಣ್ಣು, ಕಿವಿ, ಕೈ, ಕಾಲು ಸಮವಾಯವನ್ನು ಸಮನಾಗಿ ಚೆನ್ನಾಗಿ ತಿಳಿದುಕೊಂಡು ಮುನ್ನಡೆಯಬೇಕು. ಶಿಕ್ಷಕನು ವಿಚಾರಾತ್ಮಕ ಅಧ್ಯಯನ, ಮೂಲೋದ್ಯೋಗ, ಸಾಮಾಜಿಕ ಶಿಕ್ಷಣದ ಚಟುವಟಿಕೆಗಳತ್ತ ಸಂಪೂರ್ಣವಾಗಿ ತನ್ನ ಮನಸ್ಸನ್ನು ಹೊರಳಿಸಬೇಕು. ಪ್ರಾ. ಶಾ.ಪ್ರ. ಪ. ಪರೀಕ್ಷೆಯ ಪರಿಣಾಮವು ಸಾಮಾನ್ಯ ಪ್ರಾ. ಶಾ. ಪ್ರ. ಪ. ಪರೀಕ್ಷೆಯ ಪರಿಣಾಮಕ್ಕಿಂತ ಚೆನ್ನಾಗಿದೆ. ಮೂಲೋದ್ಯೋಗವು ಅಧ್ಯಯನದಲ್ಲಿಯ ರುಕ್ಷತೆಯನ್ನು ಹೋಗಲಾಡಿಸಿ ಆನಂದದ ವಾತಾವರಣವನ್ನು ತಂದಿದೆ. ಮಕ್ಕಳಿಗೆ ರಚನಾನಂದವು ದೊರೆಯುತ್ತದೆ. ಸರಿಯಾಗಿ ಗಮನಕೊಟ್ಟಲ್ಲಿ ವಿಚಾರಾತ್ಮಕ ಅಧ್ಯಯನಕ್ಕೆ ಇದರಿಂದ ಬಾಧೆ ತಟ್ಟಲಾರದೆಂದು ಹೇಳಬಹುದು. ಅಲ್ಲದೆ ಔದ್ಯೋಗಿಕ ಕಾರ್ಯವು ವಿಚಾರಾತ್ಮಕ ಶಿಕ್ಷಣಕ್ಕೆ ನವ ಚೈತನ್ಯವನ್ನು ಕೊಡುತ್ತದೆ ಜ್ಞಾನವನ್ನು ದೃಢೀಕರಿಸುವದಕ್ಕಾಗಿ ಸತತ ಅಭ್ಯಾಸವು ಅಗತ್ಯ, ಆದರೆ ಸದಾಕಾಲವಲ್ಲ ಎಂದು
"ಸಾಮಾನ್ಯಶಾಲೆಗಳಲ್ಲಿ ಸಾಂಘಿಕ ಜೀವನದ
ಗಳನ್ನು ಅನುಸರಿಸುವದು ಯೋಗ್ಯವಾದ
ಗಳಲ್ಲಿ ಉದ್ಯೋಗವನ್ನು ಪ್ರಾರಂಭಿಸುವ
ಕ್ಷೇತ್ರದಲ್ಲಿ ದುಡಿಯುವವರಿಗೆ ಆಹ್ವಾನವನ್ನು
ತಾಗಿತ್ತು, ಆಗಿದೆ. ಚೆನ್ನಾಗಿ ದುಡಿದು ವ
ವನ್ನು ಯಶಸ್ವಿಯಾಗಿ ಮಾಡುವದು
ಕೂಡಿದೆ. ಮೂಲೋದ್ಯೋಗ ಪ್ರಧಾನವಾದ
ಬಾಲಕರಲ್ಲಿ ಸ್ವಯಂ ಪ್ರೇರಣೆ, ವಿಶ್ವಾಸ, ಜೆ
ತಂದಿದೆ. ಕಾರ್ಯವು ಸುಖದ ಮೂಲ " ಎ
ತಮ್ಮ ಭಾಷಣಮುಗಿಸುತ್ತ " ಸಾಮಾಜಿ
ಕಾರ್ಯಗಳು ಮೂಲಶಿಕ್ಷಣದ ಅಂಗಗಳ
ಅಧಿಕಾರಿಗಳು ತಾವು ಮಕ್ಕಳೆಂದೇ ಭಾ
ಹೊರತು ಶಿಕ್ಷಕ – ಪಾಲಕರೆಂದು ಅರಿ
ಮತ್ತು ಪಕ್ಷಪಾತದಿಂದ ದೂರವಿರಬೇಕು.'
ನುಡಿದರು.

ವಿಜಾಪುರ ಜಿಲ್ಹೆಯ ಎಜ್ಯುಕೇಶನಲ್ ಇ
ಸರ್ವರ ಆಭಾರವನ್ನಿಸಿದ ಬಳಿಕ 'ವಂದೇ
ಗೀತೆಯನಂತರ ಪರಿಷತ್ತು ಮುಕ್ತಾಯವಾ

ಸಂಕ್ಷೇಪಿಸಿದವ

ಗುರುನಾಥ ಜ

"ನೂತನ ಗಣಿತ" ಗಳ ತಿದ್ದಿದ ಆವೃತ್ತಿಗಳು

ಎಲ್ಲ ಕಡೆಗೂ ದೊರೆಯುವವು

ಹಲವು ತಜ್ಞರ ನೆರವಿನಿಂದ ತಿದ್ದುಪಡೆಯನ್ನು ಕೈಕೊಂಡು ಹೊಸ ಆವೃತ್ತಿಗಳನ್ನು ಹೊರಡಿಸಲಾಗಿದೆ. ಮನಶ್ಶಾಸ್ತ್ರ, ಗಣಿತಶಾಸ್ತ್ರ, ವ್ಯವಹಾರ ಇವುಗಳ ತ್ರಿವೇಣೀ ಸಂಗಮವನ್ನು ಇವುಗಳಲ್ಲಿ ಕಾಣಬಹುದು. ಅಲ್ಲದೆ ಗಣಿತದ ಎಲ್ಲ ವಿಭಾಗಗಳನ್ನೂ ಕೊಡಲಾಗಿದೆ.

ಎಲ್ಲ ಜಿಲ್ಲಾ ಸ್ಕೂ. ಬೋ. ಹಾಗು ಮುನಸಿಪಲ್ ಸ್ಕೂ. ಬೋರ್ಡುಗಳೂ ಮುನ್ನಣೆಯನ್ನಿತ್ತಿರುವವು
ಎಂತಲೇ ತಿದ್ದಿದ ಆವೃತ್ತಿಗಳನ್ನು ಕೇಳಿರಿ. ಎಲ್ಲ ಕಡೆಗೂ ದೊರೆಯುವವು.

ಆಕಳವಾಡಿ ಬುಕ್ ಡಿಪೋ, ಧಾರವಾಡ

ಪ್ರಾಥಮಿಕ ಶಿಕ್ಷಣ ಪ್ರಪಂಚ

(ಸುದ್ದಿ-ಸಾರ-ಸಂಗ್ರಹ)

(೧೯೫೪ ಆಗಸ್ಟದಿಂದ ೧೯೫೪ ಸಪ್ಟಂಬರ ೮ರ ವರೆಗೆ)

ತಳಕವಾಡ — ೨೬. ಶ್ರೀ. ಕೆ. ಜಿ. ಪೊತ್ನಿಸ, ಸುಪರವಾಯಿಜರ ಸಹಕಾರಿ ಸಂಘಗಳು, ಅವರ **ಹಿರಿಯತನ**ದಲ್ಲಿ ಪಾಲಕರ ದಿನವನ್ನು ಆಚರಿಸಲಾಯಿತು.

ಸುಗ್ನಳ್ಳಿ—೧೮. ಹಿಂದುಳಿದ ವರ್ಗದ ಹಾಗು ಬಡಮಕ್ಕಳಿಗೆ ಸರಕಾರದಿಂದ ಮಂಜೂರಾದ ಪಾಟಿ ಪುಸ್ತಕಗಳನ್ನು ಶ್ರೀ. ಶಿದ್ಲಿಂಗಪ್ಪ ಅಂಗಡಿ ಅವರ ಅಧ್ಯಕ್ಷತೆಯಲ್ಲಿ ಹಂಚಲಾಯಿತು.

ಛಬ್ಬಿ —೨೦. ಶಾಲೆಯ ಮಂತ್ರಿಮಂಡಳದ ಚುನಾವಣೆಯಾಯಿತು. ಶ್ರೀ. ಬ. ರು. ಭಾವಿಕಟ್ಟಿ ಎಂಬ **ವಿದ್ಯಾರ್ಥಿ**ಯು ಮುಖ್ಯಮಂತ್ರಿಯಾಗಿ ಸರ್ವಾನುಮತದಿಂದ ಆರಿಸಲ್ಪಟ್ಟನು.

ಘುಂಡಸಿ — ೧೮. ಉರ್ದುಶಾಲೆಯಲ್ಲಿ ಶ್ರೀ. ಕಂಬಾಳಿಮಠ ಅವರ ಅಧ್ಯಕ್ಷತೆಯಲ್ಲಿ ಹಿಂದುಳಿದ **ವರ್ಗದ** ಹಾಗು ಬಡಹುಡುಗರಿಗೆ ಪಾಟಿಪುಸ್ತಕಗಳನ್ನು ಹಂಚಲಾಯಿತು.

ಧಾರವಾಡ —೨೦. ಹೆಣ್ಣುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಜೀವನ ಶಿಕ್ಷಣ ಕೇಂದ್ರದ **ಪ್ರಾಧ್ಯಾ**ಪಕರಾದ ಶ್ರೀ. ಹುಕ್ಕೇರಿ ಅವರ ಅಧ್ಯಕ್ಷತೆಯಲ್ಲಿ ಕೃಷ್ಣಜಯಂತಿಯು ಆಚರಿಸಲ್ಪಟ್ಟಿತು.

ಶೇರಗಾಂವ—೧೨. ಎ. ಬಿ. ಸ್ಕೂಲಿಗೆ ಕೊರತೆಯಿದ್ದ ಒಂದು ಕುರ್ಚಿಯನ್ನು ಶ್ರೀ. ಲಕ್ಷ್ಮಣ ವೆಂಕಪ್ಪ **ಹಲಗಿ** ಅವರು ದೇಣಿಗೆಯಾಗಿ ಕೊಟ್ಟರು.

ಶಿಗ್ಗಲಿ—೧೫. ಹಿಂದುಳಿದ ವರ್ಗದ ಹಾಗೂ ಬಡಹುಡುಗರಿಗೆ ಪಾಟಿ ಪುಸ್ತಕಗಳನ್ನು ಹಂಚಲಾಯಿತು.

ಹೋಲೀಹಳ್ಳಿ—೭. ಒಕ್ಕಲತನದ ಹಾಗೂ ಅರಣ್ಯ ಶಾಖೆಯ ಉಪಮಂತ್ರಿಗಳಾದ ಶ್ರೀ. ಕೆ. ಎಫ್. **ಪಾಟೀಲ** ಅವರಿಂದ ಶಾಲಾ ಕಟ್ಟಡದ ಶಂಕುಸ್ಥಾಪನೆ ಮತ್ತು ಗಿಡ ನೆಡುವ ಕಾರ್ಯಗಳು ಯಶಸ್ವಿಯಾಗಿ **ಸಾಗಿದವು.**

ಬೇಲೂರ—೧೫. ಪಾನಪ್ರತಿಬಂಧ ಭಾಷಣ ಸ್ಪರ್ಧೆಯಲ್ಲಿ ಯಶಸ್ವಿಯಾದ ಕುಮಾರ ಇಟಗಿ ಈತನಿಗೆ ಶ್ರೀ. ಶೇಖರಪ್ಪ ಗೋಗೇರಿ ಅವರು ಒಂದು ಬೆಳ್ಳಿಯ ಪದಕವನ್ನು ಕೊಟ್ಟರು.

ಶಿಗ್ಗಾಂವಿ—೧೫. ಬಡ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಪಾಟಿ ಪುಸ್ತಕಗಳನ್ನು ಹಂಚ-**ಲಾಯಿತು.**

ಬಂಕಾಪೂರ—೭. ದಿ| ರವೀಂದ್ರನಾಥ ಠಾಕೂರ ಅವರ ಪುಣ್ಯತಿಥಿಯನ್ನು ಶ್ರೀ. ಎಸ್. ಎನ್. **ದೀಕ್ಷಿತ** ಅವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

ತಂಗೋಡ—೯. ಶಿಕ್ಷಕರೊಂದಿಗೆ ಬಾಲಕರು ಇಟಗಿಯ ಪ್ರವಾಸವನ್ನು ಕೈಕೊಂಡಿದ್ದರು.

ರಣತೂರ—೧೫. ಹರಿಜನ ಕೇರಿಯ ಸಮಾಜ ಶಿಕ್ಷಣ ವರ್ಗದ ತಪಾಸಣೆಯು ಜರುಗಿತು.

ಕೆಲವಡಿ—೨. ನಾಗರಪಂಚಮಿಯ ದಿನ ಚರ್ಚಾಕೂಟವು ಸ್ಥಾಪಿತವಾಯಿತು.

ತಡಕನಹಳ್ಳಿ—೩೧. ಶ್ರೀ. ಗಂಗನಗೌಡ್ರ ಪಾಟೀಲ, ಡಿ. ಎಲ್. ಬಿ. ಮೆಂಬರ ಅವರ ಹಿರಿಯತನ-**ದಲ್ಲಿ ವನ**ಮಹೋತ್ಸವ ಜರುಗಿತು.

ಕಲಕೇರಿ—೩೧. ಶ್ರೀ. ಹ. ಯ. ಜವಳಗೇರಿ ಅವರ ಅಧ್ಯಕ್ಷತೆಯಲ್ಲಿ ವನಮಹೋತ್ಸವವು ಜರುಗಿತು.

ಸುತಗಟ್ಟಿ—೩೦. ೧೯೫೩ರಲ್ಲಿ ೧೬ ವಿದ್ಯಾರ್ಥಿಗಳಲ್ಲಿ ೧೧ ವಿದ್ಯಾರ್ಥಿಗಳು, ೧೯೫೪ರಲ್ಲಿ ೧೧ ವಿದ್ಯಾ ಗಳಲ್ಲಿ ೭ ವಿದ್ಯಾರ್ಥಿಗಳು ಮುಲ್ಕೀ ಪರೀಕ್ಷೆಯಲ್ಲಿ ಪಾಸಾಗಿದ್ದಾರೆ.

ತಳಕವಾಡ—೫. ಶ್ರೀ. ಮೋಟೆ ನಾಗಯ್ಯನವರ ಅಧ್ಯಕ್ಷತೆಯಲ್ಲಿ ಪುನರ್ಮಹೋತ್ಸವ ಜರುಗಿತ

ಹೊಸಕೋಟೆ—೭. ಶಾರದಾಪೂಜೆಯ ನಂತರ 'ಆತ್ಮೋದ್ಧಾರ' ಎಂಬ ನಾಟಕ ಮತ್ತು ವಿನೋದಾವಳಿಗಳು ಶ್ರೀ. ಭೀ. ಪ. ನಾಡಗೌಡ್ರ ಅವರ ಅಧ್ಯಕ್ಷತೆಯಲ್ಲಿ ಜರುಗಿದವು.

ಸುಣಧೋಳಿ—೨. ಶಾರದಾ ಪೂಜೆ, ವಿವಿಧ ವಿನೋದಾವಳಿಗಳು ಶ್ರೀ. ಚನಬಸಪ್ಪ ಅಂಗಡಿ ಅಧ್ಯಕ್ಷತೆಯಲ್ಲಿ ಜರುಗಿದವು.

ಶಿಂದೊಳ್ಳಿ—೫. ೧೯೫೪ರ ಮುಲ್ಕೀ ಪರೀಕ್ಷೆಯಲ್ಲಿ ೧೦ರಲ್ಲಿ ೮ ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಗದಗ—೫. ೩೧—೭—೫೪ರಂದು ಶ್ರೀ. ಸಿ. ಎಂ. ಹಿರೇಮಠ, ಏ. ಓ. ಅವರ ಅಧ್ಯಕ್ಷತೆ ಶೈಕ್ಷಣಿಕ ಪಾಠಗಳು ಅರುಣ ಟಾಕೀಜದಲ್ಲಿ, ಜರುಗಿದವು.

ತೇರಗಾಂವ—೩. ಬಾಲಕರು ಶಿಕ್ಷಕರೊಂದಿಗೆ ಹವಗಿ ಹಳ್ಳಿಯ ಪ್ರವಾಸ ಕೈಕೊಂಡಿದ್ದರು.

ಇಟಗಿ—೪. ಬ್ರ್ಯಾಂಚ ಪೋಸ್ಟ ಆಫೀಸ ತೆರೆಯಲಾಯಿತು.

ಅಗಡಿ—೨೮. ಶ್ರೀ. ಸ್ಥಿ. ಜೆ. ಡೇವಿಡ್, ಡಿ.ಇ. ಆಯ್. ಅವರು 'ಜೀವನ' ಎಂಬ ಕೈಬರೆಹದ ಪ ಯನ್ನು ಉದ್ಘಾಟಿಸಿದರು. ತಾ. ೧ರಂದು ಮಣ್ಣೆತ್ತಿನ ಅಮಾವಾಸ್ಯೆಯ ಹಬ್ಬವು ಆಚರಿಸಲ್ಪಟ್ಟಿತು.

ಮಾಜಾಳಿ—೧. ಕೇ. ಬಿ. ಅಂಕಲೇಕರ ಅವರ ಅಧ್ಯಕ್ಷತೆಯಲ್ಲಿ ಲೋಕಮಾನ್ಯ ಟಿಳಕರ ಪುಣ್ಯತಿಥಿ ಆಚರಿಸಲ್ಪಟ್ಟಿತು.

ಸಾತನಹಳ್ಳಿ—೨೪. ಜುಲೈ ೨೪ರಂದು, ಸೇವಾನಿವೃತ್ತರಾಗುವ ಶ್ರೀ. ಲಾಡ ಗುರುಗಳಿಗೆ ಸಂತೋ ಕೂಟವನ್ನು ಏರ್ಪಡಿಸಲಾಗಿತ್ತು.

ಆಲೂರ—೨೬. ಶ್ರೀ. ಚ. ಬ. ಪಾವಟೆಯವರು ರಾತ್ರಿ ಶಾಲೆಯ ಜೀರ್ಣೋದ್ಧಾರ ಮಾಡಿದರು.

ಎಂಟನೆಯ ಸ್ವಾತಂತ್ರ್ಯೋತ್ಸವ

ಸಾಂವಶಿ, ಸಾವಳಗಿ, ಯಲಗೂರು, ಸಾತೇನಹಳ್ಳಿ, ಅಣಜಿ, ಸೊರಟೂರ, ಕುಂದಗ **ಹಿರೇನರ್ತಿ, ಕ್ಯಾಲಕೊಂಡ, ಶಿಗ್ಗಲಿ, ಹಿರೇಮೊರಬ, ಮೊರಬ, ಬೇಲೂರ, ಹೊಸೂರ.** ಶಿಗ್ಗಾಂ **ಡಂಬಳ, ಕೆಲವಡಿ, ಕಮತಗಿ, ನೇಸರಗಿ, ಪಾಚ್ಛಾಪುರ, ತಳಕವಾಡ, ತಂಗೋಡ,** ಐಹೊ **ನಂದವಾಡಗಿ, ಚಿಂಚಲಿ** ಈ ಊರುಗಳಲ್ಲಿ ಸ್ವಾತಂತ್ರ್ಯೋತ್ಸವವು ವಿಜೃಂಭಣೆಯಿಂದ ಜರುಗಿಸಲ್ಪಟ್ಟ ಪ್ರಭಾತಫೇರಿ, ಧ್ವಜವಂದನೆ, ವಿವಿಧ ವಿನೋದಾವಳಿ, ಭಾಷಣ, ಪುಸ್ತಕ ಪಾಟಿ ಹಂಚುವಿಕೆ, ಆಟಗಳ ಸ್ಪ ಬಹುಮಾನ ವಿತರಣ ಮುಂತಾದ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಿಸಲ್ಪಟ್ಟವು. ಹಳ್ಳಿಗರು ಗಳೊಡನೆ ಸಂಪೂರ್ಣ ಸಹಕಾರ ಮಾಡಿದರು.

ತೇರಗಾಂವ—೨೬. ಶ್ರೀಮತಿ ಹಲಗಿ, ಶ್ರೀಯುತರಾದ ಶೀಗೇಹಳ್ಳಿ, ಲಕ್ಕನಗೌಡರ, ಪ ಕಾಜಗಾರ, ಹೊಂಡದಕಟ್ಟಿ ಈ ಮಹನೀಯರು ಶಾಲೆಗೆ ಒಂದೊಂದು ಕುರ್ಚಿಯನ್ನು ಕಾಣಿಕೆಯಾಗಿ ಕೊ ಮತ್ತು ಶ್ರೀಮತಿ ಈರವ್ವ ಹಿರೇಮಠ ಅವರು ದೊಡ್ಡ ಪೃಥ್ವಿಯ ಗ್ಲೋಬನ್ನು ಕಾಣಿಕೆಯಾಗಿ ಕೊಟ್ಟರು.

ಇಂಗಳಗೊಂದಿ—೨೯. ಮಗದ ಮಾಸೂರ ಮತ್ತು ಕುಮುದ್ವತಿ ನದಿಯ ಸೇತುವೆಯ ಪ್ರವಾಸವ ಗುರುಗಳು ಶಿಕ್ಷಕರು ಕೈಕೊಂಡಿದ್ದರು. ೨೮ರಂದು ಚರ್ಚಾಕೂಟವು ಪ್ರಾರಂಭವಾಯಿತು.

ಹಳ್ಳೀಕೇರಿ (ಗದಗ)—೧. ಶ್ರೀ. ಎಸ್. ಬಿ. ಪಾಟೀಲ ಅವರ **ಅಧ್ಯಕ್ಷತೆಯಲ್ಲಿ ಗಜಾನನ ಉತ್ಸವವು** **ಸಲ್ಪಟ್ಟಿತು.** ಶ್ರೀ. ಶಿವಬಸಪ್ಪನವರು ಮುಂಡಲಗೇರಿ ಅವರು ಒಂದು ಹಿತ್ತಾಳೆಯ ನೀರು ತುಂಬುವ , **ಎರಡು** ತಂಬಿಗೆ, ಒಂದು ಸ್ಟ್ಯಾಂಡ, ಎರಡು ಪಾಟಿಗಳನ್ನು ಶಾಲೆಗೆ ಕಾಣಿಕೆ ಕೊಡುವುದಾಗಿ ವಾಗ್ದಾನ ಿದರು.

ಗಂಡು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜ, ಧಾರವಾಡದಲ್ಲಿ ಕೆಳಗೆ ಕಾಣಿಸಿದ ಕಾರ್ಯಕ್ರಮ- **ಮೇ**॥ ಪ್ರಿನ್ಸಿಪಾಲ ಸಾ॥ ರವರ ಅಧ್ಯಕ್ಷತೆಯಲ್ಲಿ ಉತ್ಸಾಹದಿಂದ ಆಚರಿಸಲ್ಪಟ್ಟು ಮುಖ್ಯಮಂತ್ರಿಗಳಿಂದ **ರಮನ್ನಣೆ**ಯೊಂದಿಗೆ ಕೊನೆಗೊಂಡವು:—

(೧) ದಿನಾಂಕ ೧—೮—೫೪ರಂದು ದಿ. ಲೋಕಮಾನ್ಯ ಟಿಳಕರವರ ಪುಣ್ಯ ತಿಥಿಯು ಆಚರಿಸಲ್ಪ- . **ಶ್ರೀ.** ವ್ಹಿ. ಆರ್. ಮುಧೋಳಕರ, ಹೆ. ಮಾ. ಕೆ. ಇ. **ಬೋ.** ಹಾಯಸ್ಕೂಲ ಧಾರವಾಡ ಅವರು ್ಯ **ಅತಿಥಿ**ಗಳಾಗಿ ಆಗಮಿಸಿದ್ದರು ಲೋಕಮಾನ್ಯರ ವ್ಯಕ್ತಿ ವೈಶಿಷ್ಟ್ಯತೆ ಹಾಗೂ ಸ್ವರಾಜ್ಯ ಸಾಧನೆಯ ್ರಗಳನ್ನು ಕುರಿತು ಉಪನ್ಯಾಸವಿತ್ತರು.

(೧) ದಿ. ೨—೮—೫೪ರಂದು ದಿ. ರವೀಂದ್ರರ ಪುಣ್ಯತಿಥಿಯು ಆಚರಿಸಲ್ಪಟ್ಟಿತು. ಶ್ರೀ. ಪ್ರಲ್ಹಾದರಾವ ್ಲರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕವಿಸಾಮ್ರಾಟರ ಪೂಜೆ, ಅಲಂಕಾರ, ಹಾಗೂ ರವೀಂದ್ರರ ನದ ಬಗ್ಗೆ ವಿಚಾರ ಸಂಕೀರ್ಣ ಇತ್ಯಾದಿ ಕಾರ್ಯಗಳು ಅಂದಿನ ವೈಶಿಷ್ಟ್ಯಗಳಾದವು. ಮಾನ್ಯ ಅತಿಥಿಗಳು ್ದ್ರರ **ಉಜ್ವಲ** ಕವಿತ್ವ ಪ್ರತಿಭೆಯನ್ನು ಕುರಿತು ಮಾತನಾಡಿ, ಕವನಗಳನ್ನು ಇಂಪಾಗಿ ಅಂದು ಶೋಭೆ ್ಂಟು ಮಾಡಿದರು.

(೩) ದಿ. ೧೧—೮—೫೪ರಂದು ಶ್ರೀ. ಜಮಖಂಡೀಮಠ, ಅಸಿ. ರಜಿಸ್ಟ್ರಾರ ಕೋಪ ಅಪರೇಟಿವ್ಹ- ರ್ಟಮೆಂಟ, ಅವರು ಸಹಕಾರ ಅಂದೋಲನದ ಬಗ್ಗೆ ಉಪನ್ಯಾಸವಿತ್ತರು.

(೪) ೧೫—೮—೫೪ರಂದು ೭ನೇ ಸ್ವಾತಂತ್ರ್ಯೋತ್ಸವವು ಆಚರಿಸಲ್ಪಟ್ಟಿತು. ಸ್ವಾತಂತ್ರ್ಯೋತ್ಸವವು **ಹುಮ್ಮನಸ್ಸಿ**ನಿಂದ ಮಾನ್ಯ ಪ್ರಿನ್ಸಿಪಾಲರವರ ಮಾರ್ಗದರ್ಶನದಲ್ಲಿ ವೈವಿಧ್ಯಪೂರ್ಣ ಕಾರ್ಯಕ್ರಮಗಳಿಂದ **ದ್ದಿತು.** ಶ್ರೀ. ಎಚ್. ಎಫ್. ಕಟ್ಟೀಮನಿ ಎಂ. ಎಲ್. ಸಿ ಹುಬ್ಬಳ್ಳಿ ಇವರು ಮುಖ್ಯ ಅತಿಥಿಗಳಾಗಿ ಿಸಿದ್ದರು. ಮುಖ್ಯ ಅತಿಥಿಗಳ ಅಮೃತ ಹಸ್ತದಿಂದ ಧ್ವಜವಂದನೆ ಜರುಗಿತು. ಸ್ವಾತಂತ್ರ್ಯ ಸಾಧನೆ ಾ ರಕ್ಷಣೆಯ ಬಗ್ಗೆ ಕರ್ತವ್ಯವನ್ನು ತಿಳಿಸಿ ಹೇಳಿದರು. ಧ್ವಜಸ್ತಂಭದ ಸುತ್ತಲೂ ನಯ ನಮನೋಹರ **ರಂಗವಲ್ಲಿ**ಯು ಹಾಕಲ್ಪಟ್ಟಿದ್ದಿತು. ಮುಂಜಾನೆ ಧ್ವಜವಂದನೆ, ಸೂತ್ರಯಜ್ಞ, ಮಧ್ಯಾಹ್ನದಲ್ಲಿ ೀಯ ಪುರುಷರ ಬಗ್ಗೆ ವಿಚಾರ ಸಂಕೀರ್ಣ, ರಾತ್ರಿ ಮನರಂಜನ ಕಾರ್ಯಕ್ರಮಗಳು ಜರುಗಿದವು. ನ ಕಾರ್ಯಕ್ರಮಗಳಲ್ಲಿ ಮೇಲೆ ಬಂದವರಿಗೆ, ಮ॥ ಪ್ರಿನ್ಸಿಪಾಲ ಸಾ॥ರವರ ಹಸ್ತದಿಂದ ಪಾರಿತೋಷಕ- **ಕೊಡಲ್ಪ**ಟ್ಟವು. ವಂದೇ ಮಾತರಂ ಗೀತೆಯೊಂದಿಗ ಕಾರ್ಯಕ್ರಮವು ಕೊನೆಗೊಂಡಿತು.

(೫) ದಿನಾಂಕ ೧—೯—೫೪ರಿಂದ ೫—೯—೫೪ರ ವರೆಗೆ ಎಂದಿನಂತೆ ಕಾಲೇಜದಲ್ಲಿ ಶ್ರೀ. ಗಜಾನನ **ವವು** ಆಚರಿಸಲ್ಪಟ್ಟಿತು. ಉತ್ಸವದ ಅಂಗವಾಗಿ ಕೆಳಗಿನಂತೆ ಕಾರ್ಯಕ್ರಮಗಳು ಜರುಗಿದವು.

ದಿನಾಂಕ ೧—೯—೫೪ ಶ್ರೀ ಗಜಾನನ ಪ್ರತಿಷ್ಠಾಪನೆ, ಹಾಗೂ ಪೂಜೆ.
ಕಾಲೇಜದ ಗಾಯನ ಶಿಕ್ಷಕರಾದ ಶ್ರೀ. ಗವಾಯಿಯವರ ಹಾಗೂ ಶಿಕ್ಷಕ ವಿದ್ಯಾರ್ಥಿಯಾದ ಶ್ರೀ. ದೊಡ್ಡಮನಿಯವರ ಪೇಟಿ ಹಾಗೂ ತಂಬೂರಿ ವಾದನಗಳು ಜರುಗಿದವು.

ದಿ. ೨—೯—೫೪ ಪೂಜೆ, ಭಜನೆ, ಹಾಗೂ ನೈವೇದ್ಯ.

ದಿ. ೩—೯—೫೪ ಶ್ರೀ. ಪಾಂಡುರಂಗೀ ಶಾಸ್ತ್ರಿಗಳು ಶ್ರೀ ಗಜಾನನ ಪೂಜೆಯ ಮಹತ್ವ ಹಾಗೂ ್ರತಿಯನ್ನು ಕುರಿತು ಭಾಷಣ ಮಾಡಿದರು.

ದಿ. ೪—೯—೫೪ ಮುಂಜಾನೆ ಜೀವನ ಶಿಕ್ಷಣ ಕೇಂದ್ರದ ಪದವೀಧರರ ಕಾರ್ಯಕ್ರಮದಲ್ಲಿ ಕಾಲೇಜದ ರೂ. ಶಿ. ವಿದ್ಯಾರ್ಥಿಗಳು ಭಾಗವಹಿಸಿದರು.

ಮಧ್ಯಾಹ್ನದಲ್ಲಿ ಶ್ರೀ. ಡಾ. ಎನ್. ಪಿ. ಪಾಟೀಲ, ಪಿ. ಎಚ್. ಡಿ. ಪ್ರಾ. ಅಗ್ರಿ ಕಾಲೇಜ, ಅವರು ಪಂಚವಾರ್ಷಿಕ ಯೋಜನೆಯನ್ನು ಕುರಿತು ಬಹು ಹೃದ್ಬೋಧಕ ಉಪನ್ಯಾಸವಿತ್ತರು.

ದಿ. ೫-೯-೫೪ರಂದು ಸಾಯಂಕಾಲ ೪ ಗಂಟೆಗೆ, ಶ್ರೀ ನೀ. ರಾ. ಕುಬಸದ ಅರ್ಗ ಪಾನನಿರೋಧ ಕೇಂದ್ರ ಹುಬ್ಬಳ್ಳಿಯವರ ಲಾವಣೀ ಕಾರ್ಯಕ್ರಮವು ಜರುಗಿ, ಸಂಜೆ ೫-೩೦ಕ್ಕೆ ವಿಸರ್ಜನೆ ಹಾಗೂ ಪ್ರಸಾದ ವಿತರಣದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ಧಾರವಾಡ ೬. ಪದವೀಧರರ ಜೀವನ ಶಿಕ್ಷಣ ಕೇಂದ್ರದ ಹಳೆ ಬಳಗದವರ ಸಂಸ್ಥೆ ಅದು ಈ ವರುಷ ಇಟ್ಟುಕೊಂಡ ಕಾರ್ಯಕಲಾಪಗಳ ಅಂಗವಾಗಿ, ದಿ. ೪-೯-೫೪ ಶನಿವಾರ ದಿವ ೮ ಗಂಟೆಗೆ ಇಲ್ಲಿಯ ಸ. ಗ. ಟ್ರೇ, ಕಾಲೇಜದ ಪ್ರಾರ್ಥನಾಮಂದಿರದಲ್ಲಿ, ಸ್ಥಳೀಯ ಎಲ್ಲ ಪ್ರಾ. ಟ್ರೇ ಗಳ ಶಿ. ವಿದ್ಯಾರ್ಥಿ, ವಿದಾರ್ಥಿನಿಯರ ಸಲುವಾಗಿ, ಕೆಳಗೆ ಕಾಣಿಸಿದ ವಿಷಯಗಳ ಮೇಲೆ ವಾಕ್ ಏರ್ಪಡಿಸಲಾಗಿತ್ತು.

ವಾಕ್ ಸ್ಪರ್ಧೆಯ ವಿಷಯಗಳು:—

೧) ಜೀವನ ಶಿಕ್ಷಣದಲ್ಲಿ ಧಾರ್ಮಿಕ ದಿನಾಚರಣೆಗಳ ಮಹತ್ವ.
೨) ಜೀವನ ಶಿಕ್ಷಣದಲ್ಲಿ ರಾಷ್ಟ್ರೀಯ ದಿನಾಚರಣೆಗಳ ಸ್ಥಾನ.
೩) ಜೀವನ ಶಿಕ್ಷಣದಲ್ಲಿ ರಾಷ್ಟ್ರನಾಯಕರ ದಿನಾಚರಣೆಯ ಮಹತ್ವ.
೪) ,, ,, ಉಳಿದ ಸಾಮಾಜಿಕ ಚಟುವಟಿಕೆಗಳ ಸ್ಥಾನ.
೫) ,, ,, ವಿವಿಧ ವಿನೋದಾವಳಿಗಳ ಸ್ಥಾನ.

ಈ ವಾಕ್ ಸ್ಪರ್ಧೆಯಲ್ಲಿ ಸ್ಥಳೀಯ ಪ್ರಾ. ಟ್ರೇನಿಂಗಸಂಸ್ಥೆಗಳು ಭಾಗವಹಿಸಿದ್ದವು. ಟ್ರೇನಿಂಗ ಸಂಸ್ಥೆಗಳ ಮುಖ್ಯ ಸಂಚಾಲಕರೂ, ಪ್ರಾಧ್ಯಾಪಕರೂ, ಪ್ರಾಧ್ಯಾಪಿಕೆಯರೂ ಸಹಾ ಶಿಕ್ಷಣತಜ್ಞರೂ ಆಗಮಿಸಿದ್ದರು.

ಮೊದಲು ಈ ಸಂಸ್ಥೆಯ ಅಧ್ಯಕ್ಷರಾದ ಶ್ರೀಮಾನ್ ಎಮ್. ಜಿ. ಹಂದ್ರಾಳ, ಕುಲಪತಿಗಳ ಶಿ. ಕೇಂದ್ರ ಧಾರವಾಡ ಅವರು ಸಭೆಗೆ ಬಂದ ಎಲ್ಲ ಮಹನೀಯರನ್ನೂ ಮಹಿಳೆಯರನ್ನೂ ಸ್ವಾಗ ಸಂಸ್ಥೆಯು ಇಂಥ ಚಟುವಟಿಕೆಗಳನ್ನು ನೆರವೇರಿಸುವದರ ಉದ್ದೇಶಗಳನ್ನು ಸಂಕ್ಷಿಪ್ತವಾಗಿ ವಿವರಿ ಮೇಲೆ ವಾಕ್ ಸ್ಪರ್ಧೆ ವರದಿ ವಾಚನಗಳಾದ ಮೇಲೆ ಸಭೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎಸ್. ಡಿ. ಇಂಚಲ ಪ್ರಿ. ಜೆ. ಜಿ. ಗ. ಟ್ರೇ. ಕಾಲೇಜ, ಹುಬ್ಬಳ್ಳಿ ಅವರು " ಮಾತುಗಾರಿಕೆಯ ಸಾಧಿಸುವ ಬಗೆಗೆ ಒಳ್ಳೆ ಮಾರ್ಮಿಕವಾಗಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಧಾರವಾಡ ಜಿಲ್ಹೆಯ ಶಿಕ್ಷಣಾಧಿಕಾರಿಗಳಾದ ಶ್ರೀಮಾನ್ ಕೆ. ಬಿ. ತೇರಗಾಂವಕರ ಸಾಹೇಬ ಸಮಾರೋಪ ಭಾಷಣದಲ್ಲಿ, ಶಿಕ್ಷಣದಲ್ಲಿ ಇಂಥ ಸಾಂಸ್ಕೃತಿಕ ಚಟುವಟಿಕೆಗಳ ಸ್ಥಾನಮಾ ವಿವರಿಸುತ್ತ ಇವು ಒಂದು ಕಾಲದಲ್ಲಿ ಕೇವಲ ಪಠ್ಯೇತರ ಚಟುವಟಿಕೆಗಳಾಗಿ ಅಲಕ್ಷವಾಗಿ ಉಳಿ ಇವು ಶಿಕ್ಷಣದ ಮುಖ್ಯ ಅಂಗಗಳಾಗಿವೆ, ಮುಖ್ಯ ಸಾಧನಗಳಾಗಿವೆ ಎಂಬುದನ್ನು ತೋರಿಸಿಕೊಟ್ಟು ವಟಿಕೆಗಳನ್ನು ಕಾಲಕಾಲಕ್ಕೆ ನೆರವೇರಿಸಬೇಕೆಂಬ ಆಶೆಯನ್ನು ವ್ಯಕ್ತಗೊಳಿಸಿದರು. ಕೊನೆಗೆ ಅಭಾ ಯಾಗಿ ವಂದೆ ಮಾತರಂ ಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು

ವಾಕ್ ಸ್ಪರ್ಧೆಯಲ್ಲಿ ನಿರ್ಣಾಯಕರಾಗಿ ಆಗಮಿಸಿದಂಥ ಶ್ರೀಮಾನ್ ಶೆಟ್ಟಿ ಶಾಮರಾಯರು, ಪ್ರಿ. ಮತ್ತು ಶ್ರೀಮಾನ ಶಿಗ್ಗಾಂವ ಕ್ರಾಫ್ಟ ಆರ್ಗನಾಯಿಜರ್, ಧಾರವಾಡ ಹಾಗು ಪ್ರೊ. ಪಾವಟೆ ಪ. ಕೇಂದ್ರ, ಧಾರವಾಡ ಅವರು ಕೊಟ್ಟ ನಿರ್ಣಯದಂತೆ ಮೇಲಿನ ೩ ನಂಬರಗಳನ್ನು ಪಡೆದವರ ಈ ಕೆಳಗಿನಂತಿವೆ:—

೧) ಶ್ರೀ. ಭಟ್ಟ ಎನ್. ಜಿ., ಬಾ. ಮಿ. ಟ್ರೇ. ಕಾಲೇಜ, ಧಾರವಾಡ.
೨) ಶ್ರೀ. ಚಿತ್ತರಗಿಮಠ ,, ,, ,,
೩) ಕು. ಭಾಗೀರಥಿಬಾಯಿ ಕದಮ್, ಹೆ. ಸರಕಾರಿ ಟ್ರೇ. ಕಾಲೇಜ, ಧಾರವಾಡ.

ತ್ವರೆ ಮಾಡಿರಿ! ಹೊಸ ಪುಸ್ತಕ. ತ್ವರೆ ಮಾಡಿರಿ!!

ಹೊಸ ಶಿಕ್ಷಣ

ಮೂಲ ಲೇಖಕರು :

ಆಚಾರ್ಯ ವಿನೋಬಾಜಿಯವರು

ಅನುವಾದಕರು :

ಶ್ರೀ. ಕಲಹಾಳ ಮಡಿವಾಳಪ್ಪ

ಈ ಪುಸ್ತಕದಲ್ಲಿ ಹೊಸ ಶಿಕ್ಷಣದ ಬಗೆಗೆ **ವಿನೋಬಾ**ಜಿಯವರ ಅಮೌಲ್ಯ ವಿಚಾರ ತರಂಗ **ಗಳನ್ನು ಅ**ನುವಾದಿಸಿ ಕೊಡಲಾಗಿದೆ. ಅನುಭವದ **ಆಳದಿಂಡ** ಹೊರಬಿದ್ದ ಪೂಜ್ಯ ವಿನೋಬಾರ **ಹೊಸ ಶಿಕ್ಷಣ** ವಿಚಾರಗಳು **ಶಿ**ಕ್ಷಣ ಕ್ಷೇತ್ರದಲ್ಲಿ **ದುಡಿಯು**ವವರೆಲ್ಲರಿಗೆ ಉಪಯುಕ್ತವಾಗುವದ **ರಲ್ಲಿ ಸಂ**ದೇಹವಿಲ್ಲ. ಇಂದೇ ಕೆಳಗಿನವರಿಗೆ **ಬರೆದು ತ**ರಿಸಿ ವಿಚಾರದ ಮಾಧುರ್ಯವನ್ನು **ಸವೆಯಿರಿ.**

ರಾಮಾಶ್ರಯ ಬುಕ್ ಡಿಪೋ, ಧಾರವಾಡ

ತ್ವರೆ ಮಾಡಿರಿ! ತ್ವರೆ ಮಾಡಿರಿ!!

ವಯಸ್ಕರ ಸುರಸ ಕತೆಗಳು.

ಬರೆದವರು :

ಶ್ರೀ. ಪಾವಟೆ ಚೆನ್ನಪ್ಪನವರು

ಆ. ಡೆ. ಎ. ಇ., ವಿಜಾಪುರ

ಲೇಖಕರು ತಮ್ಮ ಅನುಭವದಿಂದ ವಯಸ್ಕರಿಗೆ ತಿಳಿಯುವ ರೀತಿಯಲ್ಲಿ ಅವರಿಗೆ ಉಪಯುಕ್ತ-ವಿರುವ ಕತೆಗಳನ್ನು ಬರೆದಿದ್ದಾರೆ. ಸಮಾಜ ಶಿಕ್ಷಣ ಕಾರ್ಯಕರ್ತರಿಗೆ ಬಹಳ ಉಪಯುಕ್ತ ವಿದೆ. ಪ್ರಕಾಶಕರಿಗೆ ಬರೆದು ಇಂದೇ ತರಿಸಿ ಕೊಳ್ಳಿರಿ.

ಪುಸ್ತಕದ ಬೆಲೆ: **ಕೇವಲ ಹತ್ತು ಆಣೆಗಳು**

ಪ್ರಕಾಶಕರು :

ಶ್ರೀ. ಮ. ವಿ. ಐಹೊಳ್ಳಿ,

ಕನ್ನಡ ಶಾಲಾ ಮಾಸ್ತರರು, ವಿಜಾಪುರ

ಪುಟ ೨೮೦) ಮೂಲ ಶಿಕ್ಷಣ (**ಬೆಲೆ: ೩-೦-೦**

ಲೇಖಕರು : **ಶ್ರೀ. ಮ. ಗು. ಹಂದ್ರಾಳ,** ಬಿ. ಎ., (ಆನರ್ಸ) ಬಿ. ಟಿ.

(ಪ್ರಿನ್ಸಿಪಾಲ, ಪದವೀಧರರ ಜೀವನ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ)

ಲ **ಶಿಕ್ಷಣ**ದ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ **ಶಿಕ್ಷಣಾ**ಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ **ಹೊತ್ತಿ**ಗೆಯಾಗಿವೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿ ಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ. ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿಪೋ, ಧಾರವಾಡ

ಪುಸ್ತಕ ವಿಮರ್ಶೆ

ಪುಸ್ತಕದ ಹೆಸರು:—ಜೈಹಿಂದ

ಲೇಖಕರು:–ರಾಮೂ ಮಾಸ್ತರ, ಚಿಕ್ಕಬಾಸೂರ

ಪ್ರಕಾಶಕರು:–**ಶ್ರೀ. ಪಿ. ಜಿ. ಮಾಗಡಿ,** ಹುಬ್ಬಳ್ಳಿ

ಪುಟಗಳು:—೨೮ **ಬೆಲೆ:—** ೦–೬–೦

೨೩ ಕವನಗಳ ಸಂಗ್ರಹವಿದು. ಹಳ್ಳಿಯಲ್ಲಿ ಜನಿಸಿ ಬೆಳೆದು ದೊಡ್ಡವರಾದ ರಾಮೂ ಮಾಸ್ತರ ಅವರು ವಿವಿಧ ವಿಷಯಗಳನ್ನು ಕುರಿತು ಚಿಕ್ಕವರಿಗೆ ಸಹ ತಿಳಿಯುವಂತೆ ಈ ಕವನಗಳನ್ನು ಹಾಡಿದ್ದಾರೆ. ರೂಪಾಯಿ, ಹಾಯ್‌ಗಾಂಧಿ, ಒಕ್ಕಲಿಗ, ನಾನೂ ಸೈನಿಕ, ಕಬ್ಬಿಣಯುಗ ಇವೇ ಮೊದಲಾದ ಕವನಗಳು ಓದುಗರ ಮನವನ್ನು ಸೆರೆಹಿಡಿಯುತ್ತವೆ. ಗಂಭೀರ ವಿಷಯವನ್ನು ಸಹ ಲಲಿತ ಭಾಷೆಯ ಉಡುಗೆಯಲ್ಲಿ ತೊಡಿಸಿದ್ದರಿಂದ ಆ ವಿಷಯವು ಸಹಜವಾಗಿ, ಸುಲಭವಾಗಿ ಮನಕ್ಕೆ ಹೊಳೆಯುವದು. ಶ್ರೀ. ರಾಮೂ ಮಾಸ್ತರರ ಈ ಸಾಹಿತ್ಯ ಸೇವೆಯು ಸ್ತೋತ್ರಾರ್ಹವಾದುದು. ಅವರಿಂದ ಇನ್ನು ಹೆಚ್ಚಿನ ಕೃತಿಗಳು ಹೊರಬೀಳಲೆಂದು ಹಾರೈಸುವೆವು.

— ಪ್ರ. ಸಂ.

ಪುಸ್ತಕದ ಹೆಸರು:–**ಮೂಲ ಶಿಕ್ಷಣದ ಮೌಲ್ಯಮಾಪಣ**

ಲೇಖಕರು:–**ಶ್ರೀ. ಮಿರ್ಜಿ ಅಣ್ಣಾರಾಯರು**

ಪ್ರಕಾಶಕರು:–**ಶ್ರೀ. ಟಿ. ಕೆ. ಪಾಟೀಲ,**
ಶಾಂತಿಸೇವಾಸದನ, ಸೇಡಬಾಳ

ಪುಟಗಳು:–೬೧ **ಬೆಲೆ:—**೦–೧೨–೦

ನುರಿತ ಸಾಹಿತಿಗಳಾದ ಶ್ರೀ ಮಿರ್ಜಿ ಅಣ್ಣಾರಾಯರ ಪಳಗಿದ ಕೈಯಿಂದ ಹೊರಬಂದ ಈ ಚಿಕ್ಕ ಪುಸ್ತಕವು ಅವರ ಶೈಕ್ಷಣಿಕ ಅನುಭವದ ಆಳವನ್ನೂ ಒಳಗೊಂಡಿದೆ. ಇಲ್ಲಿ ಮೂಲ ಶಿಕಣ ಮೂಲವನ್ನು ಮೊದಲುಮಾಡಿಕೊಂಡು, ಮಹಾತ್ಮರ ವಿಚಾರತ… ಒಳಗೊಂಡು ಸಮವಾಯತತ್ವದ ಸತ್ವಗಳನ್ನು… ಸಮವಾಯ ಪಾಠಗಳನ್ನೂ ಸೇಖರಿಸಲಾಗಿ… ಸಮವಾಯ ಪಾಠಗಳು ಕೇವಲ ಮೂಲೋ… ಕ್ರಿಯೆಗಳ ಸುತ್ತು ಹೆಣೆಯಲ್ಪಟ್ಟಿವೆ. … ಪಾಠಗಳು ನೈಸರ್ಗಿಕ ಹಾಗೂ ಸಾಮಾಜಿಕ… ಗಳಿಗೆ ಸಮನ್ವಯಿತವಾದವುಗಳಿದ್ದಿದ್ದ… ಒಳಿತಾಗುತ್ತಿತ್ತು. ಮೂಲ ಶಿಕ್ಷಣದ … ಚೆನ್ನಾಗಿ ಬಿತ್ತರಿಸಲ್ಪಟ್ಟಿದೆ. ಸುಲಭ ಶೈಲಿ, ಶಿಕ್ಷ… ಅನುಭವ ಕೂಡಿಕೊಂಡು ಪುಸ್ತಕವು ಕ… ಹೊಸ ಶಿಕ್ಷಣದಲ್ಲಿ ದುಡಿಯುವವರೆಲ್ಲರಿಗೆ ಈ… ಮೂಲ ಶಿಕ್ಷಣದಲ್ಲಿ ದುಡಿಯುತ್ತಿರುವವರಿಗೆ ಇ… ವೆಂಬು ಹೇಳಲಡ್ಡಿಯಿಲ್ಲ. ಇದರಂತೆ ಉಳಿ… ತಮ್ಮ ಅನುಭವಗಳನ್ನು ಚಿಕ್ಕ ಚಿಕ್ಕ ಪುಸ್ತಕಗಳ… ಪ್ರಕಟಿಸಿದರೆ ಮಹದುಪಕಾರ ಮಾಡಿದಂ…

ಬಾಲಸಾಹಿತ್ಯ

ಬಾಲ ಸಾಹಿತ್ಯದ ೧೯೫೩-೫೪ರ ವಿಶೇ… ಪುಟಗಳನ್ನು ತಿರುವಿಹಾಕಿದೆವು. ಬಾಲಕ… ಅವರ ವಿಚಾರಶಕ್ತಿಯು ಕುರುಹುಗಳಾಗಿವೆ… ಮಕ್ಕಳಿಗಾಗಿ ಹೊರಟಿರುವ ಈ ಪತ್ರಿಕೆಯಲ್ಲಿ… ಗಳ ವಿಷಯಗಳ ವೈವಿಧ್ಯದಿಂದ, ಶೈಲಿಯ… ಯಿಂದ, ಮಕ್ಕಳಿಗೆ ಒಗ್ಗುವ ವಿಚಾರಗಳಿಂದ,… ಸ್ಥಳಗಳಲ್ಲಿ ಬಂದಿರುವ ಶಿಕ್ಷಕರ ಬರೆಹಗ… ದರ್ಶನದಿಂದ ಬಾಲಕರಲ್ಲಿ ಬರೆಹದ ಬಗ್ಗೆ… ಯನ್ನೂ ವಿಚಾರಶಕ್ತಿಯನ್ನು ಬೆಳೆಸಿ ಅಭಿವ… ಸುವವೆಂದು ಹೇಳಬಹುದು. ಬಾಲಸಾಹಿತ… ರವಿಯಂತೆ ಹೊಂಗಿರಣಗಳಿಂದ ಶೋಭಿಸಲ… ಸುವೆವು.

ಹೊಸ ಪುಸ್ತಕಗಳು ! **ಹೊಸ ಅಭ್ಯಾಸ ಪತ್ರಿಕೆ**

ಸರಕಾರದವರು ೧೯೫೨-೧೯೫೩ನೆಯ ಸಾಲಿನಿಂದ ಪಠ್ಯ(TEXT) ಪುಸ್ತಕಗ
ಮಂಜೂರು ಮಾಡಿದ್ದಾರೆ.

ಗಣಿತ ಬೋಧೆ

(೪ ರಿಂದ ೭ನೆಯ ಇಯತ್ತೆಯ ವರೆಗೆ ಬೇರೆ ಬೇರೆಯಾಗಿ)

ತಜ್ಞ ಹಾಗು ಅನುಭವಿಕ ಪಂಡಿತರಿಂದ ಈಗಿನ ಹೊಸ ಅಭ್ಯಾಸ ಪತ್ರಿಕೆಗನುಸರಿಸಿ ಈ ಎಲ್ಲ ಪು ಆಯಾ ತರಗತಿಗಳಿಗೆ ಬರೆಯಲ್ಪಟ್ಟಿವೆ ಹಾಗು ಗಣಿತದ ಎಲ್ಲ ವಿಷಯಗಳ ವಿವೇಚನೆಯು ಮಾಡಲ್ಪಟ್ಟಿವೆ.

ಈ ವರೆಗೂ ಯಾವ ಗಣಿತಗಳಲ್ಲಿಯೂ ಸ್ಪಷ್ಟವಾಗಿ ವಿವೇಚಿಸಲ್ಪಡದ ಹಾಗು ಬಾಲಕರಿಗೆ ಕ **ಅಪೂರ್ಣಾಂಕ ಸಮ-ವ್ಯಸ್ತ ತ್ರೈರಾಶಿಕ, ಪ್ರಮಾಣ ಭಾಗ, ದಶಾಂಶ ಅಪೂರ್ಣಾಂಕ, ಶತಮಾನ ಕೊಳ್ಳುವ ಬಡ್ಡಿ, ರೋಖ-ಉದ್ರಿ ವ್ಯವಹಾರ, ಕೋಖಶಾಳೆ, ಕ್ಷೇತ್ರಫಲ, ಘನಫಲದ ಗಳು, ವೇಳೆ-ಕೆಲಸ-ವೇಗ, ಭೂಮಿತಿ, ರೇಖಾರೂಪ (ಗ್ರಾಫ), ಪ್ರವಾಸದ ನಕ್ಷೆ, ಭೂಮಾಪನದ ಬೀಜಗಣಿತ** ಇವೇ ಮೊದಲಾದ ವಿಷಯಗಳ ವಿವರಣೆಯು ಆಯಾ ಗಣಿತ ಬೋಧೆಗಳಲ್ಲಿ ಚಿತ್ರ, ಗಳೊಂದಿಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಸುಲಭವಾಗಿ ಮನನವಾಗುವಂತೆ ವಿವರಿಸಲಾಗಿದೆ. ಇದ ಉದಾಹರಣೆಗಳು ವ್ಯವಹಾರಕ್ಕೆ ಸಂಬಂಧಿಸಿದವುಗಳೂ ಗಣಿತ ವಿಷಯದಲ್ಲಿ ಅಭಿರುಚಿಯನ್ನು ವಂಥವೂ ಇದ್ದು ಸುಲಭವಾದ ಶೈಲಿಯಲ್ಲಿ ಕೊಡಲ್ಪಟ್ಟಿವೆ.

ಕರ್ನಾಟಕ ಕಾಲೇಜದ ನಿವೃತ್ತ ಗಣಿತ ಪ್ರಾಧ್ಯಾಪಕರಾದ ಶ್ರೀಮಾನ್ ಬಿ. ಬಿ. ಬಾಗಿ ಶಿಕ್ಷಣದಲ್ಲಿ ನುರಿತ ಹಾಗೂ ಮುಂಬೈ ಮೇಲ್ಮನೆಯ ಸದಸ್ಯರಾದ ಶ್ರೀಮಾನ್ ಎಚ್. ಎಫ್. ಕ ಯವರೂ ಇವುಗಳನ್ನು ಓದಿ ಇವುಗಳಲ್ಲಿ ಪ್ರತಿಯೊಂದು ಪ್ರಮೇಯದ ವಿವರಣೆಯನ್ನು ಶಿ ವಿದ್ಯಾರ್ಥಿಗಳಿಗೂ ಮನದಟ್ಟಾಗುವ ರೀತಿಯಲ್ಲಿ ಕ್ರಮಬದ್ಧವಾಗಿಯೂ ತರ್ಕಶುದ್ಧವಾಗಿಯೂ ಮಾ

माता का उपदेश— १, २ (ನನ್ನ ತಾಯಿಯ ಹಿಂದೀ ಸಂಸ್ಕರಣ) ಸಿದ್ಧವಾಗಿವೆ.

नीति कथा— १, २, ३ (ನಾಡದ ನೆಲೆಗಾರ ಹಿಂದೀ ಸಂಸ್ಕರಣ) ಅಚ್ಚಿನಲ್ಲಿ!

ಹಿಂದಿ ವ್ಯಾಕರಣ— (ಅಚ್ಚಿನಲ್ಲಿ)

ಕನ್ನಡ ಸಾಹಿತ್ಯ ಪ್ರ
ಧಾರವಾಡ

Printed by M. A. Kamat, B. Sc. at Jai Hind Art Press Dharwar. Edited and Pu
S. P. Patil B. M. Shintri. S. R Tatti, & Smti. P. A. Bhaskar. at the
Prathamik Shikshan Office. Govt. Training College for Men, Dharwar



★

ವಾ. ಚಂದಾ ಳ ರು

ಬಿಡಿಪ್ರತಿ ೬ ಆಣೆ

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು:— ಶ್ರೀ. ಎಸ್. ಜಿ. ಪಾಟೀಲ

Regd. No. B. 5375

ಹೊಸ ಪುಸ್ತಕಗಳು ! **ಹೊಸ ಅಭ್ಯಾಸ ಪತ್ರಿಕೆಯಂತೆ !!**

ಸರಕಾರದವರು ೧೯೫೨-೧೯೫೩ನೆಯ ಸಾಲಿನಿಂದ ಪಠ್ಯ(TEXT) ಪುಸ್ತಕಗಳೆಂದು ಮಂಜೂರು ಮಾಡಿದ್ದಾರೆ.

ಗಣಿತ ಬೋಧೆ

(೪ ರಿಂದ ೭ನೆಯ ಇಯತ್ತೆಯ ವರೆಗೆ ಬೇರೆ ಬೇರೆಯಾಗಿ)

ತಜ್ಞ ಹಾಗೂ ಅನುಭವಿಕ ಪಂಡಿತರಿಂದ ಈಗಿನ ಹೊಸ ಅಭ್ಯಾಸ ಪತ್ರಿಕೆಗನುಸರಿಸಿ ಈ ಎಲ್ಲ ಪುಸ್ತಕಗಳು ಆಯಾ ಇಯತ್ತೆಗಳಿಗೆ ಬರೆಯಲ್ಪಟ್ಟಿವೆ ಹಾಗು ಗಣಿತದ ಎಲ್ಲ ವಿಷಯಗಳ ವಿವೇಚನೆಯು ಸರಿಯಾಗಿ ಮಾಡಲ್ಪಟ್ಟಿವೆ.

ಈ ವರೆಗೂ ಯಾವ ಗಣಿತಗಳಲ್ಲಿಯೂ ಸ್ಪಷ್ಟವಾಗಿ ವಿವೇಚಿಸಲ್ಪಡದ ಹಾಗು ಬಾಲಕರಿಗೆ ಕಠಿಣವೆನಿಸುವ **ಅಪೂರ್ಣಾಂಕ ಸಮ-ವ್ಯಸ್ತ ತ್ರೈರಾಶಿಕ, ಪ್ರಮಾಣ ಭಾಗ, ದಶಾಂಶ ಅಪೂರ್ಣಾಂಕ, ಶತಮಾನ, ಮಾರು-ಕೊಳ್ಳುವ ಬಡ್ಡಿ, ರೋಖು-ಉದ್ರೀ ವ್ಯವಹಾರ, ರೋಖಶಾಳಿ, ಕ್ಷೇತ್ರಫಲ, ಘನಫಲದ ನಿಯಮಗಳು, ವೇಳೆ-ಕೆಲಸ-ವೇಗ, ಭೂಮಿತಿ, ರೇಖಾರೂಪ (ಗ್ರಾಫ), ಪ್ರವಾಸದ ನಕ್ಷೆ, ಭೂಮಾಪನದ ವಿಷಯ, ಬೀಜಗಣಿತ** ಇವೇ ಮೊದಲಾದ ವಿಷಯಗಳ ವಿವರಣೆಯು ಆಯಾ ಗಣಿತ ಬೋಧೆಗಳಲ್ಲಿ ಚಿತ್ರ, ಉಪಕರಣಗಳೊಂದಿಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಸುಲಭವಾಗಿ ಮನನವಾಗುವಂತೆ ವಿವರಿಸಲಾಗಿದೆ. ಇದರೊಳಗಿನ ಉದಾಹರಣೆಗಳು ವ್ಯವಹಾರಕ್ಕೆ ಸಂಬಂಧಿಸಿದವುಗಳೂ ಗಣಿತ ವಿಷಯದಲ್ಲಿ ಅಭಿರುಚಿಯನ್ನು ಹುಟ್ಟಿಸುವಂಥವೂ ಇದ್ದು ಸುಲಭವಾದ ಶೈಲಿಯಲ್ಲಿ ಕೊಡಲ್ಪಟ್ಟಿವೆ.

ಕರ್ನಾಟಕ ಕಾಲೇಜದ ನಿವೃತ್ತ ಗಣಿತ ಪ್ರಾಧ್ಯಾಪಕರಾದ **ಶ್ರೀಮಾನ್ ಬಿ. ಬಿ. ಬಾಗಿಯವರೂ** ಶಿಕ್ಷಣದಲ್ಲಿ ನುರಿತ ಹಾಗೂ ಮುಂಬೈ ಮೇಲ್ಮನೆಯ ಸದಸ್ಯರಾದ **ಶ್ರೀಮಾನ್ ಎಚ್. ಎಫ್. ಕಟ್ಟಿಮನಿಯವರೂ** ಇವುಗಳನ್ನು ಓದಿ ಇವುಗಳಲ್ಲಿ ಪ್ರತಿಯೊಂದು ಪ್ರಮೇಯದ ವಿವರಣೆಯನ್ನು ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಮನದಟ್ಟಾಗುವ ರೀತಿಯಲ್ಲಿ ಕ್ರಮಬದ್ಧವಾಗಿಯೂ ತರ್ಕಶುದ್ಧವಾಗಿಯೂ ಮಾಡಲಾಗಿದೆ.

माता का उपदेश— ೧, ೨ (ನನ್ನ ತಾಯಿಯ ಹಿಂದೀ ಸಂಸ್ಕರಣ) ಸಿದ್ಧವಾಗಿವೆ.

नीति कथा— ೧, ೨, ೩ (ನಾಡದ ನೆರೆಗಾರ ಹಿಂದೀ ಸಂಸ್ಕರಣ) ಅಚ್ಚಿನಲ್ಲಿ!

ಹಿಂದಿ ವ್ಯಾಕರಣ— (ಅಚ್ಚಿನಲ್ಲಿ)

ಕನ್ನಡ ಸಾಹಿತ್ಯ ಪ್ರಕಾಶನ,
ಧಾರವಾಡ

Printed by M. A. Kamat, B. Sc. at Jai Hind Art Press Dharwar. Edited and Published S. P. Patil, B. M. Shastri, S. R. Tatti, & Smti. P. A. Bhaskar, at the Kannada Prathamik Shikshan Office, Govt. Training College for Men, Dharwar.



ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು—ಶ್ರೀ. ಎಚ್. ಪಿ. ಪಾಟೀಲ

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಕೆ. ಬಿ. ತೇರಗಾಂವಕರ, ಬಿ. ಎಸ್‌ಸಿ., (ಆನರ್ಸ) ಬಿ. ಟಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ

ಪ್ರಧಾನ ಸಂಪಾದಕರು : ಶ್ರೀ. ಎಸ್. ಪಿ. ಪಾಟೀಲ ಬಿ. ಎ., ಬಿ. ಟಿ., ಡಿ. ಪಿ. ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾ

ಸಹ ಸಂಪಾದಕರು:

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂ

ಸಂಪುಟ ೯೪	ಅಕ್ಟೋಬರ ೧೯೫೪	ಸಂಚಿಕ

ಪರಿವಿಡಿ

೧. ಸಂಪಾದಕೀಯ ....
೨. ಪ್ರಶ್ನೆ ಮಾಡುವ ಕಲೆ ....ಶ್ರೀ. ತಟ್ಟಿ ಶ್ಯಾಮರಾಯರು ....
೩. ರಿಮಾಂಡ ಹೋಮ .... .. ಶ್ರೀ. ಶಿಂತ್ರಿ ಬಸಪ್ಪನವರು ....
೪. ಕಾವ್ಯ ಶಿಕ್ಷಣದ ದಿಗ್ದರ್ಶನ ....ಶ್ರೀ. ಎಸ್. ಡಿ. ಇಂಚಲ ....
೫. ೧೦ನೆಯ ಮೊಹರಮ್ಮದ ದುರಂತ ....ಶ್ರೀ. ಹು. ಆ. ಶಿಗ್ಗಾಂವ ....
೬. ಮೂಲ ಶಿಕ್ಷಣವು ಮಗುವನ್ನು ಉದ್ಯಮದ ಸಲುವಾಗಿ
ಅಣಿಗೊಳಿಸುವದು ....ಶ್ರೀ. ಎಸ್. ಎಂ. ಹಳ್ಳಿಕೇರಿ ....
೭. ಭೂಮಿತಿ ಜಮಾಖರ್ಚು ಕಲಿಸುವ ಕ್ರಮ ....ಶ್ರೀ. ವ್ಹಿ. ಎ. ಉಮರಾಣಿ ....
೮. ಶಿಕ್ಷಣವು ಯೋಗ್ಯವಿದ್ದರೆ ಯೋಗ್ಯಶಿಕ್ಷಣ ....
೯. ಕರ್ನಾಟಕದಲ್ಲಿ ಮೂಲ ಶಿಕ್ಷಣದ ಪ್ರಗತಿ ....
೧೦. ಕರ್ನಾಟಕ ವಿಶ್ವವಿದ್ಯಾಲಯ ನಿಧಿಗೆ ದೇಣಿಗೆ .... ಕವ್ಹರ ೩ನೆಯ ಪುಟ

ಗಾಂಧೀ ಜಯಂತಿ ಸಪ್ತಾಹ—೧೯೫೪

ಗಂಡು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜ. ಧಾರವಾಡ.



೧೯೫೪ ಆಕ್ಟೋಬರ ೨ರಂದು ಮೂಲ ಶಿಕ್ಷಣ ಪ್ರದರ್ಶನದ ಉದ್ಘಾಟನೆ ಮಾಡಲು ಮುಂಬಯಿ ರಾಜ್ಯದ ಮುಖ್ಯಮಂತ್ರಿ ಶ್ರೀ. ಮೊರಾರಜಿ ದೇಸಾಯಿಯವರು ಕೊಂಟಾಗಿನ ನೋಟ. ಅವರ ಎಡಕ್ಕೆ ಮುಂಬಯಿರಾಜ್ಯದ ಶಿಕ್ಷಣಖಾತೆಯ ಡೈರೆಕ್ಟರ ಶ್ರೀ. ಭಂಡಾರಕರ ಮತ್ತು ಬಲಕ್ಕೆ ಧಾರವಾಡ ಜಿಲ್ಲೆಯ ಶಿಕ್ಷಣಾಧಿಕಾರಿಗಳಾದ ಶ್ರೀ. ತೇರಗಾಂವಕರ ಅವರು ಇರುವರು.

ಪ್ರದರ್ಶನದ ಕೇಂದ್ರ ಭಾಗದ ಒಳನೋಟ.

ಗಾಂಧೀ ಜಯಂತಿಯ ದಿನ ಕಾಲೇಜದ ಹಾಗೂ ಪ್ರ್ಯಾಕ್ಟಿಸಿಂಗ ಸ್ಕೂಲಿನ ವಿದ್ಯಾರ್ಥಿಗಳು ಹರಿಜನ ಕೇರಿಗೆ ಹೊರಟಾಗಿನ ಮೆರವಣಿಗೆಯ ನೋಟ

ಶಿಕ್ಷಕ-ವಿದ್ಯಾರ್ಥಿಗಳು ಗೊಬ್ಬರ ಗುಣಿ ತೋಡುವ ಸ್ಪರ್ಧೆಯ ಒಂದು ನೋಟ.

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಕೆ. ಬಿ. ತೇರಗಾಂವಕರ, ಬಿ. ಎಸ್‌ಸಿ., (ಆನರ್ಸ) ಬಿ. ಟಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ

ಪ್ರಧಾನ ಸಂಪಾದಕರು : ಶ್ರೀ. ಎಸ್. ಪಿ. ಪಾಟೀಲ ಬಿ. ಎ., ಬಿ. ಟಿ., ಡಿ. ಪಿ. ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಸಹ ಸಂಪಾದಕರು:

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಆಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೪	ಅಕ್ಟೋಬರ ೧೯೫೪	ಸಂಚಿಕೆ ೩

ಪರಿವಿಡಿ

೧. ಸಂಪಾದಕೀಯ ೩
೨. ಪ್ರಶ್ನೆ ಮಾಡುವ ಕಲೆ ....ಶ್ರೀ. ತಟ್ಟಿ ಶ್ಯಾಮರಾಯರು ೫
೩. ರಿಮಾಂಡ ಹೋಮ .... ಶ್ರೀ. ಶಿಂತ್ರಿ ಬಸಪ್ಪನವರು ೮
೪. ಕಾವ್ಯ ಶಿಕ್ಷಣದ ದಿಗ್ದರ್ಶನ ....ಶ್ರೀ. ಎಸ್. ಡಿ. ಇಂಚಲ ೧೦
೫. ೧೦ನೆಯ ಮೊಹರಮ್ಮದ ದುರಂತ ....ಶ್ರೀ. ಹು. ಅ. ಶಿಗ್ಗಾಂವ ೧೬
೬. ಮೂಲ ಶಿಕ್ಷಣವು ಮಗುವನ್ನು ಉದ್ಯಮದ ಸಲುವಾಗಿ ಅಣಿಗೊಳಿಸುವದು ....ಶ್ರೀ. ಎಸ್. ಎಂ. ಹಳ್ಳಿಕೇರಿ ೨೦
೭. ಭೂಮಿತಿ ಜಮಾಖರ್ಚು ಕಲಿಸುವ ಕ್ರಮ ....ಶ್ರೀ. ವ್ಹಿ. ಎ. ಉಮರಾಣಿ ೨೪
೮. ಶಿಕ್ಷಣವು ಯೋಗ್ಯವಿದ್ದರೆ ಯೋಗ್ಯಶಿಕ್ಷಣ ೨೬
೯. ಕರ್ನಾಟಕದಲ್ಲಿ ಮೂಲ ಶಿಕ್ಷಣದ ಪ್ರಗತಿ ೨೭
೧೦. ಕರ್ನಾಟಕ ವಿಶ್ವವಿದ್ಯಾಲಯ ನಿಧಿಗೆ ದೇಣಿಗೆ .... ಕವ್ಹರ ೩ನೆಯ ಪುಟ

ಗಾಂಧೀ ಜಯಂತಿ ಸಪ್ತಾಹ—೧೯೫೪

ಗಂಡು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜ, ಧಾರವಾಡ.

15/10/54

೧೯೫೪ ಅಕ್ಟೋಬರ ೨ರಂದು ಮೂಲ ಶಿಕ್ಷಣ ಪ್ರದರ್ಶನದ ಉದ್ಘಾಟನೆ ಮಾಡಲು ಮುಂಬಯಿ ರಾಜ್ಯದ ಮುಖ್ಯಮಂತ್ರಿ ಶ್ರೀ. ಮೊರಾರಜಿ ದೇಸಾಯಿಯವರು ಹೊರಟಾಗಿನ ನೋಟ. ಅವರ ಎಡಕ್ಕೆ ಮುಂಬಯಿರಾಜ್ಯದ ಶಿಕ್ಷಣಖಾತೆಯ ಡೈರೆಕ್ಟರ ಶ್ರೀ. ಭಂಡಾರಕರ ಮತ್ತು ಬಲಕ್ಕೆ ಧಾರವಾಡ ಜಿಲ್ಲೆಯ ಶಿಕ್ಷಣಾಧಿಕಾರಿಗಳಾದ ಶ್ರೀ. ತೇರಗಾಂವಕರ ಅವರು ಇರುವರು.

ಪ್ರದರ್ಶನದ ಕೇಂದ್ರ ಭಾಗದ ಒಳನೋಟ.

ಗಾಂಧೀ ಜಯಂತಿಯ ದಿನ ಕಾಲೇಜದ ಹಾಗೂ ಪ್ರ್ಯಾಕ್ಟಿಸಿಂಗ ಸ್ಕೂಲಿನ ವಿದ್ಯಾರ್ಥಿಗಳು ಹರಿಜನ ಕೇರಿಗೆ ಹೊರಟಾಗಿನ ಮೆರವಣಿಗೆಯ ನೋಟ

ಶಿಕ್ಷಕ-ವಿದ್ಯಾರ್ಥಿಗಳು ಗೊಬ್ಬರ ಕುಣಿ ತೋಡುವ ಸ್ಪರ್ಧೆಯ ಒಂದು ನೋಟ.

ಸಂಪಾದಕೀಯ

ಚರಖಾ ಜಯಂತಿ

೧೯೫೪ ಅಕ್ಟೋಬರ ದಿನಾಂಕ ೨. ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟು ವಿಶ್ವವಿತರಣದಲ್ಲಿ ವಿಲೀನನಾದ ಪೂಜ್ಯ ಮಹಾತ್ಮಾಜಿಯ ಜನ್ಮದಿನ. ಇತಿಹಾಸದ ಪುಟಗಳನ್ನು ತಿರುವಿಹಾಕುತ್ತ ನಾಡಿನ ಗತಕಾಲದಲ್ಲಿ ದೃಷ್ಟಿಯನ್ನಿಟ್ಟು ಇಣಿಕಿಸಿದರೆ ೧೮೬೯ ನೆಯ ಅಕ್ಟೋಬರ ೨ ರಂದು ಜನ್ಮತಾಳಿದ ಮೋಹನದಾಸ ಕರಮಚಂದ ಗಾಂಧಿಯವರ ಅಲೌಕಿಕ ಚಾರಿತ್ರ್ಯದ ಮಹತಿಯು ನಮ್ಮ ಮನಃಪಟಲದ ಮೇಲೆ ಪುನಃ ಸ್ಫುಟವಾಗಿ ಸುಳಿಯದೆ, ಹೊಳೆಯದೆ ಇರದು. ಸುಮಾರು ೧೫೦ ವರ್ಷಗಳವರೆಗೆ ಪಾರತಂತ್ರ್ಯದಲ್ಲಿ ಸಿಲುಕಿ ತೊಳಲಾಡುತ್ತಿದ್ದ ನಮ್ಮ ಈ ಭರತಭೂಮಿಯನ್ನು ಸ್ವತಂತ್ರಗೊಳಿಸಿದ ಪೂಜ್ಯ ಬಾಪೂಜಿಯವರು ಭಾರತೀಯರಷ್ಟೇ ಏಕೆ, ಇಡಿಯ ವಿಶ್ವದ ಜನತೆಯ ಹೃನ್ಮಂದಿರದಲ್ಲಿ ಚಿರಂತನವಾಗಿ ಉಳಿಯುವದರಲ್ಲಿ ಸಂದೇಹವಿಲ್ಲ. ತನ್ನ ಜಯಂತಿಯನ್ನು ತನ್ನೊಬ್ಬ ವ್ಯಕ್ತಿಯ ಹೆಸರಿನಲ್ಲಿ ಆಚರಿಸುವದು ಸರಿಗಾಣದೆ ಭಾರತದ ಬಡವರ ಭಾಗ್ಯದೇವತೆಯಾದ ಚರಖದ ಹೆಸರಿನಲ್ಲಿ ಆಚರಿಸುವದು ಯೋಗ್ಯವೆಂದು ತೋರಿತು, ಆ ಮಹಾತ್ಮರಿಗೆ. ಅದಕ್ಕೆಂದೇ ಭಾರತೀಯರು ಮಹಾತ್ಮಾ ಗಾಂಧಿಯವರ ಜಯಂತಿಯನ್ನು ಚರಖಾ ಜಯಂತಿಯೆಂದು ಆಚರಿಸುವದು. ಮಹಾತ್ಮರ ವಿಧಾಯಕ ಕಾರ್ಯಕ್ರಮದಲ್ಲಿ ಖಾದಿಪ್ರಸಾರ, ಧಾರಣೆ ಇವು ಅತ್ಯಂತ ಮಹತ್ವವಾದ ಅಂಶಗಳಾಗಿವೆ. ನಿರುದ್ಯೋಗದ ಸಮಸ್ಯೆಯನ್ನು ಪರಿಹರಿಸಲಿಕ್ಕೆ ಬೇಕಾದ ಸಾಧನಗಳಲ್ಲಿ ಖಾದಿಯು ಮಹತ್ವದ್ದಾಗಿದೆಂಬುದನ್ನು ಮರೆಯಲಾಗದು. ಖಾದಿಯನ್ನು ಧರಿಸುವದರಲ್ಲಿ ಪ್ರತಿಷ್ಠೆ ವೈಶಿಷ್ಟ್ಯಗಳುಂಟೆಂದು ನಾವೆಲ್ಲರೂ ತಿಳಿದು ಈ ಸಪ್ತಾಹದಲ್ಲಿ ಆದಷ್ಟು ಹೆಚ್ಚು ಖಾದಿ ಹುಂಡಿಗಳನ್ನು ಕೊಳ್ಳುವದು ನಮ್ಮ ಪಾಲಿನ ಕರ್ತವ್ಯ.

ಗ್ರಾಮಸುಧಾರ ಸಪ್ತಾಹ :

ಅಕ್ಟೋಬರ ೨ ರಿಂದ ೧೧ ರ ವರೆಗೆ ಗ್ರಾಮಸುಧಾರ ಸಪ್ತಾಹವು ಆಚರಿಸಲ್ಪಡುವದು ರೂಢಿಯಲ್ಲಿ ಬಂದಿದೆ. ಭಾರತದ ಬಹುಸಂಖ್ಯಾಕ ಜನರು ಹಳ್ಳಿಗಳಲ್ಲಿ ವಾಸವಾಗಿರುವದರಿಂದ ಭಾರತದ ಸರ್ವಾಂಗೀಣ ಉನ್ನತಿಯಾಗಬೇಕಾದರೆ ಹಳ್ಳಿಗಳ ಸುಧಾರಣೆಯು ಪ್ರಥಮದಲ್ಲಿ ಆಗಬೇಕು. ಹಳ್ಳಿಗಳು ದೇಶದ ನರ, ನಾಡಿಗಳು; ಹಳ್ಳಿಗಳಲ್ಲಿ ವಾಸಿಸುತ್ತಿರುವ ಹಲವು ಉದ್ಯೋಗಗಳ ಜನರು ದೇಶದ ಪ್ರಾಣವಾಯು. ಕಾರಣ ಅವರ ಪುನರುತ್ಥಾನದ ಕಾರ್ಯವನ್ನು ಮಾಡುವದವಶ್ಯವಿದೆಯೆಂದು ರಾಷ್ಟ್ರನಾಯಕರು ಮನದಂದು ಈ ಸಪ್ತಾಹವನ್ನು ಗ್ರಾಮ ಸುಧಾರಣಾ ಕಾರ್ಯಕ್ಕಾಗಿ ಮೀಸಲಾಗಿಟ್ಟಿರುವರು. ಹಳ್ಳಿಗಳ ಸ್ವಚ್ಛತೆ, ಗೊಬ್ಬರಕುಣಿಗಳನ್ನು ತೋಡುವದು ಸುಧಾರಿಸಿದ ಪದ್ಧತಿಯಿಂದ ಅವುಗಳನ್ನು ತುಂಬುವದು-ಇತ್ಯಾದಿ ಸಂಗತಿಗಳನ್ನು ಹಳ್ಳಿಗರಿಗೆ ಪ್ರತ್ಯಕ್ಷ ಕಾರ್ಯಮಾಡಿ ತೋರಿಸಿಕೊಡುವದು ಗ್ರಾಮ ಸುಧಾರಣೆಯ ಕಾರ್ಯಗಳ ಅಂಗಗಳಾಗಿರುತ್ತವೆ. ಹಳ್ಳಿಗಳಲ್ಲಿ ಸುಧಾರಿಸಿದವರೆಂದೆನಿಸುವ ಪ್ರಾಥಮಿಕ ಶಿಕ್ಷಕರು ಈ ಕಾರ್ಯಗಳಲ್ಲಿ ಹಳ್ಳಿಗರೊಡನೆ ಬೆರೆತು ಒಂದಾಗಿ, ಮುಂದಾಗಿ ಹಳ್ಳಿಗಳ ಸರ್ವಾಂಗ ಸುಧಾರಣೆಯ ದಿಕ್ಕಿನಲ್ಲಿ ದುಡಿಯಬೇಕಾದುದು ಅತ್ಯವಶ್ಯವೆಂದು ನಾವು ಬೇರೆ ಹೇಳಬೇಕಾಗಿಲ್ಲ.

ಹರಿಜನ ದಿನಾಚರಣೆ

ಪ್ರತಿಸಲದಂತೆ ಈ ವರ್ಷವಾದರೂ ಹರಿಜನ ದಿನಾಚರಣೆಯು ಆಚರಿಸಲ್ಪಟ್ಟಿತು. ಈ ಸಲ ಮಹಾತ್ಮಾ ಗಾಂಧೀಜಿಯವರ ಜನ್ಮದಿನವೇ ಹರಿಜನ ದಿನವಾಗಿ ಆಚರಿಸಲ್ಪಡಬೇಕೆಂದು ನಿಶ್ಚಯವಾಯಿತು. ದೇಶದಲ್ಲಿಯ ಅಸ್ಪೃಶ್ಯತೆಯ ಭೀಕರತೆಯನ್ನು ಕಂಡು ಕರಗಿದ ಹೃದಯದವರಾದ ಪೂಜ್ಯ ಬಾಪೂಜಿಯವರು ಹರಿಜನ ಬಾಂಧವರ ಉದ್ಧಾರಕ್ಕಾಗಿಯೂ ಹಿಂದೂ ಸಮಾಜದಲ್ಲಿಯ ಈ ಕಲಂಕವನ್ನು ನೀಗುವದಕ್ಕಾಗಿಯೂ ಅತ್ಯಂತ ಕಳಕಳಿಯಿಂದ ಶ್ರಮಿಸಿದುದನ್ನು ಯಾವ ಭಾರತೀಯನೂ ಎಂದೂ ಮರೆಯುವಂತಿಲ್ಲ. ಮಾನವರೆಲ್ಲರೂ ಒಬ್ಬ ದೇವರ ಮಕ್ಕಳಲ್ಲವೆ? ಲೋಕಸಂಚಾರಿಯಾದ ಆ ಭಾಸ್ಕರನು ಹರಿಜನರ ಗುಡಿಸಲಗಳನ್ನು ಬೆಳಗನೇ? ರಜನೀಕಾಂತನಾದ ಆ ಶಶಾಂಕನು ಅಸ್ಪೃಶ್ಯರೆಂದು ಕರೆಯಿಸಿಕೊಳ್ಳುವ ಆ ನಮ್ಮ ಬಾಂಧವರಿಗೆ ಹೊರತಾಗಿರುವನೇ? ಎಲ್ಲರಿಗೂ ಆಹಾರವನ್ನು ಒದಗಿಸಿಕೊಡುವ. ವಸುಂಧರೆಯು ಹರಿಜನರಿಗೆ ಅನ್ನವನ್ನು ಕೊಡಲಾರಳೇ? ಆ ಭಾಸ್ಕರ

ಸಂಪಾದಕೀಯ

ಆ ಶಶಾಂಕ, ಆ ವಸುಂಧರೆ—ಇವರೆಲ್ಲರೂ ಬಡವ-ಬಲ್ಲಿದ, ಸ್ಪೃಶ್ಯ—ಅಸ್ಪೃಶ್ಯ, ಪಂಡಿತ—ಪಾಮರ ಹೀಗೆ ಎಲ್ಲರನ್ನೂ ಒಂದೇ ದೃಷ್ಟಿ, ಒಂದೇ ಭಾವನೆ, ಒಂದೇ ಅಂತಃಕರಣದಿಂದ ಕಾಣುತ್ತಿರುವಾಗ ಎಲವೋ ಸ್ಪೃಶ್ಯನೆಂದು ಹೇಳಿಸಿಕೊಳ್ಳುವ ಮಾನವ ರೂಪಿಯೇ ನಿನ್ನವರಲ್ಲಿಯೇ ಕೆಲವರನ್ನು ಅಸ್ಪೃಶ್ಯರನ್ನಾಗಿ ಕಡೆಗಣಿಸುವ ಹೀನ ಮಟ್ಟಕ್ಕೆ ಇಳಿಯಬೇಕಾದುದೇಕೆ? ಇದರಲ್ಲಿ ನಿನ್ನ ದಾಷ್ಟ್ರ್ಯವಾದರೂ ಎಷ್ಟು? ನಿಜವಾದ ಹೊಲೆಯನು ಯಾರು?—

೧೨ನೆಯ ಶತಮಾನದಲ್ಲಿ ಆಗಿಹೋದ ಮಹಾನುಭಾವಿ ಬಸವಣ್ಣನವರು ಹೇಳಿದುದು ಏನು? ಕೊಲ್ಲುವನೇ ಮಾದಿಗ, ಹೊಲಸ ತಿಂಬವನೇ ಹೊಲೆಯ ಇತ್ಯಾದಿಯಾಗಿ ಸಾರಲಿಲ್ಲವೇ ಅವರು? ಕಾರಣ ಜಾತಿಯಿಂದ ಹೊಲೆಯರೆಂದು ಅವರನ್ನು ಮುಟ್ಟಿಸಿಕೊಳ್ಳದಿರುವದು ಅಯೋಗ್ಯವಾಗದೆ? ಮಹಾತ್ಮಾಗಾಂಧಿಯವರು ತಮ್ಮ ಜೀವನದ ಕೊನೆಯ ಗಳಿಗೆಯವರೆಗೂ ಹರಿಜನರ ಉದ್ಧಾರಕ್ಕಾಗಿ ಶ್ರಮಿಸಿದರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗಿ ಹರಿಜನ ಬಾಂಧವರ ಉದ್ಧಾರಕ್ಕಾಗಿ ನಾವೆಲ್ಲರೂ ಮನಃಪೂರ್ವಕವಾಗಿ ಶ್ರಮಿಸುವಾ.

ಶೈಕ್ಷಣಿಕ ಪ್ರದರ್ಶನ

ಜೀವನಶಿಕ್ಷಣ ಹಾಗೂ ಮೂಲೋದ್ಯೋಗ ಶಾಲೆ ಮತ್ತು ಟ್ರೇನಿಂಗ ಸಂಸ್ಥೆಗಳಲ್ಲಿ ತಯಾರಿಸಲ್ಪಡುತ್ತಿರುವ ವಿವಿಧ ವಸ್ತುಗಳ, ಪಟಗಳ—ನಕ್ಷೆ-ನಕಾಶಗಳ ಪ್ರದರ್ಶನಗಳು ಜಿಲ್ಹೆಯ ತಳಹದಿಯ ಮೇಲೆ ಮುಂಬಯಿ ರಾಜ್ಯದ ಪ್ರತಿಯೊಂದು ಜಿಲ್ಹೆಯಲ್ಲಿ ಇದೇ ಅಕ್ಟೋಬರ ದಿನಾಂಕ ೨ರಿಂದ ಒಂದು ವಾರದ ವರೆಗೆ ಏರ್ಪಟ್ಟಿದ್ದುದು ಈ ವರ್ಷದ ಮಹತ್ವದ ಹೆಜ್ಜೆಗಳಲ್ಲಿ ಒಂದಾಗಿದೆಯೆಂದು ಹೇಳಬಯಸುವೆವು.

೧೯೩೭ ರಲ್ಲಿ ಕಾಣಿಸಿಕೊಂಡು ಜೀವನ ಶಿಕ್ಷಣವು ೧೫ ವರುಷಗಳ ನಂತರ ಇಂದು ಒಂದು ನಿರ್ದಿಷ್ಟಾವಸ್ಥೆಗೆ ಬಂದಿದೆ. ಜಿಲ್ಹೆಯ ತಳಹದಿಯ ಮೇಲೆ ಏರ್ಪಾಟಾದ ಈ ಪ್ರದರ್ಶನಗಳಲ್ಲಿ ಇರಿಸಿದ ವಸ್ತುಗಳಲ್ಲಿ ಅತ್ಯಂತ ಶ್ರೇಷ್ಠವೆಂದು ಕಂಡು ಬಂದವುಗಳ ಪ್ರದರ್ಶನವನ್ನು ಮುಂದಿನ ತಿಂಗಳು ಪುಣೆಯಲ್ಲಿ ರಾಜ್ಯದ ತಳಹದಿಯ ಮೇಲೆ ನಡೆಸುವ ಯೋಜನೆಯನ್ನು ವಿದ್ಯಾಖಾತೆಯವರು ಮಾಡಿದ್ದುದು ಸ್ತುತ್ಯವಾಗಿದೆ. ಜೀವನ ಶಿಕ್ಷಣದ ಹಾಗೂ ಮೂಲೋದ್ಯೋಗ ಶಾಲೆಗಳ ಘನತೆಯನ್ನು ಅಲ್ಲಿ ಕಲಿಯುತ್ತಿರುವ ಮಕ್ಕಳ ಕೈಕುಸುರನ್ನು ಉದ್ಯೋಗಗಳಲ್ಲಿ ಅವರು ಸಾಧಿಸಿದ ಪ್ರಗತಿಯನ್ನು ಮತ್ತು ಇಂಥ ಶಾಲೆಗಳ ಕ್ರಿಯಾಶಕ್ತಿಯನ್ನು ಈ ಪ್ರದರ್ಶನಗಳು ಚನ್ನಾಗಿ ತೋರಿಸಿಕೊಡುತ್ತವೆ. ನಿರೀಕ್ಷಕರಿಗೆ, ಶಿಕ್ಷಣವು ಕ್ರಿಯಾತ್ಮಕವಾಗಬೇಕು. ಚಟುವಟಿಕೆಯೇ ಮುಖ್ಯವಾದ ಶಿಕ್ಷಣವು ಮಗುವಿನ ಮನೋವಿಜ್ಞಾನಕ್ಕೆ ಅನುಗುಣವಾಗುವದಲ್ಲದೆ ಮಗುವಿನಲ್ಲಿ ಹುದುಗಿದ ಅಂತಃಶಕ್ತಿಯನ್ನು ಬಹಿರ್ವ್ಯಕ್ತಗೊಳಿಸುವ ಒಂದು ದಿವ್ಯಸಾಧನವಾಗಿದೆ. ಇವೆಲ್ಲವರ ಪ್ರತ್ಯಕ್ಷ ದರ್ಶನವನ್ನು ಈ ಪ್ರದರ್ಶನದಲ್ಲಿ ಕಾಣಬಹುದಾಗಿದೆ. ಇಂಥ ಪ್ರದರ್ಶನಗಳು ಮುಂಬರುವ ವರ್ಷಗಳ ನಿತ್ಯನಾಮಿಕೆಗಳಾದನ್ನು ಉತ್ತಮ.

ಮಾನ್ಯ ಮುಖ್ಯಮಂತ್ರಿಗಳ ಸಂಚಾರ

ಮುಂಬಯಿ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಮೊರಾರಜಿಯವರು ಅಕ್ಟೋಬರ ದಿನಾಂಕ ೨ರಿಂದ ೪ರ ವರೆಗೆ ಕರ್ನಾಟಕದ ಬೆಳಗಾಂವ ಮತ್ತು ಧಾರವಾಡ ಜಿಲ್ಹೆಗಳಲ್ಲಿ ಸಂಚರಿಸಿ ವಿದ್ಯುದ್ದೀಕ್ಷೆಯನ್ನೂ ಶೈಕ್ಷಣಿಕ ಹಾಗೂ ಸಹಕಾರಿಕ ಬೆಳಕನ್ನೂ ನೀಡಿದರು. ಧಾರವಾಡದಲ್ಲಿ ಕೆ.ಸಿ.ಸಿ. ಬ್ಯಾಂಕಿನ ಕಟ್ಟಡದ ಶಂಕುಶಿಲೆ ಸ್ಥಾಪನೆ ಮಾಡಿದರು. ರಾಣೆಬೆನ್ನೂರಲ್ಲಿ ಜೋಗ ವಿದ್ಯುತ್ತ ಪೂರೈಕೆಯ ಪ್ರಾರಂಭೋತ್ಸವವನ್ನು ಜರುಗಿಸಿ ಬ್ಯಾಡಿಗಿ, ಹಾವೇರಿ ಮತ್ತು ಆ ಭಾಗದ ಹತ್ತು ಹಳ್ಳಿಗಳನ್ನು ಬೆಳಗುವಂತೆ ಮಾಡಿದರಲ್ಲದೆ ಉತ್ತರ ಕರ್ನಾಟಕದ ಉದ್ಯಮಾಭಿವೃದ್ಧಿಯ ಬೆಳವಣಿಗೆಯ ದೀಪೋತ್ಸವದ ನಾಂದಿಯನ್ನೇ ಪ್ರಾರಂಭಿಸಿದ ಶ್ರೇಯಸ್ಸಿಗೆ ಪಾತ್ರರಾದರು.

ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವ ನಮಗೆಲ್ಲರಿಗೆ ಅವರ ಸಂಚಾರವು ಹೆಚ್ಚಿನ ಸ್ಫೂರ್ತಿಯನ್ನು ಒದಗಿಸಿತು. ಅವರು ದಿನಾಂಕ ೨ರಂದು ಕರ್ನಾಟಕ ವಿಶ್ವವಿದ್ಯಾಲಯದ ಘಟಿಕೋತ್ಸವವನ್ನು ನೆರವೇರಿಸಿದ್ದೂ, ಕೆ. ಗಂ. ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಏರ್ಪಡಿಸಿದ್ದ ಮಹಾತ್ಮಾಗಾಂಧಿಯವರ ಜಯಂತಿಯಲ್ಲಿ ಹಿರಿಯತನವನ್ನು ವಹಿಸಿ, ಜೀವನಶಿಕ್ಷಣ ಮೂಲೋದ್ಯೋಗ ಶಾಲೆ-ಕಾಲೇಜುಗಳ ಪ್ರದರ್ಶನವನ್ನು ತೆರೆದದ್ದೂ

ಸ್ಫೂರ್ತಿಯ ಪ್ರತೀಕವಾಗಿವೆ. ಘಟಕೋತ್ಸವದಲ್ಲಿ ಪದವಿಗಳನ್ನು ಪಡೆದ ಯುವಕರಿಗೆ **ಸಚ್ಚಾರಿತ್ರ್ಯರೂ,** ನಿರ್ಭೀತರೂ ಆಗಿರೆಂದು ಹೇಳಿದ ಅವರು ಪ್ರದರ್ಶನದ ಉದ್ಘಾಟನೆಯ ನಂತರ ಮಾಡಿದ ಭಾಷಣದಲ್ಲಿ **ಜೀವನ ಶಿಕ್ಷಣದ** ಬಗೆಗೆ ಅನೇಕ ಮನನೀಯ ವಿಚಾರಗಳನ್ನು ಸ್ಪಷ್ಟಗೊಳಿಸಿದರು. ಈ ರೀತಿಯಾಗಿ ಮಾನ್ಯ ಮೊರಾರಜಿ ಯವರು ನಮಗೆಲ್ಲರಿಗೆ ಹೊಸ ಹುಮ್ಮಸವನ್ನು ನೀಡಿ ಜೀವನ ಶಿಕ್ಷಣದ ಮಾರ್ಗದಲ್ಲಿ ಹೊಸ ಬೆಳಕಿನ ಭದ್ರ ಸ್ತಂಭಗಳನ್ನು ಕಟ್ಟಿದರು.

ಪದವೀದಾನ ಸಮಾರಂಭ

ಕರ್ನಾಟಕ ವಿಶ್ವವಿದ್ಯಾಲಯದ ಐದನೆಯ ಪದವೀದಾನ ಸಮಾರಂಭವು ಶನಿವಾರ ದಿನಾಂಕ ೨-೧೦-೧೯೫೪ರಂದು ಲಿಂಗಾಯತ ಟಾವ್ನ್ ಹಾಲ್‌ದಲ್ಲಿ ಜರುಗಿತು. ವಿಶ್ವವಿದ್ಯಾಲಯದ ಕುಲಪತಿಗಳೂ ಮುಂಬಯಿ ರಾಜ್ಯದ ಗವ್ಹರ್ನರರೂ ಆದ ಸರ್ ಗಿರಿಜಾ-ಶಂಕರ ವಾಜಪೇಯಿಯವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯಮಂತ್ರಿ-ಗಳಾದ ಶ್ರೀ ಮೊರಾರಜಿ ದೇಸಾಯಿಯವರು ಪದವೀದಾನ ಭಾಷಣ ಮಾಡಿದರು. ಬೇರೆ ಬೇರೆ ಪದವಿಗಳನ್ನು ಪಡೆದು ಇದೀಗ ಜೀವನರಂಗದಲ್ಲಿ ಕಾಲಿಡುತ್ತಿರುವ ಕರ್ನಾಟಕದ ಪದವೀಧರರಿಗೆ ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ ಉಪದೇಶದಲ್ಲಿ ಅಡಕವಾದ ಮಾತುಗಳು ನಿಜವಾಗಿ ಮುತ್ತಿನಂತಿವೆ. ಅವುಗಳ ಕಡೆಗೆ ಶಾಲೆ-ಕಾಲೇಜ ಗಳಲ್ಲಿ ದುಡಿಯುತ್ತಿರುವ ಶಿಕ್ಷಕರ ಹಾಗೂ ವಿವಿಧ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಸಂಚಾಲಕರ ಲಕ್ಷ್ಯವನ್ನು ಎಳೆಯಬಯಸುತ್ತೇವೆ. ವಿಶ್ವವಿದ್ಯಾಲಯದಿಂದ ಹೊರಬರುವ ಕರ್ನಾಟಕದ ಯುವಕರು ಹಂಗು ಹೆದರಿಕೆಗೆ ಸೊಪ್ಪುಹಾಕದೆ ಒಳ್ಳೇ ನಡತೆಯನ್ನು ಇಟ್ಟುಕೊಂಡು ಸತ್ಯ, ನ್ಯಾಯ, ನೀತಿ ತತ್ವಗಳನ್ನು ಎತ್ತಿ ಹಿಡಿಯುವದನ್ನೇ ತಮ್ಮ ಜೀವನದ ಧ್ಯೇಯವನ್ನಾಗಿಟ್ಟುಕೊಳ್ಳಬೇಕೆಂದು ಅವರು ಹೇಳಿದ ಮಾತುಗಳಲ್ಲಿ ಉಚ್ಚ ಶಿಕ್ಷಣದ ಧ್ಯೇಯ-ಗಳೂ ಅಡಕವಾಗಿವೆ.

ಸ್ತುತ್ಯದೇಣಿಗೆ

ನಮ್ಮಲ್ಲಿ ನಡೆದಿರುವ ನೇಯಿಗೆಯ ಅಲ್ಪಾವಧಿ ತರಬೇತಿ ವರ್ಗದಲ್ಲಿರುವ ಶ್ರೀ. ಎಲ್. ಎಸ್. ಮಠಪತಿ-ಯವರು ಕಳೆದ ಎಪ್ರೀಲ ತಿಂಗಳಲ್ಲಿ ಜರುಗಿದ ಎಸ್. ಎಸ್. ಸಿ ಪರೀಕ್ಷೆಯಲ್ಲಿ ಪೌರನೀತಿ ಹಾಗೂ ಆಡಳಿತೆ ಈ ವಿಷಯದಲ್ಲಿ ಇಡೀ ಮುಂಬಯಿ ರಾಜ್ಯದಲ್ಲಿ ಎಲ್ಲರಿಗಿಂತಲೂ ಹೆಚ್ಚು ಗುಣಗಳನ್ನು ಸಂಪಾದಿಸಿ ಆ ವಿಷಯದ ಬಗ್ಗೆ ಇಟ್ಟ ೧೦೦ ರೂಪಾಯಿಗಳ ಬಹುಮಾನವನ್ನು ಪಡೆದಿದ್ದಾರೆ. ಶ್ರಮವಹಿಸಿ ಗಳಿಸಿದ ಗೌರವದ ಪ್ರತಿ ಫಲದಲ್ಲಿ ಕೆಲವನ್ನು ದೇಣಿಗೆ ರೂಪವಾಗಿ ಕೊಡಲು ಅವರು ಸ್ವಸಂತೋಷದಿಂದ ಮುಂದೆ ಬಂದು ೫೧ ರೂಪಾಯಿ ಗಳನ್ನು ಕರ್ನಾಟಕ ವಿಶ್ವವಿದ್ಯಾಲಯ ಕಟ್ಟಡದ ನಿಧಿಗೆ ಅರ್ಪಿಸಿದ್ದಾರೆ. ಅದರಂತೆ ಬಿಹಾರ ನೆರೆಹಾವಳಿಯ ಪರಿಹಾರ ನಿಧಿಗೆ ೫ ರೂಪಾಯಿಗಳನ್ನು ಕೊಟ್ಟಿದ್ದಾರೆ. ಶ್ರೀಯುತರು ಗಳಿಸಿದ ಗೌರವಕ್ಕೂ ಇಷ್ಟು ಉದಾರ ಮನಸ್ಸಿನಿಂದ ಕೊಟ್ಟ ದೇಣಿಗೆಗೂ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ಇನ್ನುಳಿದ ಶಿಕ್ಷಕ ಶಿಕ್ಷಕಿಯರೂ ಶ್ರೀ. ಮಠಪತಿಯವರ ಆದರ್ಶವನ್ನು ಮುಂದಿಟ್ಟುಕೊಂಡು ತಮ್ಮ ಕಾರ್ಯಕದಲ್ಲಿ ಮುಂದುವರಿಯುವರೆಂದು ಆಶಿಸುತ್ತೇವೆ.

ಲೇಖಗಳ ಮಟ್ಟ ಇನ್ನೂ ಏರಬೇಕು.

'**ಪ್ರಾಥಮಿಕ ಶಿಕ್ಷಣ**'ದಲ್ಲಿಯ ಲೇಖಗಳ ಮಟ್ಟವು ಇನ್ನೂ ಏರಬೇಕೆಂದು ಒಬ್ಬಿಬ್ಬ ಶಿಕ್ಷಣಾಧಿಕಾರಿ-ಗಳ ಅಭಿಪ್ರಾಯ. ಇದಾದರೂ ಸಹ ರಚನಾತ್ಮಕ ಸೂಚನೆಯೆಂದೇ ಭಾವಿಸಿ ಲೇಖಗಳ ಮಟ್ಟ ಹೆಚ್ಚಾಗುವಂತೆ ಮನಃಪೂರ್ವಕವಾಗಿ ಪ್ರಯತ್ನಿಸುತ್ತೇವೆ. ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಸಾವಿರಾರು ಜನ ಶಿಕ್ಷಕರೂ ನೂರಾರು ಜನ ಅಧಿಕಾರಿಗಳೂ ಇನ್ನೂ ಕೆಲವು ಶಿಕ್ಷಣ ತಜ್ಞರೂ ದುಡಿಯುತ್ತಿರುವಾಗ ಅವರಿಂದ ಸಾಕಷ್ಟು ಲೇಖಗಳು ಬಾರದಿರುವದು ವಿಷಾದದ ಸಂಗತಿ. ಸಹೃದಯರಾದ ನಮ್ಮ ವ್ಯವಸಾಯ ಬಂಧುಗಳು ಹಾಗೆ ಮಾಡದೆ ನಮ್ಮ ಪ್ರಯತ್ನದಲ್ಲಿ ಸಹಕರಿಸಿ ದಯಪಿಟ್ಟು ಇನ್ನು ಮುಂದೆಯಾದರೂ ತಮ್ಮ ಲೇಖಗಳನ್ನು ಕಳಿಸುವರೆಂದು ನೆರೆನಂಬಿದ್ದೇವೆ.

ಪ್ರಶ್ನೆ ಮಾಡುವ ಕಲೆ

ಲೇಖಕರು:—ಶ್ರೀ. ತಟ್ಟಿ ಶಾಮರಾಯರು, ಧಾರವಾಡ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಜಾಣತನದಿಂದ ಪ್ರಶ್ನೆಮಾಡುವ ಕಲೆಯನ್ನು ಅನುಭವದಿಂದ ಕಲಿತುಕೊಳ್ಳಬಹುದು. ಹೊಸಬನಿಗೆ ಶಾಲೆಯ ಕೆಲಸದ ಸನ್ನಿವೇಶವು ಹೊಸದೆನಿಸುವದರಿಂದ ಅಷ್ಟೊಂದು ಧೈರ್ಯವೂ ಆತ್ಮವಿಶ್ವಾಸವೂ ಇರಲಾರವು. ಈ ಸ್ಥಿತಿಯಿರುವವರೆಗೆ ಹುಡುಗರನ್ನು ಸಾಮುಸಹಿತವಾಗಿ ಪ್ರಶ್ನಿಸುವದಕ್ಕೆ ಅವರ ಮನಸ್ಸಿನೊಡನೆ ಸಂಪೂರ್ಣ ತದಾತ್ಮ್ಯವನ್ನು ಶಿಕ್ಷಕನು ಅನುಭವಿಸಲಾರನು. ತಾನು ಈ ಅವಸ್ಥೆಯಲ್ಲಿದ್ದಾಗ ಹುಡುಗರ ಆಲೋಚನೆಯನ್ನು ಯಾವ ದಾರಿಗುಂಟ ಒಯ್ಯಬೇಕಾಗುವದೆಂಬದನ್ನು ಶಿಕ್ಷಕರು ಯೋಚಿಸಿಟ್ಟು ಅದನ್ನು ತನ್ನ ಏಕಾಂತದಲ್ಲಿ 'ರಂಗತಾಲೀಮು' ಮಾಡಿನೋಡುವದು ಅವಶ್ಯ. ಪ್ರತ್ಯಕ್ಷವಾಗಿ ಕೊಟ್ಟ ಪಾಠವು ತಾನು ನಿರೀಕ್ಷಿಸಿದ ಹಾದಿಯಂತೆ ಬಹುಶಃ ನಡೆಯಲಿಕ್ಕಿಲ್ಲ; ಆದರೂ ಮಾಡಿಕೊಂಡ ತಯಾರಿಯು ಶಿಕ್ಷಕನಲ್ಲಿ ಧೈರ್ಯವನ್ನು ತಂದುಕೊಟ್ಟು ವಿಷಯ ವಿವೇಚನೆಯಲ್ಲಿರುವ ಎಡರು ತೊಡರುಗಳನ್ನು ತೋರಿಸಿ ಹುಟ್ಟಿದಾಗಲೇ ಅವನ್ನು ಹೇಗೆ ಬಿಡಿಸಬೇಕೆಂಬುದನ್ನು ಅವನಿಗೆ ಸೂಚಿಸುವದು. ಹುಡುಗರ ಸ್ವಭಾವದ ಇನ್ನೊಂದು ರೀತಿಯನ್ನು ಆತನು ನೆನಪಿನಲ್ಲಿಡಬೇಕು- ತನ್ನ ಮಾತಿನಲ್ಲಿನ ಅಲ್ಲೊಂದು ಇಲ್ಲೊಂದು ಶಬ್ದವನ್ನು ಅಥವಾ ಶಬ್ದವೃಂದವನ್ನು ಥಟ್ಟನೆ ಎತ್ತಿಕೊಂಡು ಅದಕ್ಕೆ ತಮ್ಮದೇ ಆದ ಒಂದು ಬೇರೆ ಅರ್ಥವನ್ನು ಮನಸ್ಸಿನಲ್ಲಿ ಮಾಡಿಕೊಳ್ಳುವದು. ಆದ್ದರಿಂದ ತಾನು ಯಾವ ದೃಷ್ಟಿಕೋನದಿಂದ ಆ ಪಾಠವನ್ನು ಕೊಟ್ಟನೋ ಮತ್ತು ಯಾವ ಕ್ರಮದಲ್ಲಿ ಅವನ್ನು ವಿವೇಚಿಸಿದನೋ ಅದನ್ನು ಬಿಡದೆ ಯಥಾವತ್ತಾಗಿ ವಿದ್ಯಾರ್ಥಿಯು ಒಪ್ಪಿಸಿದ್ದಾದರೆ ಆದರಿಂದ ಸಂತುಷ್ಟರಾಗಿ ಬಿಡುವದು ಶಿಕ್ಷಕನದೊಂದು ಪ್ರಮಾದವೇ. ಹುಡುಗರ ಮನಸ್ಸಿನೊಂದಿಗೆ ತಾದಾತ್ಮ್ಯ ಹೊಂದಿ ನೋಡಬೇಕು; ಇದಕ್ಕೆ ಆತನ ಪ್ರಶ್ನೆಗಳು ಪರಮಪ್ರಯೋಜಕಗಳು- ಇಷ್ಟೇ; ಅವರು ಚಾಚು ಬಿಡದೆ ಒಪ್ಪಿಸಿದ "ಸರೋಚಿ" ಯಿಂದ ವಂಚಿತನಾಗದಿದ್ದರಾಯಿತು.

ಈಗೊಂದು ಮಳೆಯಾಗುವ ಕಾರಣಗಳನ್ನು ಕುರಿತು ಪಾಠವನ್ನು ಕೊಡುತ್ತಿದ್ದೇವೆಂದು ತಿಳಿದರೆ, "ಕಾರಣಗಳಾವವೆಂಬುದನ್ನು ಹೇಳಿರಿ" ಇಲ್ಲವೆ "ನಿಮ್ಮ ಟಿಪ್ಪಣಿಯಲ್ಲಿ ಬರೆದುಕೊಂಡದನ್ನು ಓದಿರಿ" ಎಂದು ಕೇಳುವದಕ್ಕಿಂತ ಯಾವದೊಂದು ಹೊಸ ಜಿಲ್ಹೆಯ ಮಳೆಯ ಪ್ರಮಾಣದ ನಕಾಶವನ್ನು ವರ್ಗದೆದುರು ಹಾಕಿ– "ಇದನ್ನು ನೋಡಿ ಚೆನ್ನಾಗಿ ನಿರೀಕ್ಷಿಸಿರಿ, ಇಲ್ಲಿ ಅತ್ಯಲ್ಪ ಪ್ರಮಾಣವೂ ಇಲ್ಲಿ ಒಳ್ಳೆ ಹೆಚ್ಚಿನ ಪ್ರಮಾಣವೂ ಇರುವದಕ್ಕೆ ಕಾರಣಗಳಾವವಿರಬಹುದು" ಎಂದು ಕೇಳುವದು ಹೆಚ್ಚು ಸೂಕ್ತವಾದದ್ದು. ಅಥವಾ ನಮ್ಮ ಪಾಠವು ಸಾಮಾನ್ಯ (ವ್ಯವಹಾರಿ) ಅಪೂರ್ಣಾಂಕ ಕೃತಿಗಳಿಗೆ ಉಪೋದ್ಘಾತರೂಪದ್ದಿದ್ದರೆ "ಅಪೂರ್ಣಾಂಕ ಎಂದರೇನು ? ಮೇಲಿನ ಅಂಕಿಗೆ ಏನೆನ್ನುತ್ತಾರೆ ? ನಡುವಿನ ಅಡ್ಡಗೆರೆಯು ಏನು ತೋರಿಸುವದು? " ಇವೇ ಮುಂತಾದ ಪ್ರಶ್ನಗಳಿಂದ ವ್ಯಾಖ್ಯೆಗಳನ್ನೂ ಹೆಸರುಗಳನ್ನೂ ಕೇಳಿ, ಹಿಂದಿನ ವಿಷಯವನ್ನು ಆವರ್ತನ ಮಾಡಿಕೊಳ್ಳುವದು ಸರಿಯಲ್ಲ– ನೆಟ್ಟಗೆ ಸಮಾನ ಛೇದವುಳ್ಳ ಅಪೂರ್ಣಾಂಕಗಳ ವಿಚಾರಕ್ಕೆ ಸಾಗುವದು ಒಳಿತು. ಹಾಗೆ ಮಾಡಿದಾಗ ಆವರ್ತನವು ತಾನೇ ಆಗುವದು, ತಾವು ಕಲಿತದ್ದನ್ನು ಕೂಡಲೆ ಒಂದು ದೃಷ್ಟಾಂತದಲ್ಲಿ ಉಪಯೋಗಿಸಿಕೊಳ್ಳಲಿಕ್ಕೆ ಹುಡುಗರನ್ನು ಹಚ್ಚುವದರಿಂದ ವೇಳೆಯ ಉಳಿತಾಯವೂ ಆಗುವದು. ಇನ್ನು ಮೊದಲನೆಯ ಪಾಠವನ್ನು ವಿದ್ಯಾರ್ಥಿಗಳು ಸರಿಯಾಗಿ

ತಿಳಿದುಕೊಂಡಿಲ್ಲವೆಂದು ಆ ಪ್ರಸಂಗದಲ್ಲಿ ಕಂಡುಬಂದರೆ ನಾವು ಹಿಂದಕ್ಕೆ ಹೋಗಬೇಕಾಗಬಹುದು. ಹುಡುಗರ ತಿಳುವಳಿಕೆಯಲ್ಲಿದ್ದ ಅಸ್ಪಷ್ಟತೆಯ ಜ್ಞಾನವು ಅವರಿಗೆ ಈಗ ಉಂಟಾದ್ದರಿಂದ ನಮ್ಮ ಹೆಜ್ಜೆಯು ಅವರಿಗೆ ಹೆಚ್ಚು ಪ್ರಯೋಜನಕಾರಿ ಎನಿಸುವದು.

ಇಡಿಯಾದ ವರ್ಗದ ಬೌದ್ಧಿಕ ಕುತೂಹಲವನ್ನು ಪ್ರಚೋದಿಸುವ ಎಲ್ಲ ಪ್ರಶ್ನೆಗಳ ರೀತಿಯು ಒಬ್ಬಿಬ್ಬರೇ ಜಾಣ ಹುಡುಗರನ್ನು ಆಶ್ರಯಿಸುವ ಪ್ರಲೋಭನೆಯು ಶಿಕ್ಷಕನಿಗೆ ಒಮ್ಮೊಮ್ಮೆ ಆಗುವದು; ಆದರೆ ಹಾಗೆ ಮಾಡುವದು ದೊಡ್ಡ ತಪ್ಪು. ಕಲಿಸಿದ ವಿಷಯವನ್ನೇ ಪುನಃ ಕಲಿಸುವದು ಎಷ್ಟೇ ನಿರುತ್ಸಾಹಕರವಾಗಿದ್ದರೂ ಅದು ಒಮ್ಮೊಮ್ಮೆ ಅತ್ಯವಶ್ಯವಾಗುವದು. ಈ ಆವರ್ತನವು ಸಾಧ್ಯವಿದ್ದಾಗ ಹೊಸದೊಂದು ಹಾದಿಯನ್ನು ಹಿಡಿಯಬೇಕು ಮತ್ತು ಅದರಲ್ಲಿ ಪ್ರಶ್ನೆಗಳನ್ನು ಬೇರೆಯಾಗಿ ಹಾಕಬೇಕಾಗಿಯೂ ಬರಬಹುದು.

ಮಿತಿಮೀರಿ ಪ್ರಶ್ನೆಗಳನ್ನು ಕೇಳುವುದರಿಂದ ಪಾಠವು ಕೆಡಲೂ ಬಹುದು ಎಂಬುದನ್ನು ನಾವು ಈ ಸಂದರ್ಭದಲ್ಲಿ ನೆನಪಿನಲ್ಲಿಡುವದು ಒಳ್ಳೆಯದು. ಪ್ರಶ್ನೆಯು ನಮ್ಮ ದಾಸನಾಗಿದ್ದರೆ ಒಳ್ಳೆಯದು. ಅದು ನಮ್ಮ ಪ್ರಭುವಾಗಬಾರದು. ಸರಾಗವಾಗಿ ಸಾಗಿದ ಶಿಕ್ಷಕನ ಯಾವದೊಂದು ವಿವೇಚನವನ್ನು, ಕಥನವನ್ನು, ವರ್ಣನೆಯನ್ನು ಯಾವ ಆತಂಕವಿಲ್ಲದೆ ಲಕ್ಷ್ಯಗೊಟ್ಟು ಕೇಳುವದು ಹುಡುಗರಿಗೊಂದು ಒಳ್ಳೆಯ ಅಭ್ಯಾಸವೇ. ಕವಿತಾ, ಕಥೆ, ಕಾದಂಬರಿಯ ಪಾಠಗಳಲ್ಲಿ, ಇತಿಹಾಸದ ಪಾಠಗಳಲ್ಲಿ ಅಥವಾ ಸಾಮಾನ್ಯವಾಗಿ ಯಾವ ಪಾಠಗಳಲ್ಲಿ ಹುಡುಗರ ಹೃದಯವನ್ನು ಮುಟ್ಟಬೇಕಾಗಿದೆಯೋ ಅಂತಹ ಪಾಠಗಳಲ್ಲಿ ಹೆಜ್ಜೆ ಹೆಜ್ಜೆಗೂ ಪ್ರಶ್ನೆಗಳಿಂದ ತೊಂದರೆಯಾದರೆ ಅವರ ಮನಸ್ಸಿನ ಮೇಲೆ ಒಂದು ಉದಾತ್ತ ಸಂಸ್ಕಾರವನ್ನುಂಟು ಮಾಡುವ ಗುರಿಯು ಸಾಧ್ಯವಾಗದು. ಒಂದು ಕಾವ್ಯವಾಚನದ ಮಧ್ಯದಲ್ಲಿ ಯಾವದೇ ಒಂದು ಶಬ್ದದ ಅರ್ಥವನ್ನು ಕೇಳಲಿಕ್ಕೆಂದು ನಿಂತರೆ ಆ ಪಾಠದ ಸಾಹಿತ್ಯಿಕ ಮೌಲ್ಯವೇ ನಷ್ಟವಾಗುವದು. ಇಂಥ ಪ್ರಸಂಗಗಳಲ್ಲಿ ಹುಡುಗರ ಮನಸ್ಸಿನಲ್ಲಿಯ ವಿವರಗಳೆಲ್ಲ ಸುಸ್ಪಷ್ಟವಾಗಿರದಿದ್ದರೂ ಒಟ್ಟಿನಲ್ಲಿ ಒಂದು ಸುಪರಿಣಾಮವನ್ನು ಉಂಟುಮಾಡುವದಕ್ಕಾಗಿ ನಾವು ನಿರ್ಮಿಸಿದ ವಾತಾವರಣವನ್ನೂ ಆಗಿನ ಸಂದರ್ಭವನ್ನೂ ಅವಲಂಬಿಸಬೇಕಾಗುವದು.

ಹಿಡಿತವಿಲ್ಲದ ಪ್ರಶ್ನೆಕೇಳೋಣವು ನಮ್ಮ ಪ್ರಾಥಮಿಕ ಶಾಲೆಗಳಲ್ಲಿಯ ಶಿಕ್ಷಣದಲ್ಲಿಯ ಒಂದು ದುರ್ಗುಣವಾಗಿದೆ. ಮೊದಲೊಂದು ಪ್ರಶ್ನೆಯನ್ನು ಹಾಕದೆ ಎಷ್ಟೋ ಶಿಕ್ಷಕರಿಗೆ ತಮ್ಮ ವರ್ಗಕ್ಕೆ ಏನನ್ನೂ ಹೇಳಲಿಕ್ಕಾಗುವದಿಲ್ಲ. ಹೀಗೆ ಮಾಡುವದರಿಂದ ಹುಡುಗರ ಲಕ್ಷ್ಯವು ಚುರುಕಾಗಿ ಪಾಠದ ಕಡೆಗೆ ಇರುವದೆಂಬ ಭಾವನೆಯೆ ಇದಕ್ಕೆ ಕಾರಣ. ಆದರೆ ಯಾವ ಅವಧಾನಕ್ಕೆ ಪ್ರಶ್ನೆಗಳ ನಿರಂತರ ಪ್ರಚೋದನೆಯು ಬೇಕೋ ಅಂತಹ ಅವಧಾನದಿಂದ ಪ್ರಯೋಜನವಾದರೂ ಏನು? ಶಿಕ್ಷಕ, ವರ್ಗ ಇವರ ನಡುವೆ ಸಾಮಾನ್ಯವಾಗಿ ನಡೆಯುವ ಸಂಭಾಷಣೆಯನ್ನು ಕೇಳಿದರೆ ಶಿಕ್ಷಕನೇ ಚುರುಕಾಗಿ ವಿಚಾರ ನಡೆಸಿರುವನಲ್ಲದೇ ಹುಡುಗರಲ್ಲ ಎಂದು ಹೊಳೆಯದೇ ಇರದು.

ಸಮರ್ಥನಾದ, ಪ್ರತಿಭಾವಂತನಾದ ಶಿಕ್ಷಕನು ತನ್ನ ವಿದ್ಯಾರ್ಥಿಗಳು ಸ್ವತಂತ್ರರಾಗಿ ಸುಸಂಬದ್ಧವಾಗಿ ಆಲೋಚಿಸುವದರಲ್ಲಿ ತರಬೇತಿಯನ್ನು ಪಡೆಯಬೇಕೆಂಬ ಗುರಿಯನ್ನಿಟ್ಟು ಕೊಂಡಿರುವನು. ಸ್ವತಂತ್ರವಾದ ಅನುಸ್ಯೂತವಾಗಿ ಬಂದ ಮೌಖಿಕ ಅಭಿವ್ಯಕ್ತಿಯಿಂದ ಇಲ್ಲವೆ ತಾನು ಕೇಳುತ್ತ ಹೋದ ಹಾಗೆ ತುಂಡುತುಂಡಾಗಿ ಬರುವ ಒಂದೊಂದೇ ಉತ್ತರದಿಂದ– ಇವೆರಡರಲ್ಲಿ ಯಾವುದನ್ನು ತನ್ನ ಹುಡುಗರಿಂದ ಪಡೆದು ಶಿಕ್ಷಕನು ತೃಪ್ತನಾಗುವನೋ ಅದರ ಮೇಲಿಂದ ಅವನ ಆವರ್ತನ ಪ್ರಶ್ನೆಗಳು ಮೇಲೆ ಹೇಳಿದ ಗುರಿಗೆ ಅನುಕೂಲವಾಗಿಯೋ ಪ್ರತಿಕೂಲವಾಗಿವೆಯೋ ಎಂಬುದನ್ನು ಹೇಳಬಹುದು. ಸಾಕಷ್ಟು ಅಭ್ಯಾಸವಾದರೆ ಸಣ್ಣ ಮಕ್ಕಳೂ ಕೂಡ ಸುಸ್ಪಷ್ಟವಾದ ಸುದೀರ್ಘವಾದ ಮಿತವಾದ ಮಾತಿನಲ್ಲಿ ಅದ್ಭುತ ಜಾಣ್ಮೆಯನ್ನು ಪಡೆಯಬಲ್ಲರೆಂದು ಕಂಡುಬಂದಿದೆ.

ಒಮ್ಮೊಮ್ಮೆ ಶಿಕ್ಷಕನ ಪ್ರಶ್ನೆಗಳು ಅವು ಎಳೆಯುವ ಉತ್ತರಗಳಿಗಿಂತ ಅಭಿರುಚಿ ಪೂರ್ಣವಾಗಿರುವವು. ಹುಡುಗರ ಮನಸ್ಸಿನ ಮೇಲೆ ಶಿಕ್ಷಕನಿಗೆ ಕೆಲವೊಂದು ಭಾವಗಳನ್ನು ಅಚ್ಚೊತ್ತುವದಿರುತ್ತದೆ; ಅವರ ಸಮಾಲೋಚನೆಗಾಗಿ ಸಾಮಗ್ರಿಯನ್ನು ಸಿದ್ಧಪಡಿಸುತ್ತಾನೆ; ಅದಕ್ಕಾ

ಜಾಣತನದಿಂದ ಹಲವೊಂದು ಪ್ರಶ್ನೆಗಳ ಮಾಲಿಕೆಯನ್ನು ಇಟ್ಟುಕೊಳ್ಳುವನು. ಇದರಿಂದ ತಾನು ಅಪೇಕ್ಷಿಸಿದ ಪರಿಣಾಮ ಹುಡುಗರ ಮೇಲಾಗಬೇಕು. ಇದು ಸೂಕ್ತವಾದ ಪದ್ಧತಿಯಾಗಬಹುದು– ಒಮ್ಮೊಮ್ಮೆ; ಆದರೆ ಇದರಲ್ಲಿ ಶಿಕ್ಷಕನೇ ವಿಚಾರಪರನಾಗಿರುವದು ಕಂಡುಬರುವದು. ಅವನು ಕೇಳುವ ಪ್ರಶ್ನೆಗಳಿಗೆ ಸಹಜವಾದ ಹೌದು ಎಂಬ ಉತ್ತರವನ್ನು ಹುಡುಗರು ಕೊಟ್ಟೇ ಕೊಡುವರು; ಎಂಬ ಸಿದ್ಧಾಂತವನ್ನು ತೆಗೆಯಲಾರರು.

ನೀತ್ಯನುಶಾಸನದ ದೃಷ್ಟಿಯಿಂದ ವಿಚಾರಿಸಿದರೆ ಪ್ರಶ್ನೆಗಳನ್ನು ತಿರಿತಿರುಗಿ ಕೇಳುವ ಚಾಳಿಯು ಅಂಟಿಕೊಳ್ಳದಂತೆ ನೋಡಿಕೊಳ್ಳುವದೊಂದು ಶಿಕ್ಷಕನ ದೊಡ್ಡ ಗುಣ. ಅಚ್ಚುಕಟ್ಟಾದ ರೂಪದಲ್ಲಿ ಹಾಕಲಾಗಿಲ್ಲೆಂದು ಪ್ರಶ್ನೆಯ ಶಬ್ದಗಳನ್ನು ಬದಲುಮಾಡಿಕೊಳ್ಳುವ ಮೋಹಕ್ಕೆ ಆತನು ಒಳಗಾಗದಂತೆ ನೋಡಿಕೊಳ್ಳುವ ಅಭ್ಯಾಸ ಮಾಡಬೇಕು. ಇನ್ನು ಯಾವದೊಂದು ಪ್ರಶ್ನೆಗೆ ವರ್ಗದಿಂದ ಉತ್ತರವೇ ದೊರೆಯದಂತಾದರೆ– ಹುಡುಗರಿಗೆ ಅದು ಅಭುಕ್ತ ತಿಳಿಯದಲೇ ಹೋದರೆ ಆಗ ಮಾತ್ರ ಶಿಕ್ಷಕನು ತನ್ನ ಪ್ರಶ್ನೆಯನ್ನು ಬೇರೆ ರೂಪದಲ್ಲಿ ಕೇಳಬಹುದು.

ಬಾಯಿಮಾತಿನ (ಮೌಖಿಕ) ಪ್ರಶ್ನೆಗಳ ವಿಷಯ ಇದುವರೆಗೆ ಹೇಳಿದ್ದಾಯಿತು. ಮುಖ್ಯವಾಗಿ ಪ್ರಶ್ನೆಗಳು ಆಲೋಚನೆಗೆ ದಾರಿಯನ್ನು ಮಾಡಿಕೊಡಬೇಕು. ಈ ಮಾತು ಮೌಖಿಕ ಹಾಗು ಲಿಖಿತ ಎರಡೂ ಪ್ರಶ್ನೆಗಳಿಗೆ ಹತ್ತುವದು– ಇನ್ನೂ ಹೆಚ್ಚಾಗಿ ಲಿಖಿತ ಪ್ರಶ್ನೆಗಳಿಗೆ ಅನ್ವಯಿಸುವದು. ಆದರೆ ಲಿಖಿತ ಉತ್ತರಗಳು ಹಲವಾರು ಸಾರೆ ಬರೆಯುವ ಅಭ್ಯಾಸ ಬಲಪಡಲೆಂದೇ ಇರಬೇಕಾಗುವದು. ಭಾಷೆಯ ವಿಷಯವನ್ನು ಕಲಿಸುತ್ತಿದ್ದರೆ ಶಬ್ದಗಳು ನಡೆಯುವ ರೂಪಗಳನ್ನು ಪುನಪುನಃ ಬರೆಯುವದೂ ಅವಶ್ಯವಿದೆ– “ ನೀವು ಇದ್ದೀ; ” ಕೇರಿಯಿಂದ ಕೋಡ ತುಂಬಿತಂದರು ” ಇಂತಹ “ತಪ್ಪುಗಳಾಗಬಾರದೆಂದಿದ್ದರೆ.

ಶಿಕ್ಷಕನಿಗೆ ಬರೆದು ತಂದ ಅಭ್ಯಸನಗಳನ್ನು ತಿದ್ದುವ ಕೆಲಸವು ಎಷ್ಟು ಬೀಳುವದು ಎಂಬದನ್ನು ನೋಡಿ ಲಿಖಿತ ಅಭ್ಯಸನಗಳ ನಮೂನೆಯನ್ನೂ ಪ್ರಮಾಣವನ್ನೂ ಗೊತ್ತುಮಾಡಬೇಕಾಗುವದು. ಕೇವಲ ಶಬ್ದಗಳನ್ನು ಬರೆದು ತರುವದಿದ್ದರೆ ಶುದ್ಧರೂಪಗಳನ್ನು ಅವರಿಗೆ ತೋರಿಸಿ ಅವರಿಂದಲೇ ಅವರ ತಪ್ಪುಗಳನ್ನು ತಿದ್ದಿಸಬಹುದು. ಸಾಧ್ಯವಾದಾಗ ವರ್ಗವೇ ತನ್ನ ಲಿಖಿತ ಕೆಲಸವನ್ನು ತಿದ್ದಿಕೊಳ್ಳುವ ಕೆಲಸವನ್ನು ಮಾಡಬೇಕು ಶಿಕ್ಷಕನ ಮೇಲ್ವಿಚಾರಣೆಯು ಮಾತ್ರ ಇದಕ್ಕೆ ಬೇಕೇ ಬೇಕಾಗುವದು.

“ನೂತನ ಗಣಿತ” ಗಳ ತಿದ್ದಿದ ಆವೃತ್ತಿಗಳು

ಎಲ್ಲ ಕಡೆಗೂ ದೊರೆಯುವವು

ಹಲವು ತಜ್ಞರ ನೆರವಿನಿಂದ ತಿದ್ದುಪಡೆಯನ್ನು ಕೈಕೊಂಡು ಹೊಸ ಆವೃತ್ತಿಗಳನ್ನು ಹೊರಡಿಸಲಾಗಿದೆ. ಮನಶ್ಶಾಸ್ತ್ರ, ಗಣಿತಶಾಸ್ತ್ರ, ವ್ಯವಹಾರ ಇವುಗಳ ತ್ರಿವೇಣೀ ಸಂಗಮವನ್ನು ಇವುಗಳಲ್ಲಿ ಕಾಣಬಹುದು. ಅಲ್ಲದೆ ಗಣಿತದ ಎಲ್ಲ ವಿಭಾಗಗಳನ್ನೂ ಕೊಡಲಾಗಿದೆ.

ಎಲ್ಲ ಜಿಲ್ಲಾ ಸ್ಕೂ. ಬೋ. ಹಾಗು ಮುನಸಿಪಲ್ ಸ್ಕೂ. ಬೋರ್ಡುಗಳೂ ಮನ್ನಣೆಯನ್ನಿತ್ತಿರುವವು ಎಂತಲೇ ತಿದ್ದಿದ ಆವೃತ್ತಿಗಳನ್ನು ಕೇಳಿರಿ. ಎಲ್ಲ ಕಡೆಗೂ ದೊರೆಯುವವು.

ಆಳಕವಾಡಿ ಬುಕ್ ಡಿಪೋ, ಧಾರವಾಡ

ರಿಮಾಂಡ ಹೋಮ್

(Remand Home)

ಲೇಖಕರು:— ಶ್ರೀ. ಶಿಂತ್ರಿ ಬಸಪ್ಪನವರು, ಬಿ. ಎ. ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ.

ಪ್ರಸ್ತಾವನೆ

ದಿ ಡಿಸ್ಟ್ರಿಕ್ಟ ಪ್ರೊಬೇಶನ್ ಆ್ಯಂಡ ಆಫ್ಟರಕೇರ್ ಅಸೋಸಿಯೇಶನ್ (The District Probation And After Care Association) ಎಂಬ ಹೆಸರಿನದೊಂದು ಸಂಸ್ಥೆಯು ಧಾರವಾಡದಲ್ಲಿದೆ. ಅನೀತಿಗೊಳಗಾಗಿ ತಪ್ಪುದಾರಿ ತುಳಿದಂಥ ಬಾಲಕ-ಬಾಲಕಿಯರನ್ನು (೧೬ ವರುಷ ವಯಸ್ಸು ಮೀರದವರನ್ನು) ತಿದ್ದಿ ತೀಡಿ ಉತ್ತಮ ನಾಗರಿಕರನ್ನಾಗಿ ಮಾಡುವ ಸದುದ್ದೇಶವನ್ನು ಆ ಸಂಸ್ಥೆಯು ಇಟ್ಟುಕೊಂಡಿದೆ. ಸಮಾಜಸೇವೆಯೇ ಅದರ ಹೆಗ್ಗುರಿ. ಅಡ್ಡ ಹಾದಿ ಹಿಡಿದ ಹುಡುಗ-ಹುಡುಗಿಯರನ್ನು ಸುಧಾರಿಸದೆ ಬಿಟ್ಟರೆ ಅವರು ಸಮಾಜಕಂಟಕರಾಗುವ ಭೀತಿಯಿದೆ. ಅಂತಹವರನ್ನು ಒಂದು ಸ್ಥಳದಲ್ಲಿ ಕೂಡ ಹಾಕಿ ಅವರಿಗೆ ಶಾರೀರಿಕ, ನೈತಿಕ ಹಾಗೂ ಬೌದ್ಧಿಕ ಶಿಕ್ಷಣ ಕೊಟ್ಟು ಅವರನ್ನು ಉತ್ತಮ ಸಮಾಜಘಟಕಗಳನ್ನಾಗಿ ಮಾಡುವ ಹೊಣೆಯು ರಾಷ್ಟ್ರದ ಮೇಲಿದೆಯಲ್ಲವೇ ? ಆದುದರಿಂದಲೇ ಸರಕಾರದವರು ಜಿಲ್ಲೆಗೊಂದರಂತೆ ಅಂತಹ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ನಮ್ಮ ಜಿಲ್ಲೆಯ ಸಂಸ್ಥೆಯು ಕಳೆದ ಸುಮಾರು ೨೨ ವರುಷಗಳಿಂದ ಈ ದಿಶೆಯಲ್ಲಿ ಕೆಲಸ ಮಾಡುತ್ತ ಬಂದಿದೆ. ಅದರ ಹೆಸರನ್ನು ಪ್ರಾರಂಭದಲ್ಲಿಯೇ ಮೇಲೆ ಕೊಡಲಾಗಿದೆ. ಧಾರವಾಡ, ಹುಬ್ಬಳ್ಳಿ, ಗದಗ, ರಾಣೇಬೆನ್ನೂರ ಹಾಗೂ ಲಕ್ಷ್ಮೇಶ್ವರ ಈ ಐದು ಊರುಗಳಲ್ಲಿ ಒಂದೊಂದರಂತೆ ರಿಮಾಂಡ ಹೋಮುಗಳನ್ನು ಆ ಸಂಸ್ಥೆಯು ಸ್ಥಾಪಿಸಿದೆ.

‘ ರಿಮಾಂಡ ಹೋಮ್ ’ ಅಂದರೇನು ?

ಹಲವು ಬಾಲಕ-ಬಾಲಕಿಯರು ಮನೆಯಲ್ಲಿ ಯೋಗ್ಯ ಲಾಲನೆ-ಪಾಲನೆಯಿಲ್ಲದೆ ಕೆಡುವದುಂಟು; ಹಲವರು ತಮ್ಮ ಅಸಾಧು ಮನೋವೃತ್ತಿಯಿಂದ ಅಡ್ಡ ದಾರಿ ಹಿಡಿಯುವದುಂಟು; ಹಲವರು ನೆರೆಹೊರೆಯ ಕೆಟ್ಟ ಸಹವಾಸದಿಂದ ದುರ್ಮಾರ್ಗಿಗಳಾಗುವದುಂಟು; ಇನ್ನೂ ಹಲವರು ದುಷ್ಟ ಸ್ವಾರ್ಥಿಗಳ ಬಲಿಯಲ್ಲಿ ಸಿಲುಕಿಕೊಂಡು ಪೇಚಾಡುವದುಂಟು. ಅಂತಹ ದಾರಿ ತಪ್ಪಿದ ಚಿಕ್ಕ ಮಕ್ಕಳಿಗೆ ಯೋಗ್ಯವಾದೊಂದು ಆಶ್ರಯ ಸ್ಥಾನವನ್ನು ಕಲ್ಪಿಸಿ ಕೊಡುವದು ಸರಕಾರದ ಹೊಣೆಯು. ಅಂತಹ ದುರ್ಮಾರ್ಗಕ್ಕೀಡಾದ ತರಳ-ತರಳೆಯರಿಗೆ ಅನ್ನ-ವಸ್ತ್ರ-ಆಶ್ರಯವೆಂಬ ಮೂರು ಜೀವನದ ಮೂಲ ಬೇಡಿಕೆಗಳನ್ನು ಪೂರೈಸಿ ಶಾರೀರಿಕ, ನೈತಿಕ ಮತ್ತು ಬೌದ್ಧಿಕ ಶಿಕ್ಷಣವನ್ನು ಕೊಡುವ ಗೃಹಕ್ಕೆ ರಿಮಾಂಡ ಹೋಮ್ (Remand Home) ಎಂದು ಕರೆಯುವದುಂಟು. ಮಗುವು ರಿಮಾಂಡ ಹೋಮಿಗೆ ತರಲ್ಪಟ್ಟ ಕೂಡಲೆ ತಜ್ಞ ಡಾಕ್ಟರರೊಬ್ಬರ ಕಡೆಯಿಂದ ದೇಹಪರೀಕ್ಷೆಯಾಗಿ ಅಗತ್ಯವೆನಿಸಿದರೆ ಔಷಧೋಪಚಾರವಾಗುವದು. ತಪ್ಪಿಸಿಕೊಂಡು ಬಂದ ಇಲ್ಲವೆ ಬುದ್ಧಿಪೂರ್ವಕವಾಗಿ ಮನೆ ಬಿಟ್ಟು ಓಡಿ ಬಂದ ಮಗುವು ರಿಮಾಂಡ ಹೋಮಿಗೆ ತರಲ್ಪಟ್ಟಿದ್ದರೆ, ಎಲ್ಲಕ್ಕೂ ಮೊದಲು ಆ ಮಗುವಿನ ತಂದೆ-ತಾಯಿಗಳಿಗೆ (ಅವರ ವಿಳಾಸವು ಗೊತ್ತಾದರೆ ಮಾತ್ರ) ತಿಳಿಸಲಾಗುವದು. ಯಾಕಂದರೆ, ಮಗುವನ್ನು ಕಳಕೊಂಡ ಚಿಂತೆಯು ಅವರನ್ನು ಬಾಧಿಸುವದಿಲ್ಲ ಹಾಗೂ ಅದರ ಬಗೆಗೆ ಅವರ ದುಡ್ಡೂ ವ್ಯರ್ಥ ಹಾಳಾಗುವದಿಲ್ಲ. ಮಕ್ಕಳು ಅಲ್ಲಿ ಇರುವ ಅವಧಿಯವರೆಗೆ ಅವರಿಗೆ ಶಾರೀರಿಕ, ನೈತಿಕ, ಬೌದ್ಧಿಕ ಮತ್ತು ಔದ್ಯೋಗಿಕ ಶಿಕ್ಷಣವನ್ನು ಕೊಡಲಾಗುವದು. ಅಲ್ಲಿ ಕಲಿಸುವ ವಿಷಯಗಳೆಂದರೆ— ಓದು-ಬರಹ, ಶಿಸ್ತು, ಅಚ್ಚುಕಟ್ಟುತನ, ನೀತಿಯ ಪಾಠಗಳು, ಆಟ-ನೋಟಗಳು, ನೂಲ

ತೆಗೆಯುವದು, ನೆಯ್ಗೆ, ಕೈದೋಟ, (Kitchen-gardening) ಬಡಿಗತನ, ಕಸೂತಿ, ಹೊಲಿಗೆ, ಹೆಣಿಕೆ, ಮುಂತಾದವುಗಳು. ಅಲ್ಲಿ ಅವರಿಗೆ ಸಿಗುವ ಎಲ್ಲಕ್ಕೂ ಹೆಚ್ಚಿನ ತರಬೇತಿಯೆಂದರೆ ಸಾಂಘಿಕ ಜೀವನ (Community Life)ವು. ರಿಮಾಂಡ ಹೋಮಿಗೆ ಸಾಂಘಿಕ-ಜೀವನವನ್ನು ಕಲಿಸುವ ಪ್ರಾಯೋಗಿಕ ಶಾಲೆಯೆಂದರೂ ಸಲ್ಲುವದು. ಈ ಸಂದರ್ಭದಲ್ಲಿ, ಜೀವನ ಶಿಕ್ಷಣ (Basic Education) ದಲ್ಲಿ ಸಾಂಘಿಕ ಇಲ್ಲವೆ ಕೌಟುಂಬಿಕ ಜೀವನಕ್ಕೆ ಎಷ್ಟೊಂದು ಪ್ರಾಧಾನ್ಯತೆಯಿದೆಯೆಂಬ ಮಾತನ್ನು ಓದುಗರು ಗಮನಿಸುವದೊಳಿತು.

ಪ್ರೊಬೇಶನ್ ಆಫೀಸರ

ಪ್ರೋಬೆಶನ್ ಆಫೀಸರ (Probation Officer) ರಿಮಾಂಡ ಹೋಮಿನ ಮೇಲ್ವಿಚಾರಕರು. ಮಗುವು ಹೋಮಿನಲ್ಲಿ ದಾಖಲ ಆದನಂತರ ಅಲ್ಲಿಗೆ ತರಲ್ಪಡುವ ಪರಿಸ್ಥಿತಿಗೇಕೆ ಈಡಾಯಿತೆಂಬುದರ ಕಾರಣಗಳನ್ನು ಗೊತ್ತು ಹಚ್ಚುವವರು. ಆ ಮಗುವಿನ ಕೌಟುಂಬಿಕ ಸ್ಥಿತಿ ಗತಿ, ನೆರೆ-ಹೊರೆ, ಮನಸಿನ ಪ್ರವೃತ್ತಿಗಳು, ಭಾವನೆಗಳು, ಪೂರ್ವೇತಿಹಾಸ, ಇವೆಲ್ಲವುಗಳನ್ನು ಒಳಹೊಕ್ಕು ತಳವಾಗಿ ಅಭ್ಯಾಸ ಮಾಡಿ ಕಂಡುಕೊಳ್ಳುತ್ತಾರೆ. ಇವರು ಚಿಕ್ಕ ಮಕ್ಕಳ ಬಗೆಗೆ ಕಕ್ಕುಲತೆಯುಳ್ಳವರೂ ಮನಃಶಾಸ್ತ್ರ — ಸಮಾಜಶಾಸ್ತ್ರಗಳ ತತ್ತ್ವವೇತ್ತರೂ ಆಗಿರುವರಲ್ಲದೆ ತಜ್ಞ ಸಮಾಜಸೇವಕರಾಗಿರುವರು. ಇವರು ಅಧಿಕಾರಿಯಂತೆ ದರ್ಪದಿಂದ ವರ್ತಿಸದೆ ಮಕ್ಕಳ-ಕೂಡ ಮಕ್ಕಳಾಗಿ ಅವರ ಒಡನಾಡಿಗಳಾಗಿ, ಅಣ್ಣ-ತಮ್ಮಂದಿರಾಗಿ, ಅಕ್ಕ-ತಂಗಿಯರಾಗಿ, ಗೆಳೆಯ-ಗೆಳತಿಯರಾಗಿ ವರ್ತಿಸಿ ತಂದೆ--ತಾಯಿಗಳೋಪಾದಿಯಲ್ಲಿರುವ ರಾದ್ದರಿಂದ, ಮಕ್ಕಳು ತಮ್ಮ ಸುಖ-ದುಃಖಗಳನ್ನೂ ಭಾವನೆಗಳನ್ನೂ ಅನಿಸಿಕೆಗಳನ್ನೂ ಬೇಕು-ಬೇಡಗಳನ್ನೂ ತೆರೆದ ಹೃದಯದಿಂದ ಆಫೀಸರರಿಗೆ ತಿಳಿಸುವದುಂಟು. ಒಂದು ವೇಳೆ ಅತಿ ಮುಗ್ಧ ಸ್ವಭಾವದೊಂದು ಮಗುವು ಏನನ್ನೂ ತಿಳಿಸದಿದ್ದರೆ, ಅವುಗಳನ್ನು ಶೋಧಿಸಿ ತೆಗೆಯುವ ಕೈ-ಚಳಕವು ಆಫೀಸರರಲ್ಲಿ ಪರಿಪೂರ್ಣವಿರುತ್ತದೆ. ಪ್ರೊಬೇಶನ್ ಆಫೀಸರರ ಮೇಲೆ ಜಿಲ್ಲೆಗೊಬ್ಬರಂತೆ ಮುಖ್ಯಾಧಿಕಾರಿ (Chief Officer) ಯೋರ್ವರಿರುತ್ತಾರೆ.

ಜುವ್ಹೆನಾಯಿಲ್ ಕೋರ್ಟ್

ಪ್ರತಿಯೊಂದು ರಿಮಾಂಡ ಹೋಮಿಗೆ ಸಂಬಂಧಿಸಿದ ನ್ಯಾಯಾಲಯವೊಂದಿದೆ. ಅದಕ್ಕೆ ಜುವ್ಹೆನಾಯಿಲ್ ಕೋರ್ಟ ಎಂದು ಹೆಸರು. ಜುವ್ಹೆನಾಯಿಲ್ ಅಂದರೆ ಮಕ್ಕಳಿಗೆ ಸಂಬಂಧಿಸಿದ ಎಂದು ಅರ್ಥ. ಜುವ್ಹೆನಾಯಿಲ್ ಕೋರ್ಟ ಅಂದರೆ ಚಿಕ್ಕ ಮಕ್ಕಳ ಸಂರಕ್ಷಣೆ ಹಾಗೂ ಸುಧಾರಣೆಗಾಗಿ ಸ್ಥಾಪಿಸಲ್ಪಟ್ಟ ನ್ಯಾಯಾಲಯವು. ಅದರಲ್ಲಿ ಒಬ್ಬ ಸವೇತನ ಮ್ಯಾಜಿಸ್ಟ್ರೇಟರೂ ಒಬ್ಬಿಬ್ಬ ಗೌರವ (ನಿರ್ವೇತನ) ಸ್ತ್ರೀ ಮ್ಯಾಜಿಸ್ಟ್ರೇಟರೂ ಕೂಡಿ ಕೆಲಸ ಮಾಡುತ್ತಾರೆ. ಸವೇತನ ಮ್ಯಾಜಿಸ್ಟ್ರೇಟರು ಅದರ ಅಧ್ಯಕ್ಷರು. ಉಳಿದ ನ್ಯಾಯಾಲಯಗಳಂತೆ ಅಲ್ಲಿ ಶಿಕ್ಷೆ-ದಂಡಗಳಿಲ್ಲ; ಒಂದು ವೇಳೆ ಚಿಕ್ಕಮಗುವು ಅಪರಾಧವನ್ನು ಮಾಡಿದ್ದರೂ ಸಹ ಅದರ ಶೀಲ-ಸ್ವಭಾವವನ್ನು ಸುಧಾರಿಸುವ ಕ್ರಮಗಳನ್ನಷ್ಟೇ ವಿಧಿಸಲಾಗುವದು.

ಉಪಸಂಹಾರ

ಧಾರವಾಡದಲ್ಲಿಯ ರಿಮಾಂಡ ಹೋಮುವು ಹುಬ್ಬಳ್ಳಿ ಹಳೇ ಹಾಗೂ ಹೊಸ ಜಕಾತಿ ಕಟ್ಟೆಗಳ ಮಧ್ಯಂತರದಲ್ಲಿಯ ಪ್ರಶಸ್ತವಾದೊಂದು ಬಂಗ್ಲೇದಲ್ಲಿದೆ. ಅಲ್ಲಿ ಮಕ್ಕಳ ವಸತಿ, ಊಟ-ಅಡಿಗೆಯ ವ್ಯವಸ್ಥೆ, ಸಾಂಘಿಕ-ಜೀವನ, ನೆಯ್ಗೆ, ಕೈದೋಟ, ಮೊದಲಾದವುಗಳು ನೋಡತಕ್ಕಂತಹವಿವೆ. ಪ್ರಾಥಮಿಕ ಶಾಲೆಗಳೂ ಟ್ರೇನಿಂಗ ಕಾಲೇಜುಗಳೂ ಸಂದರ್ಶಿಸಲು ಯೋಗ್ಯ ಸಂಸ್ಥೆಯು. ಹಳ್ಳಿಪಳ್ಳಿಗಳಲ್ಲಿ ಅನೀತಿಗೊಳಗಾದ ಹುಡುಗ-ಹುಡುಗೆಯರು ಇರುವದುಂಟು. ಅಂತಹ ದುರ್ಮಾರ್ಗಿಗಳನ್ನು ಹಳ್ಳಿಗಳಲ್ಲಿ ಕೆಲಸ ಮಾಡುವ ಶಿಕ್ಷಕ-ಶಿಕ್ಷಕಿಯರು ತಮ್ಮ ಹಳ್ಳಿಗೆ ಸಮೀಪವಿರುವ ರಿಮಾಂಡ ಹೋಮಿಗೆ ಕಳುಹಿಸಿ ಅವರನ್ನು ಸನ್ಮಾರ್ಗಿಗಳನ್ನಾಗಿ ಮಾಡುವದು ಲೇಸಲ್ಲವೇ? ಮುಂದೆ ಸಮಾಜಕಂಟಕರಾಗಬಹುದಾದ ಚಿಕ್ಕ ಅಪರಾಧಿಗಳನ್ನು ರಿಮಾಂಡ ಹೋಮಿಗೆ ಕಳುಹಿಸಿ ಅವರನ್ನು ಉತ್ತಮ ಸಮಾಜಘಟಕಗಳನ್ನಾಗಿ ಮಾಡಿಸುವದು ಶಿಕ್ಷಕ-ಶಿಕ್ಷಕಿಯರ ಕರ್ತವ್ಯವೇ ಆಗಿದೆ. ಆ ಪವಿತ್ರ ಕರ್ತವ್ಯವನ್ನು ನಿರ್ವಹಿಸಿ ಪುಣ್ಯಭಾಗಿಗಳಾಗುವರೆಂದು ಹಾರೈಸುತ್ತೇವೆ.

—: ಸಿರಿಗನ್ನಡಂಗೆಲ್ಗೆ :—

ಕಾವ್ಯ ಶಿಕ್ಷಣದ ದಿಗ್ದರ್ಶನ

ಲೇಖಕರು:— ಶ್ರೀ. ಎಸ್. ಡಿ. ಇಂಚಲ, ಪ್ರಿನ್ಸಿಪಾಲರು, ಜ. ಗ. ಟ್ರೇನಿಂಗ ಕಾಲೇಜ, ಹುಬ್ಬಳ್ಳಿ.

ಕಾವ್ಯ ಶಿಕ್ಷಣವನ್ನು ಕುರಿತು ಆಲೋಚಿಸುವಾಗ ನಮ್ಮನ್ನು ಎಲ್ಲಕ್ಕೂ ಮೊದಲು ಎದುರಿಸುವ ಪ್ರಶ್ನೆ ಎಂದರೆ 'ಕಾವ್ಯವನ್ನು ಕಲಿಸುವುದೇಕೆ?' ಎಂಬುದು. ಈ ಪ್ರಶ್ನೆಗೆ ಸಮಾಧಾನ ಹೇಳದೆ ಮುಂದೆ ಸಾಗುವದೆಂತು ? ಮಗುವಿನ ಸರ್ವಾಂಗೀಣ ಶಿಕ್ಷಣಕ್ಕೆ ಕಾವ್ಯ ಶಿಕ್ಷಣವೂ ಅತ್ಯಂತ ಹಿತವಾಗಿ ಮಿತವಾಗಿ ನೆರವಾಗಬಲ್ಲದು. ನಮ್ಮ ಮಗುವಿನ ಶಾರೀರಿಕ, ಮಾನಸಿಕ ಮತ್ತು ನೈತಿಕ ವಿಕಾಸವಾಗುವಂತೆ ಸನ್ನಿವೇಶಗಳನ್ನೂ, ಅವುಗಳಿಗೆ ತಕ್ಕ ಅನುಭವಗಳನ್ನೂ ಒದಗಿಸುವದು ಅನಿವಾರ್ಯವಾದುದು. ಮಗುವು ಮಾನವವಾಗಿ ಬೆಳೆಯಬೇಕು ಅಷ್ಟೇ ಸಾಲದು. ಮಗುವು ಉತ್ತಮ ಮಾನವನಾಗಿ, ಬರಲಿರುವ ಸರ್ವೋದಯ ಸಮಾಜದ ಶ್ರೇಷ್ಠ ವ್ಯಕ್ತಿಯಾಗಿ, ಸ್ವಾವಲಂಬಿಯಾಗಿ, ಸ್ವಾತಂತ್ರ್ಯ-ಸಮಾನತೆಗಳನ್ನು ರಕ್ತಗತಮಾಡಿಕೊಂಡ ಸಮಾಜದ ಸರ್ವತೋಮುಖ ಪ್ರಗತಿಗಾಗಿ ತನ್ನದಾದ ಜೀವನದ ಘನವಾದ ಕಾಣಿಕೆಯನ್ನು ಸಲ್ಲಿಸುವ ಶಕ್ತಿಯನ್ನು ಸಾಧಿಸಿಕೊಂಡವನಾಗಿರುವ ತೇಜಸ್ವಿಯಾದ ಆದರ್ಶ ನಾಗರಿಕನಾಗಿ—ಮಗುವು ಬೆಳೆಯಬೇಕೆಂದು ನಾವಿಂದು ಅಪೇಕ್ಷಿಸುತ್ತೇವೆ.ಒಟ್ಟಾರೆ ಅವನು ನಮ್ಮ ಭಾರತೀಯ ಸಂಸ್ಕೃತಿಯ ಹಳೆಯ ವೃಕ್ಷಕ್ಕೆ ಬಿಟ್ಟ ಹೊಸ ಹೂವಾಗಿ ಅರಳಬೇಕು. ಅವನ ಬದುಕು ಬಂಗಾರವಾಗಿ, ಘನವಾಗಿ, ಉನ್ನತವಾಗಿ ಇರುವಂತಹ ಒಂದು ಅಪೂರ್ವ ಸಂಸ್ಕಾರವು ಅವನ ವ್ಯಕ್ತಿತ್ವದಲ್ಲಿ ಕಳೆಗೊಂಡು ಬೆಳಗಬೇಕು; ಇದೀಗ ನಮ್ಮ ಆಶೆ.

ಈ ಆಶೆ ಹಣ್ಣಿಸುವ ಬಗೆ ಹೇಗೆ? ಅನುಭವ ಸಾಧಕವಾದ ಅಭ್ಯಾಸಕ್ರಮದ ಉಳಿದ ವಿಷಯಗಳ ಜತೆಗೆ ಕಾವ್ಯವನ್ನು ಮಕ್ಕಳಿಗೆ ಕಲಿಸುವದೆಂದರೆ ಮಗುವಿನ ಮುದ್ದಾದ ಮನವನ್ನೂ ಕೋಮಲವಾದ ಹೃದಯವನ್ನೂ ಒಳ್ಳೆಯುದರ ಕಡೆಗೆ ತಿರುಗಿಸುವದು. ಕಾವ್ಯದಲ್ಲಿ ಅಂಥ ಒಂದು ಸೌಂದರ್ಯವಿದೆ. ಆ ಸೌಂದರ್ಯವು ಒಂದು ಶಕ್ತಿಯು. ಅದು ನಮ್ಮನ್ನು ತಡೆದು, ಹಿಡಿದು, ನಮ್ಮ ಹೃದಯವನ್ನು ತಿರುಗಿಸಿ, ಕರಗಿಸಿ ನಮ್ಮ ಬುದ್ಧಿಯನ್ನು ಬೆಳಗಿ ತೊಳಗಿಸಿ, ನಮ್ಮನ್ನು ಉತ್ತಮ ಜೀವನ ಉನ್ನತವಾದ ಎತ್ತರಕ್ಕೆ ಏರಿಸುವ ಶಕ್ತಿಯನ್ನು ಪಡೆದುದಾಗಿದೆ. ಅದುವೇ ಸೌಂದರ್ಯ. ಈ ಸೌಂದರ್ಯ ಪ್ರೀತಿಯೇ ಉದಾತ್ತ ಸಂಸ್ಕೃತಿ ಎಂದು ಹೇಳಬಹುದು. ಈ ಬಗೆಯಾದ ಸಂಸ್ಕೃತಿಯು ಇಂದಿನ ನಮ್ಮ ಮಕ್ಕಳ ಮೈ-ಮನಗಳಲ್ಲಿ ಇಳಿಯಬೇಕಾದರೆ ನಮ್ಮ ಮಕ್ಕಳು ಸೌಂದರ್ಯ ಸಾಧಕವಾದ ವಿವಿಧ ಸನ್ನಿವೇಶಗಳ ಕಡೆಗೆ ತಮ್ಮ ಭಾವ, ಬುದ್ಧಿ, ಕಲ್ಪನೆ, ಅಭಿರುಚಿಗಳನ್ನು ಹರಿಯಿಸತಕ್ಕದ್ದು. ಇದು ಅನಿವಾರ್ಯ ಅಲ್ಲದೆ ನಮ್ಮ ಮಕ್ಕಳು ಸೌಂದರ್ಯವನ್ನು ಅರಸುವ, ಶೋಧಿಸುವ ರಸದುಂಬಿಗಳಾಗುವದು ಅವಶ್ಯ. ಅವರಲ್ಲಿಯ ಸೌಂದರ್ಯಾನ್ವೇಷಣ ಶಕ್ತಿಯು ಬೆಳೆಯಬೇಕು. ಜೀವನದಲ್ಲಿ ಒಳ್ಳೆಯದಾದುದರ ಕಡೆಗೆ ಅವರ ಅಭಿರುಚಿ ಆಸಕ್ತಿಗಳು ಹರಿಯಬೇಕು. ಅವರು ಸುಂದರವಾದ ನೀತಿರಂಜಕವಾದ ವ್ಯಕ್ತಿತ್ವವನ್ನು ಪಡೆದು ಸಮಾಜದ ದೀಪಸ್ಥಂಭವಾಗಿ ನಿಲ್ಲಬೇಕು, ಎಂದು ಅಪೇಕ್ಷಿಸುವ ನಾವು ಅವರಿಗೆ ಕಾವ್ಯವನ್ನು ಕಲಿಯುವಂತೆ ಪ್ರೋತ್ಸಾಹಿಸಬೇಕು. ಕಾವ್ಯದಲ್ಲಿ ಜೀವನದ ಉದಾತ್ತವಾದ ಅನುಭವ ಇದೆ; ಅಮೃತತತ್ವವಿದೆ; ರಸಋಷಿಯ ಅಮರ ಸಂದೇಶದ ಅಮೃತವಾಣಿ ಇದೆ. ಅದನ್ನು ನಮ್ಮ ಮಕ್ಕಳು ಎದೆದೆರೆದು ಕೇಳಬೇಕು; ಮನದೆರೆದು ಕಾಣಬೇಕು; ತುಂಬಾ ರಕ್ತಗತ ಮಾಡಿಕೊಳ್ಳಬೇಕು. ಕಾವ್ಯವೆ ಬಾಳಬಟ್ಟೆಯ ಪರಮಾಗಮವೆಂದು ಹಿರಿಯರು ಹೇಳುವುದುಂಟು. ಆದುದರಿಂದ ಸಾಹಿತ್ಯದ, ಕಾವ್ಯದ

ಸತತಾಭ್ಯಾಸದಿಂದ ಮಕ್ಕಳು ಸುಸಂಸ್ಕೃತರಾಗಿ, ತೇಜಸ್ವಿಗಳಾಗಿ ಬೆಳೆಯುವರು. ಈ ಕಾರಣಕ್ಕಾಗಿ, ಅಂದರೆ ಮಕ್ಕಳ ಅಂತಃಕರಣ ವಿಕಾಸಕ್ಕಾಗಿ, ಭಾವಬುದ್ಧಿಗಳ ಸಂಸ್ಕರಣಕ್ಕಾಗಿ, ವ್ಯಕ್ತಿತ್ವದ ಸರ್ವಾಂಗೀಣ ಉನ್ನತಿಗಾಗಿ ಕಾವ್ಯವನ್ನು ಮಕ್ಕಳಿಗೆ ಕಲಿಸುವದು ಅವಶ್ಯವೆಂದ ಹಾಗಾಯಿತು.

"Literature is the nurse of noble natures" ಎಂದು ಆಂಗ್ಲ ವಿಮರ್ಶಕನೊಬ್ಬನು ಹೇಳಿರುವಂತೆ, ಸಾಹಿತ್ಯವು ಮಾನವ ಸ್ವಭಾವಗಳನ್ನು ಉದಾತ್ತಗೊಳಿಸಬಲ್ಲ, ಮಾತೃಪ್ರೇಮದ ಪ್ರತಿನಿಧಿಯಾದ ದಾದಿ ಎಂಬ ಮಾತು ಗಮನಾರ್ಹವಾದುದು. ಹೀಗೆ ಕಾವ್ಯ ಶಿಕ್ಷಣದ ಅವಶ್ಯಕತೆಯನ್ನು ಮನಗಂಡ ನಾವು ಅದರ ಶಿಕ್ಷಣ ವಿಧಾನಗಳನ್ನು ಅರಿಯಲು ಯತ್ನಿಸಬೇಕಾಗುವದು. ಈ ವಿಧಾನವನ್ನು ಚರ್ಚಿಸುವ ಮೊದಲು ಕಾವ್ಯಶಿಕ್ಷಕನ ಅರ್ಹತೆಯ ಬಗೆಗೆ ಎರಡು ಮಾತುಗಳನ್ನು ಹೇಳುವದು ಅವಶ್ಯವು. ಕವನ ಕಲಿಸುವ ಉದಾತ್ತವಾದ ಉದ್ದೇಶವು ಸಮರ್ಥವಾದ ರೀತಿಯಲ್ಲಿ ಫಲಿಸುವಂತೆ ಮಾಡುವ ಹೊಣೆ ಕಾವ್ಯಶಿಕ್ಷಕನ ಹೆಗಲಮೇಲೆ ಇದೆ ಎಂದು ಹೇಳಿದರೆ ತಪ್ಪಿಲ್ಲ. ಈ ಹೊಣೆಯನ್ನು ಕಾವ್ಯಶಿಕ್ಷಕನು ಚನ್ನಾಗಿ ತಿಳಿದುಕೊಂಡು ಕಾವ್ಯದ ಸೊಬಗನ್ನೂ, ಕವಿಯನ್ನೂ ಮಕ್ಕಳ ಹೃದಯಕ್ಕೆ ನೀಡುವ ಮೊದಲು ತಾನು ಚನ್ನಾಗಿ ಪಡೆಯಬೇಕು. ಕವಿಯು ಕಂಡ ಸೌಂದರ್ಯವನ್ನೂ ಸತ್ಯವನ್ನೂ, ಸಂದೇಶವನ್ನೂ—ಅನುಪಮವಾದ ಅನುಭವವನ್ನೂ ಶಿಕ್ಷನು ಅಭ್ಯಾಸದಿಂದ ಅನುಭವಿಸಬೇಕು. ಕವನದ ಭಾವಸೌಂದರ್ಯ, ಅರ್ಥಗಾಂಭೀರ್ಯ, ಮತ್ತು ನಾದಮಾಧುರ್ಯಗಳನ್ನು ಶಿಕ್ಷನು ಚನ್ನಾಗಿ ಅರ್ಥಮಾಡಿಕೊಳ್ಳಬೇಕು; ಅರಗಿಸಿಕೊಳ್ಳಬೇಕು. ಕವಿಯು ಅನುಭವಿಸಿದ ರಸಾನಂದವನ್ನು ಶಿಕ್ಷಕನು ಭಕ್ತಿಯಿಂದ ಅಭ್ಯಸಿಸಬೇಕು. ಪ್ರೀತಿಯಿಂದ ಅನುಭವಿಸಬೇಕು. ತನ್ನ ಕಲೆಯ ಕಲ್ಪನೆಯ ಬಲದಿಂದ ಈ ಕವಿನಿರ್ಮಿತವಾದ ಸೌಂದರ್ಯಲೋಕದ ಅಂತರಿಕ್ಷಕ್ಕೆ ಹಾರಿ, ಅಲ್ಲಿ ಕೆಲಕಾಲ ನಿಂತು, ಆ ಆನಂದ ಲೋಕದ ಸವಿನೋಟವನ್ನು ಸಂಪೂರ್ಣವಾಗಿ ಸವಿದವನಾಗಬೇಕು. ಕವಿಯು ಹರಿಸಿದ, ರಸಾನುಭವದ ಪವಿತ್ರ ಜಲದಲ್ಲಿ ಮಿಂದು ಪುನೀತನಾಗಬೇಕು. ಅಂದರೆ ಕವಿಯ ಕಾವ್ಯವನ್ನು ಶಿಕ್ಷಕನು ತನ್ನದಾದ ರೀತಿಯಲ್ಲಿ ಪುನಃ ಜೀವಿಸಬೇಕು. " The teacher Should relive the poetry " ಎಂಬ ಉಕ್ತಿಯಂತೆ ಶಿಕ್ಷಕನು ಕವಿಯ ಅನುಭವವನ್ನು ಪುನಃ ಅನುಭವಿಸಿ ಆನಂದಿಸಬೇಕು. ಆಗ ಅವನಿಗುಂಟಾದ ಈ ರಸಾನುಭವದ ದಿವ್ಯ ಸ್ಫೂರ್ತಿಯಿಂದ ಮಕ್ಕಳ ಹಸಿದ ಹೃದಯಗಳ ಮೇಲೆ ಕವಿಯ ಆನಂದಮಯವಾದ ರಸವೃಷ್ಟಿಯನ್ನು ಕರೆಯುವ ಘನವಾದ ಮೇಘನಂತಾಗಬೇಕು ಕಾವ್ಯ ಶಿಕ್ಷಕನು. ಆಗ ಮಕ್ಕಳು ನವಿಲಿನಂತೆ ನಲಿಯುವರು ಕುತೂಹಲದಿಂದ ಕಾವ್ಯ ಸಂಗೀತಕ್ಕೆ ಕಿವಿಗೊಡುವರು. ಕವಿಯಭಾವ ಲಹರಿಯಲ್ಲಿ ತೇಲುವರು; ಕಲ್ಪನೆಯ ಎತ್ತರಕ್ಕೆ ಏರುವರು; ಕವಿಯು ತೋರಿಸಿದ ಜೀವನದರ್ಶನವನ್ನು ಪಡೆಯುವರು. ಆಗ ಕಾವ್ಯದ ಈ ಸೌಂದರ್ಯಕ್ಕೆ ಮಕ್ಕಳ ಹೃದಯಕುಸುಮ ಅರಳುವದು. ಸುಪರಿಣಾಮದ ಸುಸಂಸ್ಕೃತಿಯ ಸುವಾಸನೆಯನು ಬೀರುವದು. ಈ ಉದ್ದೇಶ ಸಾಧನೆಯ ಮಾರ್ಗದಲ್ಲಿ ಶಿಕ್ಷಕನು ಹೊಣೆ ಅರಿತುಕೊಂಡು ಕಾವ್ಯಶಿಕ್ಷಣದ ಅರ್ಹತೆಯನ್ನು ಪಡೆದವನಾಗಬೇಕು. ಅನುಭವ ಸೌಂದರ್ಯವನ್ನು ನೀಡುವದಕ್ಕಿಂತ ಮೊದಲು, ಅದನ್ನು ಸಾಕಷ್ಟು ತಾನು ಪಡೆದರೆ ಮಾತ್ರ ಇನ್ನೊಬ್ಬನಿಗೆ ಕೊಡುವ ಅರ್ಹತೆಯುಯಾಗುವದು. ಇದರ ಅರಿವು ನಮ್ಮ ಶಿಕ್ಷಕರಿಗಿರಲಿ.

ಈ ಅರ್ಹತೆಯನ್ನು ಪಡೆದ ನಂತರ ಕಾರ್ಯವನ್ನು ನಿರ್ವಹಿಸುವದೆಂತು ? ಕಾವ್ಯ-ಶಿಕ್ಷಣವೂ ಒಂದು ಘನವಾದ ಕಲೆ. ಕಲೆಯಾಗಿರುವಂತೆ; ಶಾಸ್ತ್ರವೂ ಆಗಿದೆ. ಶಿಕ್ಷಕನು ಶಿಕ್ಷಣದ ಈ ಎರಡೂ ಮುಖಗಳನ್ನು ಚನ್ನಾಗಿ ತಿಳಿದುಕೊಂಡು ಸಾಧಿಸಿಕೊಂಡವನಾಗಿರುವದು ಅವಶ್ಯವು. ಇಂಥ ಶಿಕ್ಷಕನು ಕಾವ್ಯ ಶಿಕ್ಷಣದಲ್ಲಿ ಎಲ್ಲಕ್ಕೂ ಮೊದಲು ನೆನೆಪಿಡುವ ಒಂದು ಸಂಗತಿ ಇದೆ. "Poetry should not be taught, but should be caught" ಅಂದರೆ ಕಾವ್ಯ ಕಲಿಸಲ್ಪಡಕೂಡದು; ಆದರೆ ಮಕ್ಕಳಿಂದಲೇ ಗ್ರಹಿಸಲ್ಪಡಬೇಕೆಂಬುದು. ಈ

ಮಾತಿನಲ್ಲಿ ಕಾವ್ಯ ಕಲಿಸುವದರ ರಹಸ್ಯವಡಗಿದೆ. ಇದು ಕಾವ್ಯ ಶಿಕ್ಷಣದ ಸೂತ್ರವೆಂದರೂ ಸಲ್ಲುವದು. ಕಾವ್ಯದ ಕನ್ನಡಿಯಲ್ಲಿ ಮೂಡಿನಿಂತ ಕವಿಯು ಕಂಡ ಆ ಸೌಂದರ್ಯದ ಚಿತ್ರವನ್ನೂ, ಸಂದೇಶವನ್ನೂ ಮಕ್ಕಳ ಎದುರಿಗೆ ಪರಿಣಾಮಕಾರಕವಾದ ರೀತಿಯಲ್ಲಿ ಇಡುವ ಕಾರ್ಯವೇ ಕಾವ್ಯ- ಶಿಕ್ಷಣದ ಅಂತಿಮ ಗುರಿಯಾಗಬೇಕು. ಈ ಕೆಲಸವನ್ನು ಶಿಕ್ಷಕನು ತನ್ನದಾದ ಯಾವದೇ ವಿಧಾನದಿಂದ ಮಾಡಿದರೂ ಅದು ಸರಿಯೇ. ಯಾವ ವಿಧಾನವನ್ನು ಕೈಕೊಳ್ಳುವದರಿಂದ ಮಕ್ಕಳು ಕವನದ ಭಾವ, ಕಲ್ಪನೆ, ಆಲೋಚನೆಗಳನ್ನು ಗ್ರಹಿಸಬಲ್ಲರೋ ಆದೇ ಕಾವ್ಯ ಶಿಕ್ಷಣದ ಉತ್ತಮವಾದ ವಿಧಾನವೆಂದರೂ ಸಲ್ಲುವದು. ಈ ವಿಷಯದಲ್ಲಿ ರಸಾನುಭಾವದಿಂದ ಕವಿಯೊಡನೆ ತಲ್ಲೀನನಾದ ಶಿಕ್ಷಕನೇ ತಾನು ಪ್ರಥಮ ವಿಧಾನವೆಂದರೆ ತಪ್ಪಾಗದು. ಅಳುವ ಮಗುವನ್ನು ಎತ್ತಿ, ಮುದ್ದಾಡಿ, ರಮಿಸಿ, ರಂಜನೆಗೊಳಿಸುವ ಕಲೆಯನ್ನು ತಾಯಿಯಾದವಳಿಗೆ ಯಾರು ತಾನೆ ಕಲಿಸಿಯಾರು ? ಕಲಿಸಬಲ್ಲರು ? ಅಂತಃಕರಣದ ಅವತಾರವಾದ, ಪ್ರೇಮದ ದೇವತೆಯಾದ, ಮಗುವಿನ ಪುಣ್ಯದ ಪುಂಜವಾದ ತಾಯಿಯು, ಮಗುವನ್ನು ಸಹಾನುಭೂತಿಯ ಹೃದಯದಲ್ಲಿಟ್ಟುಕೊಂಡು, ಎದೆಯ ಹಾಲನ್ನು ಉಣಿಸಿ, ಮುದ್ದಿನ ಮಳೆಗರೆದು, ಸವಿಯಾದ ಜೋಗುಳವನ್ನು ಹೇಳಿ ಆಡಿಸುತ್ತ, ಆನಂದಪಡೆಯುತ್ತ, ಪೋಷಿಸುವಂತೆ, ಕಾವ್ಯ ಶಿಕ್ಷಕನೂ ಕಲೆಯ ಮಾತೆಯಾಗಿ, ಕವಿಯ ಆನಂದವನ್ನು ಮಕ್ಕಳಿಗೆ ಉಣಬಡಿಸಿ, ಸಂತೋಷವನ್ನು ಕೊಡುತ್ತ, ಅದನ್ನೇ ಪಡೆಯುತ್ತ ಕಲಿಸಲು ಸಾಧಿಸಿದರೆ, ಈ ಕಾವ್ಯ ಶಿಕ್ಷಣದ ಕಲೆಯನ್ನು ಕರತಲಾಮಲಿಕ ಮಾಡಿಕೊಂಡತೆಯೇ ಎಂದು ಧಾರಾಳವಾಗಿ ಹೇಳಿಬಿಡಬಹುದು. ಈ ಶಿಕ್ಷಣವು ಅಷ್ಟು ಸಹಜವಾಗಿ ಅನ್ಯೋನ್ಯವಾಗಿ ಸಾಗಬೇಕು. ಸಮರಸವಾಗಿ ನಡೆಯಬೇಕು. ಶಿಕ್ಷಕನು ಕವಿಯ ಎದೆಯ ಬಡಿತಕೂ ಮಕ್ಕಳ ಹೃದಯದ ಮಿಡಿತಕೂ ಸುವರ್ಣಕಂತಿಯಾಗಬೇಕು. ಈ ಮಾತುಗಳನ್ನು ಕಾವ್ಯ ಶಿಕ್ಷಣದ ವಿಧಾನವನ್ನು ಕುರಿತು ಆಡಿದ ಸರ್ವಸಾಮಾನ್ಯವಾದ ಮಾತುಗಳೆಂಬುದನ್ನು ಸಹೃದಯರಾದ ಶಿಕ್ಷಕರು ಅರಿಯಬೇಕೆಂದು ಕೋರುವೆ. ಈ ಆದರ್ಶವನ್ನು ಸಾಧಿಸುವ ಶಾಸ್ತ್ರಬದ್ಧವಾದ ಕೆಲವು ವಿವರವಾದ ವಿಧಾನಗಳನ್ನು ಕಾವ್ಯ ಶಿಕ್ಷಣದ ಕಲಾವಂತರು ಹೇಳಿದ್ದುಂಟು. ಅವುಗಳನ್ನು ತಿಳಿದುಕೊಂಡು, ಆ ಮೆಟ್ಟಲುಗಳ ಮುಖಾಂತರವಾಗಿ ಸಾಗಿದರೂ, ಮೇಲಿನ ಮುಖ್ಯಾಂಶಗಳನ್ನು ಗಮನದಲ್ಲಿಟ್ಟುಕೊಂಡು ಸಾಗುವದು ಅವಶ್ಯವೆಂದು ಹೇಳಬೇಕಾಗುವದು.

ಕಾವ್ಯವನ್ನು ಕಲಿಸಲು ಮಕ್ಕಳ ಮುಂದೆ ಬರುವ ಮುಂಚೆ ಇನ್ನೊಂದು ಮಾತನ್ನು ಹೇಳುವದುಚಿತ. ಅದು ಕಾವ್ಯದ ಆಯ್ಕೆಗೆ ಸಂಬಂಧಪಟ್ಟದ್ದು. ಕವನ ಶಿಕ್ಷಕನು ಮಕ್ಕಳ ಅನುಭವದ ಎತ್ತರಬಿತ್ತರಗಳನ್ನು ಚೆನ್ನಾಗಿ ತಿಳಿದುಕೊಂಡು ಅವರಿಗೆ ತಕ್ಕದಾದ ಕವನವನ್ನು ಕಲಿಸಲು ತೊಡಗಬೇಕು. ಈಗ ಸದ್ಯದಲ್ಲಿ ನಮ್ಮ ಪ್ರಾಥಮಿಕ ಶಾಲೆಯಲ್ಲಿ ಓದಿಸಲ್ಪಡುವ ಕ್ರಮಿಕ ಪುಸ್ತಕಗಳಲ್ಲಿ ಕೊಡಲಾದ ಕೆಲವು ಕವನಗಳನ್ನು ಅವಲೋಕಿಸಿದರೆ ಬಹಳೇ ಶೋಚನೀಯವೆನಿಸುತ್ತದೆ. ಆ ಕವನಗಳನ್ನು ಬರೆದುದು ಕವಿಗಳ ತಪ್ಪಲ್ಲ. ಅವುಗಳನ್ನು ಓದಿಸಲೆಂದು ಕ್ರಮಿಕ ಪುಸ್ತಕಗಳಲ್ಲಿ ಆಯ್ಕೆ ಮಾಡಿದವರದೆಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಬಾಳ ಮುಂಜಾವಿನಲ್ಲಿ ಆರೋತ್ತರಗಳ ಸ್ವರ್ಣಮಯ ಸ್ವಪ್ನರಂಜಿತ ಸಂಧ್ಯಾರಾಗದ ಶುಭಸಮಯದಲ್ಲಿ ಉತ್ಸಾಹದಿಂದ ನಿಂತಿರುವ ಮಕ್ಕಳಿಗೆ ನಿರಾಶೆ, ನಿಷ್ಠುರಗಳ ಕಾರ್ಮೋಡವನ್ನು ಕಲಿಸುವ ಕವನಗಳನ್ನು ಎಂದೂ ಕಲಿಸಬಾರದೆಂದು ನನ್ನ ವೈಯಕ್ತಿಕವಾದ ಮತ. ಜೀವನದ ವಿವಿಧ ಸೌಂದರ್ಯ ಸವಿಗಳನ್ನು, ಸತ್ಯಸದ್ಗುಣಗಳನ್ನು ಎತ್ತರಿಸಿ ತೋರಿಸುವ ಸುಂದರ ಕವನಗಳನ್ನು ನಮ್ಮ ಮಕ್ಕಳಿಗೆ ಕಲಿಸುವದುಚಿತವೆಂದು ಹೇಳುವದು ಅತ್ಯಂತ ಅವಶ್ಯವಾಗಿದೆ. ಮಕ್ಕಳ ಅನುಭವಕ್ಕೆ ಬಾರದ, ಕಲ್ಪನೆಗೆ ನಿಲುಕದ ಪರಿಸರಕ್ಕೆ ಬಗ್ಗದ ಕವನಗಳು ಕೆಲವಿದ್ದರೆ, ನೀತಿಯ ಮುಂಡಿಗೆಗಳನ್ನುರುಳಿಸುವ ನೀರಸವಾದ, ಕಷ್ಟಸಾಧ್ಯವಾದ ಕಠಿಣವಾದ ಮಕ್ಕಳ ಅಭಿರುಚಿಯನು ಕುಮಾರಸದದ ಪದ್ಯಗಳು ಕೆಲವುಂಟು. ಬೆಳೆಯುತ್ತಿರುವ ಎಳೆಯ ಮಕ್ಕಳು ಅವುಗಳನ್ನು ಓದಿ ಆನಂದಿಸುವದೆಂತು? " ಕಾವ್ಯಂ ಆನಂದಾಯ " ಎಂಬ ಉಕ್ತಿ ಏನು ಹೇಳು

ವದು ? ಈ ತೊಂದರೆಗಳನ್ನು ಗಮನಿಸಿ ಕಾವ್ಯ ಶಿಕ್ಷಕನು ಮಕ್ಕಳ ಆಯಾ ವಯೋಗುಣಗಳ ವಿಶಿಷ್ಟವಾದ ಲಕ್ಷಣಗಳನ್ನು ಮನಗಂಡು ಅವುಗಳಿಗೆ ಅನುಗುಣವಾದ ಕವನಗಳನ್ನು ಆರಿಸಿಕೊಂಡು ಕಲಿಸಿದರೆ ಕಾವ್ಯ ಕಲಿಸುವದು ಫಲದಾಯಕವಾಗುವದು. ವಿಶೇಷವಾಗಿ ಪ್ರಾಥಮಿಕ ಶಾಲೆಯ ಮಕ್ಕಳಿಗೆ, ಅವರ ಭಾವ ಬುದ್ಧಿಗಳನ್ನು ಉದಾತ್ತಗೊಳಿಸಿ, ಅವರ ಕಲ್ಪನೆಯನ್ನು ಹಿಗ್ಗಿಸುವ, ಉತ್ಸಾಹವನ್ನು ಹೆಚ್ಚಿಸುವ ಕಥಾತ್ಮಕವಾದ, ವಸ್ತುನಿಷ್ಠವಾದ ಚಿಕ್ಕಚಿಕ್ಕ ಹಾಡುಗಬ್ಬುಗಳನ್ನೂ ಭಾವಗೀತೆಗಳನ್ನೂ ಕಲಿಸುವದು ಉಚಿತವೆಂದು ಸಂಕ್ಷೇಪವಾಗಿ ಕೇಳಬಯಸುವೆ. ಅಂಥ ಉತ್ತಮ ಕವನಗಳ ಒಂದು ಸಂಗ್ರಹವನ್ನು ಪ್ರತಿಯೊಬ್ಬ ಶಿಕ್ಷಕನು ಸ್ವಂತ ತಯಾರಿಸಿಕೊಳ್ಳುವದು ಅತ್ಯಂತ ಅವಶ್ಯವೆಂದು ಹೇಳಬಹುದು. ಒಟ್ಟಾರೆ ಮಕ್ಕಳ ಭಾವವಿಕಾಸಕ್ಕೆ, ಭಾವಮೋಚನೆಗೆ ಯೋಗ್ಯವಾದ ಕವನಗಳನ್ನು ಆರಿಸಿಕೊಂಡು ಕಲಿಸಿದರೆ ಕಲಿಯುವ ಮಕ್ಕಳಿಗೂ ಆನಂದ; ಕಲಿಸುವ ಶಿಕ್ಷಕನಿಗೂ' ಆನಂದ. ಈ ಆನಂದದಲ್ಲಿ ಗುರು-ಶಿಷ್ಯರು ತಲ್ಲೀನರಾಗುವದು ಅವಶ್ಯವೆಂಬುದೇ ಮುಖ್ಯಾಂಶವು. ಇಲ್ಲಿ, ಪ್ರಮೋದದೊಂದಿಗೆ ಪ್ರಚೋದನೆಯೂ, ಪ್ರಯೋಜನವೂ ಉಂಟಾಗಬೇಕು.

ಕಲಿಸಲುಚಿತವಾದ ಕವನವನ್ನು ಆರಿಸಿಕೊಂಡು, ಅದರ ಅಭ್ಯಾಸವನ್ನು ಚೆನ್ನಾಗಿ ಮಾಡಿಕೊಂಡು, ಅದರ ಸ್ವಾರಸ್ಯವನ್ನು ಮನವಾರೆ ಸವಿದು, ಆ ಸವಿಯನ್ನು ಮಕ್ಕಳು ಸವಿಯುವಂತೆ ನೆರವಾಗಲು ಶಿಕ್ಷಕನು ಮುಂದೆ ಬಂದನಂತರ, ಮುಂದೇನು ಮಾಡುವದು ? ಎಂಬುದನ್ನು ಇದೀಗ ಸಂಕ್ಷೇಪವಾಗಿ ಆಲೋಚಿಸೋಣ. ಎಲ್ಲ ಪಾಠಗಳಲ್ಲಿಯಂತೆ ಕಾವ್ಯ ಪಾಠಕ್ಕೂ ಉಪೋದ್ಘಾತವು ಅವಶ್ಯವು. ಅದು ಕವನಕ್ಕೆ ಹಿನ್ನೆಲೆಯನ್ನು ರೂಪಿಸುವ ರೀತಿಯಿಂದ ಉದ್ಬೋಧಕವಾಗಿ ಸಾಗಬೇಕು. ಕಲಿಸತಕ್ಕ ಕವನದ ಸಂದರ್ಭ ಸನ್ನಿವೇಶಗಳನ್ನು ಸೂಚಿಸುವ ಯತ್ನ ಈ ಉಪೋದ್ಘಾತದಲ್ಲಿ ನಡೆದಿರಬೇಕು. ಅಂದರೆ, ಕವನದ ಭಾವಗ್ರಹಣಕ್ಕೆ ಅನುಕೂಲವಾದ ವಾತಾವರವನ್ನುಂಟು ಮಾಡಿ ಉದ್ದೇಶ ಕಥನಕ್ಕೆ ಸರಿಯಾದ ವಾತಾವರಣವನ್ನು ಅಣಿಗೊಳಿಸಬೇಕು. ಹೀಗೆ ಹರ್ಬಾರ್ಟನು ಸೂಚಿಸಿದ ಎಲ್ಲ ಮೆಟ್ಟಿಲುಗಳನ್ನು ಕಾವ್ಯ ಶಿಕ್ಷಣದಲ್ಲಿ ಉಪಯೋಗಿಸಬಹುದು. ಉಪೋದ್ಘಾತ, ಉದ್ದೇಶ-ಕಥನ, ಕಾವ್ಯಗಾಯನ, ಮೌನವಾಚನ, ವಿಷಯ-ವಿವೇಚನ, ಪುನರವಲೋಕನೆ, ರಸಗ್ರಹಣ, ಬಾಲಕರಿಂದ ಕಾವ್ಯಗಾಯನ, ಗೃಹಪಾಠ ಈ ಎಲ್ಲ ಮೆಟ್ಟಿಲುಗಳೂ ಕವನವನ್ನು ಕಲಿಸುವಾಗ ಸಾಮಾನ್ಯವಾಗಿ ಉಪಯೋಗಿಸಲ್ಪಡುವವು. ಆದರೆ ಈ ಮೆಟ್ಟಿಲುಗಳಿಗೆ ಕಟ್ಟುಬಿದ್ದು ಶಿಕ್ಷಕನು ರಸಾಭಾಸವಾಗದಂತೆ ದಕ್ಷತೆ ವಹಿಸಬೇಕು. ಪಾಠ ನೀರಸವಾಗದಂತೆ ನೋಡಿಕೊಳ್ಳಬೇಕು. ಮೆಟ್ಟಿಲುಗಳು ಒಂದರ ಹಿಂದೊಂದು ಸಹಜವಾಗಿ ಮೂಡಿಬರಬೇಕು. ಅವು ಕಾವ್ಯದೇವಿಯ ದರ್ಶನಕ್ಕೆಂದು ದಾಟುವಾಗಿನ ವಿವಿಧವಾದ ಬಾಗಿಲುಗಳಾಗಬೇಕೇ ವಿನಃ ಅವುಗಳೇ ಮುಖ್ಯವಲ್ಲ. ಮುಖ್ಯೋದ್ದೇಶ ಕಾವ್ಯದೇವಿಯ ಭಾವಜ್ಯೋತಿಯನ್ನು ಕಂಡು ಆನಂದ ಹೊಂದುವದೆಂಬುದನ್ನು ಮರೆಯಕೂಡದು. ಮುಖ್ಯವಾಗಿ ಆ ಗರ್ಭಗುಡಿಯ ಕಡೆಗೆ ಧಾವಿಸಿ, ಅಲ್ಲಿ ಪ್ರಜ್ವಲಿಸುವ ಭಾವದೇವಿಯ ದರ್ಶನದಿಂದ ಪುನೀತರಾಗಬೇಕು. ಆದುದರಿಂದ ಒಂದೊಂದು ಮೆಟ್ಟಿಲು ಆ ಗರ್ಭಗುಡಿಯ ಹೆಬ್ಬಾಗಿಲಿಗೆ ಅರ್ಥಪೂರ್ಣವಾದ ಸೋಪಾನವಾಗುವಂತೆ ಶಿಕ್ಷಕನು, ಮಕ್ಕಳನ್ನು ಕ್ರಮೇಣ ಮುಖ್ಯಗುರಿಯ ಕಡೆಗೆ ಕರೆದೊಯ್ಯಬೇಕು. ಕಾವ್ಯದದಿವ್ಯ 'ದರ್ಶನ'ದಿಂದ ಬಾಲಕರು ಆನಂದ ಪುಲಕಿತರಾಗುವಂತಾಗಬೇಕು.

ಉದ್ದೇಶಕಥನವು ಬಾಲಕರ ಕುತೂಹಲವನ್ನು ಕೆರಳಿಸಿ ಭಾವಗ್ರಹಣಕ್ಕೆ ಅವರ ಹೃದಯರಂಗವನ್ನು ಹದಗೊಳಿಸಬೇಕು. ಅರಳಲಿರುವ ಪುಷ್ಪದ ಸುತ್ತಲೂ ಪ್ರದಕ್ಷಣೆ ಹಾಕುವ ತುಂಬಿಯಂತೆ, ಮಕ್ಕಳು ಕವನವನ್ನು ಕೇಳುವದಕ್ಕೆ ಕುತೂಹಲದಿಂದ ನಿರೀಕ್ಷಿಸಬೇಕು. ಆ ಸಮಯವನ್ನರಿತು ಶಿಕ್ಷಕನು ಕವನವನ್ನು ಸರಾಗವಾಗಿ, ಸಾವಕಾಶವಾಗಿ, ಉಚಿತವಾದ ಸಾಭಿನಯದಿಂದ ಭಾವ ಬಿಂಬಿಸುವಂತೆ ಹೇಳಬೇಕು. ಸರಾಗವಾಗಿ ಅಂದರೆ ಕೇವಲ ರಾಗದ ಆಲಾಪದಿಂದಲ್ಲ. ರಾಗದ ಆಲಾಪದಲ್ಲಿ ಕವನದ ಜೀವವಾದ ಭಾವ ಮುಳುಗದಂತೆ ಎಚ್ಚರ ವಹಿಸಬೇಕು. ಇಲ್ಲಿ ಭಾವೋದ್ದೀಪನಕ್ಕೆ ರಾಗ

ಮಾತಿನಲ್ಲಿ ಕಾವ್ಯ ಕಲಿಸುವದರ ರಹಸ್ಯವಡಗಿದೆ- ಇದು ಕಾವ್ಯ ಶಿಕ್ಷಣದ ಸೂತ್ರವೆಂದರೂ ಸಲ್ಲುವದು. ಕಾವ್ಯದ ಕನ್ನಡಿಯಲ್ಲಿ ಮೂಡಿನಿಂತ ಕವಿಯು ಕಂಡ ಆ ಸೌಂದ-ರ್ಯದ ಚಿತ್ರವನ್ನೂ, ಸಂದೇಶವನ್ನೂ ಮಕ್ಕಳ ಎದು-ರಿಗೆ ಪರಿಣಾಮಕಾರಕವಾದ ರೀತಿಯಲ್ಲಿ ಇಡುವ ಕಾರ್ಯವೇ ಕಾವ್ಯ- ಶಿಕ್ಷಣದ ಅಂತಿಮ ಗುರಿಯಾಗ-ಬೇಕು. ಈ ಕೆಲಸವನ್ನು ಶಿಕ್ಷಕನು ತನ್ನದಾದ ಯಾವದೇ ವಿಧಾನದಿಂದ ಮಾಡಿದರೂ ಅದು ಸರಿಯೇ. ಯಾವ ವಿಧಾನವನ್ನು ಕೈಕೊಳ್ಳುವದರಿಂದ ಮಕ್ಕಳು ಕವನದ ಭಾವ, ಕಲ್ಪನೆ, ಆಲೋಚನೆಗಳನ್ನು ಗ್ರಹಿಸಬಲ್ಲರೋ ಅದೇ ಕಾವ್ಯ ಶಿಕ್ಷಣದ ಉತ್ತಮವಾದ ವಿಧಾನವೆಂದರೂ ಸಲ್ಲುವದು. ಈ ವಿಷಯದಲ್ಲಿ ರಸಾನುಭಾವದಿಂದ ಕವಿಯೊಡನೆ ತಲ್ಲೀನನಾದ ಶಿಕ್ಷಕನೇ ತಾನು ಪ್ರಥಮ ವಿಧಾನವೆಂದರೆ ತಪ್ಪಾಗದು. ಅಳುವ ಮಗುವನ್ನು ಎತ್ತಿ, ಮುದ್ದಾಡಿ, ರಮಿಸಿ, ರಂಜನೆಗೊಳಿಸುವ ಕಲೆಯನ್ನು ತಾಯಿಯಾದವಳಿಗೆ ಯಾರು ತಾನೆ ಕಲಿಸಿಯಾರು ? ಕಲಿಸಬಲ್ಲರು ? ಅಂತಃಕರಣದ ಅವತಾರವಾದ, ಪ್ರೇಮದ ದೇವತೆಯಾದ, ಮಗುವಿನ ಪುಣ್ಯದ ಪುಂಜವಾದ ತಾಯಿಯು, ಮಗುವನ್ನು ಸಹಾನುಭೂತಿಯ ಹೃದಯದಲ್ಲಿಟ್ಟುಕೊಂಡು, ಎದೆಯ ಹಾಲನ್ನು ಉಣಿಸಿ, ಮುದ್ದಿನ ಮಳೆಗರೆದು, ಸವಿಯಾದ ಜೋಗುಳವನ್ನು ಹೇಳಿ ಆಡಿಸುತ್ತ, ಆನಂದಪಡೆಯುತ್ತ, ಪೋಷಿ-ಸುವಂತೆ, ಕಾವ್ಯ ಶಿಕ್ಷಕನೂ ಕಲೆಯ ಮಾತೆಯಾಗಿ, ಕವಿಯ ಆನಂದವನ್ನು ಮಕ್ಕಳಿಗೆ ಉಣಬಡಿಸಿ, ಸಂತೋಷವನ್ನು ಕೊಡುತ್ತ, ಅದನ್ನೇ ಪಡೆಯುತ್ತ ಕಲಿಸಲು ಸಾಧಿಸಿದರೆ, ಈ ಕಾವ್ಯ ಶಿಕ್ಷಣದ ಕಲೆಯನ್ನು ಕರತಲಾಮಲಿಕ ಮಾಡಿಕೊಂಡತೆಯೇ ಎಂದು ಧಾರಾಳವಾಗಿ ಹೇಳಿಬಿಡಬಹುದು. ಈ ಶಿಕ್ಷಣವು ಅಷ್ಟು ಸಹಜವಾಗಿ ಅನ್ಯೋನ್ಯವಾಗಿ ಸಾಗಬೇಕು. ಸಮರಸವಾಗಿ ನಡೆಯಬೇಕು. ಶಿಕ್ಷಕನು ಕವಿಯ ಎದೆಯ ಬಡಿತಕೂ, ಮಕ್ಕಳ ಹೃದಯದ ಮಿಡಿತಕೂ ಸುವರ್ಣತಂತಿಯಾಗಬೇಕು. ಈ ಮಾತುಗಳನ್ನು ಕಾವ್ಯ ಶಿಕ್ಷಣದ ವಿಧಾನವನ್ನು ಕುರಿತು ಆಡಿದ ಸರ್ವಸಾಮಾನ್ಯವಾದ ಮಾತು-ಗಳೆಂಬುದನ್ನು ಸಹೃದಯರಾದ ಶಿಕ್ಷಕರು ಅರಿಯಬೇಕೆಂದು ಕೋರುವೆ. ಈ ಆದರ್ಶವನ್ನು ಸಾಧಿಸುವ ಶಾಸ್ತ್ರಬದ್ಧವಾದ ಕೆಲವು ವಿವರವಾದ ವಿಧಾನಗಳನ್ನು ಕಾವ್ಯ ಶಿಕ್ಷಣದ ಕಲಾವಂತರು ಹೇಳಿದ್ದುಂಟು. ಅವುಗಳನ್ನು ತಿಳಿದುಕೊಂಡು, ಆ ಮೆಟ್ಟಲುಗಳ ಮುಖಾಂತರವಾಗಿ ಸಾಗಿದರೂ, ಮೇಲಿನ ಮುಖ್ಯಾಂಶಗಳನ್ನು ಗಮನದಲ್ಲಿಟ್ಟುಕೊಂಡು ಸಾಗುವದು ಅವಶ್ಯವೆಂದು ಹೇಳಬೇಕಾಗುವದು.

ಕಾವ್ಯವನ್ನು ಕಲಿಸಲು ಮಕ್ಕಳ ಮುಂದೆ ಬರುವ ಮುಂಚೆ ಇನ್ನೊಂದು ಮಾತನ್ನು ಹೇಳುವದುಚಿತ. ಅದು ಕಾವ್ಯದ ಆಯ್ಕೆಗೆ ಸಂಬಂಧಪಟ್ಟದ್ದು. ಕವನ ಶಿಕ್ಷಕನು ಮಕ್ಕಳ ಅನುಭವದ ಎತ್ತರಬಿತ್ತರಗಳನ್ನು ಚನ್ನಾಗಿ ತಿಳಿದುಕೊಂಡು ಅವರಿಗೆ ತಕ್ಕದಾದ ಕವನವನ್ನು ಕಲಿಸಲು ತೊಡಗಬೇಕು. ಈಗ ಸದ್ಯದಲ್ಲಿ ನಮ್ಮ ಪ್ರಾಥ-ಮಿಕ ಶಾಲೆಯಲ್ಲಿ ಓದಿಸಲ್ಪಡುವ ಕ್ರಮಿಕ ಪುಸ್ತಕಗಳಲ್ಲಿ ಕೊಡಲಾದ ಕೆಲವು ಕವನಗಳನ್ನು ಅವಲೋಕಿಸಿದರೆ ಬಹಳೇ ಶೋಚನಿಯವೆನಿಸುತ್ತದೆ. ಆ ಕವನಗಳನ್ನು ಬರೆದುದು ಕವಿಗಳ ತಪ್ಪಲ್ಲ. ಅವುಗಳನ್ನು ಓದಿಸಲೆಂದು ಕ್ರಮಿಕ ಪುಸ್ತಕಗಳಲ್ಲಿ ಆಯ್ಕೆ ಮಾಡಿದವರದೆಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಬಾಳ ಮುಂಜಾವಿನಲ್ಲಿ ಆಶೋತ್ತರಗಳ ಸ್ವರ್ಣಮಯ ಸ್ವಪ್ನರಂಜಿತ ಸಂಧ್ಯಾರಾಗದ ಶುಭಸಮಯದಲ್ಲಿ ಉತ್ಸಾಹದಿಂದ ನಿಂತಿರುವ ಮಕ್ಕಳಿಗೆ ನಿರಾಶೆ, ನಿಷ್ಠುರಗಳ ಕಾರ್ಮೋಡವನ್ನು ಕಲಿಸುವ ಕವನಗಳನ್ನು ಎಂದೂ ಕಲಿಸಬಾರದೆಂದು ನನ್ನ ವೈಯಕ್ತಿಕವಾದ ಮತ. ಜೀವನದ ವಿವಿಧ ಸೌಂದರ್ಯ ಸವಿಗಳನ್ನು, ಸತ್ಯಸದ್ಗುಣಗಳನ್ನು ಎತ್ತ-ರಿಸಿ ತೋರಿಸುವ ಸುಂದರ ಕವನಗಳನ್ನು ನಮ್ಮ ಮಕ್ಕ-ಳಿಗೆ ಕಲಿಸುವದುಚಿತವೆಂದು ಹೇಳುವದು ಅತ್ಯಂತ ಅವಶ್ಯವಾಗಿದೆ. ಮಕ್ಕಳ ಅನುಭವಕ್ಕೆ ಬಾರದ, ಕಲ್ಪನೆಗೆ ನಿಲುಕದ ಪರಿಸರಕ್ಕೆ ಬಗ್ಗದ ಕವನಗಳು ಕೆಲವಿದ್ದರೆ, ನೀತಿಯ ಮುಂಡಿಗೆಗಳನ್ನುರುಳಿಸುವ ನೀರಸವಾದ, ಕಷ್ಟಸಾಧ್ಯವಾದ ಕಠಿಣವಾದ ಮಕ್ಕಳ ಅಭಿರುಚಿಯನು ಕುದುರಿಸದದ ಪದ್ಯಗಳು ಕೆಲವುಂಟು. ಬೆಳೆಯುತ್ತಿರುವ ಎಳೆಯ ಮಕ್ಕಳು ಅವುಗಳನ್ನು ಓದಿ ಆನಂದಿಸುವದೆಂತು? " ಕಾವ್ಯಂ ಆನಂದಾಯ " ಎಂಬ ಉಕ್ತಿ ಏನು ಹೇಳು

ವದು ? ಈ ತೊಂದರೆಗಳನ್ನು ಗಮನಿಸಿ ಕಾವ್ಯ ಶಿಕ್ಷಕನು ಮಕ್ಕಳ ಆಯಾ ವಯೋಗುಣಗಳ ವಿಶಿಷ್ಟವಾದ ಲಕ್ಷಣಗಳನ್ನು ಮನಗಂಡು ಅವುಗಳಿಗೆ ಅನುಗುಣವಾದ ಕವನಗಳನ್ನು ಆರಿಸಿಕೊಂಡು ಕಲಿಸಿದರೆ ಕಾವ್ಯ ಕಲಿಸುವದು ಫಲದಾಯಕವಾಗುವದು. ವಿಶೇಷವಾಗಿ ಪ್ರಾಥಮಿಕ ಶಾಲೆಯ ಮಕ್ಕಳಿಗೆ, ಅವರ ಭಾವ ಬುದ್ಧಿಗಳನ್ನು ಉದಾತ್ತಗೊಳಿಸಿ, ಅವರ ಕಲ್ಪನೆಯನ್ನು ಹಿಗ್ಗಿಸುವ, ಉತ್ಸಾಹವನ್ನು ಹೆಚ್ಚಿಸುವ ಕಥಾತ್ಮಕವಾದ, ವಸ್ತುನಿಷ್ಠವಾದ ಚಿಕ್ಕಚಿಕ್ಕ ಹಾಡುಗಬ್ಬಗಳನ್ನೂ ಭಾವಗೀತೆಗಳನ್ನೂ ಕಲಿಸುವದು ಉಚಿತವೆಂದು ಸಂಕ್ಷೇಪವಾಗಿ ಹೇಳಬಯಸುವೆ. ಅಂಥ ಉತ್ತಮ ಕವನಗಳ ಒಂದು ಸಂಗ್ರಹವನ್ನು ಪ್ರತಿಯೊಬ್ಬ ಶಿಕ್ಷಕನು ಸ್ವಂತ ತಯಾರಿಸಿಕೊಳ್ಳುವದು ಅತ್ಯಂತ ಅವಶ್ಯವೆಂದು ಹೇಳಬಹುದು. ಒಟ್ಟಾರೆ ಮಕ್ಕಳ ಭಾವವಿಕಾಸಕ್ಕೆ, ಭಾವವೋಚನೆಗೆ ಯೋಗ್ಯವಾದ ಕವನಗಳನ್ನು ಆರಿಸಿಕೊಂಡು ಕಲಿಸಿದರೆ ಕಲಿಯುವ ಮಕ್ಕಳಿಗೂ ಆನಂದ; ಕಲಿಸುವ ಶಿಕ್ಷಕನಿಗೂ ಆನಂದ. ಈ ಆನಂದದಲ್ಲಿ ಗುರು-ಶಿಷ್ಯರು ತಲ್ಲೀನರಾಗುವದು ಅವಶ್ಯವೆಂಬುದೇ ಮುಖ್ಯಾಂಶವು. ಇಲ್ಲಿ, ಪ್ರಮೋದದೊಂದಿಗೆ ಪ್ರಚೋದನೆಯೂ, ಪ್ರಯೋಜನವೂ ಉಂಟಾಗಬೇಕು.

ಕಲಿಸಲುಚಿತವಾದ ಕವನವನ್ನು ಆರಿಸಿಕೊಂಡು, ಅದರ ಅಭ್ಯಾಸವನ್ನು ಚನ್ನಾಗಿ ಮಾಡಿಕೊಂಡು, ಅದರ ಸ್ವಾರಸ್ಯವನ್ನು ಮನವಾರೆ ಸವಿದು, ಆ ಸವಿಯನ್ನು ಮಕ್ಕಳು ಸವಿಯುವಂತೆ ನೆರವಾಗಲು ಶಿಕ್ಷಕನು ಮುಂದೆ ಬಂದನಂತರ, ಮುಂದೇನು ಮಾಡುವದು ? ಎಂಬುದನ್ನು ಇದೀಗ ಸಂಕ್ಷೇಪವಾಗಿ ಆಲೋಚಿಸೋಣ. ಎಲ್ಲ ಪಾಠಗಳಲ್ಲಿಯಂತೆ ಕಾವ್ಯ ಪಾಠಕ್ಕೂ ಉಪೋದ್ಘಾತವು ಅವಶ್ಯವು. ಅದು ಕವನಕ್ಕೆ ಹಿನ್ನೆಲೆಯನ್ನು ರೂಪಿಸುವ ರೀತಿಯಿಂದ ಉದ್ಬೋಧಕವಾಗಿ ಸಾಗಬೇಕು. ಕಲಿಸತಕ್ಕ ಕವನದ ಸಂದರ್ಭ ಸನ್ನಿವೇಶಗಳನ್ನು ಸೂಚಿಸುವ ಯತ್ನ ಈ ಉಪೋದ್ಘಾತದಲ್ಲಿ ನಡೆದಿರಬೇಕು. ಅಂದರೆ, ಕವನದ ಭಾವಗ್ರಹಣಕ್ಕೆ ಅನುಕೂಲವಾದ ವಾತಾವರಣವನ್ನುಂಟು ಮಾಡಿ ಉದ್ದೇಶ ಕಥನಕ್ಕೆ ಸರಿಯಾದ ವಾತಾವರಣವನ್ನು ಅಣಿಗೊಳಿಸಬೇಕು. ಹೀಗೆ ಹರ್ಬಾರ್ಟನು ಸೂಚಿಸಿದ ಎಲ್ಲ ಮೆಟ್ಟಲುಗಳನ್ನು ಕಾವ್ಯ ಶಿಕ್ಷಣದಲ್ಲಿ ಉಪಯೋಗಿಸಬಹುದು. ಉಪೋದ್ಘಾತ, ಉದ್ದೇಶ-ಕಥನ, ಕಾವ್ಯಗಾಯನ, ಮೌನವಾಚನ, ವಿಷಯ-ವಿವೇಚನ, ಪುನರವಲೋಕನೆ, ರಸಗ್ರಹಣ, ಬಾಲಕರಿಂದ ಕಾವ್ಯಗಾಯನ, ಗೃಹಪಾಠ ಈ ಎಲ್ಲ ಮೆಟ್ಟಲುಗಳೂ ಕವನವನ್ನು ಕಲಿಸುವಾಗ ಸಾಮಾನ್ಯವಾಗಿ ಉಪಯೋಗಿಸಲ್ಪಡುವವು. ಆದರೆ ಈ ಮೆಟ್ಟಲುಗಳಿಗೆ ಕಟ್ಟುಬಿದ್ದು ಶಿಕ್ಷಕನು ರಸಾಭಾಸವಾಗದಂತೆ ದಕ್ಷತೆ ವಹಿಸಬೇಕು. ಪಾಠ ನೀರಸವಾಗದಂತೆ ನೋಡಿಕೊಳ್ಳಬೇಕು. ಮೆಟ್ಟಲುಗಳು ಒಂದರ ಹಿಂದೊಂದು ಸಹಜವಾಗಿ ಮೂಡಿಬರಬೇಕು. ಅವು ಕಾವ್ಯದೇವಿಯ ದರ್ಶನಕ್ಕೆಂದು ದಾಟುವಾಗಿನ ವಿವಿಧವಾದ ಬಾಗಿಲುಗಳಾಗಬೇಕೇ ವಿನಃ ಅವುಗಳೇ ಮುಖ್ಯವಲ್ಲ. ಮುಖ್ಯೋದ್ದೇಶ ಕಾವ್ಯದೇವಿಯ ಭಾವಜ್ಯೋತಿಯನ್ನು ಕಂಡು ಆನಂದ ಹೊಂದುವದೆಂಬುದನ್ನು ಮರೆಯಕೂಡದು. ಮುಖ್ಯವಾಗಿ ಆ ಗರ್ಭಗುಡಿಯ ಕಡೆಗೆ ಧಾವಿಸಿ, ಅಲ್ಲಿ ಪ್ರಜ್ವಲಿಸುವ ಭಾವದೇವಿಯ ದರ್ಶನದಿಂದ ಪುನೀತರಾಗಬೇಕು. ಆದುದರಿಂದ ಒಂದೊಂದು ಮೆಟ್ಟಲು ಆ ಗರ್ಭಗುಡಿಯ ಹೆಬ್ಬಾಗಿಲಿಗೆ ಅರ್ಥಪೂರ್ಣವಾದ ಸೋಪಾನವಾಗುವಂತೆ ಶಿಕ್ಷಕನು, ಮಕ್ಕಳನ್ನು ಕ್ರಮೇಣ ಮುಖ್ಯಗುರಿಯ ಕಡೆಗೆ ಕರೆದೊಯ್ಯಬೇಕು. ಕಾವ್ಯದದಿವ್ಯ 'ದರ್ಶನ'ದಿಂದ ಬಾಲಕರು ಆನಂದ ಪುಲಕಿತರಾಗುವಂತಾಗಬೇಕು.

ಉದ್ದೇಶಕಥನವು ಬಾಲಕರ ಕುತೂಹಲವನ್ನು ಕೆರಳಿಸಿ ಭಾವಗ್ರಹಣಕ್ಕೆ ಅವರ ಹೃದಯರಂಗವನ್ನು ಹದಗೊಳಿಸಬೇಕು. ಅರಳಲಿರುವ ಪುಷ್ಪದ ಸುತ್ತಲೂ ಪ್ರದಕ್ಷಿಣೆ ಹಾಕುವ ತುಂಬಿಯಂತೆ, ಮಕ್ಕಳು ಕವನವನ್ನು ಕೇಳುವದಕ್ಕೆ ಕುತೂಹಲದಿಂದ ನಿರೀಕ್ಷಿಸಬೇಕು. ಆ ಸಮಯವನ್ನರಿತು ಶಿಕ್ಷಕನು ಕವನವನ್ನು ಸರಾಗವಾಗಿ, ಸಾವಕಾಶವಾಗಿ, ಉಚಿತವಾದ ಸಾಭಿನಯದಿಂದ ಭಾವ ಬಿಂಬಿಸುವಂತೆ ಹೇಳಬೇಕು. ಸರಾಗವಾಗಿ ಅಂದರೆ ಕೇವಲ ರಾಗದ ಆಲಾಪದಿಂದಲ್ಲ. ರಾಗದ ಆಲಾಪದಲ್ಲಿ ಕವನದ ಜೀವವಾದ ಭಾವ ಮುಳುಗದಂತೆ ಎಚ್ಚರ ವಹಿಸಬೇಕು. ಇಲ್ಲಿ ಭಾವೋದ್ದೀಪನಕ್ಕೆ ರಾಗ

ನೆರವಾಗುವಂತಿದ್ದರೆ ಒಳ್ಳೆಯದು. ನಾದಮಾಧುರ್ಯದೊಂದಿಗೆ ಅವತರಿಸಿಬಂದ ಭಾವಸೌಂದರ್ಯವು ಬಾಲಕರ ಹೃದಯ ಮೊಗ್ಗೆಗಳನ್ನು ಅರಳಿಸಿ, ಕವನದ ಸ್ವಾರಸ್ಯವನ್ನೂ, ಸೊಬಗನ್ನೂ, ಚಿತ್ರವನ್ನೂ ಮನದಲ್ಲಿ ಬಿಂಬಿಸುವಂತೆ, ಶಿಕ್ಷಕನ ಈ ಕಾವ್ಯ ಗಾಯನವು ಪರಿಣಾಮಕಾರಿಯಾಗಬೇಕು. ಇದರಿಂದ ಶಿಕ್ಷಕನ ಅರ್ಧ ಕೆಲಸವು ಸಾಧಿಸಿದಂತೆಯೇ ಎಂದು ಹೇಳಬಹುದು. ಭಾವಕ್ಕೆ ತಕ್ಕ ರಾಗದ ಹೊಂದಿಕೆಯಾಗುವಂತೆ ಹಾಡಿದಲ್ಲದೆ, ಕವನದ ಭಾವ ಬಾಲಕರ ಮನಂಬೊಗಲಾರದೆಂದು ಧಾರಾಳವಾಗಿ ಹೇಳಬಹುದು. ಈ ಕಾವ್ಯಗಾಯನದಿಂದ ಕವನದ ಭಾವಲೋಕ ತೆರೆಯುವದು. ಅಲ್ಲಿ ಹುದುಗಿದ ಸೌಂದರ್ಯ ಮೋಹಕವಾದ ಜೀವನದ ಚಿತ್ರ ಮಕ್ಕಳ ಒರೆಗಣ್ಣಿಗೆ ಭಾವದ ಬಣ್ಣ ಬಣ್ಣಗಳಿಂದ ಬಗೆಬಗೆಯಾಗಿ ಕಂಗೊಳಿಸುವದು. ಕವನದಲ್ಲಿ ಅಡಕವಾದ ಅನುಭವದ ಸ್ಥೂಲವಾದ ಪರಿಚಯದಿಂದ ಕವಿಯು ಕಂಡ ತತ್ವದರ್ಶನವೂ ಕೇಳುವವರಿಗಾಗುವದು ಖಂಡಿತವೆಂದು ಹೇಳಬಹುದು. ಆದುದರಿಂದ ಕಾವ್ಯಗಾಯನದ ಈ ಮೆಟ್ಟಲು ಕವನ ಶಿಕ್ಷಣದಲ್ಲಿ ಅತ್ಯಂತ ಮಹತ್ವದ್ದೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಸರಾಗವಾಗಿ ಕಾವ್ಯಗಾಯನವನ್ನು ಮಾಡಲು ಅರ್ಹನಾದ ಶಿಕ್ಷಕನು ಮಾತ್ರ ಆದರ್ಶ ಕಾವ ಶಿಕ್ಷಕನಾಗಬಲ್ಲನೆಂದು ಹೇಳಲು ಹಿಂಜರಿಯಬೇಕಾಗಿಲ್ಲ. ಆದರೆ ಹೀಗೆ ಹಾಡುವದನ್ನು ಎಲ್ಲ ಶಿಕ್ಷಕರು ಮಾಡಬಲ್ಲರೇ? ಎಂಬ ಪ್ರಶ್ನೆ ಬರುತ್ತದೆ. ಸರಾಗವಾಗಿ ಕಾವ್ಯಗಾಯನ ಮಾಡುವ ಕಂಠವನ್ನು ಪಡೆಯದಿದ್ದ ಶಿಕ್ಷಕನು ನಿಜವಾಗಿ ಅಷ್ಟು ಯಶಸ್ವಿಯಾಗಲಾರನು. ಆದರೂ ಕವನವನ್ನು ಭಾವವಕ್ತವಾಗುವಂತಹ ರೀತಿಯಿಂದ ಪರಿಣಾಮಕಾರಕವಾಗಿ ಓದುವ ಕಲೆಯನ್ನಾದರೂ ಶಿಕ್ಷಕನು ಸಾಧಿಸತಕ್ಕದ್ದು. ಅಥವಾ ಸಾಧವಿಲ್ಲದ ಪಕ್ಷದಲ್ಲಿ ಅಂಥ ಶಿಕ್ಷಕನು ಕವನವನ್ನು ಕಲಿಸುವ ಕಾರ್ಯದಲ್ಲಿ ತನ್ನ ಸೋಲನ್ನೊಪ್ಪಬೇಕಾದೀತು.

ಕಾವ್ಯಗಾಯನದಿಂದ ಉತ್ತೇಜನಗೊಂಡು, ಆನಂದಭರಿತನಾದ ಬಾಲಕನು ಕವನವನ್ನು ತನ್ನಷ್ಟಕ್ಕೆ ತಾನೇ ಮೌನವಾಗಿ ಓದಿಕೊಳ್ಳುವಂತೆ ಮೌನವಾಚನ ಕೊಡಬಹುದು. ಆದರೆ, ಅದು ವೇಳೆಯ ಅಪವ್ಯಯವಾಗದಂತೆ ನೋಡಿಕೊಳ್ಳಬೇಕು. ಈ ಮೌನವಾಚನಕ್ಕೆ ತುಸು ಪ್ರೌಢ ಬಾಲಕರೇ ಯೋಗ್ಯರೆಂದು ಹೇಳಬಹುದು. ತೀರ ಕೆಳಗಿನ ವರ್ಗಗಳಿಗೆ ಈ ಮೌನವಾಚನದ ಉಪಯೋಗ ಅಷ್ಟು ಆಗಲಿಕ್ಕಿಲ್ಲ. ಯಾಕಂದರೆ ಈ ಮೆಟ್ಟಿನಲ್ಲಿ ಬಾಲಕರು ಕೇಂದ್ರಭಾವವನ್ನು ಗ್ರಹಿಸಲು ಸಮರ್ಥರಾಗಿರಬೇಕು. ಕವಿಯು ತಾನು ಮೆಚ್ಚಿದ ಭಾವಚಿಂತಾರತ್ನಗಳನ್ನು ಅನುಭವದ ತಳಕ್ಕೆ ಮುಳುಗಿ ತಂದು, ತನ್ನ ಈ ಕವನದ ತಟ್ಟೆಯಲ್ಲಿಟ್ಟು ತೋರಿಸಿರುತ್ತಾನೆ. ಈ ಭಾವ ಚಿಂತಾರತ್ನಗಳು ಬಾಲಕರ ಎದುರಿಗೆ ಎರಚಲ್ಪಟ್ಟನಂತರ ಅವರು ತಮ್ಮ ತಮ್ಮ ಅಭಿರುಚಿಗನುಸಾರವಾಗಿ, ತಮಗೆ ಬೇಕಾದ ಬಣ್ಣ ಬಣ್ಣದ ರತ್ನಗಳನಷ್ಟೇ ಆರಿಸಿಕೊಂಡು ಆನಂದಿಸುವಂತೆ, ಪ್ರೋತ್ಸಾಹ ನೀಡುವದನ್ನು ಕುರಿತು ಈ ಮೌನವಾಚನವಿರುತ್ತದೆ. ಇಲ್ಲಿ ಬಾಲಕರ ಸ್ವಂತ ಪ್ರಯತ್ನಕ್ಕೆ ಅವಕಾಶ ಮಾಡಿಕೊಡಬೇಕೆಂಬುದೇ ಮುಖ್ಯ. ಕವನದ ಸ್ವಾರಸ್ಯವನ್ನು ಸವಿಯಲು ಬಾಲಕರು ಪ್ರಾಮಾಣಿಕವಾದ ಪ್ರಯತವನ್ನು ಮಾಡುವಂತಾದರೆ, ಅವರಿಗೆ ಅದರಿಂದ ಹೆಚ್ಚಾದ ಆನಂದವಾಗುವದು. ಈ ಮೌನವಾಚನದ ಮೆಟ್ಟಲನ್ನು ಶಿಕ್ಷಕರು ಸಮಯೋಚಿತವಾಗಿ ಉಪಯೋಗಿಸಕೊಳ್ಳಬಹುದು.

ಅನಂತರ ಬರುವದು ವಿಷಯ ವಿವೇಚನೆ. ಈ ವಿಭಾಗದಲ್ಲಿ ಬಾಲಕರು ಕವನದ ಸಂಪೂರ್ಣವಾದ ಭಾವಗ್ರಹಣವನ್ನು ಮಾಡುವಂತೆ ಶಿಕ್ಷಕರು ಪ್ರಶ್ನೆಗಳ ಮೂಲಕ, ವಿವರಣೆ, ಉದಾಹರಣೆ, ಚರ್ಚೆಗಳ ಮೂಲಕ ಕವನದ ಸ್ವಾರಸ್ಯವೂ ಸೌಂದರ್ಯವೂ ಬಾಲಕರಿಗೆ ಮನದಟ್ಟಾಗುವಂತೆ ನೋಡಿಕೊಳ್ಳಬೇಕು. ಕವನದ ಸ್ಥೂಲವಾದ ಚಿತ್ರವನ್ನು ಗ್ರಹಿಸಿದ ಬಾಲಕರಿಗೆ ಅದರ ವಿವರವಾದ ಪರಿಚಯವನ್ನು ಮಾಡಿಕೊಟ್ಟು ಕವನದ ಭಾವಸೌಂದರ್ಯ, ಆ ಸೌಂದರ್ಯ ದರ್ಶನಕ್ಕೆ ಬೇಕಾದ ಭಾಷಾ ಸೌಂದರ್ಯ ಮೊದಲಾದವುಗಳನ್ನು ಮನನ ಮಾಡಿಕೊಟ್ಟು, ಕವನದ ರಸಾನುಭವವಾಗುವಂತೆ ಯತ್ನಿಸುವದು ಮುಖ್ಯವಾದುದು. ಶಿಕ್ಷಕನು ಕೇವಲ ಮಾರ್ಗದರ್ಶನ ಮಾಡುತ್ತ, ಬಾಲಕರೇ ಕವ.

ನದ ಚಲುವನ್ನು ಅನುಭವಿಸುವಂತೆ ಯಾವಾಗಲೂ ಪ್ರಯತ್ನಿಸಬೇಕು. ಅಸ್ಪಷ್ಟವಾದ ಭಾವವನ್ನು ಸ್ಫುಟ-ಗೊಳಿಸಿ, ಅಪೂರ್ಣವಾದ ಚಿತ್ರಕ್ಕೆ ಅವಶ್ಯವಾದಲ್ಲಿ ಬಣ್ಣವನ್ನು ಸೇರಿಸಿ, ಅದರಅಂದವು ಅರಳುವಂತೆ ಪೂರ್ಣ-ಗೊಳಿಸಿ, ತಿಳಿದುಕೊಳ್ಳಲು ಕಠಿಣವಾದ ಅರ್ಥವನ್ನು ಬಿಡಿಸಿ, ಬಾಲಕರು ಕವನದ ಆನಂದವನ್ನೂ ಆಲೋಚನೆಯನ್ನೂ ಅನುಭವಿಸುವಂತೆ ಯತ್ನಿಸಬೇಕು. ವಿದ್ಯಾರ್ಥಿಗಳ ಅಂತರಂಗದ ಮೇಲೊಂದು ವಿಶೇಷವಾದ, ಉದಾತ್ತವಾದ, ಶಾಶ್ವತವಾದ ಪರಿಣಾಮವಾಗುವಂತೆ ಮಾಡುವದೇ ಕವನ ಕಲಿಸುವದರ ಧ್ಯೇಯವಾಗಿದ್ದು, ಈ ಧ್ಯೇಯವು ಈ ವಿಷಯವಿವೇಚನೆಯ ಮೆಟ್ಟಿನಲ್ಲಿ ಸಿದ್ಧಿಸಬೇಕು. ಬಾಲಕರುಆನಂದ ಪುಲಕಿತರಾಗಬೇಕು. ಅವರ ಮೊಗದ ಕನ್ನಡಿಯಲ್ಲಿ ಈ ಆನಂದ ಪ್ರತಿಬಿಂಬಿತವಾಗುವದನ್ನು ಶಿಕ್ಷಕನು ನೋಡಿ ತೃಪ್ತನಾಗಬೇಕು.

ಹೀಗೆ, ವಿಷಯ ವಿವೇಚನೆಯಲ್ಲಿ, ಕವನದ ರಸ-ಗ್ರಹಣದಲ್ಲಿ ಮಗ್ನರಾದ ಬಾಲಕರು ಒಂದು ಅಪೂರ್ವವಾದ ಆನಂದವನ್ನು ಹೊಂದಿರುತ್ತಾರೆ. ಈಗ ಮುಂದೆ ಬರುವ ಪುನರವಲೋಕನವಾಗಲಿ, ಇಲ್ಲದೆ ದೃಢೀಕರಣವಾಗಲಿ, ಮಕ್ಕಳ ಈ ಆನಂದಕ್ಕೆ ಅಡ್ಡಿಯಾಗದಂತೆ ಬರಕೂಡದು. ಈ ದೃಢೀಕರಣವು ಆನಂದದ ಸ್ಥಿರೀ-ಕರಣವಾಗುವಂತೆ, ಕವನದ ಸ್ವಾರಸ್ಯವನ್ನು ಹೆಚ್ಚಿಸಿ ನಲಿಯುವಂತೆ ಈ ಮೆಟ್ಟಲನ್ನು ಉಪಯೋಗಿಸಿ ಕೊಳ್ಳಬೇಕು. ಕವನದಲ್ಲಿ ಭಾವ ದೀಪ್ತಿಯಿಂದ ಬೆಳಗುತ್ತಿರುವ ನುಡಿಗಳನ್ನೂ, ಉದಾಹರಣೆಗಳನ್ನೂ, ಶಬ್ದಚಿತ್ರಗಳನ್ನೂ, ವಿಶಿಷ್ಟವಾದ ನುಡಿಗಳ ಬೆಡಗು-ಬೆರಗುಗಳನ್ನೂ ಕುರಿತು ಕೆಲವು ಪ್ರಶ್ನೆಗಳನ್ನು ಹಾಕಿ, ಅವುಗಳ ಬಗೆಗೆ ಮಕ್ಕಳ ಅವಧಾನವನ್ನು ಸೆಳೆಯಬಹುದು. ಇಲ್ಲವೆ, ಕವನದಲ್ಲಿ ಬಂದ ರಸವಿಶೇಷವನ್ನೂ, ಸ್ವಭಾವ ಸೌಂದರ್ಯವನ್ನೂ, ಕವಿಯ ವಿಶೇಷ ವ್ಯಕ್ತಿತ್ವವನ್ನೂ ಸ್ಪಷ್ಟೀಕರಿಸುವ ಕೆಲ ಸಂಗತಿಗಳನ್ನು ದೃಢೀಕರಿಸಬಹುದು. ಒಟ್ಟಾರೆ ಈ ಮೆಟ್ಟಿನಿಂದ ಮಕ್ಕಳ ಆನಂದಕ್ಕೆ, ರಸಾನುಭವಕ್ಕೆ ಕುಂದು ಬಾರದಂತೆ ಎಚ್ಚರಿಕೆ ವಹಿಸು-ವದು ಅತ್ಯಂತ ಮಹತ್ವದ ಸೂಚನೆಯಾಗಿದೆ.

ಕೊನೆಯದಾಗಿ. ಬಾಲಕರು ತಮ್ಮದಾದ ರೀತಿಯಲ್ಲಿ ಕವನವನ್ನು ಹೇಳುವಂತೆ ಪ್ರೋತ್ಸಾಹಿಸಬೇಕು. ಅದು ವೈಯ್ಯಕ್ತಿಕವಾಗಿ ಸಾಗಬಹುದು; ಸಾಮೂಹಿಕವಾಗಿಯೂ ನಡೆಯಬಹುದು. ಇದು ಹೆಚ್ಚಾಗಿ ಬಾಲ-ಕರ ಯೋಗ್ಯತೆಯನ್ನವಲಂಬಿಸಿದೆ. ಆನಂತರ, ಕೊನೆಗೊಮ್ಮೆ ಶಿಕ್ಷಕನು ಕವನವನ್ನು ಸರಾಗವಾಗಿ ಸಾವಕಾಶವಾಗಿ ಹೇಳುವದುತ್ತಮ. ಅರ್ಥವನ್ನೂ, ಭಾವವನ್ನೂ, ಕವನದ ಗುಣ ವಿಶೇಷಗಳನ್ನೂ ಗ್ರಹಣ ಮಾಡಿಕೊಂಡ ಬಾಲಕರು ಶಿಕ್ಷಕನ ಈ ಕೊನೆಯ ಕಾವ್ಯಗಾಯನವನ್ನು ಒಳ್ಳೇ ಆನಂದದಿಂದ ಸ್ವಾಗತಿಸುವರು. ಇದರ ಸ್ವಾರ-ಸ್ಯವನ್ನು ಆ ಸಂಗೀತ ದನಿ ನಾದದೊಂದಿಗೆ ಮೆಲಕಾಡಿಸುವರು. ಆನಂದ ಪುಲಕಿತರಾಗುವರು. ಈ ಕೊನೆಯ-ದಾದ ಕಾವ್ಯಗಾಯನದ ಭಾವಲಹರಿಯಲ್ಲಿ, ಆ ನಾದದ ಗುಂಗಿನಲ್ಲಿ ತೇಲಿ ಹಾಯಾಗಿ ಹೋಗುವರು. ಈ ನಾದ ಮಾಧುರ್ಯವು ಅವರ ಕಿವಿಯಲ್ಲಿ ಗುಂಯಿಗುಡುವಂತಾಗುವದು. ಅದು ಅವರನ್ನು ಚಿರವಾದ ಕಾವ್ಯಾನಂದದ ನಂದನವನಕ್ಕೆ ಕೈಹಿಡಿದು ಕರೆದೊಯ್ದು ಅಲ್ಲಿಯ ನಿತ್ಯನೂತನವಾದ ಅನುಪಮವಾದ ಸೌಂದರ್ಯವನ್ನೂ, ಸತ್ಯವನ್ನೂ ದಿಗ್ದರ್ಶಿಸುವದು.

ಈ ಬಗೆಯಾಗಿ, ಕವನವನ್ನು ಕಲಿಸುವಾಗ ಬಗೆ-ಬಗೆಯ ಮೆಟ್ಟಲುಗಳನ್ನು ಸಹಜವಾದ ರೀತಿಯಲ್ಲಿ ವಿನಿಯೋಗಿಸಿ, ಕವನದ ಜೀವವಾದ ಭಾವಸೌಂದ-ರ್ಯವು ಮಕ್ಕಳ ಮನದಲ್ಲಿ ಚಿರಂತನವಾದ ಸುಪರಿಣಾ-ಮವನ್ನುಂಟು ಮಾಡುವಂತೆ ನೋಡಿಕೊಳ್ಳುವದೇ ಕವನ ಶಿಕ್ಷಣದ ಮರ್ಮ. ಹಾಗೆ ಮಾಡುವದೇ ಆದರ್ಶ-ಶಿಕ್ಷಕನ ಧರ್ಮ. ಆಗ ಮಕ್ಕಳ ಭಾವಬುದ್ಧಿಗಳ ಮುದ್ದಾಗಿ ವಿಕಾಸ ಹೊಂದುವವು. ಅಂಥ ಮಕ್ಕಳ 'ಮನೆಗೆ ಮಲ್ಲಿಗೆ' ಯಾಗುವರು. ರಾಷ್ಟ್ರಕ್ಕೆ ರತ್ನಪ್ರಾಯರಾಗಿ, ಅದರ ಕೀರ್ತಿಯನ್ನು ಬೆಳಗುವರು. ಆಗ ಶಿಕ್ಷಕನ ಜೀವನ ಸಾರ್ಥಕವಾಗುವದು.

೧೦ನೆಯ ಮೊಹರಮ್‌ದ ದುರಂತ

(ಕರ್ಬಲಾದ ಹುತಾತ್ಮ)

ಲೇಖಕರು:— ಶ್ರೀ. ಹು. ಅ. ಸಿಗ್ಗಾಂವ.

' ಸತ್ಯಮೇವ ಜಯತೆ. ' ಸತ್ಯಕ್ಕೆ ಯಾವಾಗಲೂ ಜಯವು ಸಿಕ್ಕೇ ಸಿಗುವದೆಂದು ಜ್ಞಾನಿಗಳು ಹೇಳುವದುಂಟು. ಆದರೆ ಕೆಲಕಾಲದ ವರೆಗಾದರೂ ಅಸತ್ಯವು ಜಯ ಪಡೆದು ಸತ್ಯಕ್ಕೆಮರೆ ಮಾಡಿದ್ದನ್ನೂ ಕೇಳಿದ್ದೇವೆ, ನೋಡಿದ್ದೇವೆ. ಯೇಸು ಕ್ರೈಸ್ತನು ಸಿಲುಬೆಗೇರಿದ್ದು, ಸಾಕ್ರೇಟಿಸನು ವಿಷಪಾನಮಾಡಬೇಕಾಗಿ ಬಂದದ್ದು, ಮಹಾತ್ಮಾಗಾಂಧೀಜಿಯವರು ಗುಂಡಿನೇಟಿಗೆ ಆಹುತಿಯಾದದ್ದು ಇತ್ಯಾದಿ ಘಟನೆಗಳು ಮೇಲಿನ ಮಾತಿಗೆ ಉದಾಹರಣೆಗಳಾಗಿವೆ. ಇಂಥವುಗಳಲ್ಲಿ ' ಕರ್ಬಲಾದ ದುರಂತ 'ವೂ ಒಂದಾಗಿದೆ. ಅದರ ಸಂಕ್ಷೇಪವಾದ ಕತೆಯನ್ನು ಕೆಳಗೆ ಕೊಡಲಾಗಿದೆ:—

ಮುಹಮ್ಮದ ಪೈಗಂಬರರು ಜಗತ್ತಿಗೆ ನೀಡಿದ ಕಾಣಿಕೆಗಳಲ್ಲಿ ಲೋಕಸತ್ತೆ, ಸಮಾನತೆ, ಬಂಧುತ್ವ ಇವು ಮಹತ್ವವಾದವುಗಳು. ತಾವು ಇರುವ ವರೆಗೆ ಇವುಗಳನ್ನು ಅಕ್ಷರಶಃ ಪಾಲಿಸಿದರಲ್ಲದೆ ತಮ್ಮ ಅನುಯಾಯಿಗಳೂ ಪಾಲಿಸುವಂತೆ ಬೋಧಿಸಿದರು. ಇವುಗಳಿಂದಲೇ ಸಮಾಜವು ಭವ್ರವಾಗಿ ಉಳಿಯುವದೆಂದು ಈತತ್ವಗಳಿಗೆ ಹೆಚ್ಚಿನ ಸ್ಥಾನ ಕೊಟ್ಟರು. ತತ್ಪರಿಣಾಮವಾಗಿ ಬೇಕಾದವನು ಮನಃ ಶುದ್ಧಿ, ಜ್ಞಾನ, ನಿಷ್ಠೆ, ಆಚಾರ ವಿಚಾರಗಳಿಂದ ಸಮಾಜದಲ್ಲಿ ಶ್ರೇಷ್ಠನೆನಿಸಿಕೊಳ್ಳಬಹುದು. ಧಾರ್ಮಿಕ ಕ್ಷೇತ್ರದಲ್ಲಿ ಬೇಕಾದ ಉಚ್ಚ ಪೀಠವನ್ನಾದರೂ ಏರಬಹುದು. ವಂಶಪರಂಪರೆಗಿಂತಲೂ ಅಂತಃಶಕ್ತಿ, ವ್ಯಕ್ತಿತ್ವಗಳಿಗೆ ಇಸ್ಲಾಂದಲ್ಲಿ ಹೆಚ್ಚು ಪ್ರಾಧಾನ್ಯ. ಮುಹಮ್ಮದರು ಇರುವ ವರೆಗೆ ಅರಸೊತ್ತಿಗೆಯನ್ನು ಧಿಕ್ಕರಿಸಿ ಧರ್ಮಗುರುವಾಗಿಯೇ ತಮ್ಮ ಅನುಯಾಯಿಗಳ ಮಾರ್ಗದರ್ಶನ ಮಾಡಿದರು.

ಅವರ ತರುವಾಯ ಅವರು ಹಾಕಿಕೊಟ್ಟ ಪರಂಪರೆಗೆ ಅನುಗುಣವಾಗಿ ಒಬ್ಬ ಧರ್ಮಗುರು ಬೇಕಾದನು. ಈ ಧರ್ಮಗುರುವನ್ನು ಸರ್ವಾನುಮತದಿಂದ ಸರ್ವಗುಣ ಸಂಪನ್ನನಾದವನಿಗೆ ಆರಿಸಬೇಕಾಯಿತು. ಮುಹಮ್ಮದರ ಸಂಗಡ ಯಾವಾಗಲೂ ಇದ್ದು ಅವರ ಆಚರಣೆ, ಸ್ವಭಾವ ಇತ್ಯಾದಿಗಳನ್ನು ಅರಿತು, ಅವರಂತೆಯೇ ಸಂಪನ್ನರಾದ 'ಅಬು ಬಕರ'ರನ್ನು ಜನರು ಆರಿಸಿದರು. ಇವರೇ ಮೊದಲಿನ ' ಖಲೀಫ 'ರು. ಇವರ ತರುವಾಯ ಇವರಂತೆ ಇದ್ದವರು 'ಉಮರ'ರು, ಇವರು ಎರಡನೆಯ ಖಲೀಫರಾಗಿ ಆರಿಸಲ್ಪಟ್ಟರು. ಮೂರನೆಯವರು ' ಉಸ್ಮಾನ 'ರು. ಆಮೇಲೆ ಮುಹಮ್ಮದರ ಅಳಿಯಂದಿರಾದ ' ಅಲಿ 'ಯವರು ನಾಲ್ಕನೆಯ ಖಲೀಫರಾದರು. ಇವರೆಲ್ಲರು ಆ ಕಾಲಕ್ಕೆ ಇದ್ದ ಇಸ್ಲಾಂ ಜಗತ್ತಿನ ಚುನಾವಣೆ ಸಂಘದಿಂದ ಆರಿಸಲ್ಪಟ್ಟ ಖಲೀಫರು. ಸರ್ವಮಾನ್ಯರಾಗಿ ಆರಿಸಲ್ಪಟ್ಟು, ಒಬ್ಬರ ಮರಣದ ತರುವಾಯ ಒಬ್ಬರು ಹೀಗೆ ಮೊದಲಿನ ನಾಲ್ಕು ಖಲೀಫರು ಇಸ್ಲಾಂ ಜಗತ್ತಿಗೆ ಧರ್ಮಗುರು ಆಗಿ ಕೆಲಸಮಾಡಿದರು.

ಆದರೆ ದುರ್ದೈವದಿಂದ ನಾಲ್ಕನೆಯ ಖಲೀಫರಾದ ' ಅಲಿ 'ಯವರ ತರುವಾಯ ಈ ಖಿಲಾಫತಕ್ಕಾಗಿ ಸ್ಪರ್ಧೆ ಬಿದ್ದಿತು. ' ಅಲಿ 'ಯವರ ಕಾಲದಲ್ಲಿ ಸೀರಿಯಾ ಪ್ರಾಂತದ ಗವ್ಹರನರ್‌ನಾದ ' ಮುಆವಿಯಾ ' ಈತನು ಖಲೀಫನಾಗಲು ಹವಣಿಸಿದನು. ತಾನೂ ಖಲೀಫನಾಗಲು ಯೋಗ್ಯನಿರುವೆನೆಂದು ತಿಳಿದು, ತನ್ನದೊಂದು ಪಕ್ಷವನ್ನು ನಿರ್ಮಿಸಿ, ತನ್ನನ್ನು ಖಲೀಫನೆಂದು ಆರಿಸಲು ಜನರಿಗೆ ತಿಳಿಸಹತ್ತಿದನು. ಆದರೆ ಜನಮತವು ಪರಂಪರೆಗನುಸಾರವಾಗಿ ಯೋಗ್ಯವ್ಯಕ್ತಿಯಾದ 'ಹಸನ' ಇವರನ್ನು ಆರಿಸಿತು. ಹಸನ ಈತನು ಪೈಗಂಬರರ ಮೊಮ್ಮಗನಾಗಬೇಕು, ಅಲಿಯವರ ಮಗನಾಗಬೇಕು. ಈತನನ್ನು ಪೈಗಂಬರರ ವಂಶಕ್ಕೆ ಸಂಬಂಧಿಸಿದವನೆಂದು

ಆರಿಸದೆ ಆತನ ವ್ಯಕ್ತಿತ್ವ, ಜಾಣತನ, ನಿಷ್ಠೆ, ಶ್ರದ್ಧೆಗಳಿಗಾಗಿ ಮಾತ್ರ ಆರಿಸಲಾಗಿತ್ತು. ಪ್ರತಿಸ್ಪರ್ಧಿಯಾದ ಮುಆವಿಯಾನಿಗೆ ಸೋಲಾಯಿತು. ಆದರೂ ಸಿರಿಯಾದಲ್ಲಿ ತಾನೇ ಖಲೀಫನೆಂದು ಸಾರಿದನು. ತನ್ನ ಶಕ್ತಿ ಸಾಮರ್ಥ್ಯಗಳಿಂದ ಬಹುಮತವನ್ನು ಧಿಕ್ಕರಿಸಿ, ಸ್ವಾರ್ಥಸಾಧಕರ ಒಂದು ಸಂಗಡವನ್ನು ನಿರ್ಮಿಸಿ, ಇಸ್ಲಾಂದ ಐಕ್ಯವನ್ನು ಒಡೆದನು. ಇದನ್ನು ನೋಡಿ ಸಾಧುಗಳಾದ ಹಸನರಿಗೆ ವ್ಯಸನವಾಯಿತು. ಈ ಅನೈಕ್ಯವನ್ನು ನೋಡಿ ಮರುಗಿದರು. ಪುನಃ ಐಕ್ಯವು ನೆಲೆಸುವಂತೆ ಸರ್ವವಿಧದಿಂದ ಪ್ರಯತ್ನಿಸಿದರು. ಯಾವ ಉಪಾಯಗಳು ಫಲಿಸಲಿಲ್ಲ. ಇಸ್ಲಾಂದ ಐಕ್ಯ, ಸಂಘಟನೆಗಳಿಗಾಗಿ ತಾವೇ ಸ್ವಯಂಪ್ರೇರಣೆಯಿಂದ ಖಿಲಾಫತವನ್ನು ತ್ಯಜಿಸಿ, ಮಹತ್ವಾಕಾಂಕ್ಷಿಯಾದ ಮುಆವಿಯಾಗೆ ಬಿಟ್ಟುಕೊಟ್ಟರು. ಮುಆವಿಯಾನು ಖಲೀಫನಾದನು. ಇಷ್ಟಕ್ಕೆ ಆತನು ಸುಮ್ಮನಿರಲಿಲ್ಲ. ಸಾಧು, ನಿರುಪದ್ರವಿಯಾದ ಹಸನನನ್ನು ಆತನು ವಿಷಹಾಕಿ ಕೊಲ್ಲಿಸಿದನು. ಮಹತ್ವಾಕಾಂಕ್ಷಿಗಳು ತಮ್ಮ ದಾರಿಯಲ್ಲಿ ಬರುವ, ಬರಬಹುದಾದ, ಎಲ್ಲ ಎಡರು ತೊಡರುಗಳನ್ನು ಹೇಗಾದರೂ ಏನಾದರೂ ಮಾಡಿ ಕಿತ್ತೊಗೆಯುವರಲ್ಲವೆ ? ಮುಆವಿಯಾನ ಈ ಕೃತಿಯಿಂದ ಮುಸ್ಲಿಂ ಜಗತ್ತು ನೊಂದುಕೊಂಡಿತು. ಆದರೆ ಹಸನನ ಮರಣಕ್ಕೆ ಬೇರೆ ಒಂದು ಸ್ವರೂಪಕೊಟ್ಟು ನೊಂದ ಮನಗಳನ್ನು ಸಮಾಧಾನ ಪಡಿಸಿದನು. ಮುಂದೆ ಖಲೀಫನಾಗಿ ೨೦ ವರುಷಗಳ ವರೆಗೆ ಅದ್ವಿತೀಯನಾಗಿ ಆಳಿದನು.

ತನ್ನ ಆಳಿಕೆಯಲ್ಲಿ ಮತ್ತೊಂದು ವಿಷಬೀಜವನ್ನು ಬಿತ್ತಿದನು, ತನ್ನ ತರುವಾಯ ತನ್ನ ಮಗನಾದ ಮಜೀದನಿಗೆ ಖಿಲಾಫತವು ಸಿಗುವಂತೆ ಪ್ರಯತ್ನಗಳನ್ನು ನಡೆಸಿದನು. ಮೊದಲಿನ ನಾಲ್ಕು ಖಲೀಫರ ಕಾಲದಲ್ಲಿ ಅನುಸರಿಸುತ್ತ ಬಂದ ಚುನಾವಣೆ ಪದ್ಧತಿಯನ್ನು ರದ್ದುಗೊಳಿಸಿ, ವಂಶಪರಂಪರೆಯ ಪದ್ಧತಿಯನ್ನು ಪ್ರಚಾರದಲ್ಲಿ ತರಲು ಹವಣಿಸಿದನು. ಮಜೀದನಿಗೆ ಯುವರಾಜನಂತೆ ಕಾಣಲು ತಿಳಿಸಹತ್ತಿದನು. ಈಗ ಆತನನ್ನು ಯುವರಾಜನೆಂದು ಭಾವಿಸಿದರೆ ಮುಂದಿನ ಖಲೀಫನೂ ಇವನೇ ಎಂದು ಒಪ್ಪಿಕೊಂಡತಾಗಲಿಲ್ಲವೆ ? ಅಂತೆಯೇ ಕೆಲವು ಜನರು ವಿರೋಧ ವ್ಯಕ್ತಮಾಡಹತ್ತಿದರು. ಪ್ರತಿಭಟಿಸಲು ಸಿದ್ಧರಾದರು. ಇಂಥ ವಾತಾವರಣದಲ್ಲಿ ಮುಆವಿಯಾನು ತೀರಿಕೊಂಡನು.

ಆದರೆ ಆತನ ಮಗನಾದ ' ಮಜೀದ 'ನಿಗೆ ಖಲೀಫನಾಗುವ ಹುಚ್ಚು ಹಿಡಿದೇ ಬಿಟ್ಟಿತು. ತಾನೇ ಖಲೀಫನೆಂದು ಸಾರಿದನು. ಪರಂಪರೆಯ ಸ್ಥಿತಿಯೇನು ? ಬಹುಮತದ ಸ್ಥಿತಿಯೇನು ? ಖಲೀಫನ ಚುನಾವಣೆಯಾಗಬೇಕಲ್ಲವೆ ? ಮುಆವಿಯಾನ ಮೊದಲಿನ ಕೃತಿಗಳಿಂದಲೂ, ಮಜೀದನ ದಬ್ಬಾಳಿಕೆಯ ಪರಿಣಾಮದಿಂದಲೂ, ಬೇಸರಗೊಂಡ ಜನರು ಪ್ರತಿಭಟಿಸಹತ್ತಿದರು. ಮಜೀದನಿಗೆ ಖಲೀಫನೆಂದು ಅರಬಸ್ತಾನದ ಸತ್ಯವಾದಿಗಳ ಸಂಗಡಗಳು ಒಪ್ಪಲಿಲ್ಲ. ಮುಸ್ಲಿಂ ಜನಾಂಗದಲ್ಲಿ ಪುನಃ ಇಬ್ಬಣಗಳಾದವು. ತತ್ವವಾದಿಗಳ, ಸತ್ಯವಾದಿಗಳ ಪಕ್ಷ ಒಂದು ಕಡೆಗೆ, ಮಜೀದನ ಪಕ್ಷ ಮತ್ತೊಂದು ಕಡೆಗೆ. ಹೀಗೆ ಅರಬಸ್ತಾನದಲ್ಲಿ ಅಂತಃಕಲಹ ಪ್ರಾರಂಭವಾಗುವ ಲಕ್ಷಣಗಳು ಕಾಣಹತ್ತಿದವು. ಮಜೀದನ ಹತ್ತರ ಸೈನ್ಯ, ಶಸ್ತ್ರ, ದುಡ್ಡು, ಸ್ವಾರ್ಥಸಾಧಕರ ಸಹಾಯ ಬೆಂಬಲಗಳು ಇದ್ದವು. ಸತ್ಯವಾದಿಗಳ ಕಡೆಗೆ ಸತ್ಯ ಒಂದೇ ಅಸ್ತ್ರವಾಗಿತ್ತು. ಅಂತೆಯೇ ಎಲ್ಲ ಸತ್ಯವಾದಿಗಳು ಹುಸೇನನ ಕಡೆಗೆ ತಮ್ಮ ಮುಖಂಡನಾಗಲಿಕ್ಕೆ ಆಮಂತ್ರಣಗಳನ್ನು ಕಳಿಸಹತ್ತಿದರು. ಪೈಗಂಬರರ ೨ನೇ ಮೊಮ್ಮಗ ಮತ್ತು ಅಲಿಯ ಎರಡನೇ ಮಗನಾದ ಹುಸೇನನು ಸತ್ಯವಾದಿಗಳ ಕಡೆಗೆ ಓಡಾಡುವದು ತನ್ನ ಕರ್ತವ್ಯವೆಂದು ತಿಳಿದುಕೊಂಡನು. ಯಾಕಂದರೆ ಬಾಲ್ಯಾವಸ್ಥೆಯಲ್ಲಿದ್ದ ಇಸ್ಲಾಂಕ್ಕೆ ಧಕ್ಕೆ ತಗಲುವಂಥ ಕೆಲಸಗಳು ಮುಆವಿಯಾ ಮತ್ತು ಮಜೀದರಿಂದ ಆಗುತ್ತಿರುವದನ್ನೂ, ಸತ್ಯ ಪಕ್ಷಪಾತಿಗಳಿಗೆ ಆಗುತ್ತಿದ್ದ ಅತ್ಯಾಚಾರಗಳನ್ನೂ ನೋಡುತ್ತಿದ್ದನು. ಅವನೂ ಮಜೀದನಿಗೆ ಖಲೀಫನೆಂದು ಒಪ್ಪಿಕೊಂಡಿದ್ದಿಲ್ಲ. ಆದ್ದರಿಂದ ಅವನಂತೆಯೇ ವಿರೋಧಿಸಿದವರೆಲ್ಲ ಆತನನ್ನು ತಮ್ಮ ಮುಂದಾಳಾಗಲಿಕ್ಕೆ ಕರೆಯಹತ್ತಿದರು. ಮುಸ್ಲಿಂ ಸಮಾಜದ ಸ್ಥಿತಿಯು ವಿಕೋಪಕ್ಕೆ ಹೋಗುತ್ತಿರುವದನ್ನು ಕೇಳಿ, ನೋಡಿ,

೧೦ನೆಯ ಮೊಹರಮ್‌ದ ದುರಂತ

(ಕರ್ಬಲಾದ ವೃತ್ತಾಂತ)

ಲೇಖಕರು:— ಡಾ. ಹು. ಅ. ಸಿಗ್ಗಾಂವ.

'ಸತ್ಯಮೇವ ಜಯತೆ.' ಸತ್ಯಕ್ಕೆ ಯಾವಾಗಲೂ ಜಯವು ಸಿಕ್ಕೇ ಸಿಗುವದೆಂದು ಜ್ಞಾನಿಗಳು ಹೇಳುವದುಂಟು. ಆದರೆ ಕೆಲಕಾಲದ ವರೆಗಾದರೂ ಅಸತ್ಯವು ಜಯ ಪಡೆದು ಸತ್ಯಕ್ಕೆಮುರೆ ಮಾಡಿದ್ದನ್ನೂ ಕೇಳಿದ್ದೇವೆ, ನೋಡಿದ್ದೇವೆ. ಯೇಸು ಕ್ರೈಸ್ತನು ಸಿಲುಬೆಗೇರಿದ್ದು, ಸಾಕ್ರೇಟಿಸನು ವಿಷಪಾನಮಾಡಬೇಕಾಗಿ ಬಂದದ್ದು, ಮಹಾತ್ಮಾಗಾಂಧೀಜಿಯವರು ಗುಂಡಿನೇಟಿಗೆ ಆಹುತಿಯಾದದ್ದು ಇತ್ಯಾದಿ ಘಟನೆಗಳು ಮೇಲಿನ ಮಾತಿಗೆ ಉದಾಹರಣೆಗಳಾಗಿವೆ. ಇಂಥವುಗಳಲ್ಲಿ 'ಕರ್ಬಲಾದ ದುರಂತ'ವೂ ಒಂದಾಗಿದೆ. ಅದರ ಸಂಕ್ಷೇಪವಾದ ಕತೆಯನ್ನು ಕೆಳಗೆ ಕೊಡಲಾಗಿದೆ:—

ಮುಹಮ್ಮದ ಪೈಗಂಬರರು ಜಗತ್ತಿಗೆ ನೀಡಿದ ಕಾಣಿಕೆಗಳಲ್ಲಿ ಲೋಕಸತ್ತೆ, ಸಮಾನತೆ, ಬಂಧುತ್ವ ಇವು ಮಹತ್ವವಾದವುಗಳು. ತಾವು ಇರುವ ವರೆಗೆ ಇವುಗಳನ್ನು ಅಕ್ಷರಶಃ ಪಾಲಿಸಿದರಲ್ಲದೆ ತಮ್ಮ ಅನುಯಾಯಿಗಳೂ ಪಾಲಿಸುವಂತೆ ಬೋಧಿಸಿದರು. ಇವುಗಳಿಂದಲೇ ಸಮಾಜವು ಭದ್ರವಾಗಿ ಉಳಿಯುವದೆಂದು ಈ ತತ್ವಗಳಿಗೆ ಹೆಚ್ಚಿನ ಸ್ಥಾನ ಕೊಟ್ಟರು. ತತ್ಪರಿಣಾಮವಾಗಿ ಬೇಕಾದವನು ತನ್ನ ಶ್ರದ್ಧೆ, ಜ್ಞಾನ, ನಿಷ್ಠೆ, ಆಚಾರ ವಿಚಾರಗಳಿಂದ ಸಮಾಜದಲ್ಲಿ ಶ್ರೇಷ್ಠನೆನಿಸಿಕೊಳ್ಳಬಹುದು. ಧಾರ್ಮಿಕ ಕ್ಷೇತ್ರದಲ್ಲಿ ಬೇಕಾದ ಉಚ್ಚ ಪೀಠವನ್ನಾದರೂ ಏರಬಹುದು. ವಂಶಪರಂಪರೆಗಿಂತಲೂ ಅಂತಃಶಕ್ತಿ, ವ್ಯಕ್ತಿತ್ವಗಳಿಗೆ ಇಸ್ಲಾಂದಲ್ಲಿ ಹೆಚ್ಚು ಪ್ರಾಧಾನ್ಯ. ಮುಹಮ್ಮದರು ಇರುವ ವರೆಗೆ ಅರಸೊತ್ತಿಗೆಯನ್ನು ಧಿಕ್ಕರಿಸಿ ಧರ್ಮಗುರುಗಳಾಗಿಯೇ ತಮ್ಮ ಅನುಯಾಯಿಗಳ ಮಾರ್ಗದರ್ಶನ ಮಾಡಿದರು.

ಅವರ ತರುವಾಯ ಅವರು ಹಾಕಿಕೊಟ್ಟ ಪರಂಪರೆಗೆ ಅನುಗುಣವಾಗಿ ಒಬ್ಬ ಧರ್ಮಗುರು ಬೇಕಾದನು. ಈ ಧರ್ಮಗುರುವನ್ನು ಸರ್ವಾನುಮತದಿಂದ ಸರ್ವಗುಣ ಸಂಪನ್ನನಾದವನಿಗೆ ಆರಿಸಬೇಕಾಯಿತು. ಮುಹಮ್ಮದರ ಸಂಗಡ ಯಾವಾಗಲೂ ಇದ್ದು ಅವರ ಆಚರಣೆ, ಸ್ವಭಾವ ಇತ್ಯಾದಿಗಳನ್ನು ಅರಿತು, ಅವರಂತೆಯೇ ಸಂಪನ್ನರಾದ 'ಅಬು ಬಕರ'ರನ್ನು ಜನರು ಆರಿಸಿದರು. ಇವರೇ ಮೊದಲಿನ 'ಖಲೀಫ'ರು. ಇವರ ತರುವಾಯ ಇವರಂತೆ ಇದ್ದವರು 'ಉಮರ'ರು, ಇವರು ಎರಡನೆಯ ಖಲೀಫರಾಗಿ ಆರಿಸಲ್ಪಟ್ಟರು. ಮೂರನೆಯವರು 'ಉಸ್ಮಾನ'ರು. ಆಮೇಲೆ ಮುಹಮ್ಮದರ ಅಳಿಯಂದಿರಾದ 'ಅಲಿ'ಯವರು ನಾಲ್ಕನೆಯ ಖಲೀಫರಾದರು. ಇವರೆಲ್ಲರು ಆ ಕಾಲಕ್ಕೆ ಇದ್ದ ಇಸ್ಲಾಂ ಜಗತ್ತಿನ ಚುನಾವಣೆ ಸಂಘದಿಂದ ಆರಿಸಲ್ಪಟ್ಟ ಖಲೀಫರು. ಸರ್ವಸಮ್ಮತರಾಗಿ ಆರಿಸಲ್ಪಟ್ಟು ಒಬ್ಬರ ಮರಣದ ತರುವಾಯ ಒಬ್ಬರು ಹೀಗೆ ಮೊದಲಿನ ನಾಲ್ವರು ಖಲೀಫರು ಇಸ್ಲಾಂ ಜಗತ್ತಿಗೆ ಧರ್ಮಗುರುಗಳಾಗಿ ಕೆಲಸಮಾಡಿದರು.

ಆದರೆ ದುರ್ದೈವದಿಂದ ನಾಲ್ಕನೆಯ ಖಲೀಫರಾದ 'ಅಲಿ'ಯವರ ತರುವಾಯ ಈ ವಿಲಾಪತಕ್ಕಾಗಿ ಸ್ಪರ್ಧೆ ಹತ್ತಿತು. 'ಅಲಿ'ಯವರ ಕಾಲದಲ್ಲಿ ಸೀರಿಯಾ ಪ್ರಾಂತದ ಗವ್ಹರ್ನರ್‌ನಾದ 'ಮುಆವಿಯಾ' ಈತನು ಖಲೀಫನಾಗಲು ಹವಣಿಸಿದನು. ತಾನೂ ಖಲೀಫನಾಗಲು ಯೋಗ್ಯನಿರುವೆನೆಂದು ತಿಳಿದು, ತನ್ನದೊಂದು ಪಕ್ಷವನ್ನು ನಿರ್ಮಿಸಿ, ತನ್ನನ್ನು ಖಲೀಫನೆಂದು ಆರಿಸಲು ಜನರಿಗೆ ತಿಳಿಸಹತ್ತಿದನು. ಆದರೆ ಜನಮತವು ಪರಂಪರೆಗನುಸಾರವಾಗಿ ಯೋಗ್ಯವ್ಯಕ್ತಿಯಾದ 'ಹಸನ'ಇವರನ್ನು ಆರಿಸಿತು. ಹಸನ ಈತನು ಪೈಗಂಬರರ ಮೊಮ್ಮಗನಾಗಬೇಕು, ಅಲಿಯವರ ಮಗನಾಗಬೇಕು. ಈತನನ್ನು ಪೈಗಂಬರರ ವಂಶಕ್ಕೆ ಸಂಬಂಧಿಸಿದವನೆಂದು

ಅರಿಸದೆ ಆತನ ವ್ಯಕ್ತಿತ್ವ, ಜಾಣತನ, ನಿಷ್ಠೆ, ಶ್ರದ್ಧೆಗಳಿಗಾಗಿ ಮಾತ್ರ ಆರಿಸಲಾಗಿತ್ತು. ಪ್ರತಿಸ್ಪರ್ಧಿಯಾದ ಮುಆವಿಯಾನಿಗೆ ಸೋಲಾಯಿತು. ಆದರೂ ಸಿರಿಯಾದಲ್ಲಿ ತಾನೇ ಖಲೀಫನೆಂದು ಸಾರಿದನು. ತನ್ನ ಶಕ್ತಿ ಸಾಮರ್ಥ್ಯಗಳಿಂದ ಬಹುಮತವನ್ನು ಧಿಕ್ಕರಿಸಿ, ಸ್ವಾರ್ಥಸಾಧಕರ ಒಂದು ಸಂಗಡವನ್ನು ನಿರ್ಮಿಸಿ, ಇಸ್ಲಾಂದ ಐಕ್ಯವನ್ನು ಒಡೆದನು. ಇದನ್ನು ನೋಡಿ ಸಾಧುಗಳಾದ ಹಸನರಿಗೆ ವ್ಯಸನವಾಯಿತು. ಈ ಅನೈಕ್ಯವನ್ನು ನೋಡಿ ಮರುಗಿದರು. ಪುನಃ ಐಕ್ಯವು ನೆಲೆಸುವಂತೆ ಸರ್ವವಿಧದಿಂದ ಪ್ರಯತ್ನಿಸಿದರು. ಯಾವ ಉಪಾಯಗಳು ಫಲಿಸಲಿಲ್ಲ. ಇಸ್ಲಾಂದ ಐಕ್ಯ, ಸಂಘಟನೆಗಳಿಗಾಗಿ ತಾವೇ ಸ್ವಯಂಪ್ರೇರಣೆಯಿಂದ ಖಿಲಾಫತವನ್ನು ತ್ಯಜಿಸಿ, ಮಹತ್ವಾಕಾಂಕ್ಷಿಯಾದ ಮುಆವಿಯಾಗೆ ಬಿಟ್ಟುಕೊಟ್ಟರು. ಮುಆವಿಯಾನು ಖಲೀಫನಾದನು, ಇಷ್ಟಕ್ಕೆ ಆತನು ಸುಮ್ಮನಿರಲಿಲ್ಲ. ಸಾಧು, ನಿರುಪದ್ರವಿಯಾದ ಹಸನನನ್ನು ಆತನು ವಿಷಹಾಕಿ ಕೊಲ್ಲಿಸಿದನು. ಮಹತ್ವಾಕಾಂಕ್ಷಿಗಳು ತಮ್ಮ ದಾರಿಯಲ್ಲಿ ಬರುವ, ಬರಬಹುದಾದ, ಎಲ್ಲ ಎಡರು ತೊಡರುಗಳನ್ನು ಹೇಗಾದರೂ ಏನಾದರೂ ಮಾಡಿ ಕಿತ್ತೊಗೆಯುವರಲ್ಲವೆ ? ಮುಆವಿಯಾನ ಈ ಕೃತಿಯಿಂದ ಮುಸ್ಲಿಂ ಜಗತ್ತು ನೊಂದುಕೊಂಡಿತು. ಆದರೆ ಹಸನನ ಮರಣಕ್ಕೆ ಬೇರೆ ಒಂದು ಸ್ವರೂಪಕೊಟ್ಟು ನೊಂದ ಮನಗಳನ್ನು ಸಮಾಧಾನ ಪಡಿಸಿದನು. ಮುಂದೆ ಖಲೀಫನಾಗಿ ೨೦ ವರುಷಗಳ ವರೆಗೆ ಅದ್ವಿತೀಯನಾಗಿ ಆಳಿದನು.

ತನ್ನ ಆಳಿಕೆಯಲ್ಲಿ ಮತ್ತೊಂದು ವಿಷಬೀಜವನ್ನು ಬಿತ್ತಿದನು, ತನ್ನ ತರುವಾಯ ತನ್ನ ಮಗನಾದ ಮಜೀದನಿಗೆ ಖಿಲಾಫತವು ಸಿಗುವಂತೆ ಪ್ರಯತ್ನಗಳನ್ನು ನಡೆಸಿದನು. ಮೊದಲಿನ ನಾಲ್ಕು ಖಲೀಫರ ಕಾಲದಲ್ಲಿ ಅನುಸರಿಸುತ್ತ ಬಂದ ಚುನಾವಣೆ ಪದ್ಧತಿಯನ್ನು ರದ್ದುಗೊಳಿಸಿ, ವಂಶಪರಂಪರೆಯ ಪದ್ಧತಿಯನ್ನು ಪ್ರಚಾರದಲ್ಲಿ ತರಲು ಹವಣಿಸಿದನು. ಮಜೀದನಿಗೆ ಯುವರಾಜನಂತೆ ಕಾಣಲು ತಿಳಿಸಹತ್ತಿದನು. ಈಗ ಆತನನ್ನು ಯುವರಾಜನೆಂದು ಭಾವಿಸಿದರೆ ಮುಂದಿನ ಖಲೀಫನೂ ಇವನೇ ಎಂದು ಒಪ್ಪಿಕೊಂಡತಾಗಲಿಲ್ಲವೆ ? ಅಂತೆಯೇ ಕೆಲವು ಜನರು ವಿರೋಧ ವ್ಯಕ್ತಮಾಡಹತ್ತಿದರು. ಪ್ರತಿಭಟಿಸಲು ಸಿದ್ಧರಾದರು. ಇಂಥ ವಾತಾವರಣದಲ್ಲಿ ಮುಆವಿಯಾನು ತೀರಿಕೊಂಡನು.

ಆದರೆ ಆತನ ಮಗನಾದ ' ಮಜೀದ 'ನಿಗೆ ಖಲೀಫನಾಗುವ ಹುಚ್ಚು ಹಿಡಿದೇ ಬಿಟ್ಟಿತು. ತಾನೇ ಖಲೀಫನೆಂದು ಸಾರಿದನು. ಪರಂಪರೆಯು ಸ್ಥಿತಿಯೇನು ? ಬಹುಮತದ ಸ್ಥಿತಿಯೇನು ? ಖಲೀಫನ ಚುನಾವಣೆಯಾಗಬೇಕಲ್ಲವೆ ? ಮುಆವಿಯಾನ ಮೊದಲಿನ ಕೃತಿಗಳಿಂದಲೂ, ಮಜೀದನ ದಬ್ಬಾಳಿಕೆಯ ಪರಿಣಾಮದಿಂದಲೂ, ಬೇಸರಗೊಂಡ ಜನರು ಪ್ರತಿಭಟಿಸಹತ್ತಿದರು. ಮಜೀದನಿಗೆ ಖಲೀಫನೆಂದು ಅರಬಸ್ತಾನದ ಸತ್ಯವಾದಿಗಳ ಸಂಗಡಗಳು ಒಪ್ಪಲಿಲ್ಲ. ಮುಸ್ಲಿಂ ಜನಾಂಗದಲ್ಲಿ ಪುನಃ ಇಬ್ಬಣಗಳಾದವು. ತತ್ವವಾದಿಗಳ, ಸತ್ಯವಾದಿಗಳ ಪಕ್ಷ ಒಂದು ಕಡೆಗೆ, ಮಜೀದನ ಪಕ್ಷ ಮತ್ತೊಂದು ಕಡೆಗೆ. ಹೀಗೆ ಅರಬಸ್ತಾನದಲ್ಲಿ ಅಂತಃಕಲಹ ಪ್ರಾರಂಭವಾಗುವ ಲಕ್ಷಣಗಳು ಕಾಣಹತ್ತಿದವು. ಮಜೀದನ ಹತ್ತಿರ ಸೈನ್ಯ, ಶಸ್ತ್ರ, ಮತ್ತು, ಸ್ವಾರ್ಥಸಾಧಕರ ಸಹಾಯ ಬೆಂಬಲಿಗರು ಇದ್ದವು. ಸತ್ಯವಾದಿಗಳ ಕಡೆಗೆ ಸತ್ಯ ಒಂದೇ ಅಸ್ತ್ರವಾಗಿತ್ತು. ಅಂತೆಯೇ ಎಲ್ಲ ಸತ್ಯವಾದಿಗಳು ಹುಸೇನನ ಕಡೆಗೆ ತಮ್ಮ ಮುಖಂಡನಾಗಲಿಕ್ಕೆ ಆಮಂತ್ರಣಗಳನ್ನು ಕಳಿಸಹತ್ತಿದರು. ಪೈಗಂಬರರ ೨ನೇ ಮೊಮ್ಮಗ ಮತ್ತು ಅಲಿಯ ಎರಡನೇ ಮಗನಾದ ಹುಸೇನನು ಸತ್ಯವಾದಿಗಳ ಕಡೆಗೆ ಓಡಾಡುವದು ತನ್ನ ಕರ್ತವ್ಯವೆಂದು ತಿಳಿದುಕೊಂಡನು. ಯಾಕಂದರೆ ಬಾಲ್ಯಾವಸ್ಥೆಯಲ್ಲಿದ್ದ ಇಸ್ಲಾಂಕ್ಕೆ ಧಕ್ಕೆ ತಗಲುವಂಥ ಕೆಲಸಗಳು ಮುಆವಿಯಾ ಮತ್ತು ಮಜೀದರಿಂದ ಆಗುತ್ತಿರುವದನ್ನೂ, ಸತ್ಯ ಪಕ್ಷಪಾತಿಗಳಿಗೆ ಆಗುತ್ತಿದ್ದ ಅತ್ಯಾಚಾರಗಳನ್ನೂ ನೋಡುತ್ತಿದ್ದನು. ಅವನೂ ಮಜೀದನಿಗೆ ಖಲೀಫನೆಂದು ಒಪ್ಪಿಕೊಂಡಿದ್ದಿಲ್ಲ. ಅದ್ದರಿಂದ ಅವನಂತೆಯೇ ವಿರೋಧಿಸಿದವರೆಲ್ಲ ಆತನನ್ನು ತಮ್ಮ ಮುಂದಾಳಾಗಲಿಕ್ಕೆ ಕರೆಯಹತ್ತಿದರು. ಮುಸ್ಲಿಂ ಸಮಾಜದ ಸ್ಥಿತಿಯು ವಿಕೋಪಕ್ಕೆ ಹೋಗುತ್ತಿರುವದನ್ನು ಕೇಳಿ, ನೋಡಿ,

ಹುಸೇನನಂಥ ಸತ್ಯವಾದಿಯು ಸುಮ್ಮನೆ ಹೇಗೆ ಕೂಡ್ರುವದು? ತಾನೂ ಬಹಿರಂಗವಾಗಿ ಪ್ರತಿಭಟಿಸಲಿಕ್ಕೆ ಟೊಂಕ ಕಟ್ಟಿ ನಿಂತನು. ಅಷ್ಟರಲ್ಲಿ ಕೂಫಾ ಪಟ್ಟಣಿಗರಿಂದ ಆತನಿಗೆ ಆಮಂತ್ರಣ ಬಂದೇ ಬಿಟ್ಟಿತು. ಕೂಫಾಕ್ಕೆ ಹೋಗಲು ಸಿದ್ಧನಾದನು. ಆದರೂ ಅಲ್ಲಿಗೆ ಹೋಗುವ ಪೂರ್ವದಲ್ಲಿ ತನ್ನ ಕಕ್ಕನ ಮಗನಾದ ಮುಸ್ಲಿಂ ನೆಂಬವನನ್ನು ಅಲ್ಲಿಗೆ ಕಳುಹಿ, ಅಲ್ಲಿಯ ನಿಜಸ್ಥಿತಿಯನ್ನು ತಿಳಿದುಕೊಳ್ಳಲು ಹವಣಿಸಿದನು. ಮುಸ್ಲಿಂನು ಕೂಫಾಕ್ಕೆ ತೆರಳಿದನು. ಅಲ್ಲಿಯ ಸ್ಥಿತಿಯನ್ನು ಕೂಲಂಕಷವಾಗಿ ಅಭ್ಯಸಿಸಿ, ಹುಸೇನನಿಗೆ ಬರಲಿಕ್ಕೆ ಬರೆದನು. ಹುಸೇನನು ಕೂಫಾದ ಕಡೆಗೆ ತನ್ನ ಪರಿವಾರದೊಂದಿಗೆ ಹೊರಟನು.

ಅಷ್ಟರಲ್ಲಿ ಮುಸ್ಲಿಂನು ಕೂಫಾಕ್ಕೆ ಬಂದದ್ದು, ಹುಸೇನನು ಅತ್ತ ಹೊರಟದ್ದು ಸೀರಿಯಾದಲ್ಲಿದ್ದ ಮುಜೀದನಿಗೆ ತಿಳಿಯಿತು. ಇನ್ನು ಮೇಲೆ ತನ್ನ ಅವಸ್ಥೆ ಏನಾಗುವದೋ ಎಂದು ಅಂಜಿ, ಕೂಫಾದಲ್ಲಿದ್ದ ತನ್ನ ಸರದಾರನಿಗೆ ಮುಸ್ಲಿಂನನ್ನು ಸೆರೆಹಿಡಿದು ಕೊಂದುಹಾಕಲಿಕ್ಕೂ ಹುಸೇನನು ಕೂಫಾ ಪಟ್ಟಣ ಮುಟ್ಟದಂತೆ ಮಾಡಲಿಕ್ಕೂ ಅಪ್ಪಣೆಕೊಟ್ಟನು. ಮುಸ್ಲಿಂನನ್ನು ಸೆರೆ ಹಿಡಿಯಲಾಯಿತು. ಅವನ ಇಬ್ಬರು ಚಿಕ್ಕಮಕ್ಕಳೊಂದಿಗೆ, ಪರಿಪರಿಯಿಂದ ಪೀಡಿಸಿ, ಅವನನ್ನು ಕೊಂದರು. ಈ ಸಂಗತಿಯು ಮದೀನಾ ಬಿಟ್ಟು ಹೊರಟು ದಾರಿಯಲ್ಲಿದ್ದ ಹುಸೇನನಿಗೆ ತಿಳಿಯಲೇ ಇಲ್ಲ. ಹುಸೇನನು ಕೂಫಾದ ಕಡೆಗೆ ಬಿಡಾರ ಹಾಕುತ್ತಾ ಸಾಗಿದನು. ಕೂಫಾ ಸಮೀಪಿಸುತ್ತಿರಲು ಒಂದು ಸೈನ್ಯವು ಬಂದು ಆತನನ್ನು ದಾರಿಯಲ್ಲಿ ತಡೆಯಿತು. ಅದರ ಮುಖಂಡನು ಹುಸೇನನಿಗೆ ಕೂಫಾಕ್ಕೆ ಬಾರದಿರಲೂ, ಮರಳಿ ಹೋಗಲೂ, ಆಜ್ಞಾಪಿಸಿದನು. ಸತ್ಯವಾದಿಯಾದ ಹುಸೇನನು ಬೆದರಿಕೆಗಳಿಗೆ ಬಗ್ಗಲಿಲ್ಲ. ಈತನನ್ನು ಪೀಡಿಸಲು ಆರಂಭಿಸಿದರು. ಮತ್ತೆ ಮರಳಿ ಹೋಗಲು ಹೇಳಿದರು. ಸತ್ಯಾಗ್ರಹಿಯಾದ ಹುಸೇನನು ಮುಂದಿಟ್ಟ ಹೆಜ್ಜೆಯನ್ನು ಹಿಂದೆ ಇಡುವದೆಂತು ? ಪೀಡಿಸುವದು ಹೆಚ್ಚಾಯಿತು. ಆತನಿಗೆ ಆತನ ಪರಿವಾರದವರಿಗೆ ಅನ್ನ ನೀರು ಸಿಗದಂತೆ ಮಾಡಿದರು. ಆದರೂ ಹುಸೇನನು ಧೈರ್ಯಗುಂದಲಿಲ್ಲ. ಬರೇ ೭೨ ಮಂದಿಯ ಪರಿವಾರದೊಂದಿಗೆ ಬಿಡಾರವನ್ನು ಬದಲಿಸಿ ಮತ್ತೊಂದೆಡೆಗೆ ಸಾಗಬೇಕೆಂದು ವಿಚಾರಿಸಿ, ಹೊರಟ ದಿಶೆಯನ್ನು ಬದಲಿಸಿ, ಒಂದು ದೊಡ್ಡ ಮರುಭೂಮಿಗೆ ಬಂದು ತಲುಪಿದನು. ಆ ಮರುಭೂಮಿಯೇ 'ಕರ್ಬಲಾ'ದ ಮೈದಾನು. ನೊವಲೇ ಅದು ಸಂಕಟಗಳ ಬೀಡು ಎಂದು ಹೆಸರಾಗಿತ್ತು. ಅರಬ್ಬಿ ಭಾಷೆಯಲ್ಲಿ 'ಕರ್ಬಲಾ' ಅಂದರೆ ದುಃಖ ಸಂಕಟಗಳ ಸ್ಥಾನ. ದುರ್ದೈವವು ಆತನನ್ನು ಇಲ್ಲಿಗೆ ತಂದು ಮುಟ್ಟಿಸಿತು. ಇಲ್ಲಿಯೂ ಮಜೀದನ ಸೈನ್ಯ ಬೆನ್ನು ಬಿಡಲಿಲ್ಲ. ಹುಸೇನನಿಗೆ ತನ್ನ ಅಂತ್ಯದ ಅರಿವು ಆಗಹತ್ತಿತು. ಅಂಥದರಲ್ಲಿಯೂ ಸತ್ಯವನು ಪಾಲಿಸುವದು ತನ್ನ ಕರ್ತವ್ಯವೆಂದು ತಿಳಿದು ಕೊಂಡನು. ಆಗ ಮೊಹರಮ್ ತಿಂಗಳ ೭ನೆಯ ತಾರೀಕು. ೯ನೇ ತಾರೀಕಿನವರೆಗೆ ಹಸಿವು ನೀರಡಿಕೆಗಳಿಂದ ಎಷ್ಟೋ ಸಣ್ಣ ಮಕ್ಕಳು ತೀರಿ ಹೋದವು. ಆ ಮರುಭೂಮಿಯಲ್ಲಿ ಕಣ್ಣೀರಿನ ಹೊರತು ಬೇರೆ ಯಾವ ನೀರು ಕಾಣದಾಯಿತು. ಸಾಯುವದು ಖಂಡಿತವೆಂದು ತಿಳಿಯಿತು, ಕಡೆಕಡೆಗೆ ಅತ್ತರೂ ಕಣ್ಣಿನಲ್ಲಿ ನೀರು ಬಾರದಂತಾಯಿತು. ಸಾಯುವದೇ ಖಂಡಿತವೆಂದು ತಿಳಿದ ನಂತರ ಪರಿವಾರದ ಎಲ್ಲ ಗಂಡಸರು ವೀರ ಮರಣ ಪಡೆಯಲು ನಿಶ್ಚಯಿಸಿದರು. ೯ನೆಯ ತಾರೀಕಿನ ರಾತ್ರಿ ಎಲ್ಲರೂ ಈ ನಿರ್ಣಯವನ್ನು ಕೈಕೊಂಡರು. ಚಿರಸ್ಮರಣೀಯವಾದ ಮೊಹರಮ್‌ದ ೧೦ನೆಯ ತಾರೀಕು ಉಗಮವಾಯಿತು.

ಬೆಳಗಾಗುತ್ತಲೆ ಪರಿವಾರದಲ್ಲಿದ್ದ ಗಂಡಸರೆಲ್ಲರು ಶಸ್ತ್ರಧಾರಿಗಳಾಗಿ ಒಬ್ಬಬ್ಬರೆ ವೈರಿಯ ಸೇನೆಯನ್ನು ಹೊಕ್ಕು ಎಷ್ಟೋ ಶಿರಗಳನ್ನು ಕತ್ತರಿಸಿ, ವೀರಮರಣ ಪಡೆದರು. ಹುಸೇನನ ಮಕ್ಕಳಾದ ಅಲಿ ಅಸ್ಗರ, ಮತ್ತು ಅಲಿ ಅಕ್ಬರರು ಮರಣಹೊಂದಿದರು. ಹಸನನ ಮಗನಾದ ಇಮಾಮ ಕಾಸೀಮನೂ ನಂತರ ದೀರ್ಘಕಾಲದ ವರೆಗೆ ಹೋರಾಡಿ, ಎಷ್ಟೋ ಜನರನ್ನು ತುಂಡರಿಸಿ ವೀರ ಮರಣ ಪಡೆದನು. ಈ ಪ್ರಕಾರ ಪರಿವಾರದೊಳಗಿನ ಎಲ್ಲ ಗಂಡಸರು ಒಬ್ಬರ ಹಿಂದೊಬ್ಬರಂತೆ ಮಡಿದರು. ಕಡೆಗೆ ಹುಸೇನನ ಸರತಿಯು ಬಂದಿತು. ಅಷ್ಟರಲ್ಲಿ

ಬಳಲುತ್ತಿದ್ದ ಪ್ರೀತಿಯ ಮಗುವೂ ಸತ್ತದ್ದು ಹುಸೇನನಿಗೆ ಧೈರ್ಯವನ್ನು ಸ್ಥೈರ್ಯವನ್ನು ಮುಂದುವರಿಸುವ ಅಗತ್ಯವನ್ನೂ ತೋರಿಸಿತು. ಸಾಯಲಿಕ್ಕೆ ಸಿದ್ಧನಾದ ವೀರ-ನಿಗೆ ವೇಳೆಯ ಪರಿವೆ ಎಲ್ಲಿಯದು? ಶಸ್ತ್ರಧಾರಿಯಾದನು. ಪರಿವಾರದಲ್ಲಿದ್ದ ಹೆಂಗಸರಿಗೆ ಬೀಳ್ಕೊಟ್ಟನು. ದೇವರ ಮೇಲೆ ವಿಶ್ವಾಸ ಇಡಲು ಬೋಧಿಸಿದನು. ನಿರ್ಜೀವಿಗಳಾಗಿ ಬಿದ್ದ ಸಣ್ಣ ಮಕ್ಕಳನ್ನು ಎತ್ತಿ ಮುದ್ದಾಡಿದನು. ಆ ಮೇಲೆ ಕೋಲ್ಮಿಂಚಿನಂತೆ ಮಜೀದನ ಸೈನ್ಯದ ಮೇಲೆ ಬಿದ್ದನು. ವೀರಾವೇಶದಿಂದ ಹೋರಾಡಹತ್ತಿದನು. ಎಷ್ಟೋ ಸೈನಿಕರನ್ನು ಕತ್ತರಿಸಿ ನೆಲಕ್ಕುರುಳಿಸಿದನು. ೪-೫ ದಿವಸಗಳಿಂದ ಅನ್ನ ನೀರುಗಳಿಲ್ಲ-ದಿದ್ದರೂ ಅಜಿಂಕ್ಯ ಸೈನಿಕನಂತೆ ರಣರಂಗದಲ್ಲಿ ಗರ್ಜಿ-ಸಿದನು. ಸೈನಿಕರೆಲ್ಲರೂ ಈತನ ಶೌರ್ಯ ನೋಡಿ ಬೆರಗಾದರು. ಹೇಗಾದರೂ ಈತನನ್ನು ಕೊಲ್ಲಬೇಕೆಂದು ವಿಚಾರಿಸಹತ್ತಿದರು. ಅಂದು ಶುಕ್ರವಾರ, ಮೊಹ-ರಮ್‌ದ ೧೦ನೆಯದಿನ (ಹಿಜರಿ ಶಕೆ ೬೧) ನಮಾಜಿನ ವೇಳೆಯ್ಯಾಯಿತು. ದೇವರ ಭಕ್ತರು ಎಂಥ ಪ್ರಸಂಗೆ ಇದ್ದರೂ ದೇವರನ್ನು ಆರಾಧಿಸದೆ ಬಿಡುವರೆ? ರಣ-ರಂಗದಲ್ಲಿಯೂ ಹುಸೇನನು ನಮಾಜು ಮಾಡಲು ಸಿದ್ಧನಾದನು. ನೆಲದ ಮೇಲೆ ಕುಳಿತು ದೇವರನ್ನು ಪ್ರಾರ್ಥಿಸಹತ್ತಿದನು. ಇದೇ ಯೋಗ್ಯ ಸಮಯವೆಂದು ಸೈನಿಕರು ಸಮೀಪ ಬಂದು ಆತನ ಶಿರಚ್ಛೇದ ಮಾಡಿದರು!! ಸತ್ಯಪಾಲಕನಾದ ಹುಸೇನನು ಈ ಪ್ರಕಾರ ತನ್ನ ಇಹಲೋಕ ಯಾತ್ರೆಯನ್ನು ಮುಗಿಸಿದನು! ಅಂತೆಯೇ ಆತನಿಗೆ ಕರ್ಬಲಾದ ಹುತಾತ್ಮನೆಂದು ಇಂದಿಗೂ ಆ ಪುಣ್ಯಾತ್ಮನ ಪುಣ್ಯತಿಥಿಯನ್ನು ಮೊಹರಮ್‌ದ ೧೦ನೇ ದಿನಾಂಕಕ್ಕೆ ಆಚರಿಸುವರು.

ಹೊರಬಿದ್ದಿದೆ! **ಬೆಳಕು ಕಂಡಿದೆ!!**

೫ನೆಯ ಆವೃತ್ತಿ | **ಶೈಕ್ಷಣಿಕ ಮನೋವಿಜ್ಞಾನ** | **ಪುಟ ೩೦೦**

ಬರೆದವರು : **ಡಾ| ವಿ. ಕೊ. ಜವಳಿ,** M. Ed. Ph. D. M. A. (ಕೋಲಂಬಿಯಾ)

ಬೆಲೆ: **ಎರಡು ರೂಪಾಯಿ ಮಾತ್ರ**

ಶಿಕ್ಷಣದಲ್ಲಿ ಮತ್ತು ಮನೋವಿಜ್ಞಾನದಲ್ಲಿ ಹೊಸ ಹೊಸ ಸಂಶೋಧನೆಗಳಿಂದ ಕೂಡಿದೆ ಕನ್ನಡಿಗರಿಗೆ ಮತ್ತು ವಿಶೇಷವಾಗಿ ಕನ್ನಡ ಪ್ರಾಥಮಿಕ ಶಿಕ್ಷಕರಿಗೆ ಅತ್ಯುಪಯುಕ್ತ! ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಕೈದೀವಿಗೆ ಶೈಕ್ಷಣಿಕ ಅಭ್ಯಾಸಪತ್ರಿಕೆಯ ಎಲ್ಲ ವಿಷಯಗಳೂ ಇದರಲ್ಲಿ ಬಂದಿವೆ. ತಿಳಿಯಾದ ಸುಂದರ ಶೈಲಿ! ಈ ಶೈಕ್ಷಣಿಕ ಮನೋವಿಜ್ಞಾನದ ಬಗೆಗೆ ಸ್ವತಂತ್ರವಾಗಿ ಬರೆಯಲ್ಪಟ್ಟ ೩೦೦ ಪುಟಗಳು ಮತ್ತು ೧೧ ಅಧ್ಯಾಯಗಳನ್ನೊಳಗೊಂಡ ಪುಸ್ತಕ ಕನ್ನಡದಲ್ಲಿ ಇದೊಂದೇ.

ಪುಸ್ತಕವು ಪ್ರಕಟವಾಗಿದೆ.

ಪ್ರಕಾಶಕರು :

ಆಕಳವಾಡಿ ಬುಕ್ ಡಿಪೋ, ಧಾರವಾಡ

ಅವರಿಗೆ ಬರೆದು ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ.

ಮೂಲ ಶಿಕ್ಷಣವು

ಮಗುವನ್ನು ಉದ್ಯಮದ ಸಲುವಾಗಿ ಅಣಿಗೊಳಿಸುವದು.

(ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಪ್ರಕಟವಾದ ಶ್ರೀ ಗೌರಿ ಈಶ್ವರನ್‌ವರ ಲೇಖದ ಮುಖ್ಯಾಂಶಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.)

ಸಂಗ್ರಾಹಕರು:— ಶ್ರೀ. ಎಸ್. ಎಂ. ಹಳ್ಳಿಕೇರಿ, ಬಿ. ಎ. ಡಿ. ಬಿ. ಇ.,
ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಆಧುನಿಕ ಭಾರತೀಯ ಶಿಕ್ಷಣದ ಇತಿಹಾಸದಲ್ಲಿ ಮೂಲ ಶಿಕ್ಷಣವು ಹೊಸ ಯುಗವನ್ನು ನಿರ್ಮಿಸುವ ಸಂಗತಿಯೆಂದು ಹೇಳಲಾಗುತ್ತದೆ. ಅದು ಇಲ್ಲಿಯವರೆಗೆ ಪ್ರಾರಂಭಾವಸ್ಥೆಯಲ್ಲಿದ್ದಾಗ್ಗೆ ಸಹ, ಭಾರತೀಯ ಶಿಕ್ಷಣ ಕ್ರಮದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನಾಡಲು ಈಗಾಗಲೇ ಪ್ರಾರಂಭಿಸಿದೆ.

೧೯೩೭ ನೆಯ ಇಸ್ವಿಯಲ್ಲಿ ರಾಷ್ಟ್ರೀಯ ಮೂಲ ಶಿಕ್ಷಣ ಕ್ರಮವು ಯೋಜಿಸಲ್ಪಟ್ಟು ಆಗಲೇ ಬಳಕೆಯಲ್ಲಿ ತರಲ್ಪಟ್ಟಿತು. ಪ್ರಚಲಿತ ಶಿಕ್ಷಣ ಕ್ರಮವು ಅಸಮಾಧಾನಕರವಾಗಿತ್ತೆಂಬುದು ಎಷ್ಟೋ ವರ್ಷಗಳಿಂದ ನಮಗೆ ತಿಳಿದಿತ್ತು. ಯಾಕಂದರೆ ವಿದೇಶೀಯ ಭಾಷೆಯಾದ ಇಂಗ್ಲೀಷವು ಶಿಕ್ಷಣದ ಮಾಧ್ಯಮವಾಗಿತ್ತು ಹಾಗು ಬೌದ್ಧಿಕ ಮತ್ತು ಪುಸ್ತಕೀಯ ಜ್ಞಾನಕ್ಕೇನೇ ಪ್ರಾಧಾನ್ಯತೆ ಕೊಡಲಾಗಿತ್ತು.

ಪರೀಕ್ಷೆ ಪಾಸಾಗುವ ಉದ್ದೇಶದ ಸಲುವಾಗಿಯೇ ವಿದ್ಯಾರ್ಥಿಗಳು ವಿಷಯಗಳನ್ನು ಯಾಂತ್ರಿಕವಾಗಿ ಕಲಿತರಲ್ಲದೇ ವಿಚಾರಶಕ್ತಿ ಹಾಗು ಕ್ರಿಯಾಶಕ್ತಿ ಅವರಲ್ಲಿ ಬೆಳೆದು ಬರಲಿಲ್ಲ. ಹಳೆಯ ಶಿಕ್ಷಣ ಕ್ರಮವು ಸಮಾಜದಲ್ಲಿ ಶಿಕ್ಷಿತರು ಹಾಗು ಅಶಿಕ್ಷಿತರು ಎಂಬ ಬಣಗಳನ್ನು ನಿರ್ಮಿಸಿತು. ಕಲಿತ ಜನರು ದೈಹಿಕ ಶ್ರಮದ ಸಲುವಾಗಿ ಅನಾಸ್ಥೆಯನ್ನು ತಾಳಹತ್ತಿದರು.

ಈ ಎಲ್ಲ ದೋಷಗಳನ್ನು ನಿವಾರಿಸಲು ಹಾಗು ಸಾರ್ವತ್ರಿಕ ಪುಕ್ಕಟೆಯಾದ ಕಡ್ಡಾಯದ ಶಿಕ್ಷಣ ಕೊಡಲು ಆರ್ಥಿಕವಾಗಿ ನೆರವಾಗಲು ಮೂಲ ಶಿಕ್ಷಣ ಯೋಜನೆಯು ಬಳಕೆಯಲ್ಲಿ ಬಂದಿತು.

ಏಳರಿಂದ ಹದಿನಾಲ್ಕು ವಯಸ್ಸಿನ ಎಲ್ಲ ಮಕ್ಕಳಿಗೂ ಅವರವರ ತಾಯ್ನುಡಿಯ ಮುಖಾಂತರವಾಗಿ ಪುಕ್ಕಟೆಯಾದ ಹಾಗು ಒತ್ತಾಯದ ಶಿಕ್ಷಣವನ್ನು ಕೊಡುವದೇ ಈ ಯೋಜನೆಯ ಮುಖ್ಯ ಉದ್ದೇಶ್ಯವಾಗಿದೆ. ಮಗುವಿನ ಯೋಗ್ಯತೆ ಹಾಗು ಪರಿಸ್ಥಿತಿಗೆ ಹೊಂದಿಕೆಯಾಗುವಂತಹ ಮೂಲ ಉದ್ಯೋಗವೊಂದನ್ನು ಕೇಂದ್ರವೆಂದು ಇಟ್ಟುಕೊಂಡು ಅದರ ಮುಖಾಂತರ ಶಿಕ್ಷಣವನ್ನು ಕೊಡಲಾಗುವದು. ಆರಿಸಿದ ಮೂಲೋದ್ಯೋಗ ಹಾಗು ಮಗುವಿನ ನೈಸರ್ಗಿಕ ಮತ್ತು ಸಾಮಾಜಿಕ ಅವಶ್ಯಕತೆಗಳನ್ನು ಆಧರಿಸಿಯೇ ಎಲ್ಲ ವಿಷಯಗಳನ್ನು ಕಲಿಸಬೇಕು.

ರಚನಾತ್ಮಕ

ಮೂಲೋದ್ಯೋಗಗಳ ಅಭ್ಯಾಸವು ಈ ಯೋಜನೆಯು ಜೀವಾಳವಾಗಿದೆ. ಇದರಿಂದ ಮಗುವು ಮಾಡುತ್ತ ಕಲಿಯುತ್ತಾನಲ್ಲದೆ, ಕಲಿಯುತ್ತ ಗಳಿಕೆ ಮಾಡಿ ಸ್ವಲ್ಪ ಮಟ್ಟಿಗೆ ಸ್ವಾವಲಂಬಿಯೂ ಆಗುವನು. ಸ್ವಾವಲಂಬನವು ಮುಖ್ಯ ಸಾಧ್ಯವಲ್ಲವಾದರೂ ಅದನ್ನು ಅಲಕ್ಷಿಸುವಂತೆಯೂ ಇಲ್ಲ. ಯಾಕಂದರೆ ಆರ್ಥಿಕ ಮುಗ್ಗಟ್ಟಿನ ಕಾರಣದಿಂದ ನಮ್ಮ ದೇಶದ ಅನೇಕ ಯೋಜನೆಗಳು ಮೂಲೆಗುಂಪಾಗಿವೆ.

ಈ ಯೋಜನೆಯಲ್ಲಿಯ ಮೂಲೋದ್ಯೋಗವು ದೈಹಿಕ ಶಕ್ತಿಗೆ ಪ್ರಾಶಸ್ತ್ಯ ಕೊಡುವದು; ದೇಹ, ಮನಸ್ಸುಗಳು ಕೂಡಿ ಕಾರ್ಯಮಾಡಲು ಕಲಿಯುವದು. ರಚನಾತ್ಮಕ ಉದ್ದೇಶದ ಸಲುವಾಗಿ ಮಗುವು ತನ್ನ ದೈಹಿಕ ಹಾಗು ಮಾನಸಿಕ ಶಕ್ತಿಗಳನ್ನು ಉಪಯೋಗಿಸಬಲ್ಲದು.

ಮೂಲ ಶಿಕ್ಷಣವು ಮಗುವನ್ನು

ಮೊದಲಿನ ಶಿಕ್ಷಣವು ಕೇವಲ ತಾತ್ವಿಕ ವಿವೇಚನೆಗೆ ಮಹತ್ವ ಕೊಟ್ಟಿತ್ತು; ಮೂಲ ಶಿಕ್ಷಣ ಯೋಜನೆಯಿಂದ ನಮಗೆ ಶಿಕ್ಷಣವು ಅನುಭವದ ಮುಖಾಂತರ ದೊರೆಯುವದು. ಇದರ ಪರಿಣಾಮವಾಗಿ ಶ್ರಮ ಗೌರವವು ಪುರಸ್ಕರಿಸಲ್ಪಟ್ಟು, ದೈಹಿಕ ಹಾಗು ಬೌದ್ಧಿಕ ಕಾರ್ಮಿಕರ ನಡುವಿನ ಅಂತರವು ಸಾವಕಾಶವಾಗಿ ಇಲ್ಲದಂತಾಗುವದು. ಮೂಲೋದ್ಯೋಗಗಳ ಅಭ್ಯಾಸವು ಮಕ್ಕಳಿಗೆ ಉಪಯುಕ್ತ ಉದ್ಯಮದ ತರಬೇತಿಯ ಲಾಭವನ್ನು ಒದಗಿಸುವದು

ನೂಲುವದು ಹಾಗು ನೆಯ್ಯುವದು, ಒಕ್ಕಲುತನ, ತೋಟಗಾರಿಕೆ, ಕಟ್ಟಿಗೆಯ ಕೆಲಸ ಹಾಗು ಚರ್ಮದ ಕೆಲಸ ಇವುಗಳು ಶಾಲೆಗಳಲ್ಲಿ ಕಲಿಸುತ್ತಿರುವ ಮುಖ್ಯ ಮೂಲೋದ್ಯೋಗಗಳು. ಇವುಗಳನ್ನು ಯಾಂತ್ರಿಕವಾಗಿ ಕಲಿಸಲಾಗುತ್ತಿಲ್ಲ. ಮೂಲ ಶಿಕ್ಷಣದ ಗುರಿಯು ಕೇವಲ ಕುಶಲ ಉದ್ಯಮಿಗಳನ್ನು ನಿರ್ಮಿಸುವದಿಷ್ಟೇ ಇರುವದಿಲ್ಲ; ಉದ್ಯಮ ಕಾರ್ಯದಲ್ಲಿ ದೊರೆಯುವ ಅವಕಾಶಗಳನ್ನು ಶಿಕ್ಷಣದ ಉದ್ದೇಶಕ್ಕಾಗಿ ಉಪಯೋಗಿಸುವದಾಗಿದೆ.

ಉದ್ಯಮಕ್ಕೆ ಸಂಬಂಧಿಸಿದ ಇತರ ವಿಷಯಗಳನ್ನೂ ಕಲಿಸಲಾಗುವದು. ಮಗುವಿನಲ್ಲಿ ಜ್ಞಾನವನ್ನು ತುಂಬುವದಿಷ್ಟೇ ಇರುವದಿಲ್ಲ; ಆದರೆ, ಮಗುವು ತನ್ನ ಎಲ್ಲ ಶಕ್ತಿಗಳನ್ನು ಉಪಯೋಗಿಸಲು ಕಲಿತು ಹೆಚ್ಚು ಚಟುವಟಿಕೆ ಹಾಗು ಸ್ವಾವಲಂಬನೆಯುಳ್ಳದ್ದಾಗುವದು. ಪ್ರಾರಂಭದಲ್ಲಿ ಉದ್ಯಮವಷ್ಟೇ ಸಮವಾಯದ ಕೇಂದ್ರವಾಗಿತ್ತು. ಆದರೆ, ೧೯೩೯ರಲ್ಲಿ ಪುಣೆಯಲ್ಲಿ ಜರುಗಿದ ಮೊದಲನೆಯ ಮೂಲಶಿಕ್ಷಣ ಪರಿಷತ್ತಿನ ತರುವಾಯ ಮತ್ತೆರಡು ಕೇಂದ್ರಗಳು ಅಂದರೆ ಸಾಮಾಜಿಕ ಹಾಗು ನೈಸರ್ಗಿಕ-ಸನ್ನಿವೇಶಗಳು ಜೋಡಿಸಲ್ಪಟ್ಟವು. ಈಗ ಈ ಮೂರೂ ಕೇಂದ್ರಗಳ ಸಮವಾಯದಿಂದ ಎಲ್ಲ ವಿಷಯಗಳನ್ನು ಕಲಿಸಲಾಗುತ್ತಿದೆ.

ವಿಸ್ತರಣೆ

೧೯೪೫ರಲ್ಲಿ ಸೇವಾಗ್ರಾಮದಲ್ಲಿ ಜರುಗಿದ ರಾಷ್ಟ್ರೀಯ ಶಿಕ್ಷಣ ಕಾರ್ಯಕರ್ತರ ಪರಿಷತ್ತಿನಿಂದ ಮೂಲಶಿಕ್ಷಣದ ತಿಳುವಳಿಕೆಯು ಇನ್ನಿಷ್ಟು ವಿಸ್ತರಿಸಲ್ಪಟ್ಟಿತು. ಮೊದಲು ಅದೊಂದು ಪ್ರಾಥಮಿಕ ಶಿಕ್ಷಣದ ಹೊಸ ನಮೂನೆ (ಮಾದರಿ)ಯೆಂದು ತಿಳಿಯಲ್ಪಟ್ಟಿದ್ದಿತು. ಈಗ ಅದರ ಕಾರ್ಯಕ್ಷೇತ್ರವು ಪೂರ್ವ ಮೂಲ ಶಿಕ್ಷಣ, ಮೂಲ ಶಿಕ್ಷಣೋತ್ತರ ಶಿಕ್ಷಣ ಹಾಗು ವಯಸ್ಕರ ಶಿಕ್ಷಣವನ್ನು ಒಳಗೊಂಡು, ಎಲ್ಲರಿಗೂ ಯೋಗ್ಯವಾದ ಶಿಕ್ಷಣಕ್ರಮವೆಂದು ಮನ್ನಣೆ ಹೊಂದಿತು.

ಕಾಂಗ್ರೆಸ ಪಕ್ಷದ ಬಹುಮತವಿದ್ದ ಆರು ಪ್ರಾಂತಗಳಲ್ಲಿ ಮೂಲ ಶಿಕ್ಷಣ ಯೋಜನೆಯು ೧೯೩೭ನೇ ಇಸ್ವಿಯಲ್ಲಿ ಆರಂಭವಾಯಿತು. ಕೂಡಲೇ ರಾಷ್ಟ್ರೀಯ ಸಂಸ್ಥೆಗಳು ಅದನ್ನು ಅಂಗೀಕರಿಸಿದವು. ಎರಡನೆಯ ಮಹಾಯುದ್ಧ, ಕಾಂಗ್ರೆಸ ಮಂತ್ರಿ ಮಂಡಲಗಳ ರಾಜೀನಾಮೆ ಹಾಗು ಇತರ ಕಾರಣಗಳಿಂದಾಗಿ ೧೯೪೬ನೆಯ ಇಸ್ವಿಯ ವರೆಗೆ ಈ ಯೋಜನೆಯು ಸಾಮಾನ್ಯ ಪ್ರಗತಿಯು ಮಂದವಾಗಿತ್ತು. ೧೯೪೬ರಲ್ಲಿ ಮತ್ತೆ ಕಾಂಗ್ರೆಸ್ಸು ಅಧಿಕಾರದಲ್ಲಿ ಬಂದಂದಿನಿಂದ ಈ ಯೋಜನೆಗೆ ಹೊಸ ಚೇತನವು ಸಿಕ್ಕಿತು.

ಮುಂಬಯಿ ಪ್ರಾಂತದಲ್ಲಿ ಈ ಪ್ರಯೋಗವು-ವಿಶೇಷವಾಗಿ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ-ಹೊಸರೀತಿಯ ಹುರುಪು, ಹುಮ್ಮಸಿನಿಂದ ನಡೆಸಲ್ಪಟ್ಟಿತು. ೧೯೪೭ರಲ್ಲಿ ಪಾಸಾದ ಮುಂಬಯಿ ಪ್ರಾಥಮಿಕ ಶಿಕ್ಷಣ ಕಾಯ್ದೆಯು ಎಲ್ಲ ಮಕ್ಕಳಿಗೂ ಒತ್ತಾಯದ ಶಿಕ್ಷಣವನ್ನು ಒದಗಿಸಿ ಪ್ರಾಥಮಿಕ ಶಿಕ್ಷಣದ ವಿಸ್ತಾರ ಹಾಗು ಅಭಿವೃದ್ಧಿಯನ್ನು ಸಾಧಿಸಿತು.

ತರಬೇತಿ ಹೊಂದಿದ ಇದ್ದಷ್ಟೇ ಶಿಕ್ಷಕರಿಂದ ಸಾಧ್ಯವಿದ್ದಷ್ಟು ಮೂಲ ಶಿಕ್ಷಣ ಶಾಲೆಗಳನ್ನು ತೆರೆಯಲಾಯಿತು. ಪ್ರಾಥಮಿಕ ಶಾಲೆಗಳನ್ನೂ ಪೂರ್ಣ ಮೂಲ ಶಿಕ್ಷಣ ಶಾಲೆಗಳನ್ನಾಗಿ ಮಾರ್ಪಡಿಸಲೋಸುಗ ಅವುಗಳಲ್ಲಿ ಕ್ರಮೇಣವಾಗಿ ಮೂಲೋದ್ಯೋಗವನ್ನು ಆರಂಭಿಸಲಾಯಿತು. ಆಗಲೇ ಇದ್ದ ಒಕ್ಕಲುತನದ ಒಲವಿನ ಶಾಲೆಗಳನ್ನು ಒಕ್ಕಲುತನದ ಮೂಲೋದ್ಯೋಗವನ್ನು ಕಲಿಸುವ ಮೂಲ ಶಿಕ್ಷಣ ಶಾಲೆಗಳೆಂದು ಗಣಿಸಲಾಯಿತು.

ಸಾಧಿಸಿದ ಪ್ರಗತಿ

ಕೆಳಗಿನ ಅಂಕಿ ಸಂಖ್ಯೆಗಳನ್ನು ಅವಲೋಕಿಸದಲ್ಲಿ ಮೂಲ ಶಿಕ್ಷಣದ ಪ್ರಗತಿಯನ್ನು ತಿಳಿಯಬಹುದು.

೧೯೪೯ರಲ್ಲಿ ಖಾಸಗಿ ಶಾಲೆಗಳನ್ನೊಳಗೊಂಡು ೬೧ ಮೂಲ ಶಿಕ್ಷಣ ಶಾಲೆಗಳು, ೧೯೫೧ರಲ್ಲಿ ೬೬ ಶಾಲೆಗಳು ಇದ್ದವು. ೧೯೫೨ರಲ್ಲಿ ಹೊಸ ಹೊಂದಿಕೆಯ (ಕಾಂಪ್ಯಾಕ್ಟ್) ಕ್ಷೇತ್ರಗಳಲ್ಲಿ ೯೬ ಮೂಲ ಶಿಕ್ಷಣ ಶಾಲೆಗಳನ್ನು ತೆರೆದು, ಒಟ್ಟು ಸಂಖ್ಯೆ ೧೬೭ಕ್ಕೆ ಮುಟ್ಟಿತು. ಈ ಶಾಲೆಗಳಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ ೧೯೪೭-೪೮ರಲ್ಲಿ ೮೪೩೪, ೧೯೫೦-೫೧ರಲ್ಲಿ ೧೫೭೨೧ ಹಾಗು ೧೯೫೨-೫೩ರಲ್ಲಿ ೩೦೬೮೩ ಇದ್ದಿತು.

ಉದ್ಯಮದ ಶಿಕ್ಷಣವು ಹೆಚ್ಚು ಪ್ರಾಥಮಿಕ ಶಾಲೆಗಳಲ್ಲಿ ಕಡ್ಡಾಯಿಸಲ್ಪಡಲಾಗುತ್ತಿದೆ.

ಇಷ್ಟಿದ್ದರೂ ಕೂಡ, ತರಬೇತಿ ಹೊಂದಿದ ಶಿಕ್ಷಕರ ಅಭಾವ ಹಾಗು ಸ್ವಲ್ಪ ಮಟ್ಟಿಗೆ ಸಾಧನ ಸಲಕರಣೆ, ಸ್ಥಳಾವಕಾಶದ ಅಭಾವ ಇವುಗಳಿಂದಾಗಿ ಹೊಸ ಸಮಸ್ಯೆ ತಲೆದೋರಿದೆ.

ಔದ್ಯಮಿಕ ಶಿಕ್ಷಣದ ಪ್ರಾಥಮಿಕ ಶಾಲೆಗಳ ಸಂಖ್ಯೆ ೧೯೪೭-೪೯ರಲ್ಲಿ ೧೩೧೫, ೧೯೫೦-೫೧ರಲ್ಲಿ ೨೬೭೪ ಹಾಗು ೧೯೫೨-೫೩ರಲ್ಲಿ ೨೮೦೧ ಇದ್ದಿತು. ಮಾಧ್ಯಮಿಕ ಶಾಲೆಗಳಲ್ಲಿಯೂ ಸಹ ಉದ್ಯಮವನ್ನು ಆರಂಭಿಸಲಾಗಿದ್ದು, ಅವುಗಳಲ್ಲನೇಕವುಗಳನ್ನು ಔದ್ಯಮಿಕ ಹಾಗು ತಾಂತ್ರಿಕ ಶಾಲೆಗಳೆಂದು ಪರಿವರ್ತಿಸಲಾಗುತ್ತಿದೆ.

೧೯೪೮ರವರೆಗೆ ಮೂಲ ಶಿಕ್ಷಣ ಶಾಲೆಗಳ ವಿದ್ಯಾರ್ಥಿಗಳು ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷಾರ್ಥಿಗಳಾಗಿದ್ದರು. ಆದರೆ ೧೯೪೮ರಲ್ಲಿ ಈ ವಿದ್ಯಾರ್ಥಿಗಳಿಗೋಸ್ಕರವಾಗಿ ಪ್ರತ್ಯೇಕವಾದ ಪರೀಕ್ಷೆಯೊಂದನ್ನಾರಂಭಿಸಿ ಮೂಲೋದ್ಯೋಗ, ಸಾಂಘಿಕ ಜೀವನ, ಸಮಾಜಸೇವೆ, ಆರೋಗ್ಯ ಇವೇ ಮೊದಲಾದವುಗಳನ್ನೊಳಗೊಂಡ ಪ್ರಾಯೋಗಿಕ ಕಾರ್ಯಕ್ಕೆ ಪ್ರಾಶಸ್ತ್ಯವನ್ನು ಕೊಡಲಾಯಿತು.

ಈ ಪ್ರಯೋಗದಲ್ಲಿ ಶಿಕ್ಷಕರ ತರಬೇತಿಯು ಮುಖ್ಯ ಸಮಸ್ಯೆಯಾಗಿದೆ. ಇದರ ಮೇಲೆಯೇ ಈ ಪ್ರಯೋಗದ ಯಶಾಪಯಶ. ೧೯೪೮ರಲ್ಲಿ ಕೇವಲ ಮೂರೇ ಜೀವನ ಶಿಕ್ಷಣ ಕೇಂದ್ರಗಳಲ್ಲಿ ಪ್ರಾಥಮಿಕ ಶಿಕ್ಷಕರನ್ನು ತರಬೇತು ಮಾಡಲಾಗುತ್ತಿತ್ತು. ಅವಾವುವೆಂದರೆ, ಲೋಣಿ, ಕತರಗಾಂವ ಹಾಗು ಧಾರವಾಡ ಈ ಊರುಗಳಲ್ಲಿನವು. ೧೯೪೮-೪೯ರಲ್ಲಿ ಅಹಮ್ಮದಾಬಾದ ಬೋರ್ಡಿ ಮತ್ತು ಧಾರವಾಡ ಈ ಊರುಗಳಲ್ಲಿ ಒಂದೊಂದರಂತೆ ಮೂರು ಪ್ರಾದೇಶಿಕ ಪದವೀಧರ ಜೀವನ ಶಿಕ್ಷಣ ತರಬೇತಿ ಕೇಂದ್ರಗಳನ್ನು ತೆರೆಯಲಾಯಿತು. ಎಲ್ಲ ಪ್ರಾಥಮಿಕ ತರಬೇತಿ ಸಂಸ್ಥೆಗಳು ೧೯೫೪ರಷ್ಟರೊಳಗೆ ಮೂಲ ಶಿಕ್ಷಣ ತರಬೇತಿ ಸಂಸ್ಥೆಗಳೆಂದು ಮಾರ್ಪಾಡಾಗುವಂತೆ ಒಂದು ಯೋಜನೆಯನ್ನೂ ಸಿದ್ಧಗೊಳಿಸಲಾಯಿತು.

ಮೇಲ್ಕಾಣಿಸಿದ ಉದ್ದೇಶವನ್ನು ಸಾಧಿಸಲೋಸುಗ ಎಲ್ಲ ಪ್ರಾಥಮಿಕ ತರಬೇತಿ ಸಂಸ್ಥೆಗಳಲ್ಲಿ ಉದ್ಯಮ ಶಿಕ್ಷಣವನ್ನು ಕಡ್ಡಾಯಗೊಳಿಸಲಾಯಿತಲ್ಲದೇ ಮೂಲ ಶಿಕ್ಷಣದ ತತ್ವಶಾಸ್ತ್ರ ಹಾಗು ಸಾಂಘಿಕ ಕಾರ್ಯಗಳ ಅಭ್ಯಾಸ ಕ್ರಮವನ್ನೂ ಆರಂಭಿಸಲಾಯಿತು. ೧೯೫೧ಕ್ಕೆ ೧೩ ಪ್ರಾಥಮಿಕ ತರಬೇತಿ ಸಂಸ್ಥೆಗಳು ಮೂಲ ಶಿಕ್ಷಣ ತರಬೇತಿ ಕೇಂದ್ರಗಳಾದವು. ೧೯೫೨ರಲ್ಲಿ ಈ ಸಂಖ್ಯೆ ೧೭ಕ್ಕೆ ಹಾಗು ೧೯೫೩ರಲ್ಲಿ ೨೧ಕ್ಕೆ ಮುಟ್ಟಿತು.

ಸರಕಾರವು ಗ್ರಾಮ ಪ್ರದೇಶಗಳಲ್ಲಿ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುವ ಧೋರಣೆಯನ್ನು ತಾಳಿ ರಾಜಪಿಪ್ಲಾ, ಕಡಿಯಾದ್ರಾ, ಕಥಲಾಲ, ಸಾಸ್ವಾನೆ, ಬುಧಗಾಂವ ಮೊದಲಾದೆಡೆಗಳಲ್ಲಿ ಹೊಸ ತರಬೇತಿ ಸಂಸ್ಥೆಗಳನ್ನು ತೆರೆಯಲಾಯಿತು. ಮೂಲೋದ್ಯೋಗ ಶಿಕ್ಷಣದ ಅವಶ್ಯಕತೆಗಳನ್ನು ಗಮನಿಸಿ ಹಾಗು ಅವುಗಳ ಸಿದ್ಧಿಗಾಗಿ ವಿಶೇಷ ಅಲ್ಪಾವಧಿ ತರಬೇತಿ ವರ್ಗಗಳನ್ನು ಸಂಘಟಿಸಲಾಯಿತು. ಹೀಗೆ ಐದು ಔದ್ಯಮಿಕ ತರಬೇತಿ ಕೇಂದ್ರಗಳನ್ನು ತೆರೆಯಲಾಯಿತು.

ಪ್ರಾತ್ಯಕ್ಷಿಕ ಕಾರ್ಯರಂಗ

೧೯೫೦ರಲ್ಲಿ ಪ್ರಾಥಮಿಕ ತರಬೇತಿ ಕೇಂದ್ರಗಳಲ್ಲಿ ಪುನರ್ವಿಮರ್ಶಿತ ಅಭ್ಯಾಸ ಕ್ರಮವನ್ನು ಬಳಕೆಯಲ್ಲಿ ತರಲಾಯಿತು. ಈ ಹೊಸ ಅಭ್ಯಾಸಕ್ರಮವು ಉದ್ಯಮ, ಮೂಲ ಶಿಕ್ಷಣ ಶಾಸ್ತ್ರ, ಸಮವಾಯ ಶಿಕ್ಷಣ ಕ್ರಮಗಳನ್ನಲ್ಲದೆ ಪ್ರಾತ್ಯಕ್ಷಿಕ ಕಾರ್ಯಕ್ಕೂ ಹೆಚ್ಚು ಮಹತ್ವ ಕೊಟ್ಟಿತು. ಕೆಲವು ಕಾಲೇಜುಗಳ ಅಂಗವಾಗಿ ಮೂಲ ಶಿಕ್ಷಣ ಶಾಲೆಗಳಿದ್ದು, ಇಂತಹ ಶಾಲೆಗಳಲ್ಲಿ ಕಾಲೇಜದ ವಿದ್ಯಾರ್ಥಿಗಳಿಗೆ ಸ್ವಂತ ಗಳಿಸಿದ ಜ್ಞಾನ ಹಾಗು ಅನು-

ಭವಗಳು ದೆರೊಯುವವು. ಅಲ್ಲದೆ ಅವರು ಹಳ್ಳಿಗಳಿಗೆ ಹೋಗಿ ಕಾರ್ಯಮಾಡಲು ಹುಮ್ಮಸುಳ್ಳವರಾಗುವರು. ಈ ಅಭ್ಯಾಸಕ್ರಮದಂತೆ ೧೯೩೭ರಲ್ಲಿ ಮೊದಲನೆಯ ಪರೀಕ್ಷೆಯು ಜರುಗಿ, ತಾತ್ವಿಕ ಪರೀಕ್ಷೆಯನ್ನು ತೆಗೆದು ಹಾಕಲಾಯಿತು. ಶಿಕ್ಷಕ ವಿದ್ಯಾರ್ಥಿಯ ಶಾಸ್ತ್ರೀಯ ಜ್ಞಾನದ ಪರೀಕ್ಷೆಯನ್ನು ಆತನು ವರ್ಷದಲ್ಲಿ ಮಾಡಿದ ಪ್ರಾಯೋಗಿಕ ಕಾರ್ಯದ ಆಧಾರದಿಂದಲೇ ಅಳೆಯಲಾಗುತ್ತಿತ್ತು.

ಈ ಶಿಕ್ಷಣ ಕ್ರಮದಲ್ಲಿ ಹಣದ ಸಮಸ್ಯೆ ವಿದ್ಯಾಧಿಕಾರಿಗಳ ತಲೆ ತಿನ್ನುತ್ತಿದೆಯೆಂದು ಹೇಳಬಹುದು. ಸಾದಾ ಪ್ರಾಥಮಿಕ ಶಾಲೆಗಳಿಗಿಂತ ಮೂಲ ಶಿಕ್ಷಣ ಶಾಲೆಗಳ ಶಿಕ್ಷಣವು ಹೆಚ್ಚು ವೆಚ್ಚವುಳ್ಳದ್ದಾಗಿದೆ. ಮೂಲ ಶಿಕ್ಷಣ ಶಾಲೆಗಳಲ್ಲಿ ತೊಡಗಿಸಿದ ಕಚ್ಚಾ ಮಾಲುಗಳ ಬೆಲೆಯ ಮೇಲೆ ೧೦೦ಕ್ಕೆ ೫೦ ರಂತೆ ಲಾಭ ದೊರೆಯುತ್ತದಾದರೂ, ಒಟ್ಟಿನ ಶಾಲೆಯ ಖರ್ಚು ಹೆಚ್ಚಾಗಿಯೇ ಇರುವದು. ಯಾಕಂದರೆ ಔದ್ಯಮಿಕ ಶಿಕ್ಷಣವನ್ನು ಯಶಸ್ವಿಯಾಗಿ ಕಲಿಸಬೇಕಾದರೆ ಹೇರಳವಾದ ಹಣವನ್ನು ಸಾಧನ-ಸಲಕರಣೆಗಳ ಹಾಗು ಸ್ಥಳಾವಕಾಶಗಳ ಸಲುವಾಗಿ ವಿನಿಯೋಗಿಸಲೇ ಬೇಕು.

ಇದರ ಮೇಲೆ, ಮೂಲ ಶಿಕ್ಷಣ ಶಾಲೆಗಳಲ್ಲಿ ಶಿಕ್ಷಕರ ಸಂಖ್ಯೆಯ ಪ್ರಮಾಣವೂ ಹೆಚ್ಚಿದೆ ಹಾಗು ಅವರ ವೇತನವೂ ಹೆಚ್ಚು. ಅಲ್ಲದೆ, ಮೂಲ ಶಿಕ್ಷಣ ಶಾಲೆಗಳಲ್ಲಿ ಹುಟ್ಟಿಸಿದ ವಸ್ತುಗಳನ್ನು ಮಾರಾಟ ಮಾಡಲು ಯೋಗ್ಯ ಪೇಟೆಗಳನ್ನು ದೊರಕಿಸುವದೂ ಒಂದು ಜಟಿಲ ಪ್ರಶ್ನೆಯೇ ಆಗಿದೆ.

ಮೂಲ ಶಿಕ್ಷಣದ ಹೆಚ್ಚಿನ ವೆಚ್ಚದ ಕಾರಣದಿಂದಲೇ ಅದರ ಪ್ರಗತಿಯು ಕುಂಠಿತವಾಗಿದ್ದು, ಅದನ್ನು ಸಾಧಾರಣ ಶಾಲೆಗಳ ವೆಚ್ಚದ ಮಟ್ಟಕ್ಕೆ ತರಲೋಸುಗ ಸರಕಾರವು ಬಹು ಪರಿಯಾಗಿ ಆಲೋಚಿಸುತ್ತಿದೆ.

ಕಳೆದ ಏಳು ವರ್ಷಗಳಲ್ಲಿ ಸಾಕಷ್ಟು ಕಾರ್ಯ ಮಾಡಿದೆಯಾದರೂ ಇನ್ನುಮೇಲೆ ಮಾಡಬೇಕಾದುದು ಇನ್ನೂ ಬಹಳೇ ಇದೆ. ಈ ಕ್ರಮವನ್ನು ಪ್ರಾಥಮಿಕ ಹಂತದಲ್ಲಿ ಪರಿಪೂರ್ಣ ಹಾಗು ಪರಿಶುದ್ಧಗೊಳಿಸಬೇಕಾಗಿದೆಯಲ್ಲದೆ, ಶಿಕ್ಷಣದ ಎಲ್ಲ ಅವಸ್ಥೆಗಳಲ್ಲಿ ಅದನ್ನು ಜಾರಿಗೊಳಿಸಬೇಕಾಗಿದೆ. ಹಾಗೆ ಮಾಡುವದು ಬಹು ಯೋಗ್ಯವಾದದ್ದು. ಬಹು ಸಂಖ್ಯಾಕರು ತಮ್ಮ ಉಪಜೀವನವನ್ನು ಶಾರೀರಿಕ ಶ್ರಮದಿಂದಲೇ ಸಾಗಿಸುವ ನಮ್ಮ ಭಾರತ ದೇಶಕ್ಕೆ ಮೂಲ ಶಿಕ್ಷಣವು ವಿಶೇಷವಾಗಿ ಯೋಗ್ಯವಾದದ್ದೆಂದೇ ಹೇಳಬಹುದು.

ಪುಟ ೨೮೦) **ಮೂಲ ಶಿಕ್ಷಣ** (ಬೆಲೆ: ೩-೦-೦

ಲೇಖಕರು : **ಶ್ರೀ. ಮ. ಗು. ಹಂದ್ರಾಳ,** ಬಿ. ಎ., (ಆನರ್ಸ) ಬಿ. ಟಿ.

(ಪ್ರಿನ್ಸಿಪಾಲ, ಪದವೀಧರರ ಜೀವನ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ)

ಮೂಲ ಶಿಕ್ಷಣದ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಗೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೆ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ.

ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿಪೋ, ಧಾರವಾಡ

ಭೂಮಿತಿ ಜಮಾಖರ್ಚು ಕಲಿಸುವ ಕ್ರಮ

(ಕನ್ನಡ ೭ನೆಯ ಇಯತ್ತೆಯನ್ನು ಕಲಿಸುವ ಶಿಕ್ಷಕ ಶಿಕ್ಷಕಿಯರಿಗಾಗಿ)

ಲೇಖಕರು:— ಶ್ರೀ. ವ್ಹಿ. ಎ. ಉಮರಾಣಿ, ಬಿ. ಎ. ಬಿ. ಟಿ., ಡಿ. ಬಿ. ಇ., ಧಾರವಾಡ.

ಇಪ್ಪತ್ತನೆಯ ಶತಮಾನವು ತನ್ನದೇ ಆದ ವೈಶಿಷ್ಟ್ಯಪೂರ್ಣ ರೀತಿಯಲ್ಲಿ ವೈಜ್ಞಾನಿಕ ಹಾಗೂ ತಾಂತ್ರಿಕ ಸಂಶೋಧನೆಗಳಲ್ಲಿ ಪ್ರಗತಿಯನ್ನು ಸಾಧಿಸುತ್ತ ಮುಂದುವರೆಯುತ್ತಿರವದು. ಈ ಸಂಶೋಧನೆಗಳ ಪ್ರಗತಿಯು ಗಣಿತ ಶಾಸ್ತ್ರದ ಪರಿಪೂರ್ಣತೆಯ ಮೇಲೆ ಅವಲಂಬಿಸಿರುವದು. ಇವುಗಳಲ್ಲದೆ ಇನ್ನೂ ಅನೇಕ ಮನುಷ್ಯನ ಆವಶ್ಯಕತೆಗಳ ಉತ್ಪಾದನೆ ಹಾಗೂ ವಿತರಣವು ಕೆಲಮಟ್ಟಿಗೆ ಯಾಂತ್ರಿಕ ಶಾಸ್ತ್ರದ ಮೇಲೆ ನಿಂತಿರುವದು. ಇದರ ವಿಷಯವಾಗಿ ಹೇಳುತ್ತ ಪ್ರೊ. ವ್ಹಾಸ್(Voss) ಇವರು “ ನಿಸರ್ಗದಉಪಯೋಗ ಮತ್ತು ಬೌದ್ಧಿಕ ಬೆಳವಣಿಗೆಯ ಮೇಲೆ ನಿಂತಿರುವ ಇಂದಿನ ನಮ್ಮ ಸಂಸ್ಕೃತಿಗೆ ಗಣಿತ-ಶಾಸ್ತ್ರವು ಉಗಮಸ್ಥಾನವಾಗಿರುವದು. ” ಎಂದು ಬರೆದಿರುವರು. ಇಂದು ಗಣಿತಶಾಸ್ತ್ರದ ಆಧಾರದ ಮೇಲೆ ಸಾಗಿದ ಭೂಮಾಪನ, ಸಮುದ್ರಯಾನ, ರೈಲು ಮಾರ್ಗ ಕಟ್ಟುವಿಕೆ ಮತ್ತು ಬಾನುಲಿ ಇತ್ಯಾದಿಗಳಲ್ಲಿ ಭೂಮಿತಿಗೂ ಒಂದು ವಿಶಿಷ್ಟ ಸ್ಥಾನವಿರುವದು. ಮನುಷ್ಯನ ಜೀವನದಲ್ಲಿ ಭೂಮಿತಿಯ ಜ್ಞಾನ ಅತ್ಯವಶ್ಯ ಅಂತೆಯೇ ಶಿಕ್ಷಣಕ್ರಮದಲ್ಲಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ವಿಶ್ವವಿದ್ಯಾಲಯಗಳ ದರ್ಜೆಗಳಲ್ಲಿ ಭೂಮಿತಿಗೆ ಸ್ಥಾನ ಕಲ್ಪಿಸಿ ಕೊಡಲಾಗಿದೆ. ಮನುಷ್ಯ ಜೀವಿಗೆ ಉಪಯುಕ್ತವಿರುವ ಪ್ರತಿಯೊಂದು ವಿಷಯದಲ್ಲಿ ಪ್ರಾಥಮಿಕ ಶಿಕ್ಷಣವು ಅಡಿಗಲ್ಲಾಗಿರುವದು. ಇಲ್ಲಿಯೇ ಅಂಥ ಪ್ರತಿಯೊಂದು ವಿಷಯದ ಉಗಮ. ಇಲ್ಲಿ ಸಾಧಿಸಿದ ಪ್ರಗತಿಯ ಮೇಲೆಯೇ ಪ್ರತಿಯೊಬ ವ್ಯಕ್ತಿಯ ಭವಿತವ್ಯ ನಿರ್ಮಿಸಲ್ಪಡುವದು. ಕಾರಣ ಶಿಕ್ಷಣ ಕ್ರಮದಲ್ಲಿಯು ಮೊದಲನೆಯ ಘಟ್ಟವಾದ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯ ಅಭ್ಯಾಸ ಪತ್ರಿಕೆಯಲ್ಲಿ ಭೂಮಿತಿಗೆ ಒಂದು ಮುಖ್ಯ ಸ್ಥಾನವನ್ನು ಕೊಡಲಾಗಿದೆ.

ಈ ಪರೀಕ್ಷೆಯ ಅವಶ್ಯಕವಾದ ವಿಷಯಗಳನ್ನು ೫ ಸದರಿನಲ್ಲಿ ವಿಂಗಡಿಸಲಾಗಿದೆ. ಗಣಿತ ಶಾಸ್ತ್ರವು ೨ನೆಯ ಸದರಿನಲ್ಲಿ ಬರುವದು. ಇದರಲ್ಲಿ ಅಂಕಗಣಿತ, ಭೂಮಿತಿ ಹಾಗೂ ಜಮಾಖರ್ಚು ಬರುತ್ತಿದ್ದು ಅವುಗಳಿಗೆ ಅನುಕ್ರಮವಾಗಿ ೧೦೦, ೮೦ ಮತ್ತು ೨೦ ಗುಣಗಳನ್ನಿಡಲಾಗಿದೆ. ಭಾಷೆಯ ಜೊತೆಗೆ ಗಣಿತ ಶಾಸ್ತ್ರವೂ ಮುಖ್ಯವಿಷಯವೆಂದು ಪರಿಗಣಿಸಲಾಗುತ್ತಿದೆ. ಉತ್ತೀರ್ಣನಾಗಲು ಪ್ರತಿಯೊಬ್ಬ ವಿದ್ಯಾರ್ಥಿಯು ೬೬ ಗುಣಗಳನ್ನು ಪಡೆಯಬೇಕಾಗುವದು.

ಮುಖ್ಯ ವಿಷಯಗಳಲ್ಲಿ ಒಂದಾದ ಈ ವಿಷಯವನ್ನು ಕಲಿಸಬೇಕಾದ ಶಿಕ್ಷಕರು ಅಭ್ಯಾಸ ಪತ್ರಿಕೆಯ ಸಂಪೂರ್ಣ ಪರಿಚಯ ಮಾಡಿಕೊಳ್ಳುವದು ಅವಶ್ಯ. ಅಭ್ಯಾಸ ಪತ್ರಿಕೆ ಕಾಣಲು ಸಂಕ್ಷಿಪ್ತ ತೋರಬಹುದು. ಆದರೆ ಅದನ್ನು ಪರಿಚಯ ಮಾಡಿಕೊಂಡ ಶಿಕ್ಷಕರಿಗೆ ಅದರ ವಿಸ್ತಾರ ತಿಳಿದಿರಬಹುದು. ಅದರ ನಿರ್ದಿಷ್ಟತೆಯನ್ನು ತಿಳಿದುಕೊಂಡು ವಿಷಯ ಸಾಗಿಸುವದತ್ತ ಗಮನವೀಯಬೇಕು. ಇದರಲ್ಲಿ ಉಪಯೋಗಿಸಲ್ಪಟ್ಟ ಪದಗಳ ಅರ್ಥಗಳನ್ನು ಸಂಕುಚಿತವಾಗಿ ಮಾಡಿಕೊಳ್ಳದೆ ಸಾಧ್ಯವಿದ್ದಷ್ಟು ವಿಶಾಲ ಅರ್ಥ ಮಾಡಿಕೊಂಡು ವಿಷಯ ಸಾಗಿಸಬೇಕು. ಅಭ್ಯಾಸ ಪತ್ರಿಕೆಯಲ್ಲಿ ಅಡಕವಾದ ವಿಷಯಗಳನ್ನು ಸಾಧ್ಯವಿದ್ದ ಮಟ್ಟಿಗೆ ವ್ಯವಹಾರಕ್ಕೆ ಹೊಂದಿಕೊಂಡಿರುವ ಅಂದರೆ ಬಾಲಕರು ತಮ್ಮ ದೈನಂದಿನ ಜೀವನದಲ್ಲಿ ಅನುಭವಿಸಬಹುದಾದ ಉದಾಹರಣೆಗಳನ್ನು ಉಪಯೋಗಿಸುವದು ಮಹತ್ವದ ವಿಷಯ.

ಪ್ರಾ. ಶಾ. ಪ್ರ ಪರೀಕ್ಷೆಯ ಭೂಮಿತಿ–ಜಮಾಖರ್ಚಿನ ಪ್ರಶ್ನೆ ಪತ್ರಿಕೆಗಳು ಅಭ್ಯಾಸ ಪತ್ರಿಕೆಯ ಆಧಾರದ ಮೇಲೆಯೇ ತೆಗೆಯಲ್ಪಡುವವು. ಪ್ರತಿಯೊಂದು ಪ್ರಶ್ನೆ

ಪತ್ರಿಕೆಯು ಹೊಸ ಹೊಸ ಮಾದರಿಯ ಪ್ರಶ್ನೆಗಳನ್ನೊಳಗೊಂಡಿರುವದನ್ನು ನಾವು ಕಾಣಬಹುದು. ಸೂಚಿಸಲಾದ ಎಲ್ಲ ವಿಷಯಗಳು ಆ ಪ್ರಶ್ನೆ ಪತ್ರಿಕೆಯಲ್ಲಿ ಅಡಕವಾಗುವಂತೆ ದಕ್ಷತೆ ವಹಿಸಲಾಗುತ್ತಿದೆ. ಬಾಲಕರ ವ್ಯವಹಾರಿಕ ಅನುಭವಗಳಿಗೆ ಪ್ರಾಶಸ್ತ್ಯ ಕೊಡಲು ಪ್ರಯತ್ನಿಸಲಾಗುತ್ತದೆ. ಅದರ ಜೊತೆಗೆ ವೈವಿಧ್ಯತೆಯನ್ನೂ ಕಾಯ್ದು ಕೊಳ್ಳಲಾಗುತ್ತದೆ.

ಈ ಪರೀಕ್ಷೆಗೆ ಕೂಡ್ರುವ ಬಾಲ-ಬಾಲಿಕೆಯರು ಸಾಧಾರಣವಾಗಿ ೧೨ರಿಂದ ೧೫ ವರ್ಷದವರಿರಬಹುದು. ಈ ದೃಷ್ಟಿಯಿಂದ ಅವರು ಸಾಧಿಸಿದ ಕಾರ್ಯವನ್ನು ಪರಿಶೀಲಿಸಿದಾಗ ಅವರಿಗೆ ಕಲಿಸಿದ ಶಿಕ್ಷಕರಿಗೇ ಅಚ್ಚರಿಯುಂಟಾಗಬಹುದು. ಅವರು ವಿಷಯ ಸಂಗ್ರಹವನ್ನು ಯೋಗ್ಯರೀತಿಯಲ್ಲಿ ಮನನ ಮಾಡದೆ ಇರುವದು ಕಂಡು ಬರುವದು. ವಿಷಯದ ಪ್ರಭುತ್ವ ಪಡೆಯದೇ ಇರುವ ಮೂಲಕ ಅವರಲ್ಲಿ ನಿರ್ದಿಷ್ಟತೆಯಿಂದ, ಅಚ್ಚುಕಟ್ಟುತನದಿಂದ ಹಾಗೂ ಸ್ವಚ್ಛತೆಯಿಂದ ಪರಿಪೂರ್ಣವಾಗಿ ಅಳತೆಗೆ ಸರಿಯಾದ ಆಕೃತಿಗಳನ್ನು ತೆಗೆಯುವ ಮನೋಧೈರ್ಯವು ಬಾರದೇ ಇರುವದು. ತಾವು ತೆಗೆದ ಆಕೃತಿಗಳಲ್ಲಿಯ ಸರಿಯಾದ ಅಳತೆಗಳನ್ನು ಬರೆಯುವ ಧೈರ್ಯವೂ ಹಾಗು ಪ್ರಮಾಣ ಬದ್ಧವಾಗಿ ಅಳತೆಮಾಡುವ ಪದ್ಧತಿ ಇಲ್ಲದಿರುವದೂ ತೋರುವದು. ಅದರಂತೆಯೇ ಅಂಚೆ ಕಚೇರಿಯ, ಸಹಕಾರಿ ಸಂಘಗಳಲ್ಲಿಯ ಮತ್ತು ದಿನಾಚರಣೆಗಳ ಬಗೆಗೆ ಆಗುವ ವ್ಯವಹಾರಗಳ ಪರಿಪೂರ್ಣ ಜ್ಞಾನದ ಕೊರತೆ ಗೋಚರವಾಗುವದು.

ಸಾಮಾನ್ಯವಾಗಿ ಕಂಡುಬರುವ ಇಂಥ ದೋಷ ಇಲ್ಲವೆ ಕೊರತೆಗಳನ್ನು ಸುಧಾರಿಸುವ ದಿಶೆಯಲ್ಲಿ ಶಿಕ್ಷಕರಾದ ನಾವೆಲ್ಲರೂ ಪ್ರಯತ್ನಿಸುತ್ತಿರುವೆವು. ಆ ಉದ್ದೇಶದಿಂದ ಈಗಾಗಲೇ ಕೆಲವು ಕ್ರಮಗಳನ್ನು ಕೈಕೊಂಡಿರಬಹುದು. ಕಾರಣ ಅವುಗಳಿಗೆ ಪೂರಕವಾಗಿ ಇಲ್ಲವೆ ಹೊಸದಾಗಿ ಕೆಳಗಿನ ಕೆಲವು ಸೂಚನೆಗಳನ್ನು ಮಾಡಲಾಗಿದೆ:—

ಬಾಲಕರಿಗೆ ಭೂಮಿತಿಯ ಉಪಕರಣಗಳ ಉಪಯೋಗವನ್ನು ಸ್ಪಷ್ಟವಾಗಿ ಮಾಡಿಕೊಡುವದು ಅವಶ್ಯ. ಪ್ರತಿಯೊಂದರ ಹೆಸರಿನ ಜೊತೆಗೆ ಅದರ ನಿರ್ದಿಷ್ಟ ವಿನಿಯೋಗವನ್ನು ಬಾಲಕರ ಕಲ್ಪನೆಗೆ ತಂದುಕೊಡಬೇಕು. ಶಿಕ್ಷಕರೂ ಕಲಿಸುವಾಗ ಸ್ವತಃ ಉಪಕರಣಗಳನ್ನುಪಯೋಗಿಸುವದರಿಂದ ಬಾಲಕರೂ ನಿರೀಕ್ಷಿಸಿ ಕಲಿತುಕೊಳ್ಳಲೂ ಪ್ರಯತ್ನಿಸುವರು.

ಕೆಲವು ಬಾಲಕರು ಕೆಲ ವಿಷಯಗಳಲ್ಲಿ ಸಾಕಷ್ಟು ಪ್ರಗತಿ ತೋರಿಸದೆ ಇರಬಹುದು. ಅಂಥವರು ಭೂಮಿತಿ-ಜಮಾಖರ್ಚು ಈ ವಿಷಯಗಳಲ್ಲಿಯೂ ಅಷ್ಟೇ ಆಸ್ಥೆ ವಹಿಸಿರಬಹುದು. ಇಂಥ ವೈಯಕ್ತಿಕ ದೋಷಗಳಿಗೆ ಶಿಕ್ಷಕರು ಹೊಣೆಗಾರರಲ್ಲದಿದ್ದರೂ ಅವರಿಗೆ ಪ್ರಾತ್ಯಕ್ಷಿಕ ಅನುಭವಗಳ ಮುಖಾಂತರ ಕಲಿಸುತ್ತ ಆ ಉದಾಹರಣೆಗಳ ರೂಢಿಯನ್ನು ಮಾಡಿಸುತ್ತ ಆಸ್ಥೆ ವಹಿಸಿ ಶಿಕ್ಷಕರು ಪ್ರಯತ್ನಿಸಿದಲ್ಲಿ ಸ್ವಲ್ಪ ಪ್ರಮಾಣದಲ್ಲಿ ಪ್ರಗತಿ ಕಾಣಬಹುದು. ಇದರಲ್ಲಿ ವಿದ್ಯಾರ್ಥಿಯಲ್ಲಿ ನವ ಚೈತನ್ಯವನ್ನು ಕೊಟ್ಟ ಶ್ರೇಯಸ್ಸು ಶಿಕ್ಷಕರಿಗೆ ದೊರೆಯುವದೆಂಬ ಸಂಗತಿಯನ್ನು ಅನುಭವದಿಂದ ಹೇಳಬಲ್ಲೆ.

ಇದರಂತೆಯೇ ವರ್ಗದಲ್ಲಿ ಕೆಲವು ಜಾಣ ಬಾಲಕರು ಇರುವದು ಸಹಜ. ಅವರು ತಮ್ಮ ವಿಷಯದಲ್ಲಿ ಮುಂದುವರೆದಿರುವ ಕಾರಣ ಶಿಕ್ಷಕರು ವಿಷಯ ಕಲಿಸುವಾಗ ಪ್ರಶ್ನೆಗಳಿಗೆ ತಮ್ಮ ಜಾಣ್ಮೆಯನ್ನು ತೋರುತ್ತ ಉತ್ತರಿಸುವದು ಕಂಡು ಬರಬಹುದು. ಅಂಥ ಸಮಯಗಳಲ್ಲಿ ಶಿಕ್ಷಕರು ಜಾಣರಾದ ವಿದ್ಯಾರ್ಥಿಗಳಿಂದ ಬರುವ ಉತ್ತರಗಳಿಗೆ ತೃಪ್ತಿ ಹೊಂದದೆ ವರ್ಗದಲ್ಲಿಯ ಪ್ರತಿಯೊಬ್ಬನ ಕಡೆಗೆ ತಮ್ಮ ಲಕ್ಷ್ಯವನ್ನು ಪೂರೈಸಿದರೆ ವಿಷಯವನ್ನು ತಿಳಿದುಕೊಳ್ಳಲು ಪ್ರತಿ ಬಾಲಕನು ಪ್ರಯತ್ನಿಸಿ ವಿಷಯದಲ್ಲಿ ಪ್ರಗತಿ ಕಾಣಬಹುದು.

ವಿಷಯದ ಅಭ್ಯಾಸ ಮಾಡುವಲ್ಲಿ ಎರಡು ಪ್ರಕಾರಗಳಿರುವವು. ಬಾಲಕರು ಕಲಿಸಿದ ವಿಷಯವನ್ನು ಮೇಲಿಂದ ಮೇಲೆ ಓದಿ ಕಂಠಪಾಠ ಅರ್ಥಾತ್ ಗಿಳಿಪಾಠ ಮಾಡುವದು. ಹಾಗೆಯೇ ಕಲಿಸಿದ ವಿಷಯವನ್ನು ಓದಿ ಗೊತ್ತಿದ್ದ ವಿಷಯದ ಜೊತೆಗೆ ಹೊಂದಿಸಿ, ಮನನ ಮಾಡುವದು. ಕಂಠಪಾಠ ಮಾಡುವುದರಿಂದ ಎಷ್ಟೋ ವಿಷಯಗಳಲ್ಲಿಯ ಅರ್ಥ ತಿಳಿದುಕೊಳ್ಳದೆ ಹೇಳುವದು ಕಂಡುಬರುವದಲ್ಲದೆ ಕೆಲವು ದಿನಗಳ ನಂತರ ಮರೆತು ಬಿಡುವ ಪ್ರಸಂಗ ಬರಲಾರದು. ಆದರೂ ಎಷ್ಟೋ ಶಿಕ್ಷಕರು ಪರೀಕ್ಷೆಯ ಪರಿಣಾಮದ ಹೆದರಿಕೆಯಿಂದ ಗಂಡಾತರಕಾರಿಯಾದ ಕಂಠಪಾಠ ಮಾಡಿಸುವ ಪದ್ಧತಿಯನ್ನು ಅನುಸರಿಸುವದು ಸಹಾಯಕಾರಿಯಾಗುವದು.

ಶಿಕ್ಷಕರು ತಾವು ಕಲಿಸಿದ ವಿಷಯದ ಬಗ್ಗೆ ತಿಳಿದುಕೊಳ್ಳಬೇಕಾದ ಕ್ರಮ: ಬಾಲಕರಿಗೆ ಶಿಕ್ಷಕರು ಕಲಿಸುವ ವಿಷಯವು ಹೊಸದು ಇರುವದು. ತಮ್ಮ ಮಟ್ಟಕ್ಕೆ ವಿದ್ಯಾರ್ಥಿಗಳನ್ನು ಹೋಲಿಸಬಾರದು. ಅವರಿಗೆ ಕಲಿಸಿದ ವಿಷಯದ ರೂಢಿ ಅವಶ್ಯ. ಶಿಕ್ಷಕರು ಪರೀಕ್ಷೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ವಿಷಯವನ್ನು ಬೇಗನೆ ಮುಗಿಸಬೇಕೆಂಬ ಉದ್ದೇಶದಿಂದ ವಿಷಯವನ್ನು ಅವ-

ಸರದಿಂದ ಸಾಗಿಸಬಹುದು. ವರ್ಷದ ವಿಷಯವನ್ನು ಕೆಲವೇ ತಿಂಗಳುಗಳಲ್ಲಿ ಮುಗಿಸಬಹುದು. ಇದರಿಂದ ಕಲಿಸಿದ ವಿಷಯವು ಸರಿಯಾಗಿ ಮನನ ಮಾಡಲ್ಪಡುವದಿಲ್ಲ. ಪ್ರತಿಯೊಂದು ವಿಷಯವನ್ನು ಕಲಿಸಿದ ಕೂಡಲೆ, ಅದರ ರೂಢಿ ಅವಶ್ಯ. ಕಾಲಾವಧಿ ನಂತರವೂ ಅದನ್ನು ರೂಢಿ ಮಾಡಿಸುವದು ಅತ್ಯವಶ್ಯ; ಇಲ್ಲದಿದ್ದರೆ ಅಭ್ಯಾಸವು ಕುಂಠಿತವಾಗುವದು.

ಕೊನೆಯದಾಗಿ, ಬಾಲಕರಿಗೆ ಜಮಾಖರ್ಚಿನ ಬಗ್ಗೆ ಜ್ಞಾನ ಮಾಡಿಕೊಡುವದನ್ನಿಟ್ಟು ಕೊಂಡಾಗ ಅಭ್ಯಾಸ ಪತ್ರಿಕೆಯಲ್ಲಿಯ ವಿಷಯಗಳನ್ನು ಬಾಲಕರಿಗೆ ಪ್ರತ್ಯಕ್ಷ ಅನುಭವಗಳ ಮುಖಾಂತರ ನಿರ್ದಿಷ್ಟ ಕಲ್ಪನೆ ತಂದು ಕೊಡಬೇಕು. ಅಂಚೆ ಕಚೇರಿಯ ನಿರೀಕ್ಷಣೆ, ಶಾಲೆಯಲ್ಲಿಯ ಸಹಕಾರಿ ಅಂಗಡಿ ಹಾಗೂ ಆಗಾಗ ಶಾಲೆಯಲ್ಲಿ ಆಚರಿಸಲಾಗುವ ಜಯಂತಿ, ಪುಣ್ಯತಿಥಿ ಇತ್ಯಾದಿಗಳಲ್ಲಿಯ ವ್ಯವಹಾರಗಳನ್ನು ಬಾಲಕರಿಂದಲೇ ಸರತಿಯಂತೆ ಮಾಡಿಸಲು ಹಚ್ಚುವದು ಒಳಿತು. ಅವರಿಗೆ ಮನೆಯಲ್ಲಿಯ ದೈನಂದಿನ ವ್ಯವಹಾರಗಳಲ್ಲಿ ಭಾಗವಹಿಸಲು ಸೂಚಿಸುವದು ಒಳಿತು. ಇಂಥ ಅನುಭವಗಳಿಂದ ಅವರಿಗೆ ವಿಷಯದ ಕಲ್ಪನೆ ಸರಿಯಾಗಿ ಮಾಡಿಕೊಡಲು ಸಾಧ್ಯ.

ಒಟ್ಟಿನಲ್ಲಿ ಭೂಮಿತಿಯನ್ನು ಕಲಿಸುವಾಗ ಬಾಲಕರು ಆಕೃತಿಗಳ ಬಗ್ಗೆ ಹೊಸ ಹೊಸ ಸಂಗತಿಗಳನ್ನೂ, ಅವುಗಳ ಅಳತೆ ಮತ್ತು ಗುಣ ಧರ್ಮಗಳನ್ನೂ ತಿಳಿದುಕೊಳ್ಳುವಂತೆ ಮತ್ತು ಅವರ ದೈನಂದಿನ ಜೀವನದಲ್ಲಿ ಉಪಯುಕ್ತವೆನಿಸುವಂತಾಗುವಂತೆ ನೋಡಿಕೊಳ್ಳುವದು ಶಿಕ್ಷಕರ ಕಾರ್ಯ.

ಶಿಕ್ಷಣವು ಯೋಗ್ಯವಿದ್ದರೆ ಯೋಗ್ಯ ಶಿಕ್ಷಕ

ಮಾನ್ಯ ಮುಖ್ಯಮಂತ್ರಿ ಶ್ರೀ. ಮೊರಾರಜಿ ದೇಸಾಯಿ ಅವರ ಭಾಷಣ

ಧಾರವಾಡ ೨. "ಭಾರತವನ್ನು ಹೊಸದಾಗಿ ಕಟ್ಟಬೇಕಾಗಿದೆ ಅದು ದುಃಖಿಯಾಗಿದೆ. ಜರ್ಜರಿತವಾಗಿದೆ. ಅದು ಪುನಃ ದುಃಖಿತವಾಗದಂತೆ, ಜರ್ಜರಿತವಾಗದಂತೆ, ಸುಖಿಯಾಗುವಂತೆ ಮಾಡಬೇಕಾಗಿದೆ ಎಂದು ಹೇಳುವದು ಉಪದೇಶ ಮಾಡುವದು ನನ್ನ ಕೆಲಸವಲ್ಲ, ತಮ್ಮದು. ಒಂದು ದೃಷ್ಟಿಯಿಂದ ನೋಡಿದರೆ ನಾನು ಶಿಕ್ಷಕನೆನ್ನಬಹುದು. ಆದರೆ ನಾನು ಕೊಡುವ ಶಿಕ್ಷಣ ಬೇರೆ, ನೀವು ಕೊಡುವ ಶಿಕ್ಷಣ ಬೇರೆ, ನಾನು ಕಲಿತ ಶಿಕ್ಷಣ ಬೇರೆ, ನೀವು ಕಲಿತ ಮತ್ತು ಕಲಿಯುತ್ತಿರುವ ಶಿಕ್ಷಣ ಬೇರೆ. ನಾನು ಮುಖ್ಯ ಮಂತ್ರಿಯೇನೋ ಆಗಿದ್ದೇನೆ, ನಾನು ಕೆಲವೊಂದು ಮಾತುಗಳನ್ನು ಹೇಳಬೇಕಾಗುತ್ತದೆ, ಉಪದೇಶ ಮಾಡಬೇಕಾಗುತ್ತದೆ. ನನ್ನ ಮಾತುಗಳು ಜನರಿಗೆ ರುಚಿಸಲಿ, ಬಿಡಲಿ ನನಗೆ ಸರಿಯೆನ್ನಿಸಿದವುಗಳನ್ನು ನಾನು ಹೇಳಲೇಬೇಕಾಗುತ್ತದೆ. ನಾನು ಅದನ್ನು ಮಾಡದೇ ಹೋದರೆ ಅವರಿಂದ ದೂರವಿರಬೇಕಾಗುತ್ತದೆ. ನೀವು ಕೈಕೊಂಡ ಕೆಲಸ ಶಿಕ್ಷಣದ್ದು—ಜೀವನ ಶಿಕ್ಷಣದ್ದು. ಅದು ಕೆಲವರಿಗೆ ರುಚಿಸುತ್ತದೆ ಮತ್ತು ಕೆಲವರಿಗೆ ರುಚಿಸುವದಿಲ್ಲ. ಆದರೆ ಅದನ್ನು ಮಾತ್ರ ನೀವು ಶ್ರದ್ಧೆಯಿಂದ ಮಾಡಬೇಕು. ಇಲ್ಲವಾದರೆ ಅದರಿಂದ ದೂರವಾಗಬೇಕು. ಮೂಲಶಿಕ್ಷಣವು ಭಾರತವನು ಕಟ್ಟುವದು. ಹೊಸ ಶಿಕ್ಷಣದಿಂದಲೇ ಹೊಸ ಭಾರತವು ನಿರ್ಮಾಣವಾಗುವದು." ಎಂದು ಮುಂಬೈ ರಾಜ್ಯದ ಮುಖ್ಯ ಮಂತ್ರಿಗಳು ಉಪದೇಶ ಮಾಡುತ್ತ ಮತ್ತೆ ಇಂತೆಂದರು.

"ಶಿಕ್ಷಣವು ಯೋಗ್ಯವಿದ್ದರೆ ಯೋಗ್ಯ ಶಿಕ್ಷಕನಾಗುವನು. ಯೋಗ್ಯ ಶಿಕ್ಷಕನು ಎಂತಾಗುವನು ಎಂಬುದೊಂದು ಮಾತು ನನ್ನ ಮನಸ್ಸಿನಲ್ಲಿದೆ. ಇದನ್ನು ಕುರಿತು ವಿಚಾರ ಮಾಡಿ ಶೋಧ ನಡಿಸಿ ಮಾರ್ಗದರ್ಶನ ಮಾಡುವದು ನಿಮಗೆ ಸೇರಿದೆ.

"ಪ್ರಾಚೀನ ಕಾಲದಲ್ಲಿ ನಮ್ಮ ದೇಶದಿಂದ ಜಗತ್ತಿಗೆ ಒಳ್ಳೇ ಶಿಕ್ಷಣ ದೊರೆಯುತ್ತಿತ್ತು. ನಮ್ಮಲ್ಲಿ ಗುರುಕುಲಗಳು ಇದ್ದವು. ಅವು ಆಶ್ರಮಗಳಲ್ಲಿ ನಡೆಸಲ್ಪಟ್ಟವು. ಗುರುಗಳು ಋಷಿ ಮುನಿಗಳಂತೆ ಜೀವನ ಮಾಡುತ್ತಿದ್ದರು. ಅವರು ಒಳ್ಳೆಯ ವಿದ್ಯಾರ್ಥಿಗಳನ್ನು ಹುಡುಕುತ್ತಿದ್ದರು. ವಿದ್ಯೆಯನ್ನು ಕೊಡುತ್ತಿದ್ದರು. ಅದ್ದರಿಂದ ವಿದ್ಯೆ ದೊರೆಯುತ್ತಿತ್ತು. ಆದರೆ ಇಂದು ಹಾಗಿಲ್ಲ. ಮೊದಲಿನಂತೆ ಆಶ್ರಮಗಳು ಸ್ಥಾಪಿತವಾದರೆ ಒಳಿತು.

ಶಿಕ್ಷಕರು ಸನ್ಯಾಸಿಗಳಾದರೆ ಉತ್ತಮ. (ನಗು) ಸನ್ಯಾಸಿ ಯಂದರೆ ಆಹಾರ ನಿದ್ರಾ ಬಿಟ್ಟು ಕೌಪೀನಧಾರಣ ಮಾಡಿಕೊಂಡು ಹೆಂಡಿರು ಮಕ್ಕಳನ್ನು ತೊರೆದು ಕಟ್ಟಡವಿಗೆ ಹೋಗಬೇಕೆಂದು ಅರ್ಥವಿಲ್ಲ. ಸ್ವಾರ್ಥವನ್ನು ಬಿಟ್ಟು ಪಾರಮಾರ್ಥಕ್ಕಾಗಿ, ಸರ್ವರ ಹಿತಕ್ಕಾಗಿ ದುಡಿಯುವ ಸನ್ಯಾಶಿ. ಸತ್ಯವನ್ನು ಅರಿತುಕೊಳ್ಳುವದಕ್ಕಾಗಿ ಕಷ್ಟವನ್ನು ಅನುಭವಿಸುವವ ಸನ್ಯಾಸಿ ಸತ್ಯವು ಕಷ್ಟವನ್ನು ಅನುಭವಿಸುವವರಿಗೆ ದೊರೆಯುತ್ತದೆ. ಯಾವ ವಿಚಾರಗಳು, ಸಿದ್ಧಾಂತಗಳು ಪ್ರಾಚೀನ ಕಾಲದಲ್ಲಿ ಇದ್ದವೋ ಅವೇ ಇಂದು ಬದಲಾವಣೆ ಹೊಂದಿದ ಜಗತ್ತಿನಲ್ಲೂ ಇವೆ. ಹಿಂದಿನವರು ಯಾವ ಸಿದ್ಧಾಂತಗಳನ್ನು ಅನುಸರಿಸಿ ಭಾರತವನ್ನು ಕಟ್ಟಿ ಬೆಳಗಿದರೋ ಮತ್ತು ಕಾರ್ಯವನ್ನು ಮಾಡಲು ಸಮರ್ಥರಾದರೋ ಅದನ್ನು ನಾವು ಮಾಡೋಣ.

ಶಿಕ್ಷಣ ಪಡೆಯುವದಕ್ಕೆ, ವಿದ್ಯೆ ದೊರಕಿಸುವದಕ್ಕೆ ಶಾಲೆಗಳೇ ಬೇಕು ಹೀಗೇನೂ ಇಲ್ಲ ರಾಮಕೃಷ್ಣ ಪರಮಹಂಸರಂಥವರು ನಮ್ಮ ನಿಮ್ಮಂತೆ ಶಾಲೆಗಳಲ್ಲಿ ಕಲಿತಿದ್ದರೇನು ? ನಮ್ಮಂತಹ ವಿದ್ಯೆ ಕಲಿತಿದ್ದಿಲ್ಲ. ಪ್ರತಿಯೊಬ್ಬರನ್ನು ಆಕರ್ಷಿಸುವ ವಿದ್ಯೆ ಅವರಲ್ಲಿತ್ತು. ಅವರಲ್ಲಿ ವಿದ್ಯೆಯ ಶಕ್ತಿಯಿತ್ತು. ಆ ಶಕ್ತಿಯಂದರೆ ತನ್ನನ್ನು ತಾನು ಅರಿತುಕೊಳ್ಳುವದು ಆ ಶಕ್ತಿಯನ್ನು ತಂದು ಕೊಡುವದೇ ಶಿಕ್ಷಣದ ಧ್ಯೇಯವಾಗಿದೆ. ಶಿಕ್ಷಕರಿಗೆ ಜೀವನದಲ್ಲಿ ಹಣವು ದೊರೆಯುವದಿಲ್ಲ. ಶಿಕ್ಷಕನು ಹಣದ ಪೂಜಾರಿಯಾದರೆ ಅವನು ಶಿಕ್ಷಕನೇ ಅಲ್ಲ. ಅವನಿಗೆ ಮರ್ಯಾದೆಯಿಲ್ಲ. ಮನುಷ್ಯನನ್ನು ಮನುಷ್ಯನನ್ನಾಗಿ ಮಾಡುವ ಶಿಕ್ಷಕನಿಗೆ ಮರ್ಯಾದೆ ದೊರೆತೇ ತೀರುವದು. ದೊರೆಯಲೇಬೇಕು. ನಾನು ಶಿಕ್ಷಕನ ಮಗನೇ ಇದ್ದೇನೆ. ನನಗೆ ಒಳ್ಳೆಯ ಸಂಸ್ಕಾರಗಳು ಬಂದುದು ಶಿಕ್ಷಕನಾದ ನನ್ನ ತಂದೆಯಿಂದಲೇ.

ಮಕ್ಕಳೆಂದರೆ ಒಡೆದ ಕೊಡವಲ್ಲ. ಅವರು ಮುಂದೆ ಒಳ್ಳೆಯ ವಸ್ತುವಾಗತಕ್ಕವರು. ಅವರನ್ನು ಸಿದ್ಧಗೊಳಿಸಿರಿ. ಸಮಾಜವನ್ನು ಮೇಲೆತ್ತಬೇಕಾಗಿದೆ. ಅದು ಬಿದ್ದಿದೆ. ಬೇರೆಯವರು ಅದನ್ನು ಮೇಲೆತ್ತಲು ಬರುವದಿಲ್ಲ. ನೀನೊಬ್ಬನೇ ಮಾಡಿದರೆ ಅದರಿಂದೇನಾಗುವದು? ಜನರು ತಪ್ಪು ಮಾಡುತ್ತಾರೆ ಎಂದರೆ ನಾವೂ ಅದೇ ತಪ್ಪು ಮಾಡಬಾರದು. ನಮನ್ನು ನಾವು ಸುಧಾರಿಸಿಕೊಳ್ಳದ ಹೊರತು ಅವರನ್ನು ಸುಧಾರಿಸಲಾರೆವು ಎಂಬದನ್ನು ಶಿಕ್ಷಕರು ನೆನೆಯಬೇಕು.

ಶಿಕ್ಷಕರು ಟ್ರೇಡ್ ಯುನಿಯನ್ನದಂತಾಗಬಾರದು. ಹರತಾಳ ಇತ್ಯಾದಿ ಮಾಡಬಾರದು. ಅವರು ಅದನು ಮಾಡುತ್ತ ಕುಳಿತರೆ ಮಕ್ಕಳ ಜೀವನವನ್ನು ನಿರ್ಮಿಸುವವರು ಯಾರು? ಆದ್ದರಿಂದ ರಾಜಕೀಯ ಜಾಲದಲ್ಲಿ ಬೀಳಬೇಡಿರಿ. ದಿನಾಲು ನಿಮ್ಮ ಜೀವನವನ್ನು ನೀವು ನೋಡಿಕೊಳ್ಳಿರಿ, ನಿಮ್ಮಲ್ಲೇ ಸುಧಾರಣೆಯಾಗುವದು. ದ್ವೇಷ, ಅಸೂಯೆ ತೊರೆಯಿರಿ. ಇದನ್ನು ಜೀವನದಿಂದ ಕಲಿಯಿರಿ. ಸತ್ಯದ ಮಾರ್ಗವನ್ನು ಹಿಡಿಯಿರಿ. ಅಂದರೆ ನಿಮಗೆ ಎಲ್ಲವೂ ದೊರೆಯುವದು, ಮರ್ಯಾದೆಯೂ ದೊರೆಯುವದು. ಶಿಕ್ಷಕನಿಗೆ ಮರ್ಯಾದೆಯೆ ಹೊರತು ಇನ್ನಾರಿಗಿಲ್ಲ. ನೀವು ಪ್ರಾರ್ಥನೆಯಿಂದ ಒಳ್ಳೆಯ ವಾತಾವರಣ ಕಲ್ಪಿಸಿದ್ದೀರಿ, ನೀವು ರಚಿಸಿದ ಪ್ರದರ್ಶನವನ್ನು ನೋಡಿದ್ದೇನೆ, ಆನಂದಪಟ್ಟಿದ್ದೇನೆ. ಇಂಥ ವಾತಾವರಣದಿಂದ ಬರುವ ಶಕ್ತಿ ಇನ್ನಾತರಿಂದ ಬರುತ್ತದೆ ? ಗಾಂಧೀ ಜಯಂತಿಯಲ್ಲಿ ಈ ಒಳ್ಳೆಯ ಸಮಯ ನನಗೆ ಕೊಟ್ಟದ್ದಕ್ಕಾಗಿ ನಾನು ನಿಮಗೆ ಉಪಕೃತ, ಎಂದು ಭಾಷಣ ಮುಗಿಸಿದರು. ತಮಗೆ ಇನ್ನೂ ಹೆಚ್ಚು ಕಾಲವನ್ನು ಈ ಕಾರ್ಯಕ್ಕೆ ಕೊಡದಿದ್ದಕ್ಕಾಗಿ ಖೇದ ವ್ಯಕ್ತ ಮಾಡಿದರು. ಭಾಷಣಕ್ಕೆ ಮೊದಲೇ ಪ್ರದರ್ಶನದ ಉದ್ಘಾಟನ ಮಾಡಿದರು.

ತ್ವರೆ ಮಾಡಿರಿ! ಹೊಸ ಪುಸ್ತಕ. ತ್ವರೆ ಮಾಡಿರಿ!!

ಹೊಸ ಶಿಕ್ಷಣ

ಮೂಲ ಲೇಖಕರು :
ಆಚಾರ್ಯ ವಿನೋಬಾಜಿಯವರು

ಅನುವಾದಕರು :
ಶ್ರೀ. ಕಲಹಾಳ ಮಡಿವಾಳಪ್ಪ

ಈ ಪುಸ್ತಕದಲ್ಲಿ ಹೊಸ ಶಿಕ್ಷಣದ ಬಗೆಗೆ ವಿನೋಬಾಜಿಯವರ ಅಮೌಲ್ಯ ವಿಚಾರ ತರಂಗಗಳನ್ನು ಅನುವಾದಿಸಿ ಕೊಡಲಾಗಿದೆ. ಅನುಭವದ ಆಳದಿಂದ ಹೊರಬಿದ್ದ ಪೂಜ್ಯ ವಿನೋಬಾರ ಹೊಸ ಶಿಕ್ಷಣ ವಿಚಾರಗಳು ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರೆಲ್ಲರಿಗೆ ಉಪಯುಕ್ತವಾಗುವದರಲ್ಲಿ ಸಂದೇಹವಿಲ್ಲ. ಇಂದೇ ಕೆಳಗಿನವರಿಗೆ ಬರೆದು ತರಿಸಿ ವಿಚಾರದ ಮಾಧುರ್ಯವನ್ನು ಸವೆಯಿರಿ.

ರಾಮಾಶ್ರಯ ಬುಕ್ ಡಿಪ್ಪೋ, ಧಾರವಾಡ

ಕರ್ನಾಟಕದಲ್ಲಿ ಮೂಲಶಿಕ್ಷಣದ ಪ್ರಗತಿ

ಧಾರವಾಡ—೨. ಗಾಂಧೀಜಯಂತಿಯ ಸಪ್ತಾಹದಲ್ಲಿ ಉತ್ಸವದ ಅಂಗವಾಗಿ ಏರ್ಪಡಿಸಲ್ಪಟ್ಟ ಹಾಗೂ ವಾರ್ಷಿಕ ಉತ್ಸವದ ರೂಪದಲ್ಲಿ ಏರ್ಪಡಿಸಲ್ಪಟ್ಟ ಹೊಸ ಶಿಕ್ಷಣದ ಪ್ರದರ್ಶನ ಹಾಗೂ ಗಾಂಧೀ ಜಯಂತಿಯ ಉತ್ಸವ-ಸಮಾರಂಭದಲ್ಲಿ ಮಾನ್ಯ ಮುಖ್ಯಮಂತ್ರಿ ಶ್ರೀ. ಮೊರಾರಜಿ ದೇಸಾಯಿ ಹಾಗೂ ಶಿಕ್ಷಣಪ್ರೇಮಿಗಳನ್ನು ಸ್ವಾಗತಿಸುತ್ತ ಧಾರವಾಡ ಜಿಲ್ಹೆಯ ಶಿಕ್ಷಣಾಧಿಕಾರಿಗಳಾದ ಶ್ರೀ ತೇರಗಾಂವಕರ ಕೃಷ್ಣರಾಯರು ಇಂತೆಂದರು:—

''ಹೊಸ ಶಿಕ್ಷಣದ ಯೋಜನೆಯು ಗಾಂಧೀಜಿಯವರು ರಾಷ್ಟ್ರಕ್ಕೆ ಕೊಟ್ಟ ಅಂತಿಮ ಹಾಗೂ ಪೂರ್ಣ ವಿಕಸಿತ ಕೊಡುಗೆಯಾಗಿತ್ತು. ಜೀವನದ ಸಾರವಾಗಿತ್ತು. ವರ್ಗರಹಿತ, ಜಾತಿರಹಿತ ಸಮಾಜ ನಿರ್ಮಾಣವಾಗ ಬೇಕು. ಅದು ಸ್ವಾವಲಂಬನದ ಮೇಲೆ ಅವಲಂಬಿತವಾದ ವಿಶೇಷವಾಗಿ ಕಾನೂನಿನ ಮೇಲಲ್ಲ, ಪ್ರೇಮದ ಮೇಲೆ ಪರಸ್ಪರ ದ್ವೇಷದ ಮೇಲಲ್ಲ, ತಿಳುವಳಿಕೆಯ ಮೇಲೆ, ಸ್ಪರ್ಧೆಯ ಮೇಲಲ್ಲ ಸಹಕಾರದ ಮೇಲೆ ಅವಲಂಬಿತವಾದುದು ಆಗಿರಬೇಕು ಎಂದು ಗಾಂಧೀಜಿಯವರು ಕನಸನ್ನು ಕಂಡಿದ್ದರು. ಇಂತಹ ಸಮಾಜನಿರ್ಮಾಣ ಮಾಡುವದೇ ಇಂದಿನ ಸರಕಾರದ ನೀತಿಯೂ ಆಗಿದೆ.

''ಬಹು ದೂರದ ವರೆಗೆ ಪರಿಣಾಮವನ್ನು ತೋರಿಸಬಲ್ಲಂಥ ಹೊಸ ಶಿಕ್ಷಣದ ತತ್ವಗಳನ್ನು ಶೈಕ್ಷಣಿಕ, ರಾಜನೈತಿಕ, ಸಾರ್ವಜನಿಕ ಅಭಿಪ್ರಾಯ, ಹಾಗು ವಿಚಾರವುಳ್ಳ ಮುಖಂಡರು ಒಪ್ಪಿದರು. ರಾಜ್ಯಸರಕಾರಗಳು ಈ ತತ್ವಗಳನ್ನು ಮುಂದಿಟ್ಟುಕೊಂಡು ತಮ್ಮ ಶಿಕ್ಷಣದ ಕಾರ್ಯಕ್ರಮಗಳನ್ನು ಪರೀಕ್ಷಿಸತೊಡಗಿದವು. ಇಡೀ ಹಿಂದುಸ್ತಾನದಲ್ಲಿ ಪ್ರಾಥಮಿಕ ಶಿಕ್ಷಣವು ಹೊಸ ಶಿಕ್ಷಣ ಮಾರ್ಗದಲ್ಲಿ ವಿಕಾಸಹೊಂದುವದೆಂದು ಮುಂಬೈ ಸರಕಾರವು ಮೊಟ್ಟಮೊದಲು ಸಾರಿತು'' ಎಂದು ಹೇಳಿ ಮುಂಬೈ ರಾಜ್ಯದಲ್ಲಿ ಎಷ್ಟೋ ಶಾಲೆ-ಕಾಲೇಜುಗಳು ಈ ಹೊಸ ಶಿಕ್ಷಣದ ಪ್ರಸಾರವನ್ನು ಮಾಡುತ್ತಿವೆ ಎಂಬದನ್ನು ವಿವರಿಸಿ ಧಾರವಾಡ ಜಿಲ್ಹೆಯ ಹೊಸ ಶಿಕ್ಷಣದ ಪ್ರಗತಿಯ ಕಲ್ಪನೆಯನ್ನು ಮಾಡಿಕೊಡುತ್ತ ಇಂತೆಂದರು "ಧಾರವಾಡ ಜಿಲ್ಹೆಯು ಗಾಂಧೀಜಿಯವರ ವಿಧಾಯಕ ಕಾರ್ಯಗಳಲ್ಲಿ ಶಿಕ್ಷಣ ಕ್ಷೇತ್ರದ ಮುಖಂಡತ್ವವನ್ನು ವಹಿಸುವದಕ್ಕೆ ಹೆಮ್ಮೆಪಡುತ್ತದೆ. ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ, ಶಿಕ್ಷಕರ ಮಾನಸಿಕ ಹಾಗೂ ಸಾಮಾಜಿಕ ಯೋಗ್ಯತೆಯ ಪ್ರಗತಿ ಚನ್ನಾಗಿ ಆಗಿದೆ. ಸಾಮಾನ್ಯ ಮುಲ್ಕೀ ಪರೀಕ್ಷೆಯ ಪರಿಣಾಮಕ್ಕಿಂತ ಬೇಸಿಕ್ ಮುಲ್ಕೀ ಪರೀಕ್ಷೆಯ ಪರಿಣಾಮವು ಉತ್ಸಾಹವರ್ಧಕವಾಗಿದೆ. ಹೊಸ ಶಿಕ್ಷಣದ ಜೀವಾಳವಾದ ಆರ್ಥಿಕ ಸ್ಥಿತಿಯು ತೃಪ್ತಿಕರವಾಗಿದೆ ಎಂಬುದು ಅಂಕಿಸಂಖ್ಯೆಗಳಿಂದ, ಉತ್ಪಾದಿತ ವಸ್ತುಗಳಿಂದ, ಪ್ರದರ್ಶನದಲ್ಲಿಯ ಕಾರ್ಯಗಳಿಂದ ತಿಳಿದು ಬರುವಂತಿದೆ" ಮತ್ತು ಮುಂದುವರಿಯುತ್ತ ''ಹೊಸ ಶಿಕ್ಷಣದ ಶಾಲೆಗಳಲ್ಲಿ ನಡೆದಿರುವ ಶಿಕ್ಷಣದ ಪ್ರಗತಿ ಎಷ್ಟಾಗಿದೆ. ಎಂಬುದರ ಜ್ಞಾನ ಜನತೆಗೆಯಾಗಬೇಕೆಂದೂ ಜನತೆಯಿಂದ ಪ್ರಗತಿಯ ಬಗೆಗೆ ಸಲಹೆಗಳು ಬರಬೇಕೆಂದೂ ಇಂಥ ಪ್ರದರ್ಶನವನ್ನು ಏರ್ಪಡಿಸಲಾಗಿದೆ" ಎಂದು ಹೇಳಿ, ಈ ಸಲ ಇಂದು ಆಚರಿಸುತ್ತಿರುವ ಗಾಂಧೀ ಜಯಂತಿಯ ವೈಶಿಷ್ಟ್ಯಗಳನ್ನು ವಿವರಿಸಿ, ಮುಖ್ಯ ಮಂತ್ರಿಗಳಿಗೆ ಪ್ರದರ್ಶನದ ಉದ್ಘಾಟನೆ ಮಾಡಲು ಮತ್ತು ನಾಲ್ಕು ಉಪದೇಶದ ಮಾತುಗಳನ್ನು ಹೇಳಲು ಬಿನ್ನವಿಸಿಕೊಂಡರು.

ನಂತರ ಮುಂಬೈ ರಾಜ್ಯದ ಶಿಕ್ಷಣಾಧಿಕಾರಿಗಳಾದ ಶ್ರೀ. ಭಾಂಡಾರಕರರು ಮುಖ್ಯ ಮಂತ್ರಿಗಳಿಗೆ ನೂಲಿನ ಮಾಲೆ ಹಾಕಿದರು. ಸ್ಪರ್ಧೆಗಳಲ್ಲಿ ಯಶಸ್ವಿಯಾದವರ ಹೆಸರುಗಳನ್ನು ಓದಿ ಹೇಳಲಾಯಿತು ಮತ್ತು ಬಿಹಾರದ ನೆರೆಹಾವಳಿಯ ಸಂತ್ರಸ್ತರಿಗಾಗಿ ಕೂಡಿಸಿದ ಐದುನೂರಾ ಒಂದು ರೂಪಾಯಿ (೫೦೧-೦-೦) ನಿಧಿಯನ್ನು ಮುಖ್ಯ ಮಂತ್ರಿಗಳಿಗೆ ಒಪ್ಪಿಸಲಾಯಿತು. ಮುಖ್ಯ ಅತಿಥಿಗಳಾದ ಮಾನ್ಯ ಮೊರಾರಜಿಯವರ ಭಾಷಣವಾದ ನಂತರ ಗಂಡು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದ ಶ್ರೀ. ಎಸ್. ಪಿ. ಪಾಟೀಲರು ಧನ್ಯವಾದಗಳನ್ನು ಅರ್ಪಿಸಿದರು. "ವಂದೇ ಮಾತರಂ" ಗೀತೆಯೊಂದಿಗೆ ಸಭೆಯು ಕೊನೆಗೊಂಡಿತು. ಸಭೆಯು ಪ್ರಾರಂಭವಾಗುವ ಮುನ್ನ ಸಾಮೂಹಿಕ ಪ್ರಾರ್ಥನೆ, ಮುಖ್ಯ ಅತಿಥಿಗಳು ಮಹಾತ್ಮಾಜಿಯವರಿಗೆ ಮಾಲೆ ಅರ್ಪಿಸುವದು ಮುಂತಾದ ಕಾರ್ಯಕ್ರಮಗಳು ಜರುಗಿದವು.

ಕರ್ನಾಟಕ ವಿಶ್ವವಿದ್ಯಾಲಯ ನಿಧಿಗೆ

ಪ್ರಾಥಮಿಕ ಶಿಕ್ಷಕರ ದೇಣಿಗೆ

ಹಾವೇರಿ ತಾಲೂಕಿನ ನೆಗಳೂರು ಗ್ರಾಮದ ಶ್ರೀ. ಲಿಂ. ಸಂ. ಮಠಪತಿಯವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದು ಇದೇ ವರ್ಷ ಎಸ್. ಎಸ್. ಸಿ. ಪರೀಕ್ಷೆಯಲ್ಲಿ 'ಪೌರನೀತಿ ಮತ್ತು ರಾಜ್ಯಘಟನೆ'ಯಲ್ಲಿ ನೂರಕ್ಕೆ ೮೩ ಗುಣಗಳನ್ನು ಪಡೆದು ಮುಂಬಯಿ ರಾಜ್ಯಕ್ಕೇ ಆ ವಿಷಯದಲ್ಲಿ ಮೊದಲನೆಯ ನಂಬರು ಪಡೆದು ಎಸ್. ಎಸ್. ಸಿ ಬೋರ್ಡಿನಿಂದ ೧೦೦ ರೂ. ಗಳ ಪಾರಿತೋಷಕವನ್ನು ಪಡೆದಿದ್ದಾರೆ. ಅವರು ತಾವು ಪಡೆದ ಬಹುಮಾನದಲ್ಲಿ ೫೧ರೂ. ಗಳನ್ನು ಗಾಂಧೀ ಜಯಂತಿಯ ದಿನ ವಿಶ್ವವಿದ್ಯಾಲಯ ನಿಧಿಗೆ ಕಾಣಿಕೆ ಸಲ್ಲಿಸಿದ್ದು ಶ್ರೀಯುತರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಸು. ೪೦ ವರ್ಷಗಳ ಹಿಂದೆ ಕರ್ನಾಟಕ ಕಾಲೇಜು ಸ್ಥಾಪನೆಗೊಳ್ಳುವ ಸಮಯದಲ್ಲಿ ಕನ್ನಡಿಗರು ೨ ಲಕ್ಷ ರೂ ಕೊಡಬೇಕೆಂದು ಸರಕಾರದವರು ಕರಾರು ಮಾಡಿದ್ದರು. ಆಗ ದಿವಾನ್‌ಬಹಾದ್ದೂರ್ ರೊದ್ದ ಶ್ರೀನಿವಾಸರಾಯರು ೧ ಲಕ್ಷ ರೂ. ಕೂಡಿಸಲು ಒಪ್ಪಿಕೊಂಡು ಕೆಲಮಟ್ಟಿಗೆ ಪ್ರಾಥಮಿಕ ಶಿಕ್ಷಕರಿಂದ ವರ್ಗಣಿ ಕೂಡಿಸಿ ಕೊಡಲೊಪ್ಪಿದ ಹಣವನ್ನು ದೊರಕಿಸಿದರು. ಕರ್ನಾಟಕ ಕಾಲೇಜಿನ ಇಂದಿನ ವೈಭವೋನ್ನತಿಗೆ ಅಂದು ಮುಕ್ತಹಸ್ತದಿಂದ ಸಹಾಯ ನೀಡಿದ ಪ್ರಾಥಮಿಕ ಶಿಕ್ಷಕರ ವಿದ್ಯಾಪ್ರೇಮವು ಬಹುಮಟ್ಟಿಗೆ ಕಾರಣವಾಗಿದೆಯೆನ್ನಲಡ್ಡಿಯಿಲ್ಲ.

ಕರ್ನಾಟಕದಲ್ಲಿಯ ಎಲ್ಲ ಶಿಕ್ಷಣ ಸಂಸ್ಥೆಗಳಿಗೆ ಮಾತೃಸ್ವರೂಪದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯಕ್ಕೂ ಇಂದು ಅದೇ ಬಗೆಯ ಸಹಾಯ ಸಹಕಾರಗಳು ಆವಶ್ಯಕವಾಗಿವೆ. ವಿಶ್ವವಿದ್ಯಾಲಯದ ವಿದ್ಯಾರ್ಥಿ ವಸತಿಗೃಹವನ್ನು ಕೇವಲ ಜನರ ದೇಣಿಗೆಯಿಂದಲೇ ಕಟ್ಟಬೇಕೆಂಬ ಆಸೆಯಿದೆ. ಸರಕಾರದವರು ಕೆಲಮಟ್ಟಿಗೆ ಸಹಾಯಧನವನ್ನು ಒದಗಿಸಿದರೂ ಜನತೆಗೆ ವಿಶ್ವವಿದ್ಯಾಲಯದ ಬಗೆಗೆ ಆತ್ಮೀಯತೆ ಬೆಳೆಯಲು ಪ್ರತಿಯೊಬ್ಬ ಕನ್ನಡಿಗನೂ ತನ್ನ ಕಾಣಿಕೆಯನ್ನು ಸಲ್ಲಿಸುವ ಸುಪ್ರಸಂಗವಿಂದು ಸನ್ನಿಹಿತವಾಗಿದೆ. ಶ್ರೀ. ಲಿಂ. ಸಂ. ಮಠಪತಿಯವರ ಮೇಲ್ಪಂಕ್ತಿಯನ್ನು ಸಹೃದಯರಾದ ಪ್ರಾಥಮಿಕ ಶಿಕ್ಷಕರೆಲ್ಲರೂ ಅನುಸರಿಸಿ ತಮ್ಮ ಶಕ್ತ್ಯನುಸಾರ ಧನಸಹಾಯ ಸಲ್ಲಿಸುವರೆಂದು ಆಶಿಸಲಾಗಿದೆ.

ಈ ಬಗೆಯ ಕಾಣಿಕೆಯನ್ನು "ಗೌರವ ಕಾರ್ಯದರ್ಶಿ, ಕರ್ನಾಟಕ ವಿಶ್ವವಿದ್ಯಾಲಯದ ನಿಧಿಸಂಗ್ರಹ ಸಮಿತಿ" ಇವರಿಗೆ ಕೊಡಬೇಕು. ಕಾಣಿಕೆ ಸಲ್ಲಿಸಿದ ಪ್ರಾಥಮಿಕ ಶಿಕ್ಷಕರ ಹೆಸರುಗಳನ್ನು ಇನ್ನು ಮುಂದೆ ಪ್ರತಿ ತಿಂಗಳು 'ಪ್ರಾಥಮಿಕ ಶಿಕ್ಷಣ' ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವದು.

ಧಾರವಾಡ
೩-೧೦-೫೪

ದಾ. ಚಿಂ. ಪಾವಟೆ
ಉಪಕುಲಪತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

Regd. No, B. 5375

ಹೊಸ ಪುಸ್ತಕಗಳು ! ※ ಹೊಸ ಅಭ್ಯಾಸ ಪತ್ರಿಕೆಯಂತೆ !!

ಸರಕಾರದವರು ೧೯೫೨-೧೯೫೩ನೆಯ ಸಾಲಿನಿಂದ ಪಠ್ಯ(TEXT) ಪುಸ್ತಕಗಳೆಂದು ಮಂಜೂರು ಮಾಡಿದ್ದಾರೆ.

ಗಣಿತ ಬೋಧೆ

(೪ ರಿಂದ ೭ನೆಯ ಇಯತ್ತೆಯ ವರೆಗೆ ಬೇರೆ ಬೇರೆಯಾಗಿ)

ತಜ್ಞ ಹಾಗು ಅನುಭವಿಕ ಪಂಡಿತರಿಂದ ಈಗಿನ ಹೊಸ ಅಭ್ಯಾಸ ಪತ್ರಿಕೆಗನುಸರಿಸಿ ಈ ಎಲ್ಲ ಪುಸ್ತಕಗಳ ಆಯಾ ತರಗತಿಗಳಿಗೆ ಬರೆಯಲ್ಪಟ್ಟಿವೆ ಹಾಗು ಗಣಿತದ ಎಲ್ಲ ವಿಷಯಗಳ ವಿವೇಚನೆಯು ಸರಿಯಾ ಮಾಡಲ್ಪಟ್ಟಿವೆ.

ಈ ವರೆಗೂ ಯಾವ ಗಣಿತಗಳಲ್ಲಿಯೂ ಸ್ಪಷ್ಟವಾಗಿ ವಿವೇಚಿಸಲ್ಪಡದ ಹಾಗು ಬಾಲಕರಿಗೆ ಕಠಿಣವೆನಿಸು **ಅಪೂರ್ಣಾಂಕ ಸಮ-ವ್ಯಸ್ತ ತ್ರೈರಾಶಿಕ, ಪ್ರಮಾಣ ಭಾಗ, ದಶಾಂಶ ಅಪೂರ್ಣಾಂಕ, ಶತಮಾನ,** ಮಾರು **ಕೊಳ್ಳುವ ಬಡ್ಡಿ, ರೋಖ-ಉದ್ದರೀ ವ್ಯವಹಾರ, ಶೋಖತಾಳೆ, ಕ್ಷೇತ್ರಫಲ, ಘನಫಲದ** ನಿಯಮ **ಗಳು, ವೇಳೆ-ಕೆಲಸ-ವೇಗ, ಭೂಮಿತಿ, ರೇಖಾರೂಪ (ಗ್ರಾಫ), ಪ್ರವಾಸದ ನಕ್ಷೆ, ಭೂಮಾಪನದ** ವಿಷಯ **ಬೀಜಗಣಿತ ಇವೇ** ಮೊದಲಾದ ವಿಷಯಗಳ ವಿವಣೆಯು ಆಯಾ ಗಣಿತ **ಬೋಧೆಗಳಲ್ಲಿ ಚಿತ್ರ,** ಉಪಕರಣ ಗಳೊಂದಿಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಸುಲಭವಾಗಿ ಮನನವಾಗುವಂತೆ ವಿವರಿಸಲಾಗಿದೆ. ಇದರೊಳಗಿ ಉದಾಹರಣೆಗಳು ವ್ಯವಹಾರಕ್ಕೆ ಸಂಬಂಧಿಸಿದವುಗಳೂ ಗಣಿತ ವಿಷಯದಲ್ಲಿ **ಅಭಿರುಚಿಯನ್ನು** ಹುಟ್ಟಿಸ ವಂಥವೂ ಇದ್ದು ಸುಲಭವಾದ ಶೈಲಿಯಲ್ಲಿ ಕೊಡಲ್ಪಟ್ಟಿವೆ.

ಕರ್ನಾಟಕ **ಕಾಲೇಜದ** ನಿವೃತ್ತ ಗಣಿತ ಪ್ರಾಧ್ಯಾಪಕರಾದ **ಶ್ರೀಮಾನ್ ಬಿ. ಬಿ. ಬಾಗಿಯವರ** ಶಿಕ್ಷಣದಲ್ಲಿ ನುರಿತ ಹಾಗೂ ಮುಂಬೈ ಮೇಲ್ಮನೆಯ ಸದಸ್ಯರಾದ **ಶ್ರೀಮಾನ್ ಎಚ್. ಎಫ್. ಕಟ್ಟಿಮ** **ಯವರೂ** ಇವುಗಳನ್ನು **ಓದಿ** ಇವುಗಳಲ್ಲಿ ಪ್ರತಿಯೊಂದು ಪ್ರಮೇಯದ ವಿವರಣೆಯನ್ನು ಶಿಕ್ಷಕರಿಗ ವಿದ್ಯಾರ್ಥಿಗಳಿಗೂ ಮನದಟ್ಟಾಗುವ **ರೀತಿ**ಯಲ್ಲಿ ಕ್ರಮಬದ್ಧವಾಗಿಯೂ **ತರ್ಕಶುದ್ಧ**ವಾಗಿಯೂ ಮಾಡಲಾಗಿ

माता का उपदेश— १, २ (ನನ್ನ ತಾಯಿಯ ಹಿಂದೀ ಸಂಸ್ಕರಣ) ಸಿದ್ಧವಾಗಿವೆ.

नीति कथा— १, २, ३ (ನಾಡದ ನೆಲೆಗಾರ ಹಿಂದೀ ಸಂಸ್ಕರಣ) ಅಚ್ಚಿನಲ್ಲಿ!

ಹಿಂದಿ ವ್ಯಾಕರಣ— (ಅಚ್ಚಿನಲ್ಲಿ)

ಕನ್ನಡ ಸಾಹಿತ್ಯ ಪ್ರಕಾಶನ,
ಧಾರವಾಡ

Printed by M. A. Kamat, B. Sc. at Jai Hind Art Press Dharwar. Edited and Publish S. P. Patil B. M. Shintri, S. R Tatti, & Smti. P. A. Bhaskar. at the Kann Prathamik Shikshan Office, Govt. Training College for Men, Dharwar.

ಕನ್ನಡ

ಪ್ರಾಥಮಿಕ ಶಿಕ್ಷಣ

ದಾ ಳ ರೂ] ಪ್ರಧಾನ ಸಂಪಾದಕರು ಶ್ರೀ. ಎಸ್. ಪಿ. ಪಾಟೀಲ [ಬಿಡಿ ಪ್ರ...

ನವ್ಹಂಬರ ೧೯೬೪

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಕೆ. ಬಿ. ತೀರಗಾಂವಕರ, ಬಿ. ಎಸ್‌ಸಿ., (ಆನರ್ಸ) ಬಿ. ಟಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ

ಪ್ರಧಾನ ಸಂಪಾದಕರು : ಶ್ರೀ. ಎಸ್. ಸಿ. ಪಾಟೀಲ ಬಿ. ಎ., ಬಿ. ಟಿ., ಡಿ. ಪಿ. ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಸಹ ಸಂಪಾದಕರು:

ಶ್ರೀಮತಿ ಪಿ ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಧಾ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೪ || ನವ್ಹಂಬರ ೧೯೫೪ || ಸಂಚಿಕೆ ೬

ಪರಿವಿಡಿ

೧. ಸಂಪಾದಕೀಯ ೨
೨. ಭಾಕ್ರಾ-ನಾಂಗಲ್ ಕಾಲುವೆ ....ಶ್ರೀ. ಶಿಂತ್ರಿ ಬಸಪ್ಪನವರು ೫
೩. ಶಾಲೆ ಹಾಗೂ ಸಮಾಜಸೇವೆ ....ಶ್ರೀ. ಆರ್. ಎಮ್. ಅಡಕಿ.... ೮
೪. ವಿದುಳಿನಿಂದ ಮನಸ್ಸಿಗೆ ....ಶ್ರೀ. ಈಶ್ವರ ಶಿ. ಬಿದರಿ ೯
೫. ನಾಗವರ್ಮನ ಕಾಲದ ಹಳಗನ್ನಡ ವ್ಯಾಕರಣ ....ಶ್ರೀ. ತಟ್ಟಿ ಶ್ಯಾಮರಾಯರು ೧೩
೬. ದಿ. ಶ್ರೀ. ರಫಿ ಅಹಮ್ಮದ ಕಿಡವಾಯಿ ....ಶ್ರೀ ಶಿಂತ್ರಿ ಬಸಪ್ಪನವರು ೧೬
೭. ಮೂಲ ಶಿಕ್ಷಣದಲ್ಲಿ ರಾಷ್ಟ್ರೀಯ ಮಹಾಪುರುಷರ ಜಯಂತಿ ಹಾಗು ಪುಣ್ಯತಿಥಿಗಳ ಆಚರಣೆ ....ಶ್ರೀಮತಿ ಭಾಗಿರಥಿಬಾಯಿ ಕದಮ....೧೯
೮. ಜೀವನ ಶಿಕ್ಷಣ ಶಾಲೆಗಳಲ್ಲಿ ಚರ್ಚಾಕೂಟದ ಮಹತ್ವ ....ಶ್ರೀ. ಈಶ್ವರಚಂದ್ರ ಚಿಂತಾಮಣಿ....೨೧
೯. ಕೇಶಿರಾಜನ ಕಾಲದ ಹಳಗನ್ನಡ ವ್ಯಾಕರಣ ....ಶ್ರೀ. ತಟ್ಟಿ ಶ್ಯಾಮರಾಯರು ೨೨
೧೦. ಪ್ರಾಥಮಿಕ ಶಿಕ್ಷಣ ಪ್ರಪಂಚ ೨೫

ಸಂಪಾದಕೀಯ

ದೀಪಾವಳಿ:— ಜ್ಞಾನದ ಬಲುದಿಂದ ಅಜ್ಞಾನದ ಕೇಡು ನೋಡಯ್ಯ,
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ....

ನಾಡಹಬ್ಬವು ಮುಗಿಯಿತೆನ್ನುವಷ್ಟರಲ್ಲಿಯೇ ದೀಪಾವಳಿಯು ಬಂದಿತು. ನಾಡಿನ ದಿಗಂತದ ಮೇಲೆ ಇಂದಿಗೆ ಏಳು ವರ್ಷಗಳ ಹಿಂದೆ ಮೂಡಿ ಬಂದ ದೀಪಾವಳಿಯು ಇಂದು ನಾಡಿನಲ್ಲಿ ಅಂದಿನ ಪರಂಪರೆಯಂತೆ ಆಚರಿಸಲ್ಪಡುತ್ತಿರಲಿಕ್ಕೆ ಸಾಕು. ದೀಪಾವಳಿಯು ಇಂದು ದೊಡ್ಡ ಹಬ್ಬವಾಗಿದೆ. ಶತಮಾನಗಳಿಂದಲೂ ಶ್ರೇಷ್ಠ ಹಬ್ಬವೆಂದು ಎಣಿಸಲ್ಪಟ್ಟಿದೆ ಬ್ರಹ್ಮನ ಹಬ್ಬದಿಂದ ಆರಂಭವಾಗಿ ದೀಪಾವಳಿಯು ಕಾರ್ತೀಕ ಶುದ್ಧ ದ್ವಿತೀಯದ ವರೆಗೂ ನಡೆಯುವದು. ಅದರಲ್ಲಿಯೂ ನರಕ ಚತುರ್ದಶಿ ಅಮಾವಸ್ಯೆ ಹಾಗು ಕಾರ್ತಿಕ ಶುದ್ಧ ಪ್ರತಿಪದೆ ಈ ದಿನಗಳಂತೂ ಈ ಹಬ್ಬದ ಸಂಭ್ರಮದ ದಿನಗಳೆಂದು ಹೇಳಬಹುದು. ದೀಪಾವಳಿಗೆ ಪುರಾಣಪ್ರಾಶಸ್ತ್ಯವು ಉಂಟು. ನರಕಾಸುರನ ಉಪದ್ರವವನ್ನು ತಾಳಲಾರದೆ ದೇವತೆಗಳು ವಿಷ್ಣುವಿಗೆ ಬೇಡಿಕೊಳ್ಳಲು ಶ್ರೀ ಕೃಷ್ಣನು ಆ ನರಕಾಸುರನನ್ನು ಕೊಂದುದು ದೀಪಾವಳಿ ಅಮಾವಾಸ್ಯೆಯ ಮುನ್ನಾದಿನ. ಆದರಂತೆ ಪ್ರತಿಪದೆಯೂ ಒಳ್ಳೇ ಮಹತ್ವದ ಹಾಗು ಶುಭದಿನವಾಗಿದೆ. ಅಂದು ಆಗುವ ಆಗುಹೋಗುಗಳು ಇಡಿಯ ವರ್ಷ ಆಗುವವೆಂಬ ಗ್ರಹಿಕೆ ಇದೆ. ಈ ದಿನದಿಂದ ವ್ಯಾಪಾರಸ್ಥರು ತಮ್ಮ ಅಂಗಡಿಗಳನ್ನು ಶ್ರಂಗರಿಸುವರು. ಹೊಸ ಖಾತೆ ಕೀರ್ದಿಗಳನ್ನುಬರೆದು ಹೊಸ ವರ್ಷವನ್ನು ಪ್ರಾರಂಭಿಸುವರು. ಮನೆಮಠಗಳಲ್ಲಿ ದೀಪ, ಅಂಗಡಿಗಳಲ್ಲಿ ಸಾಲುದೀಪ, ಕಟ್ಟೆ ಉಪ್ಪರಿಗೆಗಳ ಮೇಲೆ ರಾರಾಜಿಸುವ ದೀಪ, ಆಕಾಶದಲ್ಲಿ ಹಾರಾಡುವ ಆಕಾಶಬುಟ್ಟಿಗಳಲ್ಲಿಯ ದೀಪ, ರಂಗವರ್ಣಿತ ಬಣ್ಣ ಬಣ್ಣದ ಕಾಗದದ ಬುಟ್ಟಿಗಳಲ್ಲಿಯ ಬಣ್ಣ ಬಣ್ಣದ ದೀಪಗಳಿಂದ ದೀಪಾವಳಿಯು ಎಲ್ಲರಿಗೆ ಆನಂದವನ್ನು ಅಭಿಮಾನವನ್ನು ಉಂಟು ಮಾಡದೆ ಇರದು.

ದೀಪಾವಳಿಯಲ್ಲಿ ಪಗಡೆಯ ಆಟವು ಒಂದು ಮಹತ್ವವನ್ನು ಪಡೆದಿದೆ. ಕೌರವ- ಪಾಂಡವರಲ್ಲಿ ಪಗಡೆಯ ಆಟವು ಆಗಿ ಪಾಂಡವರು ವನವಾಸಕ್ಕೆ ಹೊರಟುದು ದೀಪಾವಳಿಯ ಸಮಯದಲ್ಲಿಯೆಂದು ಪ್ರತೀತಿ ಇದೆ. ಅವರ ನೆನಪಿಗಾಗಿ ಪಾಂಡವರನ್ನು ಪೂಜಿಸುತ್ತಾರೆ. ಕೆಲವು ಕಡೆಗಳಲ್ಲಿ ಈ ಹಬ್ಬಕ್ಕೆ ಹಟ್ಟಿ ಹಬ್ಬವೆಂದೂ ಕರೆಯುವರು. ಇನ್ನೂ ಕೆಲವು ಕಡೆ ಇದಕ್ಕೆ ಅಳಿಯರ ಹಬ್ಬವೆಂತಲೂ ಅನ್ನುತ್ತಾರೆ. ನೌಕರದಾರರೂ ವಿದ್ಯಾರ್ಥಿಗಳೂ ಈ ಹಬ್ಬದ ರಜೆಯ ದಿನಗಳನ್ನು ಒಳ್ಳೇ ಸಂತೋಷದಿಂದ ಕಳೆಯುತ್ತಾರೆ. ಐದು ದಿನಗಳ ವರೆಗೆ ನಡೆಯುವ ಈ ಹಬ್ಬವನ್ನು ಸ್ತ್ರೀ-ಪುರುಷರೂ, ನೌಕರರೂ, ವ್ಯಾಪಾರಸ್ಥರೂ ಹಿರಿಕಿರಿಯರೂ ಬಗೆ ಬಗೆಯಾಗಿ ಆಚರಿಸುವರು.

ಸಂಪಾದಕೀಯ

ಕತ್ತಲೆಯನ್ನು ಹೊಡೆದೋಡಿಸಿ ಪ್ರಶಾಂತವಾದ ಬೆಳಕನ್ನು ತಂದುಕೊಡುವ ದೀಪಾವಳಿಯು ಸಮಾಜದ ಅಜ್ಞಾನ ಆಲಸ್ಯಗಳನ್ನು ಕಿತ್ತುಹಾಕಿ ಸಂಸ್ಕೃತಿ ಸಂಪತ್ತಭಿವೃದ್ಧಿಗಳನ್ನು ತರುವಂತಾಗಲಿ.

ಕರುಣಾಳು ಬಾ ಬೆಳಕೆ,
ಮುಸುಕಿದೀ ಮಬ್ಬಿನಲಿ ಕೈಹಿಡಿದು ನಡೆಸೆನ್ನನು;
ಇರುಳು ಕತ್ತಲೆಗವಿ, ಮನೆದೂರ,
ಕನಿಕರಿಸಿ ಕೈಹಿಡಿದು ನಡೆಸೆನ್ನನು.

ಸಂಯುಕ್ತ ರಾಷ್ಟ್ರ ದಿನಾಚರಣೆ

ಅಕ್ಟೋಬರ ೨೪. ವಿಶ್ವದಲ್ಲೆಲ್ಲ ಸಂಯುಕ್ತ ರಾಷ್ಟ್ರದಿನವನ್ನು ಆಚರಿಸುವ ದಿನ. ಎರಡನೆಯ ಜಾಗತಿಕ ಮಹಾಯುದ್ಧದಿಂದ ಹತಾಶವಾದ ಜಗತ್ತು ಈ ರಾಷ್ಟ್ರ ಸಂಘವನ್ನು ಸ್ಥಾಪಿಸಿಕೊಂಡು ಇನ್ನು ಮುಂದೆ ವಿಶ್ವದಲ್ಲಿ ಎಲ್ಲಿಯೂ ಯುದ್ಧಗಳಾಗಬಾರದು; ಎಲ್ಲೆಡೆಯಲ್ಲಿಯೂ ಶಾಂತಿಯು ನೆಲೆಗೊಳ್ಳಬೇಕು; ಬಲಹೀನ ಹಾಗೂ ಹಿಂದುಳಿದ ರಾಷ್ಟ್ರಗಳು ಮುಂದುವರಿಯಬೇಕು. ಇವೇ ಮೊದಲಾದ ಅನೇಕ ತತ್ವಗಳನ್ನು ಮುಂದಿಟ್ಟುಕೊಂಡು ಮಾನವಕುಲದ ಶಾಂತಿಗಾಗಿ ಸರ್ವಾಂಗೀಣ ಉನ್ನತಿಗಾಗಿ, ಬಂಧುತ್ವವನ್ನು ನೆಲೆಗೊಳಿಸುವುದಕ್ಕಾಗಿ ಪ್ರಯತ್ನಿಸುತ್ತಿದೆ. ಇದು ಅತ್ಯಂತ ಶ್ಲಾಘನೀಯವಾದಯೋಗ್ಯವಾದ ಕಾರ್ಯವಾಗಿದೆ. ಭಾರತವು ಈ ಯುಕ್ತರಾಷ್ಟ್ರಸಂಘದಲ್ಲಿ ಪ್ರಮುಖವಾದ ತನ್ನದೇ ಆದ ಪಾತ್ರವನ್ನು ವಹಿಸಿದೆ; ವಹಿಸುತ್ತಲಿದೆ. ಈ ಸಂಘದಲ್ಲಿ ಅನೇಕ ಉಪಸಮಿತಿಗಳಿವೆ. ಭದ್ರತಾಮಂಡಳ, ಶೈಕ್ಷಣಿಕ, ಸಾಂಸ್ಕೃತಿಕ, ವೈಜ್ಞಾನಿಕ ಸಮಿತಿ ಇವೆ ಮೊದಲಾದವು ಈ ಸಮಿತಿಗಳಲ್ಲಿ ಮುಖ್ಯವಾದವುಗಳು. ಈ ಎಲ್ಲ ಸಮಿತಿಗಳು ತಮ್ಮ ಕಾರ್ಯವನ್ನು ಯಥಾವತ್ತಾಗಿ ನಡೆಸಿರುವುದು ಯಥಾಯೋಗ್ಯವಾಗಿದೆ.

ಭಾರತದ ತುಂಬೆಲ್ಲ ಹಳ್ಳಿ ಶಹರಗಳಲ್ಲಿ ವಿವಿಧ ಸಂಸ್ಥೆಗಳಲ್ಲಿ ಈ ದಿನವನ್ನು ಯಥಾಯೋಗ್ಯವಾಗಿ ಆಚರಿಸಿ 'ಯುನೋದ'' ತತ್ವಗಳನ್ನೂ ಆದರ್ಶಗಳನ್ನೂ ಕಾರ್ಯಗಳನ್ನೂ ಜನತೆಯು ಕಂಡುಕೊಡಿರಲಿಕ್ಕೆಸಾಕು.

ಸಮಾಜ ಶಿಕ್ಷಣ ತರಬೇತಿ

ರಾಷ್ಟ್ರದಲ್ಲಿ ನಿರಕ್ಷರತೆಯ ಪೆಡಂಭೂತವು ತಾಂಡವವಾಡುತ್ತಿರುವದನ್ನು ಕಂಡು ಜನತಾ ಸರಕಾರದವರು ಅಧಿಕಾರಕ್ಕೆ ಬಂದಂದಿನಿಂದ ಈ ನಿರಕ್ಷರತೆಯನ್ನು ಹೋಗಲಾಡಿಸಿ ಜನರಲ್ಲಿ ತಮ್ಮ ಸರಕಾರ, ರಾಜ್ಯಘಟನೆ ಜಗತ್ತಿನ ವಿವಿಧ ಸುದ್ದಿಗಳು, ಸಾಮಾಜಿಕ ರೀತಿನೀತಿಗಳು, ಆರೋಗ್ಯ ಜೀವನ, ವ್ಯಾಪಾರ ಮೊದಲಾದ ಸುಖ ಜೀವನದ ಅವಶ್ಯಕತೆಗಳನ್ನು ತಿಳಿಸಿ ಕೊಟ್ಟು ಮಾನವನನ್ನು ಮಾನವನಂತೆ ಇರಲಿಕ್ಕೆ ಯೋಗ್ಯರನ್ನಾಗಿ ಮಾಡಲ ಯೋಜಿಸಿದ್ದಲ್ಲದೆ ಹಳ್ಳಿ ಹಳ್ಳಿಗಳಲ್ಲಿ ಸಮಾಜ ಶಿಕ್ಷಣ ವರ್ಗಗಳನ್ನು ತೆರೆಯಿಸಿ ಅಲ್ಲಿ ಕೆಲಸ ಮಾಡುವ ಕಾರ್ಯಕರ್ತರಿಗೆ ಸಹಾಯ ಧನವನ್ನು ಸಲ್ಲಿಸಹತ್ತಿದರು. ಈ ರೀತಿಯಾದ ಸಮಾಜ ಶಿಕ್ಷಣ ವರ್ಗಗಳ ಮುಖಾಂತರ ಹಳ್ಳಿಯ ನಿರಕ್ಷರಿ ಪ್ರಬುದ್ಧರು ಸಾಕ್ಷರತೆಯನ್ನೂ ಸಾಮಾಜಿಕ ಜ್ಞಾನವನ್ನೂ ಕೂಡಿಯೇ ಸಂಪಾದಿಸಲು ಶಕ್ತರಾಗುವ ಈ ನಿರಕ್ಷರಿ ಪ್ರಬುದ್ಧರಿಗೆ ಕಲಿಸತಕ್ಕ ಸಮಾಜ ಶಿಕ್ಷಣ ಕಾರ್ಯಕರ್ತರು ತರಬೇತಿ ಹೊಂದಿದವರು ಇರುವದು ಯೋಗ್ಯವೆಂದು ತಿಳಿದು ವರ್ಷದ ಎರಡು ದೀರ್ಘಾವಧಿ ಬಿಡುವುಗಳಾದ ಬೇಸಿಗೆಯ ಹಾಗೂ ಚಳಿಗಾಲದ ಬಿಡುವುಗಳಲ್ಲಿ ಸಮಾಜ ಶಿಕ್ಷಣ ಕಾರ್ಯಕರ್ತರಿಗಾಗಿ ತರಬೇತಿವರ್ಗಗಳನ್ನು ನಡೆಯಿಸುವದು ರೂಢಿಯಲ್ಲಿ ಬಂದಿದೆ. ಈ ಕಾರ್ಯಕರ್ತರಿಗೆ ತಮ್ಮ ಎರಡು ವಾರಗಳ ತರಬೇತಿಯ ಅವಧಿಯಲ್ಲಿ ೨೦/– ರೂಪಾಯಿ ಸ್ಟೈಪೆಂಡ ಕೊಡುವದು ನಿಯಮವಾಗಿದೆ. ಈ ಅವಧಿಯಲ್ಲಿ ಅವರಿಗೆ ಅನೇಕ ವಿಷಯಗಳ ಜ್ಞಾನಮಾಡಿಕೊಡುವದಲ್ಲದೆ. ಪ್ರವಾಸಗಳನ್ನು ಹಾಗೂ ಇನ್ನಿತರ ಚಟುವಟಿಕೆಗಳನ್ನು ಇಡಲಾಗುತ್ತಿದೆ; ವ್ಯಾಖ್ಯಾನಗಳನ್ನು

ಏರ್ಪಡಿಸಲಾಗುತ್ತಿದೆ. ಹೀಗೆ ಈ ವರ್ಗಗಳಲ್ಲಿ ತರಬೇತಿಯನ್ನು ಹೊಂದಿ ಪುನಃ ತಮ್ಮ ತಮ್ಮ ಹಳ್ಳಿಗಳಿಗೆ ಹೋಗಿ ಸಮಾಜ ಶಿಕ್ಷಣ ವರ್ಗಗಳನ್ನು ನಡೆಸಿದ್ದಾದರೆ ಪ್ರಾಢರಿಗೆ ಹಾಗೂ ಹಳ್ಳಿಗರಿಗೆ ಸಮಾಜ ಶಿಕ್ಷಣದ ಜ್ಞಾನವು ಹೆಚ್ಚಿಗೆ ಲಭಿಸುವುದರಲ್ಲಿ ಸಂದೇಹವಿಲ್ಲ. ಅಕ್ಟೋಬರ ೧೪ ರಿಂದ ೩೧ ರ ವರೆಗೆ ಒಂದು ಅಲ್ಪಾವಧಿ ತರಬೇತಿ ವರ್ಗವು ನಮ್ಮ ಕಾಲೇಜದಲ್ಲಿ ನಡೆಯಿತು. ೫೫ ಜನ ಕಾರ್‍ಯಕರ್ತರು ಈ ವರ್ಗಕ್ಕೆ ಹಾಜರಿದ್ದರು. ಮೊದಲನೆಯ ದಿನ ಶ್ರೀ ವ್ಹಿ. ಆರ್. ಮುಧೋಳಕರ ಇವರಿಂದ ಉದ್ಘಾಟನೆಯಾಗಿ ಕೊನೆಯ ದಿನ ನಮ್ಮ ಜಿಲ್ಹೆಯ ಶಿಕ್ಷಣಾಧಿಕಾರಿಗಳಾದ ಶ್ರೀ ಕೃಷ್ಣರಾವ ತೇರಗಾಂವಕರ ಇವರ ಹಿರಿಯತನದಲ್ಲಿ ವರ್ಗದ ಮುಕ್ತಾಯವಾಯಿತು. ಪ್ರಿನ್ಸಿಪಾಲರ ಸಂಚಾಲಕತ್ವದಲ್ಲಿ ಮೂರು ಜನ ಬೋಧಕರು ವರ್ಗದ ನಿತ್ಯದ ಕೆಲಸವನ್ನು ನೋಡುತ್ತಿದ್ದರು ಇದಲ್ಲದೆ ಬೇರೆ ಬೇರೆ ಖಾತೆಗಳ ಬಗ್ಗೆ ಮಾಹಿತಿ ಕೊಡಲಿಕ್ಕೆ ಸಂಬಂಧಿಸಿದ ಅಧಿಕಾರಿಗಳಿಂದಲೂ ಸಮಾಜ ಶಿಕ್ಷಣದಲ್ಲಿ ಆಸ್ಥೆವಹಿಸಿ ದುಡಿಯುತ್ತಿರುವ ಮಹನೀಯರಿಂದಲೂ ಅನೇಕ ವ್ಯಾಖ್ಯಾನಗಳನ್ನು ಇಡಿಸಲಾಗಿತ್ತು ಒಟ್ಟಿನಲ್ಲಿ ಕಾರ್‍ಯಕರ್ತರಿಗೆ ಸಮಾಜ ಶಿಕ್ಷಣದ ದಿಗ್ದರ್ಶನವನ್ನೂ ಅವರ ದೈನಂದಿನ ಕಾರ್‍ಯದಲ್ಲಿ ಮಾರ್ಗದರ್ಶನವನ್ನೂ ಮಾಡಿಕೊಡುವದರಲ್ಲಿ ಈ ತರಬೇತಿ ವರ್ಗವು ಯಶಸ್ವಿಯಾಯಿತೆಂದು ಹೇಳಬಹುದಾದರೂ ಸಮಾಜ ಶಿಕ್ಷಣದ ಯೋಜನೆಯನ್ನು ಸಮಾಧಾನಕರವಾಗಿ ಕಾರ್‍ಯರೂಪಕ್ಕೆ ತರುವಾಗ ಎದುರಿಸಬೇಕಾದ ಅಡಚಣೆಗಳನ್ನು ಗುರುತಿಸಿ ಅವುಗಳ ನಿವಾರಣೋಪಾಯಗಳನ್ನು ಕೈಕೊಳ್ಳುವದು ಒಳ್ಳೆ ಮಹತ್ವದ ಸಂಗತಿಯಾಗಿದೆ

೩ ಜವಾಹರಲಾಲರ ಜನ್ಮ ದಿನೋತ್ಸವ:—

ಇದೇ ತಿಂಗಳ ದಿನಾಂಕ ೧೪ ರಂದು ನಮ್ಮ ದೇಶದ ಮುಖ್ಯ ಮಂತ್ರಿಗಳಾದ ಶ್ರೀ. ಜವಾಹರಲಾಲ ನೆಹ್ರುರವರಿಗೆ ೬೫ ವರುಷಗಳು ತುಂಬುವವು. ಅಂದು ನಮ್ಮ ದೇಶದ ಒಳಗೂ ಹೊರಗೂ ಅಸಂಖ್ಯ ಜನರು ಅವರ ಜನ್ಮದಿನೋತ್ಸವನ್ನು ವಿಜೃಂಭಣೆಯಿಂದಲೂ ಹುರುಪು ಹುಮ್ಮಸುಗಳಿಂದಲೂ ಆಚರಿಸುವರು. ಮಹಾತ್ಮಾಜಿಯವರೊಬ್ಬರನ್ನು ಬಿಟ್ಟರೆ ಭಾರತಮಾತೆಯ ಸೇವೆಯಲ್ಲಿ ಇವರನ್ನು ಮೀರುವವರಿಲ್ಲ. ಇವರಿಂದ ಭಾರತದ ಭವ್ಯ ಭವಿಷ್ಯತ್ತಿನ ರಚನೆ ಪೂರ್ತಿಯಾಗಲಿದೆ; ವಿಶ್ವಶಾಂತಿ ನೆಲೆಗೊಳ್ಳಲಿದೆ. ಆದುದರಿಂದ ಅವರ ಜನ್ಮದಿನೋತ್ಸವಗಳು ಅನಂತವಾಗಿ ಬರಲೆಂದು ದೇವರಲ್ಲಿ ನಮ್ಮ ನಮ್ರವಾದ ಪ್ರಾರ್ಥನೆ.

ಕಂಬನಿ

ದಿನಾಂಕ ೨೪-೧೦-೧೯೫೪ ರ ರಾತ್ರಿ ೮-೧೫ ಗಂಟೆಗೆ ಕೇಂದ್ರ ಆಹಾರ ಮಂತ್ರಿಗಳಾದ ಶ್ರೀ ರಫಿ ಅಹಮ್ಮದ ಕಿದ್ವಾಯಿಯವರು ಹೃದಯ ವಿಕಾರದಿಂದ ವಿಧಿವಶರಾದರು. ಇವರ ಆಕಸ್ಮಿಕ ನಿಧನದಿಂದ ಇಡಿಯ ರಾಷ್ಟ್ರವೇ ಶೋಕ ಸಾಗರದಲ್ಲಿ ಮುಳುಗಿತು; ದೇಶವು ತುಂಬಿ ಬಾರದ ಹಾನಿಯನ್ನು ಅನುಭವಿಸಬೇಕಾಯಿತು. ಶ್ರೀ ಕಿದ್ವಾಯಿಯವರು ಉಜ್ವಲ ದೇಶಭಕ್ತರೂ, ಕರ್ತೃತ್ವಶಾಲಿಗಳೂ, ಧೈರ್ಯಶಾಲಿಗಳೂ, ಅಸಾಧ್ಯವಾದುದನ್ನು ಸಾಧ್ಯಮಾಡುವ ಧೀರೋದಾತ್ತ ಧೋರಣೆಯುಳ್ಳವರೂ, ಮುತ್ಸದ್ದಿಗಳೂ, ಸಾಹಸಿಗಳೂ ಹಿಡಿದ ಕೆಲಸವನ್ನು ಆತಂಕಗಳ ಮಧ್ಯದಲ್ಲಿ ಸಹ ಕೈಗೂಡಿಸುವ ಜಿಗುಟುತನವುಳ್ಳವರೂ ಆಗಿದ್ದರು. ನಮ್ಮ ದೇಶದ ಸಮಸ್ಯೆಯನ್ನು ಯಶಸ್ವಿಯಾಗಿಬಿಡಿಸಿ ಎಲ್ಲರ ಉಪಕಾರ ಹಾಗೂ ಪ್ರಶಂಸನೆಗೆ ಪಾತ್ರರಾದ ಮಹಾ ಮುಖಂಡರು. ಇವರು ಅಖಂಡ ೩೫ ವರುಷಗಳವರೆಗೆ ರಾಷ್ಟ್ರಕ್ಕೆ ಸೇವೆ ಸಲ್ಲಿಸಿದ ಅಪ್ರತಿಮ ಸಂಘಟನಾ ಶಕ್ತಿಯುಳ್ಳ ಶ್ರೀ ಕಿದ್ವಾಯಿಯವರ ನಿಧನದಿಂದ ದೇಶವು ವಜ್ರಾಘಾತವನ್ನು ಅನುಭವಿಸಿತು. ನಮ್ಮ ದೇಶಕ್ಕೆ ಕಿದ್ವಾಯಿಯವರ ಅಗತ್ಯತೆ ಇನ್ನೂ ಇರುವಾಗಲೇ ಅವರು ನಮ್ಮನ್ನು ಅಗಲಿ ಹೋದರು. ಇದು ದುರದೃಷ್ಟ, ವಿಧಿವಶವನ್ನು ಮೀರುವವರಾರು. ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ಭಾಕ್ರಾ-ನಾಂಗಲ್ ಕಾಲುವೆ

★

ಲೇಖಕರು :
ಶ್ರೀ. ಶಿಂತ್ರಿ ಬಸಪ್ಪನವರು
ಬಿ. ಎ. ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್ಸಪೆಕ್ಟರ,
ದಕ್ಷಿಣಭಾಗ, ಧಾರವಾಡ.

ಪ್ರಸ್ತಾವನೆ

ವಿಶ್ವದ ಮಹಾ ಯೊಜನೆಗಳಲ್ಲಿ. ಇದೊಂದಾಗಿದೆ. ನಾಂಗಲ್ ವಿದ್ಯುಚ್ಛಕ್ತಿ ಕಾಲುವೆಯ ಉದ್ಘಾಟನೆಯ ಸಮಾರಂಭವು ದಿನಾಂಕ ೮ – ೭–೧೯೫೪ ರಂದು ಪ್ರಧಾನಾಮಾತ್ಯರಾದ ಪಂಡಿತ ಜವಾಹರಲಾಲರವರ ಅಮೃತ ಹಸ್ತದಿಂದ ಒಳ್ಳೇ ವೈಭವದಿಂದಲೂ ಅಟ್ಟ-ಹಾಸದಿಂದಲೂ ನಾಂಗಲ್‌ದಲ್ಲಿ ನೆರವೇರಿದ್ದನ್ನು ಓದು-ಗರು ಮರೆತಿರಲಿಕ್ಕಿಲ್ಲವಷ್ಟೇ. ನಾಂಗಲ್ ಕಾಲುವೆಯು ಇನ್ನು ಮುಂದೆ ಕಟ್ಟಲಾಗುವ ಭಾಕ್ರಾಕಾಲುವೆಯು ಒಂದು ಭಾಗವು. ನಾಂಗಲ್ ಕಾಲುವೆಯು ನಾಂಗಲ್ ರೇಲ್ವೆ ನಿಲ್ದಾಣದಿಂದ ಸ್ವಲ್ಪ ಅಂತರದ ಮೇ ಲಿ ದೆ. ನಿಲ್ದಾಣದಿಂದ ಕಾಲುವೆಗೆ ಬರಹೋಗಲು ಉತ್ತಮ ಮಾರ್ಗವಿದೆ. ಇದೇ ಮಾರ್ಗದಿಂದಲೇ ಪಂಡಿತರವರು ಆ ದಿನ ಸವಾರಿ ಮಾಡಿದರು. ಸಮಾರಂಭವು ಜರುಗಿದ ಸ್ಥಳದಲ್ಲಿ ಸುಮಾರು ೨ ಲಕ್ಷ ಜನರಿಗೆ ಕೂಡ್ರುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಉತ್ತಮಕೆಲಸ-ಗಾರರಿಗೆ ಪ್ರಧಾನಾಮಾತ್ಯರ ಅಮೃತ ಹಸ್ತದಿಂದ ಬಹುಮಾನಗಳು ಹಂಚಲ್ಪಟ್ಟವು. ಕೇವಲ ಉದ್ಘಾಟನೆ ಗೋಸುವ ರಚಿಸಲ್ಪಟ್ಟಿದ್ದ ವಿದ್ಯುತ್‌ಗುಂಡಿಯನ್ನೊತ್ತಿ ನೆಹರೂವರು ಸತಲಜ ನದಿಯ ನಿರನ್ನು ನಾಂಗಲ್–ಕಾಲುವೆಯಲ್ಲಿ ಬಿಟ್ಟು ಅಸ್ಖಲಿತ ವಾಣಿಯಿಂದ ಉತ್ತಮೋತ್ತಮವಾದ ಭಾಷಣವೊಂದನ್ನು ಮಾಡಿದರು ಸಂಜೆಯಲ್ಲಿ ಸತಲಜ ನದಿಯ ಮೇಲೆ ದಿಪೋತ್ಸವ-ವಾಯಿತು.

ಯೋಜನೆಯ ಉದ್ದೇಶ.

ಈ ಎರಡೂ ಕಾಲುವೆಗಳು ಭಾಕ್ರಾ–ನಾಂಗಲ್ ಯೋಜನೆಯೆಂಬ ಹೆಸರಿನಿಂದ ಪ್ರಸಿದ್ಧವಾಗಿವೆ. ಈ ಯೋಜನೆಯು ಪೂರ್ವ ಪಂಜಾಬ, ಪೆಪ್ಸು ಹಾಗೂ ರಾಜಸ್ತಾನ ರಾಜ್ಯಗಳಿಗೆ ನೀರಾವರಿಯನ್ನೂ ವಿದ್ಯುತ್ತನ್ನೂ ಪೂರೈಸುವ ಹೆಗ್ಗುರಿಯನ್ನು ಇಟ್ಟುಕೊಂಡಿದೆ. ಈ ಯೋಜನೆಯು ಪ್ರಕಾರ ಎರಡು ಅಣೆಕಟ್ಟುಗಳನ್ನೂ ಎರಡುಜಲವಿದ್ಯುದಾಗರಗಳನ್ನೂ ಕಟ್ಟಲಾಗುವದು. ಈಗ ನಾಂಗಲ್‌ದಲ್ಲಿ ಅಣೆಕಟ್ಟನ್ನು ಕಟ್ಟಲಾಗಿದ್ದು ಭಾಕ್ರಾ ಆಣೆಕಟ್ಟನ್ನು ಕಟ್ಟುವ ಕೆಲಸವು ಬೇಗನೆ ಪ್ರಾರಂಭವಾಗಲಿದೆ.

ನಾಂಗಲ್ ಕಾಲುವೆ.

೧೯೪೬ ರಲ್ಲಿ ಈ ಕಾಲುವೆಯನ್ನು ಕಟ್ಟಲು ಪ್ರಾರಂಭವಾಯಿತು. ನಿರ್ದಿಷ್ಟಪಡಿಸಿದ ಸಮಯಕ್ಕಿಂತ ಒಂದು ವರ್ಷ ಮೊದಲೇ ಈ ಕಾಲುವೆಯನ್ನು ಕಟ್ಟುವ ಕೆಲಸವು ಮುಗಿದಿದೆ. ಈ ಕಾಲುವೆಯ ಮೂಲ ಉದ್ದೇಶವು ಮಾರ್ಗದಲ್ಲಿ ಕಟ್ಟಲಿರುವ ಎರಡು ವಿದ್ಯುದಾಗರಗಳಿಗೆ ನೀರು ಪೂರೈಸಿ ಮುಂದೆ ನೀರಾವರಿಗಾಗಿ ಭಾಕ್ರಾ ಕಾಲುವೆಯನ್ನು ರೂಪಾರದ ಹತ್ತರ ಕೂಡಿಕೊಳ್ಳುವದು. ನೀರು ಹೆಚ್ಚು ವೇಗದಿಂದ ಹರಿದು ಹೋಗ ಬೇಕೆಂಬ ಉದ್ದೇಶದಿಂದ ಈ ಕಾಲುವೆಯ ಪಕ್ಕದ ಗೋಡೆಗಳಿಗೆ ಕೆಲವು ಕಡೆ ಸಿಮೆಂಟ ಕಾಂಕ್ರೀಟ ಮಾಡಿಸಿದೆ, ಹಾಗೂ ಕೆಲವು ಕಡೆ ಹಂಚುಗಳನ್ನು ಹೊದಿಸಲಾಗಿದೆ. ಈ ಕಾಲುವೆಯು ೧೪೦ ಅಡಿ ಅಗಲ ೨೧ ಅಡಿ ಆಳವಾದದ್ದಿದೆ. ಇದು ಹಿಮಾಲಯದ ಅಡಿಗುಂಟ ಅತ್ಯಂತ ಕಡಿದಾದ ಮತ್ತು ಕಠಿಣ ಪ್ರದೇಶಗಳಲ್ಲಿ ಹರಿಯುತ್ತಿದೆ. ವಿದೇಶೀಯರ ಸಹಾಯವಿಲ್ಲದೆ ನಮ್ಮ ಭಾರತೀಯ ಇಂಜನಿಯರರೇ ಕಷ್ಟಬಟ್ಟು ಇದನ್ನು ತೋಡಿದುದು ನಮ್ಮೆಲ್ಲರಿಗೆ ಆದೊಂದು ಅಭಿಮಾನ ಪಡತಕ್ಕ ಮಾತಾಗಿದೆ. ಆದಕ್ಕೆ ಬೇಕಾಗಿದ್ದ ಕೆಲವು ಯಂತ್ರಗಳು ಸಹ ನಮ್ಮ ದೇಶದಲ್ಲಿಯೇ ತಾಯಾರಾಗಿವೆ. ಗರಜು ಮಾನವನಲ್ಲಿ ಇಲ್ಲದ ಬೋಧಕ ಬುದ್ಧಿಯನ್ನು ಹುಟ್ಟಿಸುತ್ತ

ಏರ್ಪಡಿಸಲಾಗುತ್ತಿದೆ. ಹೀಗೆ ಈ ವರ್ಗಗಳಲ್ಲಿ ತರಬೇತಿಯನ್ನು ಹೊಂದಿ ಪುನಃ ತಮ್ಮ ತಮ್ಮ ಹಳ್ಳಿಗಳಿಗೆ ಹೋಗಿ ಸಮಾಜ ಶಿಕ್ಷಣ ವರ್ಗಗಳನ್ನು ನಡೆಸಿದ್ದಾದರೆ ಪ್ರಾಢರಿಗೆ ಹಾಗೂ ಹಳ್ಳಿಗರಿಗೆ ಸಮಾಜ ಶಿಕ್ಷಣದ ಜ್ಞಾನವು ಹೆಚ್ಚಿಗೆ ಲಭಿಸುವುದರಲ್ಲಿ ಸಂದೇಹವಿಲ್ಲ. ಅಕ್ಟೋಬರ ೧೮ ರಿಂದ ೩೧ ರ ವರೆಗೆ ಒಂದು ಅಲ್ಪಾವಧಿ ತರಬೇತಿ ವರ್ಗವು ನಮ್ಮ ಕಾಲೇಜದಲ್ಲಿ ನಡೆಯಿತು. ೫೯ ಜನ ಕಾರ್ಯಕರ್ತರು ಈ ವರ್ಗಕ್ಕೆ ಹಾಜರಿದ್ದರು. ಮೊದಲನೆಯ ದಿನ ಶ್ರೀ ವ್ಹಿ. ಆರ್. ಮುಧೋಳಕರ ಇವರಿಂದ ವಿದ್ಘಾಟನೆಯಾಗಿ ಕೊನೆಯ ದಿನ ನಮ್ಮ ಜಿಲ್ಹೆಯ ಶಿಕ್ಷಣಾಧಿಕಾರಿಗಳಾದ ಶ್ರೀ ಕೃಷ್ಣರಾವ ತೇರಗಾಂವಕರ ಇವರ ಹಿರಿಯತನದಲ್ಲಿ ವರ್ಗದ ಮುಕ್ತಾಯವಾಯಿತು. ಪ್ರಿನ್ಸಿಪಾಲರ ಸಂಚಾಲಕತ್ವದಲ್ಲಿ ಮೂರು ಜನ ಬೋಧಕರು ವರ್ಗದ ನಿತ್ಯದ ಕೆಲಸವನ್ನು ನೋಡುತ್ತಿದ್ದರು ಇದಲ್ಲದೆ ಬೇರೆ ಬೇರೆ ಖಾತೆಗಳ ಬಗ್ಗೆ ಮಾಹಿತಿ ಕೊಡಲಿಕ್ಕೆ ಸಂಬಂಧಿಸಿದ ಅಧಿಕಾರಿಗಳಿಂದಲೂ ಸಮಾಜ ಶಿಕ್ಷಣದಲ್ಲಿ ಆಸ್ಥೆವಹಿಸಿ ದುಡಿಯುತ್ತಿರುವ ಮಹನೀಯರಿಂದಲೂ ಅನೇಕ ವ್ಯಾಖ್ಯಾನಗಳನ್ನು ಇಡಿಸಲಾಗಿತ್ತು. ಒಟ್ಟಿನಲ್ಲಿ ಕಾರ್ಯಕರ್ತರಿಗೆ ಸಮಾಜ ಶಿಕ್ಷಣದ ದಿಗ್ದರ್ಶನವನ್ನೂ ಅವರ ದೈನಂದಿನ ಕಾರ್ಯದಲ್ಲಿ ಮಾರ್ಗದರ್ಶನವನ್ನೂ ಮಾಡಿಕೊಡುವದರಲ್ಲಿ ಈ ತರಬೇತಿ ವರ್ಗವು ಯಶಸ್ವಿಯಾಯಿತೆಂದು ಹೇಳಬಹುದಾದರೂ ಸಮಾಜ ಶಿಕ್ಷಣದಯೋಜನೆಯನ್ನು ಸಮಾಧಾನಕರವಾಗಿ ಕಾರ್ಯರೂಪಕ್ಕೆ ತರುವಾಗ ಎದುರಿಸಬೇಕಾದ ಅಡಚಣಿಗಳನ್ನು ಗುರುತಿಸಿಅವುಗಳ ನಿವಾರಣೋಪಾಯಗಳನ್ನು ಕೈಕೊಳ್ಳುವದು ಒಳ್ಳೆ ಮಹತ್ವದ ಸಂಗತಿಯಾಗಿದೆ

(೭) ಜವಾಹರಲಾಲರ ಜನ್ಮ ದಿನೋತ್ಸವ:—

ಇದೇ ತಿಂಗಳ ದಿನಾಂಕ ೧೪ ರಂದು ನಮ್ಮ ದೇಶದ ಮುಖ್ಯ ಮಂತ್ರಿಗಳಾದ ಶ್ರೀ. ಜವಾಹರಲಾಲ ನೆಹ್ರುರವರಿಗೆ ೬೫ ವರುಷಗಳು ತುಂಬುವವು. ಅಂದು ನಮ್ಮದೇಶದ ಒಳಗೂ ಹೊರಗೂ ಅಸಂಖ್ಯ ಜನರು ಅವರ ಜನ್ಮದಿನೋತ್ಸವನ್ನು ವಿಜ್ರಂಭಣೆಯಿಂದಲೂ ಹುರುಪು ಹುಮ್ಮಸುಗಳಿಂದಲೂ ಆಚರಿಸುವರು. ಮಹಾತ್ಮಾಜಿಯವರೊಬ್ಬರನ್ನು ಬಿಟ್ಟರೆ ಭಾರತಮಾತೆಯ ಸೇವೆಯಲ್ಲಿ ಇವರನ್ನು ಮೀರುವವರಿಲ್ಲ. ಇವರಿಂದ ಭಾರತದ ಭವ್ಯ ಭವಿಸ್ಯತ್ತಿನ ರಚನೆ ಪೂರ್ತಿಯಾಗಲಿವೆ; ವಿಶ್ವಶಾಂತಿ ನೆಲೆಗೊಳ್ಳಲಿದೆ. ಆದುದರಿಂದ ಅವರ ಜನ್ಮದಿನೋತ್ಸವಗಳು ಅನಂತವಾಗಿ ಬರಲೆಂದು ದೇವರಲ್ಲಿ ನಮ್ಮ ನಮ್ರವಾದ ಪ್ರಾರ್ಥನೆ.

ಕಂಬನಿ

ದಿನಾಂಕ ೨೪-೧೦-೧೯೫೪ ರ ರಾತ್ರಿ ೮-೧೫ ಗಂಟೆಗೆ ಕೇಂದ್ರ ಆಹಾರ ಮಂತ್ರಿಗಳಾದ ಶ್ರೀ ರಫಿ ಆಹಮ್ಮದ ಕಿಡ್ವಾಯಿಯವರು ಹೃದಯ ವಿಕಾರದಿಂದ ವಿಧಿವಶರಾದರು. ಇವರ ಆಕಸ್ಮಿಕ ನಿಧನದಿಂದ ಇಡಿಯ ರಾಷ್ಟ್ರವೇ ಶೋಕ ಸಾಗರದಲ್ಲಿ ಮುಳುಗಿತು; ದೇಶವು ತುಂಬಿ ಬಾರದ ಹಾನಿಯನ್ನು ಅನುಭವಿಸಬೇಕಾಯಿತು. ಶ್ರೀ ಕಿಡ್ವಾಯಿಯವರು ಉಜ್ವಲ ದೇಶಭಕ್ತರೂ, ಕರ್ತೃತ್ವಶಾಲಿಗಳೂ, ಧೈರ್ಯಶಾಲಿಗಳೂ, ಅಸಾಧ್ಯವಾದುದನ್ನು ಸಾಧ್ಯಮಾಡುವ ಧೀರೋದಾತ್ತ ಧೋರಣೆಯುಳ್ಳವರೂ, ಮುತ್ಸದ್ದಿಗಳೂ, ಸಾಹಸಿಗಳೂ ಹಿಡಿದ ಕೆಲಸವನ್ನು ಆತಂಕಗಳ ಮಧ್ಯದಲ್ಲಿ ಸಹ ಕೈಗೂಡಿಸುವ ಜಿಗುಟುತನವುಳ್ಳವರೂ ಆಗಿದ್ದರು. ನಮ್ಮ ದೇಶದ ಸಮಸ್ಯೆಯನ್ನು ಯಶಸ್ವಿಯಾಗಿಬಿಡಿಸಿ ಎಲ್ಲರ ಉಪಕಾರ ಹಾಗೂ ಪ್ರಶಂಸನೆಗೆ ಪಾತ್ರರಾದಮಹಾ ಮುಖಂಡರು. ಇವರು ಅಖಂಡ ೩೫ ವರುಶಷಗಳವರೆಗೆ ರಾಷ್ಟ್ರಕ್ಕೆ ಸೇವೆ ಸಲ್ಲಿಸಿದ ಅಪ್ರತಿಮ ಸಂಘಟನಾ ಶಕ್ತಿಯುಳ್ಳ ಶ್ರೀ ಕಿಡ್ವಾಯಿಯವರ ನಿಧನದಿಂದ ದೇಶವು ವಜ್ರಾಘಾತವನ್ನು ಅನುಭವಿಸಿತು. ನಮ್ಮ ದೇಶಕ್ಕೆ ಕಿಡ್ವಾಯಿಯವರ ಅಗತ್ಯತೆ ಇನ್ನೂ ಇರುವಾಗಲೇ ಅವರು ನಮ್ಮನ್ನು ಅಗಲಿ ಹೋದರು. ಇದು ದುರದೃಷ್ಟ, ವಿಧಿವಶವನ್ನು ಮೀರುವವರಾರು. ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ಭಾಕ್ರಾ-ನಾಂಗಲ್ ಕಾಲುವೆ

★

ಲೇಖಕರು :
ಶ್ರೀ. ಶಿಂತ್ರಿ ಬಸಪ್ಪನವರು
ಬಿ. ಎ. ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್ಸಪೆಕ್ಟರ,
ದಕ್ಷಿಣಭಾಗ, ಧಾರವಾಡ.

ಪ್ರಸ್ತಾವನೆ

ವಿಶ್ವದ ಮಹಾ ಯೊಜನೆಗಳಲ್ಲಿ ಇದೊಂದಾಗಿದೆ. ನಾಂಗಲ್ ವಿದ್ಯುಚ್ಛಕ್ತಿ ಕಾಲುವೆಯ ಉದ್ಘಾಟನೆಯ ಸಮಾರಂಭವು ದಿನಾಂಕ ೮–೭-೧೯೫೪ ರಂದು ಪ್ರಧಾನಾಮಾತ್ಯರಾದ ಪಂಡಿತ ಜವಾಹರಲಾಲರವರ ಅಮೃತ ಹಸ್ತದಿಂದ ಒಳ್ಳೇ ವೈಭವದಿಂದಲೂ ಅಟ್ಟ-ಹಾಸದಿಂದಲೂ ನಾಂಗಲ್‌ದಲ್ಲಿ ನೆರವೇರಿದ್ದನ್ನು ಓದು-ಗರು ಮರೆತಿರಲಿಕ್ಕಿಲ್ಲವಷ್ಟೇ. ನಾಂಗಲ್ ಕಾಲುವೆಯು ಇನ್ನು ಮುಂದೆ ಕಟ್ಟಲಾಗುವ ಭಾಕ್ರಾಕಾಲುವೆಯ ಒಂದು ಭಾಗವು. ನಾಂಗಲ್ ಕಾಲುವೆಯು ನಾಂಗಲ್ ರೇಲ್ವೆ ನಿಲ್ದಾಣದಿಂದ ಸ್ವಲ್ಪ ಅಂತರದ ಮೇಲಿದೆ. ನಿಲ್ದಾಣದಿಂದ ಕಾಲುವೆಗೆ ಬರಹೋಗಲು ಉತ್ತಮ ಮಾರ್ಗವಿದೆ. ಇದೇ ಮಾರ್ಗದಿಂದಲೇ ಪಂಡಿತರವರು ಆ ದಿನ ಸವಾರಿ ಮಾಡಿದರು. ಸಮಾರಂಭವು ಜರುಗಿದ ಸ್ಥಳದಲ್ಲಿ ಸುಮಾರು ೨ ಲಕ್ಷ ಜನರಿಗೆ ಕೂಡ್ರುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಉತ್ತಮಕೆಲಸ-ಗಾರರಿಗೆ ಪ್ರಧಾನಾಮಾತ್ಯರ ಅಮೃತ ಹಸ್ತದಿಂದ ಬಹುಮಾನಗಳು ಹಂಚಲ್ಪಟ್ಟವು. ಕೇವಲ ಉದ್ಘಾಟನೆ ತೋರಿಸುವ ರಚಿಸಲ್ಪಟ್ಟಿದ್ದ ವಿದ್ಯುತ್‌ಗುಂಡಿಯನ್ನೊತ್ತಿ ನೆಹರೂವರು ಸತಲಜ ನದಿಯ ನೀರನ್ನು ನಾಂಗಲ್–ಕಾಲುವೆಯಲ್ಲಿ ಬಿಟ್ಟು ಅಸ್ಖಲಿತ ವಾಣಿಯಿಂದ ಉತ್ತಮೋತ್ತಮವಾದ ಭಾಷಣವೊಂದನ್ನು ಮಾಡಿದರು ಸಂಜೆಯಲ್ಲಿ ಸತಲಜ ನದಿಯ ಮೇಲೆ ದೀಪೋತ್ಸವ-ವಾಯಿತು.

ಯೋಜನೆಯ ಉದ್ದೇಶ.

ಈ ಎರಡೂ ಕಾಲುವೆಗಳು ಭಾಕ್ರಾ–ನಾಂಗಲ್ ಯೋಜನೆಯೆಂಬ ಹೆಸರಿನಿಂದ ಪ್ರಸಿದ್ಧವಾಗಿವೆ. ಈ ಯೋಜನೆಯು ಪೂರ್ವ ಪಂಜಾಬ, ಪೆಪ್ಸು ಹಾಗೂ ರಾಜಸ್ತಾನ ರಾಜ್ಯಗಳಿಗೆ ನೀರಾವರಿಯನ್ನೂ ವಿದ್ಯುತ್ತನ್ನೂ ಪೂರೈಸುವ ಹೆಗ್ಗುರಿಯನ್ನು ಇಟ್ಟುಕೊಂಡಿದೆ. ಈ ಯೋಜನೆಯ ಪ್ರಕಾರ ಎರಡು ಅಣೆಕಟ್ಟುಗಳನ್ನೂ ಎರಡು ಜಲವಿದ್ಯುದಾಗರಗಳನ್ನೂ ಕಟ್ಟಲಾಗುವದು. ಈಗ ನಾಂಗಲ್‌ದಲ್ಲಿ ಅಣೆಕಟ್ಟನ್ನು ಕಟ್ಟಲಾಗಿದ್ದು ಭಾಕ್ರಾ ಅಣೆಕಟ್ಟನ್ನು ಕಟ್ಟುವ ಕೆಲಸವು ಬೇಗನೆ ಪ್ರಾರಂಭವಾಗಲಿದೆ.

ನಾಂಗಲ್ ಕಾಲುವೆ.

೧೯೪೬ ರಲ್ಲಿ ಈ ಕಾಲುವೆಯನ್ನು ಕಟ್ಟಲು ಪ್ರಾರಂಭವಾಯಿತು. ನಿರ್ದಿಷ್ಟಪಡಿಸಿದ ಸಮಯಕ್ಕಿಂತ ಒಂದು ವರ್ಷ ಮೊದಲೇ ಈ ಕಾಲುವೆಯನ್ನು ಕಟ್ಟುವ ಕೆಲಸವು ಮುಗಿದಿದೆ. ಈ ಕಾಲುವೆಯ ಮೂಲ ಉದ್ದೇಶವು ಮಾರ್ಗದಲ್ಲಿ ಕಟ್ಟಲಿರುವ ಎರಡು ವಿದ್ಯುದಾಗರಗಳಿಗೆ ನೀರು ಪೂರೈಸಿ ಮುಂದೆ ನೀರಾವರಿಗಾಗಿ ಭಾಕ್ರಾ ಕಾಲುವೆಯನ್ನು ರೂಪಾರದ ಹತ್ತರ ಕೂಡಿಕೊಳ್ಳುವದು. ನೀರು ಹೆಚ್ಚು ವೇಗದಿಂದ ಹರಿದು ಹೋಗಬೇಕೆಂಬ ಉದ್ದೇಶದಿಂದ ಈ ಕಾಲುವೆಯ ಪಕ್ಕದ ಗೋಡೆಗಳಿಗೆ ಕೆಲವು ಕಡೆ ಸಿಮೆಂಟ ಕಾಂಕ್ರೀಟ ಮಾಡಿಸಿದೆ, ಹಾಗೂ ಕೆಲವು ಕಡೆ ಹಂಚುಗಳನ್ನು ಹೊದಿಸಲಾಗಿದೆ. ಈ ಕಾಲುವೆಯು ೧೪೦ ಅಡಿ ಅಗಲ ೨೧ ಅಡಿ ಆಳವಾದ್ದಿದೆ. ಇದು ಹಿಮಾಲಯದ ಅಡಿಗುಂಟ ಅತ್ಯಂತ ಕಡಿದಾದ ಮತ್ತು ಕಠಿಣ ಪ್ರದೇಶಗಳಲ್ಲಿ ಹರಿಯುತ್ತಿದೆ. ವಿದೇಶೀಯರ ಸಹಾಯವಿಲ್ಲದೆ ನಮ್ಮ ಭಾರತೀಯ ಇಂಜನಿಯರರೇ ಕಷ್ಟಬಟ್ಟು ಇದನ್ನು ತೋಡಿದುದು ನಮ್ಮೆಲ್ಲರಿಗೆ ಅದೊಂದು ಅಭಿಮಾನ ಪಡತಕ್ಕ ಮಾತಾಗಿದೆ. ಅದಕ್ಕೆ ಬೇಕಾಗಿದ್ದ ಕೆಲವು ಯಂತ್ರಗಳು ಸಹ ನಮ್ಮ ದೇಶದಲ್ಲಿಯೇ ತಯಾರಾಗಿವೆ. ಗರಜು ಮಾನವನಲ್ಲಿ ಇಲ್ಲದ ಶೋಧಕ ಬುದ್ಧಿಯನ್ನು ಹುಟ್ಟಿಸುತ್ತಿ

ಏರ್ಪಡಿಸಲಾಗುತ್ತಿದೆ. ಹೀಗೆ ಈ ವರ್ಗಗಳಲ್ಲಿ ತರಬೇತಿಯನ್ನು ಹೊಂದಿ ಪುನಃ ತಮ್ಮ ತಮ್ಮ ಹಳ್ಳಿಗಳಿಗೆ ಹೋಗಿ ಸಮಾಜ ಶಿಕ್ಷಣ ವರ್ಗಗಳನ್ನು ನಡೆಸಿದ್ದಾದರೆ ಪ್ರೌಢರಿಗೆ ಹಾಗೂ ಹಳ್ಳಿಗರಿಗೆ ಸಮಾಜ ಶಿಕ್ಷಣದ ಜ್ಞಾನವು ಹೆಚ್ಚಿಗೆ ಲಭಿಸುವುದರಲ್ಲಿ ಸಂದೇಹವಿಲ್ಲ. ಅಕ್ಟೋಬರ ೧೪ ರಿಂದ ೩೧ ರ ವರೆಗೆ ಒಂದು ಅಲ್ಪಾವಧಿ ತರಬೇತಿ ವರ್ಗವು ನಮ್ಮ ಕಾಲೇಜದಲ್ಲಿ ನಡೆಯಿತು. ೫೫ ಜನ ಕಾರ್ಯಕರ್ತರು ಈ ವರ್ಗಕ್ಕೆ ಹಾಜರಿದ್ದರು. ಮೊದಲನೆಯ ದಿನ ಶ್ರೀ ವ್ಹಿ. ಆರ್. ಮುಧೋಳಕರ ಇವರಿಂದ ಉದ್ಘಾಟನೆಯಾಗಿ ಕೊನೆಯ ದಿನ ನಮ್ಮ ಜಿಲ್ಲೆಯ ಶಿಕ್ಷಣಾಧಿಕಾರಿಗಳಾದ ಶ್ರೀ ಕೃಷ್ಣರಾವ ತೇರಗಾಂವಕರ ಇವರ ಹಿರಿಯತನದಲ್ಲಿ ವರ್ಗದ ಮುಕ್ತಾಯವಾಯಿತು. ಪ್ರಿನ್ಸಿಪಾಲರ ಸಂಚಾಲಕತ್ವದಲ್ಲಿ ಮೂರು ಜನ ಬೋಧಕರು ವರ್ಗದ ನಿತ್ಯದ ಕೆಲಸವನ್ನು ನೋಡುತ್ತಿದ್ದರು ಇದಲ್ಲದೆ ಬೇರೆ ಬೇರೆ ಖಾತೆಗಳ ಬಗ್ಗೆ ಮಾಹಿತಿ ಕೊಡಲಿಕ್ಕೆ ಸಂಬಂಧಿಸಿದ ಅಧಿಕಾರಿಗಳಿಂದಲೂ ಸಮಾಜ ಶಿಕ್ಷಣದಲ್ಲಿ ಆಸ್ಥೆವಹಿಸಿ ದುಡಿಯುತ್ತಿರುವ ಮಹನೀಯರಿಂದಲೂ ಅನೇಕ ವ್ಯಾಖ್ಯಾನಗಳನ್ನು ಇಡಿಸಲಾಗಿತ್ತು ಒಟ್ಟಿನಲ್ಲಿ ಕಾರ್ಯಕರ್ತರಿಗೆ ಸಮಾಜ ಶಿಕ್ಷಣದ ದಿಗ್ದರ್ಶನವನ್ನೂ ಅವರ ದೈನಂದಿನ ಕಾರ್ಯದಲ್ಲಿ ಮಾರ್ಗದರ್ಶನವನ್ನೂ ಮಾಡಿಕೊಡುವದರಲ್ಲಿ ಈ ತರಬೇತಿ ವರ್ಗವು ಯಶಸ್ವಿಯಾಯಿತೆಂದು ಹೇಳಬಹುದಾದರೂ ಸಮಾಜ ಶಿಕ್ಷಣದಯೋಜನೆಯನ್ನು ಸಮಾಧಾನಕರವಾಗಿ ಕಾರ್ಯರೂಪಕ್ಕೆ ತರುವಾಗ ಎದುರಿಸಬೇಕಾದ ಅಡಚಣೆಗಳನ್ನು ಗುರುತಿಸಿಅವುಗಳ ನಿವಾರಣೋಪಾಯಗಳನ್ನು ಕೈಕೊಳ್ಳುವದು ಒಳ್ಳೆ ಮಹತ್ವದ ಸಂಗತಿಯಾಗಿದೆ

ⓐ ಜವಾಹರಲಾಲರ ಜನ್ಮ ದಿನೋತ್ಸವ:—

ಇದೇ ತಿಂಗಳ ದಿನಾಂಕ ೧೪ ರಂದು ನಮ್ಮ ದೇಶದ ಮುಖ್ಯ ಮಂತ್ರಿಗಳಾದ ಶ್ರೀ. ಜವಾಹರಲಾಲ ನೆಹ್ರುರವರಿಗೆ ೬೫ ವರುಷಗಳು ತುಂಬುವವು. ಅಂದು ನಮ್ಮದೇಶದ ಒಳಗೂ ಹೊರಗೂ ಅಸಂಖ್ಯ ಜನರು ಅವರ ಜನ್ಮದಿನೋತ್ಸವನ್ನು ವಿಜ್ರಂಭಣೆಯಿಂದಲೂ ಹುರುಪು ಹುಮ್ಮಸುಗಳಿಂದಲೂ ಆಚರಿಸುವರು. ಮಹಾತ್ಮಾಜಿಯವರೊಬ್ಬರನ್ನು ಬಿಟ್ಟರೆ ಭಾರತಮಾತೆಯ ಸೇವೆಯಲ್ಲಿ ಇವರನ್ನು ಮೀರುವವರಿಲ್ಲ. ಇವರಿಂದ ಭಾರತದ ಭವ್ಯ ಭವಿಷ್ಯತ್ತಿನ ರಚನೆ ಪೂರ್ತಿಯಾಗಲಿದೆ; ವಿಶ್ವಶಾಂತಿ ನೆಲೆಗೊಳ್ಳಲಿದೆ. ಆದುದರಿಂದ ಅವರ ಜನ್ಮದಿನೋತ್ಸವಗಳು ಅನಂತವಾಗಿ ಬರಲೆಂದು ದೇವರಲ್ಲಿ ನಮ್ಮ ನಮ್ರವಾದ ಪ್ರಾರ್ಥನೆ.

ಕಂಬನಿ

ದಿನಾಂಕ ೨೪-೧೦-೧೯೫೪ ರ ರಾತ್ರಿ ೮-೧೫ ಗಂಟೆಗೆ ಕೇಂದ್ರ ಆಹಾರ ಮಂತ್ರಿಗಳಾದ ಶ್ರೀ ರಫಿ ಅಹಮ್ಮದ ಕಿದ್ವಾಯಿಯವರು ಹೃದಯ ವಿಕಾರದಿಂದ ನಿಧನರಾದರು. ಇವರ ಆಕಸ್ಮಿಕ ನಿಧನದಿಂದ ಇಡಿಯ ರಾಷ್ಟ್ರವೇ ಶೋಕ ಸಾಗರದಲ್ಲಿ ಮುಳುಗಿತು; ದೇಶವು ತುಂಬಿ ಬಾರದ ಹಾನಿಯನ್ನು ಅನುಭವಿಸಬೇಕಾಯಿತು. ಶ್ರೀ ಕಿದ್ವಾಯಿಯವರು ಉಜ್ವಲ ದೇಶಭಕ್ತರೂ, ಕರ್ತೃತ್ವಶಾಲಿಗಳೂ, ಧೈರ್ಯಶಾಲಿಗಳೂ, ಅಸಾಧ್ಯವಾದುದನ್ನು ಸಾಧ್ಯಮಾಡುವ ಧೀರೋದಾತ್ತ ಧೋರಣೆಯುಳ್ಳವರೂ, ಮುತ್ಸದ್ದಿಗಳೂ, ಸಾಹಸಿಗಳೂ ಹಿಡಿದ ಕೆಲಸವನ್ನು ಆತಂಕಗಳ ಮಧ್ಯದಲ್ಲಿ ಸಹ ಕೈಗೂಡಿಸುವ ಜಿಗುಟುತನವುಳ್ಳವರೂ ಆಗಿದ್ದರು. ನಮ್ಮ ದೇಶದ ಸಮಸ್ಯೆಯನ್ನು ಯಶಸ್ವಿಯಾಗಿಬಿಡಿಸಿ ಎಲ್ಲರ ಉಪಕಾರ ಹಾಗೂ ಪ್ರಶಂಸನೆಗೆ ಪಾತ್ರರಾದಮಹಾ ಮುಖಂಡರು. ಇವರು ಅಖಂಡ ೩೫ ವರುಷಗಳವರೆಗೆ ರಾಷ್ಟ್ರಕ್ಕೆ ಸೇವೆ ಸಲ್ಲಿಸಿದ ಅಪ್ರತಿಮ ಸಂಘಟನಾ ಶಕ್ತಿಯುಳ್ಳ ಶ್ರೀ ಕಿದ್ವಾಯಿಯವರ ನಿಧನದಿಂದ ದೇಶವು ವಜ್ರಾಘಾತವನ್ನು ಅನುಭವಿಸಿತು. ನಮ್ಮ ದೇಶಕ್ಕೆ ಕಿದ್ವಾಯಿಯವರ ಅಗತ್ಯತೆ ಇನ್ನೂ ಇರುವಾಗಲೇ ಅವರು ನಮ್ಮನ್ನು ಅಗಲಿ ಹೋದರು. ಇದು ದುರದೃಷ್ಟ, ವಿಧಿವಶವನ್ನು ಮೀರುವವರಾರು. ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿ ನೀಡಲಿ.

ಭಾಕ್ರಾ-ನಾಂಗಲ್ ಕಾಲುವೆ

★

ಲೇಖಕರು :
ಶ್ರೀ. ತಿಂತ್ರಿ ಬಸಪ್ಪನವರು
ಬಿ. ಎ. ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್ಸಪೆಕ್ಟರ,
ದಕ್ಷಿಣಭಾಗ, ಧಾರವಾಡ.

ಪ್ರಸ್ತಾವನೆ

ವಿಶ್ವದ ಮಹಾ ಯೊಜನೆಗಳಲ್ಲಿ ಇದೊಂದಾಗಿದೆ. ನಾಂಗಲ್ ವಿದ್ಯುಚ್ಛಕ್ತಿ ಕಾಲುವೆಯ ಉದ್ಘಾಟನೆಯ ಸಮಾರಂಭವು ದಿನಾಂಕ ೮-೭-೧೯೫೪ ರಂದು ಪ್ರಧಾನಾಮಾತ್ಯರಾದ ಪಂಡಿತ ಜವಾಹರಲಾಲರವರ ಅಮೃತ ಹಸ್ತದಿಂದ ಬಹಳ ವೈಭವದಿಂದಲೂ ಅಟ್ಟ-ಹಾಸದಿಂದಲೂ ನಾಂಗಲ್‌ದಲ್ಲಿ ನೆರವೇರಿದ್ದನ್ನು ಓದು-ಗರು ಮರೆತಿರಲಿಕ್ಕಿಲ್ಲವಷ್ಟೇ. ನಾಂಗಲ್ ಕಾಲುವೆಯು ಇನ್ನು ಮುಂದೆ ಕಟ್ಟಲಾಗುವ ಭಾಕ್ರಾಕಾಲುವೆಯ ಒಂದು ಭಾಗವು. ನಾಂಗಲ್ ಕಾಲುವೆಯು ನಾಂಗಲ್ ರೇಲ್ವೆ ನಿಲ್ದಾಣದಿಂದ ಸ್ವಲ್ಪ ಅಂತರದ ಮೇಲಿದೆ. ನಿಲ್ದಾಣದಿಂದ ಕಾಲುವೆಗೆ ಬರಹೋಗಲು ಉತ್ತಮ ಮಾರ್ಗವಿದೆ. ಇದೇ ಮಾರ್ಗದಿಂದಲೇ ಪಂಡಿತರವರು ಆ ದಿನ ಸವಾರಿ ಮಾಡಿದರು. ಸಮಾರಂಭವು ಜರುಗಿದ ಸ್ಥಳದಲ್ಲಿ ಸುಮಾರು ೨ ಲಕ್ಷ ಜನರಿಗೆ ಕೂಡ್ರುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಉತ್ತಮಕೆಲಸ-ಗಾರರಿಗೆ ಪ್ರಧಾನಾಮಾತ್ಯರ ಅಮೃತ ಹಸ್ತದಿಂದ ಬಹುಮಾನಗಳು ಹಂಚಲ್ಪಟ್ಟವು. ಕೇವಲ ಉದ್ಘಾಟನೆ ಗೋಸುಗ ರಚಿಸಲ್ಪಟ್ಟಿದ್ದ ವಿದ್ಯುತ್‌ಗುಂಡಿಯನ್ನೊತ್ತಿ ನೆಹರೂವರು ಸತಲಜ ನದಿಯ ನಿರನ್ನು ನಾಂಗಲ್-ಕಾಲುವೆಯಲ್ಲಿ ಬಿಟ್ಟು ಅಸ್ಖಲಿತ ವಾಣಿಯಿಂದ ಉತ್ತಮೊತ್ತಮವಾದ ಭಾಷಣವೊಂದನ್ನು ಮಾಡಿದರು ಸಂಜೆಯಲ್ಲಿ ಸತಲ ನದಿಯ ಮೇಲೆ ದಿಪೋತ್ಸವ-ವಾಯಿತು.

ಯೋಜನೆಯ ಉದ್ದೇಶ.

ಈ ಎರಡೂ ಕಾಲುವೆಗಳು ಭಾಕ್ರಾ--ನಾಂಗಲ್ ಯೋಜನೆಯೆಂಬ ಹೆಸರಿನಿಂದ ಪ್ರಸಿದ್ಧವಾಗಿವೆ. ಈ ಯೋಜನೆಯು ಪೂರ್ವ ಪಂಜಾಬ, ಪೆಪ್ಸು ಹಾಗೂ ರಾಜಸ್ತಾನ ರಾಜ್ಯಗಳಿಗೆ ನೀರಾವರಿಯನ್ನೂ ವಿದ್ಯುತ್ತನ್ನೂ ಪೂರೈಸುವ ಹೆಗ್ಗುರಿಯನ್ನು ಇಟ್ಟುಕೊಂಡಿದೆ. ಈ ಯೋಜನೆಯ ಪ್ರಕಾರ ಎರಡು ಅಣೆಕಟ್ಟುಗಳನ್ನೂ ಎರಡುಜಲವಿದ್ಯುದಾಗರಗಳನ್ನೂ ಕಟ್ಟಲಾಗುವದು. ಈಗ ನಾಂಗಲ್‌ದಲ್ಲಿ ಅಣೆಕಟ್ಟನ್ನು ಕಟ್ಟಲಾಗಿದ್ದು ಭಾಕ್ರಾ ಆಣೆಕಟ್ಟನ್ನು ಕಟ್ಟುವ ಕೆಲಸವು ಬೇಗನೆ ಪ್ರಾರಂಭವಾಗಲಿದೆ.

ನಾಂಗಲ್ ಕಾಲುವೆ.

೧೯೪೬ ರಲ್ಲಿ ಈ ಕಾಲುವೆಯನ್ನು ಕಟ್ಟಲು ಪ್ರಾರಂಭವಾಯಿತು. ನಿರ್ದಿಷ್ಟಪಡಿಸಿದ ಸಮಯಕ್ಕಿಂತ ಒಂದು ವರ್ಷ ಮೊದಲೇ ಈ ಕಾಲುವೆಯನ್ನು ಕಟ್ಟುವ ಕೆಲಸವು ಮುಗಿದಿದೆ. ಈ ಕಾಲುವೆಯ ಮೂಲ ಉದ್ದೇಶವು ಮಾರ್ಗದಲ್ಲಿ ಕಟ್ಟಲಿರುವ ಎರಡು ವಿದ್ಯುದಾಗರಗಳಿಗೆ ನೀರು ಪೂರೈಸಿ ಮುಂದೆ ನೀರಾವರಿಗಾಗಿ ಭಾಕ್ರಾ ಕಾಲುವೆಯನ್ನು ರೂಪಾರದ ಹತ್ತರ ಕೂಡಿಕೊಳ್ಳುವದು. ನೀರು ಹೆಚ್ಚು ವೇಗದಿಂದ ಹರಿದು ಹೋಗ ಬೇಕೆಂಬ ಉದ್ದೇಶದಿಂದ ಈ ಕಾಲುವೆಯ ಪಕ್ಕದ ಗೋಡೆಗಳಿಗೆ ಕೆಲವು ಕಡೆ ಸಿಮೆಂಟ ಕಾಂಕ್ರೀಟ ಮಾಡಿಸಿದೆ, ಹಾಗೂ ಕೆಲವು ಕಡೆ ಹಂಚುಗಳನ್ನು ಹೊದಿಸಲಾಗಿದೆ. ಈ ಕಾಲುವೆಯು ೧೪೦ ಅಡಿ ಅಗಲ ೨೧ ಅಡಿ ಆಳವಾದದ್ದಿದೆ. ಇದು ಹಿಮಾಲಯದ ಅಡಿಗುಂಟ ಅತ್ಯಂತ ಕಡಿದಾದ ಮತ್ತು ಕಠಿಣ ಪ್ರದೇಶಗಳಲ್ಲಿ ಹರಿಯುತ್ತಿದೆ. ವಿದೇಶೀಯರ ಸಹಾಯವಿಲ್ಲದೆ ನಮ್ಮ ಭಾರತೀಯ ಇಂಜನಿಯರರೇ ಕಷ್ಟಬಟ್ಟು ಇದನ್ನು ತೋಡಿದುದು ನಮ್ಮೆಲ್ಲರಿಗೆ ಅದೊಂದು ಅಭಿಮಾನ ಪಡತಕ್ಕ ಮಾತಾಗಿದೆ. ಅದಕ್ಕೆ ಬೇಕಾಗಿದ್ದ ಕೆಲವು ಯಂತ್ರಗಳು ಸಹ ನಮ್ಮ ದೇಶದಲ್ಲಿಯೇ ತಯಾರಾಗಿವೆ. ಗರಜು ಮಾನವನಲ್ಲಿ ಇಲ್ಲದ ಶೋಧಕ ಬುದ್ಧಿಯನ್ನು ಹುಟ್ಟಿಸುತ್ತಿ

ದೆಯೆಂಬುವದಕ್ಕೆ ಇದೊಂದು ಉತ್ತಮ ಉದಾಹರಣೆಯಾಗಿದೆ. 'Necessity is the Mother of invention' ಎಂಬ ಇಂಗ್ಲೀಷ ನಾಣ್ಣುಡಿಯ ಆಶಯವಾದರೂ ಇದುವೇ ಆಗಿದೆಯಲ್ಲವೇ ?

ಜಲವಿದ್ಯುದಾಗರಗಳು

ಈ ಕಾಲುವೆಯು ಹರಿದ ಪ್ರದೇಶವು ಬಹಳ ಕಡಿದಾಗಿರುವದರಿಂದ ನಾಂಗಲ್ ಅಣೆಕಟ್ಟಿನಿಂದ ೧೨ ವೈಲು ಅಂತರದ ಮೇಲಿದ್ದ ಗಂಗವಾಲ ಎಂಬಲ್ಲೊಂದು ಹಾಗೊ ಅಲ್ಲಿಂದ ಮುಂದೆ ೬ ವೈಲು ದೂರದಲ್ಲಿದ್ದ ಕೋಟಲಾ ಎಂಬಲ್ಲಿನ್ನೊಂದು ಹೀಗೆ ಎರಡು ಜಲವಿದ್ಯುದಾಗರಗಳು ಕಟ್ಟಲ್ಪಟ್ಟಿವೆ. ಈ ಎರಡು ಸ್ಥಳಗಳಲ್ಲಿ ನೆಲವು ೧೭೦ ಅಡಿಯಷ್ಟು ಇಳಜಾರಾಗಿರುವದರಿಂದ ವಿದ್ಯುದಾಗರ ಕಟ್ಟಲು ಹೇಳತೀರದಷ್ಟು ಅನುಕೂಲವಾಗಿದೆ. ಮಾನವನು ನಿಸರ್ಗವನ್ನು ಹೇಗೆ ಉಪಯೋಗ ಮಾಡಿಕೊಳ್ಳಬಲ್ಲನೆಂಬುದಕ್ಕೆ ಈ ಮಾತೊಂದು ಸಾಕ್ಷಿ. ನಿಸರ್ಗದ ಉಪಯೋಗವನ್ನು ನಮ್ಮ ಇಂಜನಿಯರರು ಇಲ್ಲಿ ಶಕ್ಯವಿದ್ದಷ್ಟನ್ನೆಲ್ಲ ಮಾಡಿಕೊಳ್ಳದೆ ಬಿಟ್ಟಿಲ್ಲ. ಗಂಗವಾಲ ವಿದ್ಯುದಾಗರದಿಂದ ದಿಲ್ಲಿ ನಗರಕ್ಕೆ ವಿದ್ಯುತ್ತು ಪೂರೈಸಲ್ಪಟ್ಟಿದೆ. ಕೋಟ್ಲಾ ವಿದ್ಯುದಾಗರವು ಮುಂದಿನ ವರ್ಷ ಪೂರ್ಣವಾಗುವದು.

ಭಾಕ್ರಾ ಕಾಲುವೆ ಹಾಗೂ ಅಣೆಕಟ್ಟು.

ಇದು ಮುಖ್ಯ ಕಾಲುವೆ. ನಾಂಗಲ್ ಕಾಲುವೆಯು ಇದರದೊಂದು ಶಾಖೆಯು. ಭಾಕ್ರಾ ಕಾಲವೆಯು ೧೦೮ ವೈಲುದ್ದವಿದೆ. ನಾಂಗಲ್ ಕಾಲುವೆಯಂತೆ ಇದರ ಪಕ್ಕದ ಗೋಡೆಗಳಿಗೂ ಹಂಚುಗಳನ್ನು ಹೊದಿಸಿದ್ದಾರೆ. ಇದನ್ನು ತೋಡಲು ೨೯ ದಶಲಕ್ಷ ಘನ ಅಡಿ ಮಣ್ಣನ್ನು ಅಗಿದು ತೆಗೆದಿದ್ದಾರೆ. ಇದರ ಶಾಖೆಗಳನ್ನು ತೋಡಲು ೩೦ ದಶಲಕ್ಷ ಘನ ಅಡಿ ಮಣ್ಣನ್ನು ಅಗಿದು ತೆಗೆಯ ಬೇಕಾಯಿತು. ಇವುಗಳಿಂದ ಕಡಿದು ತೆಗೆದ ಮಣ್ಣಿನಿಂದ ದಿಲ್ಲಿಯಿಂದ ನ್ಯೂಯಾರ್ಕದವರೆಗೆ ೯೨೦೦ ವೈಲುದ್ದ ೨೦ ಅಡಿ ಅಗಲ ಮತ್ತು ೩ ಅಡಿ ಎತ್ತರವಾದೊಂದು ರಸ್ತೆಯನ್ನು ರಚಿಸಬಹುದು. ಮುಖ್ಯ ಹಾಗೂ ಶಾಖಾ ಕಾಲುವೆಗಳ ಪಕ್ಕದ ಗೋಡೆಗಳಿಗೆ ಹೊದಿಸಲು ೬೫ ಕೋಟಿ ಹಂಚುಗಳು ಹಿಡಿದಿವೆ. ಇವಲ್ಲದೆ ೨೦ ಕೋಟಿ ಇಟ್ಟಂಗಿಗಳು ಉಪಯೋಗಿಸಲ್ಪಟ್ಟಿವೆ. ಅವುಗಳನ್ನು ಸಾಲಾಗಿ ಇಟ್ಟರೆ ವಿಷುವವೃತ್ತದ ಸುತ್ತಲು ಏಳು ಸುತ್ತುಗಳಾಗುವವು. ಈ ಕಾಲುವೆಯು ಕೆಲವೆಡೆಗಳಲ್ಲಿ ಹಲವು ದೊಡ್ಡ ದೊಡ್ಡ ಹಳ್ಳಗಳನ್ನು ದಾಟುತ್ತಿದೆ.

ನಾಂಗಲ್‌ದಿಂದ ಮೇಲಕ್ಕೆ ೮ ವೈಲು ಅಂತರದಲ್ಲಿ ಭಾಕ್ರಾ ಅಣೆಕಟ್ಟನ್ನು ಕಟ್ಟಲಾಗುವದು. ಅದು ತಳಹದಿಯಿಂದ ೬೮೦ ಅಡಿ ಎತ್ತರವಾಗುವದು. ಅದು ಜಗತ್ತಿನಲ್ಲಿ ಎರಡನೆಯ ಉನ್ನತವಾದ ಅಣೆಕಟ್ಟಾಗುವದು. ಯುನಾಯಿಟೆಡ್ ಸ್ಟೇಟ್ಸದ ಹೂವ್ಹರ ಅಣೆಕಟ್ಟು ೭೨೦ ಅಡಿ ಎತ್ತರವಿದ್ದು ಅದು ವಿಶ್ವದಲ್ಲಿ ಮೊದಲನೆಯ ಎತ್ತರವಾದ ಅಣೆಕಟ್ಟಾಗಿದೆ ಭಾಕ್ರಾ ಅಣೆಕಟ್ಟು ೧೭೦೦ ಅಡಿ ಉದ್ದವಿದ್ದು ಮಧ್ಯದಲ್ಲಿ ೬೨೫ ಅಡಿ ಅಗಲವಿದೆ. ಇದಕ್ಕೆ ೫೦೦ ದಶಲಕ್ಷ ಘನ ಅಡಿ ಕಾಂಕ್ರೀಟ ಹಾಗೂ ಕಲ್ಲುಗಳು ಬೇಕು. ಅಂದರೆ ಈಜಿಪ್ತದಲ್ಲಿಯ ಏಳು ದೊಡ್ಡ ಪಿರ್‍ಯಾಮಿಡ್ಡಗಳಿಗೆ ಹಿಡಿದ ಗಚುಕಲ್ಲಿನ ಇಮ್ಮಡಿ ಈ ಅಣೆಕಟ್ಟಿಗೆ ಬೇಕು. ಇದರಿಂದ ೬೦ ಚದುರ ವೈಲು ಸರೋವರವುಂಟಾಗುದು ಮತ್ತು ೫೫ ವೈಲುದ್ದದ ವರೆಗೆ ನೀರು ನಿಲ್ಲುವದು. ಅಣೆಕಟ್ಟಿನ ಹತ್ತರ ೯೦ ಸಾವಿರ ಕಿಲೋವ್ಯಾಟ್ (ವ್ಯಾಟ್ ಅಂದರೆ ವಿದ್ಯುತ್ತನ್ನು ಅಳೆಯುವದೊಂದು ಅಳತೆ) ಶಕ್ತಿಯ ಹತ್ತು ಸೆಟ್ಟುಗಳನ್ನು ರಚಿಸಲಾಗುವದು ಇಂಥ ಮಹಾ ವಿದ್ಯುದಾಗರವು ಭಾರತದಲ್ಲಾಗಲಿ ಏಶಿಯದಲ್ಲಾಗಲಿ ಈಗ ಇರುವದಿಲ್ಲ. ಭಾಕ್ರಾ-ನಾಂಗಲ್ ಸಂಯುಕ್ತ ಯೋಜನೆಯಲ್ಲಿ ೭ ಲಕ್ಷ ಕಿಲೋವ್ಯಾಟ್ ವಿದ್ಯುತ್ತು ಹುಟ್ಟಬಹುದಾದ್ದರಿಂದ ಜೋಗೀಂದ್ರನಗರ ವಿದ್ಯುತ್ತಿಗಿಂತ ೨೦ ಪಟ್ಟು ಹೆಚ್ಚಾಗುವದು. ಈ ವಿದ್ಯುತ್ತನ್ನು ಬೇರೆ ಬೇರೆ ಸ್ಥಳಗಳಿಗೆ ಒಯ್ಯಲು ೨೫೦೦ ವೈಲುದ್ದದವರಿಗೆ ಕಂಬಗಳನ್ನು ನಿಲ್ಲಿಸಿ ತಂತಿಗಳನ್ನು ಹಾಕಬೇಕಾಗುತ್ತಿದೆ.

ಉಪಸಂಹಾರ

ಭಾಕ್ರಾ ನಾಂಗಲ್ ಸಂಯುಕ್ತ ಯೋಜನೆಗೆ ಒಟ್ಟು ೧೫೬ ಕೋಟಿ ರೂಪಾಯಿ ವೆಚ್ಚ ತಗಲುವದು. ಪೂರ್ವ ಪಂಜಾಬ, ಪೆಪ್ಸು ಹಾಗೂ ರಾಜಸ್ತಾನ ಸರಕಾರಗಳು ಕೇಂದ್ರ ಸರಕಾರದಿಂದ ಸಾಲ ಪಡೆದು ಖರ್ಚು ಮಾಡುತ್ತ

ಲಿವೆ. ೧೯೫೯ ರಲ್ಲಿ ಭಾಕ್ರಾ ಅಣೆಕಟ್ಟು ಪೂರ್ತಿಯಾಗುವ ಅಂದಾಜದೆ. ಆ ಮೇಲೆ ಈ ಮಹಾಯೋಜನೆಯ ಲಾಭವು ಮೇಲೆ ಹೇಳಿದ ಮೂರೂ ರಾಜ್ಯಗಳ ಜನರಿಗೆ ಹೇಳತೀರದಷ್ಟಾಗುವದು. ಆ ಜನರ ಕನಸು ನನಸಾಗುವದು. ನಾಂಗಲ್ ಅಣೆಕಟ್ಟಿನಿಂದ ಸ್ವಲ್ಪ ದೂರದಲ್ಲಿ ನಾಂಗಲ್ ಎಂಬ ಹೊಸದೊಂದು ನಗರವನ್ನು ರಚಿಸಲಾಗಿದೆ. ಅದರಲ್ಲಿ ಇಂಜನಿಯರರನ್ನೊಳಗೊಂಡು ಎಲ್ಲ ಸಿಬ್ಬಂದಿಯು ವಾಸಿಸುತ್ತಿದೆ. ಆ ನಗರಕ್ಕೆ ರೇಲ್ವೆ, ರಹದಾರಿ ವಸತಿಗೃಹಗಳು, ನೀರು, ಉಪಹಾರಗೃಹಗಳು, ಖಾನಾವಳಿಗಳು, ಸಿನೇಮಾಗಳು, ಕ್ರೀಡಾಂಗಣಗಳು ಶಾಲೆಗಳು, ಅಂಚೆ-ತಾರು, ವಾಹನಗಳು, ವಿದ್ಯುತ್ ಮೊದಲಾದ ಎಲ್ಲ ಆಧುನಿಕ ಸೌಕರ್ಯಗಳು ಒದಗಿಸಲ್ಪಟ್ಟಿವೆ. ಅಲ್ಲಿ ವಾಸಿಸುವ ಸಿಬ್ಬಂದಿಯ ನಾಂಗಲ್ ಅಣೆಕಟ್ಟನ್ನು ಕಟ್ಟುವಾಗ ಸಾಕಷ್ಟು ಅನುಭವವನ್ನು ಪಡೆದಿದೆ. ಆ ಅನುಭವದ ಫಲವಾಗಿ ಭಾಕ್ರಾ ಅಣೆಕಟ್ಟು ಗೊತ್ತುಪಡಿಸಿದ ಸಮಯಕ್ಕಿಂತ ಮುಂಚಿತವಾಗಿ ಪೂರ್ತಿಯಾಗುವ ಭರವಸೆಯಿದೆ. ಭೂಗೋಲದ [illegible] ಹಾಗೂ ಆಗುತ್ತಿರುವ ಸ್ಥಿತ್ಯಂತರಗಳು ನಮ್ಮ ಶಿಕ್ಷಕ-ಶಿಕ್ಷಿಕೆಯರಿಗೆ ಗೊತ್ತಿರಬೇಕಲ್ಲವೆ ? ಆ ಸದುದ್ದೇಶದಿಂದ ನಮಗೆ ಅಲ್ಲಲ್ಲಿ ದೊರೆತ ವಿವರಗಳನ್ನು ಕಲೆಹಾಕಿ ಸುಸಂಬದ್ಧವಾಗಿ ಹೊಂದಿಸಿ ಈ ಪುಟ್ಟ ಲೇಖವೊಂದನ್ನು ಬರೆಯಲಾಗಿದೆ. ಶಿಕ್ಷಕ-ಶಿಕ್ಷಿಕೆಯರು ಈ ಲೇಖವನ್ನೋದಿಕೊಂಡು ತಮ್ಮ ಕ್ಲಾಸಿನಲ್ಲಿ ಕಲಿಯುವ ಮಕ್ಕಳಿಗೆಲ್ಲ ಅದರ ಸಂಪೂರ್ಣ ಲಾಭವನ್ನು ಮಾಡಿ ಕೊಡುವರೆಂದು ನಾವು ನೆರೆ ನಂಬಿದ್ದೇವೆ.

—: ಸಿರಿಗನ್ನಡಂ ಗೆಲ್ಗೆ :—

ಹೊರಬಿದ್ದಿದೆ !

ಬೆಳಕು ಕಂಡಿದೆ !!

೫ನೆಯ ಆವೃತ್ತಿ | **ಶೈಕ್ಷಣಿಕ ಮನೋವಿಜ್ಞಾನ** | ಪುಟ ೩೦೦

ಬರೆದವರು : **ಡಾ| ವಿ. ಕೊ. ಜವಳಿ,** M. Ed. Ph. D. M. A. (ಕೋಲಂಬಿಯಾ)

ಬೆಲೆ: **ಎರಡು ರೂಪಾಯಿ ಮಾತ್ರ**

ಶಿಕ್ಷಣದಲ್ಲಿ ಮತ್ತು ಮನೋವಿಜ್ಞಾನದಲ್ಲಿ ಹೊಸ ಹೊಸ ಸಂಶೋಧನೆಗಳಿಂದ ಕೂಡಿದೆ ಕನ್ನಡಿಗರಿಗೆ ಮತ್ತು ವಿಶೇಷವಾಗಿ ಕನ್ನಡ ಪ್ರಾಥಮಿಕ ಶಿಕ್ಷಕರಿಗೆ ಅತ್ಯುಪಯುಕ್ತ ! ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಕೈದೀವಿಗೆ ! ಶೈಕ್ಷಣಿಕ ಅಭ್ಯಾಸಪತ್ರಿಕೆಯ ಎಲ್ಲ ವಿಷಯಗಳೂ ಇದರಲ್ಲಿ ಬಂದಿವೆ. ತಿಳಿಯಾದ ಸುಂದರ ಶೈಲಿ! ಈ ಶೈಕ್ಷಣಿಕ ಮನೋವಿಜ್ಞಾನದ ಬಗೆಗೆ ಸ್ವತಂತ್ರವಾಗಿ ಬರೆಯಲ್ಪಟ್ಟ ೩೦೦ ಪುಟಗಳು ಮತ್ತು ೧೧ ಅಧ್ಯಾಯಗಳನ್ನೊಳಗೊಂಡ ಪುಸ್ತಕ ಕನ್ನಡದಲ್ಲಿ ಇದೊಂದೇ.

ಪುಸ್ತಕವು ಪ್ರಕಟವಾಗಿದೆ.

ಪ್ರಕಾಶಕರು :

ಆಕಳವಾಡಿ ಬುಕ್ ಡಿಪೋ, ಧಾರವಾಡ

ಅವರಿಗೆ ಬರೆದು ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ.

ಶಾಲೆ ಹಾಗೂ ಸಮಾಜಸೇವೆ

ಲೇಖಕರು: **ಶ್ರೀ ಆರ್. ಎಂ. ಅಡಿಕಿ, ಜಮಖಂಡಿ**

ಸಮಾಜಸೇವೆಯಲ್ಲಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ಸ್ಥಾನವು ಮಹತ್ವವಾದುದು. ಇಂದಿನ ವಿದ್ಯಾರ್ಥಿಗಳು ನಾಳಿನ ನಾಗರಿಕರು. ಸುಸಂಘಟಿತ ಸಮಾಜವನ್ನು ಕಟ್ಟುವವರು. ಜೀವನ ಶಿಕ್ಷಣಪದ್ಧತಿಯ ಧ್ಯೇಯವಾದರೂ ಬಾಲಕರನ್ನು ಆದರ್ಶನಾಗರಿಕರನ್ನಾಗಿ ಮಾಡುವದೇ ಇರುತ್ತದೆ. ಭಾರತದ ಜೀವಾಳವೆಂದರೆ ಗ್ರಾಮಗಳು. ಗ್ರಾಮಗಳ ಉದ್ಧಾರವಾಗಬೇಕು. ಅಂದರೆ ಮಹಾತ್ಮಾ ಗಾಂಧೀಜಿಯವರು ಹೇಳಿದಂತೆ ಪ್ರತಿಯೊಂದು ಹಳ್ಳಿಯು ಜೀವಕಳೆಯಿಂದ ತುಂಬಬೇಕು. ಗ್ರಾಮಸ್ಥರ ಜೀವನ ಮಟ್ಟವು ಸುಧಾರಿಸಬೇಕು. ಆಗ ಮಾತ್ರ ನಿಜವಾಗಿ ಗ್ರಾಮಗಳ ಉದ್ಧಾರವಾಗುವದು.

ಹಳ್ಳಿಗಳ ಕಸಕಡ್ಡಿ ಮಲ ಮೂತ್ರ ಮುಂತಾದ ಹೊಲಸು ಬೀದಿಗಳಲ್ಲಿ ತುಂಬಿರುತ್ತದೆ. ಇದಲ್ಲದೆ ತಿಪ್ಪೆಗೊಬ್ಬರವನ್ನು ಸಿಕ್ಕಸಿಕ್ಕಲ್ಲಿ ಒಗೆಯುವರು. ಹಳ್ಳಿಗರು ಕುಡಿಯುವ ನೀರಿನ ಭಾವಿಯನ್ನು ಹೊಲಸು ಮಾಡುವರು. ಇವೆಲ್ಲ ಕಾರಣಗಳಿಂದ ಅವರ ಆರೋಗ್ಯವು ಕೆಟ್ಟು ಎಷ್ಟೋ ರೋಗರುಜಿನಗಳಿಗೆ ತುತ್ತಾಗುವರು. ಇದರಂತೆ ಜಾತ್ರೆ, ಉತ್ಸವ, ಮುಂತಾದ ಕಾರ್ಯಕ್ರಮಗಳು ನಡೆದಾಗ ಜನರು ಸಿಕ್ಕಸಿಕ್ಕಲ್ಲಿ ಹೊಲಸು ಮಾಡುವರು. ಸಭೆ ಮೆರವಣಿಗೆಯಲ್ಲಿ ಗದ್ದಲ ಉಂಟಾಗಿ, ಅಪಘಾತ ಸಂಭವಿಸುವದು.

ಸರಕಾರ, ಸ್ಥಾನಿಕ ಸ್ವರಾಜ್ಯ ಸಂಸ್ಥೆ, ಸರ್ವೋದಯ ಮುಂತಾದ ಸಂಸ್ಥೆಗಳು ಮೇಲೆ ಹೇಳಿದ ಸಮಸ್ಯೆಗಳನ್ನು ಪರಿಹರಿಸಲು ಸಮಾಜ-ಸೇವೆಯನ್ನು ಮಾಡುತ್ತಿವೆ.

ಶಾಲೆಗಳು ಸಹ ಗ್ರಾಮಸ್ಥರ ಸಹಕಾರದಿಂದ ಸಮಾಜ ಸೇವೆಯನ್ನು ಕೈಕೊಳ್ಳಬೇಕು. ಶಿಕ್ಷಕರು ವಿದ್ಯಾರ್ಥಿಗಳಿಗಾಗಿ ಸಾಮಾಜಿಕ ಚಟುವಟಿಕೆಗಳನ್ನು ಕೈಕೊಳ್ಳಲು ಸನ್ನಿವೇಶಗಳನ್ನು ಒದಗಿಸಿಕೊಡಬೇಕು. ಶಿಕ್ಷಕರು ಸ್ವಯಂಸೇವಕದಳ ಮತ್ತು ಬಾಲವೀರ ಪಥಕಗಳನ್ನು ಮೇಲಿನ ವರ್ಗಗಳ ವಿದ್ಯಾರ್ಥಿಗಳ ನೇತೃತ್ವದಲ್ಲಿ ಬಾಲಕರ ಗುಂಪಗಳನ್ನು ಮಾಡಿಸಬೇಕು. ಗ್ರಾಮ ಸ್ವಚ್ಛತೆ ಗೊಬ್ಬರಗುಣಿಗಳನ್ನು ತೋಡುವದು, ಮಲ ಮೂತ್ರ ಗುಣಿಗಳನ್ನು ತೋಡುವದು ಮುಂತಾದ ವಿಧಾಯಕ ಕಾರ್ಯಕ್ರಮಗಳನ್ನು ಮಾಡಿಸಬೇಕು. ಗೊಬ್ಬರವನ್ನು ಜತನ ಮಾಡುವದು ಮತ್ತು ನೀರನ್ನು ಶುದ್ಧ ಮಾಡುವ ಬಗೆ ಮತ್ತ ಆರೋಗ್ಯದ ನಿಯಮಗಳನ್ನು ತಿಳಿಸಿ ಹೇಳಬೇಕು. ಮೆರವಣಿಗೆ ಸಭೆ ಮುಂತಾದ ಕಾರ್ಯಕ್ರಮಗಳಲ್ಲಿ ಶಿಸ್ತು ಮತ್ತು ಶಾಂತತೆಗಳನ್ನು ಕಾಯುವದು ಮತ್ತು ಅಪಘಾತ ಸಂಭವಿಸಿದಾಗ ಪ್ರಥಮಚಿಕಿತ್ಸೆ ಇವೇ ಮೊದಲಾದ ಚಟುವಟಿಕೆಗಳನ್ನು ಮಾಡಿಸಬೇಕು.

ಜಾತ್ರೆಗಳಲ್ಲಿ ಸಹ ಅಲ್ಲಲ್ಲಿ ನೀರಿನ್ನ ಅರವಟ್ಟಿಗೆಗಳನ್ನು ಇಟ್ಟು ಬಿಸಿಲಲ್ಲಿ ಬಳಲಿಬಂದ ಯಾತ್ರಿಕರಿಗೆ ಶುದ್ಧವಾದ ನೀರನ್ನು ಬಾಲಕರು ಪುರೈಸಬೇಕು. ಜಾತ್ರೆಯಲ್ಲಿ ಯಾತ್ರಿಕರು ತಮ್ಮ ವಾಹನಗಳನ್ನು ಸಿಕ್ಕಸಿಕ್ಕಲ್ಲಿ ಅವ್ಯವಸ್ಥಿತ ರೀತಿಯಲ್ಲಿ ಬಿಡುವರು. ಆದುದರಿಂದ ಬಾಲಕರು ವಾಹನಗಳ ಸರಿಯಾದ ವ್ಯವಸ್ಥೆಯನ್ನು ಮಾಡಿಸಬೇಕು. ಜಾತ್ರೆಗಳಲ್ಲಿ ಜನರು ಸಿಕ್ಕಸಿಕ್ಕಲ್ಲಿ ಹೊಲಸು ಮಾಡುವರು. ಸ್ವಯಂಸೇವಕ ದಳಗಳು ಆ ಸ್ಥಳವನ್ನು ಸ್ವಚ್ಛ ಮಾಡಬೇಕು. ಸಭೆ, ಮೆರವಣಿಗೆ ಮುಂತಾದ ಉತ್ಸವಗಳ ಸಮಯದಲ್ಲಿ ಅಪಘಾತ ಸಂಭವಿಸದಂತೆ ಶಿಸ್ತು ಮತ್ತು ಶಾಂತತೆಗಳನ್ನು ಕಾಯಬೇಕು. ಪ್ರಥಮ ಚಿಕಿತ್ಸೆ ಮುಂತಾದ ಕರ್ತವ್ಯಗಳನ್ನು ಕೈಕೊಳ್ಳಬೇಕು. ಹಳ್ಳಿಯ ಮನರಂಜನೆಯ ಕಾರ್ಯಕ್ರಮಗಳಲ್ಲಿ ಸಹ ಬಾಲಕರು ಭಾಗವಹಿಸಬೇಕು.

ಈ ರೀತಿಯಾಗಿ ಶಿಕ್ಷಕರು ಬಾಲಕರಿಂದ ಸಮಾಜ ಸೇವೆಯನ್ನು ಮಾಡಿಸಬೇಕು. ಗ್ರಾಮಸ್ಥರ ಸಹಕಾರವನ್ನು ಪಡೆದುಕೊಳ್ಳಬೇಕು. ಬಾಲಕರು ಸಾಮಾಜಿಕ ಚಟುವಟಿಕೆಗಳನ್ನು ಕೈಕೊಳ್ಳಲು ಶಿಕ್ಷಕರು ಪೂರ್ವಯೋಜನೆಯನ್ನು ಮಾಡಿ ಕಾರ್ಯಕ್ರಮವನ್ನು ತಯಾರಿಸಬೇಕು. ಸಾಧನಗಳನ್ನು ಗ್ರಾಮಸ್ಥರ ಸಹಕಾರದಿಂದ ಮೊದಲೇ ಮಾಡಿಕೊಳ್ಳಬೇಕು. ಶಿಕ್ಷಕರು ಬಾಲಕರೊಡನೆ ತಾವೂ ಶ್ರದ್ಧೆವಹಿಸಿ ದುಡಿಯಬೇಕು. ಮತ್ತು ಬಾಲಕರಿಗೆ ಮಾರ್ಗದರ್ಶನ ಮಾಡಬೇಕು. ಹೀಗೆ ಬಾಲಕರು ಸಮಾಜ ಸೇವೆಯನ್ನು ಮಾಡುತ್ತಹೊದರೆ ಅವರಲ್ಲಿ ಸಹಕಾರ, ಪರೋಪಕಾರ, ಸ್ವಾರ್ಥತ್ಯಾಗ, ಶಿಸ್ತು ಮತ್ತು ಸಂಘಟನೆ ಮುಂತಾದ ಸದ್ಗುಣಗಳು ಬೆಳೆಯುವವು. ಅವರ ಸಾಮಾಜಿಕ ದೃಷ್ಟಿಯು ವಿಕಾಸವಾಗುವದು. ಭವಿಷ್ಯತ್‌ಕಾಲದಲ್ಲಿ ಆದರ್ಶನಾಗರಿಕರಾಗಿ ಸುಸಂಘಟಿತ ಹೊಸ ಸಮಾಜನ್ನು ಕಟ್ಟುವರು. ಪ್ರಜಾಪ್ರಭುತ್ವದ ನಾಗರಿಕತೆಯೂ ಯಶಸ್ವಿಯಾಗಿ ಬಾಳುವದು.

ಮಿದುಳಿನಿಂದ ಮನಸ್ಸಿಗೆ

ಲೇಖಕರು : ಶ್ರೀ. ಈಶ್ವರ ಶಿ. ಬಿದರಿ
ಟ್ರೇನಿಂಗ ಕಾಲೇಜ, ಧಾರವಾಡ

ಸಂಜೆಯ **ಸಮಯ.** ಪ್ರಶಾಂತವಾದ ವಾತಾವರಣವನ್ನು **ಭೇದಿಸಿ ಅಡವಿಯಲ್ಲಿ** ಸ್ವಚ್ಛಂದದಿಂದ ಹಸಿರು ಮೇಯ್ದು **ಮನೆಗೆ** ಮರಳುವ ಆಕಳುಗಳ ಅಂಬಾ ಎಂಬ ಸ್ವರವು ಕಿ**ವಿಗೆ** ಕೇಳಿ ಬರುತ್ತದೆ. **ಗೋಧೂಳಿಯು ಎಲ್ಲೆ**ಡೆಗೆ ಹರ**ಡಿ ನಾಡನ್ನೇ ಪಾವನ** ಮಾಡಲು **ಹೊರಟಿದೆ**ಯೆಂಬಂತೆ **ಭಾಸವಾಗುತ್ತ**ದೆ. ದಿನದ ಯಾತ್ರೆಯನ್ನು ಮುಗಿಸಿ **ದಣಿದ ದಿನಮಣಿಯು** ರಥದ ಅಶ್ವಸಪ್ತಕವನ್ನು ನಿಲ್ಲಿಸಿ **ಮೈಗರಚಲ್ಕೆಂದು** ಸಾರಥಿಗೆ ಹೇಳಿ ರಥದಿಂದ **ಇಳಿದನನ್ನುವಂತೆ** ಅಸ್ತಾಚಲದ ಮಧ್ಯಬಿಂದುವನ್ನು ದಾಟಿ **ಮೆಲ್ಲಮೆಲ್ಲನೆ** ಮರೆಯಾಗುತ್ತಿದ್ದಾನೆ. ಲೋಕಯಾತ್ರೆಗೈದು ಮನೆಗೆ ಬರುವ ಇನಿಯನಿಗೆ ಗರಮುದಿಕ್ಕಾಂತೆ ಎತ್ತಿದ **ಆರತಿಯ** ಕೆಂಬೆಳಕಿನ ಎಲ್ಲೆಡೆಗೂ **ಸಾಯಂಕಾಲದ** ಕೆಂಪು **ವರ್ಣವು ಆವರಿಸಿದೆ.**

ಇಂಥಹ **ಸಂಜೆಯ** ಶುಭಸಮಯದಲ್ಲಿ ಗ್ರಾಮದಿಂದರ **ಹೊರ ಅಂಚಿನಲ್ಲಿ** ಗಿಳಿಗಳ **ಚಿಲಿಪಿಲಿ** ನಿನಾದವು ಕೇಳಬರು**ತ್ತಿ**ದೆಯಲ್ಲ ! ಅದೇನು ? ಹಸಿರು ಬಣ್ಣದ ಮೈ, **ಕೆಂಪು** ಮೂಗಿನ ನೈಜ ಗಿಳಿಗಳೆಲ್ಲ ಕೂಗಾ**ಗಲೇ ಗೂಡನ್ನು ಸೇರಹತ್ತಿವೆ.** ಹಾಗಾದರೆ **ಈ ಗಿಳಿ**ಗಳು ಇಮಾರತಿಯೊಂದರ ಹೊರ ಆವಾರದಲ್ಲಿ ನಾಲ್ಕೈದು ಬದಿಗೆ ಬೇಲಿಯುಳ್ಳ ಆವರಣದಲ್ಲಿ ಶಿಸ್ತಿನಿಂದ ಸಾಲಾಗಿ ನಿಂತಿರುವವಲ್ಲ ! ಛೇ, ಇವು ಹಿಂದೆ **ಹೇಳಿದ** ನೈಜ ಗಿಳಿಗಳಲ್ಲ! ಇವರು ಪ್ರಾಥಮಿಕ ಶಾಲೆಯ ಮಕ್ಕಳು. ಈ ಕಟ್ಟಡವು ಪ್ರಾಥಮಿಕ ಶಾಲಾ ಕಟ್ಟಡವು. ಸಂಜೆಯಾದರೂ ಈ ಮಕ್ಕಳು ಇನ್ನೂ ತಮ್ಮ ಮನೆಗಳನ್ನು ಸೇರಿಲ್ಲವೇಕೆ? ಸಾಲೆಯ ಆವಾರದಲ್ಲಿ ಶಿಸ್ತಿನಿಂದ ನಿಂತು ಏನನ್ನೋ ಒಬ್ಬೊಬ್ಬರೇ **ಸರತಿಯಂತೆ ಬಂದು** ಹೇಳುತ್ತಿರುವರಲ್ಲ! ಆತನು ಹೇಳಿದ್ದನ್ನು **ಉಳಿದವರು ಉಚ್ಚ**ರಿಸುತ್ತಿರುವರಲ್ಲ!! ಓಹೋ! ನೆನಪಾಯಿತು. **ಇವರು** ಈಗ ಪುರವಂಚಿಗೆ ಹೇಳುತ್ತಿದ್ದಾರೆ. ಪುರವಂಚಿಗೆ ಅಂದರೆ ಮಗ್ಗಿಗಳ ಪಠಣ. ಈ ಹುಡುಗನು ಈಗ ಹತ್ತರ ಮಗ್ಗಿಯನ್ನು ಹೇಳುತ್ತಿದ್ದಾನೆ. "ಹತ್ತ ಹತ್ತಲೇ ನೂರು" ಎಲ್ಲರೂ ನಮಸ್ಕಾರ ಮಾಡಿದರಲ್ಲ !

ಇವರಾರು ? ಸದ್ಗೃಹಸ್ಥರಂತೆ ಕಾಣಿಸುತ್ತಿರುವವರು? ಇವರ ತಲೆಯ ಮೇಲಿನ ರುಮಾಲು, ಗಂಭೀರವಾದ ಮುಖಮುದ್ರೆ, ಉದ್ದಗಿನ ಪಾರ್ಸೀ ಕೋಟು, ಕುತ್ತಿಗೆಯಿಂದ ಹೊಕ್ಕಳದ ವರೆಗೆ ಆದಕ್ತಿರುವ ಬಿರಡಿಗಳು, ತಿದ್ದಿ ತೀಡಿದ ನೀರಿಗೆಯುಳ್ಳ ಉಟ್ಟ ಧೋತರ ಕೊರಳಿಗೆ ಸುತ್ತಿದ ಶೆಲ್ಲೆ, ಕೈಯಲ್ಲಿರುವ ಬೆತ್ತದ ಛಡಿ, ಇದನ್ನೆಲ್ಲ ನೋಡಿದರೆ ಇವರು ಈ ಗುಂಪಿನ ಶಿಕ್ಷಕರಂತೆ-ಅಲ್ಲ-ಗುರುಗಳಂತೆ ತೋರುತ್ತದೆ. ಅಹುದು; ಇವರು ಈ ಸಾಲೆಯ ಈ ಮಕ್ಕಳ ವಿದ್ಯಾಭ್ಯಾಸದ ಗುರೂಜಿಯವರೇ ದಿಟ. ಇದೇನು? ಆ ಹುಡುಗನಿಗೆ ಬೆತ್ತದ ಏಟು ಬಿದ್ದಿತಲ್ಲ! ಆಹುದು, ಮಗ್ಗಿಯನ್ನು ಹೇಳುವಾಗ ತಪ್ಪಿದ; ಅದಕ್ಕೆಂತಲೇ ಆ ಏಟು ಬಿದ್ದಿರಲು ಸಾಕು, ಹೀಗೆ ಹೊಡೆಯುವದು **ಒಳಿತೇ, ಕೆಡಕೇ** ಎಂದು ಇಂದಿನ ಈ ಪರಿವರ್ತನೆಯ **ಯುಗದಲ್ಲಿ** ಹೇಳುವದು ಕಠಿಣ. ಕಾಲ ಮತ್ತು ಪರಿಸ್ಥಿತಿ ಬದಲಿಸಿದ ಇಂದು ಈ ಶಿಕ್ಷೆಯು ಕೆಟ್ಟದು ಎಂದೆನಿಸುವದು ಸಹಜ. ಆದರೆ ಆಳವಾಗಿ ವಿಚಾರಿಸಿದರೆ ಆ ಶಿಕ್ಷೆಯ ಹಿಂದೆ ಇರುವ ಮಾತೃ ಸದೃಶ್ಯ ವಾತ್ಸಲ್ಯ, ಮಗುವು ಜಾಣನಾಗಬೇಕೆಂಬ ಉದಾತ್ತವಾದ ಉತ್ಕಟೇಚ್ಛೆ, ಕಾರ್ಯದಲ್ಲಿರುವ ಅಂತಃಕರುಣ, ಕಳಕಳಿ **ಇವೆಲ್ಲ ವ್ಯಕ್ತ**ವಾಗದೆ ಇರವು ಇರಲಿ! ಈ **ಬೆತ್ತದೇಟಿನ** ಔಚಿತ್ಯ, ಅನೌಚಿತ್ಯಗಳ

ಪರಾಮರ್ಶೆಗೆ ತೊಡಗುವದು ಈ ಬರಹಕ್ಕೆ ಹೊರತಾದುದಾಗಿದೆ. ನೋಡನೋಡುವಷ್ಟರಲ್ಲಿ ಆಗಿನ ಅಸ್ತಮಿತ ಸೂರ್ಯನ ಕೆಂಬಣ್ಣವು ಮಾಯವಾಯಿತು; ಗೋಧೂಳಿಯು ಅಡಗಿತು; ಕತ್ತಲೆಯ ಮೊತ್ತವು ಎತ್ತಲೂ ಮೆಲ್ಲನೆ ಆವರಿಸಹತ್ತಿತು. ಅನಂತ ನೀಲಗಗನದಲ್ಲಿ ದೇವತೆಗಳು ಹೊತ್ತಿಸಿದ ಸೊಡರುಗಳೆನ್ನುವಂತೆ ನಕ್ಷತ್ರಗಳು ಒಂದೊಂದಾಗಿ ಮಿನುಗಹತ್ತಿದವು. ಮಕ್ಕಳು ಹೇಳುವ ಪುರವಂಚಿಗೆಯು ಹತ್ತರಿಂದ ಇಪ್ಪತ್ತಕ್ಕೆ, ಇಪ್ಪತ್ತೊಂದರಿಂದ ಮೂವತ್ತಕ್ಕೆ, ಅಂಕಿಗಳು ೧೦೦ರಿಂದ ೨೦೦ಕ್ಕೆ, ೩೦೦ಕ್ಕೆ ಬಂದಿವೆ. ಕೊನೆಯ ಹುಡುಗನ ಸರತಿಯ ೩೦ರ ಮಗ್ಗಿಯ ಎಣಿಕೆ ೩೦ ಹತ್ತಲೆ ೩೦೦. ನಮಸ್ಕಾರ. ಮಕ್ಕಳೆಲ್ಲ ಪಾಟಿ ಪುಸ್ತಕಗಳನ್ನು ತೆಗೆದುಕೊಂಡು ನಗುತ್ತ ಕೆಲೆಯುತ್ತ ಮನೆಗಳಿಗೆ ಓಡಹತ್ತಿದರು. ಅತ್ತೆಯ ಮನೆಯಿಂದ ಸೊಸೆಯರು ತವರು ಮನೆಗೆ ಮಕ್ಕಳಾಗಿ ಹೋಗುವಂತೆ, ಬಂದಿ ವಾಸದಲ್ಲಿದ್ದ ಕೈದಿಗಳು ಶಿಕ್ಷೆಯನ್ನು ತೀರಿಸಿ ಬಂಧನದಾಚೆಗೆ ನೆಗೆಯುವಂತೆ, ಪಂಜರದಲ್ಲಿಯ ಗಿಳಿಗಳು ಹೇಗೆಯೋ ಪಂಜರದಿಂದ ಭುರ್ರೆಂದು ಹಾರಿ ಹೋಗುವಂತೆ ಮಕ್ಕಳು ಎಷ್ಟೊಂದು ಹರ್ಷಚಿತ್ತದಿಂದ ಆ ಸಾಲೆಯಿಂದ ಮನೆಗೆ ಹೋಗುತ್ತಿದ್ದರೆಂಬುದನ್ನು ಹೇಳತೀರದು.

ಮೇಲೆ ಹೇಳಿದ ಮಾತುಗಳು ಇಂದಿಗೆ ಸುಮಾರು ೩೦–೩೫ ವರ್ಷಗಳ ಹಿಂದಿನ ಶಿಕ್ಷಣದ ಒಂದು ಅಂಶದ ಚಿತ್ರಣೆಯಾಗಿದಿಯೆಂಬುದು ವಾಚಕರಿಗೆ ತಟ್ಟನೆ ಹೊಳೆಯುವುದರಲ್ಲಿ ಸಂದೇಹವಿಲ್ಲ. ಈ ಚಿತ್ರವು ಅಂದಿನ ಶಿಕ್ಷಣದ ಒಂದು ಅಂಶಮಾತ್ರ. ಕವಿತೆ, ವಾಚನ, ಅಂಕಗಣಿತ, ಭೂಮಿತಿ, ಜಮಾಖರ್ಚು, ಇತಿಹಾಸ, ಭೂಗೋಲ ಇವೇ ಮೊದಲಾದ ವಿಷಯಗಳು ಕಂಠಪಾಟ ಮಾಡುವದು, ಗೆಜ್ಜಿ ಇಲ್ಲವೆ ಗೋಖಲೆ ಕೃತ ಗಣಿತದಲ್ಲಿ ಸಂಕೀರ್ಣಪ್ರಶ್ನೆ, ಪ್ರಶ್ನಸಮುದಾಯದಲ್ಲಿಯ ಅತ್ಯಂತ ಕಠಿಣ ಲೆಕ್ಕಗಳನ್ನು ಬಿಡಿಸುವ ಹವ್ಯಾಸದಲ್ಲಿ ತೊಡಗುವದು, ಅಕ್ಷರ ಶುದ್ಧತೆಗಾಗಿ 'ದರ ಬಂದಗಿ...' ಕಾಪಿ ಬರೆಯುವದು, ಶುದ್ಧ ಛಾಪಿ ಅಕ್ಷರಗಳನ್ನು ತೀಡುವದು; ಕಲಿತ ವಿಷಯವನ್ನು ಒಪ್ಪಿಸುವಲ್ಲಿ ತಪ್ಪಿದರೆ ಉಗ್ರ ಶಿಕ್ಷೆಯನ್ನು ಅನುಭವಿಸುವದು ಇವೆಲ್ಲ ಅಂದಿನ ಶಿಕ್ಷಣದ ಕೆಲವು ಮಹತ್ವದ ವಿಶೇಷಗಳೆಂದರೆ ತಪ್ಪಾಗಲಿಕ್ಕಿಲ್ಲವಷ್ಟೆ ?

ಅಂದಿನ ಶಿಕ್ಷಣವನ್ನು ಪರಾಮರ್ಶಿಸಿದರೆ ಅದು ವಿಷಯ ಪ್ರಾಧಾನ್ಯವಾದುದಾಗಿದ್ದರೂ ಸುತ್ತಲಿನ ವ್ಯವಹಾರ, ಪರಿಸ್ಥಿತಿ, ಜೀವನಕ್ಕೆ ವಿರುದ್ಧವಾಗಿತ್ತೆಂದೂ ಅರ್ಥದ ಮರ್ಮವನರಿಯದೆ ಕಲಿಯುವದಾಗಿತ್ತೆಂದೂ ಮೆದುಳಿಗೆ ಪ್ರಾಧಾನ್ಯವೀಯುವಂಥದಾಗಿತ್ತೆಂದೂ ಹೇಳಬಹುದು. ಮಗು ಬೆಳೆದು ದೊಡ್ಡವನಾಗಿ ವಿಶಾಲ ಪ್ರಪಂಚದಲ್ಲಿ ಕಾಲಿಟ್ಟಾಗ ಚಿಕ್ಕಂದಿನಲ್ಲಿ ಪಡೆದ ಆ ಶಿಕ್ಷಣವು ಆತನಿಗೆ ಉಪಯುಕ್ತವಾಗುತ್ತಿತ್ತೇ ? ಪ್ರಪಂಚದಲ್ಲಿ ಅವನು ಎದುರಿಸಬೇಕಾದ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಅಂದಿನ ಶಿಕ್ಷಣವು ಒದಗಿಸುತ್ತಿತ್ತೇ? ವ್ಯಕ್ತಿಯ ವ್ಯವಹಾರಜ್ಞಾನಾರ್ಜನೆಗೆ ಪ್ರೋತ್ಸಾಹನೆಯನ್ನು ಕೊಡುತ್ತಿತ್ತೇ? ಮಕ್ಕಳನ್ನು ಶಾಲಾಮಂದಿರಗಳಿಗೆ ಆಕರ್ಷಿಸುತ್ತಿತ್ತೇ? ಅವರನ್ನು ವಿಚಾರಶೀಲರನ್ನಾಗಿ ಮಾಡುತ್ತಿತ್ತೇ? ಮಕ್ಕಳ ಸಾಲೆಯ ಜೀವನಕ್ಕೂ ಹೊರಗಿನ ಜೀವನಕ್ಕೂ ತಾಳಮೇಳ ಹೊಂದಿಸುತ್ತಿತ್ತೇ? ಸಾಲೆಯನ್ನು ಸುತ್ತಲಿನ ಸಮಾಜದ ಇಲ್ಲವೆ ಆ ಹಳ್ಳಿಯ ಜನಜೀವನದ ಕೇಂದ್ರವನ್ನಾಗಿ ಪರಿವರ್ತಿಸುತ್ತಿತ್ತೇ? ಮಕ್ಕಳ ಮನೋನುಗುಣಕ್ಕೆ ಅನುವಾಗಿತ್ತೇ? ಮಕ್ಕಳ ಮನೋವಿಕಾಸ, ಹೃದಯವಿಕಾಸಕ್ಕೆ ಆಸ್ಪದವೀಯುತ್ತಿತ್ತೇ? ಈ ಎಲ್ಲ ಪ್ರಶ್ನೆಗಳಿಗೆ ಒಂದೇ ಒಂದು ಉತ್ತರ ಅಂದರೆ "ನ"ಕಾರಾತ್ಮಕ. ಅಂದಿನ ಶಿಕ್ಷಣವು ಪುಸ್ತಕೀಯ ಶಿಕ್ಷಣ. ಮುದ್ರಿತ ಸಂಗತಿಗಳನ್ನು ಇಸ್ವಿಗಳನ್ನು ಕಂಠಪಾಠ ಮಾಡುವದಾಗಿತ್ತು. ವ್ಯಕ್ತಿಗಳು ತಾವು ಬೆಳೆದುಬಂದ ಸಮಾಜದ ಅವಹೇಳನ ಮಾಡುವವರೂ ಜೀವನಕ್ಕೆ ಹೊಂದಿಕೊಳ್ಳದವರೂ ಆಗಿದ್ದರೆಂದರೆ ತಪ್ಪಾಗಲಿಕ್ಕಿಲ್ಲ. ಮಕ್ಕಳ ಕೈ ಕುಶಲತೆಗೆ, ಮನೋಗುಣಕ್ಕೆ ಸ್ಥಾನವಿರಲಿಲ್ಲ. ಕೇವಲ ಬುದ್ಧಿವಿಕಾಸ ಅರ್ಥಾತ್ ಮೆದುಳಿನ ಬೆಳವಣಿಗೆಯನ್ನುಂಟು ಮಾಡುತ್ತಿತ್ತೆಂದು ಅನ್ನಬಹುದು. ಫುಟಬಾಲದಲ್ಲಿ ಹವೆಯನ್ನು ತುಂಬುವಂತೆ ವಿವಿಧ ವಿಷಯಗಳ ಜ್ಞಾನವೆಂಬ ಹವೆಯನ್ನು ಮಕ್ಕಳ ಮೆದುಳಿನಲ್ಲಿ ತುಂಬುವದೇ ಆದಾಗಿತ್ತು. ಸಾಲೆಯು ಹಳ್ಳಿಯ ಜೀವನದಿಂದ ಗಾವುದ ಗಾವುದದಾಚೆಗೆ ನಿಂತುದಾಗಿತ್ತು. ಎಳೆತನದಲ್ಲಿ ಇಂಥ ಶಿಕ್ಷಣ ಪಡೆದ ಮಕ್ಕಳಲ್ಲಿ ದೊಡ್ಡವರಾದ ಬಳಿಕ ತಮ್ಮ ನೆರೆಹೊರೆ, ತಮ್ಮ ಹಳ್ಳಿಗರು ಬಂಧು-ಬಾಂಧವರು ದೇಶ

ಮೊದಲಾದವುಗಳ ಬಗೆಗೆ ಭಕ್ತಿದೃಷ್ಟಿಯು ಹುಟ್ಟುವದಾದರೂ ಹೇಗೆ? ಹೀಗೆ ಅಂದಿನ ಶಿಕ್ಷಣವು ಮೆದುಳಿಗೆ ಪ್ರಾಧಾನ್ಯವೀಯುವದಾಗಿತ್ತೆಂದು ಹೇಳಬಹುದಾಗಿದೆ. ಈ ಮೂವತ್ತು ವರ್ಷಗಳಲ್ಲಿ ಶಿಕ್ಷಣ ಸೇತುವೆಗಳಿಗೆ ಬಹು ನೀರು ಪ್ರವಹಿಸಿ ಹೋಗಿದೆ. ನಾಗಾಲೋಟದಿಂದ ಶಿಕ್ಷಣ ಪ್ರಪಂಚದಲ್ಲಿ ಅನೇಕ ಮಾರ್ಪಾಟುಗಳು ಆಗಿವೆ. ಹಳೆಯ ಶಿಕ್ಷಣ ಅಭ್ಯಾಸದ ವಿಷಯಗಳಲ್ಲಿ ಹೆಚ್ಚುಕಡಿಮೆ, ಕಲಿಸುವ ಕ್ರಮದಲ್ಲಿ ಬದಲಾವಣೆ, ನೋಡುವ ದೃಷ್ಟಿಯಲ್ಲಂತೂ ಹೆಚ್ಚಿನ ಸ್ಥಿತ್ಯಂತರಗಳಾಗಿದ್ದು ನಮಗೆ ವಿದಿತವಿದೆ. ಶಿಕ್ಷಣದ ಇಂದಿನ ವ್ಯಾಖ್ಯೆಯೇ ಬದಲಾಗಿದೆ. ಕೇವಲ ಬುದ್ಧಿಯ ಬೆಳವಣಿಗೆಯೇ ಶಿಕ್ಷಣದ ಗುರಿಯಲ್ಲ. ಮೆದುಳಿಗಿಂತಲೂ ಹೆಚ್ಚಾಗಿ ವ್ಯಕ್ತಿಯ ಮನಸ್ಸಿನ ಅರ್ಥಾತ್ ಹೃದಯದ ಬೆಳವಣಿಗೆಯೇ ಶಿಕ್ಷಣದ ಗುರಿಯಾಗಿದೆ ಇಂದು.

ಬಾಪೂಜಿಯವರ ಹೃದಯದಿಂದ ಹೊರಬಂದ ಹೊಸ ಶಿಕ್ಷಣವು ಮಗುವಿನ ಸರ್ವಾಂಗೀಣ ಉನ್ನತಿಯನ್ನು ಬಯಸುತ್ತದೆ. ಅಂದರೆ ಅವನ ಶರೀರದ, ಬುದ್ಧಿಯ ಮತ್ತು ಹೃದಯದ ಈ ಮೂರರ ಸಮತೋಲ ಬೆಳವಣಿಗೆಯನ್ನು ಅಪೇಕ್ಷಿಸುತ್ತದೆ ಇದಲ್ಲದೆ ಮಗುವು ದೊಡ್ಡವನಾದ ಮೇಲೆ ತನ್ನ ಸುತ್ತಲಿನ ಸಮಾಜಕ್ಕೆ ವಿಶಾಲವಾದ ರಾಷ್ಟ್ರಕ್ಕೆ ಉಪಯುಕ್ತ ವ್ಯಕ್ತಿಯಾಗಬೇಕೆಂದು ಈ ಹೊಸ ಶಿಕ್ಷಣವು ಇಚ್ಛಿಸುತ್ತದೆ. ತನ್ನಂತೆ ತನ್ನ ಹಳ್ಳಿಯ ಜನರನ್ನು ಕಾಣಬೇಕೆಂದೂ ಅವರ ಹಿತ ಸಾಧನೆಗಾಗಿ ಶ್ರಮಿಸುವದೂ ತನ್ನಿಂದಾದಷ್ಟು ಅಳಿಲು ಸೇವೆಯನ್ನು ರಾಷ್ಟ್ರಕ್ಕಾಗಿ ಸಲ್ಲಿಸುವದೂ ಪ್ರಸಂಗವಶದಲ್ಲಿ ತನ್ನ ಸ್ವಹಿತವನ್ನು ಕಡೆಗಣಿಸುವದೂ— ಇವೆಲ್ಲವನ್ನೂ ಮಕ್ಕಳಲ್ಲಿ ತುಂಬುವಂಥ ಶಿಕ್ಷಣವು ನಮ್ಮ ದೇಶಕ್ಕೆ ಬೇಕಾಗಿತ್ತು. "ನಯೀ ತಾಲೀಮು" ಅರ್ಥಾತ್ ಹೊಸ ಶಿಕ್ಷಣವು ಮೇಲಿನ ಈ ಬೇಡಿಕೆಗಳನ್ನು ಪೂರೈಸಿಕೊಡಬಲ್ಲುದಾಗಿದೆ. ಮೇಲೆ ಕಾಣಿಸಿದ ಅಂಶಗಳು ಹೃದಯ ವೈಶಾಲ್ಯದ ಸಾಂಕೇತಿಕಗಳಾಗಿವೆ. ಅಂದರೆ ಹೊಸ ಶಿಕ್ಷಣವು ವಿಶಾಲ ಮನಸ್ಸಿನ ತುಂಬು ಪ್ರೇಮದಿಂದ ತುಂಬಿದ ಹೃದಯದ ಮಾನವರನ್ನಾಗಿ ನಿರ್ಮಿಸುವ ಒಂದು ತಂತ್ರವೆಂದು ಹೇಳಬಹುದಾಗಿದೆ.

ಹೊಸ ಶಿಕ್ಷಣವು ಸರ್ವಾಂಗೀಣ ಉನ್ನತಿಯನ್ನು ಮಾಡುವ ಅನೇಕ ಸಾಧನಗಳನ್ನು ಒಳಗೊಂಡಿದೆ. ಮೂಲೋದ್ಯೋಗ, ಸ್ವಚ್ಛತೆ, ಹಬ್ಬ, ತಿಥಿ, ಜಯಂತಿ, ದಿನಾಚರಣೆ ಪ್ರವಾಸಗಳು, ನಿರೀಕ್ಷಣೆ, ಸಾಮಾಜಿಕ ಕಾರ್ಯ ಇತ್ಯಾದಿ ಸಂಗತಿಗಳ ಈ ಶಿಕ್ಷಣದಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ. ಇವೆಲ್ಲವು ಹಾಗೂ ಜೀವನ ಪ್ರಸಂಗಗಳಿಂದ ಉದ್ಭವಿಸುವ ಚಟುವಟಿಕೆಗಳು ವಿವಿಧ ವಿಷಯಗಳನ್ನು ಕಲಿಸುವ ವಾಹಕಗಳಾಗಿ ಪರಿಣಮಿಸುತ್ತವೆ. ಮೂಲೋದ್ಯೋಗದಿಂದ ಉದ್ಯೋಗದಲ್ಲಿ ಗತಿಯೂ ಸ್ವಚ್ಛತೆಯಿಂದ ಅಂತರ್ಬಾಹ್ಯಗಳ ಶುದ್ಧತೆಯೂ ಹಬ್ಬ, ತಿಥಿ, ಜಯಂತಿ ಮೊದಲಾದವುಗಳ ಆಚರಣೆಯಿಂದ ನಮ್ಮ ಸಂಸ್ಕೃತಿ, ರೂಢಿ ಪರಂಪರೆ ರಾಷ್ಟ್ರೀಯ ಭಾವನೆಗಳ ಜಾಗೃತಿಯೂ ಮಗುವಿನಲ್ಲಿ ತಾವೇ ತಾವಾಗಿ ನೆಲೆಗೊಳ್ಳುವವು.

ಹೊಸ ಶಿಕ್ಷಣದಲ್ಲಿ ಶಾಲೆಯು ಸಮಾಜದ ಕೇಂದ್ರವಾಗುತ್ತದೆ. ರಾಷ್ಟ್ರೀಯ ಹಬ್ಬಗಳು ಎಲ್ಲ ಹಳ್ಳಿಗರಿಂದ ಶಾಲೆಯ ಆವಾರದಲ್ಲಿ ಆಚರಿಸಲ್ಪಟ್ಟರೆ, ಹಳ್ಳಿಯಲ್ಲಿ ಯಾವದೊಂದು ಜಾತ್ರೆಯಾದಾಗ ಶಾಲೆಯ ಸ್ವಯಂ ಸೇವಕ ಪಥಕಗಳು ಜಾತ್ರೆ ನೆರೆದ ಸ್ಥಳದಲ್ಲಿ ಸ್ವಚ್ಛತೆಯನ್ನು ಕಾಪಾಡುವದನ್ನು, ರೋಗಗಳು ಹುಟ್ಟದಂತೆ ನೋಡುವದನ್ನು ಇನ್ನಿತರ ಸಮಾಜ ಕಲ್ಯಾಣ ಕಾರ್ಯಗಳನ್ನೂ ಮಾಡಲು ತೊಡಗುವವು. ಸಂತೆಯ ದಿನ ಶಾಲೆಯ ಸಮಾಜ ಸೇವಾ ಗುಂಪಿನವರು ವಿವಿಧ ಅಂಗಡಿಗಳನ್ನು ಸಾಲಾಗಿ ವ್ಯವಸ್ಥೆಗೊಳಿಸುವುದನ್ನು, ಬೇರೆ ಬೇರೆ ತರಹದ ವಸ್ತುಗಳನ್ನು ಮಾಡುವುದಕ್ಕಾಗಿ ನಿರ್ದಿಷ್ಟ ಸ್ಥಳಗಳನ್ನು ಗೊತ್ತುಪಡಿಸುವದನ್ನು, ಸಂತೆಗೆಂದು ಬರುವ ಸುತ್ತಲಿನ ಹಳ್ಳಿಗಳ ಜನರಿಗೆ ಸಹಾಯಕಾರಿಯಾಗುವ ಬೇರೆ ಕೆಲಸಗಳನ್ನು ಮಾಡಲುದ್ಯುಕ್ತರಾಗುವರು. ಹೀಗೆ ಹೊಸ ಶಿಕ್ಷಣದಲ್ಲಿ ಮಕ್ಕಳು ಸಮಾಜ ಸೇವೆಯ ಮೊದಲ ಪಾಠವನ್ನು ಅಳವಡಿಸಿಕೊಳ್ಳುವರು. ಶಾಲೆಯು ಸಮಾಜಕ್ಕೆ ಉಪಯುಕ್ತರಾಗಬಲ್ಲ ಕಾರ್ಯಧುರಂಧರರನ್ನು ಸಜ್ಜುಗೊಳಿಸುವ ಕುಲುಮೆಯಾಗುವದು.

ಹೊಸ ಶಿಕ್ಷಣವು ಮಕ್ಕಳಿಗೆ ಪ್ರಜಾತಂತ್ರದ ಪ್ರಥಮ ಹೆಜ್ಜೆಗಳನ್ನು ಕ್ರಿಯಾತ್ಮಕವಾಗಿ ಕಲಿಸಿ ಕೊಡುವದು.

ಕೆಲವೊಂದು ಕಟ್ಟು ನಿಟ್ಟುಗಳಿಗೆ ಒಳಪಟ್ಟು ಸಾಲೆಯ ಅಂತರಾಡಳಿತೆಯು ಮಕ್ಕಳಿಂದಲೇ ನಡೆಯುವದು. ಮಕ್ಕಳಿಂದ ಚುನಾಯಿತರಾದ ಮಂತ್ರಿಮಂಡಲವೊಂದು ರಚಿತವಾಗಿ ಅದು ಕೇಂದ್ರ ಮಂತ್ರಿಮಂಡಲದಂತೆಯೂ ಪ್ರತಿ ವರ್ಗದಲ್ಲಿ ಆಯಾ ವರ್ಗದಿಂದ ಆಯ್ಕೆಗೊಂಡ ಮಂತ್ರಿಮಂಡಲವು ರಾಜ್ಯ ಮಂತ್ರಿಮಂಡಲದಂತೆಯೂ ಇಡೀ ಸಾಲೆಯ ಇಲ್ಲವೆ ಒಂದೊಂದು ವರ್ಗದ ಆಡಳಿತೆಯನ್ನು ಸಾಗಿಸುವವು. ಗುರೂಜಿಯವರು ಮಾರ್ಗದರ್ಶಕರು. ಯಾವದೊಂದು ಉತ್ಸವವನ್ನು ಆಚರಿಸುವದಾಗಲಿ ಪ್ರವಾಸವನ್ನು ಕೈಕೊಳ್ಳುವದಾಗಲಿ ಸಮಾಜ ಸೇವಾ ಕಾರ್ಯವನ್ನು ಮಾಡುವದಾಗಲಿ ಯಾರೊಬ್ಬರನ್ನು ಆಮಂತ್ರಿಸುವದಾಗಲಿ—ಹೀಗೆ ಇಂಥ ಎಲ್ಲ ಕೆಲಸಗಳನ್ನು ಮಕ್ಕಳ ಪ್ರತಿನಿಧಿಗಳು ಮುಂದಾಗಿ ಉಳಿದ ತಮ್ಮ ಗೆಳೆಯರ ನೆರವನ್ನು ಪಡೆದು ನೆರವೇರಿಸುವರು. ಶಿಕ್ಷಕರು ಅವರಿಗೆ ಮಾರ್ಗದರ್ಶಕರಾಗಿ ಆಗಾಗ ನಿರ್ದೇಶಕರಾಗಿ ಉಳಿಯುವರು.

ಹೊಸ ಶಿಕ್ಷಣದ ಸಾಲೆಯು ವಸ್ತ್ರಸ್ವಾವಲಂಬನ, ಸಂಘ, ವಿದ್ಯಾರ್ಥಿಗಳ ಸಹಕಾರಿ ಭಾಂಡಾರ, ವಾಚನ ಮಂದಿರ, ನಾಟ್ಯ ಇಲ್ಲವೆ ವಿನೋದ ಸಂಘ ಮೊದಲಾದ ಚಟುವಟಿಕೆಗಳ ಸ್ಥಾನವೂ ಆಗಿದೆ. ಇವೆಲ್ಲವು ವಿದ್ಯಾರ್ಥಿಗಳಿಂದಲೇ ನಡೆಸಲ್ಪಡುತ್ತವೆ. ಇದರಿಂದ ಅವರಲ್ಲಿ ಸ್ವಾವಲಂಬನ, ಸಹಕಾರ, ದೇಶ-ವಿದೇಶಗಳ ಆಗು ಹೋಗುಗಳ ಜ್ಞಾನ, ಇವೆಲ್ಲವುಗಳ ಮಹತ್ವವು ಪ್ರತ್ಯಕ್ಷವಾಗಿ ದೊರೆಯುವದು. ಒಟ್ಟನಲ್ಲಿ ಹೊಸ ಶಿಕ್ಷಣವು ಮಕ್ಕಳಲ್ಲಿ ಹೃದಯ ವೈಶಾಲ್ಯವನ್ನು ಹೆಚ್ಚಿಸಿ ಅವರನ್ನು ಸಮಾಜಕ್ಕೆ ಪೋಷಕ ವ್ಯಕ್ತಿಗಳನ್ನಾಗಿ ಮಾರ್ಪಡಿಸುವದು; ಜೀವನವನ್ನು ಸುಗಮವಾಗಿ, ಸುಂದರವಾಗಿ ಮತ್ತು ವಿಶಾಲ ರಾಷ್ಟ್ರಕ್ಕೆ ಸಹಾಯಕವಾಗುವಂತೆ ಅಣಿಗೊಳಿಸುವದು.

ಹೊಸ ಶಿಕ್ಷಣದ ಶಿಕ್ಷಕನು ಹಳ್ಳಿಗರೊಡನೆ ಸಮರಸವಾಗಿ ಬೆರೆತು ನಡೆಯುವವನೂ ಇಡಿಯ ಹಳ್ಳಿಯೇ ತನ್ನ ಕಾರ್ಯರಂಗವೆಂದು ಭಾವಿಸಿದವನೂ ಕಾಲಪರಿಪಾಠ ಮೀರಿದವನೂ ಉಚ್ಚತಮ ಸ್ವತಂತ್ರ ವಿಚಾರಿಯೂ ಪರಿಶೋಧಕ ಬುದ್ಧಿಯುಳ್ಳವನೂ ಸ್ವಾವಲಂಬಿ ಜೀವನ ಸಾಗಿಸುವವನೂ ರಾಷ್ಟ್ರೀಯ ಮನೋವೃತ್ತಿಯುಳ್ಳವನೂ ಆಗಿರುತ್ತಾನೆ. ಇಂಥ ಶಿಕ್ಷಕನಿಂದ ಮೇಲೆ ನಿರೂಪಿಸಿದ ಹೊಸ ಶಿಕ್ಷಣ ಇಲ್ಲವೆ ಹೃದಯದ ಶಿಕ್ಷಣ ಅಥವಾ ಜೀವನ-ಶಿಕ್ಷಣದಲ್ಲಿ ಶಿಕ್ಷಿತನಾದ ಇಂದಿನ ಮಗು ನಾಳಿನ ಆದರ್ಶ ನಾಗರಿಕನಾಗುವುದರಲ್ಲಿ ಸಂದೇಹವೇನಿದೆ ?

"ನೂತನ ಗಣಿತ" ಗಳ ತಿದ್ದಿದ ಆವೃತ್ತಿಗಳು

ಎಲ್ಲ ಕಡೆಗೂ ದೊರೆಯುವವು

ಹಲವು ತಜ್ಞರ ನೆರವಿನಿಂದ ತಿದ್ದುಪಡೆಯನ್ನು ಕೈಕೊಂಡು ಹೊಸ ಆವೃತ್ತಿಗಳನ್ನು ಹೊರಡಿಸಲಾಗಿದೆ. ಮನಶ್ಶಾಸ್ತ್ರ, ಗಣಿತಶಾಸ್ತ್ರ, ವ್ಯವಹಾರ ಇವುಗಳ ತ್ರಿವೇಣೀ ಸಂಗಮವನ್ನು ಇವುಗಳಲ್ಲಿ ಕಾಣಬಹುದು. ಅಲ್ಲದೆ ಗಣಿತದ ಎಲ್ಲ ವಿಭಾಗಗಳನ್ನೂ ಕೊಡಲಾಗಿದೆ.

ಎಲ್ಲ ಜಿಲ್ಹಾ ಸ್ಕೂ. ಬೋ. ಹಾಗು ಮುನಸಿಪಲ್ ಸ್ಕೂ. ಬೋರ್ಡುಗಳೂ ಮನ್ನಣೆಯನ್ನಿತ್ತಿರುವವು

ಎಂತಲೇ ತಿದ್ದಿದ ಆವೃತ್ತಿಗಳನ್ನು ಕೇಳಿರಿ. ಎಲ್ಲ ಕಡೆಗೂ ದೊರೆಯುವವು.

ಆಳಕವಾಡಿ ಬುಕ್ ಡಿಪೋ, ಧಾರವಾಡ

ನಾಗವರ್ಮನ ಕಾಲದ ಹಳಗನ್ನಡ ವ್ಯಾಕರಣ

ಲೇಖಕರು: ಶ್ರೀ. ತಟ್ಟಿ ಶ್ಯಾಮರಾಯರು, ಧಾರವಾಡ.

ಸಂಸ್ಕೃತ ಕವಿಗಳ ಕಾವ್ಯಕ್ಕೆ ಮರುಳುಹೋಗಿ ಅವನ್ನೇ ಆದರ್ಶವಾಗಿಟ್ಟುಕೊಂಡ ಕನ್ನಡ ಸಾಹಿತಿಗಳು ವ್ಯಾಕರಣದಲ್ಲಿ ಬಳಸುವ ಶಬ್ದಗಳನ್ನು ಸಂಸ್ಕೃತದಿಂದಲೇ ಎರವಲಾಗಿ ತೆಗದುಕೊಂಡಿರುವದು ಆಶ್ಚರ್ಯವಲ್ಲ. ಅವರು ಸ್ವರ, ವ್ಯಂಜನ ಎಂಬ ಹೆಸರುಗಳನ್ನು ಮಾತ್ರ ಪಾಣಿನೀಯ ಅಷ್ಟಾಧ್ಯಾಯೀ ವ್ಯಾಕರಣದಿಂದ ತೆಗೆದು ಕೊಂಡಿಲ್ಲ. ಪಾಣಿನಿಯು ಅವುಗಳಿಗೆ ಅಚ್, ಹಲ್ ಎಂಬ ಕೃತಕ ಸಂಜ್ಞೆಗಳನ್ನೇ ಉಪಯೋಗಿಸಿದ್ದಾನೆ. * ತೆಲುಗರು ಸಂಸ್ಕೃತಕ್ಕೆ ಮರುಳಾದವರಲ್ಲಿ ನಮಗಿಂತಲೂ ನುರುಳರೆಂದು ತೋರುವುದು ಅವರು ಸ್ವರವ್ಯಂಜನಗಳ ಬದಲು 'ಅಚ್ಚುಲು' (= ಅಚ್ಚುಗಳು) 'ಹಲ್ಲುಲು' (= ಹಲ್‌ಗಳು) ಎಂಬ ಸಂಜ್ಞೆಯನ್ನೇ ಇಟ್ಟು ಕೊಂಡಿದ್ದಾರೆ. ತಮಿಳರು ಅತ್ಯಂತ ಅವಶ್ಯವಾದ ಸಂಜ್ಞೆಗಳನ್ನು ಮಾತ್ರ ಬಳಸುವರು. ಅವರು ಸ್ವರಗಳಿಗೆ "ಉಸಿರು" ಎಂದೂ ವ್ಯಂಜನಗಳಿಗೆ 'ಮೆಯ್' ಎಂದೂ ಕರೆಯುವರು; ಇದು ಸುಂದರವಾದ ನವಿನ ಕಲ್ಪನೆಯೆಂದೇ ಹೇಳಬಹುದು.

ಸಂಸ್ಕೃತದ ಅನುಸ್ವಾರದ ಕೆಲಸವನ್ನು ಕನ್ನಡದ ಅನುನಾಸಿಕ ವರ್ಣಗಳೇ ಮಾಡುತ್ತಿದ್ದವು. ಆದರೆ ಮುಂದೆ ಆಯ್ದಾ ಅನುನಾಸಿಕ ವರ್ಣಗಳ ಬದಲಾಗಿ 'ಬಿಂದು,' 'ಪೂಜ್ಯ. 'ಸೊನ್ನೆ' ಯನ್ನೇ ಹೆಚ್ಚಾಗಿ ಬಳಸಹತ್ತಿದರು. ನಾಗವರ್ಮರು ಉದಾಹರಿಸಿದ ಈ ಗಿಲನೆಯ ಕಂದಪದ್ಯವನ್ನು ನೋಡಿರಿ:

'ಬಿಜ್ಜಮೆತ್ತಿಸೆವಣ್ಜೆಯ'
ಸಜ್ಜಾಳಮುನ್ಮೊಣ್ಜುಗೆಡವ ಶುಕಶಾರಿಕೆಯುಂ।
ಸೊಜ್ಜಿ ಬಲವನ್ನು ತೀಡುವ
ತೆಜ್ಜಣಗಾಳಿಯುಮದೇಮರ್ನಜ್ಗೊಳಿಸಿದುವೋ॥

ವರ್ಗೀಯ ವ್ಯಂಜನಗಳಲ್ಲಿ ವರ್ಗದ ಮೊದಲನೆಯ ಅಕ್ಷರವು ಮಾರ್ಪಟ್ಟು ಕೆಲವೊಂದು ಸನ್ನಿವೇಶದಲ್ಲಿ ಮೂರನೆಯ ಅಕ್ಷರವಾಗುವದೊಂದು ದ್ರಾವಿಡವರ್ಗಕ್ಕೆ ಸೇರಿದ ಭಾಷೆಗಳ ವೈಶಿಷ್ಟ್ಯವಾಗಿದೆ. ಕನ್ನಡದ ಮೊದಲನೆಯ ವೈಯಾಕರಣಿಯಾದ ನಾಗವರ್ಮನು ಈ ಮಾತಿಗೆ ಸೂತ್ರವೊಂದನ್ನು (ಕಂದಪದ್ಯರೂಪದಲ್ಲಿ) ರಚಿಸಿ ಸಮಸ್ತ ಪದಗಳ ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾನೆ: ಪಟಿಗನ್ನಡಂ. ಪುದುಂಗೊಳ್. ಆಟಿಗವಿ. ಎರ್ದೆಗೊಳಿಸು ಇವುಗಳಲ್ಲಿ ಕ ಕಾರವು ಗ ಕಾರವಾಗಿದೆ. ತೂಗುಂದಲೆ, ಓಳಿದೋರಣ ಮೊಲಾದವುಗಳಲ್ಲಿ ತ ಕಾರವು ದ ಕಾರವಾಗಿದೆ. ತಣ್ಬುಬೆಲ್, ಕಣ್ಬೊಲ, ತಾಪಂಬೆತ್ತೆಂ ಮುಂತಾದವುಗಳಲ್ಲಿ ಪ ಕಾರವು ಬ ಕಾರವಾಗಿದೆ. ಚ ಟ ಅಕ್ಷರಗಳಿಗೆ ಈ ನಿಯಮವು, ಹತ್ತುವದಿಲ್ಲ. ಇದಕ್ಕೇ ಹೊಸಗನ್ನಡದಲ್ಲಿ 'ಗದಬಾದೇಶ ಸಂಧಿ' ಎಂದು ಹೆಸರಿದೆ. ತಮಿಳಿನಲ್ಲಂತೂ ಮೃದು ವ್ಯಂಜನಗಳೆಂದು ವರ್ಣಮಾಲೆಯಲ್ಲಿ ಬೇರೆ ವರ್ಣಗಳೆ ಇಲ್ಲ. ವರ್ಗದ ಮೊದಲನೆಯ ಅಕ್ಷರಗಳೇ ಪದ ಮಧ್ಯದಲ್ಲಿ ಬಂದಾಗ ಮೃದುವಾಗಿ ಉಚ್ಚರಿಸಲ್ಪಡುವವು; 'ಎಟುತು' ಎಂದು ಬರೆದರೂ 'ಎಡುದು' (= ಎತ್ತು) ಎಂದೇ ಉಚ್ಚರಿಸಬೇಕು. 'ಉಂಟು' ಎಂದು ಬರೆದದ್ದನ್ನು 'ಉಂಡು' ಎಂದೇ ಅನ್ನಬೇಕು. ಅನುನಾಸಿಕದ ಮುಂದಿರುವ ಕರ್ಕಶ ವ್ಯಂಜನವನ್ನು ಮೃದುವಾಗಿಯೇ ಉಚ್ಚರಿಸ ಬೇಕು.

* ಪಾಣಿನೀಯ 'ಶಿಕ್ಷಾ' ದಲ್ಲಿ ಮಾತ್ರ ಸ್ವರ ಎಂಬ ಸಂಜ್ಞೆಯು ಸ್ವರ ವ್ಯಂಜನಗಳೆಂಬ ಭೇದದಲ್ಲಿ ಕಾಣುವ ಅರ್ಥದಲ್ಲಿಯೇ ಒಮ್ಮೆ ಉಪಯೋಗಿಸಲ್ಪಟ್ಟಿವೆ, "ಸ್ವರಾ ವಿಂಶತಿರೇಕಶ್ಚ ಸ್ಪರ್ಶಾನಾಂ ಪಂಚವಿಂಶತಿ:
—" ಪಾಣಿನೀಯ ಶಿಕ್ಷಾ ೪ ನೇ ಶ್ಲೋಕ

[illegible]

[illegible]

— [illegible]

[illegible]

[illegible]

[illegible]

[illegible]

[illegible]

[illegible]	[illegible]
೧ [illegible]	೧ [illegible]
೨ [illegible]	೨ [illegible]
೩ [illegible]	೩ [illegible]
೪ [illegible]	೪ [illegible]
೫ [illegible]	೫ [illegible]
೬ [illegible]	೬ [illegible]
೭ [illegible]	೭ [illegible]

[illegible]

* [illegible]

'ಕೋಳಪವು' ಮುಂತಾದ ಪದಗಳಲ್ಲಿನ ಪ್ರತ್ಯಯವೆಂದೂ 'ವ' ಕಾರವು ನಡುವೆ ಬಂದ ಆಗಮವೆಂದು ತಿಳಿಯ ಲಾಯಿತು. ಈ ವಿವರಣೆಯು ತರ್ಕದೃಷ್ಟಿಗೆ ಸಮಂಜಸ ವಾಗಿದೆ ಎಂದು ಹೇಳಬಹುದು. ಹೊಸಗನ್ನಡದಲ್ಲಿ ಈಗ ನಾಲ್ಕೇ ವಿಭಕ್ತಿಗಳು ಬೇರೆ ಬೇರೆ ಕಾರಕಾರ್ಥ ಗಳನ್ನು ಹೇಳಲಿಕ್ಕೆ ಉಪಯೋಗಿಸಲ್ಪಡುವವು; ಯಾವವೆಂದರೆ ದ್ವಿತೀಯಾ, ತೃತೀಯಾ, ಚತುರ್ಥೀ, ಸಪ್ತಮೀ. ಪಂಚಮಿಯ ಅರ್ಥವು ತೃತೀಯೆಯಿಂದಲೇ ವ್ಯಕ್ತವಾಗುವದು. "ಅನೇಕ ಭಾಷೆಗಳಲ್ಲಿ ಸಂಬೋಧನೆಯ ರೂಪವು ಪ್ರಥಮಾ ವಿಭಕ್ತಿಯ ರೂಪವೇ ಆಗಿರುವದರಿಂದ ಸಂಬೋಧನೆಯು ಬೇರೆಯಾದ ವಿಭಕ್ತಿ ಯಲ್ಲವೆಂದು ಹಲವು ವೈಯಾಕರಣರ ಮತ (ಜೆಸ್ಪರ್ಸನ್: ಫಿಲಾಸಫಿ ಆಫ್ ಗ್ರಾಮರ್, ಪುಟ ೧೮೪)" *

ಪಂಚಮಿಯ ಅರ್ಥದಲ್ಲಿ ತೃತೀಯೆಯು ಬಳಸಲ್ಪಡು ತ್ತಿರುವದನ್ನು ನಾಗವರ್ಮನೂ ಲಕ್ಷಿಸಿದ್ದಾನೆ:

ಪಿತ್ತಿರಿಸುವರ್ ತೃತೀಯಾ
[illegible] ಪಂಚಮಿ [illegible]

— ಸೂತ್ರ ೨೬.

[illegible] ತೃತೀಯಾ [illegible] ಪ್ರತ್ಯಯಗಳು [illegible] ನಾಗವರ್ಮನು ಹೇಳಿದ್ದಾನೆ. [illegible] ಅವಱಿಂ, ಅವಱಿಂ [illegible] [illegible], ಅವಱಿನ್ [illegible] ಸೂತ್ರಗಳಲ್ಲಿ [illegible]

[illegible]
[illegible]
[illegible]
[illegible]

[illegible] ಸೂತ್ರ

* [illegible]
[illegible]

ಕ್ರಮದಿಂ ಕಿಸಯುಗಳೆಮುವಱೊಳನುಬಂಧಂಗಳ್
॥ ೧೭ ನೆಯ. ಸೂ. ॥

ಮದಲಿರಲಿಂಬಿಮಱಿಂ
ಕಂಡಳಿರೇಕಕ್ಕೆ ಬಹುತ್ವಮುಂ ದೊರೆಕೊಳ್ಗುಂ।
॥ ೨೮ ನೆಯ. ಸೂತ್ರ.।

ಹೊಸಗನ್ನಡದಲ್ಲಿ ಮಾತ್ರ ನಪುಂಸಕ ಲಿಂಗದಲ್ಲಿ 'ಅವಱೊ' 'ಇವಱೊಳ್.' 'ಅವಱಿಂ' ಬರುವಂಥ ಪದ ರೂಪಗಳು ಬಿಟ್ಟುಹೋಗಿವೆ. ಈಗ ಅವಕ್ಕೆ ನಾವು 'ಅವುಗಳಲ್ಲಿ.' 'ಇವುಗಳಲ್ಲಿ'. 'ಇವುಗಳ' ಎಂಬ ಪದಗಳನ್ನೇ ಬಳಸುತ್ತೇವೆ.

[illegible] ನಾಗವರ್ಮನ ಸೂತ್ರಗಳ ಆಧಾರದಿಂದಲೇ ತನ್ನ [illegible] ವ್ಯಾಕರಣವನ್ನು ರಚಿಸಿದ್ದಾನೆ. [illegible] ನಾಗವರ್ಮನ ಸೂತ್ರಗಳನ್ನೇ [illegible], [illegible].

ನಾಗವರ್ಮ [illegible]
[illegible]
[illegible]
[illegible]
[illegible]
— ಸೂತ್ರ ೧೯.

ಕೇಶಿರಾಜ. [illegible]
[illegible]
[illegible]

[illegible]
[illegible]
[illegible] ॥
ಸೂತ್ರ [illegible]

ಸಂಸ್ಕೃತ ವ್ಯಾಕರಣದ [illegible] '[illegible]' [illegible] [illegible]

ಪೈಗಂಬರವಾಸಿಗಳಾದ

ಶ್ರೀ. ರಫಿಅಹಮ್ಮದ ಕಿಡ್ವಾಯಿಯವರು

ಲೇಖಕರು:— ಶ್ರೀ. ಶಿಂತ್ರಿ ಬಸಪ್ಪನವರು. ಬಿ. ಎ. ಬಿ. ಟಿ. ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ದಕ್ಷಿಣ ಭಾಗ, ಧಾರವಾಡ

ಪೀಠಿಕೆ

ನಿಯಂತ್ರಣ-ಸೀದಾಗಳ ಕಹಿ ಫಲಗಳನ್ನುಂಡ ನಾವೆಲ್ಲರು ಶ್ರೀ. ಕಿಡ್ವಾಯಿಯವರನ್ನು ಮರೆಯುವದು ಶಕ್ಯವಿಲ್ಲದಾಗಿದೆ. ನಮ್ಮ ರಾಷ್ಟ್ರದ ಆಹಾರ ಸಮಸ್ಯೆಯನ್ನು ಬಿಡಿಸಲು ಅತಿರಥಿ-ಮಹಾರಥಿಗಳು ಅಂಜಿ ದೂರ ಸಿಡಿದು ನಿಂತಾಗ, ಶ್ರೀ. ರಫಿ ಸಾಹೇಬರು ಧೈರ್ಯದಿಂದ ಮುಂದೆ ಬಂದು ಅದನ್ನು ತೃಪ್ತಿಕರವಾಗಿ ಬಗೆಹರಿಸಿ ನಿಯಂತ್ರಣ-ಸೀದಾಗಳನ್ನು ಕಿತ್ತೊಗೆದು ರಾಷ್ಟ್ರಕ್ಕೆ ಮಹದುಪಕಾರವನ್ನು ಮಾಡಿದರು. ಅವರ ಹೊರತು ಬೇರೆಯವರಿಂದ ಅದು ಸಾಧ್ಯವಿತ್ತೆಂದು ಹೇಳುವದು ಕಷ್ಟ. ದಕ್ಷ ಆಡಳಿತಗಾರನಲ್ಲಿರತಕ್ಕ ಎಲ್ಲ ಗುಣಗಳೂ ಅವರಲ್ಲಿ ತುಂಬಿ ತುಳುಕುತ್ತಿದ್ದವು. ಅಂಚೆ ತಂತಿ ಖಾತೆಗೆ ರವಿವಾರ ದಿನ ಬಿಡುವನ್ನು ಕೊಡುವದು ಶಕ್ಯವಿಲ್ಲೆಂದು ಅವರಿಗಿಂತ ಪೂರ್ವದ ಮಂತ್ರಿಗಳೆಲ್ಲ ಅಭಿಪ್ರಾಯ ಪಟ್ಟಿದ್ದರಷ್ಟೆ. ಅವರು ಆ ಖಾತೆಯ ಮಂತ್ರಿಗಳಾದ ಕೂಡಲೆ ಆ ಪಶ್ನೆಯನ್ನು ಕೈಯಲ್ಲಿ ತೆಗೆದುಕೊಂಡು ರವಿವಾರ ದಿನ ಪೂರ್ತಿಯಾಗಿ ಸೂಟಿ ಕೊಡಲು ಬರುತ್ತದೆಂದು ಸಿದ್ಧ ಮಾಡಿ ತೋರಿಸಿ ಅಂದಿನಿಂದ ಆ ಖಾತೆಯ ನವಕರರಿಗೆ ರವಿವಾರ ದಿನ ಪೂರಾ ಬಿಡುವಿನ ದಿನವೆಂದು ಸಾರಿದರು. ಆ ಖಾತೆಯ ನವಕರರು ಶ್ರೀಯುತರನ್ನು ಮರೆಯುವದೆಂತು? ಅಂತಹವರ ಜೀವನ ಚರಿತ್ರದ ಅಲ್ಪ ಪರಿಚಯವನ್ನು ಮಾಡಿಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ.

ಬಾಲ್ಯ ಹಾಗೂ ಶಿಕ್ಷಣ

ಉತ್ತರ ಪ್ರದೇಶದಲ್ಲಿಯ ಬಾರಾಬಂಕಿ ಜಿಲ್ಲೆಯಲ್ಲಿಯ ಮಸೌಲಿ ಎಂಬಲ್ಲಿ ಜಮೀನುದಾರರದೊಂದು ಮನೆತನವಿದೆ. ಆ ಮನೆತನದಲ್ಲಿ ಅವರು ೧೮೯೪ನೇ ಇಸವಿ ಫೇಬ್ರುವರಿ ತಿಂಗಳಲ್ಲಿ ಜನ್ಮ ತಾಳಿದರು. ಅಲೀಗಡದಲ್ಲಿಯ ಎಮ್. ಎ. ಓ. ಕಾಲೇಜದಿಂದ ಬಿ. ಎ. ಪರೀಕ್ಷೆಯನ್ನು ಪಾಸಾಗಿ ಎಲ್.ಎಲ್.ಬಿ. ಪರೀಕ್ಷೆಯ ಸಲುವಾಗಿ ಅಭ್ಯಾಸ ಮಾಡುತ್ತಿದ್ದಾಗಲೇ ಕಾಲೇಜವನ್ನು ಬಿಟ್ಟು ರಾಜಕೀಯ ರಂಗಕ್ಕಿಳಿದು ೧೯೨೦ನೆಯ ಇಸ್ವಿಯ ಅಸಹಕಾರ ಚಳುವಳಿಯಲ್ಲಿ ಧುಮುಕಿ ಸೆರೆಮನೆಯನ್ನು ಕಂಡರು. ಅಲ್ಲಿಗೆ ಅವರ ವಿದ್ಯಾಭ್ಯಾಸವು ಮುಗಿದಂತಾಯಿತು. ಚಿಕ್ಕಂದಿನಲ್ಲಿ ಅವರ ಶಿಕ್ಷಣವು ಪ್ರಧಾನಾಮಾತ್ಯರಾದ ಪಂಡಿತ ಜವಾಹರಲಾಲರೊಡನೆ ಆಗಿದೆ. ಪಂಡಿತ ಜವಾಹರಲಾಲರ ತಂದೆ ಪಂಡಿತ ಮೋತಿಲಾಲ ನೆಹರೂರವರು ಶ್ರೀ. ಕಿಡ್ವಾಯಿಯವರನ್ನು ತಮ್ಮ ಮಗನಂತೆ ಆಗ ನೋಡುತ್ತಿದ್ದರಂತೆ. ಚಿಕ್ಕಂದಿನಲ್ಲಿಯೇ ಅವರಲ್ಲಿ ಹುದುಗಿದ್ದ ಪ್ರತಿಭೆಯನ್ನು ಪಂಡಿತ ಮೋತಿಲಾಲರು ಕಂಡು ಹಿಡಿದಿದ್ದರು. ಮೊದಲನೆಯ ಸಲ ಜೇಲನ್ನು ಕಂಡು ಬಂದ ನಂತರ ಅವರನ್ನು ಪಂಡಿತ ಮೋತಿಲಾಲರವರು ತಮ್ಮ ಆಪ್ತ ಕಾರ್ಯದರ್ಶಿಯನ್ನಾಗಿ ಮಾಡಿಕೊಂಡರು. ಅಂದಿನಿಂದ ಅವರು ಪಂಡಿತ ಮೋತಿಲಾಲರವರ ವಿಶ್ವಾಸಿಕರಲ್ಲೊಬ್ಬರಾಗಿದ್ದರು.

ಸ್ವಾತಂತ್ರ್ಯ ಸಂಗ್ರಾಮ

೧೯೨೬ರಲ್ಲಿ ಕೇಂದ್ರ ಶಾಸನ ಸಭೆಯ ಸದಸ್ಯರಾಗಿ ಚುನಾಯಿಸಲ್ಪಟ್ಟು ಕಾಂಗ್ರೆಸ ಗುಂಪಿನ ಮುಖ್ಯ ನಿಯಂ

ತ್ರಕ (Chief Whip) ರಾಗಿದ್ದರು. ೧೯೩೦ರಲ್ಲಿ ಕಾಂಗ್ರೆಸ್ಸಿನ ಕರೆಗೆ ಓಗೊಟ್ಟು ಕೇಂದ್ರ ಶಾಸನ ಸಭೆಯಲ್ಲಿಯ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ಸವಿನಯ ಕಾಯಿದೆ ಭಂಗ ಚಳವಳಿ (Civil Disobedience Movement) ಯಲ್ಲಿ ಧುಮುಕಿದರು. ರಾಯಿ ಬರೇಲಿಯಲ್ಲಿ ರೈತರನ್ನು ಸಂಘಟಿಸಿ ಕರ ನಿರಾಕರಣೆಯ ಚಳವಳಿ (No-tax Campaign) ಯನ್ನು ಹೂಡಿದ್ದರಿಂದ ಆರು ತಿಂಗಳ ಕಾರಾಗೃಹವಾಸವನ್ನನುಭೋಗಿಸಿದರು. ೧೯೩೫ರಲ್ಲಿ ಸಂಯುಕ್ತ ಪ್ರಾಂತ (ಈಗ ಉತ್ತರ ಪ್ರದೇಶ)ದ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾಗಿ ಕಾಂಗ್ರೆಸಿನ ಸಂಘಟನೆಯನ್ನು ಎಲ್ಲರೂ ತಲೆದೂಗುವಂತೆ ಮಾಡಿ ಸ್ವಾತಂತ್ರ್ಯ ಸಂಗ್ರಾಮದ ಹೋರಾಟವನ್ನು ದಕ್ಷ ರೀತಿಯಿಂದ ಸಾಧಿಸಿದರು. ಅವರು ಆ ಪ್ರಾಂತದ ಪ್ರಥಮ ಕಾಂಗ್ರೆಸ ಮಂತ್ರಿ ಮಂಡಳದಲ್ಲಿ ಕಂದಾಯ ಮಂತ್ರಿಗಳಾಗಿಯೂ ಹಲವು ಸಲ ಮುಖ್ಯಮಂತ್ರಿಗಳಾಗಿಯೂ ಉತ್ತಮ ರೀತಿಯಿಂದ ಕೆಲಸ ಮಾಡಿ ತಮ್ಮಲ್ಲಿದ್ದ ಯೋಗ್ಯತೆಯನ್ನು ಹೊರಹೊಮ್ಮಿಸಿದರು. ೧೯೪೬ರಲ್ಲಿ ಗೃಹಮಂತ್ರಿಗಳಾಗಿ ಕೆಲಸ ಮಾಡಿ ದಕ್ಷ ಮಂತ್ರಿಗಳೆಂದು ಎಲ್ಲರಿಂದಲೂ ಹೊಗಳಲ್ಪಟ್ಟರು.

ಸ್ವತಂತ್ರ ಭಾರತದಲ್ಲಿಯ ಸೇವೆ

೧೯೪೭ರಲ್ಲಿ ಪ್ರಧಾನಮಂತ್ರಿಗಳಾದ ಪಂಡಿತ ಜವಾಹರಲಾಲರು ಶ್ರೀಯುತರ ಯೋಗ್ಯತೆಯನ್ನು ಮನದಂದು ಅವರನ್ನು ಸಂಪರ್ಕ ಶಾಖೆಯ ಮಂತ್ರಿಗಳನ್ನಾಗಿ ಮಾಡಿಕೊಂಡು ಕಾಂಗ್ರೆಸ ಕಾರ್ಯಕಾರಿ ಸಮಿತಿ (Congress Working Committee) ಯ ಸದಸ್ಯರನ್ನಾಗಿ ಮಾಡಿದರು. ಸಂಪರ್ಕ ಶಾಖೆಯ ಮಂತ್ರಿಗಳಾಗಿದ್ದಾಗ "ಫೋನುಗಳನ್ನು ಪಡೆಯಿರಿ" "ರಾತ್ರಿ ವಿಮಾನ ಟಪಾಲಿನ ಉಪಯೋಗವನ್ನು ಮಾಡಿಕೊಳ್ಳಿರಿ" ಎಂಬ ಕೂಗನ್ನು ಎಬ್ಬಿಸಿ ಅವುಗಳ ಅನುಕೂಲತೆಗಳನ್ನು ಜನತೆಗೆ ಮಾಡಿಕೊಟ್ಟರು. ಸಂಪರ್ಕ ಹಾಗೂ ಆಹಾರ ಶಾಖೆಗಳ ಮಂತ್ರಿಗಳಾಗಿದ್ದಾಗ ಅವರು ರಾಷ್ಟ್ರಕ್ಕೆ ಅರ್ಪಿಸಿದ ಇನ್ನುಳಿದ ಸೇವೆಗಳನ್ನು ಮೇಲೆ ಪೀಠಿಕೆಯಲ್ಲಿ ವಿವರಿಸಿದೆ. ಅವರು ಯಾರಿಗೂ ಗೊತ್ತಾಗದಂತೆ ಗುಪ್ತ ವೇಷದಿಂದ ಸಂಚರಿಸಿ ಆಡಳಿತದ ನಿಜ ಸ್ವರೂಪವನ್ನು ಸ್ವತಃ ತಿಳಿದುಕೊಳ್ಳುತ್ತಿದ್ದರು. ಸಂಪರ್ಕ ಶಾಖೆಯ ಮಂತ್ರಿಗಳಾಗಿದ್ದಾಗ ಸಾಮಾನ್ಯ ಜನರಂತೆ ಪೋಷಾಕು ಮಾಡಿಕೊಂಡು ಪೋಸ್ಟ ಆಫೀಸಿಗೆ ಹೋಗಿ ಸಾಲಿ (Queue)ನಲ್ಲಿ ಯಾರಿಗೂ ಗೊತ್ತಾಗದಂತೆ ತಮ್ಮ ಸರತಿಯನ್ನು ಹಚ್ಚಿಕೊಂಡು ಹಲವು ಸಲ ನಿಂತಿದ್ದರಂತೆ. ಆಹಾರ ಮಂತ್ರಿಗಳಾಗಿದ್ದಾಗ ವೇಷ ಬದಲಾಯಿಸಿಕೊಂಡು ಗೋದಿ ವ್ಯಾಪಾರಸ್ಥರ ಅಂಗಡಿಗಳಿಗೆ ಹೋಗಿ ಗೋದಿಯ ವ್ಯಾಪಾರದ ಮಾತುಕಥೆಗಳನ್ನಾಡಿ ಧಾರಣೆಯನ್ನು ಸ್ವತಃ ಕೇಳಿಕೊಂಡು ಬಂದ ಉದಾಹರಣೆಗಳುಂಟು.

ಯೋಗ್ಯತೆ

ಅಸಾಧ್ಯವಾದುದನ್ನು ಸಾಧ್ಯ ಮಾಡಿ ತೋರಿಸುವ ಕೈಚಳಕವು ಅವರಲ್ಲಿತ್ತು. ತಮ್ಮ ಮನಸ್ಸಿನಲ್ಲಿಟ್ಟುಕೊಂಡಿದ್ದ ಗೊತ್ತು-ಗುರಿಗಳನ್ನು ಅವರು ಯಾರಿಗೂ ತಿಳಿಯಗೊಡುತ್ತಿದ್ದಿಲ್ಲ. ಅವುಗಳನ್ನು ಸಾಧಿಸಿದ ನಂತರವೇ ಎಲ್ಲರಿಗೂ ಗೊತ್ತುಪಡಿಸಿ ಜನತೆಯನ್ನು ಬೆರಗುಗೊಳಿಸುತ್ತಿದ್ದರು. ಇದುವೇ ನಿಜವಾದ ಮುತ್ಸದ್ದಿತನದ ಗುಟ್ಟು. ಅವರು ಉಜ್ವಲ ಮುತ್ಸದ್ದಿಗಳಾಗಿದ್ದುದಲ್ಲದೆ ಸಮರ್ಥ ಆಡಳಿತಗಾರರೂ ಆಗಿದ್ದರು. ನಿಯಂತ್ರಣ ನೀತಿಗಳನ್ನು ಸಡಿಲಿಸುವಾಗ ಆಡಳಿತ ಯಂತ್ರದಲ್ಲಿಯ ದೊಡ್ಡ ದೊಡ್ಡ ಹುದ್ದೇದಾರರು ವಿರುದ್ಧ ಅಭಿಪ್ರಾಯವನ್ನು ಕೊಟ್ಟಿದ್ದರೂ ಸಹ ಅದನ್ನು ಲೆಕ್ಕಿಸದೆ ಅವುಗಳನ್ನು ಬೇರು ಸಹಿತ ಕಿತ್ತೊಗೆದು ಆಹಾರ ಸಮಸ್ಯೆಯನ್ನು ಎಲ್ಲ ರೀತಿಯಿಂದ ತೃಪ್ತಿಕರವಾಗಿ ಬಗೆಹರಿಸಿದರು. ಅವುದೊಂದು ಪ್ರಶ್ನೆಯ ಬಗೆಗೆ ಬೇಗನೆ ನಿರ್ಧಾರಕ್ಕೆ ಬಂದು ಅದನ್ನು ಕೈಗೂಡಿಸಿಯೇ ತೋರಿಸುವದೊಂದು ಅವರ ವೈಶಿಷ್ಟ್ಯವಾಗಿತ್ತು. ಇಕ್ಕಟ್ಟು-ಬಿಕ್ಕಟ್ಟುಗಳೂ ಎಡರು-ತೊಡರುಗಳೂ ಎಷ್ಟೇ ಬಂದು ಅಡರಿದರೂ ಸಹ, ಹಿಡಿದ ಕೆಲಸವನ್ನು ಮುಗಿಸಿ ಬಿಡುವ ಜಿಗಟುತನವು ಅವರಲ್ಲಿ ಹೇಳತೀರದಷ್ಟಿತ್ತು. ಹೇಳಿಕೊಳ್ಳುವಂತಹ ವಾಗ್ಮಿಗಳಾಗಿರದಿದ್ದರೂ ಕ್ರಿಯಾತ್ಮಕ ಶಕ್ತಿಯುಳ್ಳ ವ್ಯವಹಾರ ಚತುರರಾಗಿದ್ದರು. ಮಾತು ಸ್ವಲ್ಪ, ಮಾಡುವುದು ಬಹಳ; ಅದು ಅವರ ಹುಟ್ಟುಸ್ವಭಾವವಾಗಿತ್ತು.

ಶ್ರೀ. ರಫಿ ಅಹಮ್ಮದ ಕಿಡ್ವಾಯಿಯವರು.

ಕೊನೆಯ ಮಾತು

ನಮ್ಮ ರಾಷ್ಟ್ರದ ಎದುರಿಗಿರುವ ಇನ್ನೂ ಹಲವು ಸಮಸ್ಯೆಗಳನ್ನು ಪರಿಹರಿಸಲು ಅವರ ಅಗತ್ಯತೆಯು ಇದ್ದ ಸಮಯದಲ್ಲಿಯೇ ಅವರು ನಮ್ಮನ್ನೆಲ್ಲ ಅಗಲಿ ಹೋದುದು ನಿಜಕ್ಕೂ ದುರದೃಷ್ಟದ ಸಂಗತಿ! ಅವರು ೨೪-೧೦-೧೯೫೪ನೆಯ ದಿನ ದಿಲ್ಲಿ ನಗರಸಭೆಯ ಮುಂಬರುವ ಚುನಾವಣೆಯ ಬಗೆಗೆ ದಿಲ್ಲಿ ನಗರದ ಗಾಂಧಿ ಮೈದಾನದಲ್ಲಿ ಕರೆಸಿದ ಸಭೆಯಲ್ಲಿ ಭಾಷಣ ಮಾಡುತ್ತಿರುವಾಗ ಅವರು ಒಮ್ಮಿಂದೊಮ್ಮೆಲೇ ಕುಸಿದು ಬಿದ್ದರಂತೆ. ಅಲ್ಲಿಂದ ಅವರನ್ನು ಅವರ ವಾಹನವಾದ ಕಾರ ಗಾಡಿಯಲ್ಲಿ ಅವರ ನಿವಾಸಕ್ಕೆ ಒಯ್ಯಲಾಯಿತು. ಮುಂದೆ ರಾತ್ರಿ ೮-೧೫ ಗಂಟೆಗೆ ಹೃದಯವಿಕಾರದಿಂದ ವಿಧಿವಶರಾದರು. ಅವರ ಕಳೇಬರವನ್ನು ಮರುದಿನ ಅವರ ಹುಟ್ಟೂರಾದ ಮಸೌಲಿಗೆ ಒಯ್ದು ಅಲ್ಲಿ ಅಂತ್ಯಕ್ರಿಯೆಯನ್ನು ಜರುಗಿಸಿದರು. ರಾಷ್ಟ್ರಾಭಿಮಾನ, ಮುತ್ಸದ್ದಿತನ, ವ್ಯವಹಾರ ಚಾತುರ್ಯ, ಸಂಘಟನಾ ಶಕ್ತಿ, ದಕ್ಷ ಆಡಳಿತೆ, ಚುರುಕು ಬುದ್ಧಿ, ಇವು ಅವರಲ್ಲಿ ಒಡೆದೆದ್ದು ಕಂಡು ಬಂದ ಗುಣಗಳು. ದೇವರು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ!

ಪುಟ ೨೮೦) **ಮೂಲ ಶಿಕ್ಷಣ** (ಬೆಲೆ: ೩-೦-೦

ಲೇಖಕರು : ಶ್ರೀ. ಮ. ಗು. ಹಂದ್ರಾಳ, ಬಿ. ಎ., (ಆನರ್ಸ) ಬಿ. ಟಿ.

(ಪ್ರಿನ್ಸಿಪಾಲ, ಪದವೀಧರರ ಜೀವನ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ)

ಮೂಲ ಶಿಕ್ಷಣದ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಗೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೆ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ.

ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿಪೋ, ಧಾರವಾಡ

ಮೂಲಶಿಕ್ಷಣದಲ್ಲಿ ರಾಷ್ಟ್ರೀಯ ಮಹಾಪುರುಷರ ಜಯಂತಿ ಹಾಗು ಪುಣ್ಯತಿಥಿಗಳ ಆಚರಣೆ

ಶ್ರೀಮತಿ ಭಾಗೀರಥಿಬಾಯಿ ಕದಮ ಹೆಂ. ಟ್ರೆ. ಕಾ. (೨ನೆಯ ವರ್ಷ) ಧಾರವಾಡ.

ಜಗತ್ತಿನ ಪರಿಸ್ಥಿತಿಯು ಕಾಲಕಾಲಕ್ಕೆ ಬದಲಾಗುತ್ತ ನಡೆದಂತೆ ಹೊಸ ವಿಚಾರಗಳು ಆಗಾಗ ತಲೆ ಎತ್ತುತ್ತವೆ. ರಾಜಕೀಯ, ಆರ್ಥಿಕ, ಸಾಮಾಜಿಕ ವಿಷಯಗಳಲ್ಲಿ ಹೊಸ ಸಿದ್ಧಾಂತಗಳು ಬೆಳಕಿಗೆ ಬಂದಿವೆ. ಶೈಕ್ಷಣಿಕ ಕ್ಷೇತ್ರದಲ್ಲಿಯೂ ಹೊಸ ವಿಚಾರಗಳು ಪ್ರಕಟವಾಗಿವೆ. ಶಿಕ್ಷಣದ ಧ್ಯೇಯ, ಸಾಧನ, ಕ್ರಮ ಇತ್ಯಾದಿವಿಷಯಗಳ ಬಗೆಗೆ ಸಕಾಲ ಪರಿಶೀಲನೆಯಾಗಿ ಅವು ಹೊಸರೂಪನ್ನು ತಾಳಿ ಹೊಸ ಹೆಸರನ್ನು ಪಡೆದಿವೆ. ಹೀಗೆ ಹುಡುಕಿತೆಗೆದ ಹೊಸಪದ್ಧತಿಯಲ್ಲಿ ವರ್ಧಾ ಶಿಕ್ಷಣದ ಯೋಜನೆಯು ಪ್ರಯೋಗಾವಸ್ಥೆಯನ್ನು ದಾಟಿದೆ. ಅದು ಈಗ ಜನ ಸಾಮಾನ್ಯರಿಗೆ ಸಿಗುವ ಸುಸಂಧಿ ಒದಗಿದೆ.

ಇಂಗ್ಲಿಷರ ಆಳಿಕೆಯಲ್ಲಿ ವಿದ್ಯಾಭ್ಯಾಸವು ಕೇವಲ ಪಟ್ಟಣಿಗರಿಗೆ ಮಾತ್ರ ಸಿಗುತ್ತಿತ್ತು. ಇದರಿಂದ ಹಿಂದುಸ್ತಾನದ ಒಟ್ಟು ಜನಸಂಖ್ಯೆಯ ೧೦೦ಕ್ಕೆ ೧೧ರಷ್ಟು ಜನರಿಗೆ ಮಾತ್ರ ಇದರ ಲಾಭವು ಸಿಕ್ಕಿತು. ಮಾಧ್ಯಮಿಕ ಶಾಲೆಗಳೂ ಕಾಲೇಜಗಳೂ ಪಟ್ಟಣಗಳಲ್ಲಿಯೇ ತೆಗೆಯಲ್ಪಟ್ಟವು. ಇದರಿಂದ ಹಳ್ಳಿಯ ಜನರು ನಿರಕ್ಷರಿಗಳಾಗಿ ಉಳಿದರು. ಹಿಂದುಸ್ತಾನದ ತೀರ ಕಡಿಮೆ ಜನರು ವಿದ್ಯಾವಂತರಾದರು. ಇದನ್ನೆಲ್ಲವನ್ನು ಕಂಡು ಹಿಂದುಸ್ತಾನದ ಮುಖಂಡರ ಮನಸ್ಸು ಕಲಕಿತು. ಅವರು ಹಿಂದುಸ್ತಾನಕ್ಕೆ ಯೋಗ್ಯವಾದ ಹೊಸ ಅಭ್ಯಾಸಕ್ರಮವನ್ನು ಹುಡುಕಿತೆಗೆದರು. ಇದೇ ಮೂಲಶಿಕ್ಷಣವು. ನಮ್ಮದೇಶದ ವಾತಾವರಣವನ್ನನುಸರಿಸಲೆಂದು ಹುಟ್ಟಿದ ಮೂಲ ಶಿಕ್ಷಣವು ಹಳ್ಳಿಗಳನ್ನೇ ತನ್ನ ಕೇಂದ್ರವನ್ನಾಗಿಟ್ಟುಕೊಂಡಿದೆ.

ಇಂದಿನ ಯುಗವು ಮಕ್ಕಳ ಯುಗವು. ಮಕ್ಕಳ ಪೂರ್ಣ ಸಮುದಾಯ ವಿಕಾಸವೇ ಜೀವನದ ಗುರಿ. ಮಕ್ಕಳು ಶಾಲೆಯ ವಿಷಯದ ಅಭ್ಯಾಸದಿಂದಲೇ ಎಲ್ಲವನ್ನು ತಿಳಿದುಕೊಳ್ಳುವರೆಂಬುದು ತಪ್ಪು. ವಿಷಯ ಜ್ಞಾನವು ಜೀವನದ ಉನ್ನತಿಗೆ ಸಾಧನವಾಗಿರಬೇಕು. ವಿಷಯವನ್ನು ಕಲಿಯುವದರ ಜೊತೆಗೆ ಜೀವನದ ಕಲೆಯನ್ನು ವಿದ್ಯಾರ್ಥಿಗಳು ಶಾಲೆಯಲ್ಲಿ ಕಲಿಯಬೇಕು. ಮೂಲಶಿಕ್ಷಣ ಶಾಲೆಯು ಚಟುವಟಿಕೆಗಳ ಶಾಲೆಯಾಗಿದೆ. ಮಕ್ಕಳಿಗೆ ಚಟುವಟಿಕೆಯ ಮುಖಾಂತರ ಶಿಕ್ಷಣಕೊಡುವದರಿಂದ ಅವರ ಜ್ಞಾನವು ದೃಢವಾಗುದು. ಅಲ್ಲದೆ ಇದನ್ನೆ ಶ್ರೀ॥. ಸ್ವಾಮಿ ವಿವೇಕಾನಂದರು ಹೀಗೆ ಹೇಳಿದ್ದಾರೆ. :—

" ಜೀವನಮಾನದಲ್ಲಿ ಜೀರ್ಣವಾಗದೆ ಕಸರಾಗಿ ಮೆದುಳಿನಲ್ಲಿ ಮಲೆತ ವಿಷಯ ಸಂಗ್ರಹವು ಶಿಕ್ಷಣವಲ್ಲ. ಸರ್ವಾಂಗ ಜ್ಞಾನವನ್ನೀಯುವ ಶಿಕ್ಷಣವು ನಮಗೆ ಬೇಕು" ಎಂದು ಅತ್ಯಂತ ಮಾರ್ಮಿಕವಾಗಿ ಹೇಳಿದ್ದಾರೆ. ಕಾರಣ ಇಂದಿನ ಮೂಲ ಶಿಕ್ಷಣವು ಇದನ್ನು ಪರ್ಯಾಲೋಚಿಸಿ, ಚಟುವಟಿಕೆಗಳನ್ನೇ ಮೂಲಾಧಾರವಾಗಿ ಇಟ್ಟುಕೊಂಡಿದೆ.

ಹೀಗೆ ಇಟ್ಟುಕೊಂಡ ಚಟುವಟಿಕೆಗಳಲ್ಲಿ ರಾಷ್ಟ್ರೀಯ ಮಹಾಪುರುಷರ ಜಯಂತಿ ಹಾಗೂ ಪುಣ್ಯತಿಥಿಗಳ ಆಚರಣೆಗಳು ಅತ್ಯಂತ ಮಹತ್ವವಾದವುಗಳು. ಇದೀಗ ನಮ್ಮ ದೇಶವು ಸ್ವತಂತ್ರವಾಗಿದೆ. ಈ ಸ್ವಾತಂತ್ರ್ಯಸಮರದಲ್ಲಿ ಹೋರಾಡಿ ತಮ್ಮ ತನು ಮನ

ಧನಗಳನ್ನುತ್ಯಾಗಮಾಡಿದವರ ಪುಣ್ಯಸ್ಮರಣೆಗೆಂದು ಇವುಗಳನ್ನು ನಾವು ಶಾಲೆಗಳಲ್ಲಿ ಆಚರಿಸಬೇಕು. ಹೀಗೆ ನಮಗೆ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟ ಹಾಗು ರಾಷ್ಟ್ರೋನ್ನತಿಗೆ ಹೋರಾಡಿದ ಮಹಾಪುರುಷರ ಉಪಕಾರವು ಅಪಾರವಾದದ್ದು. ಅವರಿಗೆ ನಾವು ಸಲ್ಲಿಸಬೇಕಾದ ಕೃತಜ್ಞತೆಯು ಮಿತಿಯಿಲ್ಲದ್ದು ಮಹಾಪುರುಷರ ಜಯಂತಿಯನ್ನು ಶಾಲೆಗಳಲ್ಲಿ ಆಚರಿಸುವಾಗ ಮಹಾಪುರುಷರ ಜೀವನ ಚರಿತ್ರೆ, ಅವರ ರಾಜಕೀಯ, ಹ ಗೂ ಸಾಮಾಜಿಕ ಕಾರ್ಯ ಮುಂತಾದವುಗಳನ್ನು ಮಕ್ಕಳಿಗೆ ತಿಳಿಸಿ ಹೇಳಲು ಅನಕುಲವಾಗುತ್ತದೆ. ಮತ್ತು ಇಂಥ ಸುದಿನಗಳಲ್ಲಿ ಸಭೆ ಸಮಾರಂಭಗಳನ್ನು ಏರ್ಪಡಿಸಿ ಮಕ್ಕಳಿಗೆ ಮಾತಾಡಲು ಪ್ರೋತ್ಸಾಹಿಸಬಹುದು. ಹೀಗೆ ಸಭೆಯಲ್ಲಿ ಮಾತಾಡುವದರಿಂದ ಮಕ್ಕಳಲ್ಲಿ ಧೈರ್ಯ ಬರುವದು ಮತ್ತು ಮಕ್ಕಳಲ್ಲಿರುವ ಮನಬಿಚ್ಚಿಮಾತಾಡುವ ಕಲೆಯು ವಿಕಾಸಗೊಳ್ಳುವದು." ಮನಬಿಚ್ಚಿ ಮಾತಾಡುವದರಿಂದ ಮಾನವನ ಮನಸ್ಸುಪಡೆಯುವಷ್ಟು ಸುಖವನ್ನೂ ಸಂತೋಷವನ್ನೂ ಇನ್ನಾವ ಸಾಧನದಿಂದಲೂ ಪಡೆಯಲಾರನು" ಎಂದು ಮಾನಸಶಾಸ್ತ್ರಜ್ಞರು ಹೇಳುವರು. ಅಲ್ಲದೆ ಮಕ್ಕಳು ತಮಗೆ ಆದ ಅನುಭವಗಳನ್ನು ಎರಡನೇಯವರ ಮುಂದೆ ಇಡುವದರಿಂದ ಅವರ ಜ್ಞಾನವು (ಹೆಚ್ಚು) ದೃಢವಾಗುವದು. ಉದಾ:— ಮಹಾತ್ಮಾಜಿಯವರ ಜಯಂತಿಯನ್ನು ಆಚರಿಸುವಾಗ ಮಕ್ಕಳಿಗೆ ಮಾತಾಡಲು ಹಚ್ಚಬೇಕು. ಮಹಾತ್ಮಾಜಿಯವರ ಜೀವನಚರಿತ್ರೆ, ಅವರ ರಾಷ್ಟ್ರೀಯ ಭಾವನೆ ಸಮಾಜಸುಧಾರಣೆಗಾಗಿ ಕೈಕೊಂಡ ಕಾರ್ಯ ಅವರ ಗುಣ ಇತ್ಯಾದಿಗಳಬಗ್ಗೆ ಮಕ್ಕಳಿಗೆ ಅವರವರ ಯೋಗ್ಯತೆಗೆ ತಕ್ಕಂತೆ ಮಾತಾಡಲು ಪ್ರೋತ್ಸಾಹವನ್ನು ಕೊಡುವದು ಶಿಕ್ಷಕರ ಕರ್ತವ್ಯವಾಗಿದೆ. ಇಂಥ ಸುಸಂಧಿಯನ್ನು ಮಕ್ಕಳಿಗೆ ಒದಗಿಸಿ ಕೊಡುವದರಿಂದ ಅವರಲ್ಲಿ ಸತ್ಯ ಅಹಿಂಸೆ, ತ್ಯಾಗ, ಪ್ರೇಮ, ಸಹಿತ ಇತ್ಯಾದಿ ಗುಣಗಳು ಮಕ್ಕಳಲ್ಲಿ ಒಡಮೂಡುವವು ಮತ್ತು ಅವರ ವಿಷಯಕ್ಕೆ ಪೂಜ್ಯಭಾವನೆಯು ಉತ್ಪನ್ನವಾಗುವದು. ಮಕ್ಕಳಲ್ಲಿ ಅನುಕರಣ ಶಕ್ತಿ ಹೆಚ್ಚು ಇರುವದರಿಂದ ಹೇಳಿದ್ದನ್ನು ಮನದಲ್ಲಿಟ್ಟುಕೊಂಡು ನಾವೂ ಇವರಂತೆ ಕೀರ್ತಿಶಾಲಿಗಳಾಗಬೇಕೆಂಬ ವಿಚಾರವು ಸಹಜವಾಗಿ ಬರುವದು ಮತ್ತು ಇದೇ ವೇಳೆಗೆ ಸಭೆಗೆ ಬಂದು ಮುಖ್ಯ ಅತಿಥಿಯಾಗಿ ಆಗಮಿಸಿದವರ ವರ್ಚಸ್ಸು ಸಹ ಮಕ್ಕಳ ಮೇಲೆ ಬೀಳದೆ ಇರಲಾರದು. ಜಯಂತಿಗಳನ್ನಾಚರಿಸುವಾಗ ಮನರಂಜನೆಯ ಕಾರ್ಯಕ್ರಮಗಳನ್ನು ಸೇರಿಸುವದರಿಂದ ಮಕ್ಕಳಲ್ಲಿಗುವ ವಿವಿಧ ಕಲೆಗಳು ವಿಕಾಸಗೊಳುತ್ತವೆ. ಮತ್ತು ಅವರ ಸಹಜ ಪ್ರವೃತ್ತಿಗಳ ಪ್ರಚೋದನೆಗೆ ಯೋಗ್ಯಸಂಧಿ ದೊರಕುವದು. ಉತ್ಸವ ಪ್ರಸಂಗಗಳಲ್ಲಿ ಮಾತನ ಡಲು ಬೇಕಾಗುವ ಧೈರ್ಯವನ್ನು ಸಂಪಾದಿಸಲು ಮತ್ತು ತನ್ನಲ್ಲಿರುವ ಕಲಾಕೌಶಲ್ಯ ಯೋಗ್ಯತೆಗಳನ್ನು ಪ್ರಕಟಿಸಲು ಅನುಕೂಲವಾಗುತ್ತದೆ.

ದೇಶದ ಏಳ್ಗೆಗೆ ಅವಶ್ಯಕವಾದ :ಧರ್ಮ, ಸಮಾಜಸುಧಾರಣೆ, ಆರ್ಥಿಕ ಉನ್ನತಿ ಈ ಮೊದಲಾದವುಗಳಿಗಾಗಿ ಹೋರಾಡಿದ ಮಹಾಪುರುಷರ ಸ್ಮರಣೆಯನ್ನು ಬಾಲಕರಿಗೆ ತಂದುಕೊಡುವದು ಶಿಕ್ಷಕರ ಕರ್ತವ್ಯವಾಗಿದೆ. ಗಳಿಸಿದ ಸ್ವಾತಂತ್ರ್ಯವು ಇಂದಿನಮಕ್ಕಳಿಂದಲೇ ಉಳಿಯ ಬಲ್ಲದು. ಸ್ವಾತಂತ್ರ್ಯಗಳಿಸಿದ ವೀರರ ಪುಣ್ಯತಿಥಿಗಳ ಆಚರಣೆಯಿಂದ ಆ ವೀರರ ಕಾರ್ಯ, ಗುಣಗಳನ್ನು ಮಕ್ಕಳಿಗೆ ತಿಳಿಸಿ ಹೇಳಬೇಕು. ಪುಣ್ಯತಿಥಿಗಳನ್ನು ಆಚರಿಸುವಾಗ ಗಂಭೀರಭಾವದಿಂದ ಆಚರಿಸಬೇಕು. ಅಂದರೆ ಅವರ ವ್ಯಕ್ತಿತ್ವ, ಅವರ ಕಾರ್ಯ, ಇವುಗಳ ಬಗ್ಗೆ ಭಾಷಣಗಳನ್ನು ಏರ್ಪಡಿಸಬೇಕು. ಚಿಕ್ಕಂದಿನಲ್ಲಿ ಮಗುವಿನ ಮನಸ್ಸು ಸಂಸ್ಕಾರಕ್ಕೆ ತಕ್ಕದ್ದಾಗಿರುತ್ತದೆ. ಮಿದುವಾದ ಮಣ್ಣಿನಂತೆ. ಮೇಣದಂತೆ ಅವರ ಮನಸ್ಸು ಇರುವದರಿಂದ ಕಡೆದಂತೆ ಅದರ ಆಕಾರವಾಗುತ್ತದೆ.

ಜಯಂತಿ ಪುಣ್ಯತಿಥಿಗಳನ್ನು ಆಚರಿಸುವಾಗ ಮಕ್ಕಳಲ್ಲಿ ಗುಂಪುಮಾಡಿ ಬೇರೆ ಬೇರೆ ಕೆಲಸಗಳನ್ನು ಹಂಚಿ ಕೊಡಬೇಕು. ಇದರಿಂದ ಮಕ್ಕಳಲ್ಲಿ ಪರಸ್ಪರ ಪ್ರೀತಿ ವಿಶ್ವಾಸಗಳು ಹುಟ್ಟುವವು ಮತ್ತು ಕ್ರಮೇಣ ಚೆನ್ನಾಗಿ ನೆಲೆಗೊಳ್ಳುವವು. ತಮ್ಮ ಗುಂಪಿನ ನಾಯಕನ ಅಪ್ಪಣೆಗಳ ಪ್ರಕಾರ ಕೆಲಸಮಾಡುವದರಿಂದ ಕರ್ತವ್ಯದಕ್ಷತೆಯನ್ನು ಅರಿತುಕೊಳ್ಳುವರು.

ಜಯಂತಿ ಹಾಗು ಪುಣ್ಯತಿಥಿಗಳನ್ನು ಆಚರಿಸುವಾಗ

ಕೇವಲ ಮಕ್ಕಳು ಶಿಕ್ಷಕರು ಅಷ್ಟೇ ಆಚರಿಸಿದರೆ ಸಾಲದು ಇಂಥ ಸಂದರ್ಭದಲ್ಲಿ ಶಿಕ್ಷಕರು ಮಕ್ಕಳ ಪಾಲಕರನ್ನು ಬರಮಾಡಿಕೊಳ್ಳಬೇಕು. ನಮ್ಮ ದೇಶವು ಹಳ್ಳಿಗಳ ದೇಶವು. ಶಾಲೆಯೇ ಹಳ್ಳಿಯ ಸಂಸ್ಕೃತಿಕ ಕೇಂದ್ರವು. ಇಂಥ ಕಾರ್ಯಕ್ರಮಗಳನ್ನು ಶಾಲೆಗಳಲ್ಲಿ ಏರ್ಪಡಿಸುವದರಿಂದ ಪಾಲಕರನ್ನು ಒಂದೆಡೆಗೆ ಕೂಡಿಸಲು ಅನುಕೂಲವಾಗುತ್ತದೆ. ಆಯಾ ಮಹಾಪುರುಷರ ಜೀವನಚರಿತ್ರೆ ಅವರು ರಾಜಕೀಯ ರಂಗದಲ್ಲಿ ಮಾಡಿದ ಕಾರ್ಯ, ಅವರ ವ್ಯಕ್ತಿತ್ವ ಇತ್ಯಾದಿಗಳು ಆ ಜನರಿಗೂ ತಿಳಿಯುತ್ತದೆ. ಮತ್ತು ನಮ್ಮ ಮಕ್ಕಳು ಆಟಗಳಲ್ಲಿ. ಮಾತಾಡುವದರಲ್ಲಿ ಹಾಡುಗಳನ್ನು ಅನ್ನುವದರಲ್ಲಿ ಭಾಗವಹಿಸಿದ್ದನ್ನು ಕಂಡು ಶಾಲೆಯ ಮೇಲೆ ಆದರವೂ ಅಭಿಮಾನವೂ ಉಂಟಾಗುವದು ತಮ್ಮ. ಮಕ್ಕಳು ಶಾಲೆಯಲ್ಲಿ ಕೇವಲ ಓದುಬರೆಹವನ್ನು ಕಲಿಯುದೆ ಅದರ ಜೊತೆಗೆ ಇಂಥ ಮಹಾಪುರುಷರ ಜೀವನ ಚರಿತ್ರೆಯನ್ನು ಅರಿತುಕೊಂಡು ಮನಸ್ಸಿನಲ್ಲಿ ಟ್ಟುಕೊಂಡು ಅವರಂತೆ ಆ ಮಕ್ಕಳು ಸ್ವಲ್ಪಮಟ್ಟಿಗಾದರೂ ಮುಂದುವರಿಯಬಹುದೆಂದು ಆ ಹಳ್ಳಿಗರಿಗೆ ಅನಿಸುತ್ತದೆ. ಮತ್ತು ಅವರಿಗೆ ಬೋಧೆಯು ಮನರಂಜನೆಯೂ ಕೂಡಿಯೇ ಆಗುವವು ಅವರ ಮಕ್ಕಳೊಡನೆ ಶಿಕಕ್ಷಕರು ಸಹಕಾರ ಪ್ರೀತಿಗಳಿಂದ ವರ್ತಿಸುವದನ್ನು ಕಂಡು ನಮ್ಮ ಮಕ್ಕಳನ್ನು ಶಿಕ್ಷಕರೂ ಸಹ ತಮ್ಮಮಕ್ಕಳಂತೆ ಭಾವಿಸುವರೆಂಬ ನಿಜವಾದ ಅರಿವು ಅವರಲ್ಲಿ ಉಂಟಾಗುವದು. ಶಿಕ್ಷಕ ಪಾಲಕರಲ್ಲಿ ನಿಕಟಸಂಬಂಧ ಬೆಳೆಯುವದು. ಮಕ್ಕಳ ಪ್ರಗತಿಗೆ ಪಾಲಕರಿಂದ ನೆರವು ಸಿಗುವದು. ಈ ಎಲ್ಲ ಕಾರಣಗಳಿಂದ ಮೂಲಶಿಕ್ಷಣ ಶಾಲೆಗಳಲ್ಲಿ ರಾಷ್ಟ್ರಿಯ ಪುರುಷರ ಜಯಂತಿ ಹಾಗೂ ಪುಣ್ಯತಿಥಿಗಳ ಆಚರಣೆ ಇವು ಅಗ್ರಸ್ಥಾನವನ್ನು ಪಡೆದಿವೆ.

—————

ಚರ್ಚಾಕೂಟದ ಮಹತ್ವ

ಲೇಖಕರು : ಶ್ರೀ. ಈಶ್ವರಚಂದ್ರ ಚಿಂತಾಮಣಿ ಟ್ರೇ. ಕಾಲೇಜ ಜಮಖಂಡಿ.

ಜೀವನ ಶಿಕ್ಷಣ ಶಾಲೆಗಳಲ್ಲಿ ಮಕ್ಕಳ ಪ್ರಗತಿಗೆ ಸಾಧನವಾಗಬಲ್ಲ ವಿವಿಧ ರೀತಿಯ —ವಿವಿಧೊದ್ದೇಶದ ಕಾರ್ಯಕ್ರಮಗಳನ್ನು ಸಮಯೊಚಿತವಾಗಿ, ಸರಿಯಾದ ರೀತಿಯಿಂದ ಇಟ್ಟುಕೊಂಡು ನೆರವೇರಿಸುವದು ಒಳ್ಳೆದು ಪ್ರಗತಿಗೆ ಸಾಧನವಾದ ಅನೇಕ ಚಟುವಟಿಕೆಗಳಲ್ಲಿ "ಚರ್ಚಾಕೂಟ" ವೂ ಒಂದಾಗಿದೆ. ಅತಿ. ಮಹತ್ವದ್ದಾಗಿದೆ.

ಇನ್ನು ಚರ್ಚಾಕೂಟದಮಹತ್ವವೇನು ? ಅದರಿಂದಾಗುವ ಲಾಭಗಳೇನು ? ಎಂಬುದನ್ನು ಸೂಕ್ಷ್ಮವಾಗಿ ತಿಳಿಯುವದು ಅಗತ್ಯ.

ಒಂದು ಸಮಸ್ಯೆ ಬಗೆಹರಿಯ ಬೇಕಾದರೆ, ಒಂದು ಜಟಿಲ ಪ್ರಶ್ನೆ ಬಿಡಿಸಬೇಕಾದರೆ ಬಹುಜನರ ಅಭಿಪ್ರಾಯಗಳು ಬೇಕು. ಹಲವರ ವಿಚಾರಗಳು ಬಹುಜನರ ನ್ಯಾಯವಂತಿಕೆಯು ಒಂದುಸಮಸ್ಯೆಯನ್ನು ಸರಳವಾಗಿ

ಧನಗಳನ್ನುತ್ಯಾಗಮಾಡಿದವರ ಪುಣ್ಯಸ್ಮರಣೆಗೆಂದು ಇವುಗಳನ್ನು ನಾವು ಶಾಲೆಗಳಲ್ಲಿ ಆಚರಿಸಬೇಕು. ಹೀಗೆ ನಮಗೆ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟ ಹಾಗು ರಾಷ್ಟ್ರೋನ್ನತಿಗೆ ಹೋರಾಡಿದ ಮಹಾಪುರುಷರ ಉಪಕಾರವು ಅಪಾರವಾದದ್ದು. ಅವರಿಗೆ ನಾವು ಸಲ್ಲಿಸಬೇಕಾದ ಕೃತಜ್ಞತೆಯು ನಿಃಸೀಮಿಲ್ಲದ್ದು ಮಹಾಪುರುಷರ ಜಯಂತಿಯನ್ನು ಶಾಲೆಗಳಲ್ಲಿ ಆಚರಿಸುವಾಗ ಮಹಾಪುರುಷರ ಜೀವನ ಚರಿತ್ರೆ, ಅವರ ರಾಜಕೀಯ, ಹಗೂ ಸಾಮಾಜಿಕ ಕಾರ್ಯ ಮುಂತಾದವುಗಳನ್ನು ಮಕ್ಕಳಿಗೆ ತಿಳಿಸಿ ಹೇಳಲು ಅನುಕೂಲವಾಗುತ್ತದೆ. ಮತ್ತು ಇಂಥ ಸುದಿನಗಳಲ್ಲಿ ಸಭೆ ಸಮಾರಂಭಗಳನ್ನು ಏರ್ಪಡಿಸಿ ಮಕ್ಕಳಿಗೆ ಮಾತಾಡಲು ಪ್ರೋತ್ಸಾಹಿಸಬಹುದು. ಹೀಗೆ ಸಭೆಯಲ್ಲಿ ಮಾತಾಡುವದರಿಂದ ಮಕ್ಕಳಲ್ಲಿ ಧೈರ್ಯ ಬರುವದು ಮತ್ತು ಮಕ್ಕಳಲ್ಲಿರುವ ಮನಬಿಚ್ಚಿಮಾತಾಡುವ ಕಲೆಯು ವಿಕಾಸಗೊಳ್ಳುವದು." ಮನಬಿಚ್ಚಿ ಮಾತಾಡುವದರಿಂದ ಮಾನವನ ಮನಸ್ಸುಪಡೆಯುವಷ್ಟು ಸುಖವನ್ನೂ ಸಂತೋಷವನ್ನೂ ಇನ್ನಾವ ಸಾಧನದಿಂದಲೂ ಪಡೆಯಲಾರನು" ಎಂದು ಮಾನಸಶಾಸ್ತ್ರಜ್ಞರು ಹೇಳುವರು. ಅಲ್ಲದೆ ಮಕ್ಕಳು ತಮಗೆ ಆದ ಅನುಭವಗಳನ್ನು ಎರಡನೇಯವರ ಮುಂದೆ ಇಡುವದರಿಂದ ಅವರ ಜ್ಞಾನವು (ಹೆಚ್ಚು) ದೃಢವಾಗುವದು. ಉದಾ:- ಮಹಾತ್ಮಾಜಿಯವರ ಜಯಂತಿಯನ್ನು ಆಚರಿಸುವಾಗ ಮಕ್ಕಳಿಗೆ ಮಾತಾಡಲು ಹಚ್ಚಬೇಕು. ಮಹಾತ್ಮಾಜಿಯವರ ಜೀವನಚರಿತ್ರೆ, ಅವರ ರಾಷ್ಟ್ರೀಯ ಭಾವನೆ ಸಮಾಜಸುಧಾರಣೆಗಾಗಿ ಕೈಕೊಂಡ ಕಾರ್ಯ ಅವರ ಗುಣ ಇತ್ಯಾದಿಗಳಬಗ್ಗೆ ಮಕ್ಕಳಿಗೆ ಅವರವರ ಯೋಗ್ಯತೆಗೆ ತಕ್ಕಂತೆ ಮಾತಾಡಲು ಪ್ರೋತ್ಸಾಹವನ್ನು ಕೊಡುವದು ಶಿಕ್ಷಕರ ಕರ್ತವ್ಯವಾಗಿದೆ. ಇಂಥ ಸುಸಂಧಿಯನ್ನು ಮಕ್ಕಳಿಗೆ ಒದಗಿಸಿ ಕೊಡುವದರಿಂದ ಅವರಲ್ಲಿ ಸತ್ಯ ಅಹಿಂಸೆ, ತ್ಯಾಗ, ಪ್ರೇಮ, ಸಹಿತ ಇತ್ಯಾದಿ ಗುಣಗಳು ಮಕ್ಕಳಲ್ಲಿ ಒಡಮೂಡುವವು ಮತ್ತು ಅವರ ವಿಷಯಕ್ಕೆ ಪೂಜ್ಯಭಾವನೆಯು ಉತ್ಪನ್ನವಾಗುವದು. ಮಕ್ಕಳಲ್ಲಿ ಅನುಕರಣ ಶಕ್ತಿ ಹೆಚ್ಚು ಇರುವದರಿಂದ ಹೇಳಿದ್ದನ್ನು ಮನದಲ್ಲಿಟ್ಟುಕೊಂಡು ನಾವೂ ಇವರಂತೆ ಕೀರ್ತಿಶಾಲಿಗಳಾಗಬೇಕೆಂಬ ವಿಚಾರವು ಸಹಜವಾಗಿ ಬರುವದು ಮತ್ತು ಇದೇ ವೇಳೆಗೆ ಸಭೆಗೆ ಬಂದು ಮುಖ್ಯ ಅತಿಥಿಯಾಗಿ ಆಗಮಿಸಿದವರ ವರ್ಚಸ್ಸು ಸಹ ಮಕ್ಕಳ ಮೇಲೆ ಬೀಳದೆ ಇರಲಾರದು. ಜಯಂತಿಗಳನ್ನಾಚರಿಸುವಾಗ ಮನರಂಜನೆಯ ಕಾರ್ಯಕ್ರಮಗಳನ್ನು ಸೇರಿಸುವದರಿಂದ ಮಕ್ಕಳಲ್ಲಿರುವ ವಿವಿಧ ಕಲೆಗಳು ವಿಕಾಸಗೊಳ್ಳುತ್ತವೆ. ಮತ್ತು ಅವರ ಸಹಜ ಪ್ರವೃತ್ತಿಗಳ ಪ್ರಚೋದನೆಗೆ ಯೋಗ್ಯಸಂಧಿ ದೊರಕುವದು. ಉತ್ಸವ ಪ್ರಸಂಗಗಳಲ್ಲಿ ಮಾತನಾಡಲು ಬೇಕಾಗುವ ಧೈರ್ಯವನ್ನು ಸಂಪಾದಿಸಲು ಮತ್ತು ತಮ್ಮಲ್ಲಿರುವ ಕಲಾಕೌಶಲ್ಯ ಯೋಗ್ಯತೆಗಳನ್ನು ಪ್ರಕಟಿಸಲು ಅನುಕೂಲವಾಗುತ್ತದೆ.

ದೇಶದ ಏಳ್ಗೆಗೆ ಆವಶ್ಯಕವಾದ :ಧರ್ಮ, ಸಮಾಜಸುಧಾರಣೆ, ಆರ್ಥಿಕ ಉನ್ನತಿ ಈ ಮೊದಲಾದವುಗಳಿಗಾಗಿ ಹೋರಾಡಿದ ಮಹಾಪುರುಷರ ಸ್ಮರಣೆಯನ್ನು ಬಾಲಕರಿಗೆ ತಂದುಕೊಡುವದು ಶಿಕ್ಷಕರ ಕರ್ತವ್ಯವಾಗಿದೆ. ಗಳಿಸಿದ ಸ್ವಾತಂತ್ರ್ಯವು ಇಂದಿನಮಕ್ಕಳಿಂದಲೇ ಉಳಿಯ ಬಲ್ಲದು. ಸ್ವಾತಂತ್ರ್ಯಗಳಿಸಿದ ವೀರರ ಪುಣ್ಯತಿಥಿಗಳ ಆಚರಣೆಯಿಂದ ಆವೀರರ ಕಾರ್ಯ, ಗುಣಗಳನ್ನು ಮಕ್ಕಳಿಗೆ ತಿಳಿಸಿ ಹೇಳಬೇಕು. ಪುಣ್ಯತಿಥಿಗಳನ್ನು ಆಚರಿಸುವಾಗ ಗಂಭೀರಭಾವದಿಂದ ಆಚರಿಸಬೇಕು. ಅಂದರೆ ಅವರ ವ್ಯಕ್ತಿತ್ವ, ಅವರ ಕಾರ್ಯ, ಇವುಗಳ ಬಗ್ಗೆ ಭಾಷಣಗಳನ್ನು ಏರ್ಪಡಿಸಬೇಕು. ಚಿಕ್ಕಂದಿನಲ್ಲಿ ಮಗುವಿನ ಮನಸ್ಸು ಸಂಸ್ಕಾರಕ್ಕೆ ತಕ್ಕದ್ದಾಗಿರುತ್ತದೆ. ಮಿದುವಾದ ಮಣ್ಣಿನಂತೆ, ಮೇಣದಂತೆ ಅವರ ಮನಸ್ಸು ಇರುವದರಿಂದ ಕಡೆದಂತೆ ಅದರ ಆಕಾರವಾಗುತ್ತದೆ.

ಜಯಂತಿ ಪುಣ್ಯತಿಥಿಗಳನ್ನು ಆಚರಿಸುವಾಗ ಮಕ್ಕಳಲ್ಲಿ ಗುಂಪುಮಾಡಿ ಬೇರೆ ಬೇರೆ ಕೆಲಸಗಳನ್ನು ಹಂಚಿಕೊಡಬೇಕು. ಇದರಿಂದ ಮಕ್ಕಳಲ್ಲಿ ಪರಸ್ಪರ ಪ್ರೀತಿ ವಿಶ್ವಾಸಗಳು ಹುಟ್ಟುವವು ಮತ್ತು ಕ್ರಮೇಣ ಚೆನ್ನಾಗಿ ನೆಲೆಗೊಳ್ಳುವವು. ತಮ್ಮ ಗುಂಪಿನ ನಾಯಕನ ಅಪ್ಪಣೆಗಳ ಪ್ರಕಾರ ಕೆಲಸಮಾಡುವದರಿಂದ ಕರ್ತವ್ಯದಕ್ಷತೆಯನ್ನು ಅರಿತುಕೊಳ್ಳುವರು.

ಜಯಂತಿ ಹಾಗು ಪುಣ್ಯತಿಥಿಗಳನ್ನು ಆಚರಿಸುವಾಗ

ಕೇವಲ ಮಕ್ಕಳು ಶಿಕ್ಷಕರು ಅಷ್ಟೇ ಆಚರಿಸಿದರೆ ಸಾಲದು ಇಂಥ ಸಂದರ್ಭದಲ್ಲಿ ಶಿಕ್ಷಕರು ಮಕ್ಕಳ ಪಾಲಕರನ್ನು ಬರಮಾಡಿಕೊಳ್ಳಬೇಕು. ನಮ್ಮ ದೇಶವು ಹಳ್ಳಿಗಳ ದೇಶವು. ಶಾಲೆಯೇ ಹಳ್ಳಿಯ ಸಂಸ್ಕೃತಿಕ ಕೇಂದ್ರವು. ಇಂಥ ಕಾರ್ಯಕ್ರಮಗಳನ್ನು ಶಾಲೆಗಳಲ್ಲಿ ಏರ್ಪಡಿಸುವದರಿಂದ ಪಾಲಕರನ್ನು ಒಂದೆಡೆಗೆ ಕೂಡಿಸಲು ಅನುಕೂಲವಾಗುತ್ತದೆ. ಆಯಾ ಮಹಾಪುರುಷರ ಜೀವನಚರಿತ್ರೆ ಅವರು ರಾಜಕೀಯ ರಂಗದಲ್ಲಿ ಮಾಡಿದ ಕಾರ್ಯ, ಅವರ ವ್ಯಕ್ತಿತ್ವ ಇತ್ಯಾದಿಗಳು ಆ ಜನರಿಗೂ ತಿಳಿಯುತ್ತದೆ. ಮತ್ತೆ ತಮ್ಮ ಮಕ್ಕಳು ಆಟಗಳಲ್ಲಿ, ಮಾತಾಡುವದರಲ್ಲಿ ಹಾಡುಗಳನ್ನು ಅನ್ನುವದರಲ್ಲಿ ಭಾಗವಹಿಸಿದ್ದನ್ನು ಕಂಡು ಶಾಲೆಯ ಮೇಲೆ ಆದರವೂ ಅಭಿಮಾನವೂ ಉಂಟ ಗುವದು ತಮ್ಮ. ಮಕ್ಕಳು ಶಾಲೆಯಲ್ಲಿ ಕೇವಲ ಓದುಬರೆಹವನ್ನು ಕಲಿಯುದೆ ಅದರ ಜೊತೆಗೆ ಇಂಥ ಮಹಾಪುರುಷರ ಜೀವನ ಚರಿತ್ರೆಯನ್ನು ಅರಿತುಕೊಂಡು ಮನಸ್ಸಿನಲ್ಲಿಟ್ಟುಕೊಂಡು ಅವರಂತೆ ಆ ಮಕ್ಕಳು ಸ್ವಲ್ಪಮಟ್ಟಿಗಾದರೂ ಮುಂದುವರಿಯಬಹುದೆಂದು ಆ ಹಳ್ಳಿಗರಿಗೆ ಅನಿಸುತ್ತದೆ. ಮತ್ತು ಅವರಿಗೆ ಬೋಧೆಯು ಮನರಂಜನೆಯೂ ಕೂಡಿಯೇ ಆಗುವವು ಅವರ ಮಕ್ಕಳೊಡನೆ ಶಿಕ್ಷಕರು ಸಹಕಾರ ಪ್ರೀತಿಗಳಿಂದ ವರ್ತಿಸುವದನ್ನು ಕಂಡು ನಮ್ಮ ಮಕ್ಕಳನ್ನು ಶಿಕ್ಷಕರೂ ಸಹ ತಮ್ಮ ಮಕ್ಕಳಂತೆ ಭಾವಿಸುವರೆಂಬ ನಿಜವಾದ ಅರಿವು ಅವರಲ್ಲಿ ಉಂಟಾಗುವದು. ಶಿಕ್ಷಕ ಪಾಲಕರಲ್ಲಿ ನಿಕಟಸಂಬಂಧ ಬೆಳೆಯುವದು. ಮಕ್ಕಳ ಪ್ರಗತಿಗೆ ಪಾಲಕರಿಂದ ನೆರವು ಸಿಗುವದು. ಈ ಎಲ್ಲ ಕಾರಣಗಳಿಂದ ಮೂಲಶಿಕ್ಷಣ ಶಾಲೆಗಳಲ್ಲಿ ರಾಷ್ಟ್ರೀಯ ಪುರುಷರ ಜಯಂತಿ ಹಾಗೂ ಪುಣ್ಯತಿಥಿಗಳ ಆಚರಣೆ ಇವು ಅಗ್ರಸ್ಥಾನವನ್ನು ಪಡೆದಿವೆ.

ಚರ್ಚಾಕೂಟದ ಮಹತ್ವ

ಲೇಖಕರು : ಶ್ರೀ. ಈಶ್ವರಚಂದ್ರ ಚಿಂತಾಮಣಿ ಟ್ರೇ. ಕಾಲೇಜ ಜಮಖಂಡಿ.

ಜೀವನ ಶಿಕ್ಷಣ ಶಾಲೆಗಳಲ್ಲಿ ಮಕ್ಕಳ ಪ್ರಗತಿಗೆ ಸಾಧನವಾಗಬಲ್ಲ ವಿವಿಧ ರೀತಿಯ —ವಿವಿಧೋದ್ದೇಶದ ಕಾರ್ಯಕ್ರಮಗಳನ್ನು ಸಮಯೋಚಿತವಾಗಿ, ಸರಿಯಾದ ರೀತಿಯಿಂದ ಇಟ್ಟುಕೊಂಡು ನೆರವೇರಿಸುವದು ಒಳ್ಳೆದು ಪ್ರಗತಿಗೆ ಸಾಧನವಾದ ಅನೇಕ ಚಟುವಟಿಕೆಗಳಲ್ಲಿ "ಚರ್ಚಾಕೂಟ" ವೂ ಒಂದಾಗಿದೆ. ಅತಿ. ಮಹತ್ವದ್ದಾಗಿದೆ.

ಇನ್ನು ಚರ್ಚಾಕೂಟದ ಮಹತ್ವವೇನು ? ಅದರಿಂದಾಗುವ ಲಾಭಗಳೇನು ? ಎಂಬುದನ್ನು ಸೂಕ್ಷ್ಮವಾಗಿ ತಿಳಿಯುವದು ಅಗತ್ಯ.

ಒಂದು ಸಮಸ್ಯೆ ಬಗೆಹರಿಯ ಬೇಕಾದರೆ, ಒಂದು ಜಟಿಲ ಪ್ರಶ್ನೆ ಬಿಡಿಸಬೇಕಾದರೆ ಬಹುಜನರ ಅಭಿಪ್ರಾಯಗಳು ಬೇಕು. ಹಲವರ ವಿಚಾರಗಳು ಬಹುಜನರ ನ್ಯಾಯವಂತಿಕೆಯು ಒಂದು ಸಮಸ್ಯೆಯನ್ನು ಸರಳವಾಗಿ

ಬಿಡಿಸಲು– ಒಂದುನಿರ್ಣಯಕ್ಕೆ ಬರಲು ಕಾರಣವಾಗುತ್ತದೆ.

ಚರ್ಚಾಕೂಟವೆಂದರೆ ವಿಚಾರವಂತರ, ಬುದ್ಧಿಜೀವಿಗಳ, ನ್ಯಾಯವಂತರ ಸಂಗವು. ಇಂತಹ ಸಮಿತಿಯು ಪ್ರತಿಯೊಂದು ಶಾಲೆಯಲ್ಲಿ ಇರುವದು ಅಗತ್ಯ ಇದಕ್ಕೆ ಮೇಲಿನವರ್ಗಗಳ ಬಾಲಕರೇ ನಾಯಕರಾಗಿರಬೇಕು. ಮಾರ್ಗದರ್ಶನವಮಾತ್ರ ಗುರುಗಳದು.

ಬಾಲಕರು ತಮ್ಮ ಎದುರಿಗಿರುವ ಪ್ರುಟ್ಟ ಸಮಸ್ಯೆಗಳನ್ನು ಸಮಿತಿಯ ಮುಖಂಡನಿಗೆ ಸೂಚಿಸಿ ಚರ್ಚೆ ಇಡಬೇಕು ಮಂಡಿಸಲ್ಪಟ್ಟ ವಿಷಯದ ಮೇಲೆ ಬಾಲಕರು ಹುರುಪಿನಿಂದ ಮುಂದಾಗಿ ಮಾತಾಡಲು ಸಮರ್ಥರಾಗಬೇಕು. ಮಂಡನಕಾರರಷ್ಟೇ ಖಂಡನಕಾರರೂ ಉತ್ಸುಕರಾಗಿರಬೇಕು. ವಾದಕ್ಕೆ ಬಂದ ವಿಷಯದಲ್ಲಿ ವಿಚಾರಗಳ ತಾಕಲಾಟವಾಗಬೇಕೇ ಹೊಂತು ವ್ಯಕ್ತಿಗತ ಜಗಳವಾಗಕೂಡದು.

ಸಭೆಯಲ್ಲಿ ನಿಂತು ಮಾತಾಡುವುದೆಂದರೆ, ಸಮಾರಂಭ – ಸಮ್ಮೇಲನಗಳಲ್ಲಿ ಭಾಗವಹಿಸುವುದೆಂದರೆ ಬಾಲಕರಿಗೆ ತುಂಬ ಉತ್ಸಾಹವಿರುತ್ತದೆ; ಹಂಬಲವಿರುತ್ತದೆ. ಜತೆಯಲ್ಲಿ ನಾಚಿಕೆ-ಭಿತಿಯೂ ಇರುವದೆಂಬದನ್ನು ಮರೆಯಲಾಗದು. ಭೀತಿಯನ್ನು ನಾಚಿಕೆತನವನ್ನು ಹೋಗಲಾಡಿಸಬೇಕಾದರೆ ಪ್ರಾರಂಭದಲ್ಲಿ ಗುರುಗಳೇ ಚರ್ಚೆಯಲ್ಲಿ ಭಾಗವಹಿಸುತ್ತ ಬಾಲಕರಿಗೆ ಮಾರ್ಗದರ್ಶನ ಮಾಡಬೇಕು. ಚರ್ಚೆಯನ್ನು ವಿಚಾರಸರಣಿಯನ್ನು ಕುರಿತು ಕೇಳುವ ಬಾಲಕರಿಗೆ ಬಹಳ ಉತ್ಸಾಹ ಬರುತ್ತದೆ. ತಾವೂ ಮಾತಾಡಬೇಕೆಂಬ ಹಂಬಲ ಅವರಲ್ಲಿ ಸ್ವಾಭಾವಿಕವಾಗಿ ಉಂಟಾಗುತ್ತದೆ, ಇಂತಹ ಪ್ರೇರಣೆಯನ್ನುಂಟು ಮಾಡುವದು ನಮ್ಮ ಪ್ರಥಮ ಕರ್ತವ್ಯವಾಗಿದೆ.

ಬಹುಜನ ಗುರುಗಳು ಚರ್ಚಾಕೂಟ ಸಭೆ, ಸಮ್ಮೇಲನಗಳಲ್ಲಿ ಸ್ವಯಂಸ್ಫೂರ್ತಿಯಿಂದ ಭಾಗವಹಿಸುವದಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ; ಭೀತಿಯೇ ಇದಕ್ಕೆ ಕಾರಣವೆಂದು ಕಂಡುಬಂದರೂ ತಿಳಿದ ವಿಷಯವನ್ನು ಸಭೆಯಲ್ಲಿ ಹೇಳಲು ಹಿಂಜರಿಯುವವರೇ ಬಹಳ. ಇಂದಿನ ಶಿಕ್ಷಣದ ಹಿತದೃಷ್ಟಿಯಿಂದ ಇದು ಮಹಾಪರಾಧವಾಗಿದೆ. ಯಾರಲ್ಲಿ ಚರ್ಚಾಕೂಟವೆಂದರೆ ತಿರಸ್ಕಾರ ಅಲಕ್ಷತನವಿರುತ್ತದೆಯೋ ಅವರ ವರ್ಗದ ಬಾಲಕರು ಹೇಗೆ ತಾನೇ ಚರ್ಚಾಕೂಟನಲ್ಲಿ ಭಾಗವಹಿಸಬಹುದು ? ವಿಚಾರವಂತರಾದ ಗುರುಗಳು ಎದೆಗಾರಿಕೆಯಿಂದ, ಉತ್ಸಾಹದಿಂದ ಈ ದೃಷ್ಟಿಯಲ್ಲಿ ಮುನ್ನಡೆದರೆ ಬಾಲಕರು ಕ್ಷಿಪ್ರದಲ್ಲಿ ಪ್ರಗತಿ ಹೊಂದಬಲ್ಲರು.

ಚರ್ಚಾಕೂಟದಲ್ಲಿ ಬಾಲಕನು ಭಾಗಹಿಸುವಾಗ ತನ್ನ ವಿಚಾರಗಳನ್ನು ಗುರುವಿನ ಸಹಾಯವಿಲ್ಲದೆ ವ್ಯಕ್ತ ಮಾಡಲಾರ. ಚರ್ಚೆಯನ್ನು ಗೊತ್ತು ಪಡಿಸಿದ ನಂತರ ವರ್ಗದಲ್ಲಿ ಚರ್ಚೆಗೆ ಬಂದ ವಿಷಯದ ಮೇಲೆ ಒಳಿತು ಕೆಡಕುಗಳೆರಡನ್ನು ಗುರುಗಳು ಬಾಲಕರೊಂದಿಗೆ ಚರ್ಚಿಸಬೇಕು. ಬಾಲಕರಿಂದ ಹೊರಟ ವಿಚಾರಗಳನ್ನೆ ಅವರವರ ರೀತಿಯಲ್ಲಿ ಮೊದಮೊದಲು ಬರೆದು ಕೊಡುವದು, ಉತ್ತಮ. ಬರೆದುಕೊಡುವದು, ತಿಳಿಸಿ ಹೇಳುವದು. ಹುರುದುಂಬಿಸುವದು ಎಲ್ಲವೂ ಪ್ರೋತ್ಸಾಹನೆಗಾಗಿ ಒಬ್ಬನು ಸಿದ್ಧನಾದರೆ ಅವನನ್ನು ನೋಡಿ ಹಲವರು ಮಾತಾಡಲು ಮುಂದೆ ಬರುವರು. ನಾಲ್ಕಾರು ಸಲ ಮಾರ್ಗದರ್ಶನ ಮಾಡಿದರೆ ಸಾಕು. ಮುಂದೆ ತಾವಾಗಿಯೇ ಬಾಲಕರು ತಮ್ಮ ವಿಚಾರಗಳನ್ನು ಹೇಳಲು ಸಮರ್ಥರಾಗುವರು. ಇದು ಮಾಡಿನೋಡಿದ ಮಾತಾಗಿದೆ. ಪ್ರಯೋಗದಿಂದ ಕಂಡುಂಡ ಸಂಗತಿಯಾಗಿದೆ.

ಚರ್ಚಾಕೂಟದಲ್ಲಿ ಭಾಗವಹಿಸುವ ಬಾಲಕರು ತಮ್ಮ ತಿಳಿಯಾದ ವಿಚಾರಗಳನ್ನು ಮನನ ಮಾಡಿಕೊಂಡು ಹಲವರ ವಿಚಾರ ಸರಣಿಯನ್ನು ಕೇಳಿ ತಿಳಿದುಕೊಂಡು ಗೊತ್ತಾದ ವಿಷಯಗಳನ್ನು ಬರೆಯಲು ಯೋಗ್ಯರಾಗುವರು ಇದರಿಂದ ಅವರು ಕೈಬರಹದ ಪತ್ರಿಕೆ ಹೊರಡಿಸಬಲ್ಲರು, ಒಳ್ಳೆಯ ನಿಬಂಧ ಬರೆಯುಬಲ್ಲರು; ಪ್ರಶ್ನೆಗೆ ತಕ್ಕ ಉತ್ತರಕೊಡಬಲ್ಲರು. ವಕ್ತೃತ್ವಕಲೆಯ ಚರ್ಚಾಕೂಟದ ಮಹತ್ವ ಅಷ್ಟಿಷ್ಟಿಲ್ಲ; ವಿಶೇಷವಾಗಿದೆ.

ಚರ್ಚೆಗೆ ಮಂಡಿಸಲ್ಪಡುವ ವಿಷಯ ಶಾಲೆಯಲ್ಲಿಯ ಬಾಲಕರಿಗೆ ಸಂಬಂಧಿಸಿದ ವಿಷಯುವಾಗಿರಬೇಕು. ಅದು ಅವರ ಅಭ್ಯಾಸಕ್ಕೆ ಅನುಕೂಲವಾಗಿರಬೇಕು. ವಿಶೇಷ

ವಾಗಿ ಮೇಲಿನ ವರ್ಗಗಳ ನಿಬಂಧ ಬರೆಹಕ್ಕೆ ಸಂಬಧಿಸಿದ ವಿಷಯುಗಳೇ ಚರ್ಚೆಗೆ ಬರುವಂತಾಗಬೇಕು. ಅಲ್ಲದೆ ವಿಷಯ ವಿಚಾರ ಪ್ರಚೋದನೆಯನ್ನುಂಟು ಮಾಡಿರಬೇಕು. ಅಂದರೇನೇ ಚರ್ಜೆ ವಿವರವಾಗಿ, ಸರಳವಾಗಿ ಸುಗಮವಾಗಿ ಸಾಗುವದು.

ಚರ್ಚಾಕೂಟದಲ್ಲಿ ಬಾಲ--ಬಾಲಕಿಯರು ಒಟ್ಟಾಗಿ-ಸಹಕಾರದಿಂದ ಭಾಗವಹಿಸುವದು ಬಹಳ ಉತ್ತಮ ಇದರಿಂದ ಪರಸ್ಪರದಲ್ಲಿ ಸಾಂಘಿಕ ಶಕ್ತಿ, ಬೆಳೆಯುವದಲ್ಲದೆ. ಪವಿತ್ರ ಭಾವನೆಯುಂಟಾಗುವದು. ಸಾಂಸ್ಕೃತಿಕ ಚಟುವಟಿಕೆಗಳು ಹೆಣ್ಣುಮಕ್ಕಳ ಹಾಗೂ ಗಂಡುಮಕ್ಕಳ ಸಾಲೆಗಳೆರಡರ ಸಹಕಾರದಿಂದ ನಡೆದಷ್ಟು ಶೋಭೆಯನ್ನುಂಟಾಗುವದು. ಈ ರೀತಿಯಾಗಿ ಬಾಲಕರ ಹಾಗೂ ಬಾಲಿಕೆಯರ ಪ್ರಗತಿಗೆ ಸಾಧನವಾದ ಚರ್ಚಾಕೂಟ ಪ್ರತಿಯೊಂದು ಸಾಲೆಯಲ್ಲಿ ವಾರಕ್ಕೊಮ್ಮೆ ಏರ್ಪಾಟವಾದರೆ ಇಂದಿನ ಬಾಲಕರು ನಾಳಿನ ನಾಗರಿಕರಾಗಲು ಯೋಗ್ಯರಾಗುವರು.

" ಕೇಶಿರಾಜನ ಹಳಗನ್ನಡ ವ್ಯಾಕರಣ "

ಲೇಖಕರ: ಶ್ರೀ. ಶಟ್ಟಿ ಶ್ಯಾಮರಾಯರು, ಧಾರವಾಡ.

ಪ್ರಾಚೀನ ಸಾಹಿತ್ಯರತ್ನಗಳನ್ನು ಓದಿ ಆನಂದಪಡಬೇಕೆನ್ನುವ ಕನ್ನಡಿಗರು ಹಳಗನ್ನಡ ವ್ಯಾಕರಣವನ್ನೊಂದಿಷ್ಟು ತಿಳಿದಿರಲೇ ಬೇಕು. ಕನ್ನಡದಲ್ಲಿದ್ದ ನಾಲ್ಕು ವ್ಯಾಕರಣಗಳಲ್ಲಿ —೧ ನಾಗವರ್ಮನ ಶಬ್ದಸ್ಮೃತಿ ಮತ್ತು ೨ ಕರ್ನಾಟಕ ಭಾಷಾ ಭೂಷಣ ೩ ಕೇಶಿರಾಜನ ಶಬ್ದಮಣಿದರ್ಪಣ ೪ ಭಟ್ಟಾಕಲಂಕನ ಶಬ್ದಾನುಶಾಸನ. ಕೇಶಿರಾಜನದು ಉತ್ಕೃಷ್ಟ ಪದ್ಯಗಳನ್ನು ಉದಾಹರಿಸಿ ನಿಯಮಗಳನ್ನು ತನ್ನ ಕಾಲದ ಕನ್ನಡದಲ್ಲಿಯೇ ಕಂದಪದ್ಯ ರೂಪದಿಂದ ರಚಿಸಿದ್ದಾನೆ. ಅದರಿಂದ ನಾವು ಹಳಗನ್ನಡದ ಕೆಲವು ವೈಶಿಷ್ಟ್ಯಗಳನ್ನು ತಿಳಿದುಕೊಳ್ಳೋಣ. ಅನು ಕ್ರಿ. ಶ. ೧೨೦೦ ರ ಸುಮಾರಕ್ಕೆ ಪ್ರಚಲಿತವಿದ್ದ ಕನ್ನಡದ ರೀತಿ—ಅಥವಾ ಅದಕ್ಕೂ ನೂರಾರುವರ್ಷ ಹಿಂದೆಯೇ ಪ್ರಚಲಿತವಿದ್ದ ಕನ್ನಡ; ಏಕೆಂದರೆ ಕಾವ್ಯದಲ್ಲಿ ಪೂರ್ವದ ಹಳಗನ್ನಡವನ್ನು ಬಳಸುವದು ರೂಢಿಯಾಗಿದೆ ಮತ್ತು ಕೆಲಮಟ್ಟಿಗೆ ಅನಿವಾರ್ಯವಿರಬಹುದು. ಶಬ್ದಗಳಲ್ಲಿ ಎರಡುವಿಧ— (೧) ಮೂಲಶಬ್ದಗಳು: ನಾಮ, ಸರ್ವನಾಮ, ಧಾತು, ಅವ್ಯಯ (೨) ಪ್ರತ್ಯಯಗಳನ್ನು ಹಚ್ಚಿ ಸಿದ್ಧಮಾಡಿಕೊಂಡ ಶಬ್ದಗಳು. ಮರ, ಗಿಡ, ಮುದು ಬುಧ, ಅವಂ, ಇವಂ, ಒಂದು, ಎರಡು; ಇದು, ಅಗು, ಹೋಗು, ನಿನ್ನೆ, ಮೊನ್ನೆ, ನೆಟ್ಟಗೆ, ಅಲ್ಲಿ, ಇಲ್ಲಿ, ಇತ್ಯಾದಿ– ಇವು ಮೂಲಶಬ್ದಗಳು; ಶಬ್ದದಿಂ, ಆತ್ಮಣಿಂ, ಇಂದ್ರಿಯದ, ವಿಷಯಮಂ, ಶ್ರೋತ್ರುದೊಳ್, ಪದೋದರಂಗೆ, ಅವನತಂ ಮುಂತಾದವು ಇದರಂತೆ ಪೇಟ್ದಂ, ಕೇಳ್ದೆವು, ಕೊಂದಯ್, ಆದಿರ್ ಸಾರ್ದಂ,

ಬಿಡಿಸಲು– ಒಂದುನಿರ್ಣಯಕ್ಕೆ ಬರಲು ಕಾರಣವಾಗುತ್ತದೆ.

ಚರ್ಚಾಕೂಟ ವೆಂದರೆ ವಿಚಾರವಂತರ , ಬುದ್ಧಿಜೀವಿಗಳ, ನ್ಯಾಯವಂತರ ಸಂಗಮ. ಇಂತಹ ಸಮಿತಿಯು ಪ್ರತಿಯೊಂದು ಸಾಲೆಯಲ್ಲಿ ಇರುವದು ಆಗತ್ಯ ಇದಕ್ಕೆ ಮೇಲಿನವರ್ಗಗಳ ಬಾಲಕರೇ ನಾಯಕರಾಗಿರಬೇಕು. ಮಾರ್ಗದರ್ಶನವಮಾತ್ರ ಗುರುಗಳದು.

ಬಾಲಕರು ತಮ್ಮ ಎದುರಿಗಿರುವ ಪುಟ್ಟ ಸಮಸ್ಯೆಗಳನ್ನು ಸಮೀತಿಯ ಮುಖಂಡನಿಗೆ ಸೂಚಿಸಿ ಚರ್ಚೆ ಇಡಬೇಕು ಮಂಡಿಸಲ್ಪಟ್ಟ ವಿಷಯದ ಮೇಲೆ ಬಾಲಕರು ಹುರುಪಿನಿಂದ ಮುಂದಾಗಿ ಮಾತಾಡಲು ಸಮರ್ಥರಾಗಬೇಕು. ಮಂಡನಕಾರರಷ್ಟೇ ಖಂಡನಕಾರರೂ ಉತ್ಸುಕರಾಗಿರಬೇಕು. ವಾದಕ್ಕೆ ಬಂದ ವಿಷಯದಲ್ಲಿ ವಿಚಾರಗಳ ತಾಕಲಾಟವಾಗಬೇಕೇ ಹೊರತು ವ್ಯಕ್ತಿಗತ ಜಗಳವಾಗಕೂಡದು.

ಸಭೆಯಲ್ಲಿ ನಿಂತು ಮಾತಾಡುವುದೆಂದರೆ, ಸಮಾರಂಭ – ಸಮ್ಮೇಲನಗಳಲ್ಲಿ ಭಾಗವಹಿಸುವುದೆಂದರೆ ಬಾಲಕರಿಗೆ ತುಂಬ ಉತ್ಸಾಹವಿರುತ್ತದೆ; ಹಂಬಲವಿರುತ್ತದೆ. ಜತೆಯಲ್ಲಿ ನಾಚಿಕೆ-ಭಿತಿಯೂ ಇರುವದೆಂಬದನ್ನು ಮರೆಯಲಾಗದು. ಭೀತಿಯನ್ನು ನಾಚಿಕೆತನವನ್ನು ಹೋಗಲಾಡಿಸಬೇಕಾದರೆ ಪ್ರಾರಂಭದಲ್ಲಿ ಗುರುಗಳೇ ಚರ್ಚೆಯಲ್ಲಿ ಭಾಗವಹಿಸುತ್ತ ಬಾಲಕರಿಗೆ ಮಾರ್ಗದರ್ಶನ ಮಾಡಬೇಕು. ಚರ್ಚೆಯನ್ನು ವಿಚಾರ ಸರಣಿಯನ್ನು ಕುಳಿತು ಕೇಳುವ ಬಾಲಕರಿಗೆ ಬಹಳ ಉತ್ಸಾಹ ಬರುತ್ತದೆ. ತಾವೂ ಮಾತಾಡಬೇಕೆಂಬ ಹಂಬಲ ಅವರಲ್ಲಿ ಸ್ವಾಭಾವಿಕವಾಗಿ ಉಂಟಾಗುತ್ತದೆ, ಇಂತಹ ಪ್ರೇರಣೆಯನ್ನುಂಟು ಮಾಡುವದು ನಮ್ಮ ಪ್ರಥಮ ಕರ್ತವ್ಯವಾಗಿದೆ.

ಬಹುಜನ ಗುರುಗಳು ಚರ್ಚಾಕೂಟ ಸಭೆ, ಸಮ್ಮೆಲನಗಳಲ್ಲಿ ಸ್ವಯಂಸ್ಫೂರ್ತಿಯಿಂದ ಭಾಗವಹಿಸುವದಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ; ಭೀತಿಯೇ ಇದಕ್ಕೆ ಕಾರಣವೆಂದು ಕಂಡುಬಂದರೂ ತಿಳಿದ ವಿಷಯವನ್ನು ಸಭೆಯಲ್ಲಿ ಹೇಳಲು ಹಿಂಜರಿಯುವವರೇ ಬಹಳ. ಇಂದಿನ ಶಿಕ್ಷಣದ ಹಿತದೃಷ್ಟಿಯಿಂದ ಇದು ಮಹಾಪರಾಧವಾಗಿದೆ. ಯಾರಲ್ಲಿ ಚರ್ಚಾಕೂಟವೆಂದರೆ ತಿರಸ್ಕಾರ ಅಲಕ್ಷತನವಿರುತ್ತದೆಯೋ ಅವರ ವರ್ಗದ ಬಾಲಕರು ಹೇಗೆ ತಾನೇ ಚರ್ಚಾಕೂಟದಲ್ಲಿ ಭಾಗವಹಿಸಬಹುದು ? ವಿಚಾರವಂತರಾದ ಗುರುಗಳು ಎದೆಗಾರಿಕೆಯಿಂದ, ಉತ್ಸಾಹದಿಂದ ಈ ದೃಷ್ಟಿಯಲ್ಲಿ ಮುನ್ನಡೆದರೆ ಬಾಲಕರು ಕ್ಷಿಪ್ರದಲ್ಲಿ ಪ್ರಗತಿ ಹೊಂದಬಲ್ಲರು.

ಚರ್ಚಾಕೂಟದಲ್ಲಿ ಬಾಲಕನು ಭಾಗಹಿಸುವಾಗ ತನ್ನ ವಿಚಾರಗಳನ್ನು ಗುರುವಿನ ಸಹಾಯವಿಲ್ಲದೆ ವ್ಯಕ್ತ ಮಾಡಲಾರ. ಚರ್ಚೆಯನ್ನು ಗೊತ್ತು ಪಡಸಿದ ನಂತರ ವರ್ಗದಲ್ಲಿ ಚರ್ಚೆಗೆ ಬಂದ ವಿಷಯದ ಮೇಲೆ ಒಳಿತು ಕೆಡಕುಗಳೆರಡನ್ನು ಗುರುಗಳು ಬಾಲಕರೊಂದಿಗೆ ಚರ್ಚಿಸಬೇಕು. ಬಾಲಕರಿಂದ ಹೊರಟ ವಿಚಾರಗಳನ್ನೆ ಅವರವರ ರೀತಿಯಲ್ಲಿ ಮೊದಮೊದಲು ಬರೆದುಕೊಡುವದು, ಉತ್ತಮ. ಬರೆದುಕೊಡುವದು, ತಿಳಿಹೇಳುವದು. ಹುರುದುಂಬಿಸುವದು ಎಲ್ಲವೂ ಪ್ರೋತ್ಸಾಹನೆಗಾಗಿ ಒಬ್ಬನು ಸಿದ್ಧನಾದರೆ ಅವನನ್ನು ನೋಡಿ ಹಲವರು ಮಾತಾಡಲು ಮುಂದೆ ಬರುವರು. ನಾಲ್ಕಾರು ಸಲ ಮಾರ್ಗದರ್ಶನ ಮಾಡಿದರೆ ಸಾಕು. ಮುಂದೆ ತಾವಾಗಿಯೇ ಬಾಲಕರು ತಮ್ಮ ವಿಚಾರಗಳನ್ನು ಹೇಳಲು ಸಮರ್ಥರಾಗುವರು. ಇದು ಮಾಡಿನೋಡಿದ ಮಾತಾಗಿದೆ. ಪ್ರಯೋಗದಿಂದ ಕಂಡುಂಡ ಸಂಗತಿಯಾಗಿದೆ.

ಚರ್ಚಾಕೂಟದಲ್ಲಿ ಭಾಗವಹಿಸುವ ಬಾಲಕರು ತಮ ತಿಳಿಯಾದ ವಿಚಾರಗಳನ್ನು ಮನನ ಮಾಡಿಕೊಂಡು ಹಲವರ ವಿಚಾರ ಸರಣಿಯನ್ನು ಕೇಳಿ ತಿಳಿದುಕೊಂಡು ಗೊತ್ತಾದ ವಿಷಯುಗಳನ್ನು ಬರೆಯಲು ಯೋಗ್ಯರಾಗುವರು ಇದರಿಂದ ಅವರು ಕೈಬರಹದ ಪತ್ರಿಕೆ ಹೊರಡಿಸಬಲ್ಲರು, ಒಳ್ಳೆಯ ನಿಬಂಧ ಬರೆಯಬಲ್ಲರು; ಪ್ರಶ್ನೆಗೆ ತಕ್ಕ ಉತ್ತರಕೊಡಬಲ್ಲರು. ವಕ್ತೃತ್ವಕಲೆಯ ಚರ್ಚಾಕೂಟದ ಮಹತ್ವ ಅಷ್ಟಿಷ್ಟಲ್ಲ; ವಿಶೇಷವಾಗಿದೆ.

ಚರ್ಚೆಗೆ ಮಂಡಿಸಲ್ಪಡುವ ವಿಷಯ ಸಾಲೆಯಲ್ಲಿಯ ಬಾಲಕರಿಗೆ ಸಂಬಂಧಿಸಿದ ವಿಷಯುವಾಗಿರಬೇಕು. ಅದು ಅವರ ಅಭ್ಯಾಸಕ್ಕೆ ಅನುಕೂಲವಾಗಿರಬೇಕು. ವಿಶೇಷ

ವಾಗಿ ಮೇಲಿನ ವರ್ಗಗಳ ನಿಬಂಧ ಬರೆಹಕ್ಕೆ ಸಂಬಧಿಸಿದ ವಿಷಯಗಳೇ ಚರ್ಚೆಗೆ ಬರುವಂತಾಗಬೇಕು. ಅಲ್ಲದೆ ವಿಷಯ ವಿಚಾರ ಪ್ರಚೋದನೆಯನ್ನುಂಟು ಮಾಡಿರಬೇಕು. ಅಂದರೇನೇ ಚರ್ಚೆ ವಿವರವಾಗಿ, ಸರಳವಾಗಿ ಸುಗಮವಾಗಿ ಸಾಗುವದು.

ಚರ್ಚಾಕೂಟದಲ್ಲಿ ಬಾಲ-ಬಾಲಕಿಯರು ಒಟ್ಟಾಗಿ-ಸಹಕಾರದಿಂದ ಭಾಗವಹಿಸುವದು ಬಹಳ ಉತ್ತಮ ಇದರಿಂದ ಪರಸ್ಪರದಲ್ಲಿ ಸಾಂಘಿಕ ಶಕ್ತಿ, ಬೆಳೆಯುವದಲ್ಲದೆ. ಪವಿತ್ರ ಭಾವನೆಯುಂಟಾಗುವದು. ಸಾಂಸ್ಕೃತಿಕ ಚಟೀ ವಟಕೆಗಳು ಹೆಣ್ಣುಮಕ್ಕಳ ಹಾಗೂ ಗಂಡು ಮಕ್ಕಳ ಸಾಲೆಗಳೆರಡರ ಸಹಕಾರದಿಂದ ನಡೆದಷ್ಟು ಶೋಭೆಯನ್ನುಂಟಾಗುವದು. ಈ ರೀತಿಯಾಗಿ ಬಾಲಕರ ಹಾಗೂ ಬಾಲಿಕೆಯರ ಪ್ರಗತಿಗೆ ಸಾಧನವಾದ ಚರ್ಚಾಕೂಟ ಪ್ರತಿಯೊಂದು ಸಾಲೆಯಲ್ಲಿ ವಾರಕ್ಕೊವ್ಮೆ ಏರ್ಪಾಟವಾದರೆ ಇಂದಿನ ಬಾಲಕರು ನಾಳಿನ ನಾಗರಿಕರಾಗಲು ಯೋಗ್ಯರಾಗುವರು.

" ಕೇಶಿರಾಜನ ಹಳಗನ್ನಡ ವ್ಯಾಕರಣ "

ಲೇಖಕರ : ಶ್ರೀ ತಟ್ಟಿ ಶ್ಯಾಮರಾಯರು, ಧಾರವಾಡ.

ಪ್ರಾಚೀನ ಸಾಹಿತ್ಯರತ್ನಗೆಳನ್ನು ಓದಿ ಆನಂದಪಡಬೇಕೆನ್ನುವ ಕನ್ನಡಿಗರುಹಳಗೆನ್ನಡ ವ್ಯಾಕರಣವನ್ನೊಂದಿಷ್ಟು ತಿಳಿದಿರಲೇ ಬೇಕು. ಕನ್ನಡದಲ್ಲಿದ್ದ ನಾಲ್ಕು ವ್ಯಾಕರಣ ಗಳಲ್ಲಿ —೧ ನಾಗವರ್ಮನ ಶಬ್ದಸ್ಮೃತಿ ಮತ್ತು ೨ ಕರ್ನಾಟಕ ಭಾಷಾ ಭೂಷಣ ೩ ಕೇಶಿರಾಜನ ಶಬ್ದಮಣಿದರ್ಪಣ ೪ ಭಟ್ಟಾಕಲಂಕನ ಶಬ್ದಾನುಶಾಸನ. ಕೇಶಿರಾಜನದು ಉತ್ಕೃಷ್ಟ ಪದ್ಯಗಳನ್ನು ಉದಾಹರಿಸಿ ನಿಯಮಗಳನ್ನು ತನ್ನ ಕಾಲದ ಕನ್ನಡದಲ್ಲಿಯೇ ಕಂದಪದ್ಯ ರೂಪದಿಂದ ರಚಿಸಿದ್ದಾನೆ. ಅದರಿಂದ ನಾವು ಹಳಗನ್ನಡದ ಕೆಲವು ವೈಶಿಷ್ಟ್ಯಗಳನ್ನು ತಿಳಿದುಕೊಳ್ಳೋಣ. ಅದು ಕ್ರಿ. ಶ. ೧೨೦೦ ರ ಸುಮಾರಕ್ಕೆ ಪ್ರಚಲಿತವಿದ್ದ ಕನ್ನಡದ ರೀತಿ—ಅಥವಾ ಅದಕ್ಕೂ ನೂರಾರುವರ್ಷ ಹಿಂದೆಯೇ ಪ್ರಚಲತವಿದ್ದ ಕನ್ನಡ; ಏಕೆಂದರೆ ಕಾವ್ಯದಲ್ಲಿ ಪೂರ್ವದ ಹಳಗನ್ನಡವನ್ನು ಬಳಸುವದು ರೂಢಿಯಾಗಿದೆ ಮತ್ತು ಕೆಲವುಟ್ಟಿಗೆ ಅನಿವಾರ್ಯವಿರಬಹುದು. ಶಬ್ದಗಳಲ್ಲಿ ಎರಡುವಿಧ— (೧) ಮೂಲಶಬ್ದಗಳು: ನಾಮ, ಸರ್ವನಾಮ, ಧಾತು, ಅವ್ಯಯ (೨) ಪ್ರತ್ಯಯಗಳನ್ನು ಹಚ್ಚಿ ಸಿದ್ಧಮಾಡಿಕೊಂಡ ಶಬ್ದಗಳು. ಮರ, ಗಿಡ, ಮುದು ಬುಧ, ಅವಂ, ಇವಂ, ಒಂದು, ಎರಡು; ಇದು, ಆಗು, ಹೋಗು, ನಿನ್ನೆ, ಮೊನ್ನೆ, ನೆಟ್ಟಗೆ, ಅಲ್ಲಿ, ಇಲ್ಲಿ, ಇತ್ಯಾದಿ- ಇವು ಮೂಲಶಬ್ದಗಳು; ಶಬ್ದದಿಂ, ಅತ್ತಣಿಂ, ಇಂದ್ರಿಯದ, ವಿಷಯಮಂ, ಶ್ರೋತ್ರದೊಳ್, ಪದೋದರಂಗೆ, ಅವನತಂ ಮುಂತಾದವು ಇದರಂತೆ ಪೇಳ್ದಪೆಂ, ಕೇಳ್ದಪೆವು, ಕೊಂದಯ್, ಆದಿರ್ ಸಾರ್ದಂ,

ಎಂಬರ್ * ಮುಂತಾದವು– ಇವು ಕೆಲವು ನಿಯಮಾನು ಸಾರವಾಗಿ ಸಿದ್ಧಮಾಡಿಕೊಂಡು ಶಬ್ದಗಳು. ಹೀಗೆಯೇ ಏತ (' ಯಾತದ ನೀರಾವರಿ') =ಏಱು+ ತ; ಆಟ= ಆಡು+ ಅ; ಪೆಂಪು (=ಪಿರಿದು+ವು) ಮುಂತಾದವು ಮತ್ತು ಕಡೆಯಲ್ಲಿ ಇರ್ಪತ್ತೈದು, ಅವನಾತು, ಪಸಿಯಬಣ್ಣಂ, ಪಾಡುವ ತುಂಬಿ ಇಂತಹ ಸಂಯುಕ್ತಶಬ್ದಗಳು. ಇವೆಲ್ಲವೂ ರೂಪಸಿದ್ಧಿಯ ನಿಯಮಗಳಿಗನುಸರಿಸಿ ತಯಾರಿಸಿ ಕೊಂಡ ಪದಗಳು. ಮೇಲಿನ ಸಿದ್ಧಶಬ್ದಗಳೊಳಗಿನ ಪ್ರಕೃತಿ (ಮೂಲಶಬ್ದ) ಪ್ರತ್ಯಯಗಳನ್ನು ಬೇರೆಮಾಡಿ ನೋಡೋಣ. ಅವನತಂ = ಅವನತ+ಮ್; ವಿಷಯಮಂ= ವಿಷಯಂ+ ಅಮ್; ಶಬ್ದದಿಂ=ಶಬ್ದ+ ಇಮ್ (ನಡುವೆ ದ ಕಾರವೊಂದು ಹೆಚ್ಚಿಗೆ ಬಂದಿರುವದು); ಪದ್ಮೋದರಂಗೆ=ಪದ್ಮೋದರ ಙ್ಗೆ; ಅತ್ತಣಿಂ= ಅತ್ತ್+ಅಣ+ಇಂ; ಇಂದ್ರಿಯದ= ಇಂದ್ರಿಯ+ ಅ ('ದ ಕಾರಂ ನಡುವೆ ಬಂದಿರ್ಪುದು') ಶ್ರೋತ್ರದೊಳ್=ಶ್ರೋತ್ರ+ದ್+ಒಳ್; ಮೂಲಶಬ್ದಗಳ ಮುಂದೆ ಬೇರೆ ಬೇರೆ ಅರ್ಥವನ್ನು ಸೂಚಿಸುವದಕ್ಕೆ ಹಚ್ಚಿದ ವರ್ಣಗಳೇ ಪ್ರತ್ಯಯಗಳು. ಅವನ್ನು ಒಂದೆಡೆ ತಂದು ನೋಡೆ. ಮ್+ ಅಮ್+ ಇಮ್+ ಙ್ಗೆ (ಹಳಗನ್ನಡದಲ್ಲಿ 'ಗೆ' ಪ್ರತ್ಯಯದ ಹಿಂದೆ ಬಿಂದುವು ಒನ್ನೊನ್ನೆ ಬರುವದು ಒಸವುವುದು ಅನಂತಪುಲ್ಲಿಂಗದ ದೊಳ್ ಆವಬಿಂದುವಿಂ ಗೆ ಎಂದು" (ಶಬ್ದಮಣಿದರ್ಪಣ ಸೂತ್ರ ೧೧೩)+ ಅತ್+ ಅ+ (ದ ಕಾರಗಮದಿಂದ ಕೂಡಿದ) ಒಳ್, ಇವುಗಳು ಸಂಧಿಸದೊಡೆ 'ಮಮಿಂಕೆ ಯುದಮೊಳ್' ಎಂದಕ್ಕುಂ (ಚತುರ್ಥಿಯ ಗೆ ಒನ್ನೋ ಕೆ ಆಗುವದು); ಸಂಧಿಯಲ್ಲಿ 'ತ್' ವು 'ದ್' ಆಗಿರುವುದು ಮತ್ತು 'ಆದ್' ಎಂಬದರ ಹಿಂದೆ ಯ ಕಾರಾಗುಮವಾಗಿ ರುವದು. ಈ ಶಬ್ದಮಣಿದರ್ಪಣ ಸೂತ್ರ (೯೩)ನೋಡಿರಿ

" ಸಂದಿಸಿ ಮಮಿಂಕೆಯದದೊಳೆ ಎಂದಿರ್ಪುವು; ಸಪ್ತವಿಧವಿಭಕ್ತಿಗಳವು; "

* ಈ ಎಲ್ಲ ಉದಾಹರಣೆಗಳನ್ನು ಅಥವಾ ಶಬ್ದರೂಪಗಳನ್ನು ಕೇಶಿರಾಜನ ಶಬ್ದಮಣಿದರ್ಪಣದಲ್ಲಿನ ಪ್ರಯೋಗಗಳಿಂದಲೇ ಆಯ್ದುಕೊಳ್ಳಲಾಗಿದೆ

'ಸಾರ್ದಂ' ಮುಂತಾದ ರೂಪಗಳನ್ನು ಬೇರೆ ಬೇರೆ ಮಾಡಿನೋಡೋಣ: ಸಾರ್ದಂ= ಸಾರ್+ ದ್+ ಅಮ್ ಎಂಬರ್= ಎನ್+ ಬ್+ ಅರ್; ಕೊಂದಯ್= ಕೊಲ್+ ದ್+ ಅಯ್; ('ಎಂಬರ್' ಎಂಬಲ್ಲಿ 'ನ್' ಕಾರವು ಅನುಸ್ವಾರವಾದುದಕ್ಕೆ ಅಥವಾ 'ಮ್' ಕಾರವಾದುದಕ್ಕೆ ಕೇಶಿರಾಜನ ಮಾತ ಕೇಳಿ: (ಸೂತ್ರ ೧೬೧) ಮನ ಕಾರದ ಪರದೊಳ್ ವ್ಯಂಜನಮಿರ್ದೊಡಂ ಇಲ್ಲದೊಡಂ ಅನುಸ್ವಾರಂ ಜನಿಯಿಪುದು, ವರ್ಗಮಿದಿರಿರೆ .....ತದಿಯಪಂಚಮಮಕ್ಕುಂ; 'ಕೊಂದಯ್' ಎಂಬಲ್ಲಿ ಲಕಾರಕ್ಕೆ ನಕಾರವು ಬರುವ ನಿಯಮವಂ ನೋಡಿ: "ದ ದಪಂಗಳ್ ('ದಪ' ಎಂಬುದು ವರ್ತಮಾನ ಕಾಲಸೂಚಕ ಪ್ರತ್ಯಯ) ಪರದೊಳ್.... ಒದವಿರೆ.... ಕೊಲ್ ಸಲ್ ಗಳ್ಗ ಮರ್ದಿ ಪ್ಪುದುನತ್ವಂ.(ಸೂತ್ರ೨೩೭); ಆದಿರ್= ಆಗು+ ದ್+ ಇರ್ (ದ ಕಾರವು ಭೂತಕಾಲ ಸೂಚಕ ವರ್ಣವು); ಪೇೞ್ದಿಂ= ಪೇೞ್+ ದ್+ಎಮ್; ಕೇಳ್ದೆವು= ಕೇಳ್+ ದ್+ ಎವು; ಮೇಲಿನ ರೂಪಗಳಲ್ಲಿನ ಪ್ರತ್ಯಯಗಳನ್ನೆಲ್ಲ ಬೇರೆ ಮಾಡಿ ಒಂದು ಕಡೆ ಸೇರಿಸೋಣ: ಅಮ್+ ಅರ್+ ಅಯ್+ ಇರ್+ ಎಂ+ ಎವು= ಅಮರಯಿರೆನೆವು. ಶಬ್ದಮಣಿದರ್ಪಣ ಸೂತ್ರ ೨೧೭ ನೋಡಿರಿ: " ಅಮರಯಿರೆನೆವುಗಳಕ್ಕುಂಕ್ರಮದೇಕಾನೇಕವಚನದೊಳ್ ಪ್ರತ್ಯೇಕಂ ಸಮನಿಸೆಯುಗಳತೆ....ಪುರುಷತ್ರಯಕಂ" ಕ್ರಿಯಾಪದದ ಪ್ರಥಮ ಮಧ್ಯಮೋತ್ತಮ ಪುರುಷಗಳಲ್ಲಿ ಕ್ರಮದಿಂದ, ಏಕಬಹುವಚನಗಳಲ್ಲಿ ಈ ಪ್ರತ್ಯಯಗಳು ಹತ್ತುವವು. ಮೊದಲು ವಿವರಿಸಿದ ನಾಮಗಳಿಗೆ ಹತ್ತುವ "ಮಮಿಂಕೆ".... ಮೊದಲಾದವು ಮತ್ತು ಈಗ ನೋಡಿದ "ಅಮರಯ್....." ಎಂಬ ಪ್ರತ್ಯಯಗಳಿಗೆ ಕ್ರಮವಾಗಿ ವಿಭಕ್ತಿ ಪ್ರತ್ಯಯಗಳೆಂಬ ಹೆಸರು. ಶ. ಮ. ದ. ಸೂತ್ರ ೬೫ : 'ಪದದರ್ಥಮಂ ವಿಭಾಗಿಸುವದರಿಂ ಬೋದಿ ವಿಭಕ್ತಿ; ಅಂತದಂ ಪ್ರತ್ಯಯಮೆಂಬುದು; ತತ್ಪ್ರತ್ಯಯದಿಂ ಪೂರ್ವದೊಳಿರ್ಪುದು ಪ್ರಕೃತಿ; ಎರಡುಮ್ ಅವುದೊದವೆ ಪದಂ"

(ಮುಂದುವರಿದುದು)

ಪ್ರಾಥಮಿಕ ಶಿಕ್ಷಣ ಪ್ರಪಂಚ

(ಸುದ್ದಿ-ಸಾರ-ಸಂಗ್ರಹ)

(ಕಳೆದಸಂಚಿಕೆಯಿಂದ ನವ್ಹಂಬರ ೧೦ರವರೆಗೆ)

ಗಾಂಧೀಜಯಂತಿ

ಕೆಳಗೆ ಕಾಣಿಸಿದ ಊರುಗಳ ಶಾಲೆಗಳಲ್ಲಿ ಅಕ್ಟೋಬರ ೨ ರಂದು ಗಾಂಧಿಜಯಂತಿಯ ಸಪ್ತಾಹವು ಆಚರಿಸಲ್ಪಟ್ಟಿತು. ಸಫಾಯಿ, ಶ್ರಮದಾನ, ನೂಲುವದು, ಭಜನೆ, ರಸ್ತೆನಿರ್ಮಾಣ, ಗೊಬ್ಬರ ಕುಣಿ ತೊಡುವಿಕೆ, ನೂಲುವ ಸ್ಪರ್ಧೆ, ಪಾರಿತೋಷಕ ವಿತರಣ ಮುಂತಾದ ಅನೇಕ ಕಾರ್ಯಕ್ರಮಗಳು ವಾಡಿಕೆಯಂತೆ ಜರುಗಿದವು. ಶಿಕ್ಷಕರೂ ಬಾಲಕರೂ ಊರವರೂ ಈ ಸಮಾರಂಭದಲ್ಲಿ ಭಾಗವಹಿಸಿದ್ದರು:-

ಕೋಟೂರು, ಶಿವಣಗಿ, ಅಮ್ಮಲಝರಿ, ಅಸುಂಡಿ ಜೊಯಿಸರ ಹರಳಹಳ್ಳಿ, ಹಿರೇಪಡಸಲಗಿ ಹುಬ್ಬಳ್ಳಿ (೧೪ ನೆಯ ನಂಬರ ಶಾಲೆ), **ಕಡಕೋಳ, ಇಟಗಿ,** (ಖಾನಾಪುರ) **ತೇರಗಾಂವ, ಹಮ್ಮಿಗಿ, ಕಬನೂರ,** ಮುರನಾಳ, **ಹತ್ತಿರಕಿಹಾಳ, ದೇವನಾಳ, ಗೋಸಬಾಳ, ಸುಳೆಭಾವ, ಕಮತಗಿ, ಜಂಬಗಿ ಅಣಜಿ,**

ವಿವಿಧ ಶೈಕ್ಷಣಿಕ ಚಟುವಟಿಕೆಗಳು

ಹುಯಿಲಗೋಳ ೧೭. ಕಳೆದ ೨ ವರ್ಷಗಳಿಂದ ಈ ಶಾಲೆಯು ಉನ್ನತಿ ಹೊಂದುತ್ತ ಮುನ್ನಡೆಯಿಡುತ್ತಿದೆ. 'ಭಕ್ತ ಶಿರಿಯಾಳ' ಎಂಬ ನಾಟಕವು ರಂಗಭೂಮಿಯ ಮೇಲೆ ಬಾಲಕರಿಂದ ತರಲ್ಪಟ್ಟಿತು.

ತಾಳೀಕೋಟೆ. ೨೪. ತಾಳಿಕೋಟೆ ಭಾಗದ ಗ್ರುಪ್ ಶಿಕ್ಷಕರ ಸಮ್ಮೇಲನವು ಯಶಸ್ವಿಯಾಗಿ ನಡೆಯಿತು.

ಕಟಗೇರಿ. ೩೧. ಕಟಗೇರಿ ಗ್ರುಪ್ಪಿನ ಲೊ ಬೊ. ಮತ್ತು ಗಾವಠಿ ಶಾಲೆಗಳ ಸಮ್ಮೇಲನವು ಜರುಗಿತು.

ಗೋಸಬಾಳ. ೨. ಬಡವಿದ್ಯಾರ್ಥಿಗಳಿಗೆ ೧೨ ಪಾಟಿ, ೭ ಪುಸ್ತಕಗಳನ್ನು ಶ್ರೀ. ಸಂಗಪ್ಪ ಶಿವಬಸವನಾಳ ಅವರು ಕೊಟ್ಟರು.

ಚಿಕ್ಕಯಂಡಚಿ. ೯. ಹರಿಜನ ಕೇರಿಯಲ್ಲಿ ಎರಡು ರಸ್ತೆಗಳನ್ನು ರಚಿಸಲಾಯಿತು.

ಕಲಾದಗಿ. ೧೯. ಶಿಕ್ಷಕರ ಸಭೆಯು ಸೇರಿತ್ತು ರಚನಾತ್ಮಕ ಕಾರ್ಯಗಳನ್ನು ಕುರಿತು ವಿಚಾರ

ಮಾಡಲಾಯಿತು. ನೆರಸಂತ್ರಸ್ತರೆ ಸಹಾಯಾರ್ಥವಾಗಿ ಒಟ್ಟು ರೂ. ೨೧೧ – ೧೪ – ೦ ಕೂಡಿಸಲಾಗಿದೆ.

ಜಮಖಂಡಿ. ೧೧. ಜಮಖಂಡಿ ಟ್ರೇ. ಕಾ. ವಿದ್ಯಾರ್ಥಿಗಳೂ ಶಿಕ್ಷಕರೂ ಗ್ರಾಮಸುಧಾರ ಸಪ್ತಾಹವನ್ನು ಆಚರಿಸಿದರು. ಕಡಪಟ್ಟಿ ಮತ್ತು ಹುನ್ನೂರ ಗ್ರಾಮಗಳ ಸ್ವಚ್ಛತೆ ಮುಂತಾದ ಕಾರ್ಯಕ್ರಮ ನೆರವೇರಿಸಿದರು.

ತೆರಗಾಂವ. ೨೪. ಶಾಲಾ ಕಟ್ಟಡ ಕಟ್ಟುವ ಬಗ್ಗೆ ಸ್ಥಾನಿಕ ಕಮೀಟಿಯು ಸ್ಥಾಪಿತವಾಯಿತು.
ಕುಂದರಗಿ. ೨೨. ಗ್ರುಪ್ ಪಂದ್ಯಗಳು ಜರುಗಿದವು.
ಸತ್ತಿ. ೧೮. ಸತ್ತಿ ಗ್ರುಪ್ ಶಿಕ್ಷಕರ ಸಂಘವು ಸ್ಥಾಪಿತವಾಯಿತು.
ಮುಗಳಹಳ್ಳಿ ೬.೨೭–೯–೫೪ ಕ್ಕೆ ಬಾದಾಮಿ, ಶಿವಯೋಗಮಂದಿರದ ಪ್ರವಾಸ ಕೈಕೊಳ್ಳಲಾಗಿತ್ತು.
ಧನ್ನೂರ. ೩೦ ಶಾರೀರಿಕ ಪಂದ್ಯಾಟಗಳು ಜರುಗಿದವು
ಸಾಸ್ವಿಹಳ್ಳಿ. ೨೪. ಪಾಲಕರ ದಿನಾಚರಣೆಯು ಜರುಗಿತು.
ಚಿಕ್ಕ ಆದಾಪೂರ. ೨೪. ಗ್ರುಪ್ ಪಂದ್ಯಾಟಗಳು ಜರುಗಿದವು.
ಲಚ್ಯಾಣ. ೨೫. ಗ್ರುಪ್ ಪಂದ್ಯಾಟಗಳು ಜರುಗಿದವು.
ಗೋಕರ್ಣ ೨೦. ಗೊಕರ್ಣ ಕೇಂದ್ರದ ಶಿಕ್ಷಕ ಶಿಕ್ಷಕೆಯರ ಸಮ್ಮೇಲನವು ಜರುಗಿತು.
ತಂಗಡಗಿ. ೧೬. ಗ್ರುಪ್ ಪಂದ್ಯಾಟಗಳು ಜರುಗಿದವು. ಅಂದೇ ಶೈ. ಸಮ್ಮೇಲನವು ಜರುಗಿತು.
ಹವಿನ್ಹಾಗಿ. ೧೩. ಶ್ರೀ ಜ್ಞಾನದೇವ ಡಬಾಲಿ ಅವರು ೩೬ ರೂಪಾಯಿಯ ಹಿತ್ತಾಳಿಯ ಟಾಕಿ ಮತ್ತು ೨೧೫ ರೂಪಾಯಿಯ ಕಪಾಟನ್ನು ಶಾಲೆಗೆ ಕಾಣಿಕೆಯಾಗಿಕೊಟ್ಟರು.

ತೇರಗಾಂವ. ಶ್ರೀ ವಿಠ್ಠಲರಾವ ಬಾಳೇಕುಂದ್ರಿ ಅವರು ೪೦ – ೫೦ ರೂಪಾಯಿಯ ವೃತ್ತಪತ್ರದ ಓದುವ ಸ್ಟಾಂಡನ್ನು ಶಾಲೆಯ ವಾಚನಾಲಯಕ್ಕೆ ಕೊಟ್ಟರು ಮತ್ತು ಶ್ರೀ. ವಿರುಪಾಕ್ಷಪ್ಪ ಘಾಡಿ ಅವರು ೨೦ ರೂಪಾಯಿ ಬೆಲೆಯ ಪುಸ್ತಕ ಕಾಣಿಕೆ ಕೊಟ್ಟರು. ಅದೇ ಪ್ರಕಾರ ಶ್ರೀ. ಶಿವಲಿಂಗಪ್ಪ ತೇಲಿ ಅವರು ೫ ರೂಪಾಯಿಗಳ ಪುಸ್ತಕಗಳನ್ನು ಕಾಣಿಕೆ ಕೊಟ್ಟರು.

ಕಡಕೋಳ— ೧೨. ತಾ. ೨೯—೯—೫೪ರಂದು ಬಡ ವಿದ್ಯಾರ್ಥಿಗಳಿಗೆ ಪಾಟ ಪುಸ್ತಕ ಹಂಚಲಾಯಿತು.

ಚಂಡಿಯಾ— ೧೫. ೧೦ರಂದು ಬಾಲಕರು ಅಂಕೋಲಾ ಅಗ್ರಿಕಲ್ಚರ ಹೈಸ್ಕೂಲನ್ನು ಸಂದರ್ಶಿಸಿ ಬಂದರು.

ದಾಂಡೇಲಿ— ೨೧. ಶಿಬಿರಾಗ್ನಿ ಕಾರ್ಯಕ್ರಮವು ಜರುಗಿತು.

ತಿಳಗೂಳ— ೬. ಊರ ನಾಗರೀಕರು ಶಾಲಾ ಕಟ್ಟಡದ ಬಗ್ಗೆ ೧೯೫೪ ಡಿಸೆಂಬರದೊಳಗಾಗಿ ಮೂರು ಸಾವಿರ ರೂಪಾಯಿ ತುಂಬುವದಾಗಿ ಹೇಳಿದರು.

ಹೊರ್ತಿ— ೨೩.. ವಿವಿಧ ಪಂದ್ಯಾಟಗಳು ಜರುಗಿದವು.

ಹಾತಲಗೇರಿ— ೨೨. ರಾತ್ರಿ ಶಾಲೆಯಲ್ಲಿ ಪ್ರೌಢರ ಪರೀಕ್ಷೆಯನ್ನು ತೆಗೆದುಕೊಳ್ಳಲಾಯಿತು. ವಿವಿಧ ವಿನೋದಾವಳಿಗಳು ಜರುಗಿದವು.

ಕಲಾದಗಿ— ೨೫. ಗ್ರುಪ್ ಶಾಲೆಗಳ ಪಂದ್ಯಾಟಗಳು ಜರುಗಿದವು.

ಕಸ್ನೂರ— ೧೬. ಗ್ರೂಪ್ ಪಂದ್ಯಾಟಗಳು ಜರುಗಿದವು.

ಹಾವೇರಿ— ೨೧. ಉರ್ದು ಶಾಲೆಯ ಜನಾಬ ಅ. ಅ. ಮುಲ್ಲಾ ಅವರು ಸೇವಾ ನಿವೃತ್ತರಾದ್ದರಿಂದ ಬೀಳ್ಕೊಡುವ ಸಮಾರಂಭವಾಯಿತು,

ಸಿರೂರ (ವಿಜಾಪುರ) — ೧೬. ಜೀವನ ಶಿಕ್ಷಣ ಶಾಲೆಯು ಚೆನ್ನಾಗಿ ನಡೆದಿದೆ. ಜೀವನ ಶಿಕ್ಷಣ ಶಾಲೆಯು ನಡೆಸಬೇಕಾದ ಕಾರ್ಯಕ್ರಮಗಳನ್ನು ಜರುಗಿಸುತ್ತಿದೆ.

ಕುಂಚನೂರ— ೧೭. ಗ್ರೂಪ್ ಶಿಕ್ಷಕರ ಸಮ್ಮೇಲನ ಹಾಗೂ ಗ್ರೂಪ್ ಪಂದ್ಯಾಟಗಳು ಜರುಗಿದವು.

ಡ. ಸ. ಹಡಗಲಿ— ೧. ಶಾಲೆಯ ಕಂಪರ ಕೂಟದವರು 'ಪ್ರೇಮಜ್ಯೋತಿ' ಎಂಬ ನಾಟಕ ಅಭಿನಯಿಸಿದರು.

ಮುತ್ತಗಿ— ೨೪. ಗ್ರೂಪ್ ಶಿಕ್ಷಕರ ಸಮ್ಮೇಲನ ಹಾಗು ಪ್ರದರ್ಶನ ಜರುಗಿದವು.

ನಾಡಹಬ್ಬ

ನಾಡಹಬ್ಬವನ್ನು ಕೆಳಗಿನ ಊರುಗಳ ಶಾಲೆಯಲ್ಲಿ ಉತ್ತಮವಾಗಿ ಆಚರಿಸಲ್ಪಟ್ಟಿತು. ಶಾರದಾ ಪೂಜೆ, ಬನ್ನಿಮುಡಿಯುವಿಕೆ ಮುಂತಾದ ಕಾರ್ಯಕ್ರಮಗಳೂ ಜರುಗಿದವು.

ಭಗತವಾಡಾ, ತಿಳಗೂಳ, ಮಾಜಾಳಿ, ಬೆಳಕೂಡ, ಗಂದಿಗವಾಡ,

ಗಾಂಧೀ ಜಯಂತಿ—೧೯೫೪

ಶ್ರೀ. ಬಿ. ಎಂ. ಶಿಂತ್ರಿ. ಅವರ ಭಾಷಣ

ಹೆಣ್ಣುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ

ಧಾರವಾಡ ೨. ಶ್ರೀ. ಬಿ. ಎಂ. ಶಿಂತ್ರಿ, ನಿವೃತ್ತ ಅಸಿಸ್ಟಂಟ ಶಿಕ್ಷಣಾಧಿಕಾರಿಗಳು, ದಕ್ಷಿಣಭಾಗ ಅವರು ಧಾರವಾಡದ ಹೆಣ್ಣುಮಕ್ಕಳ ಸರಕಾರಿ ಟ್ರೇನಿಂಗ, ಕಾಲೇಜದಲ್ಲಿ ಮುಂಜಾನೆ ೭-೧೫ರಿಂದ೮ ರ ವರೆಗೆ ಸಾಗಿದ ಪ್ರಭಾತ ಫೇರಿಯ ನಂತರ ರಾಷ್ಟ್ರಧ್ವಜಾರೋಹಣವನ್ನು ಮಾಡಿದರು. ಅವರ ಸಂಕ್ಷಿಪ್ತ ಪರಿಚಯ ವನ್ನು ವಿದ್ಯಾರ್ಥಿನಿಯರು ಮಾಡಿಕೊಟ್ಟ ಬಳಿಕ ಶ್ರೀ. ಶಿಂತ್ರಿಯವರು ಧ್ವಜದ ಮಹತ್ವವನ್ನು ಹೇಳುತ್ತ ಇಂತೆಂದರು— " ಧ್ವಜವು ರಾಷ್ಟ್ರದ ಪ್ರತೀಕ. ಈ ಅಶೋಕ ಚಕ್ರಾಂಕಿತ ತ್ರಿವರ್ಣ ಧ್ವಜದಡಿಯಲ್ಲಿ ಜಾತಿ, ಮತ, ಪಂಥಗಳ ಭೇದವಿಲ್ಲದೆ ನಾವೆಲ್ಲರೂ ಸಮಾನರು. ಧ್ವಜದ ಮಾನವನ್ನು ಕಾಯುವದು ಮತ್ತು ಕಾಪಾಡುವದು ನಮ್ಮೆಲ್ಲರ ಕರ್ತವ್ಯವಾಗಿದೆ. ಧ್ವಜ ಪೂಜೆಯನ್ನು ನಾವು ಇಂಗ್ಲಿಷರಿಂದ ಕಲಿತಿದ್ದೇವೆಂದು ಭಾವಿಸಬಾರದು. ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಧ್ವಜಪೂಜೆ, ಧ್ವಜಾರೋಹಣ ಪದ್ಧತಿ ಇತ್ತು. ರಾಜರು ಧ್ವಜಪೂಜೆಯನ್ನು ಮಾಡಿ ದಿಗ್ವಿಜಯಕ್ಕೆ ಹೊರಡುತ್ತಿದ್ದರು. ಒಬ್ಬೊಬ್ಬ ರಾಜರಿಗೆ ಒಂದೊಂದು ಧ್ವಜವಿತ್ತೆಂಬುದನ್ನು ನೀವು ಇತಿಹಾಸದಲ್ಲಿ ಓದಿದ್ದೀರಿ. ನಂದೀಕೋಲು, ಖಣ ಮತ್ತು ಕಲಶಗಳಕ್ಕೆ ಏರಿಸುವಿಕೆ ಮುಂತಾದವು ಧ್ವಜದ ಪ್ರತೀಕಗಳೇ. ಧ್ವಜಪೂಜೆ ಎಂದರೆ ವಿಘ್ನೇಶನ ಪೂಜೆ ಇದ್ದಂತೆ ರಾಜಕೀಯ ರಂಗದಲ್ಲಿ, ಸಾಮಾಜಿಕ ಕ್ಷೇತ್ರದಲ್ಲಿ ಎಂದು ನಾವು ತಿಳಿಯಬಹುದಾಗಿದೆ. ಧಾರ್ಮಿಕ ರಂಗದಲ್ಲಿಯೂ ಧ್ವಜಪೂಜೆಯುಂಟು. ಪ್ರಾಚೀನಕಾಲದಿಂದಲೂ ನಡೆದುಬಂದ ಈ ರಾಷ್ಟ್ರಭಕ್ತಿಯ ಸಂಕಲ್ಪದ ಈ ಕಾರ್ಯ ಸದಾ ನಡೆಯುತ್ತಿರಲಿ, ಗಾಂಧೀಜಿ ನಮಗಿತ್ತ ಸ್ವಾತಂತ್ರ್ಯ ಮತ್ತು ಈ ಧ್ವಜದ ಮಾನ-ಮರ್ಯಾದೆ ಕಾಪಾಡಲು ನಾವು ಕಂಕಣಬದ್ಧರಾಗಿರೋಣ. " ಬಳಿಕ ಆಭಾರ ಮನ್ನಣೆಯಾದ ನಂತರ ಕಾರ್ಯಕ್ರಮವು ಕೊನೆಗೊಂಡಿತು.

ವಿಜಾಪುರ ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳ ಕಲೋದ್ಯಮಗಳ ಪ್ರದರ್ಶನ.

೧೦-೧೦-೧೯೫೪.

ವಿಜಾಪುರ ಜಿಲ್ಹೆಯ ಶಿಕ್ಷಣಾಧಿಕಾರಿಗಳು ಏರ್ಪಡಿಸಿದ ಜಿಲ್ಹೆಯ ಎಲ್ಲ ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳ ಕಲೋದ್ಯಮಗಳ ವಸ್ತುಪ್ರದರ್ಶನದ ಉದ್ಘಾಟನಾ ಸಮಾರಂಭವು ೧೦-೧೦-೧೯೫೪ನೆಯ ದಿವಸ ಸಂಜೆಯ ೫ ಗಂಟೆಗೆ ವಿಜಾಪುರದ ಸರಕಾರೀ ಒಕ್ಕಲತನದ ಮಾಧ್ಯಮಿಕ ಶಾಲೆಯಲ್ಲಿ ನಿಂಬಾಳದ ಪೂಜ್ಯ ಡಾ. ಆರ್. ಡಿ. ರಾನಡೆ ಅವರ ಅಮೃತಹಸ್ತದಿಂದ ವಿಜೃಂಭಣೆಯಿಂದ ನೆರವೇರಿತು. ಸಮಾರಂಭಕ್ಕೆ ಸಾವಿರಕ್ಕೆ ಮೇಲ್ಪಟ್ಟು ನಾಗರಿಕರು ಉಪಸ್ಥಿತರಿದ್ದರು.

ಪ್ರದರ್ಶನದ ಉದ್ಘಾಟನೆಯನ್ನು ಮಾಡಿ ಡಾ. ಆರ್. ಡಿ. ರಾನಡೆಯವರು ತಮ್ಮ ಬಾಲ್ಯದ ಸವಿ ನೆನಹುಗಳನ್ನು ನೆನೆದು ಆಗಿನ ಶಿಕ್ಷಣ ಪದ್ಧತಿಯನ್ನು ವಿವರಿಸಿ " ವಿಜಾಪುರವು ಮೊದಲಿನಿಂದಲೂ ಅಧ್ಯಾತ್ಮ ಕೇಂದ್ರವಾಗಿದೆ. ಅಲ್ಲದೆ ಇಂದಿಗೂ ಆಗ ಕಂಡ ಬೆಳಕನ್ನು ಕಾಯ್ದುಕೊಂಡು ಬಂದಿದೆ. ನಾನು ಭಾರತದ ಎಲ್ಲ ಅನುಭಾವಿಗಳ ಅನುಭವಗಳ ವಿವಿಧಾಂಗಗಳನ್ನು ಅಭ್ಯಸಿಸಿದ್ದೇನೆ, ಅದರಲ್ಲಿ ಕರ್ನಾಟಕದ ಆಧ್ಯಾತ್ಮವಾದಿಗಳ, ಅನುಭಾವಿಗಳ ತತ್ವಜ್ಞಾನವು ಉಚ್ಚತಮವಾದುದು." ಎಂದು ಹೇಳಿ ತಾವು ಈ ದಿಶೆಯಲ್ಲಿ ಒಂದು ಗ್ರಂಥವನ್ನು ಬರೆಯುತ್ತಿರುವದಾಗಿ ತಿಳಿಸಿದರು. ಡಾ. ರಾನಡೆಯವರು ಹೊಸ ಶಿಕ್ಷಣವನ್ನೂ ಮತ್ತು ಅದು ಪ್ರದರ್ಶನ ಮತ್ತು ಚಟುವಟಿಕೆಗಳ ಮುಖಾಂತರ ಕಲಿಸುತ್ತಿರುವ ರೀತಿಯನ್ನು ಬಹುವಾಗಿ ಪ್ರಶಂಸನೆಯನ್ನು ಮಾಡಿದರು. ಅವರು ಪ್ರದರ್ಶನಕ್ಕೆ ಇಡಲಾದ ವಸ್ತುಗಳ ಗುಣವನ್ನೂ ಪ್ರಮಾಣವನ್ನೂ ನೋಡಿ ಮೆಚ್ಚಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಪ್ರಾರಂಭದಲ್ಲಿ ವಿಜಾಪುರದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಶ್ರೀ. ಸಿ. ಎಸ್. ಬೆನ್ನೂರ ಅವರು ಡಾ. ರಾನಡೆಯವರನ್ನು ಮತ್ತು ಇನ್ನುಳಿದ ಸಭಿಕರನ್ನು ಸ್ವಾಗತಿಸಿ ಈ ಪ್ರಕಾರ ಹೇಳಿದರು.

" ಗುರುವರ್ಯರಾದ ಡಾ. ರಾನಡೆಯವರ ಪರಿಚಯ ಮಾಡಿಕೊಡುವದು ಧೈರ್ಯದ ಮಾತೆ ಸರಿ. ಸಮಗ್ರ ಭಾರತದಲ್ಲಿ ಅವರು ವಿಖ್ಯಾತರಾಗಿದ್ದಾರೆ. ನಮ್ಮ ಸನಿಹದಲ್ಲಿರುವ ಇವರ ಪರಿಚಯವೇ ನಮ್ಮಲ್ಲಿ ಎಷ್ಟೋ ಜನರಿಗೆ ಇಲ್ಲ. ಇವರು ಜಮಖಂಡಿಯವರು. ರಾಮತೀರ್ಥದ ಶ್ರೀರಾಮನ ಅನುಗ್ರಹದಿಂದ ಜನಿಸಿ ಬಂದವರು. ಮಹಾ ಭಾಗವತರು. ಮಹಾ ತತ್ವವೇತ್ತರು. ಜಮಖಂಡಿಯ ದಿವ್ಯ ವಾತಾವರಣವು ಇವರಲ್ಲಿ ಆಧ್ಯಾತ್ಮದ ಜಾಗ್ರತೆಯನ್ನು ಚಿಕ್ಕಂದಿನಲ್ಲಿಯೇ ಮಾಡಿತು. ಅದು ಈಗ ಮರವಾಗಿ ತನ್ನ ಸವಿ ಫಲಗಳನ್ನು ಜಗತ್ತಿಗೆ ಕೊಟ್ಟಿದೆ.

" ನಮ್ಮ ಶಿಕ್ಷಣವು ಸಬಲವಾಗಬೇಕಾದರೆ ಅದು ಅಧ್ಯಾತ್ಮದಿಂದ ಕೂಡಬೇಕು. ಡಾ. ರಾನಡೆಯವರಂತಹ ವಿಭೂತಿಗಳಿಂದಲೇ ನಮ್ಮ ಭಾರತವು ಜಗತ್ತಿನಲ್ಲಿ ಬೆಳಗುತ್ತಿರುವದು. ಬುದ್ಧ, ಬಸವ, ಅರವಿಂದ, ನಾನಕ, ಗಾಂಧಿ, ಮತ್ತು ರಾನಡೆಯವರಂತಹ ತತ್ವವೇತ್ತರ ವಿಚಾರಗಳು ಜಗತ್ತಿಗೆ ಬೆಳಕು ತೋರಿವೆ." ಎಂದು ಹೇಳಿ ಡಾ॥ ರಾನಡೆಯವರಿಗೆ ಭಾಷಣ ಮಾಡಲು ಕೇಳಿಕೊಂಡರು.

ಕೊನೆಗೆ ವಿಜಾಪುರದ ಡೆ। ಎ। ಇನಸ್ಪೆಕ್ಟರರಾದ ಶ್ರೀ. ವಾಯ್. ಬಿ. ಯರಗಲ್ ಅವರಿಂದ ಆಭಾರ ಮನ್ನಣೆಯಾದನಂತರ ರಾಷ್ಟ್ರಗೀತೆಯೊಂದಿಗೆ ಸಭಾಕಾರ್ಯವು ಮುಕ್ತಾಯವಾಯಿತು.

ರಾತ್ರಿ ಮನರಂಜನೆಯ ಕಾರ್ಯಕ್ರಮಗಳು ಜರುಗಿದವು.

Regd. No. B. 5371

ಹೊಸ ಪುಸ್ತಕಗಳು ! ※ ಹೊಸ ಅಭ್ಯಾಸ ಪತ್ರಿಕೆಯಂತೆ

ಸರಕಾರದವರು ೧೯೫೨-೧೯೫೩ನೆಯ ಸಾಲಿನಿಂದ ಪಠ್ಯ(TEXT) ಪುಸ್ತಕಗಳೆಂದು ಮಂಜೂರು ಮಾಡಿದ್ದಾರೆ.

ಗಣಿತ ಬೋಧೆ

(೪ ರಿಂದ ೭ನೆಯ ಇಯತ್ತೆಯ ವರೆಗೆ ಬೇರೆ ಬೇರೆಯಾಗಿ)

ತಜ್ಞ ಹಾಗು ಅನುಭವಿಕ ಪಂಡಿತರಿಂದ ಈಗಿನ ಹೊಸ ಅಭ್ಯಾಸ ಪತ್ರಿಕೆಗನುಸರಿಸಿ ಈ ಎಲ್ಲ ಪುಸ್ತಕಗಳು ಆಯಾ ತರಗತಿಗಳಿಗೆ ಬರೆಯಲ್ಪಟ್ಟಿವೆ ಹಾಗು ಗಣಿತದ ಎಲ್ಲ ವಿಷಯಗಳ ವಿವೇಚನೆಯು ಸರಿಯಾಗಿ ಮಾಡಲ್ಪಟ್ಟಿವೆ.

ಈ ವರೆಗೂ ಯಾವ ಗಣಿತಗಳಲ್ಲಿಯೂ ಸ್ಪಷ್ಟವಾಗಿ ವಿವೇಚಿಸಲ್ಪಡದ ಹಾಗು ಬಾಲಕರಿಗೆ ಕಠಿಣವೆನಿಸುವ **ಅಪೂರ್ಣಾಂಕ ಸಮ-ವ್ಯಸ್ತ ತ್ರೈರಾಶಿಕ, ಪ್ರಮಾಣ ಭಾಗ, ದಶಾಂಶ ಅಪೂರ್ಣಾಂಕ, ಶತಮಾನ,** ಮುರುಕೊಳ್ಳುವ ಬಡ್ಡಿ, ರೋಖು-ಉದ್ರೀ ವ್ಯವಹಾರ, ಹೋಬಿಲಾಕೆ, **ಕ್ಷೇತ್ರಫಲ, ಘನಫಲದ** ನಿಯಮಗಳು, ವೇಳೆ-ಕೆಲಸ-ವೇಗ, ಭೂಮಿತಿ, ರೇಖಾರೂಪ (ಗ್ರಾಫ), ಪ್ರವಾಸದ ನಕ್ಷೆ, **ಭೂಮಾಪನದ** ವಿಷಯ ಬೀಜಗಣಿತ ಇವೇ ಮೊದಲಾದ ವಿಷಯಗಳ ವಿವರಣೆಯು ಆಯಾ ಗಣಿತ ಬೋಧೆಗಳಲ್ಲಿ ಚಿತ್ರ, ಉಪಕರಣಗಳೊಂದಿಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಸುಲಭವಾಗಿ ಮನನವಾಗುವಂತೆ ವಿವರಿಸಲಾಗಿದೆ. ಇದರೊಳಗಿನ ಉದಾಹರಣೆಗಳು ವ್ಯವಹಾರಕ್ಕೆ ಸಂಬಂಧಿಸಿದವುಗಳೂ ಗಣಿತ ವಿಷಯದಲ್ಲಿ ಅಭಿರುಚಿಯನ್ನು ಹುಟ್ಟಿಸುವಂಥವೂ ಇದ್ದು ಸುಲಭವಾದ ಶೈಲಿಯಲ್ಲಿ ಕೊಡಲ್ಪಟ್ಟಿವೆ.

ಕರ್ನಾಟಕ ಕಾಲೇಜದ ನಿವೃತ್ತ ಗಣಿತ ಪ್ರಾಧ್ಯಾಪಕರಾದ ಶ್ರೀಮಾನ್ **ಬಿ. ಬಿ. ಬಾಗಿಯವರು** ಶಿಕ್ಷಣದಲ್ಲಿ ನುರಿತ ಹಾಗೂ ಮುಂಬೈ ಮೇಲ್ಮನೆಯ ಸದಸ್ಯರಾದ ಶ್ರೀಮಾನ್ **ಎಚ್. ಎಫ್. ಕಟ್ಟಿಮನಿಯವರೂ** ಇವುಗಳನ್ನು ಓದಿ ಇವುಗಳಲ್ಲಿ ಪ್ರತಿಯೊಂದು ಪ್ರಮೇಯದ ವಿವರಣೆಯನ್ನು ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಮನದಟ್ಟಾಗುವ ರೀತಿಯಲ್ಲಿ ಕ್ರಮಬದ್ಧವಾಗಿಯೂ ತರ್ಕಶುದ್ಧವಾಗಿಯೂ ಮಾಡಲಾಗಿದೆ

माता का उपदेश— १, २ (ನನ್ನ ತಾಯಿಯ ಹಿಂದೀ ಸಂಸ್ಕರಣ) ಸಿದ್ಧವಾಗಿವೆ

नीति कथा— १, २, ३ (ನಾಡದ ನೆಲೆಗಾರ ಹಿಂದೀ ಸಂಸ್ಕರಣ) ಅಚ್ಚಿನಲ್ಲಿ!

ಹಿಂದಿ ವ್ಯಾಕರಣ— (ಅಚ್ಚಿನಲ್ಲಿ)

ಕನ್ನಡ ಸಾಹಿತ್ಯ ಪ್ರಕಾಶನ,
ಧಾರವಾಡ

Printed by M.A. Kamat, B.Sc. at Jai Hind Art Press Dharwar. Edited and Published by S. P. Patil B. M. Shintri, S. R Tatti, & Smti. P. A. Bhaskar. at the Kannada Prathamik Shikshan Office, Govt. Training College for Men. Dharwar.

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು:—ಶ್ರೀ. ಎಸ್. ಪಿ. ಪಾಟೀಲ

ವಂತಾ ೪ ರೂ.] ಡಿಸಂಬರ ೧೯೫೪ [ಬಿಡಿ ಪ್ರ. ೬ ಆಣೆ

ಕನ್ನಡ ಪ್ರಾಥಮಿಕ ಶಿಕ್ಷಣ

17/12/54

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಕೆ. ಬಿ. ಕೇರಗಾಂವಕರ, ಬಿ. ಎಸ್ ಸಿ., (ಆನರ್ಸ) ಬಿ. ಟಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ. ಎಸ್. ಪಿ. ಪಾಟೀಲ ಬಿ. ಎ., ಬಿ. ಟಿ., ಡಿ. ಪಿ. ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಸಹಸಂಪಾದಕರು.

ಶ್ರೀ. ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೪	ಡಿಸೆಂಬರ ೧೯೫೪	ಸಂಚಿಕೆ ೭

ಪರಿವಿಡಿ

೧. ಸಮಾಜ ಶಿಕ್ಷಣ ತರಬೇತಿ ವರ್ಗ, ಧಾರವಾಡ (ವರದಿ) ೨

೨. ಸಂಪಾದಕೀಯ ೩

೩. ಹಳ್ಳಿಗಾಡಿನಲ್ಲಿಯ ಸಂಚ ಶಾಲೆಗಳ ಶಿಕ್ಷಕರಿಗಾಗಿ ಸೂಚನೆಗಳ ಕೈಪಿಡಿ
(೧ನೇ ಪ್ರಕರಣ)—ಶ್ರೀ. ಶಿಂತ್ರಿ ಬಸಪ್ಪನವರು ೫

೪. ಕೇಶಿರಾಜನ ಹಳಗನ್ನಡ ವ್ಯಾಕರಣ (ಹಿಂದಿನ ಸಂಚಿಕೆಯಿಂದ)—ಶ್ರೀ. ತಟ್ಟಿ ಶ್ಯಾಮರಾಯರು ೭

೫. ದಿವಂಗತರಾದ ಸರದಾರ ವಲ್ಲಭಭಾಯಿ ಪಟೇಲ —ಶ್ರೀ. ಶಿಂತ್ರಿ ಬಸಪ್ಪನವರು ೯

೬. ಮಹರ್ಷಿ ಸುಕರಾತ —ಶ್ರೀ. ಎಲ್. ಬಿ. ದೇಸಾಯಿ ೧೩

೭. ಸಂಸ್ಕೃತ ಸೂತ್ರಗಳಲ್ಲಿ ಬರೆದ ಕನ್ನಡ ವ್ಯಾಕರಣ —ಶ್ರೀ. ತಟ್ಟಿ ಶ್ಯಾಮರಾಯರು ೧೭

೮. ಹೊಸ ಪಾಠ್ಯಕ್ರಮದಲ್ಲಿಯ ಹಿಂದೀಯ ಸ್ಥಾನ —ಶ್ರೀ. ಗಣಪ್ರಸಾದ ಸಿಂಹ ೧೯

೯. ವೃತ್ತಿಮೂಲ ಶಿಕ್ಷಣಕ್ಕೆ ಆಧಾರಭೂತವಾದ
ಮಾನಸ ಶಾಸ್ತ್ರದ ತತ್ವಗಳು—ಶ್ರೀ. ಜಿ. ಎಸ್. ಗಲಗಲಿ ೨೨

೧೦. ವಿಶೇಷ ಪ್ರಕಟನೆಗಳು ೨೭

೧೧. ಪ್ರಾಥಮಿಕ ಶಿಕ್ಷಣ ಪ್ರಪಂಚ ೨೯

— ಸಮಾಜಶಿಕ್ಷಣ ತರಬೇತಿ ವರ್ಗ ಧಾರವಾಡ —

(ದಿ. ೧೮-೧೦-೫೪ ರಿಂದ ೩೧-೧೦-೫೪ ಪೂರ್ಣ)

ಈ ಸಲ ಸಮಾಜ-ಶಿಕ್ಷಣ-ತರಬೇತಿ ವರ್ಗವು ದಿ. ೧೮-೧೦-೫೪ ರಂದು ಶ್ರೀ ಮುಧೋಳಕರ, ಮುಖ್ಯಾಧ್ಯಾಪಕರು, ಕೆ. ಇ. ಬೋರ್ಡ್ಸ ಹಾಯಸ್ಕೂಲ, ಧಾರವಾಡ ಅವರ ಅಮೃತಹಸ್ತದಿಂದ ನಮ್ಮ ಕಾಲೇಜದಲ್ಲಿ ಪ್ರಾರಂಭಿಸಲ್ಪಟ್ಟಿತು. ಈ ತರಬೇತಿಗೆ ಧಾರವಾಡ ಜಿಲ್ಲೆಯ ಲೋಕಲ್ ಬೋರ್ಡ್ ಶಿಕ್ಷಕರು ೩೨ ಜನ, ಗಾಮಠಶಾಲಾ ಶಿಕ್ಷಕರು ಹಾಗೂ ಕೆಲವು ಸ. ಶಿ. ಕಾರ್ಯಕರ್ತರು ಕೂಡಿ ೨೭ ಜನ, ಒಟ್ಟು ೫೯ ಜನರು ಬಂದಿದ್ದರು. ಇವರನ್ನು ಅ. ಬ. ಎರಡು ವರ್ಗಗಳಾಗಿ ವಿಭಗಿಸಿ ಶಿಕ್ಷಣವು ಕೊಡಲ್ಪಟ್ಟಿತು.

ನಿತ್ಯದ ಕಾರ್ಯಗಳು—ಮುಂಜಾನೆ ೭-೩೦ಕ್ಕೆ ಸರಿಯಾಗಿ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗಿ ಸಂಜೆ ೭ ಘಂಟೆಗೆ ಪ್ರಾರ್ಥನೆಯೊಂದಿಗೆ ಮುಗಿಯುತ್ತಿತ್ತು.

ನಮ್ಮ ಈ ತರಬೇತಿಯ ವರ್ಗಗಳು ಅಲ್ಪಾವಧಿಯವು ಅಂದರೆ ಕೇವಲ ಎರಡೇ ವಾರಗಳ ವರೆಗೆ ನಡೆಯುವವಿದ್ದರೂ ಕಾರ್ಯಕರ್ತರು ಸಂಘಟನಾಬದ್ಧವಾಗಿ ಯಾವತ್ತೂ ಕಾರ್ಯಗಳನ್ನು ಮಾಡುತ್ತಿದ್ದರು. ಕಾರ್ಯಕರ್ತರಲ್ಲಿ ಮಂತ್ರಿಮಂಡಳವನ್ನು ರಚಿಸಿಕೊಂಡು ಆ ಮಂತ್ರಿಮಂಡಳದವರಿಂದ ವರ್ಗಗಳ ಯಾವತ್ತೂ ಕಾರ್ಯಕಲಾಪಗಳು ಸಾಗಿಸಲ್ಪಡುತ್ತಿದ್ದವು. ಸಂಚಾಲಕರೂ ವರ್ಗಗಳ ಬೋಧಕ ಗುರುಗಳೂ ಎಲ್ಲ ಕಾರ್ಯಕಲಾಪಗಳಲ್ಲಿ ಯಾವಾಗಲೂ ಇರುವವರಾಗಿದ್ದರು. ಅವಶ್ಯವಿದ್ದಾಗ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು ಪ್ರತಿದಿನ ಪ್ರಾರ್ಥನೆಯ ತರುವಾಯ ಮುಂಜಾನೆ ಪಂಚಾಂಗ, ಅಮರವಾಣಿ, ಸುದ್ದಿಗಳನ್ನು ಬೇರೆ ಬೇರೆ ಶಿಕ್ಷಕ-ವಿದ್ಯಾರ್ಥಿಗಳು ಹೇಳುತ್ತಿದ್ದರು. ತರುವಾಯ ವಾಸಿಸುವ ಕೋಣೆಗಳ ಮತ್ತು ಕಾಲೇಜದ ಆವಾರದ ಸ್ವಚ್ಛತೆ ಮಾಡಿ ಕಸವನ್ನು ತಬ್ಬೆಯಲ್ಲಿ ಹಾಕುತ್ತಿದ್ದರು. ತರುವಾಯ ಮುಂಜಾನೆ ಎರಡು ವ್ಯಾಖ್ಯಾನಗಳೂ ಸಂಜೆಗೆ ಎರಡಾಗಲಿ ಹೆಚ್ಚಾಗಲಿ ವ್ಯಾಖ್ಯಾನಗಳೂ ಮಾದರಿ ಪಾಠವೂ ಮನರಂಜನೆಯ ಕಾರ್ಯಕ್ರಮಗಳೂ ನಡೆಯುತ್ತಿದ್ದವು. ಪ್ರತಿದಿನ ಮುಂಜಾನೆ ಅರ್ಧತಾಸು ಮೌನಕತಾಯಿ ಹಾಗೂ ಒಕ್ಕಲುತನದ ಕೆಲಸ ಇರುತ್ತಿತ್ತು. ಒಟ್ಟಿಗೆ ೨॥ ಪೌಂಡ ಹಂಜಿಯನ್ನು ನೂಲಲಾಗಿದೆ. ಈ ಅವಧಿಯಲ್ಲಿ ೨ ಕಾಂಪೋಸ್ಟ ಗೊಬ್ಬರ ಕುಣಿ ತುಂಬಲಾಗಿದೆ. ೨೦೦ ಟೊಮ್ಯಾಟೋ ಅಗಿ ಹಚ್ಚಲಾಗಿದೆ. ಕಳೆತಗೆಯಲಾಗಿದೆ. ಶಿಕ್ಷಕರು ಧಾರವಾಡದಲ್ಲಿ ಮತ್ತು ಧಾರವಾಡದ ಅಕ್ಕಪಕ್ಕಗಳಲ್ಲಿಯ ಶೈಕ್ಷಣಿಕ ಸಂಸ್ಥೆಗಳನ್ನು ಸಂದರ್ಶಿಸಿ ಬಂದರು.

ಈ ವರ್ಗಗಳ ಸಂಚಾಲಕರು, ಶ್ರೀ. ಎಸ್. ಪೀ. ಪಾಟೀಲ, ಪ್ರಿನ್ಸಿಪಾಲ, ಸ. ಗಂ. ಟ್ರೇ. ಕಾಲೇಜ ಧಾರವಾಡ. ಭೋಧಕರು: ಶ್ರೀ. ಎಸ್. ಎಮ್. ಹಳ್ಳಿಕೇರಿ, (೨) ಆಯ್. ಎಸ್. ಬಿದರಿ, (೩) ಇ. ಆರ್. ರಾವುತ ಇವರು ಇದ್ದರು.

ಇದಲ್ಲದೆ ಪ್ರಾಕ್ಟಿಸಿಂಗ ಸ್ಕೂಲಿನ ಪೆನಶನ್ ಮಾಸ್ತರರಾದ ಶ್ರೀ. ಕುಂಬಾರರು ಹೂವುಗಳನ್ನು ಕತ್ತರಿಸುವದು, ಪಟಗಳನ್ನು ಬರೆಯುವದು ಮುಂತಾದ ಕೈಕೆಲಸಗಳನ್ನೂ ಗಂ. ಸರಕಾರೀ ಕಾಲೇಜದ ಸಂಗೀತ ಶಿಕ್ಷಕರಾದ ಶ್ರೀ. ಜಮಾಲಖಾನ ಸಣ್ಣಕ್ಕಿ ಇವರು ೩-೪ ದಿನ ತಮ್ಮ ಸಮಯವನ್ನು ಈ ವರ್ಗಕ್ಕಾಗಿ ಸಲ್ಲಿಸಿ ಪ್ರಾರ್ಥನೆಯ ಪದಗಳನ್ನೂ ಕಲಿಸಿದರು

ಶ್ರೀ. ವಾ. ರಾ. ಮುಧೋಳಕರ, ಪ್ರೋ. ಹುಕ್ಕೇರಿ, ಸರ್ವ ಶ್ರೀ. ಆರ್. ಕೆ. ಮಣಶಿ, ಗಜೇಂದ್ರಗಡ ಶ್ಯಾಮರಾಯರು, ಚಿಪ್ರೆಸಾಹೇಬ(ಮಾಮಲೇದಾರ), ಆರ್.ಎ. ಹಿರೇಮಠ, ಎಸ್ ಎಚ್. ಪಾಟೀಲ, ಕಟಗೀಹಳ್ಳಿಮಠ, ಎಸ್. ಬಿ ಪಾಟೀಲ, ಜಿ. ಎಮ್. ಪಾಟೀಲ, ಎಚ್. ಎಸ್ ಪ್ಯಾಟಿ, ಮಗದುಮ್, ಹುಕ್ಕೇರಿ ಬಾಳಪ್ಪನವರು; ಸಂಜೀವರಾವ ಕಲ್ಲಾಪೂರ, ಪ್ರೋ. ಪಲ್ಲೇದ ಅವರು ತರಬೇತಿ ಹೊಂದಲು ಬಂದವರಿಗೆ ಉಪಯುಕ್ತವಾದ ವಿಷಯಗಳನ್ನು ಕುರಿತು ಭಾಷಣಮಾಡಿದರು.

ಈ ರೀತಿಯಾಗಿ ಈ ಸಮಾಜಶಿಕ್ಷಣ ತರಬೇತಿಯು ಸಾಕಷ್ಟು ವಿಷಯ ಜ್ಞಾನಪೂರಿತವಾಗಿ ವಿವಿಧ ಕಾರ್ಯಕ್ರಮಗಳಿಂದ ಕೂಡಿದುದಾಗಿ ಹೀಗೆ ಯಶಸ್ವಿಯಾಗಿ ಜರುಗಿತೆಂದು ಹೇಳಬಹುದು. ಹೀಗೆ ಯಶಸ್ವಿಯಾಗಿ ಸಾಗಲಿಕ್ಕೆ ಕಾರಣರಾದ ಧಾರವಾಡ ಜಿಲ್ಲೆಯ ಶಿಕ್ಷಣಾಧಿಕಾರಿಗಳಿಗೂ ಮತ್ತು ಬೇರೆ ಬೇರೆ ವ್ಯಾಖ್ಯಾನಕಾರರಿಗೂ ನಮ್ಮ ಹಾರ್ದಿಕ ಕೃತಜ್ಞತೆಗಳನ್ನು ಅರ್ಪಿಸಿ ಈ ಸಂಕ್ಷಿಪ್ತ ವರದಿಯನ್ನು ಒಪ್ಪಿಸುತ್ತೇನೆ.

ಧಾರವಾಡ
೩೧-೧೦-೫೪ } —ಎಸ್. ಎಮ್. ಹಳ್ಳಿಕೇರಿ

ಸಂಪಾದಕೀಯ

ಸಮಾಜ ಶಿಕ್ಷಣ ದಿನಾಚರಣೆ :

ದಿನಾಂಕ ೧-೧೨-೫೪ ರಂದು ಎಲ್ಲ ಕಡೆಗೂ ಸಮಾಜ ಶಿಕ್ಷಣ ದಿನಾಚರಣೆ ನಡೆದಿರಲು ಸಾಕು. ಸಾಮಾನ್ಯವಾಗಿ ವಿದ್ಯಾರ್ಥಿಗಳ ಮೆರವಣಿಗೆ, ಹರಿಜನಕೇರಿಗಳಲ್ಲಿ ಸಫಾಯಿ ಕಾರ್ಯ, ಸಾರ್ವಜನಿಕ ಸಭೆ ಹಾಗು ನಿಧಿ ಸಂಗ್ರಹ ಇವೇ ಮೊದಲಾದವುಗಳು ಅಂದಿನ ಕಾರ್ಯಕ್ರಮದ ಮುಖ್ಯ ಭಾಗಗಳಾಗಿರಬಹುದು. ಪ್ರಜಾಪ್ರಭುತ್ವವಿದ್ದ ಕಡೆಗೆಲ್ಲ ಪ್ರತಿಯೊಬ್ಬ ನಾಗರಿಕನು ಮೊಟ್ಟಮೊದಲು ತಾನಿರುವ ದೇಶ ಕಾಲ ಪರಿಸ್ಥಿತಿಗಳಿಗನುಸಾರವಾಗಿ ಉದ್ಭವಿಸುವ ಸಮಸ್ಯೆಗಳ ಬಗ್ಗೆ ತನ್ನದೇ ಆದ ಅಭಿಪ್ರಾಯವನ್ನು ವ್ಯಕ್ತಮಾಡಲಿಕ್ಕೂ ಕೊನೆಯವರೆಗೂ ಅದಕ್ಕೆ ಅಂಟಿಕೊಳ್ಳಲಿಕ್ಕೂ ಅವಶ್ಯವಾದ ಬೌದ್ಧಿಕಶಕ್ತಿ ಇಲ್ಲದಿರುವಲ್ಲಿ ಪ್ರಜಾಪ್ರಭುತ್ವದ ಗುರಿಯು ಸುಲಭವಾಗಿ ಸಾಧಿಸಲಾರದು. ಅಂತೆಯೇ ನಮ್ಮ ದೇಶದ ಕೇಂದ್ರ ಹಾಗು ರಾಜ್ಯ ಸರಕಾರಗಳು ಈ ದಿಸೆಯಲ್ಲಿ ಮುಂದೆ ಬಂದಿವೆ. ಈ ಕಾರ್ಯದ ಬಹು ಭಾಗವು ಪ್ರಾಥಮಿಕ ಶಿಕ್ಷಕರ ಮೇಲೆಯೇ ಬಿದ್ದಿರುವದು. ಜ್ಞಾನಪ್ರಸಾರದ ಕಾರ್ಯದಲ್ಲಿ ಅವರ ಪಾತ್ರವು ಅಮೋಘವಾಗಿದೆಯಾದರೂ ಅವರ ನೆರವಿಗೆ ಸಮಾಜದ ಇನ್ನುಳಿದ ಸುಶಿಕ್ಷಿತರೂ ನೌಕರರೂ, ವ್ಯಾಪಾರಿಗಳೂ, ವಕೀಲರೂ, ಡಾಕ್ಟರರೂ, ಮಾಧ್ಯಮಿಕ ಶಾಲೆ ಕಾಲೇಜುಗಳೂ, ಸಂಘ ಸಂಸ್ಥೆಗಳೂ ಬಂದರೆ ಒಳ್ಳೇದೆಂದು ಬೇರೆ ಹೇಳಬೇಕಾಗಿಲ್ಲ.

ಶಾರೀರಿಕ ಶಿಕ್ಷಣದ ದಿನಾಚರಣೆ :—

ಈ ತಿಂಗಳ ದಿನಾಂಕ ೨, ೩, ಹಾಗು ೪ ರಂದು ರಾಜ್ಯದ ಎಲ್ಲ ಕಡೆಗೆ ಶಾರೀರಿಕ ಶಿಕ್ಷಣ ದಿನಾಚರಣೆ ನಡೆಯಿತು. ಪ್ರತಿವರುಷದ ಈ ಮೂರು ದಿನಗಳಲ್ಲಿ ಸಣ್ಣ ದೊಡ್ಡ ಆಟಗಳೂ ಸಾಂಘಿಕ ಪಂದ್ಯಾಟಗಳೂ ಸಾಮೂಹಿಕ ಪ್ರದರ್ಶನಗಳೂ ನಡೆಯುವದು ಸಾಮಾನ್ಯವಾಗಿದೆ. ಇದರಲ್ಲಿಯೂ ಸಹ ಪಾಲಕರ ಹಾಗು ಉಳಿದವರ ಸಹಾಯ ಸಹಾನುಭೂತಿಗಳು ಅತ್ಯಗತ್ಯ. ದೇಹ ಹಾಗು ಮನಸ್ಸುಗಳು ಬೇರೆಂಬ ಕಲ್ಪನೆ ತಪ್ಪಾದ್ದೆಂದೂ, ಅವೆರಡೂ ಪರಸ್ಪರ ಪರಿಣಾಮಕಾರಕವಾಗಿವೆಯೆಂದೂ ಒಂದನ್ನಳಿದು ಮತ್ತೊಂದನ್ನು ಬೆಳೆಸುವದು ನಿಜವಾದ ಶಿಕ್ಷಣವಲ್ಲದೆಂದೂ ಮಕ್ಕಳ ಶಿಕ್ಷಣದ ಹೊಣೆಯನ್ನು ಹೊತ್ತವರೆಲ್ಲರೂ ತಿಳಿಯಬೇಕಾಗಿದೆ. ಜಟ್ಟಿ ಸಾಂಡೋಗಳನ್ನು ತಯಾರಿಸುವದಕ್ಕಿಂತ ಆರೋಗ್ಯವಂತರೂ, ಧೈರ್ಯಸ್ಥೈರ್ಯ ಉತ್ಸಾಹಗಳಿಂದ ತುಂಬಿದವರೂ, ಶಿಸ್ತು, ಸಹನೆ, ಸಂಘಟನೆಗಳಿಗೆ ಮೆಚ್ಚಿದವರೂ ಆದ ತರುಣ ತರುಣಿಯರನ್ನು ತಯಾರಿಸುವದೇ ಶಾರೀರಿಕ ಶಿಕ್ಷಣದ ಗುರಿಯಾಗಿದೆಂಬದನ್ನು ಶಿಕ್ಷಕರಾದ ನಾವು ಮರೆಯುವಂತಿಲ್ಲ.

ರಾಷ್ಟ್ರಾಧ್ಯಕ್ಷರ ೭೧ ನೆಯ ಜಯಂತಿ :

ಇದೇ ತಿಂಗಳ ದಿನಾಂಕ ೩ ರಂದು ನಮ್ಮ ರಾಷ್ಟ್ರಾಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರಿಗೆ ೭೦ ವರುಷಗಳು ತುಂಬಿದವು. ಅಂದು ಅವರಿಗೆ ಎಲ್ಲ ಕಡೆಯಿಂದಲೂ ಅಸಂಖ್ಯ ಶುಭ ಸಂದೇಶಗಳು ಬಂದಿರಬಹುದು. ಅವರ ಅಗಾಧ ಪಾಂಡಿತ್ಯ, ಅಪ್ರತಿಮ ತ್ಯಾಗ, ಅಮೋಘ ಸೇವೆ, ದಿವ್ಯ ವ್ಯಕ್ತಿತ್ವ ಹಾಗು ಅವರ ಸಾಧು ಜೀವನ ಇವೆಲ್ಲವುಗಳನ್ನು ಅರಿತವರಾದ ನಾವೆಲ್ಲರೂ ಇಂಥ ಶುಭ ದಿನಗಳು ಅವರಿಗೆ ಅನಂತವಾಗಿ ಬರಲೆಂದು ಪ್ರಾರ್ಥಿಸೋಣ.

ಧ್ವಜ ದಿನ :

ಸೋಮವಾರ ದಿನಾಂಕ ೭ ರಂದು ಹಿಂದುಸ್ತಾನದಲ್ಲೆಲ್ಲ ಧ್ವಜ ದಿನಾಚರಣೆ ನಡೆಯಿತು. ದೇಶದ ಒಳಗೂ ಹೊರಗೂ ಸೇವೆಯನ್ನು ಸಲ್ಲಿಸಿ ನಿವೃತ್ತರಾದ ಸೈನಿಕರ ಹಾಗು ಅವರ ಕುಟುಂಬಗಳ ಪರಿಸ್ಥಿತಿಯನು ಸುಧಾರಿಸುವದು ಹಾಗು ಸೈನ್ಯದಲ್ಲಿ ಈಗ ದುಡಿಯುತ್ತಿರುವವರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿಕೊಡುವದು ಧ್ವಜದಿನದ ಮುಖ್ಯ ಉದ್ದೇಶಗಳಾಗಿವೆ. ಯುದ್ಧ ನಡೆದಾಗ ಮಾತ್ರ ಸೈನಿಕರಿಗೆ ಪ್ರೀತಿ, ವಿಶ್ವಾಸ, ಗೌರವಗಳನ್ನು ತೋರಿಸಿ ಹೆಚ್ಚಿನ ಸೌಕರ್ಯಗಳನ್ನು ಒದಗಿಸಿದರೆ ಸಾಲದು. ಯುದ್ಧ ಮುಗಿದು ಲಕ್ಷಾವಧಿ ಸೈನಿಕರು ನಿವೃತ್ತರಾದಾಗ ಅವರ ಹಾಗು ಅವರ ಅವಲಂಬಿಗಳ ಹಿತ ಸಂರಕ್ಷಣೆ ಮಾಡಿದರೆ ಮಾತ್ರ ರಾಷ್ಟ್ರಕ್ಕೆ ಗಂಡಾಂತರ ಬಂದೊದಗಿದಾಗ ರಕ್ತ ಸುರಿಸಿ ಪ್ರಾಣತ್ಯಾಗ ಮಾಡಿಯಾದರೂ ರಾಷ್ಟ್ರ ಧ್ವಜವನ್ನು ಮೆರೆಯಿಸಲು

ಯುವಕರು ಮುಂದೆ ಬರುವರು. ಆದುದರಿಂದ ಪ್ರಧಾನಮಂತ್ರಿಗಳ ಕರೆಗೆ ಓ ಕೊಟ್ಟು ಎಲ್ಲರೂ ಮುಕ್ತ ಹಸ್ತದಿಂದ ಸಹಾಯ ನೀಡಿರಬಹುದೆಂದು ಆಶಿಸುತ್ತೇವೆ.

ಸರದಾರರ ಪುಣ್ಯ ಸ್ಮರಣೆ :

ನಾಲ್ಕು ವರುಷಗಳ ಹಿಂದೆ ದಿನಾಂಕ ೧೫-೧೨-೫೦ ರಂದು ತನ್ನ ಇನ್ನೊಬ್ಬ ವೀರ ಪುತ್ರನನ್ನು ಕಳೆಕೊಂಡ ಭಾರತಮಾತೆಯು ಧ್ವನಿ ಬಿದ್ದು, ಎದೆ ಒಡೆದು, ಕಣ್ಣುಗಳುಬಾತು ಎಲುವುಗಳು ಹೊರಬರುವಷ್ಟು ಕಣ್ಣೀರನ್ನು ಸುರಿಸಿದಳು. ಮಹಾತ್ಮರು ನಮ್ಮನ್ನಗಲಿ ಎರಡು ವರುಷ ತುಂಬುವ ಮೊದಲೇ ಸರದಾರರೂ ಸ್ವರ್ಗವಾಸಿಗಳಾದರು. ಇದೇ ದಿನಾಂಕ ೧೫ ರಂದು ಭಾರತದಲ್ಲೆಲ್ಲ ಅವರ ಪುಣ್ಯತಿಥಿಯು ಆಚರಿಸಲ್ಪಡುವದು. ಅವರೊಬ್ಬ ಮಹಾಮುತ್ಸದ್ದಿಗಳಾಗಿದ್ದರು. ಅದ್ವಿತೀಯ ಕರ್ತೃತ್ವಶಾಲಿಗಳು. ತಮ್ಮ ಪರಾಕ್ರಮದಿಂದಲೇ ಉನ್ನತ ಸ್ಥಾನಕ್ಕೆ ಏರಿದ ನವಭಾರತದ ನಾಯಕರು. ಇಂಥ ವೀರ ಪುರುಷನ ಸ್ಮರಣೆ ನಮಗೆಲ್ಲರಿಗೂ ಸ್ಫೂರ್ತಿ ಶಕ್ತಿ, ತ್ಯಾಗ ಹಾಗು ಸೇವಾ ಬುದ್ಧಿ-ಭಾವನೆಗಳನ್ನು ತರಲಿ.

ಮಹಾತ್ಮಾ ಏಸೂ ಕ್ರೈಸ್ತನ ಜಯಂತಿ —

ಇನ್ನು ೮-೧೦ ದಿನಗಳಲ್ಲಿ ಮಹಾನುಭಾವರಾದ ಏಸೂ ಕ್ರೈಸ್ತರ ಜಯಂತಿಯನ್ನು ಜಗತ್ತಿನ ಎಲ್ಲ ಭಾಗಗಳಲ್ಲಿ ಮುಖ್ಯವಾಗಿ ಕ್ರಿಶ್ಚಿಯನ್ನರು ಒಳ್ಳೇ ವಿಜೃಂಭಣೆಯಿಂದ ಆಚರಿಸುವರು. ನಮ್ಮ ಕ್ರೈಸ್ತ ಭಾಂಧವರಿಗೆ ಈ ನಾತಾಳ ಹಬ್ಬವು ಸುಖಮಯವಾಗುವ ಹೊಸ ವರುಷವನ್ನು ತರಲೆಂದು ಬಲವಾಗಿ ಬಯಸುತ್ತೇವೆ.

ಹೊಸವರುಷದ ಆಗಮನ —

ಇನ್ನೆರಡು ವಾರಗಳು ಗತಿಸಿದರೆ ೧೯೫೫ ರಲ್ಲಿ ಕಾಲಿಡುತ್ತೇವೆ. ಹೊಸ ವರುಷವು ಎಲ್ಲರಿಗೂ ಹುರುಪು ಹುಮ್ಮಸುಗಳನ್ನು ಹುಟ್ಟಿಸಲೆಂದೂ, ಸ್ಫೂರ್ತಿ-ಕೀರ್ತಿಗಳನ್ನು ತರಲೆಂದೂ, ಸುಖ-ಸೌಕರ್ಯಗಳನ್ನು ಒದಗಿಸಲೆಂದೂ, ಹಾಗು ಬಯಕೆ ಬೇಡಿಕೆಗಳನ್ನು ಪೂರೈಸಲೆಂದೂ ಹರುಷದಿಂದ ಹಾರೈಸುತ್ತೇವೆ.

ಕಂಬನಿ

ಮುಂಬಯಿ ರಾಜ್ಯದ ರಾಜ್ಯಪಾಲರಾದ ಶ್ರೀ. ಗಿರಿಜಾಶಂಕರ ವಾಜಪೇಯನವರು ದಿನಾಂಕ ೫-೧೨-೫೪ ರಂದು ಬೆಳಗಿನ ೨-೩೦ಕ್ಕೆ ತಮ್ಮ ನಿವಾಸದಲ್ಲಿ ನಿಧನಹೊಂದಿದರು. ಮೆದುಳಿನ ರಕ್ತಸ್ರಾವದಿಂದ ಅವರು ಮರಣಕ್ಕೀಡಾದರು. ಇವರ ಅಕಾಲಿಕ ಮರಣದಿಂದ ಒಬ್ಬ ಸಮರ್ಥ ಆಡಳಿತಗಾರ ಹಾಗು ಶ್ರೇಷ್ಠ ಮುತ್ಸದ್ದಿಯು ಕಣ್ಮರೆಯಾದಂತಾಯಿತು. ಅವರು ೧೯೧೪ರಲ್ಲಿ ಆಯ್. ಸಿ. ಎಸ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಸುಮಾರು ೪೦ ವರುಷಗಳ ವರೆಗೆ ಭಾರತ ಸರಕಾರದ ಬೇರೆ ಬೇರೆ ಶಾಖೆಗಳ ಜವಾಬ್ದಾರಿಯ ಹುದ್ದೆಗಳಲ್ಲಿ ದುಡಿದು ಸರಕಾರಕ್ಕೂ ಜನರಿಗೂ ಪ್ರಿಯರಾಗಿದ್ದರು. ಸ್ವಾತಂತ್ರ್ಯದ ಮೊದಲಿಗೂ, ನಂತರವೂ ಅಧಿಕಾರಾರೂಢರಾಗಿದ್ದವರೆಲ್ಲರಿಗೂ ಬೇಕಾಗಿದ್ದರು. ಸ್ವತಂತ್ರ ಭಾರತದ ವಿದೇಶ ಧೋರಣೆಯನ್ನು ರೂಪಿಸುವ ಕಾರ್ಯದಲ್ಲಿ ಶ್ರೀ ವಾಜಪೇಯವರು ಪ್ರಧಾನ ಮಂತ್ರಿಗಳಿಗೆ ಒಳ್ಳೆ ನಿಷ್ಠೆಯಿಂದ ನೆರವಾಗಿ, ವಿದೇಶ ಶಾಖೆಯನ್ನು ಸುವ್ಯವಸ್ಥಿತ ಹದಿಯ ಮೇಲೆ ಸಂಘಟಿಸಿದ ಕೀರ್ತಿಯು ಅವರದೇ. ಭಾರತ ಸರಕಾರದ ಪ್ರತಿನಿಧಿಯಾಗಿ ಅಂತರರಾಷ್ಟ್ರೀಯ ಸಂಸ್ಥೆ-ಸಭೆಗಳಲ್ಲಿ ಭಾರತದ ನಿಲುವೆಯನ್ನು ಸಮರ್ಥ ರೀತಿಯಲ್ಲಿ ಮಂಡಿಸಿದ ಶ್ರೇಯಸ್ಸೂ ಅವರದೇ. ಸುಸ್ವಭಾವಿಗಳೂ, ಹಾಸ್ಯಪ್ರಿಯರೂ, ಬಹು ಭಾಷಾ ಪಂಡಿತರೂ, ಜಟಿಲ ಸಮಸ್ಯೆಗಳನ್ನು ಕ್ಷಣದಲ್ಲಿಯೇ ಬಗೆಹರಿಸುವ ಕುಶಾಗ್ರ ಬುದ್ಧಿಯುಳ್ಳವರೂ ಆಗಿದ್ದ ಶ್ರೀ ವಾಜಪೇಯವರ ನಿಧನದಿಂದ ನಮ್ಮ ದೇಶಕ್ಕೆ ತುಂಬಲಾರದ ಹಾನಿಯಾಗಿದೆ. ಪರಮಾತ್ಮನ ಇಚ್ಛೆಯ ಮುಂದೆ ಯಾರ ಆಟವೂ ಸಾಗದು. ಆ ದಯಾಘನನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ಹಳ್ಳಿಗಾಡಿನಲ್ಲಿಯ ಸಣ್ಣ ಶಾಲೆಗಳ ಶಿಕ್ಷಕರಿಗಾಗಿ ಸೂಚನೆಗಳ ಕೈಪಿಡಿ

ಅನುವಾದಕರು:— ಶ್ರೀ. ಶಿಂತ್ರಿ ಬಸಪ್ಪನವರು, ಬಿ. ಎ. ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣಭಾಗ, ಧಾರವಾಡ.

[ಟೀಪು :— ಕೇಂದ್ರ ಸರಕಾರದ ಶಿಕ್ಷಣ ಶಾಖೆಯವರು ಮೇಲೆ ಹೇಳಿದ ಕೈಪಿಡಿಯೊಂದನ್ನು ಇದೇ ವರುಷ ಇಂಗ್ಲೀಷ ಭಾಷೆಯಲ್ಲಿ ಹೊರಡಿಸಿದ್ದಾರೆ. ಅದರಲ್ಲಿ ಅಡಕವಾಗಿರುವ ಸೂಚನೆಗಳು ಈ ನಮ್ಮ ಭಾಗದಲ್ಲಿಯ ಹಳ್ಳಿಗಾಡಿನ ಸಣ್ಣ ಸಣ್ಣ ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕ-ಶಿಕ್ಷಿಕೆಯರಿಗೆ ಒಳ್ಳೇ ಉಪಯುಕ್ತವಿವೆಯೆಂದು ಸಂಪಾದಕ ಮಂಡಲಕ್ಕೆ ಕಂಡುಬಂದಿದೆ. ಆದುದರಿಂದ ಒಂದೊಂದು ಪ್ರಕರಣವನ್ನು ಒಂದೊಂದು ಸಲ ಈ ನಮ್ಮ ಮಾಸಿಕದಲ್ಲಿ ಕೊಡುತ್ತ ಹೋಗಬೇಕೆಂದು ನಿರ್ಣಯಿಸಲಾಗಿದೆ. ಅದನ್ನು ಕನ್ನಡಿಸುವ ಹೊಣೆಯನ್ನು ಸಂಪಾದಕ ಮಂಡಲದ ಸದಸ್ಯರೋರ್ವರಾದ ಶ್ರೀ. ಬಿ. ಎಂ. ಶಿಂತ್ರಿಯವರು ವಹಿಸಿಕೊಂಡಿದ್ದಾರೆ. —ಪ್ರ. ಸಂ.]

೧ನೆಯ ಪ್ರಕರಣ

ಪೀಠಿಕೆ

ಹಳ್ಳಿಗಾಡದಲ್ಲಿಯ ಒಬ್ಬ-ಶಿಕ್ಷಕ-ಶಾಲೆ (Single teacher school) ಯು ಶಿಕ್ಷಣ ಕ್ಷೇತ್ರದಲ್ಲಿ ಆವಾಗಲೂ ಒಂದು ಸಮಸ್ಯೆಯೇ ಆಗಿ ಉಳಿದಿದೆ. ಈಗ ಭಾರತದಲ್ಲಿ ಸುಮಾರು ೭೦೦೦೦ ಒಬ್ಬ-ಶಿಕ್ಷಕ-ಶಾಲೆಗಳಿವೆ. ಸುಶಿಕ್ಷಿತರ ನಿರುದ್ಯೋಗದ ಪರಿಹಾರಕ್ಕಾಗಿಯೂ ವಿದ್ಯಾಪ್ರಸಾರವನ್ನು ಹೆಚ್ಚಿಸುವದಕ್ಕಾಗಿಯೂ ಸರಕಾರದವರು ೮೦೦೦೦ ಹೊಸ ಶಾಲೆಗಳನ್ನು ತೆರೆಯುವ ಯೋಜನೆಯೊಂದನ್ನು ಕೈಕೊಂಡಿದ್ದಾರೆ, ಅವುಗಳಲ್ಲಿ ಬಹಳಷ್ಟು ಶಾಲೆಗಳು ಒಬ್ಬ-ಶಿಕ್ಷಕ-ಶಾಲೆಗಳಿವೆ. ಆ ಒಬ್ಬ-ಶಿಕ್ಷಕ-ಶಾಲೆಗಳಿಂದ ಪರಿಣಾಮಕಾರಿಯಾದ ಶಿಕ್ಷಣ ಮಕ್ಕಳಿಗೆ ಲಭಿಸದಿದ್ದರೆ ಹಳ್ಳಿಗಾಡಿನ ಭಾವೀ ಶಿಕ್ಷಣದ ಬಗೆಗೆ ನಾವು ನಿರಾಶೆ ಪಡಬೇಕಾಗುವದು. ಯಾಕಂದರೆ, ಹೆಚ್ಚು ಹಿಂದುಳಿದ ಹಾಗೂ ಕಡಿಮೆ ಜನವಸತಿಯುಳ್ಳ ಪ್ರದೇಶಗಳಲ್ಲಿ ಶಿಕ್ಷಣ ಪ್ರಸಾರವನ್ನು ಕೈಕೊಳ್ಳುವದಾದರೆ, ಅದು ಒಬ್ಬ-ಶಿಕ್ಷಕ-ಶಾಲೆಗಳಿಂದಲೇ ಶಕ್ಯವಿದೆ. ನಮ್ಮ ರಾಷ್ಟ್ರದ ಈಗಿನ ಆರ್ಥಿಕ ದೃಷ್ಟಿಯಿಂದ ಬೇರೆ ತರಹದ ಶಾಲೆಗಳನ್ನು ತೆರೆಯುವದು ಶಕ್ಯವಿಲ್ಲದಾಗಿದೆ. ಯುನಾಯಿಟೆಡ್ ಸ್ಟೇಟ್ಸ್, ಕೆನಡಾ ಆಸ್ಟ್ರೇಲಿಯಾ ಮೊದಲಾದ ಮುಂದರಿದ ಹಾಗೂ ಧನಾಢ್ಯ ರಾಷ್ಟ್ರಗಳಲ್ಲಿ ಸಹ ಒಬ್ಬ-ಶಿಕ್ಷಕ-ಶಾಲೆಗಳು ಹೇರಳವಾಗಿವೆ. ಆ ರಾಷ್ಟ್ರಗಳಲ್ಲಿ ದು[illegible] ಹಾಗೂ ಸಂಪರ್ಕ ಸಾಗಾಟಗಳ ಅನುಕೂಲತೆಗಳು ನಮಗಿಂತ ಹೆಚ್ಚಿನ ಪ್ರಮಾಣಗಳಲ್ಲಿ ಇವೆ. ೧೯೪೭—೪೮ ನೆಯ

ಶಾಲಿನಲ್ಲಿ ಯುನಾಯಿಟೆಡ್ ಸ್ಟೇಟ್ಸ ಒಂದರಲ್ಲಿಯೇ ಸುಮಾರು ೯೩೦೦೦ ದಷ್ಟು ಅಂತಹ ಶಾಲೆಗಳು ಸುಮಾರು ೨೫ ಲಕ್ಷ ಮಕ್ಕಳಿಗೆ ಶಿಕ್ಷಣವನ್ನು ಪೂರೈಸುತ್ತಿದ್ದವು. ನಮ್ಮ ದೇಶದಲ್ಲಿ ವಿದ್ಯಾಪ್ರಸಾರವನ್ನು ಹೆಚ್ಚಿಸಲು ಆವುದೇ ಯೋಜನೆಯನ್ನು ಇನ್ನು ಮುಂದೆ ಕೈಕೊಂಡರೂ, ಅದು ಒಬ್ಬ-ಶಿಕ್ಷಕ-ಶಾಲೆಯ ಮೂಲಕವೇ ಸಾಧ್ಯವು. ಅದರ ಹೊರತು ಗತ್ಯಂತರವೇ ಇಲ್ಲದಾಗಿದೆ. ಆದುದರಿಂದ, ಅಭ್ಯಾಸ ಪತ್ರಿಕೆಯ ಪ್ರಕಾರ ಅಂತಹ ಶಾಲೆಗಳಲ್ಲಿ ವಿಷಯಗಳು ಆಗಿವೆಯೋ ಇಲ್ಲವೋ ಎಂಬುದರತ್ತ ನಮ್ಮ ಲಕ್ಷವನ್ನು ಪೂರೈಸದೆ, ಆ ಶಾಲೆಗಳ ಮುಖಾಂತರ ನಿರಕ್ಷರತೆಯನ್ನು ಹೊಡೆದೋಡಿಸುವ ಹಾಗೂ ಶಿಕ್ಷಣದ ಮಟ್ಟವನ್ನು ಎತ್ತರಿಸುವ ಹಂಚಿಕೆಗಳನ್ನೂ ಉಪಾಯಗಳನ್ನೂ ಕಂಡು ಹಿಡಿಯುವದರತ್ತ ನಮ್ಮ ದೃಷ್ಟಿಯನ್ನು ಹೊರಳಿಸಬೇಕಾಗಿದೆ.

ಸಂಣ ಹಳ್ಳಿಗಳಲ್ಲಿ ಒಬ್ಬ–ಶಿಕ್ಷಕ–ಶಾಲೆಯಲ್ಲಿಯ ಶಿಕ್ಷಕನ ಹೊಣೆಯು ನಿಃಸಂದೇಹವಾಗಿ ಭಾರವಾದದ್ದಿದೆ ಹಾಗೂ ಆತನ ಕೆಲಸವು ಕಷ್ಟಕರವಾದದ್ದಿದೆ. ಆದಾಗ್ಯೂ ಸಮಾಜದ ಸೇವೆಗೈಯಲು ಹಾಗೂ ರಾಷ್ಟ್ರದ ಮುಂದಿರುವ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸಹಾಯ ನೀಡಲು ಸುಪ್ರಸಂಗವೊಂದು ಆತನ ಪಾಲಿಗೆ ಬಂದಿದೆ. ಅಂತಹ ಶಿಕ್ಷಕನು ಎದುರಿಸಬಹುದಾದ ಇಕ್ಕಟ್ಟುಬಿಕ್ಕಟ್ಟುಗಳನ್ನೂ ಎದುರು–ತೊಡರುಗಳನ್ನು ಹೇಳಿ ಅವುಗಳ ನಿವಾರಣೋಪಾಯಗಳನ್ನು ವಿವರಿಸಲು ಈ ಕೈಪಿಡಿಯಲ್ಲಿ ಪ್ರಯತ್ನಿಸಲಾಗಿದೆ. ಬೇರೆಯವರ ಸಲಹೆ–ಸೂಚನೆಗಳಿಗಿಂತ ಆತನ ವ್ಯಕ್ತಿತ್ವ, ಸೇವಾಬುದ್ಧಿ ಹುರುಪು-ಹುಮ್ಮಸು, ಕ್ರಿಯಾತ್ಮಕ ಶಕ್ತಿ, ಪ್ರಸಂಗಾವಧಾನ, ಹಳ್ಳಿಗರಲ್ಲಿ ಬೆರತು ಒಂದಾಗಿ ಕೆಲಸ ಮಾಡುವದು ಇವೆಲ್ಲ ಹೆಚ್ಚಿನ ಮಹತ್ವವಾದವುಗಳು. ಆತನು ಬಹಳಷ್ಟು ತೊಡಕುಗಳುಳ್ಳ ಹಾಗೂ ನಿರುತ್ಸಾಹದಿಂದ ತುಂಬಿ ತುಳುಕುವ ಪರಿಸ್ಥಿತಿಯಲ್ಲಿ ಕೆಲಸ ಮಾಡಬೇಕಾಗುತ್ತಿದೆ. ಅಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿ ತನ್ನ ಗುಣಗಳನ್ನೂ ಯೋಗ್ಯತೆಗಳನ್ನೂ ಬೆಳೆಯಿಸಿಕೊಳ್ಳುವ ಮಾತಂತೂ ಒತ್ತಟ್ಟಿಗಿರಲಿ, ಅವುಗಳನ್ನು ಕಾಯ್ದುಕೊಂಡು ಹೋಗುವದು ಸಹ ಕಷ್ಟವಾಗುತ್ತಿದೆ. ಆದುದರಿಂದ, ಆತನು ತನ್ನ ಬುದ್ಧಿಮಟ್ಟವನ್ನೂ ಯೋಗ್ಯತೆಯನ್ನೂ ಹೆಚ್ಚಿಸಿಕೊಳ್ಳಲು ಎಲ್ಲ ತರಹದ ಅನುಕೂಲತೆಗಳನ್ನೂ ಸೌಲಭ್ಯಗಳನ್ನೂ ಆತನಿಗೆ ಒದಗಿಸಿಕೊಡಬೇಕು. ಆತನಿಗೆ ಮಾರ್ಗದರ್ಶನ ಮಾಡುವಂತಹ ಸುಸಜ್ಜಿತವಾದೊಂದು ಕಿರಿ ಹೊತ್ತಿಗೆಯು ಅವುಗಳಲ್ಲೊಂದಾಗಿರಬೇಕು. ಅಂತಹ ಶಾಲೆಯಲ್ಲಿ ಕೆಲಸಮಾಡಲು ಹೊಸದಾಗಿ ಹೋಗುವ ಶಿಕ್ಷಕನಿಗಾಗಲಿ ಇಲ್ಲವೆ ದೊಡ್ಡ ಶಾಲೆಗಳಿಂದ ವರ್ಗವಾಗಿ ಹೊಸದಾಗಿ ಅಲ್ಲಿಗೆ ಹೋಗುವ ಶಿಕ್ಷಕನಿಗಾಗಲಿ ಆ ಕೈಪಿಡಿಯು ಮಿತ್ರನಂತಿರಬೇಕು. ಅದರ ಸಹಾಯದಿಂದ ಆತನು ಅಲ್ಲಿಯ ತನ್ನ ಕೆಲಸಗಳನ್ನೆಲ್ಲ ಅಚ್ಚುಕಟ್ಟಾಗಿ ಹಮ್ಮಿಕೊಳ್ಳಲು ಸಮರ್ಥನಾಗಬೇಕು.

ಅಭ್ಯಾಸ ಪತ್ರಿಕೆಯಲ್ಲಿಯ ಬೇರೆ ಬೇರೆ ವಿಷಯಗಳನ್ನು ಕಲಿಸುವ ವಿಧಾನಗಳನ್ನು ಕೂಲಂಕಷವಾಗಿ ವಿವರಿಸದೆ, ಬಹುವರ್ಗಗಳ, ಬಹಳಷ್ಟು ವಿಷಯಗಳನ್ನು ಕಲಿಸುವದು, ಮಕ್ಕಳಮೇಲೆ ವೈಯಕ್ತಿಕವಾಗಿ ಕಂಣಿಡುವದು, ಸಾಮೂಹಿಕ ಕೆಲಸ, ಸುತ್ತಲಿನ ಪರಿಸ್ಥಿತಿಗೆ ಹೊಂದಿ–ಕೊಂಡು ಹೋಗುವದು, ಮೊದಲಾದ ಸಮಸ್ಯೆಗಳನ್ನು ಯಶಸ್ವಿಯಾಗಿ ಹೇಗೆ ಎದುರಿಸಬೇಕೆಂಬುದರ ಬಗೆಗೆ ಸಲಹೆ ಸೂಚನೆಗಳನ್ನು ಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ. ಶಿಕ್ಷಕ-ಶಿಕ್ಷಿಕೆಯರಿಗೋಸ್ಕರವಾಗಿಯೇ ಈ ಕಿರಿ ಹೊತ್ತಿಗೆಯನ್ನು ಬರೆದಿದ್ದರೂ, ಆಡಳಿತ ಹಾಗೂ ಅಧಿಕಾರಿ ವರ್ಗಕ್ಕೂ ಅದು ಉಪಯುಕ್ತವಿದೆ. ಯಾಕಂದರೆ, ಆಡಳಿತಗಾರರ ಹಾಗೂ ಅಧಿಕಾರಿ ವರ್ಗದವರ ಉದ್ದೇಶವು ಆ ಶಾಲೆಗಳ ಶಿಕ್ಷಕರಿಗೆ ಸಲಹೆ ಸೂಚನೆಗಳನ್ನು ಕೊಟ್ಟು ಅವರ ಕೆಲಸವನ್ನು ಸುಧಾರಿಸುವದೇ ಇರುತ್ತಿದೆಯಲ್ಲವೇ ? ವಿಷಯ ನಿರೂಪಣೆಯ ಸುಗಮತೆಗೋಸುಗ ಶಿಕ್ಷಕ, ಹಳ್ಳಿಯ ಮಗು, ಶಾಲೆಯ ಸಂಘಟನೆ, ಇವುಗಳನ್ನು ಅನುಕ್ರಮವಾಗಿ ಚರ್ಚಿಸುತ್ತ ಅವುಗಳ ಬಗೆಗೆ ಸೂಚನೆಗಳನ್ನು ಕೊಡಲಾಗುವದು.

[ಮುಂದುವರಿಯುವದು]

ಕೇಶಿರಾಜನ ಹಳಗನ್ನಡ ವ್ಯಾಕರಣ

ಲೇಖಕರು: ಶ್ರೀ. ಕಟ್ಟಿ ಶ್ಯಾಮರಾಯರು, ಧಾರವಾಡ.

[ಹಿಂದಿನ ಸಂಚಿಕೆಯಿಂದ ಮುಂದುವರಿದುದು]

ಇನ್ನು ಮೇಲೆ ಉದಾಹರಿಸಿದ ಏತ, ಆಟ, ಪೆಂಪು ಮೊದಲಾದ ರೂಪಗಳನ್ನು ವಿಭಾಗಿಸಿದರೆ (ಏಱು+ತ; ಆಡು+ಅ; ಪಿರಿದು+ಪು), 'ತ', 'ಅ' ಹಾಗು 'ಪು' ಪ್ರತ್ಯಯಗಳು ಸಿಕ್ಕುವವು; ಇವಕ್ಕೆ ಮಟ್ಟಿಗೆ ವಿಭಕ್ತಿಗಳೆನ್ನಬಾರದು, ಇವಕ್ಕೆ 'ಕೃತ್' ಮತ್ತು 'ತದ್ಧಿತ' ಎಂಬ ಹೆಸರುಗಳಿವೆ. ಧಾತುಗಳಿಗೆ ಹತ್ತುವ ಈ ಪ್ರತ್ಯಯಗಳು ಕೃತ್ ಪ್ರತ್ಯಯಗಳು; 'ಪಿರಿದು' ಮುಂತಾದ ನಾಮ (ಅಥವಾ ಗುಣವಚನಗಳೂ ದ್ರಾವಿಡ ಭಾಷೆಗಳಲ್ಲಿ ನಾಮಗಳಿದ್ದಂತೆಯೇ) ಗಳಿಗೆ ಹತ್ತಿದ "ಪು" ಪ್ರತ್ಯಯವು ತದ್ಧಿತವೆಂಬ ಸಂಜ್ಞೆಯಂ ಪಡೆಗುಂ.

ಈ 'ಇರ್ಕುಂ', 'ಪಡೆಗುಂ' ಎಂಬ ರೂಪಗಳು ಎಂತಹ ಆಖ್ಯಾತಪದಗಳು? ಮೊದಲು ತೀರ ಪೂರ್ವದ ಹಳಗನ್ನಡದಲ್ಲಿ **ಒಂದೇ** ರೂಪವು ಎಲ್ಲ ಕಾಲಭೇದಗಳನ್ನು ಪುರುಷಭೇದವನ್ನು, **ವಚನಭೇದವನ್ನೂ ತೋರಿಸು ತ್ತಿತ್ತು.** ಹೀಗೆ:

ವರ್ತಮಾನ	**ಆನ್ ಪಡೆಗುಂ, ಆಮ್ ಪಡೆಗುಂ**
ಭೂತ	**ನೀನ್ ಪಡೆಗುಂ, ನೀಮ್ ಪಡೆಗುಂ**
ಭವಿಷ್ಯತ್	**ಅವನ್ ಅವಳ್ ಅದು ಪಡೆಗುಂ,**
	ಅವರ್ ಅವು ಪಡೆಗುಂ.

'ಪಡೆಗುಂ ಎಂದರೆ ಪಡೆಯುತ್ತಾನೆ, ಪಡೆದನು. ಪಡೆ- **ಯುವರು ಇತ್ಯಾದಿ ಎಲ್ಲ ಅರ್ಥಗಳು ಸೂಚಿತವಾಗುತ್ತಿ- ದ್ದವು. ಸಂದರ್ಭದಿಂದಲೆ ಅರ್ಥವನ್ನು ತಿಳಿದುಕೊಳ್ಳ ಬೇಕಾಗುತ್ತಿತ್ತು. ಮುಂದೆ 'ದ' ಹಾಗೂ 'ಪ' ಎಂಬ ಭೂತ ಮತ್ತು ಭವಿಷ್ಯತ್ ಕಾಲಸೂಚಕ ಪ್ರತ್ಯಯಗಳನ್ನು ಬಳಸಲಾರಂಭವಾಯಿತು. 'ಪಡೆದಂ' ಎಂದರೆ ಪಡೆದನು ಭೂತಕಾಲ;** ಪಡೆಪಂ (=ಪಡೆವಂ) **ಭವಿಷ್ಯತ್ತಿನ ರೂಪ, ವರ್ತಮಾನಕಾಲವು ಭೂತ- ಕಾಲದ ಭವಿಷ್ಯದ್ರೂಪವೆಂದು ಹೇಳಬಹುದಲ್ಲವೆ? ಹೀಗಾಗಿ 'ದಪ' ಎಂಬುದು (=ದ+ಪ) ವರ್ತ- ಮಾನಕಾಲದ ಸೂಚಕ** ಪ್ರತ್ಯಯವಾಯಿತು. **ಶ.** ಮ. ದ. ಸೂತ್ರದಲ್ಲಿನ ಕೇಶಿರಾಜನ ಮಾತು **ಕೇಳಿರಿ** "ದ ದಪ ವಕಾರಂಗಳ್ (ಪ ಕಾರಕ್ಕೆ ವ ಕಾರವು ಬರುವದು) ......ಕಾಲತ್ರಯ ವಿಭಕ್ತಿಮೂಲದಳಕ್ಕುಂ" (೨೨೧)

ಇನ್ನು ಕೊನೆಯದಾಗಿ ಸಂಯುಕ್ತ ಶಬ್ದಗಳು ಅಥವಾ ಸಮಾಸಶಬ್ದಗಳು. ಇರ್ಪತ್ತೈದು=ಇರ್ಪತ್ತು+ಅಯ್ದು; ಆವಮಾತು = ಆವದು + ಮಾತು; ಪಸಿಯಬಣ್ಣಂ= ಪಸಿದು + ಬಣ್ಣಂ; ಪಾಡುವದು+ ತುಂಬಿ = ಪಾಡುವ ತುಂಬಿ. ಸಮಾಸದ ಕಲ್ಪನೆಯು ಬಹುತರ ಎಲ್ಲ ಭಾಷೆ- ಗಳಲ್ಲಿಯೂ, ಹೆಚ್ಚುಕಡಿಮೆಯಾಗಿ ಇದ್ದೇ ಇರುವದು. ಮೇಲಿನ ಸಮಾಸಗಳ ಅರ್ಥವನ್ನು ಬಿಡಿಸಿಹೇಳುವದಾ- ದರೆ ಹಿಗಾಗುವದು: ಇರ್ಪತ್ತರಿಂದ **ಕೂಡಿದ ಅಯ್ದು;** ಆವುದು ಆದ ಮಾತು; ಪಸಿದು **ಆದ** ಬಣ್ಣಂ, ಪಡುವದಾದ ತುಂಬಿ: ಇವುಗಳಲ್ಲಿ ಮೊದಲನೆ ಶಬ್ದಗಳು ಗುಣವಚನಗಳಾಗಿರುವವು. **ಸಂಸ್ಕೃತದಲ್ಲಿ ಇಂತಹ ವಿಶೇಷಣ ವಿಶೇಷ್ಯ ಸಮಾಸಕ್ಕೆ** ಕುರ್ಮಧಾರಯ ವೆಂಬ ಹೆಸರಿದೆ; (ಏಕಾರ್ಥ ಪ್ರತಿಪಾದನರೂಪವಿಶೇಷಣ ವಿಶೇಷ್ಯಗಳ ಏಕಾರ್ಥವನ್ನು ಪ್ರತಿಪಾದಿಸುವ **'ಕರ್ಮ'** ವನ್ನು ಕೆಲಸವನ್ನು (ಧಾರಯತಿ=) ನಿರ್ವಹಿಸುತ್ತಿದೆ ಎಂಬದರ ಮೇಲಿಂದ ಈ ಸಮಾಸಕ್ಕೆ "ಕರ್ಮ-ಧಾರಯ ಎಂಬ ಸಂಜ್ಞೆಯಿದೆ); ಮೊದಲನೆಯ **ಉದಾಹರಣೆಯಲ್ಲಿ** ಸಂಖ್ಯೆಯು ವಿಶೇಷಣದಂತೆ **ಉಪಯೋಗಿಸಲ್ಪಟ್ಟಿದೆ.** ಎರಡನೆಯದರಲ್ಲಿ **ಸರ್ವನಾಮವು ವಿಶೇಷಣದಂತೆ** ಉಪಯೋಗವಾಗಿದೆ. **ಮೂರನೆಯದಲ್ಲಂತೂ** ವಿಶೇಷ- ಣವೇ (ಗುಣವಾಚಕ ನಾಮ) **ಸಾಕ್ಷಾತ್ ಇದೆ;** ನಾಲ್ಕನೆಯದರಲ್ಲಿ ಪಾಡುವದು ಎಂಬ **ಕ್ರಿಯಾನಾಮವು ಕೃವಂತ ವಿಶೇಷಣವಾಗಿದೆ. ಈ ತರದ 'ಕರ್ಮ ಧಾರಯ'** ಸಮಾಸಗಳಿಗೆ ಕನ್ನಡದಲ್ಲಿ **ಗಮಕ ಸಮಾ-**

ಸವೆಂಬ ಹೆಸರಿದೆ. 'ಆ ಬನ್' 'ಈ ಬನ್' ಎಂಬವು ಎರಡು ಬೇರೆ ಬೇರೆ ಶಬ್ದಗಳಂತೆ ತೋರಿದರೂ ಅವು ಒಂದೊಂದೇ ಗಮಕ ಸಮಾಸದ ಉದಾಹರಣೆಗಳೆಂದು ತಿಳಿಯಬೇಕು. ಗಮಕಸಮಾಸದಲ್ಲಿ ಅದು, ಇದು, ಉದು, (ಈ ಕಡೆಯ ಸರ್ವನಾಮವು ದ್ರಾವಿಡ ಭಾಷೆಗಳ ವೈಶಿಷ್ಟ್ಯ) ಎಂಬ ದರ್ಶಕ ಸರ್ವನಾಮಗಳಿಗೆ 'ಅ, 'ಈ' 'ಊ' ಎಂಬ ಆದೇಶಗಳೂ ಬರುವವೆಂದು ಕೇಶಿರಾಜನು ಹೇಳುವವನ್ನು ಕೇಳಿರಿ. ಸೂತ್ರ ೧೬೯: "ಅದುವಿದು ವುದುಗಾಯೀಯೂ ವೊದವುಗುವಾದೇಶವಾಗಿ ಗಮಕ ಹೊಳ್............"

ಕನ್ನಡದಲ್ಲಿ ಮೊದಲು ಸಂಧ್ಯಕ್ಷರಗಳಿಗೆ ಬೇರೆ ಸಂಜ್ಞೆಗಳಿದ್ದಿಲ್ಲ. ಅಇ (=ಅಯ್), ಅಉ (=ಅವ್), ಅಥವಾ 'ಅಯಿ' 'ಅವು' ಎಂಬ ಸಂಯುಕ್ತಸ್ವರಗಳಿಗೇ ಮುಂದೆ 'ಐ' 'ಔ' ಎಂಬ ಅಕ್ಷರಸಂಜ್ಞೆಗಳಾದವು. ಶ. ಮ. ದ. ೧೫೭ ನೋಡಿರಿ: "ಪದ ಮಧ್ಯ ವಕ್ವಯತ್ವಕ್ಕೆ ಒದವುಗುಂ ಔತ್ವ ಐತ್ವ ವಿಧಿ..............." ಉದಾಹರಣೆಗಳು: 'ಕವುಂಗು' ಹೋಗಿ 'ಕೌಂಗು' ಆಯಿತು; ಅಯ್ದು ಅಥವಾ 'ಅಯಿದು, ಹೋಗಿ 'ಐದು' ಎಂದು ಬರೆಯುವ ರೂಢಿ ಬಂದಿದೆ.

ಕನ್ನಡದಲ್ಲಿ ಮೂರು ತರದ ಳ ಕಾರದ ಬಳಕೆ ಇದೆ. ಕನ್ನಡಕ್ಕೆ ಸಹಜವಾದುದೊಂದು, ಸಂಸ್ಕೃತ ಶಬ್ದಗಳಲ್ಲಿದ್ದ ಲ ಕಾರಕ್ಕೆ ಬದಲಾಗಿ ಬಂದ ಳ ವೊಂದು, ಕನ್ನಡ ಶಬ್ದಗಳ ಡ ಕಾರಕ್ಕೆ ಬದಲಾಗಿ ಬಂದ ವರ್ಣವೊಂದು (ಇದಕ್ಕೆ ಱ ಎಂಬ ಸಜ್ಞೆಯಿದೆ); ಮಿದುಳ್, ಕರುಳ್ ಮುಂತಾದ ಶಬ್ದಗಳಲ್ಲಿರುವ ಳ ಕಾರಕ್ಕೆ 'ಕುಳ, ಎಂಬ ಹೆಸರು (ಇದು ಕನ್ನಡದ ಸಹಜ ಳ ಕಾರ) "ಪೊಗೞ್ ತೆಗೞ್. ಬೀೞ್,ಬಾೞ್, ಅಂತಹದ ಇವಕ್ಕೆ 'ಱಟ' ಎಂಬ ಹೆಸರು. 'ಜಲ' ಎಂಬ ಸಂಸ್ಕೃತ ಶಬ್ದಕ್ಕೆ 'ಜಳ, ಎಂದು ಆದಾಗಿನ ಮತ್ತು 'ಕಮಲ' ದೊಳಗಿನ ಲಕಾರಕ್ಕೆ ಳ ಕಾರವು ಬಂದು 'ಕಮಳ' ವೆಂದಾದಾಗಿನ ಳ ಕಾರಕ್ಕೆ 'ಕ್ಷಳ' ಎಂಬ ಸಂಜ್ಞೆ ಇದೆ.

ಸಂಯುಕ್ತಾಕ್ಷರಗಳು ಕನ್ನಡದ ಸ್ವಭಾವಕ್ಕೆ ಒಗ್ಗವದಿಲ್ಲ—ದ್ವಿತ್ವಾಕ್ಷರಗಳನ್ನು ಇನ್ನು ಕೆಲವು ವಿಶಿಷ್ಟ ಸಂಯೋಗಗಳನ್ನು (ಸಂಯುಕ್ತಾಕ್ಷರಗಳ) ಹೊತ್ತುರ್ಪಡಿಸಿ ಕನ್ನಡದ ರೀತಿಗೆ ಒಗ್ಗುವ ಶಬ್ದಗಳ್. ಉದಾ:— ಮೊಕ್ಕಳಂ ('ಬಕ್ಕಳ' ಎಂದು ಈಗ ಹೇಳುವೆವು). ಸುಗ್ಗಿ, ಕಟ್ಟೆ, ಬಟಲ್ದಂ. ಈ ಬಿಗುವು ಕೂಡ ಬೇಕಾಗದೆ ಕೆಲವು ಒತ್ತಕ್ಷರಗಳನ್ನು ಶಿಥಿಲವಾಗಿ ಉಚ್ಚರಿಸಲಾಗುವದು. ಉದಾ: ಪೊಗಟ್ದಂ ('ಪೊಗೞ್ದಂ, ಎಂಬಷ್ಟು ಹಗುರಾಗಿ)

ಇಬ್ಬರು ಕರ್ತೃಗಳಿಗೆ ನಿಮಿತ್ತವಾಗಿ ಸಮ್ಮಿಶ್ರವಾಕ್ಯವಿದ್ದಾಗ ಅಧೀನವಾಕ್ಯದಲ್ಲಿನ ಕ್ರಿಯಾಪದದ ಕೊನೆಗೆ 'ಎ' ಎಂಬ ಪ್ರತ್ಯಯವು ಬರುವದು. ಇದು ಸಂಸ್ಕೃತದ ಸತಿಸಪ್ತಮಿ ಎಂಬ ಪ್ರಯೋಗವನ್ನು ಹೋಲುವದು. 'ಎ' ಎಂಬ ಪ್ರತ್ಯಯವು 'ಸವಿತರಿ ಅಸ್ತಂಗತೇ ಎಂಬಲ್ಲಿನ 'ಗತೇ' ರೂಪದ ಸಪ್ತಮಿ ಪ್ರತ್ಯಯದ ಅನುಕರಣವೇ ಈ ಶಬ್ದಮಣಿದರ್ಪಣ ಸೂತ್ರದ (೨೪೯) ಎಕಾರವೆಂದು ತೋರುವುದು. ಉದಾ: ಪಾತ್ರಂ ಆಡೆ ವಾದಕಂ ಬಾಜಿಸಿದಂ.

ಛಂದಸ್ಸಿನ ನಿಯಮದಂತೆ ಕಂದಪದ್ಯದ ಮೊದಲಿನ ಸಾಲಿನ (೧೨ ಮಾತ್ರೆಗಳ ಸಾಲಿನ) ಕೊನೆಗೆ ಯತಿಯು ಬರಬೇಕು. ಕನ್ನಡದಲ್ಲಿ ಈ 'ಯತಿ' (ನಿಲ್ಲುವಿಕೆ, ವಿರಾಮ) ಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾದುದಿಲ್ಲ.

ಮಕಾರವು ವಕಾರವಾಗುವದೂ ಪಕಾರವು ಹಕಾರವಾಗುವದೂ ಕನ್ನಡದ ಇನ್ನೊಂದು ರೀತಿ. ಉದಾ:— 'ಮನ್ಮಥ, ಇದು 'ವಮ್ಮಹ' ಎಂದಾಗುವದು. 'ಪುಸ್ತಕ' ಹೊತ್ತಿಗೆಯಾಗುವದು. ಮೇಲೆ ವಿವರಿಸಿದ ಎಲ್ಲ ಕನ್ನಡದ ವೈಶಿಷ್ಟ್ಯಗಳನ್ನು ಈ ಚಂಪಕಮಾಲಾ ವೃತ್ತದ ಪದ ದಲ್ಲಿ ಹೇಳಲಾಗಿದೆ:

"ಗಮಕ ಸಮಾಸದಿಂ ಱಟ ಕುಳಕ್ಷಳದಿಂ ಶ್ರುತಿಸಹ್ಯ
ಸಂಧಿಯಿಂ (ಶ ಮ. ದ. ೬೨)
ಸಮುಚಿತಮಾಗಿ ಬರ್ಪ ಸತಿಸಪ್ತಮಿಯಿಂ ಸಮ
ಸಂಸ್ಕೃತೋಕ್ತಿಯಿಂ॥
... ಹಪ ಭೇದದಿಂ ವಿರಹಿತಾವ್ಯಯ ಸಂಸ್ಕೃತ
ಲಿಂಗದಿಂ ...।
ತ್ತಮ ಶಿಥಿಲ ... ಯತಿ ವಿಲಂಘನ ... ತ್ತೆ
ಕನ್ನಡಂ ॥

ದಿವಂಗತರಾದ

ಸರದಾರ ವಲ್ಲಭಭಾಯಿ ಪಟೇಲ

(ಉಕ್ಕಿನ ಮನುಷ್ಯ)

ಲೇಖಕರು: ಶ್ರೀ ಶಿಂತ್ರಿ ಬಸಪ್ಪನವರು ಬಿ. ಎ. ಬಿ. ಟಿ.,
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ.

ಮೊದಲ ಮಾತು

ಸ್ವಾತಂತ್ರ್ಯದ ತರುವಾಯ ಉಪಪ್ರಧಾನಾಮಾತ್ಯರಾಗಿದ್ದಾಗ ಸರದಾರ ವಲ್ಲಭಭಾಯಿ ಪಟೇಲರು ನಮ್ಮ ರಾಷ್ಟ್ರಕ್ಕೆ ಸಲ್ಲಿಸಿದ ಸೇವೆಯು ಅಪಾರವಾದುದಾಗಿದೆ. ಸ್ವಾತಂತ್ರ್ಯದ ಪೂರ್ವದಲ್ಲಿ ನಮ್ಮ ದೇಶದಲ್ಲಿ ಚಿಕ್ಕದೊಡ್ಡ ಸಂಸ್ಥಾನಗಳು ಕೂಡಿ ಒಟ್ಟು ಸುಮಾರು ೫೦೦ ಇದ್ದವು. ನಮ್ಮ ರಾಷ್ಟ್ರದಲ್ಲಿ ಇಲ್ಲದ ಸಲ್ಲದ ಅನೈಕ್ಯವನ್ನು ಹೆಚ್ಚಿಸಲು ಅವು ಕಾರಣವಾಗಿದ್ದವೆಂಬುದನ್ನು ದೂರದೃಷ್ಟಿಯುಳ್ಳ, ಮುತ್ಸದ್ದಿಯೆಂಬ ಹೆಸರು ಪಡೆದಿದ್ದ ಸರದಾರರು ಎಂದಿನಿಂದಲೋ ಕಂಡ ಹಿಡಿದಿದ್ದರು. ಅವರು ಉಪಪ್ರಧಾನಿಯಾದ ಕೂಡಲೆ ಸಂಸ್ಥಾನಗಳ ಖಾತೆಯನ್ನು ತಮ್ಮ ಕಡೆಗೇ ಇಟ್ಟುಕೊಂಡರು. ಸಂಸ್ಥಾನಿಕರನ್ನೆಲ್ಲ ಹೊಸ ದಿಲ್ಲಿಗೆ ಕರೆಸಿಕೊಂಡು ಈಗಿನ ಪ್ರಜಾಪ್ರಭುತ್ವಯುಗದಲ್ಲಿ ಸಂಸ್ಥಾನಿಕರು ಹೇಗೆ ವರ್ತಿಸಬೇಕು, ಹಾಗೂ ಪ್ರಜೆಗಳಗೊಡ ತಮ್ಮ ಸಂಬಂಧವನ್ನು ಹೇಗೆ ಇಟ್ಟುಕೊಳ್ಳಬೇಕೆಂಬುದರ ಬಗೆಗೆ ಬುದ್ಧಿವಾದವನ್ನು ಹೂಡಿ ಸಾಮೋಪಾಯದಿಂದ ಅವರೆಲ್ಲರ ಮನವೊಲಿಸಿ ಒಂದರ ಹಿಂದೊಂದರಂತೆ ಸಂಸ್ಥಾನಗಳನ್ನೆಲ್ಲ ವಿಲೀನಗೊಳಿಸಿದರು. ಸಾಮೋಪಾಯಕ್ಕೆ ಬಗ್ಗಿ ನಡೆಯಲು ಮನಸಿಲ್ಲದ ಹಾಗೂ ಸುತ್ತಲಿನ ವಾತಾವರಣಕ್ಕೆ ಹೊಂದಿಕೊಂಡು ಹೋಗದಂತಹ ಸಂಸ್ಥಾನಿಕರನ್ನು ಪ್ರಸಂಗೋಚಿತ ದಂಡೋಪಾಯದಿಂದ ಮಣಿಸಿದರು. ಅಂತಹವರಲ್ಲಿ ಜುನಾಗಡದ ನವಾಬರೊಬ್ಬರು. ಕೊನೆಗೆ ಅವರು ತಮ್ಮ ರಾಜ್ಯವನ್ನು ತ್ಯಜಿಸಿ ಪಾಕಿಸ್ತಾನಕ್ಕೆ ಓಡಿಹೋಗಲು ಆ ಸಂಸ್ಥಾನವು ಅಲ್ಲಿಯ ಜನತೆಯ ಇಚ್ಛೆಯಂತೆ ವಿಲೀನ ಹೊಂದಿತು. ಹೈದರಾಬಾದದ ನಿಜಾಮರು ರಝಾಕಾರರೆಂಬ ಪುಂಡರ ಮುಖಂಡನಾದ ಕಾಶೀಮ ರಝುವಿಯ ಹಿಡಿತದಲ್ಲಿ ಸಿಕ್ಕು ಅವರ ಆಟವು ನಡೆಯದಂತಾಗಿ ಸಂಸ್ಥಾನದಲ್ಲಿಯೂ ಅದಕ್ಕೆ ತಾಗಿದ ರಾಜ್ಯಗಳ ಮೇರೆಗಳಲ್ಲಿಯೂ ಭಯಂಕರ ಸ್ವರೂಪದ ದರೋಡೆಗಳೂ ದಂಗೆಗಳೂ ಕೊಲೆಸುಲಿಗೆಗಳೂ ಆ ಪುಂಡರಿಂದ ಒಂದೇಸವನೆ ನಡೆಯಹತ್ತಿದವು. ರಝಾಕಾರರ ಹಾವಳಿಯು ಜನತೆಯಲ್ಲಿ ವರ್ಣನಾತೀತವಾದ ಹಾಹಾಕಾರವನ್ನುಂಟು ಮಾಡಿತು. ಆಗ ಆ ಸಂಸ್ಥಾನಕ್ಕೆ ಸೈನ್ಯವನ್ನು ಕಳುಹಿಸಿ, ರಝಾಕಾರರ ಹಾವಳಿಯನ್ನು ಬಗ್ಗುಬಡಿದು (Police Action), ಕಾಶೀಮ ರಝುವಿಯನ್ನು ಸೆರೆ ಹಿಡಿದು, ಅಲ್ಲಿ ಶಾಂತಿ-ಸಮಾಧಾನಗಳನ್ನು ನೆಲೆಗೊಳಿಸಿ ಆ ಸಂಸ್ಥಾನವನ್ನು ಅಲ್ಲಿಯ ಪ್ರಜರ ಬೇಡಿಕೆಯಂತೆ ವಿಲೀನಗೊಳಿಸಿದರು. ಆಗಿನ ಕಾಲಕ್ಕೆ ಅವರಿಂದ ಹೊರಹೊಮ್ಮಿದ ಧೈರ್ಯ, ಕಠೋರತನ, ನಿಶ್ಚಯವೃತ್ತಿ, ಜಿಗುಟುತನ, ಕಾರ್ಯಕುಶಲತೆ ಇವೆಲ್ಲವೂ ಪ್ರಶಂಸನಾರ್ಹವಿದ್ದವು. ರಝಾಕಾರರ ಉಪಟಳಕ್ಕೀಡಾಗಿದ್ದ ಹೈದರಾಬಾದ ಸಂಸ್ಥಾನದಲ್ಲಿಯ ಹಾಗೂ ಅದರ ಅಕ್ಕಪಕ್ಕಗಳಲ್ಲಿಯ ಜನತೆ ಆ "ಉಕ್ಕಿನ ಮನುಷ್ಯ"ನನ್ನು ಎಂದೂ ಮರೆಯುವಂತಿಲ್ಲ. ಸಾಮೋಪಾಯದಿಂದಲೂ ದಂಡೋಪಾಯದಿಂದಲೂ ಸಂಸ್ಥಾನಗಳನ್ನೆಲ್ಲ ವಿಲೀನಗೊಳಿಸಿ ಅಖಂಡ ಭಾರತವನ್ನು ಕಟ್ಟಿದ ಸಂಪೂರ್ಣ ಯಶಸ್ಸು ಆ "ಉಕ್ಕಿನ

ಮನುಷ್ಯ" ಎಂದೇ ವರ್ಣಿಸಲಾಗಿದೆ. ಅವರ ಆ ರಾಷ್ಟ್ರಹಿತದ ಕಾರ್ಯವು ಭಾರತದ ಇತಿಹಾಸದಲ್ಲಿ ಅಜರಾಮರವಾಗಿ ಉಳಿಯುವದು. ಅಂತಹವರ ಜೀವನ ಚರಿತ್ರದ ಅಲ್ಪ ಪರಿಚಯವನ್ನಿಲ್ಲಿ ಮಾಡಿಕೊಡಲು ಪ್ರಯತ್ನಿಸಲಾಗಿದೆ.

ಮನೆತನ ಹಾಗೂ ಬಾಲ್ಯ

ಗುಜರಾಥ ಪ್ರಾಂತದಲ್ಲಿಯ ಕರಮಸದ ಗ್ರಾಮವು ಅವರ ಜನ್ಮಸ್ಥಳವು. ಬೇಸಾಯವು ಎಂದಿನಿಂದಲೋ ನಡೆದು ಬಂದ ಅವರ ಮನೆಯ ಮುಖ್ಯ ಉದ್ಯೋಗವು. ಆ ಮನೆತನಕ್ಕೆ ಶಿಕ್ಷಣದ ಸಂಪರ್ಕ ಕಡಿಮೆ. ಅವರ ತಂದೆಯ ಹೆಸರು ಝವೇರಭಾಯಿ ಪಟೇಲ. ಅವರು ಸ್ವತಃ ಒಕ್ಕಲುತನವನ್ನು ಮಾಡುತ್ತಿದ್ದರು. ಮೈಕೈಯಿಂದ ಗಟ್ಟಿಮುಟ್ಟಾಗಿದ್ದು ಧರ್ಮಪರಾಯಣರಿದ್ದರು. ೧೮೫೭ ರ ಸ್ವಾತಂತ್ರ್ಯ ಯುದ್ಧದಲ್ಲಿ ಭಾಗವಹಿಸಿದ್ದರು. ಗಟ್ಟಿಗತನ, ಕೆಚ್ಚೆದೆ ಹಾಗೂ ಸಹನಶಕ್ತಿ ಇವು ಅವರಲ್ಲಿದ್ದ ಮುಖ್ಯ ಗುಣಗಳು. "ತಂದೆಯಂತೆ ಮಗ" ಎಂಬ ನಾಣ್ಣುಡಿಯಂತೆ ಆ ಗುಣಗಳು ಮಗನಲ್ಲಿಯೂ ತಲೆದೋರಿ ಅವನನ್ನು ರಾಷ್ಟ್ರದ ಮುಖಂಡನನ್ನಾಗಿ ಮಾಡಲು ಕಾರಣವಾದವು. ತಾಯಿಯ ಹೆಸರು ಲಾಡ್‌ಬಾಯಿ. ಅವರು ಸುಶೀಲರಿದ್ದರು. ಸ್ವಚ್ಛತೆ ಹಾಗೂ ಅಚ್ಚುಕಟ್ಟುತನ ಇವು ಅವರಲ್ಲಿ ಎದ್ದು ಕಂಡ ಗುಣಗಳು. ಆ ದಂಪತಿಗಳಿಗೆ ಒಂದು ಹೆಣ್ಣು ಮಗುವೂ ಐದು ಜನ ಗಂಡು ಮಕ್ಕಳೂ ಇದ್ದರು. ಆ ಐದು ಜನ ಗಂಡು ಮಕ್ಕಳಲ್ಲಿ ವಿದ್ಯಾವಂತರಾಗಿ ಹೆಸರಿಗೆ ಬಂದವರು ವಲ್ಲಭಭಾಯಿ ಹಾಗೂ ಅವರ ಅಣ್ಣ ವಿಠ್ಠಲಭಾಯಿ. ವಲ್ಲಭಭಾಯಿಯವರು ೧೮೭೫ನೆಯ ಇಸವಿ ಅಕ್ಟೋಬರ ತಿಂಗಳ ದಿನಾಂಕ ೩೧ರಂದು ಕರಮಸದಲ್ಲಿಯೇ ಜನಿಸಿದರು.

ಶಿಕ್ಷಣ

ಪ್ರಾಥಮಿಕ ಶಿಕ್ಷಣವು ಸ್ವಗ್ರಾಮದಲ್ಲಿಯೇ ಜರುಗಿತು. ಗುರುಗಳು ತುಂಟ ಹುಡುಗ ವಲ್ಲಭಭಾಯಿಯ ಸಲುವಾಗಿ ಬೇಸತ್ತಿದ್ದರು. ಹುಡುಗರ ಗುಂಪು ಕಟ್ಟಿಕೊಂಡು ತಾನು ಅದರ ಮುಖಂಡನಾಗಿ ವರ್ತಿಸುವ ಚಟವು ಆ ತುಂಟನಲ್ಲಿ ಚಿಕ್ಕಂದಿನಿಂದ ಮನೆಮಾಡಿಕೊಂಡಿತ್ತು. ಅದು ಆತನಲ್ಲಿ ಹುಟ್ಟುಗುಣವಾಗಿತ್ತೆಂದರೂ ಸಲ್ಲುವದು. ಆ ಹುಟ್ಟುಗುಣವು ಮುಂದೆ ಆತನು ಖೇಡಾ, ನಾಗಪೂರ, ಬೋರಸದ, ಬಾರಡೋಲಿಗಳಂತಹ ಸತ್ಯಾಗ್ರಹಗಳ ಸಂಘಟಕನಾಗಲು ಪ್ರೇರೇಪಿಸಿತು. ಮಾಧ್ಯಮಿಕ ಶಿಕ್ಷಣವು ಪೇಟಲಾದ, ಬಡೋದೆ ಹಾಗೂ ನಡಿಯಾದ ಈ ಮೂರು ಊರುಗಳ ಹಾಯಸ್ಕೂಲುಗಳಲ್ಲಾಯಿತು. ಹಾಯಸ್ಕೂಲುಗಳಲ್ಲಿ ಆತನ ತುಂಟತನವು ಕುಗ್ಗದೆ ಹಿಗ್ಗುತ್ತ ನಡೆದಿತ್ತು. ಕ್ಲಾಸಿನಲ್ಲಿ ತನ್ನ ಅಭ್ಯಾಸದಲ್ಲಿ ಮಾತ್ರ ಒಳ್ಳೇ ಚೊಕ್ಕಾಗಿರುತ್ತಿದ್ದನು. ಶಿಕ್ಷಕರು ಕ್ಲಾಸಿನಲ್ಲಿ ಅಸಮಂಜಸ ಶಿಕ್ಷೆಯನ್ನು ಕೊಟ್ಟರೆಂದರೆ, ಅದನ್ನು ಪ್ರತಿಭಟಿಸಲು ಹುಡುಗರನ್ನು ಸಂಘಟಿಸಿ ತಾನು ಅವರ ಮುಖಂಡನಾಗಿ ಆ ಶಿಕ್ಷೆಯನ್ನು ತಿರುಗಿ ತೆಗೆದುಕೊಳ್ಳುವಂತೆ ಮಾಡುತ್ತಿದ್ದನು. ಅಂತಹ ತುಂಟ ವಲ್ಲಭಭಾಯಿಯು ೧೮೯೭ ರಲ್ಲಿ ನಡಿಯಾದ ಹಾಯಸ್ಕೂಲದಿಂದ ಮ್ಯಾಟ್ರಿಕ್ ಪರೀಕ್ಷೆಯನ್ನು ಪಾಸಾದನು. ಉಚ್ಚ ಶಿಕ್ಷಣಕ್ಕಾಗಿ ಕಾಲೇಜಕ್ಕೆ ಹೋಗಲು ದುಡ್ಡಿನ ಅನುಕೂಲತೆ ಇರಲಿಲ್ಲ. ಮುಂದೇನು ಮಾಡಬೇಕೆಂಬ ವಿಚಾರದಲ್ಲಿಯೇ ಬಹಳಷ್ಟು ದಿನಗಳು ಕಳೆದು ಹೋದವು. ಆಗಿನ ಕಾಲಕ್ಕೆ ಡಿಸ್ಟ್ರಿಕ್ಟ ಪ್ಲೀಡರ ಪರೀಕ್ಷೆ (District Pleader Examination) ಎಂಬ ಹೆಸರಿನ ವಕೀಲಿ ಪರೀಕ್ಷೆಗೆ ಮನೆಯಲ್ಲಿಯೇ ಅಭ್ಯಾಸ ಮಾಡಿ ಕೂಡ್ರಲು ಬರುತ್ತಿತ್ತು. ವಕೀಲರಾಗಬೇಕೆಂಬ ಆಕಾಂಕ್ಷೆಯು ಅವರಲ್ಲಿ ಉದಯಿಸಿತಾದುದರಿಂದ ಅವರು ಅದರ ಅಭ್ಯಾಸವನ್ನು ಕೈಕೊಂಡು ೧೯೦೦ ರಲ್ಲಿ ಆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು.

ವಕೀಲಿಯು

ಡಿಸ್ಟ್ರಿಕ್ಟ ಪ್ಲೀಡರ ಪರೀಕ್ಷೆಯನ್ನು ಪಾಸಾದ ಕೂಡಲೆ ಗೋಧ್ರಾದಲ್ಲಿ ಎರಡು ವರ್ಷಗಳ ವರೆಗೆ ವಕೀಲಿಯನ್ನು ಮಾಡಿ ಬೋರಸದಕ್ಕೆ ಹೋದರು. ಯಾಕಂದರೆ, ಅವರ ಒಲವು ಫೌಜದಾರಿ (Criminal) ಖಟ್ಲೆಗಳ ಕಡೆಗೆ ವಿಶೇಷವಾಗಿತ್ತು ಮತ್ತು ಬೋರಸದ ತಾಲೂಕು ಹೊಡೆದಾಟ-ಬಡೆದಾಟ, ಪುಂಡತನ, ಕೊಲೆ ಮುಂತಾದ ಫೌಜದಾರಿ ಖಟ್ಲೆಗಳ ಸಲುವಾಗಿ ಹೆಸರಾಗಿತ್ತು. ಸ್ವಲ್ಪ

ದಿನಗಳಲ್ಲಿ ನಾಮಾಂಕಿತ ವಕೀಲರೆಂಬ ಹೆಸರನ್ನು ಪಡೆಕೊಂಡು ಬಹಳಷ್ಟು ಸಂಪತ್ತನ್ನು ಗಳಿಸಿದರು. ಬ್ಯಾರಿಸ್ಟರರಾಗಬೇಕೆಂಬ ಸದುದ್ದೇಶದಿಂದ ೧೯೧೦ ರಲ್ಲಿ ವಿಲಾಯತಿಗೆ ಪ್ರಯಾಣ ಬೆಳೆಸಿದರು. ಅಲ್ಲಿ ಚೆನ್ನಾಗಿ ಅಭ್ಯಾಸಮಾಡಿ ೧೯೧೨ರಲ್ಲಿ ಆ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪ್ರಥಮ ಸ್ಥಾನವನ್ನು ಪಡೆದು ಉತ್ತೀರ್ಣರಾದರು. ತುಂಟನು ಮೇಧಾವಿಯಿರುವನೆಂಬುದನ್ನು ಆ ಪರೀಕ್ಷೆಯಲ್ಲಿ ತಮ್ಮ ಕೃತಿಯಿಂದ ತೋರಿಸಿಕೊಟ್ಟರು. ಬ್ಯಾರಿಸ್ಟರರಾಗಿ ೧೯೧೩ ರಲ್ಲಿ ಸ್ವದೇಶಕ್ಕೆ ಮರಳಿದರು. ಅಹಮ್ಮದಾಬಾದದಲ್ಲಿ ವಕೀಲಿಯನ್ನು ಪ್ರಾರಂಭಿಸಿ ವಿಪುಲವಾಗಿ ಹಣವನ್ನು ಸಂಪಾದಿಸಿದರು. ಬೋರಸದ ಹಾಗೂ ಅಹಮ್ಮದಾಬಾದ ನಗರಗಳಲ್ಲಿ ವಕೀಲಿಯನ್ನು ಮಾಡುತ್ತಿರುವಾಗ ಮದೋನ್ಮತ್ತರಾದ ಅಧಿಕಾರಿಗಳನ್ನು ಕಂಡರೆ ಅವರ ಮೈಯೆಲ್ಲ ಉರಿಯುತ್ತಿತ್ತು. ಅಂತಹ ಅಧಿಕಾರಿಯ ಸೊಕ್ಕನ್ನು ಮುರಿದು ಅವನನ್ನು ಮೆತ್ತಗೆ ಮಾಡಿ ದಾರಿಗೆ ತಂದೇ ತೀರುತ್ತಿದ್ದರು. ಅಂತಹ ಉದಾಹರಣೆಗಳು ಹಲವಾರು ಆಗಿವೆ.

ಮಹಾತ್ಮರ ಶಿಷ್ಯತ್ವ

ಮೊದಮೊದಲು ವಲ್ಲಭಭಾಯಿಯವರು ಗಾಂಧೀಜಿಯವರನ್ನು ವಿರೋಧಿಸುತ್ತಿದ್ದರು; ಹೆಜ್ಜೆಹೆಜ್ಜೆಗೆ ಅವರಿಗೆ ಅಣಕವಾಡುತ್ತಿದ್ದರು. ಅಹಮ್ಮದಾಬಾದದಲ್ಲಿಯ ಗುಜರಾತ ಕ್ಲಬ್ಬಿಗೆ ಗಾಂಧೀಜಿಯವರು ಬಂದರೆ ವಲ್ಲಭಭಾಯಿಯವರು ಅವರನ್ನು ಬೊಟ್ಟುಮಾಡಿ ತೋರಿಸಿ ವ್ಯವಹಾರಜ್ಞಾನವಿಲ್ಲದ ಮೂರ್ಖನೆಂದು ಹೀಯಾಳಿಸುತ್ತಿದ್ದರು. ಅಂತಹ ಕಡು ವಿರೋಧಿಯನ್ನು ಮಹಾತ್ಮರು ೧೯೧೭ ರಲ್ಲಿ ತಮ್ಮ ಪಟ್ಟ ಶಿಷ್ಯನನ್ನಾಗಿ ಮಾಡಿಕೊಂಡರು! ಅದೊಂದು ಪೂಜ್ಯ ಬಾಪೂಜಿಯ ತ್ಯಾಗ-ಸೇವೆಗಳ ಪವಾಡವಲ್ಲದೆ ಮತ್ತೇನು? ಎಂತೆಂತಹ ವಿರೋಧಿಗಳನ್ನು ನೋಡನೋಡುವಷ್ಟರಲ್ಲಿ ಮುಗ್ಧರನ್ನಾಗಿ ಮಾಡುವ ಮಹಾ ಮಂತ್ರಶಕ್ತಿಯು ಆ ರಾಷ್ಟ್ರಪಿತನಲ್ಲಿದ್ದುದು ನಿಜ. ಇದು ಎಲ್ಲರೂ ಕಂಡುಂಡ ಮಾತಾಗಿದೆ. ಮೊದಲು ಕಡು ವಿರೋಧಿಯಾಗಿದ್ದ ವಲ್ಲಭಭಾಯಿಯವರು ಮುಂದೆ ಗಾಂಧೀಜಿಯವರಿಂದ ಹೂಡಲ್ಪಟ್ಟ ಪ್ರತಿಯೊಂದು ಚಳುವಳಿಯಲ್ಲಿಯೂ ಸತ್ಯಾಗ್ರಹದಲ್ಲಿಯೂ ಅವರ ಬಲಗೈಯಾಗಿ ಕೆಲಸ ಮಾಡಿದರು. ೧೯೧೯ ರಲ್ಲಿ ವಕೀಲಿಗೆ ಶರಣು ಹೊಡೆದರು. ಮುಂದೆ ಎಂದೂ ಕಚೇರಿಯ ಕಟ್ಟೆಯನ್ನು ಹತ್ತಲಿಲ್ಲ.

ಸತ್ಯಾಗ್ರಹ

ಎಲ್ಲಕ್ಕೂ ಮೊದಲು ಪ್ರಾರಂಭವಾದುದು ಖೇಡಾ ಸತ್ಯಾಗ್ರಹ. ಆದರ ತರುವಾಯ ನಾಗಪೂರ ಮತ್ತು ಬೋರಸದ ಸತ್ಯಾಗ್ರಹಗಳು. ಈ ಸತ್ಯಾಗ್ರಹಗಳು ಮುಂದೆ ಬರಲಿದ್ದ ಬಾರಡೋಲಿಯ ಮಹಾ ಸತ್ಯಾಗ್ರಹದ ಪೀಠಿಕೆಗಳಾಗಿ ಪರಿಣಮಿಸಿದವು. ಆ ಮೂರೂ ಸತ್ಯಾಗ್ರಹಗಳಲ್ಲಿ ಅವರಿಗೆ ಇಲ್ಲದ ಅನುಭವವು ಪ್ರಾಪ್ತವಾಗಿತ್ತು. ತುಂಟ ಹುಡುಗನಿದ್ದಾಗಿನಿಂದ ಸಂಘಟನೆ ಶಕ್ತಿಯು ಅವರಲ್ಲಿ ಚಿಗುರಿ ಬೆಳೆದು ಬಂದಿತ್ತೆಂಬ ಸಂಗತಿಯನ್ನು ಈಗಾಗಲೇ ಮೇಲೆ ವಿವರಿಸಿದೆ. ಸತ್ಯಾಗ್ರಹವನ್ನು ಸಂಘಟಿಸುವ ರೀತಿ ನೀತಿಗಳು, ಸ್ವಯಂಸೇವಕರನ್ನು ಕೂಡ ಹಾಕಿ ತರಬೇತಿಯನ್ನು ಕೊಡುವದು, ಶಿಸ್ತನ್ನು ಪಾಲಿಸಲು ಕಲಿಸುವದು, ಜನತೆಯೊಡನೆ ಸಮರಸ ಹೊಂದಿ ಅವರ ದುಃಖ-ದುಮ್ಮಾನಗಳನ್ನು ಕೇಳಿಕೊಂಡು ಅವುಗಳ ನಿವಾರಣೋಪಾಯಗಳನ್ನು ಕಂಡುಹಿಡಿಯುವದು, ಜನರಿಗೆ ಧೈರ್ಯಕೊಟ್ಟು ಅವರನ್ನು ಸತ್ಯಾಗ್ರಹಕ್ಕೆ ಹುರಿದುಂಬಿಸುವದು, ಎದುರುವ ಎಡರುಗಳಿಗೆ ತಲೆಗೊಟ್ಟು ನಿಲ್ಲಲು ಜನತೆಯನ್ನು ಅಣಿಗೊಳಿಸುವದು, ಇವೇ ಮೊದಲಾದವುಗಳಲ್ಲಿ ರೂಢಿಯು ಅವರಿಗೆ ಹೇಳತೀರದಷ್ಟಾಗಿತ್ತು.

೧೯೨೮ ರಲ್ಲಿ ಅತಿವೃಷ್ಟಿಯಿಂದ ಆ ಪ್ರಾಂತದಲ್ಲಿ ಬರಗಾಲವು ಪ್ರಾಪ್ತವಾಯಿತು. ಆದೇ ವೇಳೆಗೆ ಸರಕಾರವು ನೂರಕ್ಕೆ ೩೦ ರಷ್ಟು ಭೂಕಂದಾಯವನ್ನು ಏರಿಸಿತು. ರೈತರಲ್ಲಿ ಕಳವಳವೆದ್ದಿತು. ಬಾರಡೋಲಿ ತಾಲೂಕಿನ ರೈತರು ವಲ್ಲಭಭಾಯಿಯವರನ್ನು ಬರಮಾಡಿಕೊಂಡು ಅವರಿಗೆ ಸತ್ಯ ಸಂಗತಿಗಳನ್ನೆಲ್ಲ ತಿಳಿಸಿದರು. ಅಲ್ಲಿಯ ಬರಗಾಲದ ನಿಜ ಸ್ಥಿತಿಯನ್ನೂ ಸರಕಾರದವರು ಅದೇ ವರುಷ ಅನ್ಯಾಯದಿಂದ ಏರಿಸಿದ ತೆರಿಗೆಯನ್ನೂ ನೋಡಿ ಅವರ ಹೃದಯವು ಕರಗಿತು! ರೈತರ ಮುಖಂಡತ್ವ

ವನ್ನು ವಹಿಸಲು ತಮ್ಮ ಒಪ್ಪಿಗೆಯನ್ನು ಕೊಟ್ಟು ೨೦೦೦ ಸ್ವಯಂಸೇವಕರನ್ನು ಕೂಡ ಹಾಕಿ ಅವರಿಗೆ ಅವಶ್ಯವಿದ್ದ ತರಬೇತಿಯನ್ನು ಕೊಟ್ಟರು. ಅವರ ಮುಖಾಂತರ ಜನರಿಗೆ ಎಲ್ಲ ತರಹದ ಸಹಾಯವನ್ನು ಕೊಡಲು ಪ್ರಾರಂಭಿಸಿದರು. ಅವರು ಈ ಪ್ರಕಾರ ಜನತೆಯ ಸಲುವಾಗಿ ದುಡಿಯುತ್ತಿರುವಾಗ ಸರಕಾರವು ಏನೂ ಮಾಡದೆ ಸುಮ್ಮನೆ ಕುಳಿತುಬಿಟ್ಟಿತು. ಸರದಾರರು ಹೇಳಿದಂತೆ ಕೇಳಲು ರೈತರೆಲ್ಲರು ಬದ್ಧಕಂಕಣರಾದರು. ಆಗ ಸರದಾರರಿಂದ ಆವಿರ್ಭವಿಸಿದ ಗಟ್ಟಿಗತನ, ಮುಂದಾಲೋಚನೆ, ಸಹನಶಕ್ತಿ, ಎದೆಗಾರಿಕೆ, ಸ್ವಾರ್ಥತ್ಯಾಗ, ಸಂಘಟನೆ, ಜಿಗಟುತನ ಇವೆಲ್ಲವೂ ನಿಜಕ್ಕೂ ಹೊಗಳತಕ್ಕಂತಹವೇ ಸರಿ. ಸರಕಾರದವರು ಆಗಿನ ಕಾಲಕ್ಕೆ ಅಮಲಿನಲ್ಲಿ ತಂದ ಅತ್ಯುಗ್ರ ಕಾಯಿದೆಗಳು ಅಷ್ಟಿಷ್ಟಲ್ಲ. ಅವುಗಳಿಗೆ ಸರದಾರರೂ ಜನತೆಯೂ ಎಳ್ಳನಿತು ಸೊಪ್ಪು ಹಾಕಲಿಲ್ಲ. "ಬಂದದ್ದು ಬರಲಿ, ನಿನ್ನ ದಯವೊಂದಿರಲಿ" ಎಂಬ ಮನೋಧೈರ್ಯದಿಂದ ಜನತೆಯು ಸರದಾರರನ್ನು ಒಮ್ಮನಸ್ಸಿನಿಂದ ಹಿಂಬಾಲಿಸಿತು. ಕೊನೆಗೆ ಸರಕಾರವೇ ಸೋತು ತನ್ನ ಉಗ್ರ ಕಾಯಿದೆಗಳನ್ನೆಲ್ಲ ತಿರುಗಿ ತಕ್ಕೊಂಡದ್ದು ಸರ್ವಶ್ರುತವಿದೆಯಷ್ಟೆ. ಬಾರಡೋಲಿ ತಾಲೂಕಿನ ಜನರಿಗೆಲ್ಲ ಪರಿಹಾರವು ಸಂಪೂರ್ಣವಾಗಿ ಸಿಕ್ಕಿತು. ಲಿಲಾವಿನಲ್ಲಿ ಮಾರಾಟವಾಗಿದ್ದ ರೈತರ ಹೊಲಗಳೆಲ್ಲ ಅವರಿಗೆ ತಿರುಗಿ ಕೊಡಲ್ಪಟ್ಟವು. ನವಕರಿಗಳನ್ನು ಕಳೆದುಕೊಂಡಿದ್ದ ಗೌಡ-ಶಾನಭೋಗರಿಗೆ ಆವರವರ ನವಕರಿಗಳು ಅವರವರಿಗೆ ತಿರುಗಿ ಬಂದವು. ಆ ಗೆಲವಿನಿಂದ ಭಾರತ ಸ್ವಾತಂತ್ರ್ಯದ ಸಂಗ್ರಾಮಕ್ಕೆ ಹೇಳತೀರದಷ್ಟು ಉತ್ತೇಜನವು ಸಿಕ್ಕಿತೆಂಬ ಮಾತನ್ನು ಈ ಸಂದರ್ಭದಲ್ಲಿ ಓದುಗರ ಗಮನಕ್ಕೆ ತರಬಯಸುತ್ತೇವೆ. ಆದುದರಿಂದಲೇ, ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಾರಡೋಲಿ ಸತ್ಯಾಗ್ರಹಕ್ಕೆ ಅಷ್ಟೊಂದು ಮಹತ್ವಬಂದಿದೆ. ಆ ಸತ್ಯಾಗ್ರಹದಲ್ಲಿ ವಲ್ಲಭಭಾಯಿಯವರು ಸಂಪಾದಿಸಿದ ಅಪೂರ್ವ ಯಶಸ್ಸನ್ನು ಕಂಣಾರೆ ಕಂಡು ರಾಷ್ಟ್ರಪಿತನು ತುಂಬಾ ಸಂತುಷ್ಟನಾಗಿ ಅವರಿಗೆ "ಸರದಾರ" ಎಂಬ ನಾಮಕರಣ ಮಾಡಿದನು. ಅದನ್ನು ಮನಗಂಡು ರಾಷ್ಟ್ರಕ್ಕೆ ರಾಷ್ಟ್ರವೇ ಒಕ್ಕೊರಲಿನಿಂದ ಅವರಿಗೆ "ಸರದಾರ" ಎಂಬ ಬಿರುದನ್ನು ಕೊಟ್ಟಿತಲ್ಲದೆ ೧೯೩೧ರಲ್ಲಿ ಕರಾಚಿಯಲ್ಲಿ ಕಲೆತ ಕಾಂಗ್ರೆಸದ ೪೬ನೆಯ ಅಧಿವೇಶನಕ್ಕೆ ಅವರನ್ನು ಅಧ್ಯಕ್ಷರನ್ನಾಗಿ ಏಕಕಂಠದಿಂದ ಚುನಾಯಿಸಿತು. ಚಿಕ್ಕಂದಿನಲ್ಲಿ ಹುಡುಗರ ತುಂಟ ಸರದಾರನಾಗಿದ್ದ ವಲ್ಲಭಭಾಯಿಯು ಆಗ ರಾಷ್ಟ್ರದ ಏಕಮೇವಾದ್ವಿತೀಯ ನಚ್ಚಿನ ಸರದಾರನಾದನು. ಚಳವಳಿಗಳನ್ನು ಹೂಡಿದಾಗೆಲ್ಲ ಎಷ್ಟೋಸಲ ಸೆರೆಮನೆಯನ್ನು ಕಂಡು ಬಂದರು. ಕೊನೆಯ ಸಲ ೧೯೪೨ನೆಯ ಇಸವಿ ಆಗಷ್ಟ ತಿಂಗಳ ದಿನಾಂಕ ೯ರಂದು "ಹಿಂದುಸ್ತಾನವನ್ನು ಬಿಟ್ಟು ತೊಲಗಿರಿ" (Quit India) ಎಂಬ ಚಳವಳಿಯ ಮೂಲಕ ಎಲ್ಲ ಮುಖಂಡರೊಡನೆ ಬಂಧಿಸಲ್ಪಟ್ಟು ಅಹಮ್ಮದನಗರ ಕೋಟೆಯಲ್ಲಿಡಲ್ಪಟ್ಟರು. ಮುಂದೆ ೧೯೪೫ನೆಯ ಇಸವಿ ಜೂನ ತಿಂಗಳ ದಿನಾಂಕ ೧೫ ರಂದು ಬಿಡುಗಡೆ ಹೊಂದಿದರು.

ಕೊನೆಯ ಮಾತು

ಉಪಪ್ರಧಾನಿಗಳಾಗಿದ್ದಾಗ ಅವರಿಂದೆಸಗಲ್ಪಟ್ಟ ರಾಷ್ಟ್ರಹಿತದ ಕಾರ್ಯಕಲಾಪಗಳನ್ನೆಲ್ಲ ಪ್ರಾರಂಭದಲ್ಲಿಯೇ ವಿವೇಚಿಸಲಾಗಿದೆ. ಅವರಿಗೆ ಮಣಿಬೆಹೆನ್ (ಮಣಿಬೆನ್) ಎಂಬೊಬ್ಬ ಮಗಳೂ ದಹ್ಯಾಭಾಯಿ ಎಂಬೊಬ್ಬ ಮಗನೂ ಇರುವರು. ಅವರ ಧರ್ಮಪತ್ನಿ ಝವೇರಬಾಯಿಯವರು ಆ ಎರಡು ಮಕ್ಕಳನ್ನು ಹಡೆದು ಪರಲೋಕವಾಸಿಗಳಾದರು. ಆಗ ಸರದಾರರಿಗೆ ೩೫ ವರ್ಷಗಳಾಗಿದ್ದವು. ಲಗ್ನವಾಗುವ ವಯಸ್ಸು ಇನ್ನೂ ಇದ್ದರೂ ಸಹ, ಅವರು ಪುನಃ ಲಗ್ನವಾಗುವ ಗೋಜಿಗೆ ಹೋಗಲಿಲ್ಲ. ಇದರಿಂದ ಅವರಲ್ಲಿ ನೆಲೆಸಿದ್ದ ಅಸಾಧಾರಣವಾದ ಮನೋನಿರ್ಧಾರವು ಎಲ್ಲರ ನಿದರ್ಶನಕ್ಕೆ ಕಂಡುಬಂದಿತು.

ತುಂಟ ಹುಡುಗನೂ ಅಹುದು; ನಾಮಾಂಕಿತ ವಕೀಲರೂ ಅಹುದು; ಮಹಾತ್ಮರ ಪಟ್ಟಶಿಷ್ಯರೂ ಅಹುದು; ನಿರ್ಭಯವೃತ್ತಿಯ ಎದೆಗಾರರೂ ಅಹುದು; ಆದರ್ಶ ಸಂಘಟಕರೂ ಅಹುದು; ದೂರದೃಷ್ಟಿಯ ಮುತ್ಸದ್ದಿಯೂ ಅಹುದು; ರಾಷ್ಟ್ರದ ನಚ್ಚಿನ ಸರದಾರರೂ ಅಹುದು; ಉಕ್ಕಿನ ಮನುಷ್ಯರೂ ಅಹುದು. ಅಂತಪ್ಪ ವಲ್ಲಭಭಾಯಿಯವರು ೧೯೫೦ನೆಯ ಇಸವಿ

ಸೆಂಬರ ತಿಂಗಳ ದಿನಾಂಕ ೧೫ ರಂದು ಇಹಲೋಕ ಯಾತ್ರೆಯನ್ನು ಮುಗಿಸಿ ರಾಷ್ಟ್ರವನ್ನೆಲ್ಲ ಶೋಕಸಾಗರ ದಲ್ಲಿ ಮುಳುಗಿಸಿದರು! ಆಗ ಅವರಿಗೆ ೭೫ ವರ್ಷಗಳಾಗಿ ದ್ದವು. ದಯಾಘನನಾದ ಪರಮಾತ್ಮನು ಅವರ ಆತ್ಮಕ್ಕೆ ರಶಾಂತಿಯನ್ನೀಯಲಿ! ಇದೇ ತಿಂಗಳ ದಿನಾಂಕ ೧೫ಕ್ಕೆ ಅವರ ಪುಣ್ಯತಿಥಿಯು ರಾಷ್ಟ್ರದಲ್ಲೆಲ್ಲ ಒಳ್ಳೇ ವೈಭವದಿಂದ ಜರುಗುವದರಿಂದ ಅವರ ವ್ಯಕ್ತಿ ಪರಿಚಯ ವನ್ನು ಓದುಗರಿಗೆ ಈ ಸಂಚಿಕೆಯಲ್ಲಿ ಮಾಡಿಕೊಡ ಲಾಗಿದೆ.

: ಸಿರಿಗನ್ನಡಂ ಗೆಲ್ಗೆ :

ಮಹರ್ಷಿ ಸುಕರಾತ

ಲೇಖಕರು: ಶ್ರೀ. ಎಲ್. ಬಿ. ದೇಸಾಯಿ

"ಸೋಲು ಹುಂಬರ ಗುಲ್ಲು, ಗೆಲವು ಕಾಣ್ಬರ ಸೊಲ್ಲು" —ಬೇಂದ್ರೆ

ಗ್ರೀಸದ ಅಥೆನ್ಸ ಸಂಸ್ಥಾನದ ಕವಿಯಾದ ಆಗಂಥನ ಗೆ ಉತ್ತಮ ನಾಟಕ ಬರೆದುದರ ಮೂಲಕ ಮೊದಲನೇ ಬಹುಮಾನ ದೊರಕಿತ್ತು. ಆದುದರಿಂದ ಆವನು ತನ್ನ ಮಿತ್ರರಿಗೆ ವೃಷ್ಟಾನ್ನ ಭೋಜನಕ್ಕೆ ಔತಣವಿತ್ತು ಅವರನ್ನು ಬರಮಾಡಿಕೊಂಡಿದ್ದನು. ಭೋಜನದ ನಂತರ ಅತಿಥಿಗಳು ಅವನಿಗೆ ಪ್ರಿಯ ವಿಷಯವಾದ ಪ್ರೇಮದ ಬಗ್ಗೆ ಚರ್ಚೆ ಪ್ರಾರಂಭಿಸಿದರು· ಸರತಿಯಂತೆ ಅತಿಥಿಯೊಬ್ಬರು ತಮ್ಮದೇ ಆದ ರೀತಿಯಲ್ಲಿ ಪ್ರೇಮದ ವ್ಯಾಖ್ಯೆಯನ್ನು ಕೊಡುತ್ತಿದ್ದರು.

"ಪ್ರೇಮವು ಪ್ರಾಚೀನವಾದುದು. ಅದೊಂದು ಮಹಾ ಶಕ್ತಿ. ತರುಣರನ್ನು ಶೂರರನ್ನಾಗಿಸುವ, ವೀರರನ್ನಾಗಿ ಮಾಡುವ ಶಕ್ತಿ ಅದರಲ್ಲಿದೆ. ಪ್ರಿಯಕರನು ತನ್ನ ಪ್ರೇಯಸಿಯ ಪರೋಕ್ಷದಲ್ಲಿ ಪುಕ್ಕನಾಗಿರಲು ನಾಚುತ್ತಾನೆ. ಆದುದರಿಂದ ಪ್ರೇಮಿಗಳ ತಂಡವೊಂದನ್ನು ಕೊಡಿರಿ. ನಾನು ಜಗವನ್ನು ಜಯಿಸಿ ತೋರಿಸಬಲ್ಲೆ" ಎಂದನ್ನೊಬ್ಬ.

"ಆವರಿ ಸಕಾಮ ಪ್ರೇಮ ಮತ್ತು ನಿಷ್ಕಾಮಪ್ರೇಮ ಆಕರ್ಷಣೆ ಇವುಗಳಲ್ಲಿ ವ್ಯತ್ಯಾಸವಿದೆ. ತಾರುಣ್ಯದ ಹೂ ಆರಿದಂತೆ ಹೀನವಾದ ಸಕಾಮ ಪ್ರೇಮವು ನಾಶವಾಗುವದು. ಆದರೆ ನಿಷ್ಕಾಮ ಪ್ರೇಮವು ಅಥವಾ ಆತ್ಮದ ಆಕರ್ಷಣೆಯು ಸ್ಥಿರವಾದುದು, ನಿರಂತರವಾದುದು" ಎಂದನು ಇನ್ನೊಬ್ಬ.

ಕೊನೆಗೆ ಬರೆಗಾಲಿನ ವೇದಾಂತಿಯ ಸರತಿ ಬಂತು. ಅವನು ತನ್ನದೇ ಆದ ರೀತಿಯಲ್ಲಿ ಹೀಗೆ ನುಡಿದನು: "ದಿವ್ಯವಾದ ಸೌಂದರ್ಯದ ಸಲುವಾಗಿ ಇರುವ ಮಾನವೀಯ ಆತ್ಮದ ತೃಷೆಯೇ ಪ್ರೇಮವು. ಪ್ರೇಮಿಯು ಕೇವಲ ಸತ್ಯ ಶೋಧನೆಯಲ್ಲಿ ಕೂತಹಲನಾಗಿರದೆ, ಸತ್ಯದ ಉತ್ಪತ್ತಿಗಾಗಿ, ಅದರ ನಿರಂತರತೆಗಾಗಿ, ಶಾಶ್ವತೆಗಾಗಿ ಆತುರನಾಗಿರುತ್ತಾನೆ. ಆದುದರಿಂದಲೇ ಸ್ತ್ರೀ-ಪುರುಷರು ಪ್ರೇಮಿಗಳಾಗಿರುವರು ಮತ್ತು ಮಾನವನ ಕುಲವೃದ್ಧಿ ಅನಂತಕಾಲ ಆಗುವಂತೆ ಮಾಡುವರು. ತಂದೆ-ತಾಯಿಗಳು ಮಕ್ಕಳನ್ನು ಪ್ರೀತಿಸುವರು. ಏಕಂದರೆ ಪ್ರೀತಿಯ ತಂದೆತಾಯಿಗಳು ಕೇವಲ ಮಕ್ಕಳ ಜನಕರಾಗಿರದೆ, ಶಾಶ್ವತವಾದ ಸೌಂದರ್ಯದ ಪಿಪಾಸೆಗಾಗಿ ಅರಸುವವರಾಗಿ, ಸಹಭಾಗಿಗಳಾಗಿ, ಸಹೋದ್ಯೋಗಿಗಳಾಗಿ ಇರುವರು. ಪ್ರೇಮದ ಮುಖಾಂತರ ಚಿರಂತನಗೊಳಿಸಲು ನಾವು ಶೋಧಿಸುತ್ತಿರುವ ಸೌಂದರ್ಯವೆಂದರೇನು? ಅದು ಜ್ಞಾನ, ಗುಣ, ಕೀರ್ತಿ, ಧೈರ್ಯ,

ನ್ಯಾಯ, ವಿಶ್ವಾಸ ಅಂದರೆ ಸೌಂದರ್ಯವು ಸತ್ಯ; ಸತ್ಯವು ಸೌಂದರ್ಯ; ಸತ್ಯವು ದೇವರೆಡೆಗೆ ಒಯ್ಯುವ ಸಾಧನ; ಸತ್ಯವು ದೇವದರ್ಶಕ ಪಥವು."

ನೆರೆದ ಅತಿಥಿಗಳು ಈ ಬರೆಗಾಲಿನ ವೇದಾಂತಿಯ ಭಾಷಣವನ್ನು ಬಹಳ ಪ್ರಶಂಸಿಸಿದರು.

ಎರಡು ಸಾವಿರ ವರುಷಗಳ ಹಿಂದಿನ ಮಾತು. ಗ್ರೀಸ ದೇಶದಲ್ಲಿ ಅಥೆನ್ಸ ಎಂಬ ಪಟ್ಟಣ. ಅಲ್ಲಿ ಮೇಲೆ ಹೇಳಿದ ಹರವಾದ ಮೂಗಿನ, ದಪ್ಪವಾದ ತುಟಿಗಳ, ಗುಳ್ಳಿಬಿದ್ದ ಕಣ್ಣುಗಳ, ಅಸಹ್ಯವಾದ ದೇಹವುಳ್ಳ ಬರೆಗಾಲ ವೇದಾಂತಿಯ ಜನನವಾಯಿತು. ಈ ಬರೆಗಾಲ ವೇದಾಂತಿಯೇ ಸಾಕ್ರೇಟೀಸನು. ಸಾಕ್ರೇಟೀಸನಿಗೆ ಹಿಂಪೀಯರು ಸುಕುರಾತ ಎನ್ನುವರು. ಇಂಥ ಅಸಹ್ಯ ದೇಹದ ಸುಕರಾತನಲ್ಲಿ ಎಂತಹ ದಿವ್ಯ ವಿಚಾರಗಳು!

ಸುಕರಾತನು ವೇದಾಂತಿ, ಶಿಕ್ಷಣತಜ್ಞ. ಅವನೇ ಮೊಟ್ಟಮೊದಲು ಪ್ರಶ್ನೋತ್ತರ ಪದ್ಧತಿಯನ್ನು ಅಥವಾ ಸಂಭಾಷಣಾ ಪದ್ಧತಿಯನ್ನು ಬಳಕೆಯಲ್ಲಿ ತಂದನು. ಸುಕರಾತನು 'ನಾನು ಅರಿತಿರುವದು ಒಂದೇ ಒಂದು. ಅದೆಂದರೆ ನನಗೆ ಏನೂ ಗೊತ್ತಿಲ್ಲದಿರುವದು' ಎಂದು ಹೇಳಿ ತನ್ನಂತೆ ಇತರರಿಗೆ ಗೊತ್ತಿಲ್ಲವೆಂದು ಸಿದ್ಧಮಾಡಲು ಹವಣಿಸಿದ್ದಾನೆ. ಸ್ವತಃ ಕಲಿಯುವದು, ಅನ್ಯರಿಗೆ ಕಲಿಸಲು ನೆರವಾಗುವದು ತನ್ನ ಆದ್ಯ ಕರ್ತವ್ಯವೆಂದು ಭಾವಿಸಿದ್ದನು. ಅವನೊಬ್ಬ ಮಾನಸಿಕ ಚಿಕಿತ್ಸಕನಾಗಿ ಅನ್ಯರಿಗೆ ಅವರ ವಿಚಾರೋದಯಕ್ಕೆ ನೆರವೀಯುತ್ತಿದ್ದನು.

ಊಹಾ ಸಂವಾದ (Inductive discourse) ಮತ್ತು ಸಾರ್ವತ್ರಿಕ ವ್ಯಾಖ್ಯೆ (Universal definitions) ಇವೆರಡೂ ಸುಕುರಾತನಿಗೆ ಸೇರಿದವುಗಳು. ಊಹಾ ಪದ್ಧತಿಯಿಂದ ಅವನು ವ್ಯಾಖ್ಯೆಯನ್ನು ಕೊಡುತ್ತಿದ್ದನು. ಎಷ್ಟೋ ಸಲ ಅವನ ವ್ಯಾಖ್ಯೆಗಳು ಅಜ್ಞಾನದ ಮೂಲಕ ಸರಿಯಾಗಿರುತ್ತಿದ್ದಿಲ್ಲ. ಅವನಿಗೆ ತನ್ನ ಅಜ್ಞಾನದ ಅರಿವು ಇದ್ದಿತು. ಆದರೆ ಸುಕರಾತನು ಅನ್ಯರಲ್ಲಿ ಜ್ಞಾನವೂ ಇದೆಯೆಂಬುದನ್ನೂ ಅರಿತಿದ್ದನು. ಅವರಿಗೆ ತಮ್ಮ ಜ್ಞಾನದ ಪ್ರಭಾವವನ್ನು ಬೀರಲು ಸಹಾಯ ಮಾಡುತ್ತಿದ್ದನು.

ಯಾರಿಗಾದರೂ ಏನಾದರೂ ಹೊಳೆದರೆ, ಅ... ಅದನ್ನು ಮತ್ತೊಬ್ಬರಿಗೆ ತಿಳಿಸಲು ತವಕ ಪಡು... ಸಹಜ. ಅಂದರೆ ಒಬ್ಬನಲ್ಲಿ ವಿಶ್ವಾಸ ಉಂಟಾ... ಉಳಿದವರಲ್ಲಿಯೂ ಸಹ ವಿಶ್ವಾಸ ಉಂಟಾಗುವ... ಮಾಡಬಹುದು ಎಂಬುದೇ ಇದರ ತಿರುಳು. ಈ ಪ್ರಕ... ವಾಗಿ ಯಾವದಾದರೊಂದು ಸಮಸ್ಯೆಯಲ್ಲಿ ವಿಶ್ವಾ... ಉಂಟಾದಲ್ಲಿ, ಅದು ಸಾರ್ವತ್ರಿಕವಾಗಬಹುದು. ... ತೆರನಾದ ಸಂಭಾಷಣ ಪದ್ಧತಿಯು ಸುಕುರಾ... ವೈಶಿಷ್ಟ್ಯತೆ.

ಸುಕರಾತನ ಸಂಭಾಷಣ ಪದ್ಧತಿಯನ್ನು ಮೂ... ವಿಭಾಗಗಳಾಗಿ ಅಥವಾ ಅವಸ್ಥೆಗಳಾಗಿ ವಿಂಗಡಿ... ಬಹುದು: (೧) ಅಭಿಪ್ರಾಯ: ಈ ಅವಸ್ಥೆಯ... ವ್ಯಕ್ತಿಯು ತನ್ನ ಅಭಿಪ್ರಾಯಕ್ಕೆ ಸಾಕಷ್ಟು ಆಧಾ... ಗಳನ್ನು ಕೊಡಲು ಅಶಕ್ಯನಾಗುವನು. (೨) ಪರೀ... ಡನೆ: ವ್ಯಕ್ತಿಯು ಮೊದಲು ಸರಿ ಎಂದು ತಿಳಿದುಕೊಂ... ದುದನ್ನು ತಪ್ಪು ಎಂದು ತಿಳಿಸಿಕೊಡುವದು. (... ಸಂಯೋಗ: ಈ ಅವಸ್ಥೆಯಲ್ಲಿ ವ್ಯಕ್ತಿಯು ಅನು... ಗಳನ್ನು ಕೂಲಂಕಷವಾಗಿ ಸಂಯೋಜಿಸಿ ಅವು... ವಿಷಯವಾಗಿ ಸಕಾರಣಾತ್ಮಕವಾಗಿ ವಿಶ್ವಾಸವ... ಪ್ರದರ್ಶಿಸುವದು.

× × ×

ಶಿಕ್ಷಕನು ತನ್ನ ಬಾಲಕರ ಅನುಭವದ ಪರಿ... ಯನ್ನು ಅರಿತಲ್ಲಿ, ಸಂಭಾಷಣಾ ಪದ್ಧತಿಯನ್ನು ಕಲಿಸ... ಯಶಸ್ವಿಯಾಗಿ ಉಪಯೋಗಿಸಬಹುದು.

× × ×

ಸುಕರಾತನು ಬುದ್ಧಿವಂತನೂ ಸಹನಶೀಲನ... ನಿಗರ್ವಿಯೂ ನಿಸ್ಪೃಹನೂ ಆಗಿದ್ದನು. ಅವನ ಬು... ವಂತಿಕೆಯನ್ನು ಕಂಡು ಬೆರಗಾಗಿ ಜನರು ಅವ... ಉಪದೇಶ ಕೇಳಲು ದೇಶ ವಿದೇಶಗಳಿಂದ ಬರುತ್ತಿದ್ದ... ಅವನ ಕೀರ್ತಿಯು ನಾಲ್ಕೂ ದಿಕ್ಕುಗಳಿಗೆ ಹಬ್ಬಿ... ನವಯುವಕರು ಅವನಿಂದ ಸಿದ್ಧಾಂತವನ್ನು ಕಲಿಯ... ಬರಹತ್ತಿದರು. ಅವನ ಹೆಸರು ಎಲ್ಲೆಡೆಗೂ ಕೇಳ... ಹತ್ತಿತು.

ಅಂಥ ಸುಕರಾತನು ಸ್ವಯಂಪ್ರತಿಷ್ಠೆಯ... ಮು... ಗಿದ ಅಥೆನ್ಸ ಜನರಿಗೆ ಸತ್ಯದ ಕನ್ನಡಿಯನ್ನು ...

ಅವರು ಸ್ತಂಭೀಭೂತರಾದರು. ಏಕೆಂದರೆ ಅವರು ಕನ್ನಡಿಯಲ್ಲಿ ಮಾನವನ ಪ್ರತಿಬಿಂಬವನ್ನು ಕಾಣದೆ, ಕಾಡುಪಶುವಿನ ಪ್ರತಿಬಿಂಬವನ್ನು ಕಂಡರು. ಅವನಿಗೆ ದೊರೆಯುತ್ತಿರುವ ಮನ್ನಣೆಯನ್ನು ನೋಡಲು ಸಹನ ವಾಗದೆ ಅವರು ಅವನನ್ನು ಕಾಡಲು, ಹಿಂಸೆ ಕೊಡಲು ಪ್ರಾರಂಭಿಸಿದರು.

ಕ್ರಮೇಣವಾಗಿ ಅಥೆನ್ಸ ನಾಗರಿಕರಲ್ಲಿ ಉಚ್ಚ ಭಾವ ಗಳ ಅರಿವು ಆಗದೆ ಹೋಯಿತು. ನೈತಿಕ ಅಧಃಪತನ ವುಂಟಾಯಿತು. ಕ್ರಿಸ್ತ ಶಕೆ ಪೂರ್ವ ೪೦೪ ರಲ್ಲಿ ಜರು ಗಿದ ಪೆಲೋಪಿನ್ಸ ಯುದ್ಧದಲ್ಲಿ ಅಥೆನ್ಸರು ಸೋತರು. ಆ ಯುದ್ಧವು ಸ್ಪಾರ್ಟಾ ಸಂಸ್ಥಾನದ ಸರ್ವಾಧಿಕಾರತ್ವ ಮತ್ತು ಅಥೆನ್ಸದ ಲೋಕಸತ್ತಾತ್ಮಕ ವಾದಿಗಳಿಗಾಗಿ ಆಯಿತು.

ಮಾನವೀಯತೆ, ಜೀವನದ ಘನತೆ, ವ್ಯಕ್ತಿ ಸ್ವಾತಂತ್ರ್ಯದ ಅರಿವು ಇಲ್ಲದ ಹಾಗಾಯಿತು. ಸರ್ವಾಧಿ- ಕಾರಿ ಕ್ರೀಟಿಯಸ್ ಸ್ವತಂತ್ರ ಸರಕಾರವನ್ನು ಉರುಳಿಸಿ ದನು. ಅದೇ ಅವನ ಸರ್ವಾಧಿಕಾರಕ್ಕೆ ಮುಳುವಾಯಿತು. ಪರಿಣಾಮವು ಕ್ರಾಂತಿಯಲ್ಲಿ ತಿರುಗಿತು. ಕ್ರಾಂತಿಯು ತನ್ನಲ್ಲಿ ಹುದಗಿದ್ದ ದುಷ್ಟ ಶಕ್ತಿಗಳನ್ನು ಕಾರಿತು. ಮಾನವೀಯತೆಯು ಅಳಿದು ಪಾಶವೀಯತೆಯು ಉಳಿ ಯಿತು. ಒಂದು ಕಡು ನಸುಕಿನಲ್ಲಿ ಸುಕರಾತನ ಮೇಲೆ ಅಪರಾಧ ಹೊರಿಸಿ ಕೆಳಗಿನಂತೆ ಸಾರಲಾಯಿತು:"ಅಥೆನ್ಸ ಪಟ್ಟಣದ ನಾಗರಿಕರು ಪೂಜಿಸುತ್ತಿದ್ದ ದೇವರನ್ನು ಪೂಜಿ ಸದೆ ಇದ್ದುದಕ್ಕೆ ಮತ್ತು ತನ್ನವೇ ಆದ ದೈವಿಕ ವಿಚಾರ ಗಳನ್ನು ಪ್ರಸಾರ ಮಾಡಿ, ನವಯುವಕರನ್ನು ಅಡ್ಡದಾರಿ ಹಿಡಿಸಿದ್ದಕ್ಕೆ ಸುಕರಾತನು ಅಪರಾಧಿ. ಅಪರಾಧಕ್ಕೆ ಪ್ರಾಯಶ್ಚಿತ್ತವೆಂದರೆ ಮರಣ ದಂಡನೆ."

ಹೀಗೆ ಅಪರಾಧವನ್ನು ಹೊರಿಸಿ ಅವನನ್ನು ಮರಣ ದಂಡನೆಗೆ ಈಡು ಮಾಡುವ ಒಳಸಂಚಿನಲ್ಲಿ ತೊಗಲಿನ ವ್ಯಾಪಾರಸ್ಥನಾದ ಅನಿಟಸ್‌ನು ಪ್ರಮುಖನಾಗಿದ್ದನು. ಏಕೆಂದರೆ ಸುಕರಾತನು ಅನಿಟಸ್‌ನ ಮಗನಿಗೆ ತೊಗ ಲಿನ ವ್ಯವಹಾರವನ್ನು ಬಿಟ್ಟು, ವೇದಾಂತವನ್ನು ಅಭ್ಯಾಸ ಮಾಡಲು ಹೇಳಿದ್ದನು. ಆದುದರಿಂದ ಅದು ತೊಗಲು ಮತ್ತು ಪಾಂಡಿತ್ಯ ಇವುಗಳ ದ್ವಂದ್ವವಾಗಿತ್ತು. ಕೊನೆಗೆ ತೊಗಲು ಗೆದ್ದಿತು, ಪಾಂಡಿತ್ಯ ಸೋತಿತು. ನ್ಯಾಯಾಲಯ ದಲ್ಲಿ ಅನ್ಯಾಯದ ನಾಟ್ಯವು ಯಶಸ್ವಿಯಾಗಿ ಮುಗಿ ಯಿತು. ಸುಕರಾತನಿಗೆ ವಿಷ ಕೊಡಲು ಅಪ್ಪಣೆ ಯಾಯಿತು.

ಸಹನಶೀಲನಾದ, ಸಚ್ಚರಿತ್ರನಾದ, ಸತ್ಯವಾದಿಯಾದ ಸುಕರಾತನು, ನ್ಯಾಯಾಲಯದಲ್ಲಿ, "ಧೈರ್ಯದಿಂದ ಜೀವನವನ್ನು ಎದುರಿಸಿದಂತೆ, ಮರಣವನ್ನೂ ಎದುರಿ ಸೋಣ. ಜನನವಾದರೆ ಹಿಗ್ಗಬಾರದು. ಮರಣವಾದರೆ ಕುಗ್ಗಬಾರದು. ಎರಡನ್ನೂ ಒಂದೇ ದೃಷ್ಟಿಯಿಂದ ಕಾಣ ಬೇಕು, ಸ್ವೀಕರಿಸಬೇಕು. ಮೃತ್ಯುವಿನಿಂದ ಪಾರಾಗು ವದು ಸುಲಭ. ಪಾಪತನದಿಂದ ಪಾರಾಗುವದು ಕಠಿಣ. ಏಕೆಂದರೆ ಮೃತ್ಯುವಿಗಿಂತ ಪಾಪವು ನಮ್ಮನ್ನು ಬೇಗನೆ ಆವರಿಸುವದು. ಮೃತ್ಯುವಿನ ಫಲವನ್ನು ನಾನು ಅನು ಭೋಗಿಸಿದರೆ, ಪಾಪದ ಫಲವನ್ನು ಅವರು ಅನುಭವಿಸ ಬೇಕಾಗುವದು'' ಎಂದು ಹೇಳಿ ಸತ್ಯಕ್ಕಾಗಿ, ತನ್ನ ಸಿದ್ಧಾಂತಕ್ಕಾಗಿ ವಿಷದ ಕೊನೆಯ ಗುಟಕನ್ನು ಕುಡಿದು ನಗುತ್ತ ಪ್ರಾಣತ್ಯಾಗವನ್ನು ಕ್ರಿ. ಪೂ. ೩೯೯ ರಲ್ಲಿ ಮಾಡಿದನು.

ಅಂದು ಅಂದಿನ ಜನಾಂಗಕ್ಕೆ ಸುಕರಾತನ ತತ್ವ ಪ್ರಣಾಲಿಯು ಬಾಧಕವಾಗಿದ್ದರೆ ಇಂದು ಇಂದಿನ ಜನಾಂಗಕ್ಕೆ ಅದೇ ಸುಕರಾತನ ತತ್ವಪ್ರಣಾಲಿಯು ಸಾಧಕವಾಗಿದೆ. ಮಹಾಮಹರ್ಷಿಯು ಮಡಿದರೂ, ಅವನ ಸಿದ್ಧಾಂತವು, ತತ್ವಪ್ರಣಾಲಿಯು ಅನುರವಾಗಿವೆ*

---

*ಆಧಾರ ಗ್ರಂಥಗಳು:—

i) Living Biographies of Great Philosophers
—Thomas & Thomas

ii) Great Educators
—Robert Rusk

ಸಂಸ್ಕೃತ ಸೂತ್ರಗಳಲ್ಲಿ ಬರೆದ ಕನ್ನಡ ವ್ಯಾಕರಣ

ಲೇಖಕರು: ಶ್ರೀ ಶಟ್ಟಿ ಶ್ಯಾಮರಾಯರು, ಧಾರವಾಡ

ಕ್ರಿ. ಶ. ೧೦೬೪ ರಲ್ಲಿ ಭಟ್ಟಾಕಲಂಕ ಎಂಬ ವೈಯಾಕರಣಿಯು ಕರ್ನಾಟಕ ಶಬ್ದಾನುಶಾಸನವೆಂಬ ಕನ್ನಡ ವ್ಯಾಕರಣವನ್ನು ರಚಿಸಿದನು. ಅದರ ಸೂತ್ರಗಳೆಲ್ಲ ಪಾಣಿನಿಯ ವ್ಯಾಕರಣದ ರೀತಿಯಲ್ಲಿ ಸಂಸ್ಕೃತದಲ್ಲಿ ರಚಿಸಲ್ಪಟ್ಟಿವೆ. ಶಬ್ದಾನುಶಾಸನದಲ್ಲಿ ನಾಲ್ಕು ಭಾಗಗಳಿವೆ ಅಥವಾ ಪಾದಗಳಿವೆ. ಮೊದಲನೆಯ ಪಾದದಲ್ಲಿ ಕನ್ನಡದ ಸ್ವರ ವ್ಯಂಜನಗಳು, ಸಂಧಿಯಿಂದ ಅವುಗಳಲ್ಲಾಗುವ ಬದಲಾವಣೆಗಳು, ಎರಡನೆಯ ಪಾದದಲ್ಲಿ ನಾಮ ಸರ್ವನಾಮಗಳ ವಿಭಕ್ತಿರೂಪಗಳು ಆ ವಿಭಕ್ತಿಗಳ ಅರ್ಥಗಳೂ ನಿರೂಪಿಸಲ್ಪಟ್ಟಿವೆ. ಮೂರನೆಯ ಪಾದದಲ್ಲಿ ಒಂದು ಶಬ್ದಕ್ಕೆ ಮತ್ತೊಂದು ಶಬ್ದವನ್ನು ಕೂಡಿಸಿ ಸಾಧಿಸಿಕೊಳ್ಳಬಹುದಾದ ಅಥವಾ ನಾಮಗಳಿಗೆ ಪ್ರತ್ಯಯಗಳನ್ನು ಹಚ್ಚಿಮಾಡಿಕೊಳ್ಳಬಹುದಾದ ತದ್ಧಿತ ರೂಪಗಳನ್ನು ಹೇಳಲಾಗಿದೆ. ಕೊನೆಯ ಪಾದದಲ್ಲಿ ಕ್ರಿಯಾಪದ ರೂಪಗಳನ್ನು ಧಾತುಗಳಿಗೆ ಪ್ರತ್ಯಯಗಳನ್ನು ಹಚ್ಚಿ ಸಾಧಿಸಿಕೊಂಡ 'ಮಾಡಿ, 'ಮಾಡಲು' ಮುಂತಾದ ಕೃದಂತರೂಪಗಳನ್ನು ಹೇಳಲಾಗಿದೆ.

ಮಾತಿನಲ್ಲಿ ನಾವು ಬಳಸುವ ರೂಪಗಳನ್ನು ಒಡೆದು ಪರೀಕ್ಷಿಸುವದೇ ಶಬ್ದಶಾಸ್ತ್ರವಾದ ವ್ಯಾಕರಣದ ರೀತಿಯು. ಈ ರೂಪಗಳನ್ನು ಎರಡು ರೀತಿಯಿಂದ ಒಡೆದು ನೋಡಬಹುದು. ಒಂದು, ಅದು ಯಾವ ಯಾವ ಬೇರೆ ಬೇರೆ ಧ್ವನಿಗಳಿಂದ ಅಥವಾ ವರ್ಣಗಳಿಂದ ಕೂಡಿದೆ ಎಂದು ನೋಡುವ ರೀತಿ. ಉದಾ: 'ಶಾಸ್ತ್ರ' ಎಂಬ ಶಬ್ದವನ್ನು ಒಡೆದು ನೋಡಿದರೆ ಅದರಲ್ಲಿ ಶ್+ಆ+ಸ್+ತ್+ರ್+ಅ ಇಷ್ಟು ಬೇರೆಬೇರೆ ವರ್ಣಗಳಿವೆ ಎಂದು ಗೊತ್ತಾಗುವದು. 'ಶಾಸ್ತ್ರ' ವು ಶಕಾರ, ಆಕಾರ, ಸಕಾರ, ತಕಾರ, ರಕಾರ, ಅಕಾರಗಳಿಂದ ಕೂಡಿ ಆಗಿದೆ. ರೂಪಗಳನ್ನು ಒಡೆದು ನೋಡುವ ಅಥವಾ ಪೃಥಕ್ಕರಿಸುವ ಇನ್ನೊಂದು ರೀತಿಯನ್ನು ನೋಡೋಣ. ಒಂದರ ಹಾಗೆ ಒಂದು ಇದ್ದ ಶಬ್ದರೂಪಗಳನ್ನು ಒಟ್ಟಿಗೆ ಹಚ್ಚಿ ನೋಡಿದರೆ ಬೇರೆಬೇರೆ ಅರ್ಥಗಳು ತಿಳಿಯುವ ಹಾಗೆ ಮಾತುಗಳನ್ನು ಹೇಗೆ ಬಳಸುವೆವು ಎಂಬ ತತ್ವವು ಗೊತ್ತಾಗುವದು. ಉದಾ: ವ್ಯಾಕರಣದ, ವ್ಯಾಕರಣವನ್ನು, ವ್ಯಾಕರಣದಲ್ಲಿ ವ್ಯಾಕರಣದಿಂದ ಮುಂತಾದ ಶಬ್ದಗಳನ್ನು ಒಂದಕ್ಕೊಂದು ಹಚ್ಚಿನೋಡಲಾಗಿ ಅವುಗಳಲ್ಲಿ 'ವ್ಯಾಕರಣ' ಎಂಬ ಮಾತು ಸಾಧಾರಣವಾಗಿದೆ. ಆದರ ಮುಂದೆ ಬಂದ 'ದ' (=ದ್+ಅ), 'ವನ್ನು, (=ವ್+ಅನ್ನು), 'ದಲ್ಲಿ' (=ದ್+ಅಲ್ಲಿ), 'ದಿಂದ' (=ದ್+ಇಂದ) ಇವುಗಳಿಗೆ 'ವಿಭಕ್ತಿ' ಎಂಬ ಸಂಜ್ಞೆ ಇದೆ. 'ವಿಭಕ್ತಿ' ಎಂದರೆ ವಿಭಾಗ. ನಾವು 'ವ್ಯಾಕರಣದಲ್ಲಿ' ಎಂಬ ಮಾತನ್ನು ವಿಭಾಗಿಸಿದ್ದೇವೆ. ಆದ್ದರಿಂದ 'ಅಲ್ಲಿ' ಎಂಬುದು ವಿಭಕ್ತಿ ಪ್ರತ್ಯಯವೆನಿಸುತ್ತದೆ. ಮೂಲಶಬ್ದಕ್ಕೆ 'ಪ್ರಕೃತಿ' ಎಂಬ ಹೆಸರು. 'ವ್ಯಾಕರಣ' ಎಂಬ 'ಪ್ರಕೃತಿ' 'ಅಲ್ಲಿ' ಎಂಬ 'ಪ್ರತ್ಯಯ' ಸೇರಿ 'ವ್ಯಾಕರಣದಲ್ಲಿ' ಎಂಬ 'ಪದ' ವಾಗಿದೆ. ಪ್ರಕೃತಿ ಪ್ರತ್ಯಯಗಳು ಕೂಡುವಾಗ ಪ್ರಕೃತಿಯಲ್ಲಾಗಲಿ, ಪ್ರತ್ಯಯದಲ್ಲಾಗಲಿ ನಾನಾಪ್ರಕಾರದ ಬದಲಾವಣೆಗಳಾಗುವವು. 'ಕೊಲ್ಲನು' 'ಕೊಲ್ಲುವನು' 'ಕೊಂದನು' ಈ ರೂಪಗಳನ್ನು ನೋಡಿರಿ. ಮೊದಲನೆಯದರಲ್ಲಿ 'ಕೊಲ್ಲು' ಎಂಬದರ ಕಡೆಯ 'ಉ' ಲೋಪವಾಗಿದೆ. ಎರಡನೆಯದರಲ್ಲಿ ಕೊಲ್ಲು + ಅನು. ಈ ಪ್ರಕೃತಿ ಪ್ರತ್ಯಯಗಳ ನಡುವೆ ವ ಕಾರವು ಒಂದು ಹೆಚ್ಚಾಗಿ ಬಂದಿರುವದು. ಅದು ಭವಿಷ್ಯತ್ ಕಾಲದ ಸೂಚಕವಾದದ್ದು. ಮೂರನೆಯದರಲ್ಲಿ 'ಕೊಲ್' ಎಂಬದರಲ್ಲಿಯ ಲ ಕಾರವು ಹೋಗಿ ನ ಕಾರವು ಬಂದಿರುವದು. ಶಬ್ದರೂಪಗಳನ್ನು ಒಡೆದು ಹೀಗೆ ಪ್ರಕೃತಿ ಪ್ರತ್ಯಯಗಳನ್ನು ಬೇರೆ ತಿಳಿಸಿ ಅವು ಕೂಡುವಾಗ ನಡೆಯುವ ಬೇರೆ ಬೇರೆ ಸಂಧಿ ಕಾರ್ಯಗಳನ್ನು ವಿವರಿಸುವದೇ ವ್ಯಾಕರಣದ ಮುಖ್ಯ ವಿಷಯವೆಂದು ಹೇಳಬಹುದು. ಕ್ರಿಯಾರ್ಥವನ್ನು ಹೇಳುವದೇ ಧಾತುವು; ಉಳಿದ ಅರ್ಥವುಳ್ಳ ಶಬ್ದಗಳಿಗೆಲ್ಲ 'ಲಿಂಗ' ಅಥವಾ ಪ್ರಾತಿಪದಿಕವೆಂಬ ಸಂಜ್ಞೆ. ಶಬ್ದಾನು

ಶಾಸನದ ಸೂತ್ರಗಳು ಇದರ ಬಗೆಗೆ ಸಂಸ್ಕೃತದಲ್ಲಿ ಹೀಗಿವೆ: "ಕ್ರಿಯಾರ್ಥೋ ಧಾತುಃ" (೧ನೆಯದಿಂದ ೧೨ನೆಯ ಸೂತ್ರ) "ಅರ್ಥ ನ ಲಿಂಗಂ" (೧, ೮). ಸ್ವರಗಳು ಹ್ರಸ್ವ, ದೀರ್ಘ, ಪ್ಲುತ ಎಂದು ಮೂರು ಪ್ರಕಾರವಾಗಿರುವವು; ಹ್ರಸ್ವದೀರ್ಘಗಳು ವಿಶೇಷ ಬಳಕೆಯಲ್ಲಿ ಬರುವವು. ಪ್ಲುತ ಎಂದರೆ ದೀರ್ಘಕ್ಕಿಂತಲೂ ಒಂದು ಮಾತ್ರೆ ಹೆಚ್ಚು ಹಿಡಿಯುವ ಕಾಲ. ಜನರನ್ನು ಹೆಸರು ಹಿಡಿದು ಒದರಿ ಕರೆಯುವಾಗ "ರಾಮಾ" ಎಂದು ಕಡೆಯ ಸ್ವರವು ಹೆಚ್ಚು ದೀರ್ಘವಾಗುವದು. "ಅ, ಆ" ಎಂಬ ಎರಡೂ ಸ್ವರಗಳಿಗೂ 'ಅ ವರ್ಣವೆಂಬ' ಸಂಜ್ಞೆಯಿದೆ. ಅವುಗಳಲ್ಲಿ ಹ್ರಸ್ವ ಸ್ವರವಷ್ಟೇ ಹೇಳುವದಿದ್ದರೆ 'ಅತ್' ಎಂದು ಕರೆಯಬೇಕು; ದೀರ್ಘವೊಂದನ್ನೇ ಹೇಳಬೇಕಾಗಿದ್ದರೆ 'ಆತ್' ಎಂದು ಅನ್ನಬೇಕು. ಹೀಗೆ ತಕಾರವು ಪರವಾಗಿ ಬಂದ ಸ್ವರವು ಅದರ ಏಕ ದ್ವಿ ಮಾತ್ರಾಕಾಲವನ್ನು ಸೂಚಿಸುವದು. ಇದನ್ನೇ ಪಾಣಿನಿಯು, ಹೀಗೆ ಸೂತ್ರಿಸಿದ್ದಾನೆ: 'ತಪರಸ್ತತ್ಕಾಲಸ್ಯ' ಎಂದು, ಭಟ್ಟಾಕಲಂಕನ (ಸಂಸ್ಕೃತ ಲಕಾರವನ್ನು ನಾವು ಕನ್ನಡದಲ್ಲಿ ಒಮ್ಮೊಮ್ಮೆ ಳ ಕಾರವಾಗಿ, ಮಾಡುವೆವು; ಭಟ್ಟಾಕಳಂಕನೆಂದೂ ಹೇಳಬಹುದು. ಇಂತಹ ತ ಕಾರಕ್ಕೆ 'ತ್ಪಳ' ಎಂಬ ಸಂಜ್ಞೆ ಇದೆ) ಇದನ್ನೇ ನೆನೆಸಿ 'ತಪರಸ್ತಾವಾನ್" (೧, ೫) ಎಂದು ಸೂತ್ರಿಸಿದ್ದಾನೆ. ಎಂದರೆ ತಕಾರವು ಪರವಾಗಿರುವ ಸ್ವರವು ಅಷ್ಟೇ ಮಾತ್ರೆಯನ್ನು ಹೇಳುವುದೆಂದು ತಿಳಿಯಿರಿ—ಎಂದರ್ಥ. 'ಲೋಪ' ಎಂಬದಕ್ಕೆ ಪಾಣಿನಿಯು 'ಲುಪ್' ಎಂಬ ಸಂಜ್ಞೆಯನ್ನು ಬಳಸಿರುವನು. ಶಾಸನಕಾರನೂ ಅದನ್ನು 'ಲೋಪ' ಎಂಬರ್ಥದಲ್ಲಿ ಉಪಯೋಗಿಸುವರು. ಉದಾ: "ಲುಬನಾಮುಹಾಸೌ" (೧, ೩೬). ಒಂದು ಸ್ವರದ ಮುಂದೆ ಮತ್ತೊಂದು ಸ್ವರವು ಬಂದು ಸಂಧಿಯಾಗುವಾಗ (ತನ್ನ + ಆಳ್, ಪತಿ + ಈತಂ) ಶಬ್ದಾರ್ಥವು ತಿಳಿಯಲಿಕ್ಕೆ ತೊಂದರೆಯಾಗದಿದ್ದರೆ ಮೊದಲಿನ ಶಬ್ದದ ಕಡೆಯ ಸ್ವರವು ಲೋಪವಾಗಬಹುದು. "ತನ್ನ ಆಳ್" ಎಂಬುದು 'ತನ್ನಾಳ್' ಆಗಬಹುದು; ಅರ್ಥಕ್ಕೆ ತೊಂದರೆಯಿಲ್ಲ. ಆದರೆ 'ಪತಿ ಈತಂ' ಹೋಗಿ 'ಪತೀತಂ' ಎಂದಾದರೆ ಅರ್ಥವೇ ಹೊಳೆಯದು; ಆದ್ದರಿಂದ ಅಲ್ಲಿ ಲೋಪಮಾಡಬಾರದು. "ಪತಿ + ಈತಂ" ಎರಡು ಸ್ವರಗಳು ಹೀಗೆ ಕೂಡುವಾಗ ಒಮ್ಮೊಮ್ಮೆ ಯಕಾರಾಗಮವೂ, ಒಮ್ಮೊಮ್ಮೆ ವಕಾರಾಗಮವೂ ಬರುವವು. ಇಲ್ಲಿ "ಪತಿಯ್ ಈತಂ" = 'ಪತಿಯೀತಂ' ಎಂದಾಗುವದು. ಸಂಸ್ಕೃತ ವ್ಯಾಕರಣದಂತೆ ಕನ್ನಡವೂ ಎಂದರೆ ಕನ್ನಡ ವಾಕರಣವೂ ಪಂಡಿತರಿಗೆ ಮಾನ್ಯವಾಗಬೇಕೆಂದು ಭಟ್ಟಾಕಳಂಕನೂ ಅಲ್ಲಿಯ ರೀತಿಗಳನ್ನು ಅನವಶ್ಯಕವಾಗಿ ಕೆಲವೆಡೆಯಲ್ಲಿ ಬಳಸಿದ್ದಾನೆ. ಉದಾಹರಣೆ: ಸಂಸ್ಕೃತದಲ್ಲಿ ಒಂದು ಶಬ್ದರೂಪಕ್ಕೆ ಆಗಮವನ್ನು ಹೇಳಬೇಕಾದರೆ ಅದರ ಮೊದಲಿಗೆ ಇಲ್ಲವೆ ಅದರ ಕೊನೆಗೆ ಅದು ಬರಬೇಕೆಂದು ಹೇಳುವ ರೂಢಿಯಿದೆ. ಹೇಗೆಂದರೆ 'ವಿದ್' ಧಾತುವಿನ ಮುಂದಿನ 'ತ' ಪ್ರತ್ಯಯಕ್ಕೆ 'ಇಟ್' ಆಗಮವನ್ನು ಹೇಳಿದೆ. ಅದು ತಕಾರದ ಮೊದಲಿಗೆ ಬರುವದು; 'ತ' ಹೋಗಿ 'ಇತ' ಆಗುವದು. 'ಭೀ' ಧಾತುವಿನ ಮುಂದೆ 'ಅಯ' ಪ್ರತ್ಯಯ ಬಂದಾಗ 'ಭೀ' ಧಾತುವಿಗೆ 'ಷುಕ್' ಆಗಮವನ್ನು ಹೇಳಿದೆ; ಆದ್ದರಿಂದ 'ಭೀ' ಹೋಗಿ 'ಭೀಷ್' ಆಗುವದು. 'ಇ' ಇಷ್ಟೇ ಮೊದಲನೆಯ ಉದಾಹರಣೆಯಲ್ಲಿಯ ಆಗಮ; 'ಷ್' ಇಷ್ಟೇ ಎರಡನೆಯದರಲ್ಲಿಯ ಆಗಮ. 'ಇ'ಇದು 'ತ'ಕ್ಕೆ ಮೊದಲು ಬಂದಿದೆ. 'ಷ್' ಇದು 'ಭೀ' ಎಂಬದರ ಕೊನೆಗೆ ಬಂದಿದೆ. ಇದ ತಿಳಿಯುವದಕ್ಕೆಂದು 'ಇ' ಆಗಮವನ್ನು 'ಇಟ್' ಎಂದು (ಟಕಾರಯುಕ್ತವಾಗಿ) ಕರೆಯಲಾಗಿದೆ; 'ಷ್' ಆಗಮವನ್ನು 'ಷುಕ್' (ಕ ಕಾರಯುಕ್ತವಾಗಿ) ಎಂದು ಕರೆಯಲಾಗಿದೆ. ಶಾಸನಕಾರನು ಇದರ ಅನುಕರಣ ಮಾಡಿ ಎರಡು ಸ್ವರಗಳ ನಡುವೆ ಯಕಾರಾಗಮ ಬರುವದೆಂದು ಹೇಳುವಾಗ 'ಯಕ್ ಸ್ವರೇ ಸ್ವರಸ್ಯ' ಅಥವಾ ವಕಾರಾಗಮವನ್ನು ಹೇಳುವಾಗ 'ರಾವೋರ್ವಕ್' ಎಂದು ಸೂತ್ರಿಸಿದ್ದಾನೆ. ಹೀಗಾಗಿ ಟೀಕಾಟಿಪ್ಪಣಿಗಳಿಲ್ಲದೆ ಸೂತ್ರಗಳ ಅರ್ಥವು ತಿಳಿಯುವದೇ ಕಠಿಣವಾಗಿ ಸಂಸ್ಕೃತ ತಿಳಿಯದ ವಿದ್ಯಾರ್ಥಿಗಳಿಗೆ ಈ ವ್ಯಾಕರಣದ ಪ್ರಯೋಜನವೇ ಆಗುವದಿಲ್ಲ. ಇಷ್ಟೊಂದು ಆಗಿನ ಕಾಲಕ್ಕೆ ಸಂಸ್ಕೃತದ ಮೋಹವಿದ್ದಿತು. 'ಯಕ್' 'ವಕ್' ಎಂಬ ಆಗಮಗಳಲ್ಲಿನ ಕ ಕಾರವು 'ಕೊನೆಗೆ ನಿಲ್ಲತಕ್ಕದಲ್ಲ' 'ಹೋಗತಕ್ಕದು' ಎಂಬದನ್ನು ಸೂಚಿಸುವದಕ್ಕಾಗಿ ಅದಕ್ಕೆ 'ಇತ್' (=ಹೋಗ

ಸಂಸ್ಕೃತ ಸೂತ್ರಗಳಲ್ಲಿ ಬರೆದ ಕನ್ನಡ ವ್ಯಾಕರಣ

ಲೇಖಕರು: ಶ್ರೀ ಕಟ್ಟಿ ಶ್ಯಾಮರಾಯರು, ಧಾರವಾಡ

ಕ್ರಿ. ಶ. ೧೦೬೪ ರಲ್ಲಿ ಭಟ್ಟಾಕಲಂಕ ಎಂಬ ವೈಯಾಕರಣಿಯು ಕರ್ನಾಟಕ ಶಬ್ದಾನುಶಾಸನವೆಂಬ ಕನ್ನಡ ವ್ಯಾಕರಣವನ್ನು ರಚಿಸಿದನು. ಅದರ ಸೂತ್ರಗಳೆಲ್ಲ ಪಾಣಿನಿಯ ವ್ಯಾಕರಣದ ರೀತಿಯಲ್ಲಿ ಸಂಸ್ಕೃತದಲ್ಲಿ ರಚಿಸಲ್ಪಟ್ಟಿವೆ. ಶಬ್ದಾನುಶಾಸನದಲ್ಲಿ ನಾಲ್ಕು ಭಾಗಗಳಿವೆ ಅಥವಾ ಪಾದಗಳಿವೆ. ಮೊದಲನೆಯ ಪಾದದಲ್ಲಿ ಕನ್ನಡದ ಸ್ವರ ವ್ಯಂಜನಗಳು, ಸಂಧಿಯಿಂದ ಅವುಗಳಲ್ಲಾಗುವ ಬದಲಾವಣೆಗಳು, ಎರಡನೆಯ ಪಾದದಲ್ಲಿ ನಾಮ ಸರ್ವನಾಮಗಳ ವಿಭಕ್ತಿರೂಪಗಳು ಆ ವಿಭಕ್ತಿಗಳ ಅರ್ಥಗಳೂ ನಿರೂಪಿಸಲ್ಪಟ್ಟಿವೆ. ಮೂರನೆಯ ಪಾದದಲ್ಲಿ ಒಂದು ಶಬ್ದಕ್ಕೆ ಮತ್ತೊಂದು ಶಬ್ದವನ್ನು ಕೂಡಿಸಿ ಸಾಧಿಸಿಕೊಳ್ಳಬಹುದಾದ ಅಥವಾ ನಾಮಗಳಿಗೆ ಪ್ರತ್ಯಯಗಳನ್ನು ಹಚ್ಚಿ ಮಾಡಿಕೊಳ್ಳಬಹುದಾದ ತದ್ಧಿತ ರೂಪಗಳನ್ನು ಹೇಳಲಾಗಿದೆ. ಕೊನೆಯ ಪಾದದಲ್ಲಿ ಕ್ರಿಯಾಪದ ರೂಪಗಳನ್ನು ಧಾತುಗಳಿಗೆ ಪ್ರತ್ಯಯಗಳನ್ನು ಹಚ್ಚಿ ಸಾಧಿಸಿಕೊಂಡ 'ಮಾಡಿ, 'ಮಾಡಲು' ಮುಂತಾದ ಕೃದಂತರೂಪಗಳನ್ನು ಹೇಳಲಾಗಿದೆ.

ಮಾತಿನಲ್ಲಿ ನಾವು ಬಳಸುವ ರೂಪಗಳನ್ನು ಒಡೆದು ಪರೀಕ್ಷಿಸುವದೇ ಶಬ್ದಶಾಸ್ತ್ರವಾದ ವ್ಯಾಕರಣದ ರೀತಿಯು. ಈ ರೂಪಗಳನ್ನು ಎರಡು ರೀತಿಯಿಂದ ಒಡೆದು ನೋಡಬಹುದು. ಒಂದು, ಅದು ಯಾವ ಯಾವ ಬೇರೆ ಬೇರೆ ಧ್ವನಿಗಳಿಂದ ಅಥವಾ ವರ್ಣಗಳಿಂದ ಕೂಡಿದೆ ಎಂದು ನೋಡುವ ರೀತಿ. ಉದಾ: 'ಶಾಸ್ತ್ರ' ಎಂಬ ಶಬ್ದವನ್ನು ಒಡೆದು ನೋಡಿದರೆ ಅದರಲ್ಲಿ ಶ್+ಆ+ಸ್+ತ್+ರ್+ಅ ಇಷ್ಟು ಬೇರೆಬೇರೆ ವರ್ಣಗಳಿವೆ ಎಂದು ಗೊತ್ತಾಗುವದು. 'ಶಾಸ್ತ್ರ' ವು ಶಕಾರ, ಆಕಾರ, ಸಕಾರ, ತಕಾರ, ರಕಾರ, ಅಕಾರಗಳಿಂದ ಕೂಡಿ ಆಗಿದೆ. ರೂಪಗಳನ್ನು ಒಡೆದು ನೋಡುವ ಅಥವಾ ಪೃಥಕ್ಕರಿಸುವ ಇನ್ನೊಂದು ರೀತಿಯನ್ನು ನೋಡೋಣ. ಒಂದರ ಹಾಗೆ ಒಂದು ಇದ್ದ ಬೇರೆ ಶಬ್ದರೂಪಗಳನ್ನು ಒಟ್ಟಿಗೆ ಹಚ್ಚಿ ನೋಡಿದರೆ ಬೇರೆಬೇರೆ ಅರ್ಥಗಳು ತಿಳಿಯುವ ಹಾಗೆ ಮಾತುಗಳನ್ನು ಹೇಗೆ ಬಳಸುವೆವು ಎಂಬ ತತ್ವವು ಗೊತ್ತಾಗುವದು. ಉದಾ: ವ್ಯಾಕರಣದ, ವ್ಯಾಕರಣವನ್ನು, ವ್ಯಾಕರಣದಲ್ಲಿ ವ್ಯಾಕರಣದಿಂದ ಮುಂತಾದ ಶಬ್ದಗಳನ್ನು ಒಂದಕ್ಕೊಂದು ಹಚ್ಚಿ ನೋಡಲಾಗಿ ಅವುಗಳಲ್ಲಿ 'ವ್ಯಾಕರಣ' ಎಂಬ ಮಾತು ಸಾಧಾರಣವಾಗಿದೆ. ಅದರ ಮುಂದೆ ಬಂದ 'ದ' (=ದ್+ಅ), 'ವನ್ನು, (=ವ್+ಅನ್ನು), 'ದಲ್ಲಿ' (=ದ್+ಅಲ್ಲಿ), 'ದಿಂದ' (=ದ್+ಇಂದ) ಇವುಗಳಿಗೆ 'ವಿಭಕ್ತಿ' ಎಂಬ ಸಂಜ್ಞೆ ಇದೆ. 'ವಿಭಕ್ತಿ' ಎಂದರೆ ವಿಭಾಗ. ನಾವು 'ವ್ಯಾಕರಣದಲ್ಲಿ' ಎಂಬ ಮಾತನ್ನು ವಿಭಾಗಿಸಿದ್ದೇವೆ. ಆದ್ದರಿಂದ 'ಅಲ್ಲಿ' ಎಂಬುದು ವಿಭಕ್ತಿ ಪ್ರತ್ಯಯವೆನಿಸುತ್ತದೆ. ಮೂಲಶಬ್ದಕ್ಕೆ 'ಪ್ರಕೃತಿ' ಎಂಬ ಹೆಸರು. 'ವ್ಯಾಕರಣ' ಎಂಬ 'ಪ್ರಕೃತಿ' 'ಅಲ್ಲಿ' ಎಂಬ 'ಪ್ರತ್ಯಯ' ಸೇರಿ 'ವ್ಯಾಕರಣದಲ್ಲಿ' ಎಂಬ 'ಪದ' ವಾಗಿದೆ. ಪ್ರಕೃತಿ ಪ್ರತ್ಯಯಗಳು ಕೂಡುವಾಗ ಪ್ರಕೃತಿಯಲ್ಲಾಗಲಿ, ಪ್ರತ್ಯಯದಲ್ಲಾಗಲಿ ನಾನಾಪ್ರಕಾರದ ಬದಲಾವಣೆಗಳಾಗುವವು. 'ಕೊಲ್ಲನು' 'ಕೊಲ್ಲುವನು' 'ಕೊಂದನು' ಈ ರೂಪಗಳನ್ನು ನೋಡಿರಿ. ಮೊದಲನೆಯುವರಲ್ಲಿ 'ಕೊಲ್ಲು' ಎಂಬದರ ಕಡೆಯ 'ಉ' ಲೋಪವಾಗಿದೆ. ಎರಡನೆಯುದರಲ್ಲಿ ಕೊಲ್ಲು + ಅನು. ಈ ಪ್ರಕೃತಿ ಪ್ರತ್ಯಯಗಳ ನಡುವೆ ವ ಕಾರವು ಒಂದು ಹೆಚ್ಚಾಗಿ ಬಂದಿರುವದು. ಅದು ಭವಿಷ್ಯತ್ ಕಾಲದ ಸೂಚಕವಾದದ್ದು. ಮೂರನೆಯುದರಲ್ಲಿ 'ಕೊಲ್' ಎಂಬದರಲ್ಲಿಯ ಲ ಕಾರವು ಹೋಗಿ ನ ಕಾರವು ಬಂದಿರುವದು. ಶಬ್ದರೂಪಗಳನ್ನು ಒಡೆದು ಹೀಗೆ ಪ್ರಕೃತಿ ಪ್ರತ್ಯಯಗಳನ್ನು ಬೇರೆ ತಿಳಿಸಿ ಅವು ಕೂಡುವಾಗ ನಡೆಯುವ ಬೇರೆ ಬೇರೆ ಸಂಧಿಕಾರ್ಯಗಳನ್ನು ವಿವರಿಸುವದೇ ವ್ಯಾಕರಣದ ಮುಖ್ಯ ವಿಷಯವೆಂದು ಹೇಳಬಹುದು. ಕ್ರಿಯಾರ್ಥವನ್ನು ಹೇಳುವದೇ ಧಾತುವು; ಉಳಿದ ಅರ್ಥವುಳ್ಳ ಶಬ್ದಗಳಿಗೆಲ್ಲ 'ಲಿಂಗ' ಅಥವಾ ಪ್ರಾತಿಪದಿಕವೆಂಬ ಸಂಜ್ಞೆ. ಶಬ್ದಾನು

ಶಾಸನದ ಸೂತ್ರಗಳು ಇದರ ಬಗೆಗೆ ಸಂಸ್ಕೃತದಲ್ಲಿ ಹೀಗಿವೆ: "ಕ್ರಿಯಾರ್ಥೋ ಧಾತುಃ" (೧ನೆಯದಿಂದ ೧೨ನೆಯ ಸೂತ್ರ) "ಅರ್ಥ ನ ಲಿಂಗಂ" (೧, ೮). ಸ್ವರಗಳು ಹ್ರಸ್ವ, ದೀರ್ಘ, ಪ್ಲುತ ಎಂದು ಮೂರು ಪ್ರಕಾರವಾಗಿರುವವು; ಹ್ರಸ್ವದೀರ್ಘಗಳು ವಿಶೇಷ ಬಳಕೆಯಲ್ಲಿ ಬರುವವು. ಪ್ಲುತ ಎಂದರೆ ದೀರ್ಘಕ್ಕಿಂತಲೂ ಒಂದು ಮಾತ್ರೆ ಹೆಚ್ಚು ಹಿಡಿಯುವ ಕಾಲ. ಜನರನ್ನು ಹೆಸರು ಹಿಡಿದು ಒದರಿ ಕರೆಯುವಾಗ "ರಾಮಾ" ಎಂದು ಕಡೆಯ ಸ್ವರವು ಹೆಚ್ಚು ದೀರ್ಘವಾಗುವದು. "ಅ, ಆ" ಎಂಬ ಎರಡೂ ಸ್ವರಗಳಿಗೂ 'ಅ ವರ್ಣವೆಂಬ' ಸಂಜ್ಞೆಯಿದೆ. ಅವುಗಳಲ್ಲಿ ಹ್ರಸ್ವ ಸ್ವರವಷ್ಟೇ ಹೇಳುವದಿದ್ದರೆ 'ಅತ್' ಎಂದು ಕರೆಯಬೇಕು; ದೀರ್ಘವೊಂದನ್ನೇ ಹೇಳಬೇಕಾಗಿದ್ದರೆ 'ಆತ್' ಎಂದು ಅನ್ನಬೇಕು. ಹೀಗೆ ತಕಾರವು ಪರವಾಗಿ ಬಂದ ಸ್ವರವು ಅವರ ಏಕ ದ್ವಿ ಮಾತ್ರಾಕಾಲವನ್ನು ಸೂಚಿಸುವದು. ಇದನ್ನೇ ಪಾಣಿನಿಯು, ಹೇಗೆ ಸೂತ್ರಿಸಿದ್ದಾನೆ: 'ತಪರಸ್ತತ್ ಕಾಲಸ್ಯ ಎಂದು, ಭಟ್ಟಾಕಲಂಕನ (ಸಂಸ್ಕೃತ ಲಕಾರವನ್ನು ನಾವು ಕನ್ನಡದಲ್ಲಿ ಒಮ್ಮೊಮ್ಮೆ ಳ ಕಾರವಾಗಿ, ಮಾಡುವೆವು; 'ಭಟ್ಟಾಕಳಂಕನೆಂದೂ ಹೇಳಬಹುದು. ಇಂತಹ ಳ ಕಾರಕ್ಕೆ 'ಕ್ಷಳ' ಎಂಬ ಸಂಜ್ಞೆ ಇದೆ) ಇದನ್ನೇ ನೆನೆಸಿ "ತಪರಸ್ತಾತ್ತಾವಾನ್" (೧, ೫) ಎಂದು ಸೂತ್ರಿಸಿದ್ದಾನೆ. ಎಂದರೆ ತಕಾರವು ಪರವಾಗಿರುವ ಸ್ವರವು ಅಷ್ಟೇ ಮಾತ್ರೆಯನ್ನು ಹೇಳುವುದೆಂದು ತಿಳಿಯಿರಿ—ಎಂದರ್ಥ. 'ಲೋಪ' ಎಂಬದಕ್ಕೆ ಪಾಣಿನಿಯು 'ಲುಪ್' ಎಂಬ ಸಂಜ್ಞೆಯನ್ನು ಬಳಸಿರುವನು. ಶಾಸನಕಾರನೂ ಅದನ್ನು 'ಲೋಪ' ಎಂಬರ್ಥದಲ್ಲಿ ಉಪಯೋಗಿಸುವರು. ಉದಾ: .ಲುಬನಾಮುಹಾಸೌ" (೧, ೩೬). ಒಂದು ಸ್ವರದ ಮುಂದೆ ಮತ್ತೊಂದು ಸ್ವರವು ಬಂದು ಸಂಧಿಯಾಗುವಾಗ (ತನ್ನ + ಆಳ್, ಪತಿ + ಈತಂ) ಶಬ್ದಾರ್ಥವು ತಿಳಿಯಲಿಕ್ಕೆ ತೊಂದರೆಯಾಗದಿದ್ದರೆ ಮೊದಲಿನ ಶಬ್ದದ ಕಡೆಯ ಸ್ವರವು ಲೋಪವಾಗಬಹುದು. "ತನ್ನ ಆಳ್" ಎಂಬುದು 'ತನ್ನಾಳ್' ಆಗಬಹುದು; ಅರ್ಥಕ್ಕೆ ತೊಂದರೆಯಿಲ್ಲ. ಆದರೆ 'ಪತಿ ಈತಂ' ಹೋಗಿ 'ಪತೀತಂ' ಎಂದಾದರೆ ಅರ್ಥವೇ ಹೊಳೆಯದು; ಆದ್ದರಿಂದ ಅಲ್ಲಿ ಲೋಪಮಾಡಬಾರದು. "ಪತಿ + ಈತಂ" ಎರಡು ಸ್ವರಗಳು ಹೇಗೆ ಕೂಡುವಾಗ ಒಮ್ಮೊಮ್ಮೆ ಯಕಾರಾಗಮವೂ, ಒಮ್ಮೊಮ್ಮೆ ವಕಾರಾಗಮವೂ ಬರುವವು. ಇಲ್ಲಿ "ಪತಿಯ್ ಈತಂ" = 'ಪತಿಯೀತಂ' ಎಂದಾಗುವದು. ಸಂಸ್ಕೃತ ವ್ಯಾಕರಣದಂತೆ ಕನ್ನಡೂ ಎಂದರೆ ಕನ್ನಡ ವಾಕರಣವೂ ಪಂಡಿತರಿಗೆ ಮಾನ್ಯವಾಗಬೇಕೆಂದು ಭಟ್ಟಾಕಳಂಕನೂ ಅಲ್ಲಿಯ ರೀತಿಗಳನ್ನು ಅನವಶ್ಯಕವಾಗಿ ಕೆಲವೆಡೆಯಲ್ಲಿ ಬಳಸಿದ್ದಾನೆ. ಉದಾಹರಣೆ: ಸಂಸ್ಕೃತದಲ್ಲಿ ಒಂದು ಶಬ್ದರೂಪಕ್ಕೆ ಆಗಮವನ್ನು ಹೇಳಬೇಕಾದರೆ ಅದರ ಮೊದಲಿಗೆ ಇಲ್ಲವೆ ಅದರ ಕೊನೆಗೆ ಅದು ಬರಬೇಕೆಂದು ಹೇಳುವ ರೂಢಿಯಿದೆ. ಹೇಗೆಂದರೆ ' ವಿದ್ ' ಧಾತುವಿನ ಮುಂದಿನ ' ತ ' ಪ್ರತ್ಯಯಕ್ಕೆ 'ಇಟ್' ಆಗಮವನ್ನು ಹೇಳಿದೆ. ಅದು ತಕಾರದ ಮೊದಲಿಗೆ ಬರುವದು; 'ತ' ಹೋಗಿ 'ಇತ' ಆಗುವದು. 'ಭೀ' ಧಾತುವಿನ ಮುಂದೆ 'ಆಯ' ಪ್ರತ್ಯಯ ಬಂದಾಗ 'ಭೀ' ಧಾತುವಿಗೆ 'ಷುಕ್' ಆಗಮುನ್ನು ಹೇಳಿದೆ; ಆದ್ದರಿಂದ 'ಭೀ' ಹೋಗಿ 'ಭೀಷ್' ಆಗುವದು. 'ಇ' ಇಷ್ಟೇ ಮೊದಲನೆಯ ಉದಾಹರಣೆಯಲ್ಲಿಯ ಆಗಮ; 'ಷ್' ಇಷ್ಟೇ ಎರಡನೆಯದರಲ್ಲಿಯ ಆಗಮ. 'ಇ'ಇದು 'ತ'ಕ್ಕೆ ಮೊದಲು ಬಂದಿದೆ. 'ಷ್' ಇದು 'ಭೀ' ಎಂಬದರ ಕೊನೆಗೆ ಬಂದಿದೆ. ಇದು ತಿಳಿಯುವದಕ್ಕೆಂದು ' ಇ ' ಆಗಮವನ್ನು 'ಇಟ್' ಎಂದು (ಟಕಾರಯುಕ್ತವಾಗಿ) ಕರೆಯಲಾಗಿದೆ; 'ಷ್' ಆಗಮವನ್ನು 'ಷುಕ್' (ಕ ಕಾರಯುಕ್ತವಾಗಿ) ಎಂದು ಕರೆಯಲಾಗಿದೆ. ಶಾಸನಕಾರನು ಇದರ ಅನುಕರಣ ಮಾಡಿ ಎರಡು ಸ್ವರಗಳ ನಡುವೆ ಯಕಾರಾಗಮ ಬರುವದೆಂದು ಹೇಳುವಾಗ 'ಯಕ್ ಸ್ವರೇ ಸ್ವರಸ್ಯ' ಅಥವಾ ವಕಾರಾಗಮವನ್ನು ಹೇಳುವಾಗ 'ರಾವೋರ್ವಕ್' ಎಂದು ಸೂತ್ರಿಸಿದ್ದಾನೆ. ಹೀಗಾಗಿ ಟೀಕಾಟಿಪ್ಪಣಿಗಳಿಲ್ಲದೆ ಸೂತ್ರಗಳ ಅರ್ಥವು ತಿಳಿಯುವದೇ ಕಠಿಣವಾಗಿ ಸಂಸ್ಕೃತ ತಿಳಿಯದ ವಿದ್ಯಾರ್ಥಿಗಳಿಗೆ ಈ ವ್ಯಾಕರಣದ ಪ್ರಯೋಜನವೇ ಆಗುವದಿಲ್ಲ. ಇನ್ನೊಂದು ಆಗಿನ ಕಾಲಕ್ಕೆ ಸಂಸ್ಕೃತದ ಮೇಲಿನ ಮೋಹವಿದ್ದಿತು. 'ಯಕ್' 'ವಕ್' ಎಂಬ ಆಗಮುಗಳಲ್ಲಿನ ಕ ಕಾರವು 'ಕೊನೆಗೆ ನಿಲ್ಲತಕ್ಕದ್ದಲ್ಲ' 'ಹೋಗತಕ್ಕದು' ಎಂಬದನ್ನು ಸೂಚಿಸುವದಕ್ಕಾಗಿ ಅದಕ್ಕೆ 'ಇತ್' (=ಹೋಗ

ತಕ್ಕುದು') ಎಂಬ ಸಂಜ್ಞೆ ಕೊಡಲ್ಪಟ್ಟಿದೆ. ಇದನ್ನೇ ಶಾಸನಕಾರನು 'ಅಪ್ರಯೋಗಿತ್' ಎಂಬ ಸೂತ್ರ (೧. ೩೨)ದಲ್ಲಿ ಹೇಳಿದ್ದಾನೆ. 'ಆಗು' ಧಾತುವಿಗೆ ಮುಂದೆ 'ಕುಂ' ಪ್ರತ್ಯಯು ಬಂದಾಗ 'ಆಗು' ಹೋಗಿ 'ಅಕ್' ಆಗುವದು; 'ಅಕ್ಕುಂ' ಎಂಬ ಶಬ್ದರೂಪದ ಪೃಥಕ್ಕರಣ ವಿದು. 'ಆಗು' ಧಾತುವಿನಲ್ಲಿ ಆಗುವ ಬದಲಾವಣೆ ಯನ್ನು ಹೇಳಲಿಕ್ಕೆ ಹೊರಟು, ಕ ಕಾರಾದಿ ಪ್ರತ್ಯಯುವು ಮುಂದಿದ್ದಾಗ (ಉದಾ: ಕುಂ) ಅದಕ್ಕೆ 'ಅಕ್' ಆದೇಶ ವಾಗುವದು ಎಂದು ಹೇಳಬೇಕಾಗಿದೆ. ಶಾಸನಕಾರನು ಇದನ್ನು ಮಂತ್ರೋಚ್ಚಾರಣೆಯಂತೆ 'ಶಕ್ಕಿ' ಎಂದು (ಸೂ. ೪೯೮) ಸೂತ್ರಿಸಿದ್ದಾನೆ. 'ಶಕ್' ಎಂದರೆ 'ಅಕ್' ಎಂಬಾದೇಶವು. 'ಕಿ' ಕ ಕಾರದ ಸಪ್ತಮೀ ಏಕವಚನದ ರೂಪ (ಸಂಸ್ಕೃತ ವ್ಯಾಕರಣದಂತೆ) 'ಶಕ್' ಎಂಬುದರೊಳಗಿನ 'ಶ ಕಾರವು "ಅಪ್ರ- ಯೋಗಿ ಇತ್" ತನ್ನ ಉದ್ದೇಶವನ್ನು ಪೂರಯಿಸಿ ಕೊನೆಗೆ ಹೋಗಿಬಿಡುವಂತಹದು ಎಂಬವರ ಸೂಚಕ ವಾಗಿದೆ. ಆ ಉದ್ದೇಶವೆಂದರೆ ಆದೇಶವು. 'ಆಗು' ಎಂಬ ಇಡೀ ಶಬ್ದಕ್ಕೆ ಬರುವದು; ಕೆಲವೆಡೆಯಲ್ಲಿ (ಉದಾ: 'ಮಾಡು' ಹೋಗಿ 'ಮಾಡಿ' ಆದಾಗ ಕೊನೆಯ ಉ ಕಾರವು ಹೋಗಿ ಇ ಕಾರವಾಯಿತಷ್ಟೇ) ಆದೇಶವು ಶಬ್ದರೂಪದ ಅಂತ್ಯಕ್ಕೆ ಮಾತ್ರ ಆಗುವದು. 'ಶ' ಕಾರವು ಈ ಉದ್ದೇಶವನ್ನು ಪೂರ್ತಿಗೊಳಿಸಿ ಮಾಯ ವಾಗುವದು; 'ಅಕ್' ಮಾತ್ರ ಉಳಿಯುವದು.

'ಒರೊಂದೋಃ' (ಸೂ. ೩೨೮). 'ಎರಡೋರಿರ್' (ಸೂ. ೩೨೯) 'ಒಂದೋಃ' (ಉಕಾರಾಂತ ಸಂಸ್ಕೃತ ಶಬ್ದಗಳ ಷಷ್ಠೀ ಏಕವಚನದ ರೂಪ) ಎಂದರೆ 'ಒಂದು ಶಬ್ದದೆಡೆಯಲ್ಲಿ' ಎಂಬರ್ಥ; 'ಎರಡೋಃ' ಎಂದರೆ 'ಎರಡು' ಶಬ್ದದ ಎಡೆಯಲ್ಲಿ ಎಂದರ್ಥ. ಈ ಸೂತ್ರಗಳ ಅರ್ಥವನ್ನೇ ಕೇಶಿರಾಜನು ಕನ್ನಡದಲ್ಲಿ ಹೀಗೆ ಹೇಳುವನು "ದೊರೆಕೊಳ್ಳುದು (=ಬರುವದು).... ಒಂದೆಂಬುದರ್ಕೊರ್ಬೆಂಬಾದೇಶಂ ಎರಡರ್ಕಿರಾದೇಶಂ" ಕೆಲವು ಶಬ್ದಾನುಶಾಸನದ ಸೂತ್ರಗಳಂತೂ ಅಷ್ಟಾಧ್ಯಾಯೀ ಸೂತ್ರಗಳನ್ನು ಅಕ್ಷರಶಃ ಅನುಸರಿಸಿದಂತಿವೆ:

ಅಷ್ಟಾಧ್ಯಾಯಿ (ಪಾಣಿನಿ)		ಶಬ್ದಾನುಶಾಸನ (ಭಟ್ಟಾಕಲಂಕ)
ತದಸ್ಯಾಸ್ತ್ಯಸ್ಮಿನ್ನಿತಿ ಮತುಪ್	;	ತದಸ್ಯಾಸ್ತ್ಯಸ್ಮಿನ್ನಿತಿ ವಂತಃ
ಸುಪ್ ತಿಙಂತಂ ಪದಮ್	;	ಸುಪ್ (=ಮಮಿವ್ಗ ದತ್ತಣಿಮದೊಳ್) ತಿಙ್ (=ಅವುಗ ಊರೆಸಿವು) ಅಂತಂ ಪದಂ.
ಅನೇಕಾಲ್ ಶಿತ್ ಸರ್ವಸ್ಯ	;	ಶಿತ್ ಸರ್ವಸ್ಯ
ತಸ್ಮಿನ್ನಿತಿ ನಿರ್ದಿಷ್ಟೇ ಪೂರ್ವಸ್ಯ	;	ತಸ್ಮಿನ್ನಿತಿ ನಿರ್ದಿಷ್ಟೇ ಪೂರ್ವಸ್ಯ
ತಸ್ಮಿದಿತ್ಯುತ್ತರಸ್ಯ	;	ತಸ್ಮಾದುತ್ತರಸ್ಯ
ಯೇನ ವಿಧಿಸ್ತದಂತಸ್ಯ	;	ಯೇನ ವಿಧಿಸ್ತದಂತಸ್ಯ
ಸ್ಥಾನಿವದಾದೇಶೋಽನಲ್ವಿಧೌ	;	ಸ್ಥಾನಿವದಾದೇಶಃ
ಪ್ರಾತಿಪದಿಕಾತ್ (೪,೧,೧) ಸು..........ಪ್ (೪, ,೨)	;	ಲಿಂಗಾತ್ ಸುಪ್
ಕಾಲಾಧ್ವನೋರತ್ಯಂತಸಂಯೋಗೇ	;	ಕಾಲಾಧ್ವನೋಃ ಕಮ್ ವ್ಯಾಪ್ತೌ
ಕರ್ಮಣಿ ದ್ವಿತೀಯಾ	;	ಕರ್ಮಣಿ ಅಮ್
ಅಪವರ್ಗೇ ತೃತೀಯಾ	;	ಇಮ್ ಸಿದ್ಧೌ
ಸಪ್ತಮ್ಯಧಿಕರಣೇ ಚ	;	ಒಳ್ ಅಧಿಕರಣೇ
ಯತಶ್ಚ ನಿರ್ಧಾರಣಂ	;	ಯತೋ ನಿರ್ಧಾರಣಂ
ಕರ್ತೃಕರ್ಮಣೋಃ ಕೃತಿ	;	ಕರ್ತೃಕರ್ಮಣೋಃ ಕೃತಿ ಭಾವೇ
ಯಸ್ಯ ಚ ಭಾವೇನ ಭಾವಲಕ್ಷಣಂ	;	ಯಸ್ಯ ಭಾವೋ ಭಾವಲಕ್ಷಣಂ

ಇನ್ನೂ ಇಂತಹ ಅನೇಕ ಸಾದೃಶ್ಯಗಳಿಂದ ತಿಳಿಯು ವುದೇನೆಂದರೆ ಕಾರಕಾರ್ಥಗಳ ವಿಷಯದಲ್ಲಿಯೂ ಪರಿ ಭಾಷೆಯ (ಸೂತ್ರಗಳಿಗೆ ಅರ್ಥ ಹಚ್ಚುವ ನಿಯಮಗಳು) ವಿಷಯದಲ್ಲಿಯೂ ಭಟ್ಟಾಕಲಂಕನು ಆದಿವೈಯಾಕರಣಿ ಯಾದ ಪಾಣಿನಿಯನ್ನೇ ಆದರ್ಶವಾಗಿಟ್ಟುಕೊಂಡಿ ದ್ದಾನೆ. ಈ ಶಬ್ದಾನುಶಾಸನದಲ್ಲಿ "ಕರ್ಮಣ್ಯಾಸು ..." "ತಸ್ಮಿನ್ನಿದ ಲೌ" ಎಂಬ ಎರಡು ಸೂತ್ರಗಳಿವೆ. ಶಬ್ದ ಮಣಿದರ್ಪಣದಲ್ಲಿನ "..............ಸಕರ್ಮಕಮಪ್ಪ ಪ್ರಯುಕ್ತಪಡು ಧಾತು ಸರ್ವಧಾತುಗೆಯಕ್ಕುಂ" ಈ ಸೂತ್ರವನ್ನು ಶಾಸನಕಾರನ ಸೂತ್ರಗಳನ್ನು ನೋಡಿ ಹಿಂದಿನಿಂದ ಯಾರೋ ರಚಿಸಿ ದರ್ಪಣದಲ್ಲಿ ಸೇರಿಸಿ ದಂತೆ ಕಾಣುವದು. ಇಂಗ್ಲಿಷು ಕರ್ಮಣಿಪ್ರಯೋಗದ ನಿಯಮಗಳನ್ನು ಲಾಟಿನ್ ಭಾಷೆಯ ಯಥಾವತ್ತನು ಕರಣದಿಂದ ಮಾಡಿದಂತೆ ಕನ್ನಡದ ಕರ್ಮಣಿ ಪ್ರಯೋಗದ ವಾಕ್ಯದಲ್ಲಿನ ಪದಗಳ ಅನ್ವಯ ಹೇಳುವ ರೀತಿಯನ್ನು ಸಂಸ್ಕೃತ ವ್ಯಾಕರದ ಪದಗಳ ಅನ್ವಯುವನ್ನು ಹೇಳುವ ರೀತಿಯನ್ನು ಚಾ ಚೂ ತಪ್ಪದೆ ಅನುಕರಣ ಮಾಡಿದ್ದಾಗಿದೆ.

ಹೊಸ ಪಾಠ್ಯಕ್ರಮದಲ್ಲಿ ಹಿಂದೀಯ ಸ್ಥಾನ

ಲೇಖಕರು: ಶ್ರೀ ಗಣೇಶ ಪ್ರಸಾದ ಸಿಂಹ

[ಹಿಂದೀಯು ಭಾರತದ ಸರಕಾರೀ ಭಾಷೆಯೆಂದು ಭಾರತದ ರಾಜ್ಯಘಟನೆಯಲ್ಲಿ ಒಪ್ಪಲಾಗಿದೆ. ಅದನ್ನು ಈಗ ಎಲ್ಲ ಶಾಲೆಗಳಲ್ಲಿ ಕಲಿಸಲಾಗುತ್ತಿದೆ. ಅದರ ಸ್ಥಾನಮಾನಗಳನ್ನು ಕುರಿತು ಶ್ರೀ ಗಣೇಶಪ್ರಸಾದ ಸಿಂಹ ಅವರು ಶಿಕ್ಷಾ ಎಂಬ ಉತ್ತರ ಪ್ರದೇಶ ಸರಕಾರದ ಶಿಕ್ಷಣ ಶಾಖೆಯಿಂದ ಹೊರಡುವ ಪತ್ರಿಕೆಯ ೧೯೫೪ ಎಪ್ರಿಲ್ ಸಂಚಿಕೆಯಲ್ಲಿ ತಮ್ಮ ಮನಸೀಯ ವಿಚಾರಗಳನ್ನು ವ್ಯಕ್ತಮಾಡಿದ್ದಾರೆ. ನಮ್ಮ ಶಿಕ್ಷಕರಿಗೆ ಉಪಯುಕ್ತ ಹಾಗೂ ಮಾರ್ಗದರ್ಶಕವಾಗಿರುವಂಥವುಗಳನ್ನು ಆಯ್ದು ಇಲ್ಲಿ ಕೊಡಲಾಗಿದೆ. ಶಿಕ್ಷಕರು ಈ ಲೇಖದ ಉಪಯೋಗವನ್ನು ಮಾಡಿಕೊಳ್ಳುವರಾಗಿ ಆಶಿಸಲಾಗಿದೆ. —ಪ್ರಧಾನ ಸಂಪಾದಕರು]

ಶಿಕ್ಷಣ ಶಾಸ್ತ್ರತಜ್ಞರು ಶಿಕ್ಷಣದ ಅನೇಕ ಉದ್ದೇಶಗಳನ್ನು ನಮ್ಮ ಎದುರಿಗೆ ಇಟ್ಟಿದ್ದಾರೆ. ಅವುಗಳನ್ನು ನಾವು ಈ ರೀತಿಯಲ್ಲಿಯೂ ತೆಗೆದುಕೊಳ್ಳಬಹುದು—ಭಾವಸೃಜನ; ಭಾವಪ್ರಕಾಶನ; ಭಾವಸಂಚಯ ಅಥವಾ ಭಾವತುಲನೆ. ಭಾವನೆಯ ಸೃಜನೆಯು ಭೌಗೋಲಿಕ ಪರಿಸ್ಥಿತಿಗಳನ್ನು ಅವಲಂಬಿಸಿರುತ್ತದೆ. ಬಹುತರವಾಗಿ ತಂಪುದೇಶಗಳಲ್ಲಿ ಭಾವೋದ್ರೇಕವು ತಡವಾಗಿ ಆಗುತ್ತದೆ ಮತ್ತು ತಡವಾಗಿ ಮಾಯವಾಗುತ್ತದೆ—ಅದರ ಪ್ರವಾಹವು ಹೆಚ್ಚು ತೀವ್ರವಾಗಿರುವದಿಲ್ಲ. ಉಷ್ಣಪ್ರದೇಶದಲ್ಲಿ ಭಾವೋದ್ರೇಕವು ಬೇಗ ಉಂಟಾಗಿ. ಬೇಗ ಇಲ್ಲದಂತಾಗುತ್ತದೆ. ಮಾತೃಭಾಷೆಯ ಲಿಪಿಗಳ ಹಾಗು ಸ್ವರವ್ಯಂಜನಗಳ ರೂಪರೇಷೆಯು ಇವೇ ಭೌಗೋಲಿಕ ಪರಿಸ್ಥಿತಿಗಳಿಗೆ ಅನುಗುಣವಾಗಿ ಇರುತ್ತದೆ. ಇದು ಸಂಸ್ಕೃತ ಮತ್ತು ಹಿಂದೀಯಲ್ಲಿ ಇದ್ದಷ್ಟು ಇಂಗ್ಲೀಷದಲ್ಲಿ ಇಲ್ಲ. ಸಂಸ್ಕೃತ ಮತ್ತು ಹಿಂದೀಯಲ್ಲಿ ನಾವು ಮಾತನಾಡುವಷ್ಟು ವೇಗದಿಂದ ಇಂಗ್ಲೀಷದಲ್ಲಿ ಮಾತನಾಡಲಾರೆವು ಇಂಗ್ಲೀಷನ್ನು ಬಹುತರವಾಗಿ ನುರಿಸಿ ನುರಿಸಿ ಮಾತನಾಡಲಾಗುತ್ತದೆ. ಒಂದು ಪದಾರ್ಥವನ್ನು ನೋಡಿದ ಬಳಿಕ ಓರ್ವ ಭಾರತೀಯನ ಮನದಲ್ಲಿ ಏಳುವ ಭಾವಗಳಿಗೆ ವ್ಯವಸ್ಥಿತ ಹಾಗು ಸ್ವಾಭಾವಿಕ ನಾಮಕರಣವನ್ನು ಇಂಗ್ಲೀಷದಲ್ಲಿ ಮಾಡುವದು ಎಂದೂ ಸಾಧ್ಯವಾಗಲಾರದು. ಭಾರತದಲ್ಲಿ ವಾಸಿಸುವ ಉರ್ದೂಭಾಷಿಯೊಬ್ಬನು ತನ್ನ ಭಾವಗಳ ನಾಮಕರಣವನ್ನು ಅರಬೀ ಲಿಪಿಯ ಮಾಧ್ಯಮದಿಂದ ಮಾಡಲು ಅಪೇಕ್ಷಿಸಿದರೆ ಅದರಲ್ಲಿ ಸ್ವಾಭಾವಿಕತೆಯು ಎಂದೂ ಬರಲಾರದು, ಆರಬಸ್ತಾನದಲ್ಲಿ ಬರಬಹುದು. ಈ ಅಂತರವು ಅತ್ಯಂತ ಸೂಕ್ಷ್ಮವಾಗಿರುತ್ತದೆಯಾದರೂ, ಅವಶ್ಯವಾಗಿ ಇರುತ್ತದೆ. ಭೌಗೋಲಿಕ ಪರಿಸ್ಥಿತಿಗಳು ಭಿನ್ನವಾದಲ್ಲಿ ಲಿಪಿಗಳ ಉಚ್ಚಾರಣ ಹಾಗು ಉಪಯೋಗದಲ್ಲಿ ಅಂತರವುಂಟಾಗುತ್ತದೆ. ಇದರಿಂದ ನಾವು ಈ ನಿರ್ಣಯಕ್ಕೆ ಬಂದು ಮುಟ್ಟುತ್ತೇವೆ—ಆಯಾ ದೇಶಗಳ ನಾಗರಿಕರ ಭಾವಗಳ ಯೋಗ್ಯ ಹಾಗು ಸ್ವಾಭಾವಿಕ ಸೃಜನೆಯು ಆಯಾ ದೇಶಗಳ ಭೌಗೋಲಿಕ ಹಾಗು ಸಾಂಸ್ಕೃತಿಕ ಪರಿಸ್ಥಿತಿಗಳ ಫಲಸ್ವರೂಪವಾಗಿ ವಿಕಾಸಗೊಂಡ ಮಾತೃಭಾಷೆ ಹಾಗು ಲಿಪಿಯ ಮಾಧ್ಯಮದಿಂದ ಸಾಧ್ಯವಾಗುತ್ತದೆ.

ಭಾವಸೃಜನದ ನಂತರ ಭಾವ-ಪ್ರಕಾಶನದ ಪ್ರಶ್ನೆಯು ಏಳುತ್ತದೆ. ಭಾವಗಳ ಶುದ್ಧತೆ, ಸ್ವಾಭಾವಿಕತೆ, ಉಪಯೋಗ ಮುಂತಾದವು ಅನೇಕ ಅಂಶಗಳಲ್ಲಿ ಅವುಗಳ ಯೋಗ್ಯ ಪ್ರಕಾಶನದಲ್ಲಿರುತ್ತವೆ. ಒಮ್ಮೊಮ್ಮೆ ವ್ಯಕ್ತಿಯ ಮನಸ್ಸಿನಲ್ಲಿ ಭಾವಸೃಷ್ಟಿಯು ಬಹು ಸುಂದರವಾಗಿ ಇರುತ್ತದೆ, ಆದರೆ ಅದನ್ನು ಯೋಗ್ಯರೀತಿಯಲ್ಲಿ ವ್ಯಕ್ತಮಾಡದೆ ಹೋದರೆ ಅದರಿಂದ ಅರ್ಥಕ್ಕೆ ಅನರ್ಥವಾಗುತ್ತದೆ. ನಿಸ್ಸಂದೇಹವಾಗಿಯೂ ಭಾವ-ಪ್ರಕಾಶನದ ಮೇಲೆ ವಾಣಿಯ ಮಾಧುರ್ಯ ಮುಂತಾದುದರ ಪರಿಣಾಮವು ಬಹಳವಾಗಿ ಬೀಳುತ್ತದೆ. ಭಾವಪ್ರಕಾಶನದ ಪ್ರಕಾರಗಳು ಎರಡು (೧) ಮೌಖಿಕ, (೨) ಲಿಖಿತ. ಕೆಲವರು ಮೌಖಿಕ ಭಾವಪ್ರದರ್ಶನದಲ್ಲಿ

ನಿಷ್ಣಾತರಾಗಿದ್ದರೆ ಕೆಲವರು ಬರೆಹದಲ್ಲಿ ಪ್ರವೀಣರಿರುತ್ತಾರೆ. ಎರಡರಲ್ಲಿಯೂ ಪ್ರಾವಿಣ್ಯತೆಯನ್ನು ಪಡೆದವರು ಬಹು ಸ್ವಲ್ಪ ಜನ. ಇವೆರಡೂ ಬಗೆಯ ಭಾವಪ್ರಕಾಶನಕ್ಕೆ ಭಾಷೆಯು ಸಜೀವವಾಗಿರುವುದು ಅಗತ್ಯವಾದುದು. ಭಾಷೆಯಲ್ಲಿ ಜೀವಾಳವಿಲ್ಲದಿದ್ದರೆ ಭಾವಪ್ರಕಾಶನವು ಸರಿಯಾಗಲಾರದು. ಪ್ರಭಾವವನ್ನು ಬೀರುವುದಕ್ಕೆ ಭಾಷೆಯ ಸೌಷ್ಠವವು ಅಗತ್ಯ. ಭಾವಕ್ಕೆ ತಕ್ಕಂತೆ ಭಾಷೆಯೂ ತಾನಾಗಿಯೇ ಬರುತ್ತದೆಂದು ಕೆಲವರು ತಜ್ಞರ ಮತ. ಆದರೆ ಈ ಅಭಿಪ್ರಾಯವು ಬಹುಮಟ್ಟಿಗೆ ಸರಿಯಾಗಿ ಇರುವದಿಲ್ಲ. ಯಾವುದೇ ಬೇರೆ ಭಾಷೆಯಲ್ಲಿ ಆತ್ಮಾಭಿವ್ಯಕ್ತಿ ಅಥವಾ ಆತ್ಮಪ್ರಕಾಶನವನ್ನು ಮಾಡುವಾಗ ನಮ್ಮ ವಾಣಿಯೂ ಲೇಖನಿಯೂ ದ್ವಂದ್ವದಲ್ಲಿ ಬಿದ್ದು ಕುಂಠಿತವಾಗುತ್ತವೆ. ಯಾವ ಭಾಷೆಯ ಮಾಧ್ಯಮದಿಂದ ನಾವು ಮಾತಾಡಬೇಕಾಗಿದೆಯೋ ಅಥವಾ ಬರೆಯಬೇಕಾಗಿದೆಯೋ ಅದರೊಡನೆ ಸಂಬಂಧವಿರುವ ಸಂಸ್ಕೃತಿಯಿಂದಲೂ ನಾವು ಪ್ರಭಾವಿತರಾಗಿರುತ್ತೇವೆ. ತತ್ಫಲವಾಗಿ ಸಂಸ್ಕೃತಿ ಮತ್ತು ಸಂಸ್ಕಾರಗಳ ಭಿನ್ನತೆಯಿಂದ ನಾವು ಬೆಚ್ಚಿಬೀಳುತ್ತೇವೆ. ಭಾರತೀಯ ಸಂಸ್ಕೃತಿಯಲ್ಲಿ ಗುರುಗಳ ಚರಣಗಳನ್ನು ಸ್ಪರ್ಶಿಸಿ ಅವರ ಆಶೀರ್ವಾದಗಳನ್ನು ಪಡೆಯಲು ತವಕಿಸುತ್ತೇವೆ; ಆದರೆ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಗುರುಗಳ ಕೈಕುಲುಕಿ ಅವರ ಶುಭಾಶಯಗಳನ್ನು ದೊರಕಿಸಿಕೊಳ್ಳಲಾಗುತ್ತದೆ. ವಿದ್ಯಾರ್ಥಿಗಳಿಗೆ ಈ ವಿಷಯದಲ್ಲಿ ಹೇಳುವದು ಕಠಿನವೆನಿಸಿದರೂ ಹೇಳಲೇಬೇಕಾಗುವದು.

ಭಾವಸಂಚಯಕ್ಕೆ ನಾವು ಅನುಕೂಲತೆಯ ದೃಷ್ಟಿಯಿಂದ ಸಾಹಿತ್ಯರಚನೆಯೆಂದು ಕರೆಯಬಹುದು. ಭಾವಗಳನ್ನು ನಾವು ವಿಚಾರದ ಒರೆಗಲ್ಲಿಗೆ ಹಚ್ಚುತ್ತೇವೆ ಮತ್ತು ಅವು ಸರಿಯಾಗಿ ಒರೆಗೆ ಹತ್ತಿದ ಬಳಿಕ ಅವಕ್ಕೆ ಸ್ಥಾಯೀರೂಪವನ್ನು ಕೊಡುತ್ತೇವೆ. ವಿಚಾರದ ಆಧಾರವು ಒಂದು ಬಗೆಯಾಗಿ ವ್ಯಕ್ತಿಗತ ಧಾರಣೆ ಅಥವಾ ಭಾವವಿದ್ದರೆ ಇನ್ನೊಂದು ಬಗೆಯಾಗಿ ಸಮಾಜವು ಆಗಿದೆ. ಭಾವಸಂಚಯಕ್ಕಾಗಿ ವಿಚಾರಗಳು ಸಮಾಜಾನುಕೂಲವಾಗಿರುವದು ಯಾವಾಗಲೂ ಆವಶ್ಯಕವಾಗಿರುವದಿಲ್ಲ. ಹೀಗೆ ಅದಲ್ಲಿ ಆವಶ್ಯಕವಾಗಿರುವ ವಿಕಾಸ. ಮತ್ತು ಕ್ರಾಂತಿಯು ಮಾರ್ಗವೇ ನಿಂತು ಹೋಗುವದು. ಬೇರೆ ಶಬ್ದಗಳಲ್ಲಿ ಹೀಗೆ ಹೇಳಬಹುದು—ನಮ್ಮ ವಿಚಾರಗಳು ಸಮಾಜದೊಡನೆಯೇ ಸಂಬಂಧಿತವಾಗಿರಬೇಕು. ಅವುಗಳ ದೃಷ್ಟಿಕೋಣವು ಪ್ರತಿಕೂಲವಾಗಿದ್ದರೂ ಸರಿಯೆ. ಸದ್ಯದ ಸಮಾಜದ ದೋಷಗಳು ಪ್ರತಿಕೂಲ ಚಿತ್ರಣದ ಹೊರತು ಸ್ಪಷ್ಟವೂ ಸ್ಫುಟವೂ ಆಗಲಾರವು. ನಮ್ಮ ವಿಚಾರಗಳ ಪುಷ್ಟಿಯು ಉದಾಹರಣೆಗಳಿಂದಾಗುವದು ಮತ್ತು ಉಪಯುಕ್ತ ಉದಾಹರಣೆಗಳು ನಮ್ಮ ಭಾಷೆಯ ಸಾಹಿತ್ಯದಲ್ಲಿಯೇ ಸ್ವಾಭಾವಿಕವಾಗಿ ದೊರೆಯುತ್ತವೆ. ಅವು ಸಮಾಜದ ಗಣ್ಯವ್ಯಕ್ತಿಗಳಿಗೆ ಗೊತ್ತಿರುತ್ತವೆ. ಪ್ರತಿಯೊಂದು ಧರ್ಮದ ಗ್ರಂಥಗಳಲ್ಲಿ ಅತಿ ವಿಚಿತ್ರವಾದ ಕತೆಗಳು ಇದ್ದರೂ ನಮ್ಮ ಧರ್ಮಗ್ರಂಥಗಳಲ್ಲಿಯ ಕತೆಗಳ ಪರಿಹಾಸ ಮಾಡುತ್ತಾರೆ. ಪರಿಹಾಸ ಮಾಡುವವರು ತಿಳಿದೂ ತಿಳಿದೂ ಪರಿಹಾಸ ಮಾಡುವದಿಲ್ಲ, ಒಬ್ಬರು ಇನ್ನೊಬ್ಬರ ಕಥೆಯನ್ನು ಕೇಳಿ ಸ್ವಾಭಾವಿಕವಾಗಿ ನಗುವಂಥ ಪ್ರಸಂಗ ಬರುತ್ತದೆ. ಆದ್ದರಿಂದಲೇ ಯಾವ ಭಾವಸಂಚಯವು ನಮ್ಮ ಮಾತೃಭಾಷೆಯ ಮುಖಾಂತರವಾಗಿ ಆಗುವದೋ ಅದರಲ್ಲಿ ಕ್ರಮವನ್ನೂ ಸ್ವಾಭಾವಿಕತೆಯನ್ನೂ ತರುವದಕ್ಕಾಗಿ ಪ್ರಯತ್ನ ಮಾಡುವ ಆವಶ್ಯಕತೆಯುಂಟಾಗುವದಿಲ್ಲ. ಒಬ್ಬ ವಿದ್ವಾಂಸನು ಬೇರೆ ಭಾಷೆಗಳ ಐತಿಹಾಸಿಕ ಹಾಗು ವಿಮರ್ಶಾತ್ಮಕ ಕೃತಿಗಳಲ್ಲಿ ಪ್ರಯತ್ನಪಟ್ಟರೆ ಸಫಲತೆಯನ್ನು ಪಡೆಯಬಹುದು. ಆದರೆ ಆ ಭಾಷೆಗಳೊಡನೆ ಸಂಬಂಧಿತವಾದ ಸಮಾಜ-ಸಂಸ್ಕಾರ ಕ್ಷೇತ್ರದಲ್ಲಿ ಅವನು ಖಂಡಿತವಾಗಿ ನಿರಾಶನಾಗಬೇಕಾಗುವದು.

ಭಾವತುಲನೆ ಎಂದರೆ ಬೇರೆ ಬೇರೆ ಭಾಷೆಗಳ ಮತ್ತು ಅವುಗಳೊಡನೆ ಸಂಬಂಧವಿರುವ ಸಾಹಿತ್ಯ ಹಾಗು ಸಮಾಜಗಳ ಮೂಲ ಹಾಗು ಮುಖ್ಯ ಪ್ರವೃತ್ತಿಗಳ ತುಲನಾತ್ಮಕ ಅಧ್ಯಯನ ಮಾಡುವದು. ಈಗಿನ ಕಾಲದಲ್ಲಿ ವಿಜ್ಞಾನವು ಸಮಸ್ತ ಪ್ರಪಂಚವನ್ನು ಒಟ್ಟುಗೂಡಿಸಿದೆ. ಇದರಿಂದ ನಾವು ನಮ್ಮ ದೃಷ್ಟಿಕೋಣವನ್ನು (ರಾಷ್ಟ್ರೀಯ ಮಾಡಿಕೊಳ್ಳುವ ಜೊತೆಗೆ) ಅಂತರರಾಷ್ಟ್ರೀಯವನ್ನಾಗಿಯೂ ಮಾಡಿಕೊಳ್ಳುವದು ಅಗತ್ಯವಾಗಿದೆ. ಈ ಪ್ರಸಂಗದಲ್ಲಿಯ ವಿಚಾರವಿನಿಮಯ ನಮ್ಮ ಮಾತೃಭಾಷೆಯಲ್ಲಿ ಸುಗಮವೂ

ಸುಲಭವೂ ಆಗುವದು. ಒಂದು ಮೂಲಾಧಾರವನ್ನು ಇಟ್ಟುಕೊಂಡು ನಾವು ದೂರ ದೂರ ದೇಶದ ಪ್ರವಾಸ ವನ್ನು ಮಾಡಬಹುದು ಮತ್ತು ತಿರುಗಿ ಅಲ್ಲಿಗೇ ಬಂದು ಅದನ್ನು ಕುರಿತು ಮನನ ಮಾಡಬಹುದು. ಒಬ್ಬ ಭಾರತೀಯನು ಪ್ರಾಚೀನ ಪ್ರಪಂಚದ ಇತಿಹಾಸವನ್ನು ಇಂಗ್ಲಿಷದಲ್ಲಿ ಬರೆದರೆ ಅದರಿಂದ ಪ್ರಪಂಚದ ಕಲ್ಯಾಣವು ಸ್ವಲ್ಪ ಆಗಬಹುದು; ಆದರೆ ಪ್ರಪಂಚದ ಬೇರೆ ಬೇರೆ ಪಾರಿವಾರಿಕ ಜೀವನದ ವಿಕಾಸವನ್ನು ಇಂಗ್ಲೀಷದಲ್ಲಿ ಬರೆದರೆ ಅದರಿಂದ ಭಾರತದ ಕಲ್ಯಾಣವೂ ಆಗಲಾರದು ಮತ್ತು ಬೇರೆ ದೇಶದ ಕಲ್ಯಾಣವೂ ಆಗಲಾರದು. ಅವನ ವಿದ್ವತ್ತೆಯಿಂದ ಸುಂದರವಾದ ಕಲ್ಪನೆಗಳು ಅವನ ಕೃತಿ ಯಲ್ಲಿ ಬರಬಹುದು, ಆದರೆ ಸಂಸ್ಕಾರ ಮೂಲಕ ಮತ್ತು ಸಂಸ್ಕಾರ ಪೋಷಕ ಕ್ರಮಿಕ ಭಾವನೆಗಳ ಅಭಾವವು ಅದರಲ್ಲಿ ಕಂಡುಬರುವದು. ಒಂದು ವೇಳೆ ಅವನು ಮಾತೃಭಾಷೆಯಲ್ಲಿ ತನ್ನ ಕೃತಿಯನ್ನು ಬರೆದರೆ ಭಾರತೀಯ ಪಾರಿವಾರಿಕ ಜೀವನದ ವಿಕಾಸದೊಡನೆ ಪ್ರಪಂಚದ ಬೇರೆ ಬೇರೆ ದೇಶಗಳ ಪಾರಿವಾರಿಕ ಜೀವನದ ವಿಕಾಸದ ತುಲನೆಯನ್ನು ಮಾಡಲು ಅನು ಕೂಲವಾಗುವುದು. ಉಪಯೋಗಿತೆಯ ದೃಷ್ಟಿಯಿಂದ ನಮ್ಮ ಮಾತೃಭಾಷೆಯಲ್ಲಿ ಕೃತಿಗಳನ್ನು ಬರೆದರೆ ನಮ್ಮ ಸಾಹಿತ್ಯವು ಬೆಳೆಯುವದಲ್ಲದೆ ಅದರಿಂದ ನಮ್ಮ ದೇಶದ ಹೆಚ್ಚು ಜನರು ಅದರ ಉಪಯೋಗ ಮಾಡಿಕೊಳ್ಳ ಬಹುದು. ಬರೆದ ಕೃತಿಯು ಅತ್ಯಂತ ಮಹತ್ವಪೂರ್ಣ ವಾದುದಾಗಿದ್ದರೆ ಅದರ ಅನುವಾದ ಪ್ರಪಂಚದ ಭಾಷೆ ಗಳಲ್ಲಿ ಆಗಿಯೇ ಆಗುವದು.

ಹಿಂದೀಯ ಸ್ಥಿತಿಯು ಒಂದಾನೊಂದು ಕಾಲಕ್ಕೆ ಅತ್ಯಂತ ದಯನೀಯವಾಗಿತ್ತು. ಆಧ್ಯಾತ್ಮಿಕ, ದಾರ್ಶನಿಕ, ನೈತಿಕ ವಿಚಾರಗಳು ಹಿಂದೀ ಸಾಹಿತ್ಯದಲ್ಲಿ ಬಹಳ ವಾಗಿ ಇದ್ದರೂ ವ್ಯಾವಹಾರಿಕ ಸ್ಪಷ್ಟೀಕರಣಕ್ಕೆ ಉಪ ಯುಕ್ತವಾದ ಶಬ್ದಗಳು ದೊರೆಯುವದಿಲ್ಲ. ಏಕೆಂದರೆ ಸ್ವಾತಂತ್ರ್ಯದ ಪೂರ್ವದಲ್ಲಿ ಹಿಂದೀಗೆ ಪಾಠ್ಯಕ್ರಮದಲ್ಲಿ ಗಣ್ಯಸ್ಥಾನವೇ ಇದ್ದಿಲ್ಲ. ಪ್ರಾಥಮಿಕ, ಮಾಧ್ಯಮಿಕ ಶಾಲೆಗಳ ಪಾಠ್ಯಕ್ರಮದಲ್ಲಿ ಹಿಂದೀಯ ಸ್ಥಿತಿಯು ಅಸ್ತವ್ಯಸ್ತವಿತ್ತು. ಹಿಂದೀಯಲ್ಲಿ ಟ್ರೇನಿಂಗ ಪಡೆಯು ವದು ಆವಶ್ಯಕವೆಂದು ತಿಳಿಯಲ್ಪಡುತ್ತಿದ್ದಿಲ್ಲ. ಅಧ್ಯಾಪಕ ಹಾಗು ಅಧ್ಯಯನದ ಮಟ್ಟವೂ ಉಚ್ಚವಾಗಿದ್ದಿಲ್ಲ. ಈಗ ಪರಿಸ್ಥಿತಿಯು ಬದಲಾಗಿದೆ. ಹಿಂದೀಯು ಈಗ ಭಾರತದ ರಾಷ್ಟ್ರಭಾಷೆಯೆಂದು ಘೋಷಿಸಲ್ಪಟ್ಟಿದೆ. ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ ಒಂದಿಲ್ಲೊಂದು ರೂಪದಲ್ಲಿ ಹಿಂದೀಯು ಕಡ್ಡಾಯದ ವಿಷಯವಾಗಿದೆ. ಬೇರೆ ಬೇರೆ ಪ್ರಾಂತಗಳಲ್ಲಿಯೂ ಹಿಂದೀಯ ಪಠನ-ಪಾಠನವು ಪ್ರಾರಂಭವಾಗಿದೆ. ಇಂತಹ ಸ್ಥಿತಿಯಲ್ಲಿ ಹೊಸ ಪಾಠ್ಯಕ್ರಮದಲ್ಲಿ ಹಿಂದೀಯ ಸ್ಥಾನವನ್ನು ನಿರ್ಧರಿಸುವಾಗ ನಮ್ಮ ಸಂಸ್ಕೃತಿ, ಭಾಷೆ ಹಾಗು ಸಾಹಿತ್ಯಕ್ಕೆ ಉಂಟಾದ ಕ್ಷತಿಯು ತುಂಬಿ ಬರುವಂತೆ ನೋಡಿಕೊಳ್ಳುವದರ ಕಡೆಗೂ ರಾಷ್ಟ್ರಭಾಷೆ ಹಾಗು ಪ್ರಾಂತಭಾಷೆಗಳು ಆಯಾ ಪ್ರದೇಶಗಳಲ್ಲಿ ಶಿಕ್ಷಣಕ್ಕೆ ಸ್ವಾಭಾವಿಕ ಸಹಕಾರ ಕೊಡುವಂತೆ ನೋಡಿಕೊಳ್ಳು ವದೂ ಅಗತ್ಯವಾಗಿದೆ.

(ಮುಂದುವರೆಯುವದು.)

ಜವಾಹರಲಾಲ ನೆಹರೂ ಜಯಂತಿ

ಕೆಳಗಿನ ಊರುಗಳಲ್ಲಿ ಶೈಕ್ಷಣಿಕ ಸಂಸ್ಥೆಗಳು ಜವಾಹರಲಾಲ ನೆಹರೂ ಜಯಂತಿಯನ್ನು ವಿಜೃಂಭಣೆ ಯಿಂದ ಆಚರಿಸಿದವು.

ಜಮಖಂಡಿ (ಟ್ರೇ. ಕಾಲೇಜು), ಕಾರಜೋಳ, ಭಾರವಾಡ

ವಾಚನಾಲಯ

ಕೆಳಗಿನ ಊರುಗಳ ಶಾಲೆಗಳಲ್ಲಿ ವಾಚನಾಲಯ ಸ್ಥಾಪನೆಯ ಬಗ್ಗೆ ಚಟುವಟಿಕೆಗಳು ನಡೆದವು. ಊರವರು ಧನಸಹಾಯ ನೀಡುವದಾಗಿ ವಚನಕೊಟ್ಟರು.

ಕುಂಚನೂರು, ಸುಣಕಲ್ಲ ಬಿದರಿ, ಕೂಡಗಿ, ಇಲಾಹ, ಗುಡ್ಡಾಪೂ

ವೃತ್ತಿಮೂಲ ಶಿಕ್ಷಣಕ್ಕೆ ಆಧಾರಭೂತವಾದ ಮಾನಸ ಶಾಸ್ತ್ರದ ತತ್ವಗಳು

[Psychological foundations of Craft-Education]

ಲೇಖಕರು: ಶ್ರೀ ಜಿ. ಎಸ್. ಗಲಗಲಿ. ಎಮ್. ಎ. ಬಿ. ಟಿ. ಡಿ. ಬಿ. ಇ.
ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.

(ಶಿಕ್ಷಾ ಪತ್ರಿಕೆಯ ೧೯೫೪ರ ಜುಲೈ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ಪ್ರೊ. ಎಲ್. ಬಿ. ಎಲ್ ನವರ್ಕ, ಎಂ. ಎ. ಎಂ ಇಡಿ. ಅವರು ಬರೆದ ಲೇಖನದ ಆಧಾರದಿಂದ)

ಶಾಲೆಯನ್ನು ಬಿಟ್ಟ ನಂತರ ಜೀವನದ ಜಟಿಲ ಸಮಸ್ಯೆಗಳನ್ನು ಯಶಸ್ವಿಯಾಗಿ ಎದುರಿಸಲು ವಿದ್ಯಾರ್ಥಿಗಳನ್ನು ಅಣಿಗೊಳಿಸದ ಶಿಕ್ಷಣವು ನಿಜವಾದ ಶಿಕ್ಷಣವಾಗಲಾರದು. ಅದು ಕೇವಲ ವಿಷಯ ಜ್ಞಾನದಿಂದ ತುಂಬಿದ ಯಂತ್ರಗಳನ್ನು ಮಾತ್ರ ನಿರ್ಮಿಸುತ್ತದೆ. ಈ ಯಂತ್ರಗಳು ಪ್ರತಿಯೊಂದು ಕಾಲದಲ್ಲಿ ಮನುಷ್ಯರ ಮೈಮನಗಳನ್ನು ತಮ್ಮ ಅಂಕಿತದಲ್ಲಿ ಇಟ್ಟುಕೊಳ್ಳಲು ಹಾತೊರೆಯುತ್ತಿರುವ ದುಷ್ಟಶಕ್ತಿಗಳಿಗೆ ಸುಲಭವಾಗಿ ಬಲಿ ಬೀಳುತ್ತವೆ. ಈ ಶಕ್ತಿಗಳ ಅಭಿಯೋಗವನ್ನು ಎದುರಿಸಲು ಸ್ವಾವಲಂಬನ, ಸ್ವತಂತ್ರ ವಿಚಾರಶಕ್ತಿ ಸಮತೋಲಮನಸ್ಸು ಇವು ಅವಶ್ಯ. ಪ್ರತಿಶಿಶುವಿಗೆ ಸ್ವತಂತ್ರ ವ್ಯಕ್ತಿತ್ವವಿರುತ್ತದೆ. ಅವರ ಸಹಜ-ಪ್ರವೃತ್ತಿಗಳು, ಹುದುಗಿರುವ ಉತ್ಸಾಹ, ಅಡಗಿರುವ ಸಾಮರ್ಥ್ಯ ಇವು ಅಭಿವ್ಯಕ್ತಿಗಾಗಿ ಹಂಬಲಿಸುತ್ತವೆ. ಅದರ ಪ್ರಚಂಡ ಜೀವಶಕ್ತಿ ಆತ್ಮಾವಿಷ್ಕಾರಕ್ಕಾಗಿ ಹಾತೊರೆಯುತ್ತಿದೆ. ಈ ಎಲ್ಲ ಸಹಜವಾದ ಹಂಬಲಗಳನ್ನೂ, ಶಕ್ತಿಗಳನ್ನೂ ಸಂಘಟಿಸಿ, ಸ್ಪಷ್ಟವಾದ ಒಂದು ಗುರಿಯ ಕಡೆಗೆ ನಿರ್ದೇಶಿಸುವದೇ ಶಿಕ್ಷಣದ ಕಾರ್ಯ. ಶಿಶುವಿನ ಶರೀರಮನಸ್ಸುಗಳಲ್ಲಿ ಹುದುಗಿರುವ ಶಕ್ತಿಗಳ ಸಮತೋಲವನ್ನೂ, ಸಂಘಟನೆಯನ್ನೂ ಗುರಿಯಾಗಿಟ್ಟುಕೊಂಡುದೇ ನಿಜವಾದ ಶಿಕ್ಷಣವು. ಯಾಕಂದರೆ ಹೀಗೆ ಸರ್ವವಿಧದಿಂದ ಪರಿಪೋಷ ಹೊಂದಿದ ವ್ಯಕ್ತಿಗಳು ಸಮಾಜಕ್ಕೂ ರಾಷ್ಟ್ರಕ್ಕೂ ಅವಶ್ಯವಾಗಿದ್ದಾರೆ, ಅಮೌಲ್ಯರಾಗಿದ್ದಾರೆ.

ಈ ಸ್ಪಷ್ಟವಾದ ಗುರಿಯನ್ನು ಸಾಧಿಸಲು ಹೊರಟ ಶಿಕ್ಷಣಪದ್ಧತಿಯು-ಅದು ಯಾವುದೇ ಇರಲಿ-ಬಾಲಕರ ಆತ್ಮಾವಿಷ್ಕಾರಕ್ಕಾಗಿ ಅವರ ಮೆಚ್ಚುಗೆಯ ಸ್ವಯಂಪ್ರೇರಿತ ಚಟುವಟಿಕೆಗಳಿಗೆ ಅನುವು ಒದಗಿಸುತ್ತದೆ. ಇದು ಅವರ ಮೇಲೆ ಒತ್ತಾಯದಿಂದ ಹೇರಲಾಗದ ಸ್ವತಂತ್ರ ಪರಿಸರದಲ್ಲಿಯೇ ಸಾಧ್ಯವು. ಇಂಥ ಪರಿಸ್ಥಿತಿಯಲ್ಲಿ ಅವರ ರಚನಾತ್ಮಕ ಚಟುವಟಿಕೆಗಳಿಗೆ ಅಸ್ಪದವೀಯುತ್ತದೆ. ಪ್ರತಿಯೊಬ್ಬ ಬಾಲಕನ ವಿಕಾಸಕ್ಕಾಗಿ ಅವನ ಮೈ ಮತ್ತು ಮೆದುಳು ಸಹಕರಿಸಬೇಕು. ಸುಸಂಘಟಿತವಾದ ಜ್ಞಾನೋತ್ಪಾದನೆಗೆ ಸಂಸ್ಕೃತಿ ಹಾಗೂ ಹಸ್ತಕೃತಿ ಇವು ಒಂದುಗೂಡಬೇಕು. ಸ್ವಲ್ಪದರಲ್ಲಿ ಹೇಳಬೇಕಾದರೆ ಬಾಲಕರ ಶಿಕ್ಷಣವು ವೃತ್ತಿಮೂಲವೂ ವಿಷಯಾನುಷಂಗಿಕವೂ ಆಗಿರಬೇಕು. ವೃತ್ತಿಶಿಕ್ಷಣ ಹಾಗೂ ವಿಷಯ ಜ್ಞಾನ ಇವು ಬೇರೆಯಾಗಿರದೆ, ಒಂದೇ ಪದ್ಧತಿಯ ಎರಡು ಅಂಗಗಳಾಗಿವೆ. ವಿಷಯ ಪ್ರಧಾನ ಶಿಕ್ಷಣವು ವಿವಿಧ ವಿಷಯಗಳಲ್ಲಿ ಜ್ಞಾನೋಪಾರ್ಜನೆಗೆ ಕಾರಣವಾದರೆ, ವೃತ್ತಿ ಶಿಕ್ಷಣವು ವಿವಿಧ ಕೈಗಾರಿಕೆಯಲ್ಲಿ ತರಬೇತಿ ಹೊಂದಲು ಕಾರಣವಾಗುತ್ತದೆ. ಆದರೆ ಇಲ್ಲಿ ಉಪಯೋಗಿಸಿದ "ವೃತ್ತಿ ಮೂಲ ಶಿಕ್ಷಣ" ಕ್ಕೆ ಒಂದು ವಿಶಿಷ್ಟಾರ್ಥವಿದೆ "ಒಂದು ಉದ್ಯೋಗ ಅಥವಾ ಕೈಗಾರಿಕೆಯಲ್ಲಿ ತರಬೇತಿ ಹೊಂದುವದು" ಎಂದು ಇಷ್ಟೇ

ಸಂಕುಚಿತಾರ್ಥದಲ್ಲಿ ಇದು ಉಪಯೋಗಿಸಲ್ಪಟ್ಟಿರದೆ ಇದಕ್ಕೆ ಹೆಚ್ಚು ವ್ಯಾಪಕಾರ್ಥವಿರುತ್ತದೆ. ಪ್ರತ್ಯಕ್ಷ ಜೀವನದ ಸನ್ನಿವೇಶಗಳ ಮುಖಾಂತರ ಕೊಡಲಾಗುವ ಶಿಕ್ಷಣವೆಂದು ಇದರ ಅರ್ಥವು. ಉತ್ಪಾದನಾತ್ಮಕ ಕೈಗಾರಿಕೆ ಹಾಗೂ ಮಗುವಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಸನ್ನಿವೇಶದೊಂದಿಗೆ ಇದು ಸಮವೇತವಾಗಿರುವದು. ಈ ಸರ್ವಂಕಷ ಪದ್ಧತಿಯಲ್ಲಿ ವಿಷಯ ಜ್ಞಾನಕ್ಕೂ ಆಸ್ಪದವುಂಟು. ಸಾಂಸ್ಕೃತಿಕ ಹಾಗೂ ಸಾಮಾಜಿಕ ವಲನವಿಲ್ಲದ ಕೇವಲ ಯಾಂತ್ರಿಕವಾದ ತಾಂತ್ರಿಕ ಶಿಕ್ಷಣದಿಂದ (Technical education) ವೃತ್ತಿಮೂಲ ಶಿಕ್ಷಣವು ಭಿನ್ನವಾಗಿದೆ. "ವೃತ್ತಿ ಶಿಕ್ಷಣ" "ವೃತ್ತಿ ಮೂಲ ಶಿಕ್ಷಣ" "ಮೂಲ ಶಿಕ್ಷಣ" ಎಂದು ಮೊದಲಾಗಿ ಅನೇಕ ಹೆಸರುಗಳಿಂದ ಕರೆಯಲ್ಪಡುತ್ತಿರುವ ಈ ಶಿಕ್ಷಣ ಪದ್ಧತಿಯ ಮಥಿತಾರ್ಥವೆಂದರೆ— ಉದ್ದೇಶಪೂರಿತವಾದ ಉತ್ಪಾದನಾತ್ಮಕ ಚಟುವಟಿಕೆಯೂ ನಿಜವಾದ ಶಿಕ್ಷಣದ ಮುಖ್ಯಾಂಗವು. ಏಳು ಹದಿಮೂರು ವರುಷಗಳ ನಡುವಿನ ಬಾಲಕರಿಗೆ ಖಡುವಿನಿಂದ ಬರೆಯುತ್ತ, ನಾಲಿಗೆಯಿಂದ ನುಡಿಯುತ್ತ ಕಲಿಸುವ ಪಾಠಗಳಿಗಿಂತ ಈ ತರದ ಚಟುವಟಿಕೆಗಳ ಮುಖಾಂತರವೇ ಜ್ಞಾನಗ್ರಹಣವು ಹೆಚ್ಚು ಸುಲಭವಾಗುತ್ತದೆ ಎಂಬುದು ಇದರ ತತ್ವವು ಶಿಕ್ಷಣದಲ್ಲಿಯ ಈ ಹೊಸ ಗೊತ್ತುಗುರಿಗಳು ಪರಂಪರಾಗತವಾದ ತತ್ವ ರೂಢಿಗಳಿಂದ ಭಿನ್ನವಾಗಿವೆ ಎಂಬುದೇನೋ ನಿಜ. ಆದರೆ ಇದಕ್ಕೆ ಮಾನಸಶಾಸ್ತ್ರದ ಒಳ್ಳೆಯ ತಳಹದಿ ಇದೆ ಎಂಬುದೂ ನಿರ್ವಿವಾದವಾದುದು. ಅದು ಹೇಗೆ ಎಂಬುದನ್ನು ನೋಡುವಾ.

ಮಗುವಿನ ಶರೀರ, ಮನಸ್ಸು ಇವು ಬೇರೆಬೇರೆಯಾಗಿರುವದರಿಂದ ಅವುಗಳ ಸರಿಯಾದ ಬೆಳವಣಿಗೆಗೆ ಬೇರೆಬೇರೆ ಉಪಾಯಗಳನ್ನು ಯೋಜಿಸಬೇಕು. ಶರೀರವು ಧಷ್ಟಪುಷ್ಟವಾಗಬೇಕಾದರೆ ವ್ಯಾಯಾಮ, ಅಂಗಸಾಧನೆ ಮೊದಲಾದುದು ಅವಶ್ಯ; ಮನಸ್ಸಿಗೆ ಸರಿಯಾದ ಸಂಸ್ಕಾರ ಕೊಡಲು ಭಾಷೆ, ಗಣಿತ, ಇತಿಹಾಸ, ಶಾಸ್ತ್ರ ಮುಂತಾದ ವಿಷಯಗಳಲ್ಲಿ ಅದು ಜ್ಞಾನಾರ್ಜನೆ ಮಾಡುವದು ಅವಶ್ಯ ಎಂದು ತಿಳಿಯುವದು ತಪ್ಪು. ಆರಂಭದಿಂದಲೂ ಮಾನವವ್ಯಕ್ತಿಯೆಂದರೆ ಮನಃಶರೀರಾತ್ಮಕ ಒಂದೇ ಘಟಕವಾಗಿದೆ. ಇದರ ಮಾನಸಿಕ ಹಾಗೂ ಶಾರೀರಿಕ ಬೆಳವಣಿಗೆಯು ಇಷ್ಟು ಪರಸ್ಪರಾವಲಂಬಿಯಾಗಿದೆಯಲ್ಲ ಒಂದರಿಂದ ಮತ್ತೊಂದನ್ನು ಬೇರ್ಪಡಿಸುವದು ತೀರ ಅಸಾಧ್ಯವು. ಹಾಗೆ ಬೇರ್ಪಡಿಸಿದರೂ, ಈ ಘಟಕದ ಗೂಢ ವ್ಯಾಪಾರಗಳನ್ನು ಸುಲಭವಾಗಿ ಅರಿತುಕೊಳ್ಳುವದಕ್ಕಾಗಿಯೇ ಹೊರತು, ಅವು ಬೇರೆ ಬೇರೆ ಇರುತ್ತವೆ. ಎಂದು ಅಲ್ಲ. ಮನುಷ್ಯನ ಮನೋವ್ಯಾಪಾರಕ್ಕಷ್ಟೇ ಸಂಬಂಧಪಟ್ಟವುಗಳೆಂದು ತಿಳಿಯಲ್ಪಟ್ಟಿರುವ ಸಹಜ ಪ್ರವೃತ್ತಿಗಳು, ಭಾವಗಳು ಹಾಗೂ ಪ್ರೇರಣೆಗಳು ಇವುಗಳಿಗೂ ಕೂಡ ಮನೋಮುಖವು ಇರುವಂತೆ ಶಾರೀರಿಕ ಮುಖವೂ ಉಂಟು. ಆದರೆ ಅವು ಅತಿ ಸೂಕ್ಷ್ಮವಿರುವದರಿಂದ ಅನಭ್ಯಸ್ತ ದೃಷ್ಟಿಗೆ ಸಹಸಾ ಗೋಚರವಾಗುವದಿಲ್ಲ. ಅದರಂತೆಯೇ ಪ್ರತಿಯೊಂದು ಅನುಭವದ ತ್ರಿವಿಧಾತ್ಮಕ ಅಂಗಗಳಾದ ಅರಿವು (Cognition) ಎನಿಸಿಕೆ (Emotion) ಮತ್ತು ಇಚ್ಛೆ (Conation) ಇವುಗಳಲ್ಲಿ ಒಂದರ ಬೆಳವಣಿಗೆಯು ಮಿಕ್ಕೆರಡನ್ನು ಬಿಟ್ಟು ಸ್ವತಂತ್ರವಾಗಿ ಸಾಗುವದು ಎಂದು ತಿಳಿಯುವದು ತಪ್ಪು. ಇದೇಪ್ರಕಾರ ಸಾಮಾಜಿಕ ಸನ್ನಿವೇಶವನ್ನು ಬಿಟ್ಟು ಯಾವನೂ ವ್ಯವಹರಿಸಲಾರನು. ಆದ್ದರಿಂದ ಮಗುವೆಂದರೆ ಜ್ಞಾನಾತ್ಮಕ, ಭಾವನಾತ್ಮಕ, ಇಚ್ಛಾತ್ಮಕ ಅನುಭವಗಳು ಹಾಸು ಹೊಕ್ಕಾಗಿ ಹೆಣೆಯಲ್ಪಟ್ಟಿರುವ ಮನಃಶರೀರಾತ್ಮಕ ಒಂದು ಸಾಮಾಜಿಕ ಘಟಕವಾಗಿದೆ ಎಂದು ತಿಳಿಯತಕ್ಕದ್ದು. ಸ್ಮರಣ, ಕಲ್ಪನಾ, ನಿರ್ಣಯ, ತರ್ಕ ಎಂದು ಮೊದಲಾಗಿ ಬೇರೆಬೇರೆ ಶಕ್ತಿಗಳಿರುತ್ತವೆ ಎಂಬ ಸಿದ್ಧಾಂತವೂ ಈಗ ಅಸಮಂಜಸವೆಂದು ಕಂಡು ಹಿಡಿಯಲಾಗಿದೆ. ಯಾಕಂದರೆ, ವ್ಯಕ್ತಿಯು ವ್ಯವಹರಿಸುವದು ಯಾವಾಗಲೂ ಇಡಿಯಾಗಿಯೇ ಹೊರತು ಬಿಡಿಯಾಗಿ ಅಲ್ಲ.

ಮನಃಶರೀರಾತ್ಮಕವಾದ ಈ ಯಂತ್ರವು ತನ್ನ ಕಾರ್ಯಕ್ಕಾಗಿ ಮೂಲತಃ ದೇಹದ ಇಂದ್ರಿಯ ಹಾಗೂ ಚಲನಶಕ್ತಿಗಳ ಮೇಲೆ (Sensori motor basis)

ವೃತ್ತಿಮೂಲ ಶಿಕ್ಷಣಕ್ಕೆ ಆಧಾರಭೂತವಾದ ಮಾನಸಶಾಸ್ತ್ರದ ತತ್ವಗಳು

ಅವಲಂಬಿಸಿದೆ. ಬಾಹ್ಯ ಜಗತ್ತು ಇಂದ್ರಿಯಗಳ ಮುಖಾಂತರವೇ ಮನಸ್ಸನ್ನು ಪ್ರೇರಿಸಬಲ್ಲದು. ಇದಕ್ಕೆ ಪ್ರತಿಯಾಗಿ ಪ್ರತಿಯೊಂದು ಮಾನಸಿಕ ವ್ಯಾಪಾರದ ಪರಿಣಾಮವೆಂದರೆ ಸ್ಥೂಲವಾಗಿಯಾಗಲಿ, ಸೂಕ್ಷ್ಮವಾಗಿಯಾಗಲಿ ಸ್ನಾಯುಗಳ ಮೇಲೆ ಪ್ರತಿಕ್ರಿಯೆ ಗೈಯುವದು. ಅತ್ಯಂತ ಕುಶಾಲ ಬುದ್ಧಿಯೂ ಕೂಡ ಎಸಗಬಹುದಾದುದು—ಅದರ ಪರಿಣಾಮವು ಎಷ್ಟೇ ವ್ಯಾಪಕವಿರಲಿ—ತನ್ನ ಶರೀರದ ಕೆಲವೊಂದು ಸ್ನಾಯುಗಳನ್ನು ಸಂಕೋಚಿಸುವದು ಅಥವಾ ಕೆಲವೊಂದು ಎಲುಬಿನ ಕೊನ್ನೆಗಳನ್ನು ಸರಿಸುವದು ಇಷ್ಟೇ ಅಲ್ಲವೇ ? ಮನಸ್ಸು ಶರೀರದ ವಿವಿಧಾಂಗಗಳೊಂದಿಗೆ ಗಾಢವಾಗಿ ಸಂಲಗ್ನವಾಗಿದ್ದ ಅವುಗಳ ಮೇಲೆಯೇ ಆಧಾರಿತವಾಗಿದೆ ಮತ್ತು ಹೊರಗೆ ಪ್ರಕಟವಾಗುವದು ಇವುಗಳ ಮುಖಾಂತರವೇ. ಹೀಗಿದ್ದು ಬುದ್ಧಿ ಶಕ್ತಿಯ ಶ್ರೇಯಸ್ಸು ಮನಸ್ಸಿಗಷ್ಟೇ ಸಲ್ಲುತ್ತದೆ ಎಂದು ತಿಳಿಯುವದೇ ತಪ್ಪು. ಅದು ಸಮಪ್ರಮಾಣದಲ್ಲಿ ಶರೀರಕ್ಕೂ ಸಲ್ಲುವದು. ಆದ್ದರಿಂದ ವ್ಯಕ್ತಿಯ ಸುಗಮವಾದ ಜೀವನಯಾತ್ರೆಗೆ ಬುದ್ಧಿಯಷ್ಟೆ ಕೈಗೂ ಮಹತ್ವವಿದೆ ಎಂಬುದನ್ನು ಈಗ ಒತ್ತಿಹೇಳಬೇಕಾಗಿದೆ. ಬುದ್ಧಿಗೂ ಕೈಗೂ ಇರುವ ಸಂಬಂಧವಾದರೂ ಅತ್ಯಂತ ನಿಕಟವಾದುದು.

"ಮಾನವನೆಂದರೆ ಮಾತನಾಡುವ ಶಕ್ತಿಯುಳ್ಳ, ಉಪಕರಣಗಳನ್ನು ಪಯೋಗಿಸುವ ಒಂದು ಪ್ರಾಣಿ" ಎಂದು ಹೇಳಿದುದು ಅತ್ಯಂತ ಸಮರ್ಪಕವಿದೆ. ಇತರ ಪಶುಗಳಿಗಿಂತ ಅವನು ಬಹಳ ಮೇಲ್ಮಟ್ಟಕ್ಕೇರಿದ ಶ್ರೇಯಸ್ಸು ಅವನ ನಾಲಿಗೆಯ ಚಾಪಲ್ಯದಷ್ಟೇ ಅವನ ಬೆರಳುಗಳ ಕೌಶಲ್ಯಕ್ಕೂ ಸಲ್ಲುತ್ತದೆ. ಒಬ್ಬನು ಬುದ್ಧಿಶಾಲಿಯಾಗಿದ್ದರೆ, ಪರಿಸ್ಥಿತಿಯನ್ನು ತನಗನುಕೂಲವಾಗುವಂತೆ ಮಾರ್ಪಡಿಸಲು ಕೈಯ ಉಪಯೋಗದಲ್ಲಿಯೂ ಅವನು ಕುಶಲನಾಗುತ್ತಾನೆ. ಬೆಳೆಯುವ ಬಾಲಕನು ಶೈ[illegible]ದಲ್ಲಿ ಅಶಕ್ತನಾಗಿದ್ದರೆ, ಅವನ ಪೂರ್ವಜರು [illegible] ಕ್ಷೇತ್ರದಲ್ಲಿ ಗಳಿಸಿಟ್ಟ ಸೊತ್ತನ್ನು ಸಂಪಾದಿಸಲು ಅವನ ಮನವೂ ಅಸಮರ್ಥವೇ. [illegible]ಯುಷ್ಯಸದಲ್ಲಿ ಹಿಂದುಳಿಯುವ ಬಾಲಕರು ಹಸ್ತವ್ಯವಸಾಯದಲ್ಲಿ ಮುಂದುವರಿಯುತ್ತಾರೆ ಎಂದು ಸಾಮಾನ್ಯವಾಗಿ ನಂಬಲಾಗಿದೆ. ಆದರೆ ಈ ಗ್ರಹಿಕೆಯು ನಿರಾಧಾರವೆಂದು ಸಪ್ರಯೋಗವಾಗಿ ಸಿದ್ಧಮಾಡಲಾಗಿದೆ. ಮಂದ ಬುದ್ಧಿಯ ಬಾಲಕನು ಸ್ನಾಯುಗಳ ಬಲ, ಗತಿ ಹಾಗೂ ಸಹನ ಶಕ್ತಿಗಳಲ್ಲಿ ಯಾವಾಗಲೂ ಹಿಂದುಳಿಯುತ್ತಾನೆ. ಕಣ್ಣು-ಕೈಗಳ ನಿಷ್ಕೃಷ್ಟವಾದ ಸಹಯೋಗವು ಅವಶ್ಯವಿದ್ದ ಕಾರ್ಯಗಳಲ್ಲಂತೂ ಅವನು ನಿರುಪಯುಕ್ತನೇ ಸರಿ.

ಮಾನವ ಪ್ರಗತಿಗೆ ಹಸ್ತ ಕೌಶಲವು ಯಾವಾಗಲೂ ಅತ್ಯಾವಶ್ಯಕವಾದ ಅಂಗವೇ. ಮನುಷ್ಯನು ಜೀವನದ ಸುಖ-ಸೌಕರ್ಯಗಳನ್ನು ಒದಗಿಸಿಕೊಳ್ಳಬೇಕಾದರೆ, ಕೈಗಾರಿಕೆಯ ಹಿಂದಿನ ಯುಗದಲ್ಲಿಯಂತೆ ಇಂದಿನ ಯಾಂತ್ರಿಕಯುಗದಲ್ಲಿಯೂ ಕೂಡ, ತನ್ನ ವಿಚಾರಗಳನ್ನು ಕಾರ್ಯರೂಪಕ್ಕಿಳಿಸಲು ಅವಶ್ಯವಾದ ಹಸ್ತ ಕೌಶಲವನ್ನು ಸಂಪಾದಿಸಿಕೊಳ್ಳಲೇಬೇಕು. ಕಣ್ಣು ಕೈಗಳ ಸಹಯೋಗವು ಹಿಂದೆ ಅವಶ್ಯವಿದ್ದಷ್ಟೇ ಇಂದೂ ಅವಶ್ಯವದೆ. ಹಿಂದಿನ ಎಷ್ಟೋ ಕೈಗಾರಿಕೆಗಳು ಈಗ ಲುಪ್ತಪ್ರಾಯವಾಗಿವೆ. ಆದರೆ ಅವುಗಳ ಸ್ಥಾನವನ್ನು ಆಕ್ರಮಿಸಿದ ಯಂತ್ರಗಳ ಮೂಲಕ ನಮ್ಮ ಪೂರ್ವಜರಿಗೆ ಗೊತ್ತಿಲ್ಲದ ಅನೇಕ ಹೊಸಹೊಸ ಹಸ್ತ-ಕೌಶಲ್ಯಗಳನ್ನು ಇಂದಿನ ಮಾನವನು ಸಂಪಾದಿಸಬೇಕಾಗಿದೆ. ಹೀಗಿದ್ದು ನಮ್ಮ ಜೀವನದಲ್ಲಿ ಹಸ್ತಕೌಶಲದ ಸ್ಥಾನವೇನೂ ಕಡಿಮೆಯಾಗಿಲ್ಲ. ವ್ಯವಹಾರಿಕ ಅವಶ್ಯಕತೆ ಹಾಗೂ ಉಪಯುಕ್ತತೆಯ ದೃಷ್ಟಿಯಿಂದ ಹಸ್ತಕೌಶಲಕ್ಕಿದ್ದ ಮಹತ್ವವು ಶಿಕ್ಷಣಶಾಸ್ತ್ರದ ದೃಷ್ಟಿಯಿಂದ ಇನ್ನೂ ಹೆಚ್ಚಾಗಿದೆ. ಸರಿಯಾದ ಬೆಳವಣಿಗೆಗೆ ಮನಃಶರೀರಗಳ ನಡುವಿನ ಸಂಬಂಧವನ್ನು ಈ ಮೇಲದಲೇ ತೋರಿಸಿ ಕೊಡಲಾಯಿತು. ಪಶುಕೋಟಿಯಿಂದ ಮಾನವನನ್ನು ಮೇಲಕ್ಕೆತ್ತಿದ ಮನಃಶಕ್ತಿಯ ಪ್ರಾದುರ್ಭಾವವು, ಕೈಗಳನ್ನು ಪರಿಣಾಮಕಾರಕವಾದ ರೀತಿಯಲ್ಲಿ ಉಪಯೋಗಿಸುವ ಅವನ ಸಾಮರ್ಥ್ಯದ ಮೇಲೆಯೇ ಅವಲಂಬಿಸಿದೆ. ಮೆದುಳಿನ ರಚನೆ ಹಾಗೂ ಶಾರೀರಿಕ ಕೆಲಸ ಇವುಗಳ ನಡುವೆ ನಿರ್ದಿಷ್ಟವಾದ ನಿಕಟಸಂಬಂಧವಿದೆ. ಅಂಗಾಂಗ-

ವೃತ್ತಿಮೂಲ ಶಿಕ್ಷಣಕ್ಕೆ ಆಧಾರಭೂತವಾದ ಮಾನಸಶಾಸ್ತ್ರದ ತತ್ವಗಳು

ಗಳ **ಸಂಚಲನ ಸಾಹಚರ್ಯವನ್ನು** (Co-ordination) ನಿಯಂತ್ರಿಸುವ ಕೆಲವು ಕೇಂದ್ರಗಳು ಮೆದುಳಿನಲ್ಲಿ ಇರುತ್ತವೆ. ಹೊಸ ಹೊಸ ಸಂಚಲನ ಸಾಹಚರ್ಯಗಳು ಬಳಕೆಯಲ್ಲಿ ಬಂದಂತೆ ಮೆದುಳಿನಲ್ಲಿ ಹೊಸ ಹೊಸ ಕೇಂದ್ರಗಳು ನಿರ್ಮಿತವಾಗುತ್ತವೆ. ಕೆಲವು ನರಮಂಡಲ-ಪ್ರಚೋದನೆಗಳು ರೂಢ್ಯಾತ್ಮಕವಾಗಿವೆ. ಆದ್ದರಿಂದ ಹೊಸ ಹೊಸ ಮಾರ್ಗಗಳು ಪ್ರಸ್ಥಾಪಿಸಲ್ಪಟ್ಟು ಮೆದುಳಿನಲ್ಲಿಯ ಕೇಂದ್ರ-ಕೇಂದ್ರಗಳ ನಡುವಿನ ಸಂಬಂಧವು ಸ್ಪಷ್ಟವೂ ಬಲಯುತವೂ ಆಗುತ್ತದೆ. ಹೀಗೆ ಅಂಗಾಂಗಗಳ ಸಂಚಲನ ಸಾಹಚರ್ಯ ಹಾಗೂ ಸಂವೇದನಾತ್ಮಕ ಕೇಂದ್ರಗಳ (Sensori centres) ನಡುವೆ ಸಂಬಂಧವನ್ನು ಪ್ರಸ್ಥಾಪಿಸುವದರ ಮೇಲೆ ಮೆದುಳಿನ ಬೆಳವಣಿಗೆಯು ಅವಲಂಬಿಸಿದೆ. ಶಾರೀರಿಕ ಕೆಲಸವು ಈ ಜಟಿಲವಾದ ಕೇಂದ್ರಗಳ ಪರಿಪೋಷಣಕ್ಕೆ ಅತ್ಯಂತ ಸಹಾಯಕಾರಿಯಾಗಿದ್ದು, ಕೊನೆಗೆ ಕುಶಾಗ್ರ ಬುದ್ಧಿಯನ್ನೂ ಸಮತೋಲ ಮನಸ್ಸನ್ನೂ ನಿರ್ಮಿಸುವಲ್ಲಿ ಅದರ ಪಾತ್ರವು ಅಷ್ಟಿಷ್ಟಲ್ಲ. ನಾಲ್ಕರಿಂದ ಹದಿನಾಲ್ಕು ವರುಷಗಳ ನಡುವಿನ ಬಾಲಕರನ್ನು ವಯೋನುರೂಪ ಶಾರೀರಿಕ ಕೆಲಸಗಳಲ್ಲಿ ತೊಡಗಿಸುವದು ವೇಳೆಯನ್ನು ವ್ಯರ್ಥಗೈದಂತೆಯೇ ಸರಿ ಎಂದು ತಿಳಿಯಕೂಡದು. ಆದರೆ ಅದರ ವಿರುದ್ಧವಾಗಿ ಅವರ ಬೆಳವಣಿಗೆಗೆ ಅದೊಂದೇ ನಿಜವಾದ ಮಾರ್ಗವೆಂದು ಹೇಳಬಹುದು.

ಹೀಗೆ ಶಾರೀರಿಕ ಚಟುವಟಿಕೆಗಳು ಮಾನಸ ಶಾಸ್ತ್ರದ ದೃಷ್ಟಿಯಿಂದ ಬಹಳ ಮಹತ್ವದ್ದಾಗಿವೆ. ಮಗುವಿನ ಶಾರೀರಿಕ ಬಲ, ಮನಸ್ಸಿನ ಬೆಳವಣಿಗೆ, ನೈತಿಕ ಹಾಗೂ ಸಾಮಾಜಿಕ ಪ್ರಗತಿ ಇವೆಲ್ಲವೂ ಅವುಗಳ ಮೇಲೆ ಅವಲಂಬಿಸಿವೆ. (ಅ) ಶಾರೀರಿಕ ಕೆಲಸವು ನಿರೀಕ್ಷಣ ಶಕ್ತಿಯನ್ನು ಬೆಳೆಸುತ್ತದೆ: ವಸ್ತುಗಳನ್ನು ಚನ್ನಾಗಿ ನೋಡಲಿಕ್ಕೂ, ವಿವರಗಳ ಕಡೆಗೆ ಲಕ್ಷ್ಯಗೊಡಲಿಕ್ಕೂ, ಸರಿಯಾಗಿ ಅಳೆಯಲಿಕ್ಕೂ ಲೆಕ್ಕ ಹಾಕಲಿಕ್ಕೂ ಮಗುವನ್ನು ಪ್ರೇರಿಸುತ್ತದೆ. (ಆ) ಮೆದುಳು ಹಾಗೂ ಸ್ನಾಯು ಸಂಚಲನಗಳ ನಡುವೆ ಸಾಹಚರ್ಯವನ್ನು ಸಂಸ್ಥಾಪಿಸುವದರ ಜೊತೆಗೂ, ತನ್ನ ವಶದಲ್ಲಿರುವ ಉಪಾಯಗಳು ಹಾಗೂ ವಿವಿಧ ನೈಸರ್ಗಿಕ ಶಕ್ತಿಗಳು ಇವುಗಳ ನಡುವಿರುವ ವಿವಿಧ ಸಂಬಂಧಗಳನ್ನು ತುಲನೆ ಮಾಡಲು ಹಚ್ಚಿ ಇದು ಆದರ ಬೌದ್ಧಿಕ ವಿಕಾಸವನ್ನು ವೃದ್ಧಿಂಗತಗೊಳಿಸುತ್ತದೆ. (ಇ) ಕಲ್ಪನಾಶಕ್ತಿಯನ್ನು ಬೆಳೆಸುತ್ತದೆ: ತಾನು ನಿರ್ಮಿಸಬೇಕಾದ ವಸ್ತುವನ್ನು ಮಗುವು ಮುಂದಾಗಿಯೇ ಮನಶ್ಚಕ್ಷುವಿನೆದುರು ಕಾಣಬೇಕಾಗುವದು. ನಂತರ ಕಂಡಂತೆ ನಿರ್ಮಿಸಬೇಕು; ಅಂದರೆ ತನ್ನ ವಿಚಾರಗಳಿಗೆ ಮೂರ್ತಸ್ವರೂಪ ಕೊಡಬೇಕು. (ಈ) ವಿಚಾರ ಶಕ್ತಿಯನ್ನು ಪರಿಪೋಷಿಸುತ್ತದೆ. ಶಾಸ್ತ್ರೀಯ ಪದ್ಧತಿ ಹಾಗೂ ಜೀವನದಲ್ಲಿ ಶಾಸ್ತ್ರಕ್ಕಿರುವ ಮಹತ್ವದ ಸ್ಥಾನ ಇವೆರಡನ್ನೂ ಕೈಕೆಲಸವು ಮನಗಾಣಿಸುತ್ತದೆ. ಜೀವನವು ದೊಡ್ಡ ಪ್ರಮಾಣದ ಮೇಲೆ ಸಾಧಿಸಬೇಕಾದುದನ್ನು ಇದು ಸಣ್ಣ ಪ್ರಮಾಣದ ಮೇಲೆ ಸಿದ್ಧ ಮಾಡಿ ತೋರಿಸುತ್ತದೆ. ಅದೆಂದರೆ ತತ್ವ ಹಾಗೂ ಕೃತಿ ಇವುಗಳ ನಡುವಿನ ಸಮನ್ವಯ. ತತ್ವವು ಹೇಗೆ ಕೃತಿ ಹಾಗೂ ಅನುಭವಗಳು ಮೇಲಿಂದ ಉದ್ಭವಿಸುತ್ತವೆ ಮತ್ತು ಅದಕ್ಕೆ ಪ್ರತಿಯಾಗಿ ತತ್ವವು ಕೃತಿಯನ್ನು ಹೇಗೆ ಪ್ರಕಾಶಿಸಬಲ್ಲದು, ಮಾರ್ಗದರ್ಶನ ಗೈಯ್ಯಬಲ್ಲದು ಮತ್ತು ಉದಾತ್ತಗೊಳಿಸಬಲ್ಲದು ಎಂಬುದನ್ನು ತೋರಿಸುತ್ತದೆ. ಎಲ್ಲ ತರದ ಅವ್ಯವಸ್ಥೆಯನ್ನು ತೊರೆದು, ನಿರುಪಯುಕ್ತ ಪ್ರಯತ್ನಗಳನ್ನೆಲ್ಲ ಆದಷ್ಟು ಕಡಿಮೆ ಮಾಡಿ, ಆದಷ್ಟು ಸದುಪಯುಕ್ತ ಪರಿಣಾಮಗಳನ್ನು ಸಾಧಿಸಲು ಅವಶ್ಯವಿದ್ದ ಮಿತವ್ಯಯ ತತ್ವವನ್ನೂ ಅದು ಕಲಿಸುತ್ತದೆ.

(ಮುಂದುವರೆಯುವದು.)

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು
ಶ್ರೀ. ಜಿ. ಡಿ. ಮಾಲಿ.

ಎಲ್ಲ ಮುಖ್ಯ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧-೧೨-೦,** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಅದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

[illegible] ಕನ್ನಡದಲ್ಲಿ [illegible]

ಜಿ. ನಾ. [illegible]

ಪ್ರಕಾಶಕರು, ೩೪೩, ಶನವಾರ ಪೇಠ, ಪುಣೆ.

ವಿಶೇಷ ಪ್ರಕಟನೆಗಳು

ಮುಂಬರುವ ಪಿ. ಟಿ. ಸಿ. ಪರೀಕ್ಷೆ

ಮೆ॥ ಡಾಯರೆಕ್ಟರ ಶಿಕ್ಷಣ ಖಾತೆ, ಪುಣೆ ಇವರ ದಿನಾಂಕ ೧೯—೧೦—೧೯೫೪ರ ಪತ್ರ ನಂ. ೧೯೨೪ ೩೪-ಡ-೩ನೆಯದರ ಪ್ರಕಾರ ತಿಳಿಸುವದೇನಂದರೆ—

೧೯೫೫ನೆಯ ಎಪ್ರಿಲ ತಿಂಗಳಲ್ಲಿ ಜರುಗುವ ಪಿ. ಟಿ. ಸಿ. ಪರೀಕ್ಷೆಗೆ ಭಾಷಾ ವಿಷಯದ ೧ನೆಯ ಕಾಗದದ ಪ್ರಶ್ನೆಗಳನ್ನು ಈ ವರುಷದ ಪಠ್ಯ ಪುಸ್ತಕಗಳೊಳಗಿಂದ ತೆಗೆಯಲಾಗುವದು; ಮತ್ತು ಇವುಗಳಲ್ಲಿ ಹಳೆಯ ಪಠ್ಯ ಪುಸ್ತಕಗಳೊಳಗಿನ ಪ್ರಶ್ನೆಗಳು ಇರುವದಿಲ್ಲ. ಸಂಬಂಧಿಸಿದವರೆಲ್ಲರೂ ಈ ಸಂಗತಿಯನು ಗಮನಿಸಬೇಕು.

ಧಾರವಾಡ

೧೩—೧೧—೧೯೫೪

ಪ್ರಧಾನ ಸಂಪಾದಕರು

ಪ್ರಾಥಮಿಕ ಶಿಕ್ಷಕರಲ್ಲಿ ಬಿನ್ನಹ

ಕರ್ನಾಟಕದಲ್ಲಿ ಧಾರವಾಡದ ಗಂಡು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜು ಪುರಾತನವಾದ ಸಂಸ್ಥೆಯೆಂಬುದು ಶಿಕ್ಷಕರಿಗೂ ಉಳಿದವರಿಗೂ ತಿಳಿದ ವಿಷಯವಾಗಿದೆ. ಈ ಸಂಸ್ಥೆಗೆ ಇಷ್ಟರಲ್ಲಿಯೇ ನೂರು ವರ್ಷಗಳು ತುಂಬಲಿರುವವು. ಈ ಮಹಾ ಸಂಸ್ಥೆಯ ಇತಿಹಾಸವನ್ನು ಬರೆಯಬೇಕೆಂದು ಗೊತ್ತಾಗಿದೆ. ಆದುದರಿಂದ ಕನ್ನಡ ಪ್ರಾಥಮಿಕ ಶಿಕ್ಷಕರು ಈ ಸಂಸ್ಥೆಯ ಬಗ್ಗೆ ತಮಗೆ ಗೊತ್ತಿದ್ದ ಸಂಗತಿಗಳನ್ನು ಆದಷ್ಟು ಹಳೆಯ ಹಾಗು ಮಹತ್ವದ ಸಂಗತಿಗಳನ್ನು— ನಮಗೆ ತಿಳಿಸಿದರೆ ತುಂಬ ಉಪಕಾರ ಮಾಡಿದಂತಾಗುವದು.

೨. ನಮಗೆ ಕನ್ನಡ ಪ್ರಾಥಮಿಕ ಶಿಕ್ಷಣದ ೧೯೧೫ರಿಂದ ೧೯೨೫ರ ವರೆಗಿನ ಸಂಚಿಕೆಗಳು ಬೇಕಾಗಿವೆ. ಈ ಸಂಚಿಕೆಗಳ ಸಂಗ್ರಹವಿಟ್ಟುಕೊಂಡ ಶಿಕ್ಷಕರು ನಮಗೆ ಕೊಟ್ಟರೆ ಮಹದುಪಕಾರವಾಗುವದು. ಈ ಸಂಚಿಕೆಗಳ ಬೆಲೆಯನ್ನು ಕೊಡಲಿಕ್ಕೂ ನಾವು ಸಿದ್ಧರಿದ್ದೇವೆ.

ಪ್ರ. ಸಂ.—ಕನ್ನಡ ಪ್ರಾಥಮಿಕ ಶಿಕ್ಷಣ,
ಗಂಡು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜ,
ಧಾರವಾಡ.

ವಿಶೇಷ ಸುದ್ದಿಗಳು

ಕನ್ನಡ ಸ್ಕೂಲ್‌ಬುಕ್ ಕಮಿಟಿಯಿಂದ ಮಂಜೂರಾದ ಪುಸ್ತಕಗಳು

अर्धमागधी वाङ्मय प्रवेश (ಕನ್ನಡ ಸಂಸ್ಕರಣ). ಬರೆದವರು : ಪ್ರೊ. ಎಸ್. ಆರ್. ಭಿಡೆ ಮತ್ತು ಶ್ರೀ. ಮಂಗಲಗಿ ಬಿ. ಜೆ. ಪ್ರಕಾಶಕರು: ಶ್ರೀ. ಡಿ. ಎನ್, ಮೋಘೆ, ಸ್ಕೂಲ್ ಎಂಡ ಕಾಲೇಜ ಬುಕ್ ಸ್ಟಾಲ್, ಕೋಲ್ಹಾಪುರ. ಬೆಲೆ : ೧ ರೂಪಾಯಿ. ೧೦ನೆಯ ವರ್ಗಕ್ಕೆ ೧೯೫೫ ಜೂನದ ವರಿಗೆ ಪುರವಣಿ ವಾಚನವೆಂದು ಮಂಜೂರಾಗಿದೆ.

ಭೌಮಿಕ ಕೃತ್ಯಗಳು:—ಬರೆದವರು : ಶ್ರೀ. ಆರ್. ಆರ್. ರಾವ ಪ್ರಕಾಶಕರು : ಶ್ರೀ. ಆರ್. ಆರ್. ರಾವ, ಹೌಸ ನಂ. ೧೭೦೫, ರಾಮದೇವಗಲ್ಲಿ, ಬೆಳಗಾಂವಿ. ಬೆಲೆ : ರೂ. ೧—೧೨—೦. ಮೇ ೧೯೫೬ರ ವರೆಗೆ ೯, ೧೦, ೧೧ನೆಯ ವರ್ಗಗಳಿಗೆ ಪುರವಣಿ ವಾಚನವಂದು ಮಂಜೂರಾಗಿದೆ.

(Sd) **ಕೆ. ಬಿ. ತೇರಗಾಂವಕರ**
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ,
ಮತ್ತು ಸೆಕ್ರೆಟರಿ, ಸ್ಕೂಲ್‌ಬುಕ್ ಕಮಿಟಿ, ಧಾರವಾಡ

ಧಾರವಾಡ
೨೨—೧೧—೧೯೫೪

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯಲ್ಲಿ ಒಂದನೆಯ ಸದರಿನ ಕೆಳಗೆ ೩ನೆಯ ಕಾಗದಕ್ಕೆ ಕೂಡ್ರುವ ಬಗ್ಗೆ ಮೆ॥ ಡಾಯರೆಕ್ಟರ ಶಿಕ್ಷಣ ಖಾತೆ ಇವರ ದಿನಾಂಕ ೨೯-೧೦-೧೯೫೪ರ ಪತ್ರ ನಂ. ಎಸ್-೬೨ (ಗ)-೫೪೮-ಡ ನೇದ್ದರ ಭಾಗವನ್ನು ಮೆ॥ ಎಜ್ಯುಕೇಶನಲ್ ಇನಸ್ಪೆಕ್ಟರರ ದಿನಾಂಕ ೨೦—೧೧—೧೯೫೪ರ ಹುಕುಮು ನಂ. ಪಿ/ಪಿ. ಎಸ್. ಸಿ. ೩೪೭೯ನೇದ್ದರ ಪ್ರಕಾರ ಕೆಳಗೆ ಪ್ರಕಟಿಸಲಾಗಿದೆ.

ಈ ಕಚೇರಿಯ (ಮೆ। ಡಾಯರೆಕ್ಟರರ ಕಚೇರಿ) ದಿನಾಂಕ ೧೪—೧೦—೧೯೫೨ರ ಪತ್ರ ನಂ. ಎಸ್, ೬೮/೨೦೧-ಡ ನೇದ್ದರಲ್ಲಿ ಇರುವ ಆಜ್ಞೆಗಳ ಪ್ರಕಾರ ೧೯೫೫ರಲ್ಲಿ ಜರುಗುವ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಗೆ ಮರಾಠಿ ಇಲ್ಲವೆ ಕನ್ನಡ, ಇಲ್ಲವೆ ಗುಜರಾಥಿಯಲ್ಲಿ ಕೂಡ್ರಲಿರುವ ಉಮೇದವಾರರು ೧ನೆಯ ಸದರಿನ ಕೆಳಗೆ ಪ್ರಾದೇಶಿಕ ಭಾಷೆಯಲ್ಲಿ ೩ನೆಯ ಕಾಗದವನ್ನು ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ. ಉರ್ದು-ಹಿಂದೀ, ಸಿಂಧಿಯಂಥ ಪ್ರಾದೇಶಿಕವಲ್ಲದ ಭಾಷೆಗಳ ಮುಖಾಂತರ ಪರೀಕ್ಷೆಗೆ ಕೂಡ್ರುವ ಉಮೇದವಾರರು ೧ನೆಯ ಸದರಿನ ಕೆಳಗೆ ಬರುವ ಮೂರನೆಯ ಕಾಗದಕ್ಕೆ—ಮರಾಠಿ ಕಾಗದಕ್ಕಾಗಲಿ, ಇಲ್ಲವೆ ಕನ್ನಡ ಕಾಗದಕ್ಕಾಗಲಿ, ಅಂದರೆ ತಮ್ಮ ಸಾಲೆಗಳಲ್ಲಿ ೩ನೆಯ ಇಯತ್ತೆಯಿಂದ ಮುಂದೆ ಕಲಿಸಲ್ಪಟ್ಟ ಭಾಷೆಯಲ್ಲಿ-ಕಡ್ಡಾಯವಾಗಿ ಕೂಡ್ರಲಿಕ್ಕೇಬೇಕು.

ಸಂಬಂಧಿಸಿದ ಸಾಲೆಗಳ ಮುಖ್ಯಾಧ್ಯಾಪಕರು ಈ ಸಂಗತಿಯನ್ನು ೧೯೫೫ನೆಯ ಇಸ್ವಿಯಲ್ಲಿ ಜರುಗುವ ಪ್ರಾ. ಶಾ. ಪ್ರ. ಪ. ಪರೀಕ್ಷೆಗೆ ಹಿಂದೀ, ಸಿಂಧೀ ಮತ್ತು ಗುಜರಾಥಿ ಭಾಷೆಗಳ ಮುಖಾಂತರ ಕೂಡ್ರುವ ವಿದ್ಯಾರ್ಥಿಗಳಿಗೆ ತಿಳಿಸಬೇಕು.

ಧಾರವಾಡ
೨೪—೧೧—೧೯೫೪

—ಪ್ರ. ಸಂ.

ಸಮಾಜ ಶಿಕ್ಷಣ ದಿನಾಚರಣೆ

ಕರ್ನಾಟಕದ ಸಮಾಜ ಶಿಕ್ಷಣದ ಕಾರ್ಯದರ್ಶಿಗಳೂ ಅಧಿಕಾರಿಗಳೂ ಆದ ಶ್ರೀ. ಆರ್. ಕೆ. ಮೆಣಶಿ ಅವರು ಸಮಾಜ ಶಿಕ್ಷಣ ದಿನಾಚರಣೆಯನ್ನು ಭಾರತ ಸರಕಾರದ ವಿದ್ಯಾಖಾತೆಯ ಮಂತ್ರಿಗಳು ಕೊಟ್ಟ ಆದೇಶದ ಹಾಗೂ ಸಲಹೆಗಳ ಮೇರೆಗೆ ೧೯೫೪ರ ಡಿಸೆಂಬರ ೧ರಂದು ಸಾಂಗಗೊಳಿಸಬೇಕೆಂದು ೧೬-೧೧-೧೯೫೪ರಂದು ಕಳುಹಿದ ಸಲಹೆಗಳು ಕೆಳಗಿನಂತಿವೆ.

ಮುಂಜಾನೆ :

೧. ಗ್ರಾಮ ಸ್ವಚ್ಛತೆ. ವಿಶೇಷವಾಗಿ ಹರಿಜನ ಕೇರಿಗಳಲ್ಲಿ.

೨. ಸಾಮಾಜಿಕ ಶಿಕ್ಷಣ ಪ್ರಚಾರ—ಮೆರವಣಿಗೆ, ಪ್ರಭಾತ ಫೇರಿ, ಸಭೆ, ರೇಡಿಯೋ ಪ್ರಸಾರ, ಲೇಖಗಳ ಮುಖಾಂತರ.

೩. ಸಾರ್ವಜನಿಕರಿಂದ ಸಮಾಜ ಶಿಕ್ಷಣಕ್ಕಾಗಿ ಕಾಣಿಕೆ ಸಂಗ್ರಹ.

ಸಾಯಂಕಾಲ :

೧. ಸಾರ್ವಜನಿಕ ಸಭೆಗಳನ್ನು ಏರ್ಪಡಿಸಿ ಪಂಚವಾರ್ಷಿಕ ಯೋಜನೆಯನ್ನು ತಿಳಿಸಿ ಹೇಳುವದು—ವಿಶೇಷವಾಗಿ ಸಾಮಾಜಿಕ ಉನ್ನತಿಯೋಜನೆಗಳನ್ನೂ ಸಮಾಜ ವಿಸ್ತರಣಾ ಯೋಜನೆಗಳನ್ನೂ ಕುರಿತು ಜನತೆಗೆ ಉಪಯುಕ್ತ ಘೋಷಣೆ, ಹಾಡು, ಪಟಗಳ ಮುಖಾಂತರ ತಿಳಿಸುವದು.

೨. ಸಮಾಜ ಶಿಕ್ಷಣದ ಆಂದೋಲನವನ್ನು ತಮ್ಮ ಹಳ್ಳಿಗಳ ಮಟ್ಟಿಗಾದರೂ ಸರಿಯೆ, ಯಶಸ್ವಿಯಾಗಿ ಮಾಡುವದಕ್ಕಾಗಿ ಕಾರ್ಯಕರ್ತರು, ಪ್ರಾಥಮಿಕ ಶಾಲೆಯ ಶಿಕ್ಷಕರು, ಹಳ್ಳಿಯ ಮುಖಂಡರು ತಮ್ಮ ಶಕ್ತ್ಯನುಸಾರ ಸೇವೆ ಮಾಡುವದಕ್ಕಾಗಿ ಪ್ರತಿಜ್ಞೆ ಮಾಡುವದು.

೩. ಆರೋಗ್ಯ ಶಿಕ್ಷಣ, ವಿಸ್ತರಣಾ ಕಾರ್ಯ, ಸಾಕ್ಷರತೆಯ—ಅಂದರೆ ಜನರು ತಮ್ಮ ಹೆಸರು ಬರೆಯುವದು ಮತ್ತು ವೃತ್ತಪತ್ರ ಓದುವದು ಇತ್ಯಾದಿ—ಕಾರ್ಯವನ್ನು ಪ್ರತ್ಯಕ್ಷ ಮಾಡುವದು.

ರಾತ್ರಿ :

ಭಜನೆ, ಗ್ರಾಮಗೀತ, ನೃತ್ಯ, ಲಾವಣಿ, ಯಕ್ಷಗಾನ, ಏಕಾಂಕ ನಾಟಕ, ನಾಟಕ, ಸಂಭಾಷಣೆ, ಚರ್ಚೆ ಮುಂತಾದ ಉಪಯುಕ್ತ ಆಕರ್ಷಕ ವಿವಿಧ ವಿನೋದಾವಳಿಗಳನ್ನೂ ಸಾಂಸ್ಕೃತಿಕ ಚಟುವಟಿಕೆಗಳನ್ನೂ ಓರ್ವ ಸ್ಥಾನಿಕ ಪ್ರಮುಖರ ಅಧ್ಯಕ್ಷತೆಯಲ್ಲಿ ನೆರವೇರಿಸಬೇಕು. ಇದಕ್ಕಾಗಿ ಶೈಕ್ಷಣಿಕ ಸಂಸ್ಥೆಗಳ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಮತ್ತು ತಮ್ಮ ಕಾರ್ಯಾಲಯದ ಕೆಲಸಗಾರರ ನೆರವನ್ನು ತೆಗೆದುಕೊಳ್ಳಬೇಕು.

ಮೇಲ್ಕಾಣಿಸಿದ ಕಾರ್ಯಕ್ರಮಗಳಲ್ಲಿ ತಮ್ಮ ಪ್ರದೇಶದ, ಸ್ಥಾನದ ಪರಿಸ್ಥಿತಿಯ ಮೇರೆಗೆ ಯೋಗ್ಯ ಕಂಡ ಪ್ರಕಾರ ಬದಲಾವಣೆಗಳನ್ನು ಮಾಡಿಕೊಳ್ಳಬಹುದು.

ಸಮಾಜ ಶಿಕ್ಷಣ ದಿನಾಚರಣೆ (ಸುದ್ದಿ)

ಕೆಳಗಿನ ಊರುಗಳಲ್ಲಿ ಸಮಾಜ ಶಿಕ್ಷಣ ದಿನಾಚರಣೆಯು ೧—೧೨—೫೪ ರಲ್ಲಿ ನಡೆಯಿತು. ಧನ ಸಂಗ್ರಹವೂ ಸಮಾಜ ಶಿಕ್ಷಣಕ್ಕಾಗಿ ನಡೆಯಿತು.

ಧಾರವಾಡ, (ಸರಕಾರೀ ಟ್ರೇನಿಂಗ ಸಂಸ್ಥೆಗಳು), **ಹೊಸೂರು**, [illegible], **ಲಚ್ಯಾಣ** (ಟ್ರೇ. ಕಾ.).

ಪ್ರಾಥಮಿಕ ಶಿಕ್ಷಣ ಪ್ರಪಂಚ

ಪಂದ್ಯಾಟಗಳು

ಬಾಗೇವಾಡಿ (ವಿಜಾಪುರ)—೧೫. ಬಾಗೇವಾಡಿ ತಾಲೂಕಿನ ಪ್ರಾಥಮಿಕ ಶಾಲೆಗಳ ಶಾರೀರಿಕ ಪಂದ್ಯಾಟಗಳೂ ಶೈಕ್ಷಣಿಕ ಸಮ್ಮೇಲನವೂ ದಿನಾಂಕ ೧೩–೧೧–೫೪ರಂದು ಮೆ॥ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ವಿಜಾಪುರ ಇವರ ಅಧ್ಯಕ್ಷತೆಯಲ್ಲಿ ನೆರವೇರಿದವು. ಮೆ॥ ಡೆ॥ ಎ. ಇನಸ್ಪೆಕ್ಟರ ವಿಜಾಪುರ ಇವರು ಶಾ. ಪಂದ್ಯಾಟಗಳ ಅಧ್ಯಕ್ಷತೆಯನ್ನು ವಹಿಸಿದ್ದರು ಹಾಗು ಕಲಾಪ್ರದರ್ಶನದ ಉದ್ಘಾಟನೆಯನ್ನು ಮೆ॥ ಮಾಮಲೇದಾರ ಸಾ॥ ಬಾಗೇವಾಡಿ ಇವರು ಮಾಡಿದರು. ಮೆ॥ ಎ. ಇ. ಸಾ ರವರು ೨೦೦ ಜನ ಶಿಕ್ಷಕರನ್ನೂ ಹಾಗು ೫೦೦ ವಿದ್ಯಾರ್ಥಿಗಳನ್ನೂ ಉದ್ದೇಶಿಸಿ ಇಂದಿನ ಹೊಸ ಶಿಕ್ಷಣದ ಧೋರಣೆ, ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಘಟನೆ ಹಾಗು ರಾಷ್ಟ್ರೀಯ ಜೀವನದ ಬಗ್ಗೆ ಅತ್ಯಂತ ಮಾರ್ಮಿಕವಾಗಿ ಹೇಳಿದರು. ಶ್ರೀ. ಶಂಕರಗೌಡರರು ಪಡಗಾನೂರ ಎಮ್. ಎಲ್. ಎ. ಇವರು ಸಮ್ಮೇಲನಕ್ಕೆ ಆಗಮಿಸಿ ಶಿಕ್ಷಕರಿಗೆ ಸೂಕ್ತ ಸಲಹೆಗಳನ್ನು ಕೊಟ್ಟರು.

ಶ್ರೀ. ಗೊಲ್ಲಾಳಪ್ಪ ಬಿರಾದಾರ ಇವರು ಶಾ. ಪಂದ್ಯಾಟಗಳಲ್ಲಿ ಮೇಲ್ತರಗತಿಯನ್ನು ತೋರಿಸಿದವರಿಗೆ ಕೊಟ್ಟ ೪೫ ರೂ. ಗಳ ಕಪ್ಪನ್ನು ಕೊಲ್ಹಾರ ಗ್ರೂಪ್ಪಿನವರು ಪಡೆದರು.

ಶ್ರೀ. ನಾಗಪ್ಪ ಆರಕೇರಿ ಇವರು ೨೫ ರೂ. ಗಳ ಪದಕಗಳನ್ನೂ, ಶ್ರೀ. ಎ. ಬಿ. ಪಿಂಪಳೆ, ಹಾಗು ಶ್ರೀ. ತ್ರಿಲೋಕಚಂದ ಶೇಡಜಿಯರು ಬಡವಿದ್ಯಾರ್ಥಿಗಳಿಗೆ ಪುಕ್ಕಟೆ ಊಟವನ್ನು ಕೊಟ್ಟರು, ಅಲ್ಲದೆ ಕಲಾ ಪ್ರದರ್ಶನದ ಹಾಗು ಮನರಂಜನೆಯ ಕಾರ್ಯಕ್ರಮಗಳನ್ನು ನೋಡಿ ಆನಂದಭರಿತರಾಗಿ ಶ್ರೀ. ದುಂಡಪ್ಪಣ್ಣ ಎಳಮೇಲಿ ಇವರು ಕನ್ನಡ ಹೆಣ್ಣುಮಕ್ಕಳ ಶಾಲೆಗೆ ಒಂದು ಗಡಿಯಾರವನ್ನೂ ಹಾಗು ಶ್ರೀ. ಪಾರಸಮಲ್ಲ ಶೇಡಜಿಯವರು ಕ. ಗಂಡು ಮಕ್ಕಳ ಶಾಲೆಗೆ ಒಂದು ಗಡಿಯಾರವನ್ನೂ ಕೊಡುವದಾಗಿ ವಾಗ್ದಾನವನ್ನಿತ್ತರು.

ಇದೇ ಮೇರೆಗೆ ಪ್ರತಿಷ್ಠಿತ ಮಹನೀಯರ ಅಧ್ಯಕ್ಷತೆಯಲ್ಲಿ ಕೆಳಗಿನ ಊರುಗಳ ಶಾಲೆಗಳಲ್ಲಿ ಪಂದ್ಯಾಟಗಳು ಜರುಗಿ ಪಾರಿತೋಷಕಗಳು, ಪ್ರಮಾಣ ಪತ್ರಗಳು ಗೆದ್ದ ಬಾಲಕರಿಗೆ ಕೊಡಲ್ಪಟ್ಟವು.—

ಇಳಕಲ್ಲ, ಜುಮ್ಮನಕಟ್ಟಿ, ಸಿರೂರ, ಭಗವತಿ, ಗಂಜೀಹಾಳ, ಕಟಗೇರಿ, ಅಹಿರಸಂಗ, ಬೇಲೂರ, ನಾಗಠಾಣ, ಹೊನ್ನೂಟಗಿ, ಬೀಳಗಿ, ನಾಗರಾಳ, ಮುಂಡರಗಿ, ಹೊಂಬಳ, ಕಣಗಿನಹಾಳ, ಕುರ್ತಕೋಟಿ, ತೊರ್ಕೆ (ಶಿಬಿರಾಗ್ನಿ), ಬರಡೋಲ, ಲೋಣಿಬುದ್ರುಕ, ಕೊಣ್ಣೂರ, ಮುಂಡರಗಿ, ಚಿಂಚಲಿ, ಹರ್ಲಾಪೂರ.

ಸಮ್ಮೇಲನಗಳು

ಕೆಳಗಿನ ಊರುಗಳ ಶಾಲೆಗಳಲ್ಲಿ ಗ್ರುಪ್ ಶಿಕ್ಷಕ–ಶಿಕ್ಷಕಿಯರ ಸಮ್ಮೇಲನಗಳು ಜರುಗಿದವು. ವಿವಿಧ ವಿನೋದಾವಳಿ, ಆದರ್ಶ ಪಾಠಗಳು, ಚರ್ಚೆಗಳು, ಇತ್ಯಾದಿ ಜರುಗಿದವು:—

ರಾಣೇಬೆನ್ನೂರ, ಹುಬ್ಬಳ್ಳಿ, (ಖಾಸಗಿ ಶಾಲೆಗಳು), **ಗೋಕರ್ಣ, ಕಂದಗಲ್ಲ** (ಹೈದರಾಬಾದ ಸರಹದ್ದಿನ ಶಿಕ್ಷಕರೂ ಆಗಮಿಸಿದ್ದರು), **ಬನಹಟ್ಟಿ.**

ಸುದ್ದಿಗಳು

ಕತಕನಹಳ್ಳಿ—೯. ೧೯೫೪ ಆಗಸ್ಟ ತಿಂಗಳಲ್ಲಿ ಜರುಗಿದ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಥಮಾ ಪರೀಕ್ಷೆಗೆ ೧೬ ವಿದ್ಯಾರ್ಥಿಗಳು ಕುಳಿತಿದ್ದರು. ಎಲ್ಲರೂ ಉತ್ತೀರ್ಣರಾದರು.

ಜಮಖಂಡಿ—೧೪, ೧೫. ನೀರಾವರಿ ಶಾಖೆಯ ಮುಖ್ಯಾಧಿಕಾರಿಗಳಾದ ಶ್ರೀ. ಮುಗದುಮ್ಮ ಅವರ ಹಿರಿಯತನದಲ್ಲಿ ಟ್ರೇನಿಂಗ ಕಾಲೇಜ ಹಾಗೂ ಪ್ರ್ಯಾಕ್ಟಿಸಿಂಗಸ್ಕೂಲದವರು 'ಬಾಲ ದಿನಾಚರಣೆ'ಯನ್ನು ಆಚರಿಸಿದರು. ಪ್ರಿನ್ಸಿಪಾಲ ಶ್ರೀ. ಗುಡಿಸಾಗರ ಅವರು ನೆಹರೂರವರ ವ್ಯಕ್ತಿತ್ವವನ್ನು ಕುರಿತು ಸುಂದರ ಭಾಷಣ ಮಾಡಿದರು.

ಸಮಾಜ ಶಿಕ್ಷಣ ದಿನಾಚರಣೆ

ಕರ್ನಾಟಕದ ಸಮಾಜ ಶಿಕ್ಷಣದ ಕಾರ್ಯದರ್ಶಿಗಳೂ ಅಧಿಕಾರಿಗಳೂ ಆದ ಶ್ರೀ. ಆರ್. ಕೆ. ಮೆಣಶಿ ಅವರು ಸಮಾಜ ಶಿಕ್ಷಣ ದಿನಾಚರಣೆಯನ್ನು ಭಾರತ ಸರಕಾರದ ವಿದ್ಯಾಖಾತೆಯ ಮಂತ್ರಿಗಳು ಕೊಟ್ಟ ಆದೇಶದ ಹಾಗೂ ಸಲಹೆಗಳ ಮೇರೆಗೆ ೧೯೫೪ ಡಿಸೆಂಬರ ೧ರಂದು ಸಾಂಗಗೊಳಿಸಬೇಕೆಂದು ೧೭-೧೧-೧೯೫೪ ರಂದು ಕಳುಹಿದ ಸಲಹೆಗಳು ಕೆಳಗಿನಂತಿವೆ.

ಮುಂಜಾನೆ :

೧. ಗ್ರಾಮ ಸ್ವಚ್ಛತೆ. ವಿಶೇಷವಾಗಿ ಹರಿಜನ ಕೇರಿಗಳಲ್ಲಿ.

೨. ಸಾಮಾಜಿಕ ಶಿಕ್ಷಣ ಪ್ರಚಾರ—ಮೆರವಣಿಗೆ, ಪ್ರಭಾತ ಫೇರಿ, ಸಭೆ, ರೇಡಿಯೋ ಪ್ರಸಾರ, ಲೇಖಗಳ ಮುಖಾಂತರ.

೩. ಸಾರ್ವಜನಿಕರಿಂದ ಸಮಾಜ ಶಿಕ್ಷಣಕ್ಕಾಗಿ ಕಾಣಿಕೆ ಸಂಗ್ರಹ.

ಸಾಯಂಕಾಲ :

೧. ಸಾರ್ವಜನಿಕ ಸಭೆಗಳನ್ನು ಏರ್ಪಡಿಸಿ ಪಂಚವಾರ್ಷಿಕ ಯೋಜನೆಯನ್ನು ತಿಳಿಸಿ ಹೇಳುವದು—ವಿಶೇಷವಾಗಿ ಸಾಮಾಜಿಕ ಉನ್ನತಿಯೋಜನೆಗಳನ್ನೂ ಸಮಾಜ ವಿಸ್ತರಣಾ ಯೋಜನೆಗಳನ್ನೂ ಕುರಿತು ಜನತೆಗೆ ಉಪಯುಕ್ತ ಘೋಷಣೆ, ಹಾಡು, ಪಟಗಳ ಮುಖಾಂತರ ತಿಳಿಸುವದು.

೨. ಸಮಾಜ ಶಿಕ್ಷಣದ ಆಂದೋಲನವನ್ನು ತಮ್ಮ ಹಳ್ಳಿಗಳ ಮಟ್ಟಿಗಾದರೂ ಸರಿಯೆ, ಯಶಸ್ವಿಯಾಗಿ ಮಾಡುವದಕ್ಕಾಗಿ ಕಾರ್ಯಕರ್ತರು, ಪ್ರಾಥಮಿಕ ಶಾಲೆಯ ಶಿಕ್ಷಕರು, ಹಳ್ಳಿಯ ಮುಖಂಡರು ತಮ್ಮ ಶಕ್ತ್ಯನುಸಾರ ಸೇವೆ ಮಾಡುವದಕ್ಕಾಗಿ ಪ್ರತಿಜ್ಞೆ ಮಾಡುವದು.

೩. ಆರೋಗ್ಯ ಶಿಕ್ಷಣ, ವಿಸ್ತರಣಾ ಕಾರ್ಯ, ಸಾಕ್ಷರತೆಯ—ಅಂದರೆ ಜನರು ತಮ್ಮ ಹೆಸರು ಬರೆಯುವದು ಮತ್ತು ವೃತ್ತಪತ್ರ ಓದುವದು ಇತ್ಯಾದಿ—ಕಾರ್ಯವನ್ನು ಪ್ರತ್ಯಕ್ಷ ಮಾಡುವದು.

ರಾತ್ರಿ :

ಭಜನೆ, ಗ್ರಾಮಗೀತ, ನೃತ್ಯ, ಲಾವಣಿ, ಯಕ್ಷಗಾನ, ಏಕಾಂಕ ನಾಟಕ, ನಾಟಕ, ಸಂಭಾಷಣೆ, ಚರ್ಚೆ ಮುಂತಾದ ಉಪಯುಕ್ತ ಆಕರ್ಷಕ ವಿವಿಧ ವಿನೋದಾವಳಿಗಳನ್ನೂ ಸಾಂಸ್ಕೃತಿಕ ಚಟುವಟಿಕೆಗಳನ್ನೂ ಓರ್ವ ಸ್ಥಾನಿಕ ಪ್ರಮುಖರ ಅಧ್ಯಕ್ಷತೆಯಲ್ಲಿ ನೆರವೇರಿಸಬೇಕು. ಇದಕ್ಕಾಗಿ ಶೈಕ್ಷಣಿಕ ಸಂಸ್ಥೆಗಳ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಮತ್ತು ತಮ್ಮ ಕಾರ್ಯಾಲಯದ ಕೆಲಸಗಾರರ ನೆರವನ್ನು ತೆಗೆದುಕೊಳ್ಳಬೇಕು.

ಮೇಲ್ಕಾಣಿಸಿದ ಕಾರ್ಯಕ್ರಮಗಳಲ್ಲಿ ತಮ್ಮ ಪ್ರದೇಶದ, ಸ್ಥಾನದ ಪರಿಸ್ಥಿತಿಯ ಮೇರೆಗೆ ಯೋಗ್ಯ ಕಂಡ ಪ್ರಕಾರ ಬದಲಾವಣೆಗಳನ್ನು ಮಾಡಿಕೊಳ್ಳಬಹುದು.

ಸಮಾಜ ಶಿಕ್ಷಣ ದಿನಾಚರಣೆ (ಸುದ್ದಿ)

ಕೆಳಗಿನ ಊರುಗಳಲ್ಲಿ ಸಮಾಜ ಶಿಕ್ಷಣ ದಿನಾಚರಣೆಯು ೧—೧೨—೫೪ ರಲ್ಲಿ ನಡೆಯಿತು. ಧನಸಂಗ್ರಹವೂ ಸಮಾಜ ಶಿಕ್ಷಣಕ್ಕಾಗಿ ನಡೆಯಿತು.

ಧಾರವಾಡ, (ಸರಕಾರೀ ಟ್ರೇನಿಂಗ ಸಂಸ್ಥೆಗಳು), **ಹೊಸೂರು,** ಚಡಚಣ, **ಬಿಜಾಪುರ** (ಟ್ರೇ. ಕಾ.).

ಪ್ರಾಥಮಿಕ ಶಿಕ್ಷಣ ಪ್ರಪಂಚ

ಪಂದ್ಯಾಟಗಳು

ಬಾಗೇವಾಡಿ (ವಿಜಾಪುರ)—೧೫. ಬಾಗೇವಾಡಿ ತಾಲೂಕಿನ ಪ್ರಾಥಮಿಕ ಶಾಲೆಗಳ ಶಾರೀರಿಕ ಪಂದ್ಯಾಟಗಳೂ ಶೈಕ್ಷಣಿಕ ಸಮ್ಮೇಲನವೂ ದಿನಾಂಕ ೧೩-೧೧-೫೮ರಂದು ಮೆ॥ ಎಜ್ಯುಕೇಶನಲ್ ಇನ-ಸ್ಪೆಕ್ಟರ ವಿಜಾಪುರ ಇವರ ಅಧ್ಯಕ್ಷತೆಯಲ್ಲಿ ನೆರವೇರಿದವು. ಮೆ॥ ಡೆ॥ ಎ. ಇನಸ್ಪೆಕ್ಟರ ವಿಜಾಪುರ ಇವರು ಶಾ. ಪಂದ್ಯಾಟಗಳ ಅಧ್ಯಕ್ಷತೆಯನ್ನು ವಹಿಸಿದ್ದರು ಹಾಗು ಕಲಾಪ್ರದರ್ಶನದ ಉದ್ಘಾಟನೆಯನ್ನು ಮೆ॥ ಮಾಮಲೇದಾರ ಸಾ॥ ಬಾಗೇವಾಡಿ ಇವರು ಮಾಡಿದರು. ಮೆ॥ ಎ. ಇ. ಸಾ ಆವರು ೨೦೦ ಜನ ಶಿಕ್ಷಕರನ್ನೂ ಹಾಗು ೫೦೦ ವಿದ್ಯಾರ್ಥಿಗಳನ್ನೂ ಉದ್ದೇಶಿಸಿ ಇಂದಿನ ಹೊಸ ಶಿಕ್ಷಣದ ಧೋರಣೆ, ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಘಟನೆ ಹಾಗು ರಾಷ್ಟ್ರೀಯ ಜೀವನದ ಬಗ್ಗೆ ಅತ್ಯಂತ ಮಾರ್ಮಿಕವಾಗಿ ಹೇಳಿದರು. ಶ್ರೀ. ಶಂಕರಗೌಡರರು ಪಡಗಾನೂರ ಎಮ್. ಎಲ್. ಎ. ಇವರು ಸಮ್ಮೇಲನಕ್ಕೆ ಆಗಮಿಸಿ ಶಿಕ್ಷಕರಿಗೆ ಸೂಕ್ತ ಸಲಹೆಗಳನ್ನು ಕೊಟ್ಟರು.

ಶ್ರೀ. ಗೊಲ್ಲಾಳಪ್ಪ ಬಿರಾದಾರ ಇವರು ಶಾ. ಪಂದ್ಯಾಟಗಳಲ್ಲಿ ಮೇಲ್ತರಗತಿಯನ್ನು ತೋರಿಸಿದವ-ರಿಗೆ ಕೊಟ್ಟ ೪೫ ರೂ. ಗಳ ಕಪ್ಪನ್ನು ಕೊಲ್ಹಾರ ಗ್ರೂಪ್ಪಿನವರು ಪಡೆದರು.

ಶ್ರೀ. ನಾಗಪ್ಪ ಆರಕೇರಿ ಇವರು ೨೫ ರೂ. ಗಳ ಪದಕಗಳನ್ನೂ, ಶ್ರೀ. ಎ. ಬಿ. ಪಿಂಪಳೆ, ಹಾಗು ಶ್ರೀ. ತ್ರಿಲೋಕಚಂದ ಶೇಡಜಿಯರು ಬಡವಿದ್ಯಾರ್ಥಿಗಳಿಗೆ ಪುಕ್ಕಟೆ ಊಟವನ್ನು ಕೊಟ್ಟರು, ಅಲ್ಲದೆ ಕಲಾ ಪ್ರದರ್ಶನದ ಹಾಗು ಮನರಂಜನೆಯ ಕಾರ್ಯಕ್ರಮಗಳನ್ನು ನೋಡಿ ಆನಂದಭರಿತರಾಗಿ ಶ್ರೀ. ದಂಡಪ್ಪಣ್ಣ ಎಳಮೇಲಿ ಇವರು ಕನ್ನಡ ಹೆಣ್ಣುಮಕ್ಕಳ ಶಾಲೆಗೆ ಒಂದು ಗಡಿಯಾರವನ್ನೂ ಹಾಗು ಶ್ರೀ. ಪಾರಸಮಲ್ಲ ಶೇಡಜಿಯವರು ಕ. ಗಂಡು ಮಕ್ಕಳ ಶಾಲೆಗೆ ಒಂದು ಗಡಿಯಾರವನ್ನೂ ಕೊಡುವದಾಗಿ ವಾಗ್ದಾನವನ್ನಿತ್ತರು.

ಇದೇ ಮೇರೆಗೆ ಪ್ರತಿಷ್ಠಿತ ಮಹನೀಯರ ಅಧ್ಯಕ್ಷತೆಯಲ್ಲಿ ಕೆಳಗಿನ ಊರುಗಳ ಶಾಲೆಗಳಲ್ಲಿ ಪಂದ್ಯಾಟ ಗಳು ಜರುಗಿ ಪಾರಿತೋಷಕಗಳು, ಪ್ರಮಾಣ ಪತ್ರಗಳು ಗೆದ್ದ ಬಾಲಕರಿಗೆ ಕೊಡಲ್ಪಟ್ಟವು.—

ಇಳಕಲ್ಲ, ಜುಮ್ಮನಕಟ್ಟಿ, ಸಿರೂರ, ಭಗವತಿ, ಗಂಜೀಹಾಳ, ಕಟಗೇರಿ, ಅಹಿರಸಂಗ, ಬೇಲೂರ, ನಾಗಠಾಣ, ಹೊನ್ನೂಟಗಿ, ಬೀಳಗಿ, ನಾಗರಾಳ, ಮುಂಡರಗಿ, **ಹೊಂಬಳ, ಕಣಗಿನಹಾಳ, ಕುರ್ತಕೋಟಿ, ತೊರ್ಕೆ** (ಶಿಬಿರಾಗ್ನಿ), **ಬರಡೋಲ, ಲೋಣಿಬುದ್ರುಕ, ಕೊಣ್ಣೂರ, ಮುಂಡರಗಿ, ಚಿಂಚಲಿ, ಹಲ್ಯಾಪೂರ.**

ಸಮ್ಮೇಲನಗಳು

ಕೆಳಗಿನ ಊರುಗಳ ಶಾಲೆಗಳಲ್ಲಿ ಗ್ರೂಪ್ ಶಿಕ್ಷಕ–ಶಿಕ್ಷಿಕೆಯರ ಸಮ್ಮೇಲನಗಳು ಜರುಗಿದವು. ವಿವಿಧ ವಿನೋದಾವಳಿ, ಆದರ್ಶ ಪಾಠಗಳು, ಚರ್ಚೆಗಳು, ಇತ್ಯಾದಿ ಜರುಗಿದವು:—

ರಾಣೇಬೆನ್ನೂರ, ಹುಬ್ಬಳ್ಳಿ, (ಖಾಸಗಿ ಶಾಲೆಗಳು), **ಗೋಕರ್ಣ**. **ಕಂದಗಲ್ಲ** (ಹೈದರಾಬಾದ ಸರಹದ್ದಿನ ಶಿಕ್ಷಕರೂ ಆಗಮಿಸಿದ್ದರು), **ಬನಹಟ್ಟಿ.**

ಸುದ್ದಿಗಳು

ಕತಕನಹಳ್ಳಿ—೯. ೧೯೫೮ ಅಗಸ್ಟ ತಿಂಗಳಲ್ಲಿ ಜರುಗಿದ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಥಮಾ ಪರೀಕ್ಷೆಗೆ ೧೩ ವಿದ್ಯಾರ್ಥಿಗಳು ಕುಳಿತಿದ್ದರು. ಎಲ್ಲರೂ ಉತ್ತೀರ್ಣರಾದರು.

ಜಮಖಂಡಿ—೧೪, ೧೫. ನೀರಾವರಿ ಶಾಖೆಯ ಮುಖ್ಯಾಧಿಕಾರಿಗಳಾದ ಶ್ರೀ. ಮಗದುಮ್ಮ ಅವರ ಹಿರಿಯತನದಲ್ಲಿ ಟ್ರೇನಿಂಗ ಕಾಲೇಜ ಹಾಗೂ ಪ್ರ್ಯಾಕ್ಟಿಸಿಂಗಸ್ಕೂಲದವರು 'ಬಾಲ ದಿನಾಚರಣೆ'ಯನ್ನು ಆಚರಿಸಿದರು. ಪ್ರಿನ್ಸಿಪಾಲ ಶ್ರೀ. ಗುಡಿಸಾಗರ ಅವರು ನೆಹರೂರವರ ವ್ಯಕ್ತಿತ್ವವನ್ನು ಕುರಿತು ಸುಂದರ ಭಾಷಣ ಮಾಡಿದರು.

Regd No R.5378

ಹೊರಬಿದ್ದಿದೆ ! ಬೆಳಕು ಕಂಡಿದೆ !!

ಹೊಸ ಆವೃತ್ತಿ

ಶೈಕ್ಷಣಿಕ ಮನೋವಿಜ್ಞಾನ

ಪುಟ ೩೦೦

ಬರೆದವರು : ಡಾ॥ ವಿ. ಕೊ. ಜವಳಿ, M. Ed. Ph. D. M. A. (ಕೋಲಂಬಿಯಾ)

ಬೆಲೆ: ಎರಡು ರೂಪಾಯಿ ಮಾತ್ರ

ಶಿಕ್ಷಣದಲ್ಲಿ ಮತ್ತು ಮನೋವಿಜ್ಞಾನದಲ್ಲಿ ಹೊಸ ಹೊಸ ಸಂಶೋಧನೆಗಳಿಂದ ಕೂಡಿದೆ ಕನ್ನಡಿಗರಿಗೆ ಮತ್ತು ವಿಶೇಷವಾಗಿ ಕನ್ನಡ ಪ್ರಾಥಮಿಕ ಶಿಕ್ಷಕರಿಗೆ ಅತ್ಯುಪಯುಕ್ತ ! ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಕೈದೀವಿಗೆ ! ಶೈಕ್ಷಣಿಕ ಅಭ್ಯಾಸಪತ್ರಿಕೆಯ ಎಲ್ಲ ವಿಷಯಗಳೂ ಇದರಲ್ಲಿ ಬಂದಿವೆ. ತಿಳಿಯಾದ ಸುಂದರ ಶೈಲಿ ! ಈ ಶೈಕ್ಷಣಿಕ ಮನೋವಿಜ್ಞಾನದ ಬಗೆಗೆ ಸ್ವತಂತ್ರವಾಗಿ ಬರೆಯಲ್ಪಟ್ಟ ೩೦೦ ಪುಟಗಳು ಮತ್ತು ೧೧ ಅಧ್ಯಾಯಗಳನ್ನೊಳಗೊಂಡ ಪುಸ್ತಕ ಕನ್ನಡದಲ್ಲಿ ಇದೊಂದೇ.

ಪುಸ್ತಕವು ಪ್ರಕಟವಾಗಿದೆ.

ಪ್ರಕಾಶಕರು :

ಆಕಳವಾಡಿ ಬುಕ್ ಡಿಪೋ, ಧಾರವಾಡ

ಅವರಿಗೆ ಬರೆದು ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ.

ಪುಟ ೨೮೦

ಮೂಲ ಶಿಕ್ಷಣ

ಬೆಲೆ: ೩-೦-೦

ಲೇಖಕರು : ಶ್ರೀ. ನು. ಗು. ಹಂದ್ರಾಳ, ಬಿ. ಎ., (ಆನರ್ಸ) ಬಿ. ಟಿ.

(ಪ್ರಿನ್ಸಿಪಾಲ, ಪದವೀಧರರ ಜೀವನ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ)

ಮೂಲ ಶಿಕ್ಷಣದ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಗೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೆ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ.

ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿಪೋ, ಧಾರವಾಡ

Printed by M.A. Kamat, B. Sc. at Jai Hind Art Press Dharwar. Edited and Published by S. P. Patil B. M. Shintri, S. R. Tatti, & Smti. P. A. Bhaskar. at the Kannada Prathamik Shikshan Office, Govt. Training College for Men. Dharwar.